ಡಾ. ಯು. ಆರ್. ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ

ಪಿಎಚ್.ಡಿ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ.

ಸಂಶೋಧನೆ
ಕವಿತಾರಾಣಿ .ಎಸ್.ಎಂ
ಎಂ.ಎ.,

ಮಾರ್ಗದರ್ಶನ
ಡಾ. ಮೋಹನ ಕುಂಟಾರ್
ಎಂ.ಎ., ಪಿಹೆಚ್.ಡಿ.
ಪ್ರವಾಚಕರು
ಭಾಷಾಂತರ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ – ೫೮೩೨೭೬.

ಭಾಷಾ ನಿಕಾಯ
ಭಾಷಾಂತರ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ ೫೮೩ ೨೭೬.

೨೦೦೪

ಪ್ರಮಾಣ ಪತ್ರ

"ಡಾ. ಯು. ಆರ್. ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ" ಎಂಬ ಶೀರ್ಷಿಕೆಯ ನಿಬಂಧವನ್ನು ಡಾ.ಮೋಹನ ಕುಂಟಾರ ಅವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಲಾಗಿದೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಭಾಷಾನಿಕಾಯದ ಭಾಷಾಂತರ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 20.8.2008
ಸ್ಥಳ : ವಿದ್ಯಾರಣ್ಯ

ಕವಿತಾರಾಣಿ.ಎಸ್.ಎಂ.
(ಕವಿತಾರಾಣಿ ಎಸ್.ಎಂ.)

ದೃಢೀಕರಣ ಪತ್ರ

ಕವಿತಾರಾಣಿ.ಎಸ್.ಎಂ. ಇವರು "ಡಾ. ಯು. ಆರ್. ಅನಂತಮೂರ್ತಿಯವರ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ" ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿಯ ಭಾಷಾನಿಕಾಯದ ಭಾಷಾಂತರ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೨೦.೦೪.೦೮
ಸ್ಥಳ : ವಿದ್ಯಾರಣ್ಯ

ಮೋಹನ ಕುಂಟಾರ್

(ಡಾ.ಮೋಹನ ಕುಂಟಾರ್)
ಮಾರ್ಗದರ್ಶಕರು,
ಭಾಷಾಂತರ ವಿಭಾಗ,
ಕ.ವಿ.ವಿ.ಹಂಪಿ, ವಿದ್ಯಾರಣ್ಯ.

ಡಾ. ಯು. ಆರ್. ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ

ಪರಿವಿಡಿ

ಪ್ರಸ್ತಾವನೆ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸಾಂಸ್ಕೃತಿಕ ಸಂಘರ್ಷ

ಇದುವರೆಗಿನ ಅಧ್ಯಯನಗಳು

ಪ್ರಸ್ತಾವನೆ

ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಾಂಸ್ಕೃತಿಕ ಸಂಬಂಧವಿದೆ. ಇವೆರಡೂ ಪರಸ್ಪರ ಪ್ರಭಾವಿಸುತ್ತವೆ. ಆದ್ದರಿಂದ ಸಾಹಿತ್ಯವನ್ನು ಸಾಂಸ್ಕೃತಿಕವಾದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಮಹತ್ವವನ್ನು ಪಡೆಯುತ್ತದೆ. ಸಮಾಜ ಮತ್ತು ಸಂಸ್ಕೃತಿಯಲ್ಲಾಗುವ ಸಾಂಸ್ಕೃತಿಕ ಪಲ್ಲಟಗಳು ಸಾಹಿತ್ಯದಲ್ಲಿ ದಾಖಲಾಗಿರುವುದರಿಂದ ಇವೆರಡೂ ಸಂಬಂಧವನ್ನು ಚರ್ಚಿಸುವುದರಿಂದ ಅನೇಕ ಕುತೂಹಲಕರ ಅಂಶಗಳು ಹೊರಬರುವ ಸಾಧ್ಯತೆಯಿದೆ. ಹೀಗಾಗಿ ಸಾಹಿತ್ಯದ ಅಧ್ಯಯನವು ಸಂಸ್ಕೃತಿಯ ಅಧ್ಯಯನವೇ ಆಗುತ್ತದೆ.

ಆಧುನಿಕ ಕನ್ನಡದ ಪ್ರಮುಖ ಲೇಖಕರ ಸಾಹಿತ್ಯದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಇಲ್ಲಿನ ಸಂಸ್ಕೃತಿ, ಪರಂಪರೆಯ ಚಿತ್ರಣವಿದೆ. ಕುವೆಂಪು, ಶಿವರಾಮ ಕಾರಂತ, ಮಾಸ್ತಿ, ಗೋಪಾಲಕೃಷ್ಣ ಅಡಿಗ ಹಾಗೂ ಬೇಂದ್ರೆ ಮುಂತಾದವರ ಕೃತಿಗಳಲ್ಲಿ ಸಂಸ್ಕೃತಿಯ ಅಂಶಗಳು ವ್ಯಕ್ತವಾಗಿವೆ. ಸಂಸ್ಕೃತಿಯ ಲಯಗಳು, ವೈರುಧ್ಯಗಳು ಹಾಗೂ ಹಲವು ಜೀವನ ಕ್ರಮಗಳ ನಿಜದನಿಗಳು ಕಲಾತ್ಮಕತೆಯೊಂದಿಗೆ ಸಾಹಿತ್ಯದಲ್ಲಿ ರೂಪುಗೊಂಡಿವೆ. ಸಂಸ್ಕೃತಿಯಲ್ಲಿನ ಜನಜೀವನದ ಚಿತ್ರಣಗಳನ್ನು ಹಾಗೂ ಅವರು ಎದುರಿಸುವ ಸಮಸ್ಯೆ, ಸವಾಲುಗಳನ್ನು ಸಾಹಿತ್ಯದಲ್ಲಿ ಸೆರೆಹಿಡಿಯಲಾಗಿದೆ. ಹೀಗೆ ವೈವಿಧ್ಯವಾದ ಬದುಕಿಗೆ ಕನ್ನಡಿ ಹಿಡಿಯುವ ಪ್ರಯತ್ನವನ್ನು ಇಲ್ಲಿ ಕಾಣಬಹುದು. ಹಲವು ಭಾಷೆಗಳ, ಹಲವಾರು ಸಂಸ್ಕೃತಿಗಳ ದೇಶವಾದ ಭಾರತದ ಸಾಹಿತ್ಯಕ್ಕಿರುವ ವೈವಿಧ್ಯ ಮತ್ತು ಪ್ರಾಧಾನ್ಯವು ವಿಶಿಷ್ಟವಾದುದು.

ಪ್ರಾಚೀನ ಕಾಲದಲ್ಲಿ ರಾಜಪ್ರಭುತ್ವ ಹಾಗೂ ಜಾತಿಮತಗಳ ಕಟ್ಟುನಿಟ್ಟುಗಳ ವ್ಯವಸ್ಥೆಯಿತ್ತು. ಸ್ವಾತಂತ್ರ್ಯ ನಂತರದಲ್ಲಿ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ವೈಜ್ಞಾನಿಕವಾಗಿ ಹಾಗೂ ವೈಚಾರಿಕವಾಗಿ ಹಲವು ವಿಸ್ಮಯಕಾರಿ ಪರಿವರ್ತನೆಗಳಾದವು. ಆಧುನಿಕ ಶಿಕ್ಷಣದ ಮೂಲಕ ಬಂದ ಹೊಸ ಜಾಗೃತಿಯಿಂದಾಗಿ ಕಂದಾಚಾರಗಳ ಸ್ಥಾನದಲ್ಲಿ ಜನತಾಂತ್ರಿಕವಾದ ಪ್ರಜಾಪ್ರಭುತ್ವ ವ್ಯವಸ್ಥೆಯು

ರೂಪುಗೊಂಡಿತು. ಪರಿಣಾಮವಾಗಿ ಸಡಿಲವಾದ ಜಾತಿಮತಗಳ ಶ್ರೇಣೀಕರಣದಲ್ಲಿ ಮೌಢ್ಯವು ನಿವಾರಣೆಯಾಗತೊಡಗಿದ್ದರಿಂದ ಸ್ವಲ್ಪಮಟ್ಟಿಗೆ ಸಮಾನತೆ ಕಂಡುಬಂದಿತು. ಪಾಶ್ಚಾತ್ಯರ ಪ್ರವೇಶದಿಂದಾಗಿ ಸಂಸ್ಕೃತಿಯಲ್ಲಿ ಉಂಟಾದ ಪಲ್ಲಟಗಳು ಸಾಹಿತ್ಯದ ಮೇಲೆ ಪ್ರಭಾವ ಬೀರಿದವು. ಇದರಿಂದಾಗಿ ಸಾಹಿತ್ಯವು ಹೊಸಗಾಳಿ ಬೆಳಕಿಗೆ ತನ್ನನ್ನು ಮುಕ್ತವಾಗಿ ಒಡ್ಡಿಕೊಂಡಿತು. ಆದರೆ ಹೊಸ ಪರಿವರ್ತನೆಯ ಅವಸರದ ಸಂಧಿಕಾರ್ಯದಲ್ಲಿ ದೇಶವು ಪರಕೀಯರ ದಬ್ಬಾಳಿಕೆಗೆ ತುತ್ತಾದ್ದರಿಂದ ವಸಾಹತುಶಾಹಿಯ ಅನುಕೂಲ ಅನಾನುಕೂಲಗಳನ್ನು ಅನಿವಾರ್ಯವಾಗಿ ಎದುರಿಸಬೇಕಾಯಿತು. ಈ ಪಾಶ್ಚಾತ್ಯರ ಸಂಸ್ಕೃತಿ ಪ್ರಸಾರದ ಬಿರುಸಿಗೆ ಪ್ರತಿಯಾಗಿ ನಮ್ಮ ಚಿಂತಕರು, ಬುದ್ಧಿಜೀವಿಗಳು ಮತ್ತು ಸಾಹಿತಿಗಳು ಭಾರತೀಯ ಸಂಸ್ಕೃತಿಯ ವಿಶಿಷ್ಟತೆಗಳನ್ನೆ ವಸ್ತುವನ್ನಾಗಿಸಿ ತಮ್ಮ ಕೃತಿಗಳನ್ನು ಸೃಷ್ಟಿಸಿದರು. ಸಾಂಸ್ಕೃತಿಕ ಅಸ್ತಿತ್ವವನ್ನು ಗುರುತಿಸಿಕೊಳ್ಳುವ ಈ ಸಂದರ್ಭದಲ್ಲಿ ಸಂಸ್ಕೃತಿಯ ಹಿರಿಮೆ ಗರಿಮೆಯನ್ನು ಎತ್ತಿಹೇಳಲಾಯಿತು. ರಾಷ್ಟ್ರೀಯತೆಯ ತುಡಿತಗಳನ್ನು ಹೊಂದಿದ್ದ ಕಥಾನಕಗಳು ಹೆಚ್ಚು ಜನಪ್ರಿಯವಾದವು.

ನಮ್ಮ ಸಂಸ್ಕೃತಿಯ ಸಾಹಿತ್ಯಕ ಅಭಿವ್ಯಕ್ತಿಯು ಹೊರಗಿನವರ ವಿರುದ್ಧ ನಮ್ಮತನವನ್ನು ಕಂಡುಕೊಳ್ಳುವ ಮತ್ತು ಸಾಂಸ್ಕೃತಿಕ ಕೀಳರಿಮೆಯಿಂದ ಮುಕ್ತರಾಗುವ ಪ್ರಯತ್ನ ನಡೆಯಿತು. ದೇಶೀಯ ಮತ್ತು ಪಾಶ್ಚಾತ್ಯರ ಸಂಸ್ಕೃತಿಗಳು ಮುಖಾಮುಖಿಯಾಗುವ ಸಂದರ್ಭದಲ್ಲಿ ಇಲ್ಲಿನ ಸಂಸ್ಕೃತಿಯ ಪುನರುಜ್ಜೀವನಕ್ಕೆ ಹೆಚ್ಚಿನ ಮಹತ್ವ ದೊರೆಯಿತು. ಇದು ನಮ್ಮ ಸಮಾಜದ ಮೇಲೆ ಉಂಟುಮಾಡಿದ ಪರಿಣಾಮವು ವಿಭಿನ್ನವಾದುದು. ಹೊಸ ಶಿಕ್ಷಣ ಮತ್ತು ಆಧುನಿಕತೆಗಳಿಂದಾಗಿ ಭಾರತೀಯ ಸಂಸ್ಕೃತಿ ಸಂಪೂರ್ಣವಾಗಿ ಮರುಹುಟ್ಟು ಪಡೆಯಿತು. ಹೀಗಾಗಿಯೇ ಸ್ವಾತಂತ್ರ್ಯೋತ್ತರ ಕಾಲದ ಸಂಸ್ಕೃತಿಯಲ್ಲಿನ ಘರ್ಷಣೆಗಳು ಸಾಹಿತ್ಯದಲ್ಲಿ ಮುಖ್ಯ ಕಾಳಜಿಯಾಗಿ ಮೂಡಿಬಂದವಲ್ಲದೇ ಆಧುನಿಕ ಕನ್ನಡ ಸಾಹಿತ್ಯದ ಸೃಜನಶೀಲತೆಯನ್ನು ರೂಪಿಸಿದವು.

ಗಾಂಧಿ, ಅಂಬೇಡ್ಕರ್, ಲೋಹಿಯಾ ಮೊದಲಾದ ರಾಷ್ಟ್ರೀಯ ನಾಯಕರು ನಮ್ಮ ಸಂಸ್ಕೃತಿಯ ಬಗೆಗೆ ತಳೆದ ನಿಲುವುಗಳು ಕನ್ನಡ ಸಾಹಿತ್ಯದ ಮೇಲೆ ಪ್ರಭಾವ ಬೀರಿದವು. ಭಾರತೀಯ ಸಾಂಪ್ರದಾಯಿಕ ಆಲೋಚನಾ ಕ್ರಮವು ಕನ್ನಡ ಸಾಹಿತಿಗಳನ್ನು ಪ್ರಭಾವಿಸಿತು. ಹೀಗಾಗಿ ಅವರು ಪ್ರತಿಗಾಮಿತನ ಮತ್ತು ಪ್ರಗತಿಪರ ಧೋರಣೆಗಳನ್ನು ಮೈಗೂಡಿಸಿಕೊಂಡರು. ಪಾಶ್ಚಾತ್ಯರ ಕೊಡುಗೆಯಾಗಿ ಬಂದ ಆಧುನಿಕತೆ, ಹೊಸ ಶಿಕ್ಷಣ, ತಾಂತ್ರಿಕತೆ ಮತ್ತು ವೈಚಾರಿಕತೆಗಳಿಗೆ ಪುರಸ್ಕಾರ-ತಿರಸ್ಕಾರ, ವಿಸ್ಮಯ ಹಾಗೂ ತಟಸ್ಥ ಹೀಗೆ ವಿಭಿನ್ನ ರೀತಿಯಲ್ಲಿ ಲೇಖಕರು ಸ್ಪಂದಿಸಿದರು. ಜೊತೆಗೆ ಈ ಹೊಸ ಅನುಭವಗಳನ್ನು ಸೃಜನಶೀಲವಾಗಿ ದುಡಿಸಿಕೊಂಡರು. ವಸಾಹತು ಶಾಹಿಯ ಕರಿ ಛಾಯೆಯನ್ನು ಪ್ರತಿರೋಧಿಸಲು ಅವರು ಮಾರ್ಗಗಳನ್ನು ಕಂಡುಕೊಂಡರು.

ಸಾಂಸ್ಕೃತಿಕ ಅಧ್ಯಯನಗಳು ಇದುವರೆಗೆ ಜಾನಪದ ಮತ್ತು ಮಾನವಶಾಸ್ತ್ರೀಯ ನೆಲೆಯಿಂದಷ್ಟೇ ಪ್ರಮುಖವಾಗಿದ್ದವು. ಆದರೆ ಈಗ ಸಾಹಿತ್ಯವನ್ನು ಸಾಂಸ್ಕೃತಿಕ ಸಂಗತಿಗಳ ನೆರವಿನಿಂದ ಅಧ್ಯಯನಿಸುವ ಹೊಸ ವಿಧಾನವು ಪ್ರಚಲಿತವಾಗಿದೆ. ಸಾಹಿತ್ಯ ವಿಮರ್ಶೆಯ ಒಂದು ಭಾಗವಾಗಿಯೇ ಮತ್ತು ಇತ್ತೀಚಿನ ವಿಮರ್ಶಾ ವಿಧಾನವಾಗಿಯೇ ಸಾಂಸ್ಕೃತಿಕ ಅಧ್ಯಯನವು ಬೆಳೆಯಲಾರಂಭಿಸಿದೆ. ಸಾಹಿತ್ಯದ ಸಾಂಸ್ಕೃತಿಕ ಅಧ್ಯಯನ, ಸಂಶೋಧನೆಗಳು ಕನ್ನಡದಲ್ಲೂ ನಡೆದಿವೆ. ಅಲ್ಲದೆ ಡಿ.ಆರ್.ನಾಗರಾಜ್ ರಾಘವೇಂದ್ರ ರಾವ್, ಕೀರ್ತಿನಾಥ ಕುರ್ತಕೋಟಿ, ಬರಗೂರು ರಾಮಚಂದ್ರಪ್ಪ ಮುಂತಾದ ಲೇಖಕರ ಬರಹಗಳು ಸಾಂಸ್ಕೃತಿಕ ಚಿಂತನೆಯ ಮಾದರಿಗಳಾಗಿವೆ. ಇಂತಹ ಚಿಂತನಶೀಲ ಲೇಖಕರ ಸಾಲಿನಲ್ಲಿ ಸೇರುವ ಇನ್ನೊಂದು ಹೆಸರು ಅನಂತಮೂರ್ತಿಯವರದ್ದು.

ಅನಂತಮೂರ್ತಿಯವರ ಕಥಾಸಾಹಿತ್ಯದ ಮೂಲಕ ಸ್ವಾತಂತ್ರ್ಯೋತ್ತರ ಕಾಲದ ಭಾರತೀಯ ಬದುಕನ್ನು ಗ್ರಹಿಸಬಹುದಾಗಿದೆ. ಸ್ವಾತಂತ್ರ್ಯೋತ್ತರ ಭಾರತದ ತಲ್ಲಣಗಳು ಲೇಖಕರ ಕಥನ ಸಾಹಿತ್ಯದಲ್ಲಿ ಸೂಕ್ಷ್ಮವಾಗಿ ಚಿತ್ರಿತವಾಗಿದೆ. ಸಂಸ್ಕೃತಿಯಲ್ಲಿ ಬಾಳಿ ಬದುಕುವ ನೂರು ಬಗೆಯ ಸ್ವಭಾವಗಳ ಜನರನ್ನು ಲೇಖಕರ ಕಥನದಲ್ಲಿ ಕಾಣಬಹುದು. ಬೇರೆ ಬೇರೆ ಹಿನ್ನೆಲೆ ಮತ್ತು ಸ್ವಭಾವದ ಹಲವು ಪಾತ್ರಗಳು, ಕೆಲವು ಬಿಡಿ ಘಟನೆಗಳು ಇಲ್ಲಿನ ಕಥನದಲ್ಲಿ ಸೇರಿಕೊಂಡಿವೆ. ಹಾಗೆ ನೋಡಿದರೆ ಕಥಾಸಾಹಿತ್ಯವು ಸಂಸ್ಕೃತಿಯ ಒಂದು ಭಾಗವೇ ಆಗಿದೆ. ಸಾಂಸ್ಕೃತಿಕ ಪಲ್ಲಟಗಳಿಗೆ ಪ್ರತಿಕ್ರಿಯೆಯ ಸಾಹಿತ್ಯಕ ಅಭಿವ್ಯಕ್ತಿಯಾಗಿ ಲೇಖಕರು ತಮ್ಮ ಕಥಾಸಾಹಿತ್ಯದ ಮೂಲಕ ಎದುರಾಗುವ ಸಂದರ್ಭದ ಕಡೆಗೆ ಈ ಅಧ್ಯಯನದ ಗಮನವಿದೆ. ಅನಂತಮೂರ್ತಿಯವರ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷದ ನೆಲೆಗಳನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಆಶಯವಾಗಿದೆ.

ಯು.ಆರ್.ಅನಂತಮೂರ್ತಿಯವರು ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಲೇಖಕರು. ತಮ್ಮ ಸೃಜನಶೀಲ ಮತ್ತು ವೈಚಾರಿಕ ಕೃತಿಗಳ ಮೂಲಕ ಸಾಹಿತ್ಯಕ್ಕೆ ಹೊಸ ಆಲೋಚನೆಗಳನ್ನು ತಂದುಕೊಟ್ಟವರು. ಪಂಪ, ಕುಮಾರವ್ಯಾಸ, ಕುವೆಂಪು ಮೊದಲಾದವರಂತೆ ಭಾರತೀಯ ಪರಂಪರೆಯ ಬೇರುಗಳನ್ನಿಟ್ಟುಕೊಂಡು, ಆಧುನಿಕತೆಯನ್ನು ಮೈಗೂಡಿಸಿಕೊಂಡು ಸಾಹಿತ್ಯವನ್ನು ಸೃಷ್ಟಿಸಿದವರು. ಅನೇಕ ಬಿಕ್ಕಟ್ಟುಗಳನ್ನು ಎದುರಿಸಿ ಅವುಗಳನ್ನು ಮೀರಿ ಅನಂತಮೂರ್ತಿಯವರ ಸಾಹಿತ್ಯವು ಬೆಳೆಯಿತು. ಸಮಕಾಲೀನ ಸಂದರ್ಭಕ್ಕೆ ತಕ್ಕಂತೆ ದೇಶೀ ಚಿಂತನೆಗಳನ್ನು ಸಾಹಿತ್ಯದಲ್ಲಿ ಅಳವಡಿಸಿಕೊಂಡ ಲೇಖಕರು ರಾಜಕಾರಣದ ವಿಷವೃತ್ತ ಮತ್ತು ಸಾಮಾಜಿಕ ಅಸಮಾನತೆಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸಿದ್ದಾರೆ. ರಾಷ್ಟ್ರ ಮತ್ತು ನಾಡಿನ ಸ್ಪಷ್ಟಕಲ್ಪನೆ, ರಾಜಕೀಯ ಸ್ಥಿತಿಗತಿಗಳ ಸೂಕ್ತವಿಶ್ಲೇಷಣೆ, ಅನುಭವದ ಸಾಂಸ್ಕೃತಿಕಚಿಂತನೆ, ಭಾಷೆಯ ಬಗೆಗಿನ ಸ್ಪಷ್ಟ ಧೋರಣೆ, ಜಾಗತೀಕರಣದ ವಿಚಾರದಲ್ಲಿ ಅವರು ತಳೆಯುವ ವೈಚಾರಿಕ ನಿಲುವು ಹಾಗೂ ಪರಿಸರವನ್ನು ಕುರಿತ ಕಾಳಜಿ ಇಂಥ ಅನೇಕ ವಿಚಾರಗಳು ಅವರನ್ನು ಉತ್ತಮ ಲೇಖಕರನ್ನಾಗಿ ರೂಪಿಸಿವೆ.

ಸಾಂಪ್ರದಾಯಕ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ ಅನಂತಮೂರ್ತಿಯವರು ಜಾತ್ಯತೀತ ಪರಿಕಲ್ಪನೆಯನ್ನು ತಮ್ಮ ಕೃತಿಗಳಲ್ಲಿ ವಿವೇಚಿಸಿದ್ದಾರೆ. ಕಥಾಸಂವಿಧಾನದಲ್ಲಿ ಕ್ರಾಂತಿ, ನಿಷ್ಪಕ್ಷಪಾತವಾಗಿ ರಾಜಕಾರಣವನ್ನು ವಿಶ್ಲೇಷಿಸುವ ಧೋರಣೆ, ಧಾರ್ಮಿಕ ಅಸಂಗತಗಳನ್ನು ಪ್ರತಿಭಟಿಸುವ ಧೈರ್ಯ ಹಾಗೂ ಕನ್ನಡದ ಸ್ಥಾನಮಾನಗಳನ್ನು ಕುರಿತು ತಳೆದ ನಿಲುವುಗಳು ಅವರನ್ನು ವಿಶಿಷ್ಟ ಲೇಖಕರನ್ನಾಗಿಸಿವೆ. ಆಧುನಿಕ ಸಂಕೀರ್ಣ ಬದುಕಿನಲ್ಲಿ ಪರಸ್ಪರ ವಿರುದ್ಧವಾಗಿ ಕಾಣುವ ವಿಚಾರಗಳು ಮನುಷ್ಯನನ್ನು ರೂಪಿಸುವಲ್ಲಿ ವಹಿಸುವ ಪಾತ್ರವನ್ನು ಇವರ ಕಥನಸಾಹಿತ್ಯ ಸೂಕ್ಷ್ಮವಾಗಿ ಹಿಡಿದಿಟ್ಟಿದೆ. ಕತೆ, ಕಾದಂಬರಿ ಮತ್ತು ವಿಮರ್ಶೆಗಳಲ್ಲಿ ಸಂಘರ್ಷಗಳನ್ನು ಲೇಖಕರ ಯುಕ್ತ ರೀತಿಯಲ್ಲಿ ಅನಾವರಣಗೊಳಿಸಿದ್ದಾರೆ.

ವ್ಯಕ್ತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ವಹಿಸುವ ವಿಶೇಷ ಆಸಕ್ತಿ, ಅವನ ಅಂತರಂಗದಲ್ಲಿ ಅಡಗಿದ ಭಾವನೆಗಳನ್ನು ಬಿಚ್ಚಿಡುವ ರೀತಿ ಹಾಗೂ ಮನುಷ್ಯನ ನಿಜವಾದ ಸ್ವರೂಪದ ಅರಿವು ಅನಂತಮೂರ್ತಿಯವರ ನಿರಂತರ ಶೋಧದ ವಸ್ತುಗಳಾಗಿವೆ. ಮನುಷ್ಯನ ದ್ವಂದ್ವಗಳು, ಅವಮಾನವನ್ನೆದುರಿಸುವ ರೀತಿ ಹಾಗೂ ಅವನ ಆಕ್ರಮಣಶೀಲತೆ ಹೀಗೆ ಹಲವಾರು ದಿಕ್ಕುಗಳಲ್ಲಿ ಅವರ ಮೂಲಭೂತವಾದ ಶೋಧನೆ ನಡೆಯುತ್ತದೆ. ವ್ಯವಸ್ಥೆಯ ಬಗೆಗೆ ಅವರಲ್ಲಿರುವ ಪ್ರಾಮಾಣಿಕ ಅನುಮಾನಗಳಿಂದಾಗಿ ಅವರ ಕೆಲವು ಕೃತಿಗಳಲ್ಲಿ ರಾಜಕೀಯ ಸ್ವರೂಪ ರೂಪುಗೊಂಡಿದೆ. ಸಿದ್ಧಾಂತ, ಮೌಲ್ಯ ಹಾಗೂ ಭಾವನೆಗಳನ್ನು ಈ ತಿಳಿವು ಒಳಗೊಂಡಿದೆ.

[illegible]

[illegible]

[illegible]

[illegible]

ಪ್ರಯೋಗಶೀಲತೆಯಲ್ಲಿ ಅವರ ಕೃತಿಗಳು ಒಂದು ಇನ್ನೊಂದರ ಮುಂದುವರಿದ ರೂಪದಂತಿವೆ. ಸಾಹಿತ್ಯವು ಅನುಭವಗಳ ಅಭಿವ್ಯಕ್ತಿಯಾಗಿರಬೇಕೆಂಬ ನಿಲುವು ಲೇಖಕರದು. ವೈರುಧ್ಯಗಳಲ್ಲಿ ಸಾಮ್ಯವನ್ನು, ಸಂಘರ್ಷಗಳಲ್ಲಿ ಅನುಸಂಧಾನವನ್ನು ಹಾಗೂ ಕತ್ತಲೆಯಲ್ಲಿ ಬೆಳಕನ್ನು ಕಾಣವ ಕುತೂಹಲಕಾರಿ ವ್ಯಕ್ತಿತ್ವ ಲೇಖಕರದು. ಸಂದೇಹ, ಅನುಮಾನ ಮತ್ತು ಪ್ರಶ್ನೆ ಅವರ ಬರವಣಿಗೆಯ ಸ್ಥಾಯೀಗುಣಗಳಾಗಿವೆ. ಹಾಗೆಯೇ ಪಾವಿತ್ರ್ಯನಾಶ ಮತ್ತು ಪ್ರತಿಸಂಸ್ಕೃತಿಯ ನಿರ್ಮಾಣ ಇವರ ಕೃತಿಗಳಲ್ಲಿ ಕಾಣುವ ಆಶಯವಾಗಿದೆ. ಗಾಂಧಿ, ಮಾರ್ಕ್ಸ್ ಮತ್ತು ಲೋಹಿಯಾರವರ ಚಿಂತನೆಗಳನ್ನು ಬರಹಗಳಲ್ಲಿರೂಢಿಸಿಕೊಂಡಿದ್ದಾರೆ. ಪಾಶ್ಚಾತ್ಯ ಚಿಂತಕರ ತತ್ವ ಪ್ರತಿಪಾದನೆಗಳನ್ನು ಸಹ ಅಧ್ಯಯನ ಮಾಡಿದ್ದಾರೆ. ಭಾರತೀಯ ಹಾಗೂ ಪಾಶ್ಚಾತ್ಯ ಪರಂಪರೆಯ ವೈರುಧ್ಯಗಳನ್ನು ತೌಲನಿಕವಾಗಿ ಗುರುತಿಸಿದ್ದಾರೆ. ಇಂಥ ಎಲ್ಲ ಸಂದರ್ಭಗಳಲ್ಲಿ ಆತ್ಮಪ್ರಜ್ಞೆ ಮತ್ತು ಅನುಭವಾತ್ಮಕವಾದ ವಿಚಾರಗಳನ್ನು ಮುಖಾಮುಖಿಯಾಗಿಸುತ್ತಾರೆ.

ಇದುವರೆಗಿನ ಅಧ್ಯಯನಗಳು

ಅನಂತಮೂರ್ತಿಯವರ ಸಾಹಿತ್ಯವನ್ನು ಕುರಿತು ಬಂದ ವಿಮರ್ಶೆಗಳು, ಬಿಡಿಲೇಖನಗಳಲ್ಲಿ ವೈಚಾರಿಕ ಜಾಗೃತಿ, ಸೃಜನಶೀಲ ನೆಲೆ, ಭಾಷಾಬಳಕೆ, ಸಾಹಿತ್ಯ ಮಹತ್ವ, ಸಾಂಸ್ಕೃತಿಕ ಅನನ್ಯತೆ ಇತ್ಯಾದಿ ನೆಲೆಗಳ ವಿಶ್ಲೇಷಣೆಯಿದೆ. ಹಾಗೆಯೇ ಸಂಸ್ಕೃತಿಯ ನೆಲೆಯಿಂದಲೇ ವಿಶ್ಲೇಷಿಸಿದ ಬರೆಹಗಳೂ ಇವೆ. ಅನೇಕ ಸಂದರ್ಭದಲ್ಲಿ ಇಂತಹ ಬರೆಹಗಳೆಲ್ಲ ಬಿಡಿಬಿಡಿಯಾಗಿ ರೂಪುಗೊಂಡು ಪ್ರಕಟವಾಗಿವೆ. ಅನಂತಮೂರ್ತಿಯವರ ಒಂದು ಕತೆ ಪ್ರಕಟವಾದರೂ ಅದರ ಸೃಜನನೆಲೆಯ ಕುರಿತ ಚರ್ಚೆಗೆ ನಮ್ಮ ವಿಮರ್ಶಾಕ್ಷೇತ್ರ ಸದಾ ಸಿದ್ಧವಾಗಿರುವಂತಿದೆ. ಇದು ಅನಂತಮೂರ್ತಿಯವರಂತಹ ಲೇಖಕರ ಸೃಜನಶೀಲ ತುರ್ತನ್ನು ಸೂಚಿಸುತ್ತದೆ.

ಅನಂತಮೂರ್ತಿಯವರ ಕಥಾ ಸಾಹಿತ್ಯವನ್ನು ಕುರಿತಂತೆ ಗಮನಿಸಿದ ಕೆಲವು ಸಂಶೋಧನೆಗಳು: ಕರೀಗೌಡ ಬಿ.ಕೆ. ಅವರ "ಕನ್ನಡದ ನವ್ಯ ಕಥೆಗಳು ಒಂದು ಅಧ್ಯಯನ," ರಾಧಿಕ ಜಿ.ಎನ್. ಅವರ ಯು.ಆರ್. ಅನಂತಮೂರ್ತಿಯವರ ಕಥಾಸಾಹಿತ್ಯ", ವಿಜಯಶ್ರೀ ಕೆ. ಅವರ "ಕನ್ನಡ ನವ್ಯ ಕಾದಂಬರಿಗಳು," ಲಿಂಗರಾಜಯ್ಯ ಅವರ "ಕನ್ನಡ ಕಾದಂಬರಿಗಳಲ್ಲಿ ಅಸ್ಪೃಶ್ಯತೆಯ ಸಮಸ್ಯೆ", ರಮೇಶ್ ಆರ್. ಅವರ "ರಾಜಾರಾವ್ ಮತ್ತು ಯು.ಆರ್. ಅನಂತಮೂರ್ತಿ ಕಾದಂಬರಿಗಳ ಒಂದು ತೌಲನಿಕ ಅಧ್ಯಯನ," ಎಲ್.ಜಿ.ಮೀರಾ ಅವರ "ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಾಸ್ತವದ ಪ್ರತಿನಿಧೀಕರಣ ಒಂದು ಸ್ತ್ರೀವಾದಿ ಅಧ್ಯಯನ" ರವಿ.ಜಿ. ಅವರ "ಸ್ವಾತಂತ್ರ್ಯೋತ್ತರ ಕನ್ನಡ ಕಾದಂಬರಿಗಳ ಸಾಂಸ್ಕೃತಿಯಕ ಅಧ್ಯಯನ"ನಾಗರಾಜ ಎಲ್. ಅವರ "ಡಾ. ಯು.ಆರ್. ಅನಂತಮೂರ್ತಿ ಹಾಗೂ ಡಿ.ಎಚ್.ಲಾರೆನ್ಸ್ ರವರ ಬರಹಗಳು ಸ್ತ್ರೀಸ್ಥಾನ ಒಂದು ತೌಲನಿಕ ಅಧ್ಯಯನ" ರೇಖಾಜೋಗುಳ ಅವರ "ಅನಂತಮೂರ್ತಿಯವರ ಕಾದಂಬರಿಗಳ ಒಂದು ಅಧ್ಯಯನ" ಹಾಗೂ ಕೋದಂಡರಾಮ ಎನ್.ಕೆ. ಅವರ "ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ" ಈ ಎಲ್ಲ ಅಧ್ಯಯನಗಳಲ್ಲಿ ಅನಂತಮೂರ್ತಿಯವರ ಕಥನಸಾಹಿತ್ಯವನ್ನು ಪ್ರಾತಿನಿಧಿಕವಾಗಿ ನೋಡಲಾಗಿದೆ. ಅನಂತಮೂರ್ತಿಯವರು ಸಮಕಾಲೀನ ಜೀವಂತ ಸಮಸ್ಯೆಗಳಿಗೆ ಎಡತಾಕುತ್ತಾ ಸಾಹಿತ್ಯಕವಾಗಿಯೂ ಚುರುಕುಮುಟ್ಟಿಸುತ್ತಾರೆ. ಸಾಂಸ್ಕೃತಿಕ ಗೊಂದಲಗಳಿಗೆ ಪ್ರತಿಸ್ಪಂದಿಸಿದ ಸಂಸ್ಕೃತಿಯ ವಿಶ್ಲೇಷಕರೇ ಆಗುತ್ತಾರೆ.

ಈ ಕಾರಣಕ್ಕಾಗಿ ಅನಂತಮೂರ್ತಿಯವರು ಸಾಂಸ್ಕೃತಿಕವಾಗಿಯೂ ಮುಖ್ಯರಾಗುತ್ತಾರೆ. ಲೇಖಕರನ್ನು "ಕನ್ನಡ ಸಾಂಸ್ಕೃತಿಕ ಚಿಂತನೆಯ ಅನ್ವೇಷಕ"[೧] ಎಂದು ಗುರುತಿಸಲಾಗಿದೆ.

ಲೇಖಕರ ಕಥಾಸಾಹಿತ್ಯವನ್ನು ಒಂದೊಂದು ಧೋರಣೆಯ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿ, ವಿವರವಾಗಿ ಹಾಗೂ ಆಳವಾಗಿ ಅಧ್ಯಯನ ಮಾಡಲು ಅವಕಾಶಗಳಿವೆ. ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿನ ಸಾಂಸ್ಕೃತಿಕ ಸಂಘರ್ಷವನ್ನು ಕುರಿತು ಈವರೆಗೂ ವ್ಯವಸ್ಥಿತವಾದ ಸಮಗ್ರ ಅಧ್ಯಯನವು ನಡೆದಿಲ್ಲ. ಇದನ್ನು ಗಮನದಲ್ಲಿರಿಸಿಕೊಂಡು ಅವರ ಕಥನಸಾಹಿತ್ಯದ ಸಾಂಸ್ಕೃತಿಕ ಸಂಘರ್ಷದ ಅಧ್ಯಯನಕ್ಕೆ ಇಲ್ಲಿ ತೊಡಗಲಾಗಿದೆ.

ಈ ಸಂದರ್ಭದಲ್ಲಿ ಸಂಸ್ಕೃತಿಯನ್ನು ಕುರಿತು ಕೆಲವು ಅಂಶಗಳನ್ನು ಗಮನಿಸುವುದು ಸೂಕ್ತವಾಗಿದೆ. ಸಂಸ್ಕೃತಿಯು ಒಂದು ನಾಡಿನ ಅಥವಾ ಒಂದು ಪ್ರದೇಶದ ಸಮಸ್ತ ಜೀವನದ ವಿವರಗಳನ್ನು ಕಟ್ಟಿಕೊಡುತ್ತದೆ. ಈ ಸಂಸ್ಕೃತಿಯು ನೈತಿಕ ಮೌಲ್ಯಗಳಿಗೆ, ಒಳ್ಳೆಯ ವಿಚಾರಗಳಿಗೆ, ಮೃದು ನಡವಳಿಕೆಗೆ ಸಂಬಂಧಿಸಿದ್ದು ಎಂಬುದು ಸಾಮಾನ್ಯ ಕಲ್ಪನೆಯಾಗಿದೆ. ಕನ್ನಡದ ಹಿರಿಯ ಚಿಂತಕರಾದ ಡಿ.ವಿ.ಜಿ, ದೇವುಡು, ಮುಳಿಯ ತಿಮ್ಮಪ್ಪಯ್ಯ ಮುಂತಾದವರು ಈ ಅರ್ಥದಲ್ಲಿಯೇ ಸಂಸ್ಕೃತಿಯನ್ನು ವ್ಯಾಖ್ಯಾನಿಸಿದ್ದಾರೆ ಮತ್ತು ಸಂಸ್ಕೃತಿಯ ಸ್ಥಗಿತ ರೂಪಗಳನ್ನು ಗುರುತಿಸುತ್ತಾರೆ. ಮಾನವನ ಜೀವನ ವಿಧಾನವು ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ಆಂತರಿಕ ಮತ್ತು ಬಾಹ್ಯವಾಗಿ ಬದಲಾಗುತ್ತದೆ. ಮನುಷ್ಯನ ಜ್ಞಾನ, ನಂಬಿಕೆ, ನಡವಳಿಕೆ, ನೀತಿ, ಆಚರಣೆ, ಸಂಪ್ರದಾಯ ಇತ್ಯಾದಿಯಾಗಿ ಅವನ ಎಲ್ಲ ಜೀವನದ ವಿವರಗಳೂ ಸಂಸ್ಕೃತಿಯೇ ಆಗಿದೆ. ಇದನ್ನು ಅವನು ಒಂದು ಸಮಾಜದ ಸದಸ್ಯನಾಗಿ ಪಡೆದಿರುತ್ತಾನೆ. ಹೀಗಾಗಿ ಸಂಸ್ಕೃತಿ ಕೇವಲ ಹಳೆಯದಲ್ಲ, ನಿಂತನೀರಲ್ಲ. ಅದು ಏಕಕಾಲದಲ್ಲಿ ಸಾಂಕೇತಿಕವೂ ನಿರಂತರವೂ ಚಲನಶೀಲವೂ ಆಗಿರುತ್ತದೆ. ಒಂದು ಸಾಂಪ್ರದಾಯಕ ತಿಳುವಳಿಕೆಯಿಂದ ಅರ್ಥೈಸುವ ಸಂಸ್ಕೃತಿಯನ್ನು ವಿಶಾಲ ಅರ್ಥದಲ್ಲಿ ಅರ್ಥೈಸುವ ಅಗತ್ಯವಿದೆ.

ಸಂಸ್ಕೃತಿಯ ಕೆಲವು ವ್ಯಾಖ್ಯಾನಗಳು

"ಯಾವುದಾದರೂ ನಿರ್ದಿಷ್ಟವಾದ ಸಮಾಜದಲ್ಲಿ ಸಮಗ್ರವಾಗಿ ಸಂಚಿತವಾಗಿರುವ ಲೌಕಿಕ ಆಶೋತ್ತರಗಳನ್ನು ಭಾವನೆಗಳು, ಲಾಂಛನಗಳು, ನಂಬಿಕೆಗಳು, ರಸಭಾವ–ಮನೋಭಾವಗಳು, ಮೌಲ್ಯಗಳು, ಸಾಮಾಜಿಕ ಆಚಾರ ಪದ್ಧತಿಗಳು–ಇವೆಲ್ಲ ತಲೆಮಾರಿನಿಂದ ತಲೆಮಾರಿಗೆ ಹರಿದು ಬರುವುದೇ ಸಂಸ್ಕೃತಿ." [೨]

"ಸಂಸ್ಕೃತಿಯು ನಮ್ಮ ವಿವಿಧ ಚಟುವಟಿಕೆಗಳ ಮೊತ್ತ ಮಾತ್ರವಾಗಿರದೇ ಜೀವನ ವಿಧಾನವೇ ಆಗಿದೆ."[೩]

"ಸಂಸ್ಕೃತಿಯೆಂದರೆ ಮಾನವನನ್ನು ಸಂಸ್ಕರಿಸುವುದು." [೪]

ಈ ವ್ಯಾಖ್ಯೆಗಳು ಸಂಸ್ಕೃತಿಯ ಬಗ್ಗೆ ಒಂದು ನಿರ್ದಿಷ್ಟತೆಯನ್ನು ಗುರುತಿಸಲು ಸಹಕಾರಿಯಾಗಿವೆ. ಇಲ್ಲಿ ಮಾನವ ಜೀವನವನ್ನು ಅಧ್ಯಯನ ಮಾಡುವ ಸಮಾಜಶಾಸ್ತ್ರೀಯ ವ್ಯಾಖ್ಯಾನವನ್ನು ಗಮನಿಸುವುದು ಸೂಕ್ತವೆನಿಸುತ್ತದೆ. ಸಂಸ್ಕೃತಿಯೆಂಬುದು ಸದಾ ಚಲನಶೀಲವಾದದ್ದು. ಯಾವುದೇ ಸಂದರ್ಭದಲ್ಲಿಯೂ ನಾವು ನೋಡುತ್ತಿರುವ ಒಂದು ಜೀವನ ವಿಧಾನ ಪ್ರತ್ಯಕ್ಷ್ಯವಾಗಿ ಅಥವಾ ಪರೋಕ್ಷವಾಗಿ, ಆಂತರಿಕವಾಗಿ ಮತ್ತು ಬಾಹ್ಯವಾಗಿ ಬದಲಾವಣೆಗೊಳಗಾಗುತ್ತಾ ಹೋಗುತ್ತದೆ. ಮನುಷ್ಯನ ಜ್ಞಾನ, ನಂಬಿಕೆ, ನಡವಳಿಕೆ, ನೀತಿ, ಆಚರಣೆ ಹಾಗೂ ಸಂಪ್ರದಾಯ ಇತ್ಯಾದಿಯಾಗಿ ಎಲ್ಲಾ ಜೀವನ ವಿವರಗಳು ಅವನ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಅದನ್ನು ಅವನು ಒಂದು ಸಮಾಜದ ಸದಸ್ಯನಾಗಿ ಪಡೆದುಕೊಂಡಿರುತ್ತಾನೆ. ಆ ಸಮಾಜ ಬದಲಾದಂತೆ ಸಂಸ್ಕೃತಿಯು ಬದಲಾಗುತ್ತಾ ಹೋಗುತ್ತದೆ. ಹೀಗೆ ಸಂಸ್ಕೃತಿಯು ಏಕಕಾಲದಲ್ಲಿ ಸಾಂಕೇತಿಕವೂ, ನಿರಂತರವೂ, ಚಲನಶೀಲವೂ ಆಗಿರುತ್ತದೆ. ಅಮೇರಿಕಾದ ಸಮಾಜಶಾಸ್ತ್ರಜ್ಞ ಎಲ್.ಎ. ವೈಟ್ ಅವರ ಮಾತುಗಳು ಗಮನಾರ್ಹವಾಗಿವೆ. "Culture is a symbolic, continues cumulative and progressive process." [೫] ಒಂದು ಸಮಾಜದ ಇಡೀ ಜೀವನ ವಿವರಕ್ಕೆ ಅಲ್ಲಿ ಬದುಕುತ್ತಿರುವ ಜನರ ರೀತಿನೀತಿಗೆ ಸಂಬಂಧಿಸಿದ ಸಂಸ್ಕೃತಿಯನ್ನು ವಿಶಾಲಾರ್ಥದಲ್ಲಿ ಅರ್ಥೈಸಬೇಕಾಗಿದೆ.

ಸಾಂಸ್ಕೃತಿಕ ಸಂಘರ್ಷ

'ಸಂಘರ್ಷ'ಎಂಬ ಪದದ ಅರ್ಥಗ್ರಹಿಕೆ ಮುಖ್ಯವಾಗಿ ಘರ್ಷಣೆ, ಜಗಳ ಎಂಬುದಾಗಿದ್ದರೂ ಅಧ್ಯಯನ ಸಂದರ್ಭದಲ್ಲಿ ಇದನ್ನು ಬದುಕಿನ ಕ್ರಮವೆಂದು ಪರಿಗಣಿಸಲಾಗಿದೆ. ಒಂದರ್ಥದಲ್ಲಿ ಸಂಘರ್ಷ ಎಂಬುದೊಂದು ಸಂವಾದ ಕ್ರಮಮಾತ್ರವಾಗಿದೆ. ಸಂಸ್ಕೃತಿಯೆನ್ನುವ ಒಂದು ಸಿದ್ಧ ಮಾದರಿಯನ್ನು ಎತ್ತಿಕೊಂಡು ಅದರ ವಿವಿಧ ಆಯಾಮಗಳಾದ ನಂಬಿಕೆ, ಸಂಪ್ರದಾಯ, ನಡವಳಿಕೆ ಮುಂತಾದವುಗಳನ್ನು ಸಮಾಜದ ವಿವಿಧ ವ್ಯಕ್ತಿ, ಸಮುದಾಯಗಳ ಮಧ್ಯೆ ಸಂವಾದಿಸುವ, ಪ್ರತಿಕ್ರಿಯಿಸುವ, ಮುಖಾಮುಖಿಗೊಳಿಸುವ ಉಪಕ್ರಮವೇ ಸಾಂಸ್ಕೃತಿಕ ಸಂಘರ್ಷವಾಗಿದೆ.

ಸಂಘ-ಸಂಸ್ಥೆ, ಪರಂಪರೆ, ಭಾಷೆ, ಜಾತಿ, ಧರ್ಮ, ವರ್ಗ, ವರ್ಣ, ಆಚರಣೆ, ಧೋರಣೆ, ರೂಢಿ-ಸಂಪ್ರದಾಯ, ನೀತಿ-ನಿಯಮ ಹಾಗೂ ಆಚಾರ-ವಿಚಾರ ಇವೆಲ್ಲದರಲ್ಲಿ ಸಂಸ್ಕೃತಿಯ ಪಲ್ಲಟಗಳು ಅಡಕವಾಗಿವೆ. ಇಂತಹ ಜನ ಜೀವನದ ವಿಧಾನವನ್ನು ಸಿಂಹಾವಲೋಕನ ಮಾಡುವುದರಿಂದ ಸಾಹಿತ್ಯದಲ್ಲಿ ಸಂಘರ್ಷವನ್ನು ಹುಡುಕುವ ಪ್ರಯತ್ನ ಮಾಡಬಹುದು. ಹೀಗೆ ಸಂಸ್ಕೃತಿಯ ಅನೇಕ ಗುಣ ಪ್ರಭಾವಗಳ ಘರ್ಷಣೆಯ ಕಡೆ ಗಮನಹರಿಸಬೇಕಾಗುತ್ತದೆ.

ಸಾಹಿತ್ಯ, ಇತಿಹಾಸ, ಮನಃಶಾಸ್ತ್ರ, ವಿಜ್ಞಾನ ಹೀಗೆ ಜೀವನದ ಎಲ್ಲಾ ಮಜಲುಗಳಲ್ಲಿಯೂ ಸಂಘರ್ಷವು ನೆಲೆಯನ್ನು ಕಂಡುಕೊಂಡಿದೆ. ಇದರ ಸ್ವರೂಪ ಮಾತ್ರ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇರುತ್ತದೆ. ಸಾಹಿತ್ಯದ ಮುಖೇನ ಸಾಂಸ್ಕೃತಿಕ ಸಂಘರ್ಷವನ್ನು ಚರ್ಚಿಸುವಾಗ ಪ್ರಮುಖವಾಗಿ ಒಂದು ಸಮಾಜದ ಹಲವಾರು ದೃಷ್ಟಿಕೋನಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಎಲ್ಲ ಸಿದ್ಧಾಂತ, ಶಾಸ್ತ್ರಗಳ ಪರಿಧಿಯಲ್ಲಿ ಸಂಸ್ಕೃತಿಯನ್ನು ಗ್ರಹಿಸುತ್ತೇವೆಂಬುದು ಇಲ್ಲಿನ ವಿಶಿಷ್ಟತೆಯಾಗಿದೆ. ಒಂದು ಕತೆಯೊಳಗೆ ಪ್ರವೇಶಿಸಿ ಅದನ್ನು

ಸಂಘರ್ಷಕ್ಕೊಳಪಡಿಸಿ ವಿಶ್ಲೇಷಿಸಿದಾಗ ಸಮಾಜಶಾಸ್ತ್ರ, ರಾಜಕೀಯಶಾಸ್ತ್ರ, ಅರ್ಥಶಾಸ್ತ್ರ, ಮನೋವಿಜ್ಞಾನ ಹೀಗೆ ವಿವಿಧ ಕ್ಷೇತ್ರದ ಅಂತರ್‌ಸಂಬಂಧ ಏರ್ಪಡುತ್ತದೆ.

ಸಂಸ್ಕೃತಿಯು ಮಾನವನ ಬದುಕಿನ ಹಲವು ಸ್ತರಗಳನ್ನು ಹೊಂದಿದೆ. ಸಂಸ್ಕೃತಿಯು ಮಾನವನ ಬದುಕಿನ ಕ್ರಮವನ್ನು, ಜೀವನ ವಿಧಾನವನ್ನು ಒಳಗೊಂಡಿದೆ. ಸಂಸ್ಕೃತಿಯನ್ನು ಕುರಿತು ಅನೇಕ ಚರ್ಚೆಗಳಾಗಿವೆ. ಸಂಸ್ಕೃತಿಯೆಂದರೆ ಜೀವನ ವಿಧಾನ, ಆಚರಣೆ, ಸಮುದಾಯ ಹಾಗೂ ಸಂಪ್ರದಾಯಗಳು ಇವು ಪ್ರತಿಯೊಬ್ಬ ವ್ಯಕ್ತಿಯನ್ನು ನಿಯಂತ್ರಿಸುತ್ತವೆ ಮತ್ತು ಮಾರ್ಪಡಿಸುತ್ತವೆ. ವಿಭಿನ್ನ ಜೀವನವಿಧಾನ, ನಂಬಿಕೆ, ಸಂಪ್ರದಾಯ, ಚಿಂತನೆಗಳ ಉಗವಕ್ಕೆ ಸಂಘರ್ಷವು ಕಾರಣವಾಗುತ್ತದೆ. ಇದು ಸಂಸ್ಕೃತಿಯ ಅಧ್ಯಯನದ ಮಹತ್ವವನ್ನು ತಿಳಿಸುತ್ತದೆ. ಸಂಸ್ಕೃತಿಯಲ್ಲಿನ ಹಲವು ವಿನ್ಯಾಸಗಳನ್ನು ತಿಳಿಯುವ, ಹಾಗೂ ಅದರೊಳಗಿನ ಸೂಕ್ಷ್ಮಗಳನ್ನು ಗ್ರಹಿಸುವ ನಿಟ್ಟಿನಲ್ಲಿ ಹುಡುಕಾಟವು ತೀವ್ರವಾಗಬೇಕಾಗಿದೆ. ಇಂಥ ಒಳನೋಟವು ಮಾನವನಲ್ಲಿರುವ ವಿಭಿನ್ನ ನೆಲೆಗಳನ್ನು ಗುರುತಿಸಲು ಅವಕಾಶವನ್ನು ಕಲ್ಪಿಸುತ್ತದೆ.

ಕನ್ನಡ ಸಂಸ್ಕೃತಿಯ ಅಸಂಖ್ಯಾತ ವಿನ್ಯಾಸಗಳು, ಅಭಿವ್ಯಕ್ತಿಯ ವಿಭಿನ್ನ ನೆಲೆಗಳಲ್ಲಿ ಜೀವಂತವಾಗಿವೆ. ಸಂಸ್ಕೃತಿಯಲ್ಲಿ ಅರಿವಿನ ವಿಸ್ತಾರಗಳನ್ನು ಗ್ರಹಿಸುವುದರಿಂದ ಹೊಸ ಬೆಳವಣಿಗೆಗೆ ಕಾರಣವಾದ ಅಂಶಗಳನ್ನು ಗುರುತಿಸಬಹುದಾಗಿದೆ. ಸಂಸ್ಕೃತಿಯು ಧರ್ಮ ಸಂವರ್ಧನೆಗೆ ಹೋರಾಡಿದ ಬಗೆಯನ್ನು ತಿಳಿಯಲು ಮಾನವ ಚಟುವಟಿಕೆಯ ಅಂತರಂಗದ ಅನುಭವಗಳನ್ನು ಅವಲೋಕಿಸಬೇಕಾಗುತ್ತದೆ. ಇದರಿಂದ ಕಾಲಗತಿಯ ಬೆಳವಣಿಗೆಯೊಡನೆ ಸಂಸ್ಕೃತಿಯೊಳಗಿನ ಸಂಘರ್ಷದಂತಹ ಸೂಕ್ಷ್ಮ ಪರಿಣಾಮಗಳನ್ನು ಗ್ರಹಿಸಲು ಸಾಧ್ಯವಾಗುತ್ತದೆ. ಇದರಿಂದ ಸಂಸ್ಕೃತಿಯ ಸೃಜನಶೀಲ ರಹದಾರಿಗಳನ್ನು ಕಂಡುಕೊಳ್ಳಬಹುದು.

ಸಾಂಸ್ಕೃತಿಕ ಸಂಘರ್ಷವನ್ನು ಗ್ರಹಿಸುವ ಬಗೆ

ಸಂಸ್ಕೃತಿ ಮತ್ತು ಸಾಂಸ್ಕೃತಿಕ ಸಂಘರ್ಷ ಎಂಬ ಎರಡು ಪರಿಭಾಷೆಗಳಿಗೆ ಅದರದೇ ಆದ ವಿಭಿನ್ನ ಅರ್ಥಗಳಿವೆ. ಸಂಸ್ಕೃತಿ ಎಂಬ ಪದ ಮುಖ್ಯವಾಗಿ ಒಂದು ಸಮಾಜವನ್ನು ಪ್ರತಿನಿಧಿಸುತ್ತದೆ. ಸಮಾಜದೊಳಗಿನ ವ್ಯಕ್ತಿ, ವಸ್ತು ಹೀಗೆ ಹಲವಾರು ಸಂಗತಿಗಳೊಂದಿಗೆ ಅದು ಆಯಾ ಸಂಸ್ಕೃತಿಯ ನೆಲೆಯನ್ನು ಪಡೆದುಕೊಳ್ಳುತ್ತದೆ. ಒಂದೊಂದು ವ್ಯಕ್ತಿಗೆ, ವಸ್ತುವಿಗೆ ಅದರದೇ ಆದ ಸಂಸ್ಕೃತಿಯಿದೆ. ಈ ಅರ್ಥದಲ್ಲಿ ಸಂಸ್ಕೃತಿಯು ವಿಭಿನ್ನ ಮಾದರಿಗಳಾಗಿ ವಿಕಾಸಗೊಳ್ಳುತ್ತದೆ.

ಪ್ರಸ್ತುತ ಸಂಶೋಧನ ಅಧ್ಯಯನದಲ್ಲಿ ಸಂಸ್ಕೃತಿಯೆಂಬ ಗ್ರಹಿಕೆಯನ್ನು ಸಾಂಸ್ಕೃತಿಕ ಸಂಘರ್ಷದೊಂದಿಗೆ ಚರ್ಚಿಸಲಾಗಿದೆ. ಸಂಸ್ಕೃತಿಯೆನ್ನುವುದು ಒಂದು ಸಿದ್ಧಮಾದರಿಯ ಚೌಕಟ್ಟಾಗಿದೆ. ಆ ಮಾದರಿಯನ್ನು ಎತ್ತಿಕೊಂಡು ಅದರ ವಿವಿಧ ಆಯಾಮಗಳನ್ನು ಸಮಾಜದೊಂದಿಗೆ ಸಂವಾದಿಸುವ, ಪ್ರತಿಕ್ರಿಯಿಸುವ, ಮುಖಾಮುಖಿಗೊಳಿಸುವ ಉಪಕ್ರಮವೇ ಸಾಂಸ್ಕೃತಿಕ ಸಂಘರ್ಷವಾಗಿದೆ. ಸಂಸ್ಕೃತಿ ಎಂಬ ವಿಶಾಲ ವ್ಯಾಪ್ತಿಯ ಪದದೊಂದಿಗಿನ ಚರ್ಚೆಯ ಕ್ರಮವೇ ಸಾಂಸ್ಕೃತಿಕ ಸಂಘರ್ಷವಾಗಿದೆ. ಸಾಂಸ್ಕೃತಿಕ ಸಂಘರ್ಷವನ್ನು ಈ ಹಿನ್ನೆಲೆಯಲ್ಲಿ ಗ್ರಹಿಸುವ ಬಗೆಯು ಸೂಕ್ತವೆನಿಸುತ್ತದೆ.

[illegible]

[illegible]

[illegible]

[illegible]

[illegible]

ಸಾಹಿತ್ಯದಲ್ಲಿ ಮಾನವ ಬದುಕಿನ ಸಮಗ್ರ ಅಧ್ಯಯನವು ಒಂದು ಸಾಂಸ್ಕೃತಿಕ ಚಲನಶೀಲತೆಯನ್ನು ವ್ಯಕ್ತಪಡಿಸುತ್ತದೆ. ಆದರೆ ಇಂದು ಮಾನವರು ಎಲ್ಲಾ ಸಂಗತಿಗಳಿಗೂ ಮುಖಾಮುಖಿಯಾಗುವ ಅನಿವಾರ್ಯತೆಯಿದೆ. ಹೀಗೆ ಎಲ್ಲರೊಂದಿಗೆ ಎಲ್ಲ ವಸ್ತುಗಳೊಂದಿಗೆ ಪರಸ್ಪರ ಮುಖಾಮುಖಿಯಾಗಿ ಜೀವನಕ್ರಮವನ್ನು ರೂಪಿಸಿಕೊಂಡು ಸಾಗಿಸುವುದೇ ಸಾಂಸ್ಕೃತಿಕ ಸಂಘರ್ಷವಾಗಿದೆ.

ವ್ಯಕ್ತಿ, ಸಮಾಜ ಹಾಗೂ ಸಂಸ್ಕೃತಿ ಒಂದಕ್ಕೊಂದು ಪೂರಕವಾಗಿವೆ. ಈ ಮೂರೂ ಗ್ರಹಿಕೆಗಳು ಬದುಕನ್ನು ನಿರ್ದೇಶಿಸುತ್ತವೆ. ವ್ಯಕ್ತಿ ತನಗೆ ತಾನೇ ಸ್ವತಂತ್ರನೆಂದು ಭಾವಿಸಿ ಬದುಕಲು ಸಾಧ್ಯವಿಲ್ಲ. ಆದರೆ ಮಾನವ ಸಂಘಜೀವಿಯೆಂದು ಒಪ್ಪಿಕೊಳ್ಳಬೇಕಾದ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಗ್ರಹಿಸಬೇಕು. ವ್ಯಕ್ತಿಯು ತನ್ನ ಮತ್ತು ಸಮಾಜದ ನಡುವಿನ ಸಂಬಂಧದ ಅರಿವನ್ನು ಹೊಂದಿರಬೇಕು. ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧವನ್ನು ಸಂಸ್ಕೃತಿಯು ಪ್ರತ್ಯೇಕಿಸಿ ನೋಡುವುದರಿಂದ ಸಮಾಜವೂ ಸಹ ವ್ಯಕ್ತಿಯ ವ್ಯಕ್ತಿತ್ವವನ್ನು ಒರೆಗೆ ಹಚ್ಚಿ ನೋಡುತ್ತದೆ. ಇದು ಸಮಾಜದ ಸಹಜ ವ್ಯವಸ್ಥೆಗೆ ಭಿನ್ನವಾದಾಗ ವ್ಯಕ್ತಿಯ ಮನಸ್ಸು ಹಾಗೂ ಚಟುವಟಿಕೆಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಸಮಾಜವು ವ್ಯಕ್ತಿಯನ್ನು ಹೊರಗಿಡಲು ಈ ವೈರುಧ್ಯವು ಕಾರಣವಾಗುತ್ತದೆ. ಇಂತಹ ಸಂದರ್ಭದಲ್ಲಿ ವ್ಯಕ್ತಿಯು ಮೂಲ ಸಮಾಜದೊಡನೆ ಸಂಬಂಧವಿಟ್ಟುಕೊಂಡು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾಗುತ್ತದೆ. ಈ ಸ್ಥಿತಿಯಲ್ಲಿ ಮಾನವ ಸಮೂಹವು ಭಿನ್ನಾಭಿಪ್ರಾಯದಿಂದ ಘರ್ಷಣೆಗೆ ಕಾರಣವಾಗುತ್ತದೆ. ಸಮಾಜಕ್ಕೆ ಭಿನ್ನವಾಗಿ ವರ್ತಿಸುವ ವ್ಯಕ್ತಿಯನ್ನು ಆತನ ವ್ಯಕ್ತಿತ್ವದ ವಿಕಸನ ಪ್ರಕ್ರಿಯೆಯಾಗಿ ಅಧ್ಯಯನ ಮಾಡುವುದರಿಂದ ಸಾಂಸ್ಕೃತಿಕ ಸ್ಥಿತ್ಯಂತರಕ್ಕೆ ಪ್ರಮುಖವಾದ ಅಂಶಗಳನ್ನು ಗುರುತಿಸಿದಂತಾಗುತ್ತದೆ. ಸಾಮಾನ್ಯವಾಗಿ ವ್ಯಕ್ತಿಯು ತನ್ನನ್ನು ಸಾಮಾಜಿಕ ಸಿದ್ಧಾಂತಕ್ಕೆ ತಕ್ಕಂತೆ ರೂಪಿಸಿಕೊಳ್ಳುತ್ತಾನೆ. ವ್ಯಕ್ತಿಯ ಆಂತರಿಕ ಮತ್ತು ಬಾಹ್ಯದ ನಡುವಿನ ತಾಕಲಾಟ ಸಾಂಸ್ಕೃತಿಕ ಸಂಘರ್ಷವೆನಿಸುತ್ತದೆ.

ವ್ಯಕ್ತಿ–ಸಮಾಜದ ನಡುವಿನ ಸಾಂಸ್ಕೃತಿಕ ಸಂಘರ್ಷ, ವ್ಯಕ್ತಿ–ವ್ಯಕ್ತಿ, ಗಂಡು–ಹೆಣ್ಣು, ಸಮಾಜ–ಸಮುದಾಯ ಹೀಗೆ ಸಾಹಿತ್ಯದಲ್ಲಿ ಕೆಲವು ಸಂಘರ್ಷದ ಹಂತಗಳನ್ನು ಗುರುತಿಸಬಹುದು. ಒಂದು ಪಾತ್ರ ಅದು ತನ್ನಷ್ಟಕ್ಕೆ ಮಾತಾಡಿಕೊಂಡು ಸ್ವಗತಗೊಳ್ಳುವ ಸನ್ನಿವೇಶವೂ ಒಂದು ಸಂಘರ್ಷವಾಗುತ್ತದೆ. ಇದನ್ನು ಸಾಂಸ್ಕೃತಿಕ ಸಂಘರ್ಷದ ಆತ್ಮವಿಮರ್ಶೆಯ ನೆಲೆಯೆಂದು, ಆಂತರಿಕ ಸಂಘರ್ಷದ ನೆಲೆಯೆಂದು ಗುರುತಿಸಬಹುದು. ಒಟ್ಟಾರೆ ಒಂದೇ ಪಾತ್ರಕ್ಕೆ ಇದೊಂದು ಸಂವಾದ ರೂಪದ ಪ್ರತಿಕ್ರಿಯೆಯಾಗಿರುತ್ತದೆ. ಅದರಂತೆಯೇ ಎರಡು ವಿಭಿನ್ನ ಪಾತ್ರಗಳು, ಅವು ಸಂವಾದ ಏರ್ಪಡಿಸಿಕೊಳ್ಳುವ ರೀತಿ, ಅವುಗಳ ನಡುವಿನ ಸಂಬಂಧ, ವಿರೋಧ, ಪರಸ್ಪರತೆ ಹೀಗೆ ಹಲವು ನೆಲೆಗಳು ಸಂಘರ್ಷದ ಹಂತಗಳೇ ಆಗಿವೆ.

ಕಳೆದ ಅರ್ಧ ಶತಮಾನದಲ್ಲಿ ಆಧುನಿಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಪೂರ್ಣಚಂದ್ರ ತೇಜಸ್ವಿ, ಲಂಕೇಶ್, ಚಂದ್ರಶೇಖರ ಕಂಬಾರ, ಗಿರೀಶ್ ಕಾರ್ನಾಡ, ದೇವನೂರು ಮಹಾದೇವ ಮುಂತಾದ ಬಹುಮುಖ್ಯ ಲೇಖಕರ ನಡುವೆ ತಮ್ಮ ಅನನ್ಯತೆಯನ್ನು ಅನಂತಮೂರ್ತಿಯವರು ಪ್ರತ್ಯೇಕವಾಗಿ ಸ್ಥಿರೀಕರಿಸಿದ್ದಾರೆ. ಪರಂಪರೆಯ ಜೊತೆ ಆರೋಗ್ಯಪೂರ್ಣವಾದ ರೀತಿಯಲ್ಲಿ ಸೃಜನಶೀಲ ರಚನೆಯಿಂದ ಸಂಘರ್ಷಕ್ಕಿಳಿದಿದ್ದಾರೆ. ಕನ್ನಡ ಸಂಸ್ಕೃತಿ ಮತ್ತು ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದಂತೆ ಕಥಾಸಾಹಿತ್ಯವನ್ನು ವಿಶಿಷ್ಟವಾಗಿ ರಚಿಸಿದ್ದಾರೆ.

ಜಾಗತೀಕರಣದ ಪರೋಕ್ಷ ಹಿಡಿತಕ್ಕೆ ಸಿಕ್ಕಿರುವ ತೃತೀಯ ಜಗತ್ತಿನ ದೇಶಗಳು ಅನೇಕ ತಲ್ಲಣಗಳಿಗೆ ತಮ್ಮನ್ನು ಒಡ್ಡಿಕೊಂಡು ಸಂಸ್ಕೃತಿಯನ್ನು ತೀವ್ರ ಬಿಕ್ಕಟ್ಟಿನಲ್ಲಿ ಸಿಲುಕಿಸಿವೆ. ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳು ಅಸ್ಥಿರತೆಯ ಹಾದಿಯಲ್ಲಿವೆ. ವ್ಯಕ್ತಿ–ಸಮಾಜ ಹಾಗೂ ವರ್ಣ–ವರ್ಗದ ನೆಲೆಗಳಲ್ಲಿ ಕಂಡುಬರುವ ಸಾಂಸ್ಕೃತಿಕ ಸಂಘರ್ಷದ ವಿಚಾರಗಳನ್ನು ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಕಾಣಬಹುದು. ಲೇಖಕರ ವೈಚಾರಿಕ ಚಿಂತನೆಗಳು ಸಾಹಿತ್ಯ ಕ್ಷೇತ್ರದಲ್ಲಿ ಚಿರಕಾಲ ಉಳಿಯುವ ಆಶಯವುಳ್ಳವುಗಳಾಗಿವೆ. ಅನಂತಮೂರ್ತಿಯವರ ಕಥನಸಾಹಿತ್ಯವು ವೈಚಾರಿಕ ಸಂಘರ್ಷಗಳ ಮೂಲಕವೇ ಗರಿಗೆದರುತ್ತದೆ. ಇಲ್ಲಿ ಬರುವ ಪಾತ್ರಗಳು ಪರಸ್ಪರವಾಗಿಯಾಗಲಿ, ಆಂತರಿಕವಾಗಿಯಾಗಲಿ ಒಂದು ತೆರನ ದ್ವಂದ್ವಗಳನ್ನು ಸೃಷ್ಟಿಸಿಕೊಂಡು ಸಾಂಸ್ಕೃತಿಕವಾಗಿ ಸಂಘರ್ಷಕ್ಕಿಳಿಯುತ್ತವೆ. ಪರಂಪರೆ ಮತ್ತು ಆಧುನಿಕ ವಿಚಾರಗಳು ಬಂದಾಗಲೂ ಪಾತ್ರಗಳು ನಿರ್ದಿಷ್ಟ ಕೇಂದ್ರಪ್ರಜ್ಞೆಯಲ್ಲಿ ನಿಂತುಕೊಂಡು ಉಳಿದ ಪಾತ್ರಗಳನ್ನು ಎದುರುಗೊಳ್ಳುತ್ತವೆ. ಬೌದ್ಧಿಕವಾಗಿ ವಿಭಿನ್ನ ಸ್ತರಗಳಲ್ಲಿ ಸಾಂಸ್ಕೃತಿಕವಾಗಿ ಮುಖಾಮುಖಿಯಾಗಲೆಳಸುತ್ತವೆ. ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯ ನಡುವೆ ನಿಂತು ಬದುಕಿಗಾಗಿ ಜಾತಿ, ಲಿಂಗ ಮೊದಲಾದ ವಿವಿಧ ನೆಲೆಗಳಲ್ಲಿ ಸಂಘರ್ಷಕ್ಕಿಳಿಯುತ್ತವೆ. ಆಮೂಲಕ ವ್ಯಕ್ತಿತ್ವಗಳನ್ನು ವೈಚಾರಿಕ ಒರೆಗಲ್ಲಿಗೆ ಹಚ್ಚುವ ಪರಿಯನ್ನು ಕಾಣಬಹುದು. ವ್ಯಕ್ತಿಗಳ ಬದುಕು ವಾಸ್ತವ ನೆಲೆಗಟ್ಟಿನ ಮೇಲೆ ನಿಲ್ಲುವುದಾದರೂ ಅವರು ಕಟ್ಟಿಕೊಂಡ ಕನಸು, ಆದರ್ಶಗಳ ಕಾರಣಗಳಿಗಾಗಿ ನಡೆಯುವ ಸಂಘರ್ಷ ಕೂಡಾ ಅನುಭವವನ್ನು ಇನ್ನಷ್ಟು ನಿಖರಗೊಳಿಸುವುದಕ್ಕೇ ಆಗಿದೆ.

ಯಾವುದೇ ಒಂದು ನಿರ್ದಿಷ್ಟ ನೆಲೆಯಲ್ಲಿ ನಿಂತು ನಿರ್ಧಾರಗಳನ್ನು ಹೇಳುವುದಕ್ಕಿಂತಲೂ ಬದುಕಿನ ವಿಭಿನ್ನ ಮುಖಗಳನ್ನು, ವಿಭಿನ್ನ ಮನೋಧರ್ಮವನ್ನು ಅನುಭವಕ್ಕೆ ತಂದುಕೊಂಡು ಕಾರ್ಯೋನ್ಮುಖವಾಗುವುದು ಸರಿಯಾದ ಜೀವನವಿಧಾನ ಎನ್ನಬಹುದು. ಇಲ್ಲಿ, ಅನಂತಮೂರ್ತಿಯವರ ಒಟ್ಟು ಕಥನಸಾಹಿತ್ಯವನ್ನು ಗಮನದಲ್ಲಿಟ್ಟು ನೋಡಿದಾಗ ಕತೆಗಾರರು ಒಂದು ನಿರ್ದಿಷ್ಟ ನಿಲುವಿನ ಪರವಹಿಸದೇ ಸಂಘರ್ಷಗಳ ಮೂಲಕ ರೂಪುಗೊಳ್ಳುವ ಜಗತ್ತೇ ನಿಜವಾದ ಅನುಭವ ಅಥವಾ ಬದುಕು ಎಂಬಂತೆ ಚಿತ್ರಿಸಿದ್ದಾರೆ. ಹೀಗೆ ಪಾತ್ರಗಳು ವಿಭಿನ್ನ ನೆಲೆಗಳಲ್ಲಿ ದ್ವಂದ್ವವನ್ನು ಸೃಷ್ಟಿಸಿಕೊಂಡು ಸಾಂಸ್ಕೃತಿಕವಾಗಿ ಮೈಪಡೆಯುತ್ತವೆ. ವ್ಯಕ್ತಿಯ ಸಾಂಸ್ಕೃತಿಕ ಪರಿಸರ ಮತ್ತು ಬೌದ್ಧಿಕ ಪ್ರಜ್ಞೆಯ ಸಂಘರ್ಷ ಕೂಡಾ ತನ್ನ ತಿಳುವಳಿಕೆಯನ್ನು ನಿಶ್ಚಿತಗೊಳಿಸುವುದಕ್ಕೆ ಎಂಬಂತೆ ಮಾಡಿಬಂದಿದೆ.

ಪರಂಪರೆಯೆಂದರೆ ಪರಂಪರೆ ಮಾತ್ರ ಅಲ್ಲ. ಆಧುನಿಕತೆಯೆಂದರೆ ಆಧುನಿಕತೆ ಮಾತ್ರವೇ ಅಲ್ಲ. ಇವೆರಡೂ ಸಾಂಸ್ಕೃತಿಕವಾಗಿ ಪೂರಕ ಸಂಗತಿಗಳು. ಒಂದನ್ನು ಬಿಟ್ಟು ಒಂದಿಲ್ಲ. ಪರಂಪರೆಯ ಬೇರಿನ ಮೇಲೆ ಚಿಗುರಿದ ಆಧುನಿಕ ಬದುಕು ಮಾತ್ರ ಸಾಂಸ್ಕೃತಿಕವಾಗಿ ಅರ್ಥಪೂರ್ಣವಾಗಬಲ್ಲದು ಎಂಬುದನ್ನು ಲೇಖಕರು ಕತೆಗಳ ಮೂಲಕ ಪ್ರತಿಪಾದಿಸಿದ್ದಾರೆ. ಪರಂಪರೆ, ಆಧುನಿಕತೆ ಈ ಪರಿಕಲ್ಪನೆಗಳು ಕೇವಲ ಸೀಮಿತ ಅರ್ಥದಲ್ಲಿ ಅಥವಾ ವ್ಯಾಖ್ಯಾನದಲ್ಲಿ ದೊರೆಯುವ ಪದಗಳಲ್ಲ. ಅವು ಬದುಕಿನಲ್ಲಿ ಪ್ರಾಯೋಗಿಕವಾಗಿ ಅನುಭವಕ್ಕೆ ಬರುವಲ್ಲಿ ವಿಭಿನ್ನ ನೆಲೆಗಳಿವೆ. ವ್ಯಕ್ತಿ ಬದುಕುವ ಪರಿಸರ, ಕಾಲ, ಬೌದ್ಧಿಕ ತಿಳುವಳಿಕೆ, ಸಮಕಾಲೀನವಾದ ಆಸಕ್ತಿ, ವಯಸ್ಸು ಹೀಗೆ ಅನೇಕ ಸಂಗತಿಗಳೇ ಕಾರಣವಾಗಿ ಮನೋಧರ್ಮಗಳಲ್ಲಿ ವ್ಯತ್ಯಯಗಳಾಗುತ್ತವೆ. ಈ ವ್ಯತ್ಯಯಗಳ ಕಾರಣಗಳಿಗಾಗಿ ನಡೆಯುವ ಸಂಘರ್ಷಗಳ ನಡುವೆ ಮಾನವೀಯ ತುಡಿತಗಳಿರುತ್ತವೆ. ಅವು ಜೀವಪರವಾಗಿಯೇ ಇದ್ದರೂ ಒಂದು ಇನ್ನೊಂದನ್ನು ನಿರಾಕರಿಸುವಂತೆಯೇ ಭಾಸವಾಗುತ್ತದೆ. ಆದರೂ ಅವೆಲ್ಲ ಬದುಕುವುದಕ್ಕಾಗಿ ಜೀವಪರವಾದ ಒಂದು ಲಕ್ಷ್ಯದೆಡೆಗೆ ಮುಖಮಾಡಿಯೇ ಇವೆ ಎಂಬುದು ವಾಸ್ತವ.

[illegible]

[illegible]

[illegible]

ಪರಂಪರೆಯು ರೂಪಿಸಿದ ಛಾಪು ಹಾಗೂ ಆಧುನಿಕ ಜ್ಞಾನಜಗತ್ತು ನಿರ್ಮಿಸಿಕೊಟ್ಟ ಅಗಾಧ ವೈಚಾರಿಕ ಪ್ರಜ್ಞೆಯೇ ಅನಂತಮೂರ್ತಿಯವರನ್ನು ಸೃಜನಶೀಲರನ್ನಾಗಿಸಿದೆ. ಹಾಗಾಗಿ ಅವರು ಬದುಕನ್ನು ಅನ್ವೇಷಿಸುವ ಹಾಗೂ ಅವಲೋಕಿಸುವ ನೆಲೆಗಳಲ್ಲಿ ಸೂಕ್ಷ್ಮಪ್ರಜ್ಞೆಯನ್ನು ಕಾಣಬಹುದು. ನಿರ್ದಿಷ್ಟವಾಗಿ ಒಂದು ನಿಲುವಿನ ಪರವಾಗಿ ನಿಂತು ಪ್ರತಿಪಾದಿಸದೇ ಕಪ್ಪು ಬಿಳುಪುಗಳ ನಡುವೆ ಹೊಯ್ದಾಡುವಂತೆ ಅವರ ಸಾಹಿತ್ಯ ಧ್ವನಿಗೊಳ್ಳುತ್ತದೆ. ಬದುಕಿನಲ್ಲಿ ಕಪ್ಪು, ಬಿಳುಪು ಎರಡೂ ಇವೆ. ಆದರೆ ಇವು ನಿರಾಕರಣವಾದ ಸಂಗತಿಗಳಲ್ಲ. ಎರಡೂ ಬದುಕಿನಲ್ಲಿ ಅನಿವಾರ್ಯ. ಇವುಗಳನ್ನು ಅರಿತೇ ಅನಂತಮೂರ್ತಿಯವರ ಕಥಾಜಗತ್ತಿನಲ್ಲಿ ಪಾತ್ರಗಳು ಗಟ್ಟಿಗೊಳ್ಳುತ್ತವೆ. ಹಾಗಾಗಿ ಪರಂಪರೆ–ಆಧುನಿಕತೆ, ಸಮಾಜ–ಜಾತಿವ್ಯವಸ್ಥೆ, ಆದರ್ಶ–ವಾಸ್ತವ, ಪ್ರಜ್ಞೆ–ಪರಿಸರ, ವೈಚಾರಿಕತೆ–ಸ್ವಾತಂತ್ರ್ಯ ಈ ಎಲ್ಲಾ ದ್ವಂದ್ವಗಳು ಸಾಂಸ್ಕೃತಿಕವಾಗಿ ಸಂಘರ್ಷಕ್ಕಿಳಿದಿವೆ. ಬದುಕಿನಲ್ಲಿ ಹೊಸ ನೆಲೆಯ ಶೋಧನೆಯಲ್ಲಿ ತಮ್ಮನ್ನು ತಾವು ಸಮರ್ಥಿಸಿಕೊಂಡು ಮುನ್ನೆಡೆದಿವೆ. ಪರಿಣಾಮದಲ್ಲಿ ಹೊಸ ಬೌದ್ಧಿಕ ಜಗತ್ತೊಂದನ್ನು ಅನಾವರಣಗೊಳಿಸುವಲ್ಲಿ ಯಶಸ್ವಿಯಾಗಿವೆ. ಅನಂತಮೂರ್ತಿಯವರು ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷವನ್ನು ಕುರಿತ ಅಧ್ಯಯನವು ಈ ಎಲ್ಲಾ ನೆಲೆಗಳ ಹೊಸ ಶೋಧವನ್ನು ತೆರೆದು ತೋರಿಸಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಮಕಾಲೀನ ಪ್ರಸಕ್ತಿಯಿದೆ.

ಅನಂತಮೂರ್ತಿಯವರು ಸಂಸ್ಕೃತಿಯನ್ನು ಪರಿಗ್ರಹಿಸಿದ ಬಗೆ ಹಾಗೂ ಅದನ್ನು ಸಮಕಾಲೀನ ವೈಚಾರಿಕ ಆಕೃತಿಗಳಿಗೆ ಪೂರಕವಾಗಿಸಿದ ರೀತಿ ಕುತೂಹಲಕರವಾದುದು. ಪರಂಪರೆಯ ಪಾತಳಿಯ ಮೇಲೆ ಸಾಂಸ್ಕೃತಿಕವಾಗಿ ಮೈದುಂಬಿಕೊಳ್ಳುವ ಅವರ ಕಥನ ನಿರೂಪಣೆ ಮಾನವ ಸಂಸ್ಕೃತಿಯ ವಿಶ್ಲೇಷಣೆಯಾಗಿದೆ. ಈ ಹಿನ್ನೆಲೆಯಲ್ಲಿ ಅನಂತಮೂರ್ತಿಯವರ ಕಥಾಸಾಹಿತ್ಯಕ್ಕೆ ಕಾಲಾತೀತವಾಗಿಯೂ ಮಾನವನ ಬೌದ್ಧಿಕತೆಗೆ ಚುರುಕು ಮುಟ್ಟಿಸುವ ಗುಣವಿದೆ. ಹಾಗಾಗಿ ಅನಂತಮೂರ್ತಿಯವರ ಕಥನಸಾಹಿತ್ಯದ ಸಾಂಸ್ಕೃತಿಕ ಸಂಘರ್ಷದ ಸ್ವರೂಪವನ್ನು ಕುರಿತ ಅಧ್ಯಯನಕ್ಕೆ ಪ್ರಸ್ತುತತೆಯಿದೆ ಎಂದು ಭಾವಿಸಲಾಗಿದೆ.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿನ ಸಾಂಸ್ಕೃತಿಕ ಸಂಘರ್ಷಕ್ಕೆ ಸಂಬಂಧಿಸಿದಂತೆ ಮಹಾಪ್ರಬಂಧವನ್ನು ರಚಿಸುವುದು ಅಧ್ಯಯನದ ಮುಖ್ಯ ಉದ್ದೇಶ. ಕಥೆ ಹಾಗೂ ಕಾದಂಬರಿಗಳಲ್ಲಿನ ವಿಚಾರಗಳನ್ನು ಸಾಂಸ್ಕೃತಿಕ ಸಂಘರ್ಷದ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ. ಕಥಾ ಸಾಹಿತ್ಯದಲ್ಲಿನ ಸಾಂಸ್ಕೃತಿಕ ಸಂಘರ್ಷಗಳು, ಅವುಗಳಿಗಿರುವ ಇತಿಮಿತಿಗಳು ಹಾಗೂ ಸಾಧ್ಯತೆಗಳನ್ನು ಸಾಮಾಜಿಕ ಮತ್ತು ಸಾಹಿತ್ಯಿಕ ಪರಿಸರಗಳ ಹಿನ್ನೆಲೆಯಲ್ಲಿ ವಸ್ತುನಿಷ್ಠವಾಗಿ ವಿವೇಚಿಸುವ ಪ್ರಯತ್ನಮಾಡಲಾಗಿದೆ.

ಅನಂತಮೂರ್ತಿಯವರು ಸಣ್ಣಕತೆ, ಕಾದಂಬರಿ, ವಿಮರ್ಶೆ, ನಾಟಕ ಮತ್ತು ಕಾವ್ಯ ಹೀಗೆ ವಿವಿಧ ಪ್ರಕಾರದ ಸಾಹಿತ್ಯವನ್ನು ರಚಿಸಿದ್ದಾರೆ. ಆದರೆ ಪ್ರಸ್ತುತ ಸಂಶೋಧನ ಮಹಾಪ್ರಬಂಧದ ವ್ಯಾಪ್ತಿಯು ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿನ ಸಾಂಸ್ಕೃತಿಕ ಸಂಘರ್ಷಕ್ಕೆ ಮಾತ್ರ ಸೀಮಿತವಾಗಿದೆ. ಅನಂತಮೂರ್ತಿಯವರ ವೈಚಾರಿಕ ಜಗತ್ತನ್ನು ಅರಿತುಕೊಳ್ಳುವಲ್ಲಿ ಅವರ ಸಾಹಿತ್ಯವನ್ನು ಕುರಿತ ವಿಮರ್ಶೆಗಳ ನೆರವನ್ನು ಪಡೆಯಲಾಗಿದೆ. ಹಾಗೆಯೇ ಅವರ ಸಾಹಿತ್ಯವನ್ನು ಕುರಿತ ಅಧ್ಯಯನಗಳನ್ನು ಒಟ್ಟು ಚರ್ಚೆಯ ಸಂದರ್ಭದಲ್ಲಿ ಗಮನದಲ್ಲಿಟ್ಟುಕೊಳ್ಳಲಾಗಿದೆ.

ಅಧ್ಯಯನದ ಅನುಕೂಲಕ್ಕಾಗಿ ಪ್ರಸ್ತುತ ಪ್ರಬಂಧವನ್ನು ಐದು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಪರಂಪರೆ ಮತ್ತು ಆಧುನಿಕತೆಯೊಂದಿಗೆ ಸಂಪ್ರದಾಯ–ಆಧುನಿಕತೆ, ಪಾಶ್ಚಾತ್ಯ–ಪೌರಾತ್ಯ ಹಾಗೂ ತಲೆಮಾರುಗಳ ಸಂಘರ್ಷಕ್ಕೆ ಸಂಬಂಧಿಸಿದ ವಿಚಾರಗಳು ಅಧ್ಯಾಯ ಒಂದರಲ್ಲಿವೆ. ಸಮಾಜ ಮತ್ತು ಜಾತಿವ್ಯವಸ್ಥೆಯ ಹಿನ್ನೆಲೆಯೊಂದಿಗೆ ಬ್ರಾಹ್ಮಣ–ಶೂದ್ರ, ಗಂಡು–ಹೆಣ್ಣು ಹಾಗೂ ವ್ಯಕ್ತಿ–ಸಮಾಜ ಕುರಿತಾದ ವಿಷಯಗಳನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಆದರ್ಶ ಮತ್ತು ವಾಸ್ತವದ ವಿಚಾರಗಳೊಂದಿಗೆ ವ್ಯವಸ್ಥೆ–ಸಮಕಾಲೀನತೆ, ಸಾಂಕೇತಿಕತೆ–ವಾಸ್ತವಿಕತೆ ಹಾಗೂ ಅಂತರಂಗ–ಬಹಿರಂಗದ ಸಂಗತಿಗಳನ್ನು ಪ್ರತ್ಯೇಕ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಪ್ರಜ್ಞೆ ಮತ್ತು ಪರಿಸರದಲ್ಲಿ ಭೂತ–ವರ್ತಮಾನ, ವ್ಯಕ್ತಿತ್ವಗಳ ತಾಕಲಾಟ ಹಾಗೂ ಕಾಲ–ಪರಿಸರಕ್ಕೆ ಸಂಬಂಧಿಸಿದ ವಿಚಾರಗಳು ಅಧ್ಯಾಯ ನಾಲ್ಕರಲ್ಲಿವೆ. ವೈಚಾರಿಕತೆ ಮತ್ತು ಸ್ವಾತಂತ್ರ್ಯದೊಂದಿಗೆ ಜೀವನ–ಸಿದ್ಧಾಂತ, ಬದುಕು–ಸಾವಿನಪ್ರಜ್ಞೆ ಹಾಗೂ ಸಾಫಲ್ಯಸಾಧ್ಯತೆ–ನೈತಿಕತೆ ಕುರಿತಾದ ವಿಚಾರಗಳನ್ನು ಕೊನೆಯ ಅಧ್ಯಾಯದಲ್ಲಿ ಕ್ರೋಢೀಕರಿಸಲಾಗಿದೆ. ಸಾಂಸ್ಕೃತಿಕ ಸಂಘರ್ಷದ ಪರಿಣಾಮವಾಗಿ ಅನಂತಮೂರ್ತಿಯವರ ಸಾಹಿತ್ಯ ಧ್ವನಿಸುವ ಸಂಗತಿಗಳನ್ನು ಅಧ್ಯಯನದ ಫಲಿತಗಳಾಗಿ ಸಮಾರೋಪದಲ್ಲಿ ಮಂಡಿಸಲಾಗಿದೆ.

ಅಧ್ಯಯನದ ವಿಧಾನ

ಸಾಹಿತ್ಯಕ ಕೃತಿಗಳನ್ನು ಸಾಂಸ್ಕೃತಿಕ ಆಕರಗಳನ್ನಾಗಿ ಪರಿಗಣಿಸುವ ಪ್ರವೃತ್ತಿಯು ಇತ್ತೀಚೆಗೆ ಹೆಚ್ಚು ಮಹತ್ವವನ್ನು ಪಡೆದಿದೆ. ಒಂದು ಸಮಾಜದ ಜನಜೀವನ, ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ವ್ಯವಸ್ಥೆಯು ಇತರ ಕಲಾಪ್ರಕಾರಗಳಿಗಿಂತ ಬರಹರೂಪಿಯಾದ ಸಾಹಿತ್ಯದಲ್ಲಿ ವೈವಿಧ್ಯಮಯವಾಗಿ ವ್ಯಕ್ತವಾಗುವುದರಿಂದ ಸಾಹಿತ್ಯದ ಅಧ್ಯಯನವು ಸಂಸ್ಕೃತಿಯೊಂದರ ವೈಶಿಷ್ಟ್ಯಗಳನ್ನು ಅರಿಯುವಲ್ಲಿ ತುಂಬಾ ಉಪಯುಕ್ತವಾಗಿದೆ. ಸಮಕಾಲೀನ ಸಮಾಜದ ಆಗುಹೋಗುಗಳನ್ನು, ತಲ್ಲಣ, ಸವಾಲುಗಳನ್ನು ಭಾಷೆ–ಬರವಣಿಗೆಯ ಮೂಲಕವೇ ವಿವರಿಸುವ ಕೆಲಸವನ್ನು ಸಾಹಿತ್ಯವು ಸಮರ್ಪಕವಾಗಿ ಮಾಡುತ್ತದೆ. ಪಾಶ್ಚಾತ್ಯ ವಿಮರ್ಶೆಯ ಇತ್ತೀಚಿನ ಆಸಕ್ತಿಯಾದ ಸಾಂಸ್ಕೃತಿಕ ಅಧ್ಯಯನವು ಅನೇಕ ವಿಮರ್ಶಕರನ್ನು ಮತ್ತು ಸಂಸ್ಕೃತಿ ಚಿಂತಕರನ್ನು ಆಕರ್ಷಿಸುತ್ತಿದೆ. ಇದರ ಫಲವಾಗಿ ಆಧುನಿಕ ಸಾಹಿತ್ಯ ಕೃತಿಗಳನ್ನು ಕೇವಲ ಸಾಹಿತ್ಯ ಕೃತಿಯಾಗಿ ಪರಿಭಾವಿಸುವ ಮನೋಭಾವ ಕಡಿಮೆಯಾಗಿ, ಸಾಹಿತ್ಯ–ಸಂಸ್ಕೃತಿಗಳ ಅಂತರ್ ಸಂಬಂಧದ ಫಲಿತವಾಗಿ ಕಾಣಲಾಗುತ್ತಿದೆ. ಪ್ರಸ್ತುತ ಅಧ್ಯಯನದಲ್ಲಿ ಅನಂತಮೂರ್ತಿಯವರ ಕತೆ–ಕಾದಂಬರಿಗಳು ಸಂಶೋಧನೆಯ ಮೂಲ ಆಕರಗಳಾಗಿವೆ. ಇವರ ಕಥಾಸಾಹಿತ್ಯವನ್ನು ಕುರಿತ ವಿಮರ್ಶೆಗಳನ್ನು ಅದರ ವಿವಿಧ ನೆಲೆಗಳನ್ನು ಅಧ್ಯಯನಕ್ಕೆ ಪೂರಕ ಆಕರಗಳಾಗಿ ಬಳಸಿಕೊಳ್ಳಲಾಗಿದೆ. ಒಟ್ಟಾರೆ ಈ ಸಂಶೋಧನೆಯು ಲಿಖಿತ ಆಕರಗಳನ್ನು, ಕೆಲವು ವಿದ್ವಾಂಸರ–ವಿಮರ್ಶಕರ ಸಂದರ್ಶನಗಳನ್ನು ಅವಲಂಬಿಸಿದೆ. ಅನಂತಮೂರ್ತಿಯವರ ಕಥಾಸಾಹಿತ್ಯವೇ ಇಲ್ಲಿ ಮುಖ್ಯ ಆಕರವಾಗಿರುವುದರಿಂದ ತೌಲನಿಕವಾಗಿ ಮತ್ಯಾವ ಕತೆಗಳನ್ನು ನೋಡಲಾಗಿಲ್ಲ.

[illegible]

[illegible]

ಅಡಿಟಿಪ್ಪಣಿಗಳು

೧. ನಾಗರಾಜ ಕಿ.ರಂ–ಸಂಯುಕ್ತಕರ್ನಾಟಕ, ಸಾಪ್ತಾಹಿಕ ಸೌರಭ, ೧೦.೨.೨೦೦೨ ಪು;೧.

೨. ಸ್ವಾಮಿರಂಗಾನಾಥಾನಂದ–ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಸಂ.ಕೋದಂಡರಾಮ. ಎನ್.ಕೆ, ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೬, ಪು;೪೭.

೩. ಎಲಿಯಟ್.ಟಿ.ಎಸ್–ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಸಂ. ಕೋದಂಡರಾಮ ಎನ್.ಕೆ, ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೬, ಪು;೨೨.

೪. ಆರ್ಕಿನಿಗಸ್–ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಸಂ. ಕೋದಂಡರಾಮ ಎನ್.ಕೆ, ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೬, ಪು;೨೩.

೫. ವೈಟ್.ಎಲ್.ಎ–ವಿಸ್ಮೃತಿ ಮತ್ತು ಸಂಸ್ಕೃತಿ, ಬೋರಲಿಂಗಯ್ಯ ಹಿ.ಚಿ, ಸಿ.ವಿ.ಜಿ, ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧, ಪು;೯೧.

[illegible]

[illegible]

ಅಧ್ಯಾಯ– ಒಂದು

ಪರಂಪರೆ ಮತ್ತು ಆಧುನಿಕತೆ

೧.೧ ಸಂಪ್ರದಾಯ ಮತ್ತು ಆಧುನಿಕತೆ

೧.೨ ಪಾಶ್ಚಾತ್ಯ ಮತ್ತು ಪೌರಾತ್ಯ

೧.೩ ತಲೆಮಾರುಗಳ ಸಂಘರ್ಷ

ಅಧ್ಯಾಯ-೧

ಪರಂಪರೆ ಮತ್ತು ಆಧುನಿಕತೆ

ಪರಂಪರೆ ಮತ್ತು ಆಧುನಿಕತೆ ಎಂಬ ಎರಡು ಪರಿಕಲ್ಪನೆಗಳು ಸದಾ ಪೂರಕವಾಗಿ ವರ್ತಿಸುವಂಥವು. ಯಾವುದೇ ಒಂದು ಸಂಸ್ಕೃತಿಯನ್ನು ಏಕಕಾಲದಲ್ಲಿ ಒಂದು ಪರಂಪರೆ ಮತ್ತು ಆಧುನಿಕತೆ ಸಂಘಟಿತವಾಗಿ ಕಟ್ಟುತ್ತಿರುತ್ತವೆ. ಸಂಸ್ಕೃತಿಯೆಂಬುದು ಕೇವಲ ಹಳೆಯದು, ಪುರಾತನ ಮೌಲ್ಯವನ್ನು ಸಾರುವಂಥದ್ದು ಎಂಬ ಅಭಿಪ್ರಾಯಗಳಿವೆ. ಆದರೆ ಸಂಸ್ಕೃತಿಯೆಂಬುದು ಪರಂಪರೆಯ ಬೇರುಗಳನ್ನು ತಳಹದಿಯಾಗಿಟ್ಟುಕೊಂಡು ಅಂದಂದಿನ ಆಧುನಿಕತೆಯ ಚಿಗುರುಗಳನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತದೆ. ಆದ್ದರಿಂದ ಸಂಸ್ಕೃತಿಯೆಂಬುದು ಏಕಕಾಲದಲ್ಲಿ ಪರಂಪರೆಯ ಮೌಲ್ಯಗಳನ್ನು ಆಧುನಿಕತೆಯ ಚಿಂತನೆಗಳನ್ನು ತನ್ನಲ್ಲಿ ಸಮ್ಮಿಳಿಸಿಕೊಳ್ಳುವ ಒಂದು ಪರಿಕಲ್ಪನೆಯಾಗಿದೆ. ಅನಂತಮೂರ್ತಿಯವರು ಈ ಎರಡೂ ಅಂಶಗಳನ್ನು ತಮ್ಮ ಕಥಾನಕಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಒಂದು ಸಂಸ್ಕೃತಿಯ ಅನನ್ಯತೆಯು ಇತಿಹಾಸದ ಕೆಲವೊಂದು ಘಟ್ಟಗಳಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ಸಮನ್ವಯತೆ, ಸಹಿಷ್ಣುತೆ, ಪ್ರತಿಭಟನೆ ಹಾಗೂ ರಾಜಿ ಇವುಗಳು ಸಂಸ್ಕೃತಿಯೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿವೆ. ಸಮಾಜದ ಅಥವಾ ಪ್ರದೇಶದ ಸಾಂಸ್ಕೃತಿಕ ಕ್ರಿಯಾಶೀಲತೆಯಲ್ಲಿ ಪರಂಪರೆಯೆನ್ನುವುದು ನಿರ್ದಿಷ್ಟವಾಗಿ ಗೋಚರವಾಗುವುದಿಲ್ಲ. ಕಾಲದಿಂದ ಕಾಲಕ್ಕೆ ಹೊಸತನ್ನು ಪರಿಸ್ಥಿತಿಗೆ ತಕ್ಕಂತೆ ಪ್ರಯೋಗಿಸುವ ಪರಂಪರೆಯು ಆಧುನಿಕತೆಯನ್ನು ಸಮನ್ವಯ ಸೂತ್ರಗಳಲ್ಲಿ ಸ್ವೀಕರಿಸುತ್ತದೆ. ಹೀಗೆ ಪರಂಪರೆಯಲ್ಲಿ ಹೊಸತು ಸೇರಿಕೊಳ್ಳುವುದು ಅನಿವಾರ್ಯವಾಗಿದೆ.

ಚಲನಶೀಲ ಪ್ರಕ್ರಿಯೆಯಲ್ಲಿ ಘರ್ಷಣೆಗಳು ಉಂಟಾಗುವುದು ಸಹಜ. ಸೂಕ್ಷ್ಮವಾಗಿ ಗಮನಿಸಿದಾಗ ಕಾಲಾಂತರದಲ್ಲಿ ಕೆಲವು ಹೊಸ ಅಂಶಗಳು ಕಾಣಿಸಿಕೊಳ್ಳುತ್ತವೆ. ಪರಂಪರಾಗತ ಆಚಾರ ವಿಚಾರಗಳಿಗೆ ಬದ್ಧವಾಗಿರುವ ಸಮಾಜವು ಹೊಸ ವಿಚಾರಗಳನ್ನು ಅಳವಡಿಸಿಕೊಳ್ಳುವಾಗ ದ್ವಂದ್ವಕ್ಕೊಳಗಾಗುತ್ತದೆ.

[illegible]

[illegible]

[illegible]

[illegible]

“ಆಧುನಿಕತೆಯನ್ನು ಸ್ವೀಕರಿಸುವಾಗ ಹೊಸದಾಗಿ ರೂಪುಗೊಳ್ಳುತ್ತಿರುವ ಭಾರತೀಯ ವ್ಯವಸ್ಥೆಯಲ್ಲಿ ಅರಗಿಸಿಕೊಳ್ಳಬೇಕಾದ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕಾಗುತ್ತದೆ.”[೧] ಸ್ವಾತಂತ್ರ್ಯಾ ನಂತರದ ಆಧುನಿಕ ಸಾಹಿತ್ಯದಲ್ಲಿ ಸಂಸ್ಕೃತಿಯನ್ನು ಕುರಿತು ಚರ್ಚಿಸುವಾಗ ಸಾಂಸ್ಕೃತಿಕ ಪರಂಪರೆಯನ್ನು ಪ್ರಧಾನವಾಗಿ ಗಮನಿಸಬೇಕಾಗುತ್ತದೆ. ಪಾಶ್ಚಾತ್ಯರ ಆಗಮನ, ಆಳ್ವಿಕೆಯಿಂದಾಗಿ ಭಾರತದಲ್ಲಿನ ಜೀವನ ಮೌಲ್ಯಗಳು ಘರ್ಷಣೆಗೊಳಗಾಗಿ ಬದಲಾದವು. ಸಂಚಾರ, ಸಂಪರ್ಕ ಮತ್ತು ಸಂವಹನ ಮಾಧ್ಯಮಗಳ ಬಳಕೆಯಲ್ಲಿ ಬೆಳವಣಿಗೆಯಾಯಿತು. ಪಾಶ್ಚಾತ್ಯ ಸಂಸ್ಕೃತಿ, ಸಾಹಿತ್ಯ ಹಾಗೂ ಅವರ ಆಚಾರ ವಿಚಾರಗಳು ಭಾರತೀಯರ ಮೇಲೆ ಪರಿಣಾಮವನ್ನುಂಟು ಮಾಡಿದವು. ಭಾರತೀಯರು ವಿದೇಶಗಳಿಗೆ ಭೇಟಿಕೊಡುವಾಗ ಅಲ್ಲಿನ ಜನಜೀವನದ ಬದುಕಿನ ರೀತಿ–ನೀತಿಗಳನ್ನು ಕಂಡು ಆಕರ್ಷಿತರಾದರು. ಆಂಗ್ಲ ಸಾಹಿತ್ಯದ ಅಭ್ಯಾಸದಿಂದ ಅಲ್ಲಿನ ವಿಚಾರಗಳು ಭಾರತೀಯ ಶಿಕ್ಷಿತ ಸಮಾಜಕ್ಕೆ ಪರಿಚಿತವಾದವು. ಪಾಶ್ಚಾತ್ಯ ಶಿಕ್ಷಣದ ಪ್ರಭಾವಕ್ಕೆ ಒಳಗಾದ ಭಾರತೀಯ ವಿಚಾರಗಳಲ್ಲಿಯೂ ಹೊಸತೆರನಾದ ಹೊಳಹು ಕಾಣಿಸಿಕೊಂಡಿತು. ಆಧುನಿಕ ಶೈಲಿಗಳನ್ನು ಅನುಸರಿಸಲು ಬಯಸಿದಾಗ ಹೊಸ ಅನುಭವದ ಎದುರು ಹಳೆಯ ಮೌಲ್ಯಗಳು ತತ್ತರಿಸಿದವು. ಬದಲಾದ ಮನೋಧರ್ಮಕ್ಕೆ ಹೊಸ ದಿಕ್ಕನ್ನು ಕಂಡು ಕೊಂಡ ಸಾಹಿತಿಗಳು ಜೀವನವನ್ನು ಕುರಿತು ಸಿದ್ಧಾಂತಗಳನ್ನು ರೂಪಿಸಿಕೊಂಡರು.

ನಮ್ಮ ಸಂಸ್ಕೃತಿಯ ಮೇಲೆ ಉಂಟಾದ ಪಾಶ್ಚಾತ್ಯ ಪ್ರಭಾವವನ್ನು ಗಮನಿಸಿದಾಗ ಆಧುನಿಕತೆಯ ಪ್ರಮಾಣವು ತಿಳಿಯುತ್ತದೆ. ಪಾಶ್ಚಾತ್ಯರಲ್ಲಿ ಕಾಲಮಾನಕ್ಕನುಗುಣವಾಗಿ ಸಾಮಾಜಿಕ ಜೀವನದ ಮರುಹೊಂದಾಣಿಕೆಗೆ ಅನುಕೂಲವಾಗುವಂತೆ ಆಧುನಿಕತೆಯ ಪ್ರಭಾವವು ರೂಪುಗೊಂಡಿತು. ಭಾರತದ ವಿಷಯದಲ್ಲಿ ಇದನ್ನು ಪಾಶ್ಚಾತ್ಯರ ಪ್ರಭಾವದಿಂದ ಅನುಕರಿಸಲಾಯಿತು. ಇಂಗ್ಲೆಂಡಿನಲ್ಲಿ ಪ್ರತ್ಯಕ್ಷವಾಗಿ ಸಂಭವಿಸಿದ ಮಹಾಯುದ್ಧಗಳು, ಜಾಗತಿಕ ಕ್ರಾಂತಿಯ ಪ್ರಯೋಗಗಳು, ನಗರಗಳ ದಾರುಣಮಯ ಜೀವನ ಹಾಗೂ ರಾಜಕೀಯ ಅಸ್ಥಿರತೆಯಿಂದಾಗಿ ಹಿಂದಿನ ಮೌಲ್ಯಗಳೆಲ್ಲವೂ ಅರ್ಥಹೀನವಾಗಿ ಕಂಡವು. ಧಾರ್ಮಿಕ ಶ್ರದ್ಧೆ ಸಡಿಲವಾಯಿತು. ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿದ ವ್ಯಕ್ತಿಗಳು ಅನಾಥರಾಗಿ ತೊಳಲಿದರು. ಇಂಥ ಪರಿಸ್ಥಿಯಲ್ಲಿ ನವೀನಪ್ರಜ್ಞೆ ಹುಟ್ಟಿ ಸಂವೇದನೆ ಬದಲಾದ್ದರಿಂದ ಹೊಸ ಬಗೆಯ ಸಾಹಿತ್ಯ ಹುಟ್ಟಲು ಕಾರಣವಾಯಿತು. ಸಾಹಿತ್ಯದಲ್ಲಿ ಅನುಭವವು ಅಭಿವ್ಯಕ್ತಿಗೊಳ್ಳುವುದಕ್ಕೆ ಅಸಹಾಯಕತೆ ಮತ್ತು ಅನಾಥ+ಪ್ರಜ್ಞೆಗಳು ತೆರೆದ ದಾರಿಗಳಾದವು.

ಸ್ವಾತಂತ್ರ್ಯಾ ನಂತರದ ಜೀವನದಲ್ಲಿ ಸಂಕುಚಿತತೆ ತಲೆದೋರಿತು. ಬದುಕಿನಲ್ಲಿ ಆಗ ಬದಲಾವಣೆಯ ಲಕ್ಷಣಗಳು ಕಾಣಿಸಿಕೊಳ್ಳತೊಡಗಿದವು. ಸ್ವಾತಂತ್ರ್ಯ ನಂತರವೂ ಕಾಡುತ್ತಿರುವ ಬಡತನ, ಅನಕ್ಷರತೆ, ನಿರುದ್ಯೋಗ ಹಾಗೂ ರಾಜಕೀಯ ಗೊಂದಲದಿಂದಾಗಿ ದೇಶವು ಕಂಗಾಲಾಯಿತು. ಪರಿಸ್ಥಿತಿಯ ಒತ್ತಡದ ಜೊತೆಗೆ ಪಶ್ಚಿಮದ ವಿಜ್ಞಾನ, ಮನಃಶಾಸ್ತ್ರ, ಸಾಹಿತ್ಯ ಹಾಗೂ ಸಂಸ್ಕೃತಿಗಳ ವಿಚಾರ ಪ್ರಣಾಲಿಗಳು ಪ್ರತ್ಯಕ್ಷ ಇಲ್ಲವೆ ಪರೋಕ್ಷವಾಗಿ ಪ್ರಭಾವ ಬೀರತೊಡಗಿದವು. ಜೀವನ ಬದಲಾದಂತೆ ಸಂವೇದನೆಯಲ್ಲೂ ಬದಲಾವಣೆಯಾದಾಗ ನವ್ಯ ಪ್ರಜ್ಞೆಗೆ ದಾರಿಯಾಯಿತು. ಈ ಸಂದರ್ಭದಲ್ಲಿ ರೂಪುಗೊಂಡ ಅಸಂಗತ, ಅಸ್ತಿತ್ವವಾದಗಳು ಇಡೀ ಜಗತ್ತಿನ ಸಾಹಿತ್ಯದ ಮೇಲೆ ಪರಿಣಾಮ ಬೀರಿದವು. ಕ್ರಮೇಣ ಜಾಗತಿಕ ಸಾಹಿತ್ಯದ ಸ್ವರೂಪ, ವಿನ್ಯಾಸಗಳನ್ನು ಮೌಲಿಕವಾಗಿ ಬದಲಿಸಿದವು.

ಮನುಷ್ಯ ಇಂದ್ರಿಯವಾಗಿ ಸ್ವೀಕರಿಸುವ ಅನುಭವ–ವೈಚಾರಿಕತೆ ಸಮಾಜದ ರೂಢಿ ನಿಯಮಗಳಿಗೆ ಬದ್ಧವಾಗಿರುತ್ತವೆ. ಇವುಗಳಲ್ಲಿ ಯಾವುದೇ ಒಂದು ಬದಲಾದರೂ ಅನುಭವದ ಮೇಲೆ ಪರಿಣಾಮವಾಗುತ್ತದೆ. ಬದಲಾದ ಅನುಭವ ಸಾಮಗ್ರಿಗಳು ಆಗ ವಿಶೇಷ ರೀತಿಯ ಸಂವೇದನಾಶೀಲತೆಯನ್ನು ನೀಡುತ್ತವೆ. ಸಾಮಾಜಿಕವಾಗಿ ಉಂಟಾದ ಬದಲಾವಣೆಯು ಭಾಷೆಗೂ ಅನ್ವಯಿಸಿತು. ಪಾಶ್ಚಾತ್ಯರ ಸಂಸ್ಕೃತಿ ವಿಚಾರಗಳು ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ ನಮಗೆ ಪರಿಚಿತವಾದವು. ಇಂಗ್ಲಿಷ್ ಅಧ್ಯಯನ ಮಾಡಿದ ಲೇಖಕರ ಮೂಲಕ ಬದಲಾದ ಚಿಂತನಧಾರೆಯು ಕನ್ನಡಕ್ಕೆ ಕಾಲಿಟ್ಟಿತು.

ಬರವಣಿಗೆ ಲೋಕಮುಖವಾಗಬೇಕು, ಅನುಭವ ಪ್ರಾಮಾಣಿಕವಾಗಬೇಕು ಹಾಗೂ ಅಭಿವ್ಯಕ್ತಿ ಹೊಸದಾಗಬೇಕೆಂದು ನವ್ಯ ಸಾಹಿತಿಗಳು ಬಯಸಿದರು. ಸಂಪ್ರದಾಯದ ಧಾರ್ಮಿಕ ಪ್ರಜ್ಞೆ, ಪಾಪಪ್ರಜ್ಞೆ ಇವುಗಳ ನಂಬಿಕೆಯಲ್ಲಿ ಹೊಸ ಆಲೋಚನೆಗಳು ನುಸುಳಲಾರಂಭಿಸಿದವು. ಆಂತರಿಕ ಅಸ್ವಸ್ಥತೆಯ ಕಾರಣದಿಂದ ಮಾನವ ತನ್ನ ಅಸಹಾಯಕತೆಯನ್ನು ಕಂಡುಕೊಳ್ಳುವ ಹಾಗೂ ಅರಿವು ಮೂಡಿಸಿಕೊಳ್ಳುವ ಪ್ರಯತ್ನ ನವ್ಯರಲ್ಲಿ ಕಂಡಿತು. ಸಮಾಜದಲ್ಲಿ ಕಾಣುವುದನ್ನು ವಿಚಾರಣೆಗೊಳಪಡಿಸಿ ಅನುಭವವನ್ನಾಗಿಸಿಕೊಂಡರು. ಜೀವನ, ಸಂವೇದನೆಯಲ್ಲಿ ಹೇಗೆ ಬದಲಾಯಿತೋ ಹಾಗೆಯೇ ಅಭಿವ್ಯಕ್ತಿಯಲ್ಲಿ ಬದಲಾವಣೆ ಕಾಣಿಸಿಕೊಂಡಿತು. ಹೊಸ ತಂತ್ರ ಶೈಲಿಗಳ ಬಳಕೆಯಿಂದ ಅನುಭವವನ್ನು ಅಭಿವ್ಯಕ್ತಿಗೊಳಿಸಲಾಯಿತು.

ಅನಂತಮೂರ್ತಿಯವರು ಬದುಕಿನ ಹೊಸ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳುವ ವ್ಯಕ್ತಿಯ ಪ್ರಯತ್ನವನ್ನು ತಮ್ಮ ಕಥಾ ಸಾಹಿತ್ಯದಲ್ಲಿ ಹಿಡಿದಿಟ್ಟರು. "ಪರಂಪರಾಗತ ಮೌಲ್ಯಗಳನ್ನು ವೈಯಕ್ತಿಕ ಅನುಭವಗಳ ಮುಖಾಮುಖಿಯಲ್ಲಿ ನಾನಾ ಛಾಯೆ, ಸ್ತರ, ಸಂದರ್ಭಗಳಲ್ಲಿಟ್ಟು ಪರೀಕ್ಷಿಸಿವುದು ಹಾಗೂ ಶೋಧಿಸುವುದು ಅನಂತಮೂರ್ತಿಯವರ ಕಥೆಗಳಲ್ಲಿ ಕಾಣುವ ಮುಖ್ಯ ಅಂಶವಾಗಿದೆ. ಈ ಶೋಧನೆಯ ಪ್ರಕ್ರಿಯೆ ಮತ್ತು ಪರಿಣಾಮ ವೈಚಾರಿಕತೆಯ ಒಡಲಿನಿಂದಲೇ ಕೃತಿಗೊಳ್ಳಲು ನೋನುತ್ತದೆ."[೨] ಪರಂಪರೆಯೆಂಬುದು ಅನಂತಮೂರ್ತಿಯವರ ಕಥಾಸಾಹಿತ್ಯದ ಸಂದರ್ಭದಲ್ಲಿ ಸನಾತನ ಸಂಸ್ಕೃತಿಯ ಭಾಗವೇ ಆಗಿದೆ. ಭಾರತೀಯವೆನಿಸಿದ ಅನೇಕ ಸಂಗತಿಗಳು ವೈದಿಕ ಸಂಸ್ಕೃತಿಯ ಭಾಗವಾಗಿ ರೂಪು ಪಡೆದ ಜೀವನ ವಿಧಾನಗಳು ಇವೆಲ್ಲ ಬದುಕಿನ ಅವಿಭಾಜ್ಯಾಂಗಗಳಾಗಿಯೇ ರೂಪು ಪಡೆದಿವೆ. ಈ ನಿಟ್ಟಿನಿಂದ ಹೊರಡುವ ಅನೇಕ ~~ಹೊರಡುವ ಅನೇಕ~~ ಪಾತ್ರಗಳಿಗೆ ಸಮಕಾಲೀನ ಸನ್ನಿವೇಶದಲ್ಲಿ ಹೊಸ ವಿಚಾರಗಳಿಗೆ ತುಡಿಯುವ ಪಾತ್ರಗಳಿಗೂ ನಡೆಯುವ ಸಂಘರ್ಷದ ರೂಪದಲ್ಲಿಯೇ ಅನಂತಮೂರ್ತಿಯವರ ಕಥನಸಾಹಿತ್ಯ ಸೃಜನವಾಗುತ್ತದೆ. ಇಲ್ಲಿ ಸಮಕಾಲೀನ ವಿಚಾರಗಳೆಂದಾಗ ಆಧುನಿಕತೆಯ ಹೊಸಗಾಳಿಗೆ ಸಿಲುಕಿದ ವಿಚಾರಗಳೇ ಆಗಿರುತ್ತವೆ.

ಆಧುನಿಕತೆಯೆಂಬುದು ಆಧುನಿಕ ಶಿಕ್ಷಣ, ನಗರ ಸಂಸ್ಕೃತಿಯ ಪರಿಣಾಮವಾಗಿ ರೂಪುಗೊಂಡುದು ಒಂದು ನೆಲೆ. ಪಾಶ್ಚಾತ್ಯ ವಿಚಾರಧಾರೆಗಳನ್ನು ರೂಢಿಸಿಕೊಂಡುದರ ಫಲವಾಗಿ ರೂಪುಗೊಂಡ ಆಧುನಿಕತೆಯೂ ಇನ್ನೊಂದು ತೆರ. ಪಾಶ್ಚಾತ್ಯ ಸಂಸ್ಕೃತಿಯ ಅಧ್ಯಯನ, ಅನುಭವಗಳಿಂದ ಇಲ್ಲಿ ಆಧುನಿಕ ವಿಚಾರಗಳ ಸ್ವರೂಪವೇ ವಿಶಿಷ್ಟವಾದುದು. ಹಿರಿಯ ತಲೆಮಾರಿನ ಜನರು ತಮ್ಮ ಪರಿಸರದ ಕಾರಣಕ್ಕಾಗಿ ಹೊಸ ತಲೆಮಾರಿನ ಅಲ್ಪಸ್ವಲ್ಪ ತಿಳಿದ ಕಿರಿಯರಿಗೆ ಗೋಚರವಾಗುವುದು ಮತ್ತೊಂದು ತೆರ. ಯುವಕರ ಮುಂದೆ ಸಂಪ್ರದಾಯದ ಹಿರಿಯ ಜೀವಗಳು ಜೀವನವಿರೋಧಿಗಳಾಗಿ ಕಾಣಿಸುತ್ತಾರೆ. ಹಿರಿಯರಿಗೆ ಕಿರಿಯರ ಬಂಡಾಯ, ಆಧುನಿಕತೆ

[illegible]

[illegible]

[illegible]

[illegible]

ಮೋಡಿಯಂತೆ ಸಂಪ್ರದಾಯದ ವಿರೋಧವಾಗಿ ಕಾಣುತ್ತದೆ. ಬಹುನೆಲೆಗಳನ್ನು ಅನಂತಮೂರ್ತಿಯವರ ಕಥನ ಸಾಹಿತ್ಯದ ಸಂದರ್ಭದಲ್ಲಿ ಮುಂದೆ ವಿಶ್ಲೇಷಿಸಬಹುದು.

೧.೧ ಸಂಪ್ರದಾಯ ಮತ್ತು ಆಧುನಿಕತೆ

ಸಂಪ್ರದಾಯ ಮತ್ತು ಆಧುನಿಕತೆಯ ವಿಚಾರಗಳು ಅನಂತಮೂರ್ತಿ ಅವರ ಕಥಾ ಸಾಹಿತ್ಯದಲ್ಲಿ ಪರಸ್ಪರ ಹೆಣೆದುಕೊಂಡಿವೆ. ಲೇಖಕರ ಸಾಹಿತ್ಯವು ಸಂಪ್ರದಾಯ ಮತ್ತು ಆಧುನಿಕತೆಯ ಮುಖಾಂತರ ಅನ್ವೇಷಣೆಯ ಹಾದಿಯತ್ತ ಸಾಗಿದೆ. ಪ್ರಕೃತಿ ಸಹಜ ಆಸೆ ಆಕಾಂಕ್ಷೆಗಳು, ಪ್ರವೃತ್ತಿಗಳು ಮನುಷ್ಯ ಬದುಕಿನ ಅವಿಭಾಜ್ಯ ಅಂಗಗಳಾಗಿವೆ. ಸಾಂಪ್ರದಾಯಕ ಸಮಾಜದಲ್ಲಿ ನಾವಿನ್ಯದ ಸೇರ್ಪಡೆಯ ಪ್ರಕ್ರಿಯೆಯನ್ನು ಕೆಲವರು ಒಪ್ಪಿದರೆ ಮತ್ತೆ ಕೆಲವರು ಒಪ್ಪುವುದಿಲ್ಲ. ಒಂದು ಸನಾತನ ಮನಸ್ಸು, ಇನ್ನೊಂದು ಆಧುನಿಕತೆಯನ್ನು ಬಯಸುವ ಮನಸ್ಸು ಈ ಎರಡರ ನಡುವಿನ ವಿಭಿನ್ನ ಮನೋಧರ್ಮವು ಸಂಘರ್ಷಕ್ಕೆ ನಾಂದಿಯಾಗಿದೆ.

ಅನಂತಮೂರ್ತಿಯವರು ಪರಂಪರೆಯನ್ನು ಹೊಸದಿಕ್ಕಿನಿಂದ ಅನ್ವೇಷಿಸುವಲ್ಲಿ ಪರಂಪರೆಯಲ್ಲಿನ ಕೊರತೆಯನ್ನು ನೀಗಿಸಲು ಕಥಾಸಾಹಿತ್ಯದ ಮೂಲಕ ಪ್ರಯತ್ನಿಸಿದ್ದಾರೆ. ಒಂದು ಚೌಕಟ್ಟಿಗೆ ತನ್ನ ಜೀವನಕ್ರಮವನ್ನು ಬಂಧಿಸಿಕೊಂಡಿದ್ದ ಪರಂಪರೆ ಆದರ್ಶಗಳೊಳಗೆ ಮಾನವೀಯತೆಯ ಪರವಾಗಿದ್ದರೂ ತನ್ನ ಸಾಂಪ್ರದಾಯಿಕ ವಿಧಾನಗಳಲ್ಲಿ ಅಮಾನವೀಯವಾಗುತ್ತಾ ನಡೆದದ್ದನ್ನು ಗುರುತಿಸಿದರು. ವ್ಯಕ್ತಿಯ ಅಪೇಕ್ಷೆಗಿಂತ ವಿಧಿ–ವಿಧಾನ ಆಚರಣೆಗೆ ಹೆಚ್ಚಿನ ಒತ್ತುಕೊಟ್ಟು ವ್ಯಕ್ತಿಯನ್ನು ಸಮಾಜಕ್ಕೆ ಬಂಧಿಸಿ ಅದರೊಳಗೆ ಬಾಳುವುದೇ ಪರಮಧರ್ಮ ಎಂದಿದ್ದ ಪರಂಪರೆಯ ಧೋರಣೆಯನ್ನು ವ್ಯಕ್ತಿ ಪರಂಪರೆಯಿಂದ ಹೊರಗೆ ನಿಂತು ಪ್ರತಿಭಟಿಸಿದ್ದು, ಮಾತ್ರವೇ ಅಲ್ಲದೆ ವ್ಯಕ್ತಿನಿಷ್ಠತೆಗೆ ಬೆಲೆ ಕೊಡುವಲ್ಲಿ ಮಾನವೀಯತೆಯ ದೃಷ್ಟಿಯನ್ನು ಅಳವಡಿಸಿಕೊಂಡರು. ಹೀಗೆ ಪರಂಪರೆಯ ಜೀವನಕ್ರಮದಿಂದ ಹೊರಗೆ ನಿಂತ ಅನಂತಮೂರ್ತಿಯವರು ಆರಂಭದಲ್ಲಿ ಪರಂಪರೆಯನ್ನು ಜೀವಂತಗೊಳಿಸುವ ದಿಕ್ಕಿನಲ್ಲಿ ವ್ಯಕ್ತಿಯ ಗೊಂದಲತೆಯ ಕಡೆಗೆ ಹೆಚ್ಚಿನ ಗಮನಹರಿಸಿದರು. ಅವರ ಕಥನಸಾಹಿತ್ಯದಲ್ಲಿ ಪಾತ್ರಗಳು ಅನುಭವಿಸುವ ಗೊಂದಲವನ್ನು ಈ ಮುಂದಿನ ಕಥನಗಳಲ್ಲಿ ಕಾಣುತ್ತೇವೆ.

ಪರಂಪರೆ ಮತ್ತು ಆಧುನಿಕ ವಿಚಾರಗಳ ಘರ್ಷಣೆಯನ್ನು 'ಪ್ರಶ್ನೆ' ಕತೆಯಲ್ಲಿ ಕಾಣುತ್ತೇವೆ. ಇಲ್ಲಿ ಪರಂಪರಾಗತ ಮೌಲ್ಯಗಳ ಶೋಧನೆಯಿದ್ದು ಹಳ್ಳಿ ಹಾಗೂ ಪಟ್ಟಣದ ಬದುಕಿನ ಹಂಬಲವು ಶಂಕರಯ್ಯ, ಶಾರದೆ ಮತ್ತು ರಂಗನ ವಿಚಾರಗಳ ಮೂಲಕ ವ್ಯಕ್ತವಾಗಿದೆ. ಶಂಕರಯ್ಯನು ಸಂಪ್ರದಾಯವನ್ನು ಪ್ರತಿನಿಧಿಸಿದರೆ, ರಂಗನು ಆಧುನಿಕತೆಯನ್ನು ಪ್ರತಿನಿಧಿಸುತ್ತಾನೆ. ಕತೆಯ ಕೇಂದ್ರ ಬಿಂದುವಾದ ಶಾರದೆಯು ಸಂಪ್ರದಾಯ ಮತ್ತು ಆಧುನಿಕತೆ ಇವೆರಡರ ಸುಳಿಗೆ ಸಿಲುಕಿದ್ದಾಳೆ. ಕುರುಡು ಶಂಕರಯ್ಯನಿಗೆ ತನ್ನ ಅಕ್ಕನ ಮಗಳಾದ ಶಾರದೆಯನ್ನು ಬಿಟ್ಟರೆ ತನ್ನವರಾರೂ ಇಲ್ಲ. ತನಗೆ ಆಧಾರವಾದ ಅವಳನ್ನು ಕಳೆದುಕೊಂಡರೆ ಅನಾಥನಾಗುತ್ತಾನೆ. ಶಾರದೆಯನ್ನು ಮದುವೆಯಾಗಲು ಬಯಸಿದ ತರುಣ ರಂಗನಿಗೂ ಅವಳು ಬೇಕು. ಆದರೆ ಶಾರದೆಯನ್ನು ಮದುವೆಯಾಗಿ ಹಳ್ಳಿಯಲ್ಲೇ ಇರಲಾರ. ಶಾರದೆಯೊಂದಿಗೆ ನಗರದಲ್ಲಿ ಬದುಕಲು ಬಯಸುವ ರಂಗನಿಗೆ ಹಳ್ಳಿಯು ಶಾಪದಂತೆ ಕಾಣುತ್ತದೆ. ಹಳ್ಳಿಯ ಬದುಕು ಅವನಿಗೆ ಸ್ಮಶಾನವೆನಿಸಿದೆ. ಶಾರದೆಯ ಜೊತೆಗೆ ಶಂಕರಯ್ಯ ಮೈಸೂರಿಗೆ ಬಂದು ತಮ್ಮೊಡನೆ ಇರಬಹುದಾದರೆ ರಂಗನ ಅಭ್ಯಂತರವಿಲ್ಲ.

[illegible]

[illegible]

[illegible]

[illegible]

[illegible]

ಪೂರ್ವದಿಂದ ಬಂದ ಮನೆಯನ್ನು ಬಿಟ್ಟರೆ ತಾನು ಪರದೇಶಿ, ಇಲ್ಲವೇ ಅತಂತ್ರನಾಗಿಬಿಡುವೆನೆಂಬ ಭ್ರಮೆಯು ಶಂಕರಯ್ಯನನ್ನು ಕಾಡುತ್ತದೆ. ಜೊತೆಗೆ ರಂಗನ ಮುತ್ತಜ್ಜನೂ, ಶಂಕರಯ್ಯನ ಅಜ್ಜನೂ ಯಾವುದೋ ಸಣ್ಣ ಜಗಳಕ್ಕೆ ಬಾಯಿ ತಪ್ಪಿ ಆಣೆಯನ್ನು ಹಾಕಿಕೊಂಡಿದ್ದರಿಂದ ಹಿರಿಯರ ಮಾತನ್ನು ಮುರಿಯುವಂತಿಲ್ಲ. ಮುರಿದರೆ ನರಕಕ್ಕೆ ಹೋಗುವೆನೆಂಬ ಭ್ರಾಂತಿ ಶಂಕರಯ್ಯನಿಗಿದೆ. ಇದರಿಂದ ಶಾರದೆಯನ್ನು ವಿವಾಹವಾಗಬೇಕೆಂಬ ರಂಗನ ಇಚ್ಛೆಯು ಪೇಚಿಗೆ ಕಾರಣವಾಗಿದೆ. ಇವರಿಬ್ಬರೂ ಶಾರದೆಯನ್ನು ಹಂಬಲಿಸುವುದರಿಂದ ಅವಳು ಗೊಂದಲಕ್ಕೊಳಗಾಗುತ್ತಾಳೆ. ಇಲ್ಲಿ ಮೂವರೂ ಮನೋವೇದನೆಯ ಸುಳಿಗೆ ಸಿಲುಕಿದ್ದಾರೆ.

ಮದುವೆಗೆ ಮುಂಚೆ ಬಸುರಿಯಾಗಿ ಸಂಪ್ರದಾಯಕ್ಕೆ ಹೆದರಿ ಆತ್ಮಹತ್ಯೆಯನ್ನು ಮಾಡಿಕೊಂಡ ಶಾರದೆಯ ಅಕ್ಕನ ಸಾವಿನ ಬಗ್ಗೆ ರಂಗನಿಗೆ ಅನುಕಂಪವಿದೆ. ನಿನ್ನ ಅಕ್ಕನಿಗೆ ಬಸಿರು ಮಾಡಿದವನನ್ನೇ ಹಿಡಿದು ತಂದು ಮದುವೆ ಮಾಡಿಸಬೇಕಿತ್ತು, ಇಲ್ಲವೇ ಯಾರಿಗಾದರೂ ಹೇಳಿ ಬಸಿರು ತೆಗಿಸಬೇಕಿತ್ತು ಎನ್ನುತ್ತಾನೆ. ಸಮಾಜದ ಕಟ್ಟುಪಾಡಿನಂತೆ ಬದುಕಲು ಬಯಸುವ ಶಾರದೆಯು ಅಕ್ಕನ ಸಾವಿನಿಂದಾದ ಅವಮಾನ ಹಾಗೂ ವೇದನೆಯಿಂದ ಗಂಡಸರನ್ನು ಕೂಡುವ ಸುಖವೇ ಕೇಡೆಂದು ಭಾವಿಸಿದ್ದಾಳೆ. ಊರ ಒಕ್ಕಲುಮಕ್ಕಳ ಬಾಯಲ್ಲಿ ತಮ್ಮ ಮನೆತನದ ವಿಷಯ ಬರಬಾರದು ಎನ್ನುತ್ತಾಳೆ. ಅಯ್ಯೋ ಮನೆತನ, ಬೆಂಕಿಯಿಡಬೇಕು ನಿಮ್ಮ ಮನೆತನಕ್ಕೆ. ನೀನು ಮತ್ತು ನಿನ್ನ ಮಾವನ ಗೊಡ್ಡು ಸಂಪ್ರದಾಯದಿಂದ ನಿನ್ನ ಅಕ್ಕನನ್ನು ಬದುಕಿಸಿಕೊಳ್ಳಲಾಗಲಿಲ್ಲ ಎಂದು ರಂಗ ನಿಂದಿಸುತ್ತಾನೆ.

ಸಂಪ್ರದಾಯವಾದೀ ಶಂಕರಯ್ಯನ ವ್ಯಕ್ತಿತ್ವವು ಆಧುನಿಕ ಮನೋಭಾವದ ರಂಗನಿಗೆ ಹಿಡಿಸುವುದಿಲ್ಲ. ತನ್ನ ಹಾಗೂ ಶಾರದೆಯ ಭಾವಿ ಭವಿಷ್ಯಕ್ಕೆ ಶಂಕರಯ್ಯನೇ ಮುಳ್ಳಾಗಿರುವನೆಂಬ ಅಸಮಧಾನವಿದೆ. ಹಳ್ಳಿಯನ್ನು ಬಿಟ್ಟು ಬರಲು ಒಪ್ಪದ ಶಂಕರಯ್ಯನು ಶಾರದೆ ಹಾಗೂ ರಂಗ ಎಲ್ಲಿಯಾದರೂ ಸುಖವಾಗಿ ಬಾಳಲೆಂದು ಬಯಸುವುದಿಲ್ಲ. ಹೀಗೆ ಪರಸ್ಪರರ ಮನೋಭಾವನೆಯಲ್ಲಿ ವಿರೋಧಾಭಾಸವಿದೆ.

ಶಾರದೆಯನ್ನು ಮದುವೆಯಾಗಲು ರಂಗನು ಒತ್ತಾಯಿಸುತ್ತಾನೆ. ಬದುಕಿನ ಬಗ್ಗೆ ಭ್ರಮನಿರಸನವನ್ನು ಹೊಂದಿದ ಶಾರದೆಯು ಅಕ್ಕಮಹಾದೇವಿ, ಪ್ರಭುದೇವ, ಶಾರದಾಮಣಿ, ಪರಮಹಂಸ ಇವರೆಲ್ಲರ ಆದರ್ಶಗಳನ್ನು ರಂಗನಿಗೆ ತಿಳಿಸುತ್ತಾಳೆ. ನನ್ನನ್ನು ಸಾಕಿದ ಕುರುಡು ಮಾವಯ್ಯನ ಶುಶ್ರೂಷೆಯಲ್ಲಿ ನಾನು ಕಾಲ ಹಾಕುತ್ತೇನೆ. "ನೀನೊಬ್ಬ ದೊಡ್ಡ ಸಂತನಾಗಿ ಬಾ"ಎಂದಳು. ಆಗ ರಂಗನು ನಮ್ಮ ಕೈಯಿಂದ ಏನಾದರೂ ಸಾಧ್ಯವಾಗದಿದ್ದಾಗ ನಾವು ಹೀಗೊಂದು ವೇದಾಂತ ಮಾಡಿಕೊಳ್ಳುತ್ತೇವೆ ಎನ್ನುತ್ತಾನೆ. ಶಂಕರಯ್ಯನ ಸೇವೆಗಾಗಿ ನಿನ್ನ ಯೌವನವು ಹಾಳಾಗಬಾರದು. ನೀನು ನಿನಗಾಗಿ ಮತ್ತು ನನಗಾಗಿ ಬದುಕಬೇಕೆನ್ನುತ್ತಾನೆ. ಮೈಯ್ಯ ಬಯಕೆಯನ್ನು ಧಿಕ್ಕರಿಸಿ ಬದುಕಿದರೆ ಮುಂದೆ ಶುದ್ಧ ಪಿರಿಪಿರಿಯಾಗಿ ಚಿಕ್ಕ ಹುಡುಗಿಯರ ಜೀವ ಹಿಂಡುವ ಪಿಶಾಚಿಯಾಗುವೆ ಎನ್ನುತ್ತಾನೆ. ನೈಸರ್ಗಿಕವಲ್ಲದ ರಂಗನ ಈ ಮಾತುಗಳು ಶಾರದೆಗೆ ವಿಕಾರವೆನಿಸುತ್ತವೆ.

ಪೇಟೆಯಿಂದ ಹೊಸ ಪುಸ್ತಕಗಳನ್ನು ಓದಿಕೊಂಡು ಬಂದ ರಂಗನು ಸಂಪ್ರದಾಯದ ಹಾದಿಯನ್ನು ತಪ್ಪಿದ್ದಾನೆಂದು ಶಾರದೆಯು ಹೆದರುತ್ತಾಳೆ. ರಂಗ ಮೈಸೂರಿಗೆ ಓದಲು ಹೋಗಿರದಿದ್ದರೆ ಹಳ್ಳಿಯೇ ಸಾಕೆಂದಿರುತ್ತಿದ್ದ. ಪರಂಪರೆಯಿಂದ ಬಂದದ್ದನ್ನು ಸರಿಯೆಂದು ಒಪ್ಪುತ್ತಿದ್ದ. ಪೇಟೆಯನ್ನು ಬಿಟ್ಟು ಹಳ್ಳಿಯಲ್ಲಿಯೇ ಇರಲು ಒಪ್ಪಿದ್ದರೆ ಇವನನ್ನೇ ಮದುವೆಯಾಗಬಹುದಿತ್ತು. ಜೊತೆಗೆ ಮಾವನ ಶುಶ್ರೂಷೆಯನ್ನು

[illegible]

[illegible]

[illegible]

[illegible]

[illegible]

ಮಾಡಿಕೊಂಡಿರಬಹುದಿತ್ತು. ಶಂಕರಯ್ಯನ ಬಗೆಗೆ ಅನುಕಂಪವನ್ನು ಹೊಂದಿದ ಶಾರದೆಯು ಆಧುನಿಕ ಮನೋಭಾವದ ರಂಗನ ಬಗೆಗೆ ದ್ವಂದ್ವ ನಿಲುವನ್ನು ತಾಳುತ್ತಾಳೆ. ಅಂಥ ಸಂಪ್ರದಾಯಸ್ಥನಾದ ಶಂಕರಯ್ಯನು ಕಣ್ಣು ಕಾಣದಿದ್ದರೂ ಕೈಯಾಡಿಸಿ ರುದ್ರಾಕ್ಷಿ ಸರವನ್ನು ಎತ್ತಿಕೊಂಡು ಬದುಕಿನ ಕೊನೆಯವರೆಗೂ ಸಂಪ್ರದಾಯವನ್ನು ಬಿಡಲಾರನೆಂಬ ಮನೋಭಾವವನ್ನು ತೋರಿಸುತ್ತಾನೆ. ಪರಂಪರಾಗತ ಮೌಲ್ಯಗಳೊಂದಿಗೆ ರಂಗನು ರಾಜಿಯಾವುದಿಲ್ಲ. ಶಾರದಾ ಮತ್ತು ಶಂಕರಯ್ಯ ಆಧುನಿಕ ಬದುಕನ್ನು ಬಯಸುವುದಿಲ್ಲ.

ಕತೆಯ ಮುಖ್ಯ ಪಾತ್ರವಾದ ಶಾರದೆ ಇಲ್ಲಿ ಪರಂಪರೆ ಮತ್ತು ಆಧುನಿಕತೆಯ ಕೊಂಡಿಯಾಗಿ ಗೋಚರಿಸುತ್ತಾಳೆ. ಶಾರದೆಗೆ ರಂಗನ ಮೇಲೆ ಪ್ರೀತಿ ಇರುವಂತೆ ಪರಂಪರೆಯಿಂದ ರೂಢಿಸಿಕೊಂಡು ಬಂದ ಜೀವನ ವಿಧಾನದ ಬಗೆಗೂ ಒಲವಿದೆ. ಆದ್ದರಿಂದ ರಂಗನ ವಿಚಾರಗಳನ್ನು ವರ್ತಮಾನದಲ್ಲಿ ಸುಲಭವಾಗಿ ಒಪ್ಪಿಕೊಳ್ಳಲು ಅವಳಿಗೆ ಆಗುವುದಿಲ್ಲ. ಇದರಿಂದಾಗಿ ಶಾರದೆ ಕುರುಡು ಶಂಕರಯ್ಯನ ಶುಶ್ರೂಷೆಯಲ್ಲಿ ನಿರಂತರವಾಗಿ ಕಾಲಕಳೆಯುತ್ತಾಳೆ. ಪರಂಪರೆಯ ಚೌಕಟ್ಟಿನಲ್ಲಿ ಶಂಕರಯ್ಯನ ಬದುಕು ಸಾಗಿದೆ. ಆಧುನಿಕತೆಯ ವಿಚಾರಗಳ ಬೆಳಕಿನಲ್ಲಿ ರಂಗ ಬದುಕಿನ ಹೊಸ ಲಕ್ಷಣದ ಹುಡುಕಾಟದಲ್ಲಿದ್ದಾನೆ. ಪರಂಪರೆಯ ಸಂಗತಿಗಳೊಡನೆ ಸಿಕ್ಕಿ ಹಾಕಿಕೊಂಡಿರುವ ಶಾರದೆಯನ್ನು ಬಿಡಿಸುವ ಛಲ ರಂಗನದು. ಅದನ್ನು ಕಾಲಿನಿಂದ ತುಳಿದು ಬರಲಾರದ ಬಿಕ್ಕಟ್ಟು ಶಾರದೆಯದು. ಇಲ್ಲಿ ಪರಂಪರೆ ಮತ್ತು ಆಧುನಿಕತೆ ಶಾರದೆಗೊಂದು ದ್ವಂದ್ವವೇ ಆಗಿದೆ. ಶಂಕರಯ್ಯ ಸಂಪ್ರದಾಯ ಶರಣನಾಗಿದ್ದಾನೆ. ಅದೇ ಪರಿಸರದಲ್ಲಿ ಬದುಕಿದ ಶಾರದೆಗೂ ಆ ಸಂಪ್ರದಾಯಗಳು ಬದುಕಿನ ಬಹು ಅಗತ್ಯ ಸಂಗತಿಗಳೂ ಹೌದು. ಆದರೆ ರಂಗನಿಗೆ ಆಧುನಿಕ ಶಿಕ್ಷಣದ ಪರಿಣಾಮವಾಗಿ ಹೊಸ ವಿಚಾರಗಳನ್ನು ತಲೆಗೆ ತುಂಬಿಸಿಕೊಂಡಿದ್ದಾನೆ. ಅವನಿಗೆ ಸಂಪ್ರದಾಯಗಳು ಹಾಗೂ ಹಳೆಯ ಆಚಾರಗಳೆಲ್ಲ ಅರ್ಥಹೀನವಾಗಿ ಗೋಚರಿಸಿವೆ. ಈ ಕಾರಣಕ್ಕಾಗಿ ಸಂಪ್ರದಾಯದಲ್ಲಿ ಬದುಕಿದ ಶಾರದೆಗೂ ಸಂಪ್ರದಾಯಕ ವಾತಾವರಣದಿಂದ ಹೊರಗೆ ಬೆಳೆದ ರಂಗನಿಗೂ ವೈಚಾರಿಕ ಸಂಘರ್ಷಕ್ಕೆ ಮುಖ್ಯ ಕಾರಣ ಅವರು ಬೆಳೆದ ಸಂಸ್ಕೃತಿಯೇ ಆಗಿದೆ.

ಪರಂಪರೆಯೇ ನಿಜವಲ್ಲ, ಆಧುನಿಕತೆಯೂ ಹುಸಿಯಲ್ಲ. ಇವೆರಡರ ಸಮ್ಮಿಲನವೇ ಹೊಸ ಬದುಕಿನ ನಾಂದಿಯಾಗಬಲ್ಲದು ಎಂಬ ಆಶಾಭಾವನೆಯನ್ನು ಶಾರದೆಯ ಮೂಲಕ ಕಥೆಯಲ್ಲಿ ಪ್ರಕಟಿಸಲಾಗಿದೆ. ಪರಂಪರೆ ಮತ್ತು ಆಧುನಿಕತೆ ಇವುಗಳ ಪ್ರತಿನಿಧಿಗಳಾಗಿರುವ ಶಂಕರಯ್ಯ ಮತ್ತು ರಂಗ ಇವರು ಬೆಳೆದ ಸಾಂಸ್ಕೃತಿಕ ಪರಿಸರದ ವಿಭಿನ್ನತೆಯಿಂದಾಗಿ ಹುಟ್ಟಿಕೊಂಡ ಸಂಘರ್ಷಕ್ಕೆ ಇಲ್ಲಿ ಶಾರದೆ ನೆವವಾಗುತ್ತಾಳೆ. ಶಂಕರಯ್ಯನ ಪರಂಪರೆ ಅನುಭವ ಸಂಸ್ಕೃತಿಯದಾದರೆ, ರಂಗನ ಆಧುನಿಕತೆ ಬೌದ್ಧಿಕ ಸಂಸ್ಕೃತಿಯದು. ಇವೆರಡನ್ನು ತೂಗಿ ನೋಡುವ ಶಾರದೆ ಗೊಂದಲಗಳ ನಡುವೆ ಬೌದ್ಧಿಕ ಸಂಘರ್ಷಕ್ಕೆ ಈಡಾಗುತ್ತಾಳೆ. ಶಾರದೆ ಏಕಕಾಲಕ್ಕೆ ಪರಂಪರೆಯ ಸತ್ವಯುತ ಮೌಲ್ಯಕ್ಕೂ ಹಾಗೂ ಆಧುನಿಕ ವೈಚಾರಿಕತೆಯ ವಿವೇಚನಾ ಪ್ರಜ್ಞೆಗೂ ಸಂಕೇತವಾಗುತ್ತಾಳೆ. ಇಲ್ಲಿ ಬರುವ ಪಾತ್ರಗಳು ಯಾರೂ ಸೋಲುವುದಿಲ್ಲ, ಗೆಲ್ಲುವುದಿಲ್ಲ. ರಂಗನ ಮೂಲಕ ಮೊದಲು ಆಧುನಿಕ ವಿಚಾರಗಳತ್ತ ಕಥೆ ಗಮನಸೆಳೆದರೂ ಕೊನೆಗೆ ಶಾರದೆಯ ನಿರ್ಧಾರವು ಸಂಪ್ರದಾಯದ ಕಡೆಗಿರುವುದರಿಂದ ಸಂಪ್ರದಾಯಕ್ಕೆ ಇಲ್ಲಿ ಒತ್ತುನೀಡಲಾಗಿದೆ.

ವ್ಯಕ್ತಿ ಮತ್ತು ಕುಟುಂಬದ ನಡುವೆ ಸಂಭವಿಸುವ ಹಳತು ಮತ್ತು ಹೊಸದರ ನಡುವಿನ ಸಂಘರ್ಷವನ್ನು 'ಪ್ರಕೃತಿ' ಕತೆಯಲ್ಲಿ ಕಾಣಬಹುದು. ಸಂಕಪ್ಪಯ್ಯನಿಗೆ ಅಡಿಕೆ ಬೆಳೆಯುವ ನೆಲದಲ್ಲಿ ಕಿತ್ತಳೆಯನ್ನು ಬೆಳೆಯುವ ಛಲವಿದೆ. ಮಗ ನಾರಾಯಣನಿಗೆ ಹಳ್ಳಿಯನ್ನು ಬಿಟ್ಟು ಶಿವಮೊಗ್ಗದಲ್ಲಿ ಹೋಟೆಲನ್ನು ನಡೆಸುವ

[illegible]

[illegible]

[illegible]

[illegible]

ಮನಸ್ಸಿದೆ. ಒಂದೇ ಕುಟುಂಬದಲ್ಲಿ ತಂದೆ ಹಾಗೂ ಮಗನ ನಡುವೆ ಭಿನ್ನಾಭಿಪ್ರಾಯಗಳಿವೆ. ಒಬ್ಬರ ನಿಲುವು ಮತ್ತೊಬ್ಬರಿಗೆ ಹಿಡಿಸುವುದಿಲ್ಲ. ಪರಂಪರಾಗತವಾಗಿ ಹಿರಿಯರು ನಡೆಸಿಕೊಂಡು ಬಂದ ವ್ಯವಸಾಯವನ್ನೇ ಸಂಕಪ್ಪಯ್ಯ ಮುಂದುವರಿಸುತ್ತಾನೆ. ಹೀಗೆ ಪರಂಪರೆ ಹಾಗೂ ಆಧುನಿಕತೆ ಈ ಎರಡು ಮನಸ್ಥಿತಿಗಳ ಸಂಘರ್ಷದಿಂದ ಸಂಕ್ರಮಣ ಸ್ಥಿತಿಯು ನಿರ್ಮಾಣವಾಗಿದೆ.

ಕೆಚ್ಚಿರುವವರೆಗೂ ಹೋರಾಡಬೇಕೆನ್ನುವ ಛಲ ಸಂಕಪ್ಪಯ್ಯನದು. ಸತತ ಆರು ವರ್ಷಗಳಿಂದ ಕಿತ್ತಳೆ ತೋಟಕ್ಕಾಗಿ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದರೂ ಬೆಳೆ ಬಾರದೇ ಪ್ರಕೃತಿಯು ಸವಾಲಾಗಿದೆ. ಹಿಂದೊಮ್ಮೆ ಸಂಕಪ್ಪಯ್ಯನಿಗೆ ಮಲೆನಾಡಿನ ಅತ್ಯುತ್ತಮ ಬೇಸಾಯಗಾರನೆಂದು ಪ್ರಶಸ್ತಿ ಬಂದಿದೆ. ಹೀಗೆ ವ್ಯವಸಾಯದ ಬದುಕಿನಲ್ಲಿ ಏರಿಳಿತಗಳನ್ನು, ಲಾಭ–ನಷ್ಟಗಳನ್ನು ಕಂಡ ಇವನು ಕಾಡುಗುಡ್ಡವನ್ನು ಒಗ್ಗಿಸಿಕೊಂಡು ಬೆಳೆಯನ್ನು ಪಡೆಯುವೆನೆಂಬ ಆತ್ಮವಿಶ್ವಾಸದಿಂದ ವ್ಯವಸಾಯವನ್ನೇ ಮುಂದುವರಿಸಲು ಇಚ್ಛಿಸುತ್ತಾನೆ.

ಶಿವಮೊಗ್ಗದಲ್ಲಿ ಹೋಟೆಲಿಡುವ ಮಗ ನಾಣಿಯ ಆಲೋಚನೆಯನ್ನು ತಾಯಿ ಸೀತಮ್ಮ ಬೆಂಬಲಿಸುತ್ತಾಳೆ. ಸಂಕಪ್ಪಯ್ಯನಿಗೆ ಯಾವುದು ಕರ್ಮಭೂಮಿಯೋ ಅದು ಅವನ ಹೆಂಡತಿ ಮತ್ತು ಮಗನಿಗೆ ಕೊಂಪೆವಾಸವೆನಿಸಿದೆ. "ಮನೆಯವರ ಸುಖಕ್ಕೆ ಅಡ್ಡಿಯಾಗುವ ಬೇಸಾಯ ಯಾಕೆ ಮಾಡಬೇಕೋ" ಎಂದು ಸೀತಮ್ಮ ಗೊಣಗುತ್ತಾಳೆ. ನಾಣಿಗೆ ಅಪ್ಪನ ಜೀವನ ವಿಧಾನವನ್ನು ಅನುಸರಿಸಲು ಇಷ್ಟವಿಲ್ಲ. ಇದಲ್ಲದೇ ಅದೇ ಹಳ್ಳಿಯ ಶಾನುಭೋಗನು ತಮ್ಮ ಮಗ ಕಿಟ್ಟಿಗೆ ಹೋಟೆಲಿಡಲು ಒಪ್ಪಿಗೆ ನೀಡಿದ್ದಾರೆ. ಅಷ್ಟೇಕೆ ನಾಣಿಯ ಸೋದರಮಾವ ತನ್ನ ಸೋದರಳಿಯನನ್ನು ಶಿವಮೊಗ್ಗದಲ್ಲಿ ಹೋಟೆಲಿಡಲು ಆಹ್ವಾನಿಸಿದ್ದಾನೆ. ಪರಂಪರಾಗತ ಗ್ರಾಮೀಣ ಬದುಕು ಆಧುನಿಕವಾಗಲಾರಂಭಿಸಿದೆ. ಈ ಸಾಮಾಜಿಕ ಪ್ರಕ್ರಿಯೆಯಲ್ಲಿ ಆಧುನಿಕತೆಯನ್ನು ಅನುಸರಿಸಲು ನಾರಾಯಣ, ಸೀತಮ್ಮ, ಶಾನುಭೊಗ ಹಾಗೂ ಕಿಟ್ಟಿಯಂಥವರು ಉತ್ಸುಕರಾಗಿದ್ದಾರೆ. ಆದರೆ ಈ ಪ್ರಯೋಗಶೀಲತೆ ಸಂಕಪ್ಪಯ್ಯನಿಗೆ ಹಿಡಿಸುವುದಿಲ್ಲ.

ಪರಂಪರೆಯಿಂದ ಬಂದ ವ್ಯವಸಾಯವನ್ನು ಬಿಟ್ಟು ಪಟ್ಟಣಕ್ಕೆ ಹೋಗಿ ಬ್ರಾಹ್ಮಣರಿಗೆ ಸಲ್ಲದ ಅನ್ನ ವಿಕ್ರಯವನ್ನು ಮಾಡುವುದು ಸರಿಯಲ್ಲ ಎನ್ನುವುದು ಸಂಕಪ್ಪಯ್ಯನ ವಿಚಾರವಾಗಿದೆ. ವರ್ಷದಲ್ಲಿ ಬರುವ ಅನಂತವ್ರತ, ಗೌರಿಗಣೇಶ ಹಾಗೂ ಎಲ್ಲ ಹಬ್ಬಗಳನ್ನು ಮನೆತನದ ಮುಖ್ಯಸ್ಥನಾಗಿ ಸಂಕಪ್ಪಯ್ಯ ನಡೆಸುತ್ತಾನೆ. ಈಗ ಚೋಟುದ್ದದ ಮಗ ಹಾಗೂ ಆಸೆಬುರುಕ ಹೆಂಡತಿಯ ಮಾತು ಕಟ್ಟಿಕೊಂಡು ವಂಶಪಾರಂಪರ್ಯವಾಗಿ ಗುಡ್ಡಗಳ ಜೊತೆ ಸೆಣಸಿ ಬೆಳೆಸಿದ ತೋಟ ಗದ್ದೆ ಪರಭಾರೆ ಮಾಡಲು ಸಂಕಪ್ಪಯ್ಯ ಒಪ್ಪುವುದಿಲ್ಲ.

ನಾರಾಯಣನು ಹಳ್ಳಿ ಹಾಗೂ ತೋಟದ ಬದುಕನ್ನು ಬಯಸುವುದಿಲ್ಲ. ಆ ಹಾಳು ನೆಲದಲ್ಲಿ ಕಿತ್ತಳೆ ಬೆಳೆಯಲ್ಲಾಂತ ಶಾನುಭೋಗರು ಗಿಣಿಗೆ ಹೇಳುವಂತೆ ಅಪ್ಪನಿಗೆ ಬುದ್ಧಿ ಹೇಳಲಿಲ್ಲವೇನಮ್ಮ ಎಂದ ನಾರಾಯಣನ ಮಾತಿಗೆ ಸೀತಮ್ಮ ನಿತ್ಯ ಒಂದೇ ಕಥೆ ಈ ಹಾಳು ಕೊಂಪೇಲಿ ನನಗೂ ಹೆಣಗಿ ಹೆಣಗಿ ಸಾಕಾಯ್ತು ನಾಣಿ ಎನ್ನುತ್ತಾಳೆ. ಇವತ್ತು ಈ ದನಾನ ಹುಲೀ ಹಿಡೀತು, ನಾಳೆ ನಾಯೀನ ಕುರ್ಕ ಹೊತ್ತುಕೊಂಡು ಹೋಯಿತು, ಒಂದೋ ಎರಡೋ, ಕೊಗ್ಗ ಹೇಳುತ್ತಿದ್ದ ಕಾಡಾನೆಯೊಂದು ಬೇರೆ ಬಂದು ಸೇರ್ಕೊಂಡಿದೆಯಂತೆ, ಅಷ್ಟೂ ಸಾಲದೆಂದರೆ ಕೊಳೆರೋಗ, ಆ ರೋಗ, ಈ ರೋಗ ಮಲೇರಿಯಾಂತ ಮತ್ತೆ ಸಾವಿರ ರೋಗಗಳಿವೆ. ಕೈಗೆ ಮೂರು ಕಾಸೂ ಹತ್ತದ ಮೇಲೆ ಇಲ್ಲೇ ಯಾಕೆ ಸಾಯಬೇಕು ಎನ್ನುತ್ತಾಳೆ. ಹೀಗೆ ತಾಯಿ, ಮಗ ಪರಂಪರಾಗತವಾಗಿ ಬಂದ ವ್ಯವಸಾಯವನ್ನು ನಿಂದಿಸುತ್ತಾ ನಗರದ ಜೀವನವನ್ನು ಬಯಸುತ್ತಾರೆ.

ಊರ ಶಾನುಭೋಗನು ಆಧುನಿಕತೆಯೊಂದಿಗೆ ರಾಜಿ ಮನೋಭಾವನೆಯನ್ನು ಹೊಂದಿದ್ದಾನೆ. ಸಂಕಪ್ಪಯ್ಯನ ಮೈದುನ, ನಾರಾಯಣ ಹಾಗೂ ಕಿಟ್ಟಿ ಇವರುಗಳ ಹಂಬಲಕ್ಕೆ ಸೀತಮ್ಮನ ಬೆಂಬಲವಿದೆ. ಸಂಕಪ್ಪಯ್ಯನನ್ನು ಹೊರತುಪಡಿಸಿ ಇಡೀ ಕುಟುಂಬವೇ ಹಳ್ಳಿಯನ್ನು ಬಿಟ್ಟು ಶಿವಮೊಗ್ಗವನ್ನು ಸೇರುತ್ತದೆ. ಸಂಕಪ್ಪಯ್ಯನು ಜೀವನಾರ್ಥಕ್ಕಾಗಿ ಗದ್ದೆಯನ್ನು ಉಳಿಸಿಕೊಂಡು ತೋಟ ಹಾಗೂ ಮನೆಯನ್ನು ಕೃಷ್ಣಭಟ್ಟನಿಗೆ ಮಾರಿ ಬಂದ ಹಣವನ್ನು ಹೆಂಡತಿ ಮಕ್ಕಳಿಗೆ ಕೊಡುತ್ತಾನೆ. ಹೋಟೆಲನ್ನು ಇಡಬೇಕೆಂಬ ಮಗ ಹಾಗೂ ತಾಯಿಯ ಆಸೆ ನೆರವೇರುತ್ತದೆ. ಕಿತ್ತಳೆ ಬೆಳೆಯಬೇಕೆನ್ನುವ ಸಂಕಪ್ಪಯ್ಯನ ಪರಿಶ್ರಮ ವ್ಯರ್ಥವಾಗುತ್ತದೆ. ಒಂದೇ ಕುಟುಂಬದಲ್ಲಿ ಭಿನ್ನಾಭಿಪ್ರಾಯಗಳಿರುವುದರಿಂದ ಒಬ್ಬರು ಮತ್ತೊಬ್ಬರ ಪ್ರಯೋಗಶೀಲತೆಯನ್ನು ಪರಿಗಣಿಸದೇ ಹೋಗುತ್ತಾರೆ. ಈ ವಿಭಿನ್ನ ಮನೋಭಾವವು ಸಂಘರ್ಷಕ್ಕೆ ದಾರಿಯಾಗಿದೆ.

ಪ್ರಸ್ತುತ ಕತೆಯು ಭಾರತದ ಗ್ರಾಮೀಣ ಪ್ರದೇಶದ ಸಂದರ್ಭದಲ್ಲಿ ತಲೆದೋರಿದ ಮುಖ್ಯ ಸ್ಥಿತ್ಯಂತರವೊಂದನ್ನು ಕೇಂದ್ರಿಕರಿಸಿದೆ. ಗ್ರಾಮೀಣ ಪ್ರದೇಶದ ಜನ ಸಂಸ್ಕೃತಿಯ ಬಗೆಗೆ ಒಲವು ಮೂಡಿಸಿಕೊಂಡಿದ್ದನ್ನು ಆ ಮೂಲಕ ಗ್ರಾಮ ಜೀವನದ ಬದುಕು ದುಸ್ತರವೆಂಬ ಭಾವನೆಯನ್ನು ತಳೆಯುವುದನ್ನು ಕಾಣಬಹುದು. ಈ ಕತೆಯ ಸಂಕಪ್ಪಯ್ಯನಿಗೆ ಪರಂಪರಾಗತವಾಗಿ ಬಂದ ಭೂಮಿ, ಕೃಷಿ ಹಾಗೂ ಪೂಜೆ ಪುನಸ್ಕಾರಗಳ ಬಗೆಗೆ ಬಿಟ್ಟಿರಲಾರದ ನಂಟು. ಮಗ ನಾಣಿಗಾದರೊ ಕಾಸು ಹುಟ್ಟದ ಹಳ್ಳಿಯ ಕೃಷಿಯ ದುಡಿಮೆಗಿಂತ ನಗರದ ಹೋಟೆಲು ಹೆಚ್ಚು ಆಕರ್ಷಕವಾಗಿ ಕಂಡಿದೆ. ಕಡಿಮೆ ಶ್ರಮದಿಂದ ಮತ್ತು ಕಾಸು ಮಾಡುವ ನಗರ ಸಂಸ್ಕೃತಿಯೇ ನಾಣಿಯ ತಾಯಿಗೂ, ಶಾನುಭೋಗನಿಗೂ ಹಾಗೂ ಅವನ ಮಗ ಕಿಟ್ಟನಿಗೂ ಪ್ರಿಯವಾಗಿದೆ. ಬದುಕು ಸುಸೂತ್ರವಾಗಿ ಸಾಗುವ ಕಡೆಗೆ ಅವರ ಒಲವಿದೆ.

ಸಂಕಪ್ಪಯ್ಯ ಬದುಕಿನ ಬಗೆಗೆ ಯೋಚಿಸುವುದಕ್ಕಿಂತಲೂ ತಾನು ಹುಟ್ಟಿಬೆಳೆದ ಸಂಸ್ಕೃತಿಯ ಮೌಲ್ಯಗಳು, ನಂಬಿಕೆಗಳು ಅವುಗಳನ್ನು ಕಾಪಾಡಿಕೊಂಡು ಬರುವಲ್ಲಿಯೇ ಹೆಚ್ಚಿನ ಒಲವು ತೋರಿಸುತ್ತಾನೆ. ಈ ಕಾರಣಕ್ಕಾಗಿಯೇ ಅವನು ಒಂಟಿಯಾಗಿ ಹಳ್ಳಿಯಲ್ಲೇ ಉಳಿಯಬೇಕಾಗುತ್ತದೆ. ಪರಂಪರಾಗತವಾದ ಸಂಗತಿಗಳನ್ನು ಬದುಕಿನಲ್ಲಿ ಬಂದಂತೆ ಸ್ವೀಕರಿಸಿ ಕಾಲಕ್ಕೆ ತಕ್ಕಂತೆ ಬದುಕಿನ ವಿಧಾನಗಳನ್ನು ರೂಪಿಸಿಕೊಳ್ಳುವ ಅನಿವಾರ್ಯ ಪ್ರಶ್ನೆಯೊಂದನ್ನು ಕತೆ ಪ್ರತಿಪಾದಿಸುತ್ತದೆ. ಪರಂಪರೆ ಮತ್ತು ಆಧುನಿಕತೆಯ ನಡುವಿನ ಈ ಸಂಘರ್ಷವು ಯಾವುದೇ ದ್ವಂದ್ವವಿಲ್ಲದೆ ಕೊನೆಗೂ ಆಧುನಿಕ ವಿಚಾರಗಳೇ ಮೇಲುಗೈ ಸಾಧಿಸುವುದನ್ನು ಕಾಣಬಹುದು. ಪರಂಪರಾಗತ ವಿಚಾರಗಳಲ್ಲಿ ಬಲವಾಗಿ ನಂಬಿಕೆ ಇರಿಸಿದ ಸಂಕಪ್ಪಯ್ಯನು ಮಗ ನಾಣಿ ಮತ್ತು ಹೆಂಡತಿಯ ವಿಚಾರಗಳನ್ನು ಒಪ್ಪಲಾರ. ಹಾಗಾಗಿ ತಾನು ನಂಬಿದ ಹಳ್ಳಿಯಲ್ಲಿಯೇ ಉಳಿದು ದುಡಿಯುವ ಪ್ರಯತ್ನ ಮಾಡುತ್ತಾನೆ. ಆಧುನಿಕ ವಿಚಾರಗಳ ಬಲವಿಲ್ಲದೆ ಪರಂಪರಾಗತ ಸಂಗತಿಗಳು ಅರ್ಥ ಹೀನವಾಗುತ್ತವೆ ಎಂಬುದನ್ನು ಸಂಕಪ್ಪಯ್ಯನ ಪಾತ್ರ ಸಾಂಕೇತಿಕವಾಗಿ ತಿಳಿಸುತ್ತದೆ.

ಪರಂಪರಾಗತ ಮೌಲ್ಯಗಳು ಹಾಗೂ ಆಧುನಿಕ ಮೌಲ್ಯಗಳ ಮುಖಾಮುಖಿಯನ್ನು ಅರುಹುವ ಇನ್ನೊಂದು ಕತೆ 'ಪ್ರಸ್ತ.'ವೆಂಕಮ್ಮ ಹಾಗೂ ಸೀತಕ್ಕ ಸಂಪ್ರದಾಯವನ್ನು ಅನುಸರಿಸಿದರೆ ಪುಂಡರೀಕ, ನೇತ್ರಾವತಿ ಆಧುನಿಕ ವಿಚಾರಗಳತ್ತ ತುಡಿಯುತ್ತಾರೆ. ಶಾಮಭಟ್ಟರು ಸಂಪ್ರದಾಯ ಮತ್ತು ಆಧುನಿಕತೆಯನ್ನು ಸಮಾನವಾಗಿ ಕಾಣುತ್ತಾರೆ. ವೆಂಕಮ್ಮ ಮಡಿವಂತ ಹೆಂಗಸಾಗಿದ್ದು, ಸಂಪ್ರದಾಯಸ್ಥ ಕುಟುಂಬದ ಆಚಾರ ವಿಚಾರಗಳಿಗೆ

ಬದ್ಧಳಾಗಿದ್ದಾಳೆ. ವೆಂಕಮ್ಮ ಅತ್ತೆಯನ್ನು ಕಂಡರೆ ಗೌರವ, ಭಯ ಇಟ್ಟುಕೊಂಡವಳು. ಗಂಡನನ್ನು ಮುಖಕೊಟ್ಟು ಮಾತನಾಡಿಸದಂತಹ ಕಟ್ಟುನಿಟ್ಟಿಗೆ ಒಗ್ಗಿಹೋದವಳು. ತನ್ನ ಏಳು ಮಕ್ಕಳು ಸತ್ತ ದುಃಖವನ್ನು ಸಹಿಸಿಕೊಂಡಿದ್ದ ವೆಂಕಮ್ಮನಿಗೆ ಊರೂರು ಸುತ್ತುವ, ವೇಶ್ಯೆಯಮನೆಗೆ ಹೋಗುವ ಗಂಡನ ವರ್ತನೆಯನ್ನು ಸಹಿಸಬೇಕಾಗಿರುತ್ತದೆ. ತನ್ನಂತೆ ಮಗಳ ಜೀವನವೂ ಕಷ್ಟಕ್ಕೆ ಸಿಲುಕಿದ್ದರಿಂದ ಗಂಡನಿಂದ ದೂರಾದ ಸೀತಕ್ಕನ ಭವಿಷ್ಯದ ಬಗ್ಗೆ ವೆಂಕಮ್ಮನಿಗೆ ಕಳಕಳಿಯಿದೆ. ಆದರೆ ಮಗ ಪುಂಡರೀಕ ಹಾಗೂ ಸೊಸೆ ನೇತ್ರಾವತಿಯ ಸಲಿಗೆಯ ದಾಂಪತ್ಯದ ಬಗ್ಗೆ ಅಸಹನೆಯಿದೆ.

ನೇತ್ರಾವತಿ ತನ್ನ ಗಂಡ ಪುಂಡರೀಕನು ಆಧುನಿಕತೆಯನ್ನು ಮೈಗೂಡಿಸಿ ಕೊಳ್ಳಬೇಕೆಂದು ಬಯಸುತ್ತಾಳೆ. ಹೆಂಡತಿಯ ಇಷ್ಟದಂತೆ ಅವನು ಮುಂದೆಲೆಗೆ ಕ್ರಾಪು ಮಾಡಿಸಿ ತಾಯಿಗೆ ಬೇಸರವಾಗದಿರಲೆಂದು ಹಿಂದೆ ಜುಟ್ಟು ಬಿಟ್ಟಿದ್ದಾನೆ. ಬ್ರಾಹ್ಮಣಾರ್ಥವು ನೇತ್ರಾವತಿಗೆ ಭಿಕ್ಷೆ ಬೇಡುವ ಕೆಲಸವಾಗಿ ಕಂಡುಬರುತ್ತದೆ. ನೇತ್ರಾವತಿಯ ಹತ್ತಿರದ ಸಂಬಂಧಿ ಗಣಪಯ್ಯ ಹೋಟೆಲನ್ನು ತೆರೆದು ಆರ್ಥಿಕವಾಗಿ ಸುಸ್ಥಿತಿಯಲ್ಲಿರುವುದನ್ನು ಕಂಡು ತಾವೂ ಏಕೆ ತ್ಯಾನಂದೂರಿನಲ್ಲಿ ಹೋಟೆಲನ್ನು ತೆರೆಯಬಾರದು ಎಂಬ ಯೋಚನೆಯಿದೆ. ಪುಂಡರೀಕನಿಗೂ ಈ ಬ್ರಾಹ್ಮಣಾರ್ಥ, ಅಡಿಕೆ ಸುಲಿತದ ಜೀವನ ಸಾಕಾಗಿದೆ. ಹೋಟೆಲನ್ನು ತೆರೆಯಬೇಕೆಂಬ ನೇತ್ರಾವತಿಯ ಹಂಬಲಕ್ಕೆ ಅವನು ಬೆಂಬಲ ನೀಡುತ್ತಾನೆ.

ವೆಂಕಮ್ಮನ ಗಂಡನ ಸ್ನೇಹಿತನಾಗಿದ್ದ ಶಾಮಭಟ್ಟನಿಗೆ ಈ ಕುಟುಂಬದ ಎಲ್ಲ ಆಗು ಹೋಗುಗಳ ಪರಿಚಯವಿದೆ. ಸಂಪ್ರದಾಯ ಮತ್ತು ಆಧುನಿಕ ಬದುಕಿಗೆ ಇವನು ಸ್ಪಂದಿಸುತ್ತಾನೆ. ನೇತ್ರಾವತಿ ಮಡಿ ಮೈಲಿಗೆಯನ್ನು ಗಂಭೀರವಾಗಿ ಪರಿಗಣಿಸದಿರುವುದು, ಸಣ್ಣ ಕುಂಕುಮವಿಡುವುದು, ವಾರೆ ಬೈತಲೆ ತೆಗೆಯುವುದು, ಗಂಡನಿಗೆ ಕ್ರಾಪು ಬಿಡಿಸಿರುವುದು ಸಂಪ್ರದಾಯಸ್ಥ ವೆಂಕಮ್ಮನಿಗೆ ಹಿಡಿಸುವುದಿಲ್ಲ. ನಾಲ್ಕಕ್ಷರ ಕಲಿತಿದ್ದೇನೆಂದು ದರ್ಪ ತೋರಿಸುತ್ತಾಳೆಂದು ಸೊಸೆಯನ್ನು ದೂರುತ್ತಾಳೆ. ಮಗನನ್ನು ಕುರಿತು ಹೆಂಗಸರ ಹಾಗೆ ಬೈತಲೆ ತೆಗೆಯುತ್ತಾನೆ. ಹೆಂಡತಿಯೊಂದಿಗೆ ಸಲುಗೆಯಿಂದ ಇರುತ್ತಾನೆ ತನ್ನ ತಂದೆಯ ಶ್ರಾದ್ಧದ ದಿನವೂ ಅವನಿಗೆ ನೆನಪಿರುವುದಿಲ್ಲ, ಶುದ್ಧ ಹೆಣ್ಣಿಗನಾಗಿಬಿಟ್ಟನೆನ್ನುತ್ತಾಳೆ. ಏನು ಕಾಲ ಬಂತಪ್ಪ ಎಂದು ತಮ್ಮ ಕಾಲದ ಸಂಪ್ರದಾಯಸ್ಥ ಜೀವನಕ್ಕೂ ಈಗಿನವರ ಆಧುನಿಕ ಜೀವನಕ್ಕೂ ಇರುವ ಅಂತರವನ್ನು ನೆನೆದು ವೆಂಕಮ್ಮ ಬೇಸರಪಡುತ್ತಾಳೆ.

ಶಾಮಭಟ್ಟನಿಗೆ ಕಾಲಬದಲಾದಂತೆ ಆಧುನಿಕ ವಿಚಾರಗಳು ಸಂಪ್ರದಾಯದಲ್ಲಿ ಸೇರ್ಪಡೆಯಾಗುವುದು ಸಹಜವೆನಿಸುತ್ತದೆ. ಇಲ್ಲಿ ಅವನು ಅತ್ತೆಯ ಬಗ್ಗೆ ದೂರು ಹೇಳುವ ನೇತ್ರಾವತಿಗೆ, ವೆಂಕಮ್ಮನಿಗೆ ವಯಸ್ಸಾಗಿದೆ ಪರಚಿಕೊಳ್ಳುವುದು ಸಹಜ. ನೀನು ಸುಮ್ಮನಿದ್ದು ಬಿಡು ಎಂದು ಬುದ್ಧಿವಾದ ಹೇಳುತ್ತಾನೆ. ನೀನು ಕಷ್ಟ ಪಟ್ಟಂತೆ ನಿನ್ನ ಸೊಸೆಯೂ ಕಷ್ಟಪಡಬೇಕೆ, ಸ್ವಂತ ಮಗ ಹಾಗೂ ಸೊಸೆಯ ವಿಷಯ ಬಂದಾಗ ಹೀಗೇಕೆ ನಡೆದುಕೊಳ್ಳಬೇಕು ಎಂದು ತಿಳಿಸಲು ಹೋಗುತ್ತಾನೆ. ಅದು ವೆಂಕಮ್ಮನಿಗೆ ಅರ್ಥವಾಗದಿದ್ದಾಗ ಶಾಮಭಟ್ಟನು ಸುಮ್ಮನಾಗುತ್ತಾನೆ. ನಾನು ಕೆಟ್ಟವಳಾಗಿ ಕಾಣುತ್ತಿದ್ದೇನೆ. ನಾನು ಪಟ್ಟ ಕಷ್ಟ ಯಾರಿಗೂ ಬೇಕಿಲ್ಲ, ಹೊಟ್ಟೆಯಲ್ಲಿ ಹುಟ್ಟಿದ ಮಗನೇ ನನ್ನ ಮಾತು ಕೇಳುವುದಿಲ್ಲ. ಅವನ ಕ್ರಾಪೇನು ಹೆಂಡತಿಯ ಜೊತೆ ಸಿನಿಮಾ ನೋಡೋದೇನು! ಪೂಜೆ ಸಂಭಾವನೆಯಿಂದ ಜೀವನ ನಡೆಸಬೇಕಾದ ನಮ್ಮಂಥವರಿಗೆ ಅದು ಸರಿಯೇ, ಇನ್ನು ಅವನ ಹೆಂಡತಿಗಾದರೂ ತಿಳಿಯುವುದಿಲ್ಲ. ನಾನು ಒಂದು ಬುದ್ಧಿ ಮಾತು ಹೇಳಿದರೆ ರಾದ್ಧಾಂತವಾಗುತ್ತದೆ. ಭಟ್ಟರೆ ನಾನು ಇಷ್ಟುದಿನ ಬದುಕಿದ್ದೇ ತಪ್ಪೆಂದು ವೆಂಕಮ್ಮ ಅಳಲಾರಂಭಿಸುತ್ತಾಳೆ. ತನ್ನ ಹಾಗೂ ತನ್ನ

[illegible]

[illegible]

[illegible]

[illegible]

[illegible]

ಮಗಳ ಕಷ್ಟವನ್ನು ಪರಿಗಣಿಸುವ ವೆಂಕಮ್ಮ ಸೊಸೆ ಹಾಗೂ ಮಗನ ಹೊಂದಾಣಿಕೆಯ ಬದುಕನ್ನು ಅರ್ಥಮಾಡಿಕೊಳ್ಳುವುದಿಲ್ಲ. ಹೀಗೆ ವೆಂಕಮ್ಮ ಆಧುನಿಕತೆಯೊಂದಿಗೆ ಎಂದೂ ರಾಜಿಯಾಗುವುದಿಲ್ಲ. ಸಂಸ್ಕೃತಿ ದತ್ತವಾದ ಬದುಕು ವೆಂಕಮ್ಮನಿಗೆ ಒಗ್ಗಿಹೋಗಿದೆ ಅದನ್ನು ಬಿಟ್ಟು ಸಮಕಾಲೀನ ಅಗತ್ಯಗಳಿಗೆ ಮತ್ತು ಆಧುನಿಕ ವಿಚಾರಗಳಿಗೆ ವೆಂಕಮ್ಮ ತೆರೆದುಕೊಳ್ಳುವುದೇ ಇಲ್ಲ.

ಒಂದು ಕಾಲದ ನೀತಿ ನಿಯಮ, ಸಂಪ್ರದಾಯ, ನಡವಳಿಕೆಗಳು ಸದಾಕಾಲ ಸತ್ವಯುತವಾಗಿರುವುದಿಲ್ಲ. ಅವು ಸತ್ವಹೀನವಾದಂತೆಲ್ಲಾ ವ್ಯಕ್ತಿ ಅವುಗಳಿಂದ ತಪ್ಪಿಸಿಕೊಳ್ಳಲು ಬಯಸುತ್ತಾನೆ. ಆದರೆ ತಿಳಿದುಕೊಂಡಷ್ಟು ಶೀಘ್ರವಾಗಿ ಹಳೆಯದನ್ನು ಬಿಡಲಾಗುವುದಿಲ್ಲ. ಇದಕ್ಕೆ ಉದಾಹರಣೆಯಾಗಿ ನೇತ್ರಾವತಿ–ಪುಂಡರೀಕನ ಪಾತ್ರಗಳು ನಿಂತಿವೆ. ಹೊಸ ಮತ್ತು ಹಳೆಯ ಮೌಲ್ಯಗಳ ಅಂತರವು ಸಂಘರ್ಷವನ್ನು ಸೃಷ್ಟಿಸುತ್ತದೆ. ಇಂತಹ ಸಂಕ್ರಮಣದ ಪರಿಸ್ಥಿತಿಗೆ ಪುಂಡರೀಕ ಸಿಲುಕಿದ್ದಾನೆ. ಸಂಪ್ರದಾಯದ ಗೆರೆದಾಟದ ವೆಂಕಮ್ಮ ಸಭ್ಯತೆಯ ಅಂಚಿನಿಂದ ಹೊರಗೆ ಇಣುಕುವ ಧೈರ್ಯಮಾಡುವುದಿಲ್ಲ. ಇಲ್ಲಿನ ಪಾತ್ರಗಳು ತಮ್ಮದು ಸರಿ, ಇತರರದು ತಪ್ಪು ಎನ್ನುವ ನಿಲುವನ್ನು ತಾಳುತ್ತವೆ.

ಗ್ರಾಮೀಣ ಪ್ರದೇಶದ ಜನರಿಗೆ ಕೈಯಲ್ಲಿ ದುಡ್ಡು ಕಾಸು ಓಡಾಡುವುದು, ನಗರದ ಜನರಂತೆ ಕೂದಲು ಬಿಡುವುದು, ಬಟ್ಟೆ ತೊಡುವುದು ಇತ್ಯಾದಿಗಳು ಆಕರ್ಷಣೀಯವಾಗಿ ಗೋಚರಿಸುತ್ತದೆ. ಸಾಂಪ್ರದಾಯಕ ಬದುಕಿನಲ್ಲಿ ಅದರಲ್ಲೂ ಬ್ರಾಹ್ಮಣ ಕುಟುಂಬಗಳ ಮಡಿವಂತಿಕೆಯ ಬದುಕು ಕುಟುಂಬದ ಯುವ ತಲೆಮಾರುಗಳಿಗೆ ಹೇಸಿಗೆ ಹುಟ್ಟಿಸುವಷ್ಟು ರೋಸಿಹೋಗಿತ್ತು. ಇದು ಸ್ವಾತಂತ್ರೋತ್ತರ ಕಾಲಘಟ್ಟದ ಭಾರತದ ಸಮಾಜದ ವಸ್ತುಸ್ಥಿತಿಯೂ ಆಗಿತ್ತು. ಇದೇ ನೆಲೆಯಲ್ಲಿ ಪ್ರಸ್ತ ಕತೆಯ ಪಾತ್ರಗಳ ಸಂಘರ್ಷದ ಸ್ವಭಾವವನ್ನು ವಿಶ್ಲೇಷಿಸಬಹುದು. ವೆಂಕಮ್ಮ ಪರಂಪರೆಯನ್ನೇ ನಂಬಿದ ಗೊಡ್ಡು ಜೀವವಾದರೆ, ಸೊಸೆ ನೇತ್ರಾವತಿ ಆಧುನಿಕ ಬದುಕಿನ ವಿಧಾನಗಳ ಬಗೆಗೆ ಒಲವುಳ್ಳ ಯುವತಿ. ಪರಂಪರೆಯನ್ನು ನಂಬಿ ಬೆಳೆದ ಗಂಡನಿಗೆ ಆಧುನಿಕತೆ ಸಂಸ್ಕಾರ ನೀಡಿದವಳು ನೇತ್ರಾವತಿ. ಪರಂಪರೆ ಮತ್ತು ಆಧುನಿಕತೆ ಅತ್ತೆ ಮತ್ತು ಸೊಸೆಯ ಪಾತ್ರಗಳ ಮೂಲಕ ಇಲ್ಲಿ ಸಂಘರ್ಷದ ನೆಲೆಯನ್ನು ತಲುಪುತ್ತದೆ. ಪರಂಪರೆಯನ್ನು ನಂಬಿದ ವೆಂಕಮ್ಮ ಒಂದೆಡೆಯಾದರೆ ಆಧುನಿಕತೆಯನ್ನು ನಂಬಿದ ಸೊಸೆ ನೇತ್ರಾವತಿ ಇನ್ನೊಂದೆಡೆ. ತಾಯಿಗಾಗಿ ಜುಟ್ಟನ್ನು, ಹೆಂಡತಿಗಾಗಿ ಕ್ರಾಪನ್ನು ಬಿಡುವ ಪುಂಡರೀಕನ ಪಾತ್ರ ಪರಂಪರೆ ಮತ್ತು ಆಧುನಿಕತೆಯ ನಡುವಿನ ವ್ಯಂಗ್ಯದ ಪ್ರತಿಮೆಯಾಗುತ್ತದೆ. ಇಲ್ಲಿ ನೇತ್ರಾವತಿ ಗಂಡನ ವೇಷಭೂಷಣಗಳಲ್ಲಿಯೇ ಬದಲಾವಣೆ ತಂದುದಲ್ಲದೆ ಬದುಕಿಗಾಗಿ ಹೋಟೆಲಿಡುವ ಸಲಹೆ ನೀಡಿ ಆಧುನಿಕ ಜೀವನ ವಿಧಾನಕ್ಕೆ ಹೊಂದಿಕೊಳ್ಳುವ ಸೂಚನೆಯನ್ನು ನೀಡುತ್ತಾಳೆ. ತಾಯಿ ವೆಂಕಮ್ಮ ಮಾತ್ರ ಮಡಿಮೈಲಿಗೆಯ ಬದುಕಿನ ಹಿರಿಮೆಯನ್ನು ಹೇಳುತ್ತಾ ಜೀವನಕ್ಕೆ ಬೆನ್ನು ಹಾಕಿದ್ದಾಳೆ. ಇವೆರಡರ ನಡುವೆ ಶ್ಯಾಮಭಟ್ಟರಂತಹ ಪಾತ್ರಗಳು ಯಾವುದೇ ಗೊಂದಲಕ್ಕೆಡೆಯಿಲ್ಲದಂತೆ ಪರಂಪರೆ ಮತ್ತು ಆಧುನಿಕತೆಗಳೆರಡರ ನಡುವೆ ಸಮನ್ವಯ ಬದುಕನ್ನು ಕಂಡುಕೊಂಡಿರುವುದನ್ನು ಇಲ್ಲಿ ಗಮನಿಸಬಹುದು.

ಶಾಮಭಟ್ಟ ಸಂಪ್ರದಾಯ ಮತ್ತು ಆಧುನಿಕ ವಿಚಾರಗಳನ್ನು ಪರಿಸ್ಥಿತಿಗೆ ತಕ್ಕಂತೆ ಸ್ವೀಕರಿಸುತ್ತಾನೆ. ಯೌವನಾವಸ್ಥೆಯನ್ನು ಮೀರಿದ ಸೀತಕ್ಕ ಹಾಗೂ ಸೀನಪ್ಪಯ್ಯನ ಪ್ರಸ್ತದ ಶಾಸ್ತ್ರವು ನೇತ್ರಾವತಿಗೆ ತಮಾಷೆಯಾಗಿ ಕಾಣುತ್ತದೆ. ವೆಂಕಮ್ಮನ ಕುಟುಂಬದಲ್ಲಿ ಸಂಪ್ರದಾಯ ಮತ್ತು ಆಧುನಿಕ ವಿಚಾರಗಳ ಮಧ್ಯೆ ಭಿನ್ನಾಭಿಪ್ರಾಯಗಳು ಕಂಡುಬರುವುದರಿಂದ ಸಂಘರ್ಷವು ಹುಟ್ಟಿಕೊಳ್ಳುತ್ತದೆ.

ಸಂಪ್ರದಾಯ ಮತ್ತು ಆಧುನಿಕ ವಿಚಾರಗಳ ಅನುಸಂಧಾನವನ್ನು 'ಎಂದೆಂದೂ ಮುಗಿಯದ ಕತೆ' ಯಲ್ಲಿ ಕಾಣಬಹುದು. ಪರಂಪರೆಯು ಮುಂದುವರಿಯಬೇಕೆಂಬ ಹಂಬಲವು ಹಿರಿಯರಿಗಿದೆ. ವಂಶಪಾರಂಪರ್ಯವಾಗಿ ಮುಂದುವರಿದ ಸಂಪ್ರದಾಯವನ್ನು ಈ ಕತೆಯು ಪೀಳಿಗೆಯಿಂದ ಪೀಳಿಗೆಗೆ ಹೇಳಿಕೊಂಡು ಬಂದಿದೆ. ಮೊಮ್ಮಗನು ಅಜ್ಜಿಯನ್ನು ಈ ಕಥೆಯು ಎಂದು ಕೊನೆಯಾಗುತ್ತದೆಂದು ಕೇಳಿದಾಗಲೆಲ್ಲಾ ಅವಳು ಹೀಗೆ ಹೇಳುತ್ತಿದ್ದಳು. "ನಾಳೆ ಕೊನೆಯಾಗುತ್ತಾ? ಉಹು, ನಾಡಿದ್ದು? ಉಹೂ, ಮತ್ಯಾವಾಗ?"ಆಗ ಅಜ್ಜಿಯು ಬಹುಗಂಭೀರ ದನಿಯಲ್ಲಿ ಹೇಳಿದ್ದಳು, ಈ ಕತೆಯು ಕೊನೆ ಮುಟ್ಟಿದರೆ ಬೆಳಕಾಗಲ್ಲ, ಕತ್ತಲಾಗಲ್ಲ, ಮರದಲ್ಲಿ ಹಣ್ಣಾಗಲ್ಲ, ಗಿಡದಲ್ಲಿ ಹೂವಾಗಲ್ಲ, ಮೊಮ್ಮಕ್ಕಳಿಗೆ ಕತೆ ಹೇಳೋ ಅಜ್ಜಿಯರು ಬದುಕಲ್ಲ . ಹೀಗೆ ಸಂಪ್ರದಾಯವು ಕೊನೆಗೊಳ್ಳುವುದಲ್ಲ ಪರಂಪರೆಯಿಂದ ಪರಂಪರೆಗೆ ಮುಂದುವರೆಯುತ್ತದೆ ಎನ್ನುತ್ತಾಳೆ.

ಸಂಪ್ರದಾಯ ಮತ್ತು ಆಧುನಿಕ ವಿಚಾರಗಳ ಅನುಸಂಧಾನವನ್ನು ಮುದುಕ ಹಾಗೂ ಅವನ ಕುಟುಂಬದಲ್ಲಿ ಮಕ್ಕಳು ಹಾಗೂ ಮೊಮ್ಮಕ್ಕಳ ವರ್ತನೆಯನ್ನು ತಿಳಿಯಬಹುದು. ಅವಿಭಕ್ತ ಕುಟುಂಬವನ್ನು ಹೊಂದಿದ ಮುದುಕನು ಅದೃಷ್ಟವಂತ. ಈತನಿಗೆ ವಯಸ್ಸಾದಾಗ ಮನೆಯ ಜವಾಬ್ದಾರಿಯನ್ನು ಅವನ ಮಗ ನೋಡಿಕೊಳ್ಳುತ್ತಾನೆ. ಅವನಿಗೆ ನಾಲ್ಕು ಮಂದಿ ಮಕ್ಕಳಿದ್ದಾರೆ. ಎಲ್ಲರಿಗೂ ಮದುವೆಯಾಗಿದೆ. ಹೊಲದಲ್ಲಿ ಭತ್ತವನ್ನು, ತೋಟದಲ್ಲಿ ಅಡಿಕೆಯನ್ನು ಬೆಳೆಯುವ ಮುದುಕನ ಮನೆ ಹಸುಗಳಿಂದ ತುಂಬಿದೆ. ಮುದುಕನ ಮಕ್ಕಳು ತಂದೆಯನ್ನು ತಲೆಯೆತ್ತಿ ಸಹಾ ನೋಡುವುದಿಲ್ಲ. ಆದರೆ ಆಧುನಿಕ ಕಾಲದ ಹರೆಯದ ಮೊಮ್ಮಕ್ಕಳಿಗೆ ಅಜ್ಜಯ್ಯನೆಂದರೆ ಸಲುಗೆ ಹೆಚ್ಚು.

ಸಂಪ್ರದಾಯಸ್ಥಳಾದ ಮುದುಕಿಯು ಮೊಮ್ಮಕ್ಕಳನ್ನು ತೊಟ್ಟಿಲಲ್ಲಿ ತೂಗುತ್ತಾ ಲಾಲಿ ಹಾಡುತ್ತಿದ್ದಳು.

" ಯಾಕಳುವೆ ಎಲೆ ರಂಗ ಬೇಕಾದ್ದು ನಿನಗೀವೆ......
ನಾಲ್ಕೆಮ್ಮೆ ಕರೆದಾ ನೊರೆ ಹಾಲು....... "

ಈ ಜೋಗುಳವು ಪರಂಪರಾಗತವಾಗಿ ಮುಂದುವರಿದಿದೆ. ಆ ತೊಟ್ಟಿಲಿನಲ್ಲೇ ಎಲ್ಲರೂ ಜೋಗುಳವನ್ನು ಕೇಳಿದ್ದಾರೆ. ಆ ತೊಟ್ಟಿಲು ಆಡದೇ ನಿಂತ ದಿನವಿಲ್ಲ. ಮುದುಕನ ಮನೆಯಲ್ಲಿ ಹುಟ್ಟಿದಂತಹ ಮಕ್ಕಳಿಗೆ ಬೇಕಾದದ್ದೆಲ್ಲವೂ ಇದೆ. ಅವನ ಮನೆಯಲ್ಲೇ ಹುಟ್ಟಿ ಬೆಳೆದ ನಾಲ್ಕೆಮ್ಮೆಗಳು ಇವೆ. ಅವುಗಳ ತಾಯಿಯ, ಅಜ್ಜಿಯ ಹಾಲನ್ನೇ ಮುದುಕ ಕುಡಿದಿದ್ದಾನೆ. ಆದರೆ ಮಗ ಇತ್ತೀಚೆಗೆ ಜಾತ್ರೆಗೆ ಹೋಗಿ ಹೊಸದಾಗಿ ಎಮ್ಮೆ ತಂದಿದ್ದಾನೆ. ಇದರಿಂದ ಮೊಮ್ಮಕ್ಕಳು ಮನೆಯಲ್ಲಿನ ಹಾಗೂ ಹೊಸದಾಗಿ ತಂದ ಹಸುವಿನ ಹಾಲನ್ನು ಕುಡಿದವರಾಗಿದ್ದಾರೆ. ಮುದುಕನು ಸಾಂಪ್ರದಾಯಿಕವಾಗಿ ಒಂದೇ ತಳಿಯ ಹಸುವಿನ ಹಾಲನ್ನು ಉಂಡವನಾಗಿದ್ದಾನೆ. ಆದರೆ ಮೊಮ್ಮಕ್ಕಳು ಮಿಶ್ರ ತಳಿಯ ಹೈನು ಪದಾರ್ಥಗಳ ರುಚಿಯನ್ನು ಕಂಡಿದ್ದಾರೆ. ಮನೆಯಲ್ಲಿ ಹುಟ್ಟಿದ ಹಸುಗಳ ಹಾಲನ್ನು ಉಂಡ ಮುದುಕನು ಸಾಂಪ್ರದಾಯಸ್ಥನಾಗಿ ಕಂಡರೆ, ಹೊಸದಾಗಿ ತಂದ ಹಾಗೂ ಮನೆಯ ಹಸುಗಳ ಹಾಲನ್ನು ಉಂಡ ಮಕ್ಕಳು, ಹಾಗೂ ಮೊಮ್ಮಕ್ಕಳು ಸಂಪ್ರದಾಯ ಹಾಗೂ ಆಧುನಿಕತೆಯ ಪ್ರತೀಕವಾಗಿದ್ದಾರೆ.

ಮೊಮ್ಮಗ ಹಾಗೂ ಅವನ ಹೆಂಡತಿ ಕಿಲಕಿಲನೆ ನಗುತ್ತಾ ಪಗಡೆ ಆಟವನ್ನು ಆಡುತ್ತಿರುತ್ತಾರೆ. ಮೂರು ಹೊತ್ತೂ ಅದೇ ಚಲ್ಲಾಟ ಏನು ಮುದ್ದೋ ಏನೋ ಎಷ್ಟು ಧೈರ್ಯದಿಂದ ಗಟ್ಟಿಯಾಗಿ ನಗುತ್ತಾರೆ.

[illegible]

[illegible]

[illegible]

[illegible]

[illegible]

[illegible]

ನವದಂಪತಿಗಳ ಸಲುಗೆಯ ವರ್ತನೆಯನ್ನು ಕಂಡ ಮುದುಕನು ನಸುನಗುತ್ತಾನೆ. ಪಾಪ ಇನ್ನೂ ಎಳೆಯರು ಮದುವೆಯಾಗಿ ಹೆಚ್ಚು ದಿನವಾಗಿಲ್ಲವೆಂದ ಮುದುಕಿ ನಾಚಿ ಬೆಂಕಿಯೆದುರು ಮದುವಣಗಿತ್ತಿಯಂತೆ ಮುದುಕನೊಂದಿಗೆ ಮುಗಳು ನಗುತ್ತಾಳೆ. ಹಿರಿಯರಾದ ಇವರು ಈಗ ಮೊಮ್ಮಕ್ಕಳನ್ನು ಕಂಡು ನಗುತ್ತಾರೆ. ಮುದುಕಿಯ ನಾಚಿ ಕೆಂಪೇರಿದ ಮುಖ ನೋಡಿದರೆ ಗೊತ್ತಾಗುತ್ತದೆ ಬಹಳ ಹಿಂದೆ ಅವರಿಬ್ಬರೂ ಪಗಡೆಯಾಡಿದ್ದಾರೆಂದು. ಎಲ್ಲರೂ ಪಗಡೆಗಳಲ್ಲೇ ತಮ್ಮ ಪ್ರೇಮದ ಆಟ ಆಡಿದ್ದಾರೆ. ಅದೇ ದಾಳ, ಅದೇ ಹಾಸು, ಅದೇ ಕಾಯಿಗಳು, ಮುದುಕ-ಅಜ್ಜಿ ಆಮೇಲೆ ಅವನ ಮಗ, ಈಗ ಮೊಮ್ಮಗ ಇಲ್ಲಿ ಸಂಪ್ರದಾಯ ಹಾಗೂ ಆಧುನಿಕತೆಯ ಮಧ್ಯೆ ಸಂಘರ್ಷವೇರ್ಪಟ್ಟರೂ ಜೀವನದ ಪ್ರವಾಹ ನಿರರ್ಗಳವಾಗಿ ಅನುಸಂಧಾನದ ಮೂಲಕ ಮುಂದುವರಿದಿದೆ.

ಪರಂಪರೆ ಮತ್ತು ಆಧುನಿಕತೆಯ ಪೂರಕ ಹೊಂದಾಣಿಕೆಯಲ್ಲಿಯೇ ಇಲ್ಲಿ ಪಾತ್ರಗಳು ವರ್ತಿಸುತ್ತವೆ. ಪರಂಪರೆಯ ಸಂಗತಿಗಳಾಗಲಿ, ಆಧುನಿಕತೆಯ ವಿಚಾರಗಳಾಗಲಿ ಇವುಗಳ ಸಂಘರ್ಷದ ಮೂಲಕ ಹೊಸದೊಂದು ಜೀವನ ವಿಧಾನ ಸಾಧ್ಯ ಎಂಬುದನ್ನು ಈ ಕತೆ ಮುಂದಿಡುತ್ತದೆ. ಸಂಪ್ರದಾಯದ ಪ್ರತಿನಿಧಿಯಾದ ಮುದುಕನಿಗೆ ಮಗ ತನ್ನ ಬಗ್ಗೆ ಗೌರವ ಇಟ್ಟುಕೊಂಡಿದ್ದಾನೆಂದು ಹೆಮ್ಮೆ ಇದೆ. ಮೊಮ್ಮಕ್ಕಳು ಪ್ರೀತಿಯನ್ನು ತೋರಿಸುತ್ತಾರೆಂದು ಸಂತೋಷವಿದೆ. ಹಾಗಾಗಿ ಮೊಮ್ಮಗ ತನ್ನ ಹೆಂಡತಿಯೊಂದಿಗೆ ಸಲಿಗೆಯಿಂದಿರುವುದನ್ನು ಸಹಿಸದೆ ದೂರುವ ಮನಸ್ಸಾದರೂ ದೂರುವ ಬದಲಾಗಿ ತನ್ನ ಹಳೆಯ ದಿನಗಳನ್ನು ನೆನೆಸಿಕೊಂಡು ಮುಗುಳ್ನಗುತ್ತಾನೆ. ಹೀಗೆ ಪರಸ್ಪರರು ಅನುಸಂಧಾನ ಮಾರ್ಗವನ್ನು ಹಿಡಿದಿದ್ದಾರೆ.

ಭಾರತೀಯ ಸಂಪ್ರದಾಯಬದ್ಧ ಜೀವನದ ಬಗ್ಗೆ ಆರಾಧನೆಯ ದೃಷ್ಟಿಯು 'ಅಕ್ಕಯ್ಯ' ಎಂಬ ಕತೆಯಲ್ಲಿ ವ್ಯಕ್ತವಾಗಿದೆ. ಶ್ರೀಮಂತ ಜಮೀನ್ದಾರನ ಹಿರಿಯ ಮಗಳು ಅಕ್ಕಯ್ಯನಿಗೆ ಹನ್ನೊಂದು ಮಂದಿ ತಮ್ಮಂದಿರಿದ್ದಾರೆ. ಅವರಲ್ಲಿ ಕೊನೆಯವನು ಶ್ರೀನಿವಾಸ. ಅಕ್ಕಯ್ಯನಿಗೆ ಸಂಪ್ರದಾಯದಂತೆ ಮೈನೆರೆಯುವ ಮುಂಚೆಯೇ ಮದುವೆ ಮಾಡಿದ್ದರು. ಗಂಡನ ಹಿಂಸೆ ತಾಳಲಾರದೆ ಅವಳು ಸ್ವಲ್ಪ ದಿನಗಳಲ್ಲೇ ತಂದೆಯ ಮನೆ ಸೇರಿದಳು. ನಂತರ ಅವಳ ತಮ್ಮಂದಿರು ಅವಳ ಗಂಡನನ್ನು ಪತ್ತೆ ಹಚ್ಚಿ ಮುದಿತನದಲ್ಲಿ ಶಾಸ್ತ್ರದ ಪ್ರಕಾರ ಪ್ರಸ್ಥ ನೆರವೇರಿಸಿದರು. ಬ್ರಾಹ್ಮಣನಾದ ತನಗೆ ದಾನ, ದಕ್ಷಿಣೆ ಸ್ವೀಕರಿಸುವ ಹಕ್ಕು ದೊರಕುತ್ತದೆಂದು, ಅಕ್ಕಯ್ಯನೊಂದಿಗೆ ಅವಳ ಗಂಡ ಪ್ರಸ್ತ ಮಾಡಿಕೊಳ್ಳುತ್ತಾನೆ. ಕುಟುಂಬದಲ್ಲಿ ಶಾಸ್ತ್ರದ ಪ್ರಕಾರ ಆಗಬೇಕಾದ ಪ್ರಸ್ತ ಆಯಿತೆಂಬ ಸಮಾಧಾನವಾಯಿತು. ಹೀಗೆ ವೈಯಕ್ತಿಕ ಬದುಕನ್ನು ಕಾಣದ ಅಕ್ಕಯ್ಯ ಸಂಪ್ರದಾಯದ ಪ್ರತಿನಿಧಿಯಾಗಿದ್ದಾಳೆ.

ಅಕ್ಕಯ್ಯನ ಬದುಕನ್ನು ಹತ್ತಿರದಿಂದ ಕಂಡ ಶ್ರೀನಿವಾಸನಿಗೆ ಸಂಪ್ರದಾಯದ ಬದುಕು ಹಿಡಿಸದೇ ಆಧುನಿಕನಾಗಲು ಬಯಸಿದ. ಸಸ್ಯಹಾರಿಯಾಗಿದ್ದವನು ಬಂಡಾಯದಿಂದ ಮಾಂಸಹಾರಿಯಾಗಿ, ಪಂಜಾಬಿ ವೈದ್ಯಳನ್ನು ಪ್ರೇಮ ವಿವಾಹವಾದ. ಹೆಚ್ಚು ಓದದ ಅಣ್ಣಂದಿರ ಪ್ರತಿಭಟನೆಗೆ ಅವನು ಯಾವುದೇ ಬೆಲೆ ಕೊಡಲಿಲ್ಲ. ಅಕ್ಕಯ್ಯ ಮಾತ್ರ ತಮ್ಮ ಶ್ರೀನಿವಾಸ ಮಾಡಿದ್ದನ್ನು ಸರಿಯೆನ್ನಲಿಲ್ಲ, ತಪ್ಪೆನ್ನಲಿಲ್ಲ. ತನ್ನಲ್ಲಿದ್ದ ಅಲ್ಪಸ್ವಲ್ಪ ಒಡವೆಗಳನ್ನು ಜೊತೆಗೆ ತನ್ನ ತಾಯಿಯ ಕಾಲುಂಗುರವನ್ನು ತಮ್ಮನ ಹೆಂಡತಿಗೆ ಉಡುಗೊರೆಯಾಗಿ ಕಳುಹಿಸಿಕೊಟ್ಟಳು. ಆದರೆ ಪರಿಪೂರ್ಣವಾಗಿ ಆಧುನಿಕ ಜೀವನವನ್ನು ನಡೆಸುತ್ತಿದ್ದ ಡಾಕ್ಟರ್ ಶೂ ಹಾಕುತ್ತಿದ್ದುದರಿಂದ ಮೂರು ಸುತ್ತಿನ ದಪ್ಪನೆ ಕಾಲುಂಗುರವನ್ನು ಹಾಕಿಕೊಳ್ಳಲಿಲ್ಲ. ದೆಹಲಿಯಲ್ಲಿ ಆಧುನಿಕ ವಾತಾವರಣದಲ್ಲಿ ಬೆಳೆದ ಶ್ರೀನಿವಾಸನ ಹೆಂಡತಿಗೆ ತನ್ನ ಹಳ್ಳಿ ಮನೆಯ ಆಚಾರ-ವಿಚಾರಗಳು ಮುಜುಗರವನ್ನು

ಉಂಟುಮಾಡಬಹುದೆಂದು ಭಾವಿಸಿ ಅವನು ತನ್ನ ಪ್ರೀತಿಯ ಅಕ್ಕಯ್ಯನಿದ್ದಲ್ಲಿಗೆ ಹೆಂಡತಿಯನ್ನು ಕರೆದುಕೊಂಡು ಹೋಗಿ ಅವಳಿಗೆ ಭೇಟಿ ಮಾಡಿಸುವುದಿಲ್ಲ.

ಪಂಜಾಬಿ ಹುಡುಗಿಯನ್ನು ಮದುವೆಯಾದ ಮೇಲೆ ಶ್ರೀನಿವಾಸ ಬಂಧು-ಬಳಗದಿಂದ ದೂರವಾಗಿರುತ್ತಾನೆ. ಫಿಲಿಡೆಲ್ಫಿಯಾಕ್ಕೆ ಹೋಗಿ ನೆಲೆಸಿ ಪ್ರೊಫೆಸರ್‌ನಾದ ಅವನು ಒಂದು ಈಜುಕೊಳ, ನಾಲ್ಕು ಬೆಡ್ ರೂಂ ಇರುವ ಭಾರಿ ಬಂಗಲೆಯನ್ನು ಕಟ್ಟಿಸಿದ್ದನು. ತಮ್ಮ ಅನನ್ಯತೆಯನ್ನು ಸಾರಿಕೊಳ್ಳಲು ದಂಪತಿಗಳು ಇಟಾಲಿಯನ್ ಫರ್ನಿಚರನ್ನು, ಮೆಕ್ಸಿಕನ್ ಬೊಂಬೆಗಳನ್ನು ಹಜಾರದಲ್ಲಿಟ್ಟಿದ್ದರು. ಲೈಬ್ರರಿಯಲ್ಲಿ ಶ್ರೀನಿವಾಸ ತನ್ನೂರಿನ ಚಿತ್ರಗಳನ್ನು, ಮೈಸೂರಿನ ದಸರಾ ಮೆರವಣಿಗೆಯ ಚಿತ್ರವನ್ನು ಹಾಗೂ ಅಡಿಕೆಯ ಸಮೃದ್ಧವಾದ ತೋಟದ ಚಿತ್ರವನ್ನು ಹಾಕಿದ್ದನು. ಈ ಬಂಗಲೆಯಲ್ಲಿ ಶ್ರೀನಿವಾಸ, ಹೆಂಡತಿ ಹಾಗೂ ಮಗಳು ಅನ್ಯೋನ್ಯವಾಗಿದ್ದರು. ಆದರೆ ಊರುಬಿಟ್ಟು ಬಂದ ಕೊರಗು ಅವನನ್ನು ಕಾಡುತ್ತದೆ.

ಒಮ್ಮೆ ಶ್ರೀನಿವಾಸ ತನ್ನ ಕತ್ತಲೆಯ ಹೆಂಚಿನ ಮನೆಗೆ ಹದಿನೈದು ವರ್ಷದ ಮಗಳನ್ನು ಕರೆದುಕೊಂಡು ಹೋಗುತ್ತಾನೆ. ಫಿಲಿಡೆಲ್ಫಿಯಾದ ಯೌವನದ ಹುಡುಗಿಗೆ ಅಕ್ಕಯ್ಯನು ಮತ್ತಿಸೊಪ್ಪಿನ ಲೋಳಿ ಮತ್ತು ಸೀಗೆಪುಡಿ ಮಿಶ್ರಣದಿಂದ ಸ್ನಾನವನ್ನು ಮಾಡಿಸುತ್ತಾಳೆ. ತಿನ್ನಲು ಪತ್ರಡೆಯನ್ನು ಕೊಡುತ್ತಾಳೆ. ಮನೆ ಬಿಟ್ಟು ಹೊರಗೆ ಹೆಣ್ಣು ಮಕ್ಕಳು ಹೋಗಬಾರದೆಂಬ ಹಳ್ಳಿಯ ಸಂಪ್ರದಾಯವನ್ನು ಹೇಳುತ್ತಾಳೆ. ಈ ಎಲ್ಲಾ ಸಾಂಪ್ರದಾಯಕ ರೀತಿ ನೀತಿಗಳು ಹಿಡಿಸದ ಹುಡುಗಿಯು ಇಂಗ್ಲಿಷ್‌ನಲ್ಲಿ ತಂದೆಯ ಜೊತೆ ರಾದ್ಧಾಂತ ಮಾಡುತ್ತಾಳೆ. ತಮ್ಮನ ಮಗಳ ಇಂಗ್ಲಿಷ್ ಮಾತುಗಳು ಅರ್ಥವಾಗದ ಅಕ್ಕಯ್ಯ ಅವಳ ಹಟವನ್ನು ಕಂಡು ಇದೇನು ಹುಡುಗಿಯಪ್ಪ ಎಲ್ಲ ಅವಳಪ್ಪನ ಹಾಗೆ ಎಂದುಕೊಳ್ಳುತ್ತಾಳೆ. ಹುಡುಗಿಯ ತಲೆಗೆ ತೆಂಗಿನ ಎಣ್ಣೆಯನ್ನು ಹಾಕಲು ಹೋದ ಅಕ್ಕಯ್ಯ ಸಿಟ್ಟಿನ ಮೂತಿಯವಳಿಂದ ನೋಪ್ಲೀಸ್, ಎಕ್ಸ್ಯೂಸ್‌ಮಿ ಎನ್ನಿಸಿಕೊಳ್ಳುತ್ತಾಳೆ. ಇಷ್ಟಾದರೂ ಮುಂಜಾವಿನಲ್ಲಿ ಎದ್ದು ಇಬ್ಬನಿಯಲ್ಲಿ ತೊಯ್ದಿದ್ದ ದುಂಡು ಮಲ್ಲಿಗೆಯನ್ನು ಬಾಳೆನಾರಿನಲ್ಲಿ ತಮ್ಮನ ಮಗಳಿಗೆಂದು ಸಿದ್ಧಪಡಿಸುತ್ತಾಳೆ. ಆಧುನಿಕ ಹುಡುಗಿಯು ಹೂವನ್ನು ಮುಡಿಯಲು ನಿರಾಕರಿಸಿದ್ದರಿಂದ ಏನು ಮಾಡಲು ತೋಚದ ಅಕ್ಕಯ್ಯ ಹೂವನ್ನು ದೇವರಿಗೆ ಮುಡಿಸುತ್ತಾಳೆ.

ಬ್ರಾಹ್ಮಣನಾದ ಶ್ರೀನಿವಾಸನು ತನ್ನ ಸ್ನೇಹಿತನೊಂದಿಗೆ ವೈಟ್‌ವೈನ್‌ನ ಜೊತೆಗೆ ಚೈನೀಸ್ ಚಿಕನ್ನನ್ನು ಸಹಜವಾಗಿಯೇ ತಿನ್ನುತ್ತಾನೆ. ಅವನು ತೊಟ್ಟ ಟ್ವಿಡ್‌ಕೋಟ್ ಮತ್ತು ಜೀನ್ಸ್ ಅವನಿಗೊಂದು ಯೌವನದ ಕಾಂತಿಯನ್ನು ತಂದಿದ್ದವು. ಕತ್ತು ಹಾಗೂ ಹಣೆಯ ಮೇಲೆ ಉದ್ದವಾದ ಕೂದಲುಗಳನ್ನು ಬಿಟ್ಟಿದ್ದಾನೆ. ಹಗುರವಾದ ಫ್ರೇಮಿನ ಕನ್ನಡಕ ಹಾಗೂ ಧರಿಸಿದ ಶೂಗಳು ಅವನ ವಿಷಾದಕ್ಕೊಂದು ಶೋಭೆಯನ್ನು ತಂದಿದ್ದವು. ಶ್ರೀನಿವಾಸನ ತಾತ್ವಿಕ ವಿಷಾದಕ್ಕೂ, ವಿಷಾದದ ತಳದಲ್ಲಿರುವ ಮನಸ್ಸಿನ ಕ್ಲೇಶಕ್ಕೂ ಅಂತರವಿದೆ. ಒಮ್ಮೆ ನಿರೂಪಕ ಶ್ರೀನಿವಾಸನ ಮನೆಗೆ ಹೋದಾಗ ಅಲ್ಲಿ ಹಳೆಯ ಉಡುಪುಗಳನ್ನು ಕಾಣುತ್ತಾನೆ. ಬಾಲ್ಯದಿಂದಲೂ ಸ್ನೇಹಿತರಾದ ಇಬ್ಬರೂ ಹಾಳೆ ಟೋಪಿ, ಕೋಟು ಹಾಗೂ ಪ್ಯಾಂಟ್‌ಗಳನ್ನು ಧರಿಸಿ ನಡು ವಯಸ್ಸಿನ ಘನತೆಯಲ್ಲಿ ಆಧುನಿಕ ಪೆಕರರಂತೆ ಕುಣಿಯುತ್ತಾರೆ. ಸಂಪ್ರದಾಯ ಹಾಗೂ ಆಧುನಿಕ ಭಾವನೆಗಳನ್ನು ಪಲ್ಲವಿ ಮಾಡಿಕೊಂಡು ಹಾಡಿನ ಮೂಲಕ ವ್ಯಕ್ತಪಡಿಸುತ್ತಾರೆ.

ಶ್ರೀನಿವಾಸನು ಅಮೇರಿಕಾದಲ್ಲಿ ಐಷಾರಾಮ ಜೀವನ ನಡೆಸುತ್ತಿದ್ದರೂ ತನ್ನ ಮೂಲ ಬೇರುಗಳ ಜೊತೆಗೆ ಪೂರ್ತಿಯಾಗಿ ಸಂಪರ್ಕವನ್ನು ಕಳೆದುಕೊಂಡಿಲ್ಲ. ಆತನ ನೆನಪಿನಲ್ಲಿ ಅಕ್ಕಯ್ಯನು ಮೂಲ ಬೇರುಗಳನ್ನು

[illegible]

[illegible]

[illegible]

[illegible]

ಹಸಿಯಾಗಿಡಲು ಕಾರಣವಾಗಿದ್ದಾಳೆ. ಕತೆಯ ಕೊನೆಯಲ್ಲಿ ಸ್ನೇಹಿತನೊಡನೆ ಕುಡಿದು, ಮನಸ್ಸಿಗೆ ಬಂದಂತೆ ಹಾಡನ್ನು ಹೇಳುತ್ತಾ ಕುಣಿಯುತ್ತಾನೆ. ಒಂದೆಡೆ ಸಂಪ್ರದಾಯವನ್ನು ಮರೆಯಲಾಗದೇ, ಪರಿಪೂರ್ಣವಾಗಿ ಆಧುನಿಕನಾಗದೇ ಬದುಕುವ ಶ್ರೀನಿವಾಸನಲ್ಲಿ ಅಮೇರಿಕಾದವರ ನೈಜ ಭೌತವಾದೀ ಪ್ರಜ್ಞೆ ಸ್ಪಷ್ಟವಾಗಿ ಕಾಣುತ್ತದೆ. ಹೀಗೆ ಸಂಪ್ರದಾಯ ಮತ್ತು ಆಧುನಿಕತೆಯ ಮಧ್ಯೆ ಕತೆಯು ತುಯ್ಯುತ್ತದೆ.

ಇಲ್ಲಿನ ಕತೆಗಳಲ್ಲಿ ಕೆಲವರು ಆಧುನಿಕ ಶಿಕ್ಷಣ ಮತ್ತು ನಗರ ಸಂಸ್ಕೃತಿಯ ಪ್ರಭಾವದಿಂದಾಗಿ ಸಂಪ್ರದಾಯವನ್ನು ನಿರ್ಲಕ್ಷಿಸುತ್ತಾರೆ. ಅವರಿಗೆ ಸಂಪ್ರದಾಯವು ಅರ್ಥಹೀನವಾಗಿ ಗೋಚರಿಸುತ್ತದೆ. ಈ ಗುಂಪಿಗೆ ಪ್ರಶ್ನೆ–ರಂಗನಾಥ, ಪ್ರಸ್ತ–ನೇತ್ರಾವತಿ, ಪ್ರಕೃತಿ–ನಾರಾಯಣ, ಅಕ್ಕಯ್ಯ–ಶ್ರೀನಿವಾಸ ಸೇರುತ್ತಾರೆ. ಇನ್ನು ಕೆಲವರು ಸಂಪ್ರದಾಯದ ಬಗೆಗೆ ಅಪಾರ ನಂಬಿಕೆ, ಮತ್ತುಅನಕ್ಷರತೆಯ ಪ್ರಭಾವದಿಂದ ಸಂಪ್ರದಾಯಕ್ಕೆ ಅಂಟಿಕೊಂಡಿದ್ದಾರೆ. ಈ ಗುಂಪಿಗೆ ಪ್ರಸ್ತ–ವೆಂಕಮ್ಮ, ಪ್ರಕೃತಿ–ಸಂಕಪ್ಪಯ್ಯ, ಅಕ್ಕಯ್ಯ–ಅಕ್ಕಯ್ಯ ಸೇರುತ್ತಾರೆ. ಮತ್ತೆ ಕೆಲವರು ಸಂಪ್ರದಾಯ ಮತ್ತು ಆಧುನಿಕತೆಯ ಮಧ್ಯೆ ಮಾರ್ಗವನ್ನು ಹುಡುಕುವ ಗೊಂದಲದಲ್ಲಿದ್ದಾರೆ. ಈ ಗುಂಪಿಗೆ ಪ್ರಶ್ನೆ–ಶಾರದೆ, ಪ್ರಸ್ತ–ಪುಂಡರೀಕ, ಅಕ್ಕಯ್ಯ–ಶ್ರೀನಿವಾಸ ಸೇರುತ್ತಾರೆ. ಉಳಿದವರು ಸಾಮಾನ್ಯವೆಂಬಂತೆ ಎರಡು ಬಗೆಯ ಜೀವನವನ್ನು ಗೊಂದಲವಿಲ್ಲದೇ ಸ್ವೀಕರಿಸುತ್ತಾರೆ. ಅಂಥವರಲ್ಲಿ ಪ್ರಸ್ತ–ಶಾಮಭಟ್ಟ, ಪ್ರಕೃತಿ–ಲಕ್ಷ್ಮಿ, ಅಕ್ಕಯ್ಯ–ಅಕ್ಕಯ್ಯ ಸೇರಿದ್ದಾರೆ. ಈ ಎಲ್ಲ ಸ್ವಭಾವಗಳೂ ಸಮಾಜದಲ್ಲಿವೆ. ಇಲ್ಲಿ ಯಾರ ನಿಲುವು ಸರಿ ಎನ್ನುವುದಕ್ಕಿಂತ ಅನಂತಮೂರ್ತಿಯವರು ಇಂಥ ಎಲ್ಲ ಬಗೆಯ ಪಾತ್ರಗಳನ್ನು ಸೃಷ್ಟಿಸುವುದರ ಮೂಲಕ ಬದುಕಿನ ಅನ್ವೇಷಣೆಗೆ ತೊಡಗುತ್ತಾರೆ. ಪರಿಸ್ಥಿತಿಗೆ ತಕ್ಕಂತೆ ಆಲೋಚಿಸಿ ನಿರ್ಧಾರ ತೆಗೆದುಕೊಳ್ಳುವುದು ಸೂಕ್ತ ಎನ್ನುವಂತೆ ಸಮಸ್ಯೆಯನ್ನು ಮುಂದಿಡುತ್ತಾರೆ.

ವ್ಯಕ್ತಿಯೊಬ್ಬನು ಪರಂಪರಾಗತವಾಗಿ ಬೆಳೆದುಬಂದ ಸಂಪ್ರದಾಯವನ್ನು ಮೀರಿ ಬದುಕಿದಾಗ ಸಂಘರ್ಷವೇರ್ಪಡುವುದನ್ನು 'ಸಂಸ್ಕಾರ' ಕಾದಂಬರಿಯಲ್ಲಿ ಕಾಣಬಹುದು. ಕಾಶಿಯಲ್ಲಿ ವಿದ್ಯೆ ಕಲಿತು ಬಂದ ಪ್ರಾಣೇಶಾಚಾರ್ಯ ಅಸಾಧಾರಣ ಪಂಡಿತನಾಗಿದ್ದನು. ಮಡಿವಂತ ಜೀವನ ನಡೆಸುವ ಇವನು ಅಗ್ರಹಾರದ ಬ್ರಾಹ್ಮಣರ ಗೌರವಕ್ಕೆ ಪಾತ್ರನಾಗಿದ್ದನು. ಹೆಂಡ ಕುಡಿದು, ಮೀನು ತಿಂದು, ತುರುಕರಿಂದ ದೇವಾಲಯದ ಕೊಳದಲ್ಲಿ ಮೀನು ಹಿಡಿಸುವ ಬ್ರಾಹ್ಮಣನಾದ ನಾರಣಪ್ಪನು ಮದುವೆಯಾದ ಹೆಂಡತಿಯನ್ನು ಬಿಟ್ಟು ವೇಶ್ಯೆಯೊಂದಿಗೆ ಜೀವನ ನಡೆಸುತ್ತಾನೆ. ಹೀಗೆ ಅಗ್ರಹಾರದಲ್ಲಿ ಒಂದು ಕಡೆ ಪ್ರಾಣೇಶಾಚಾರ್ಯ ಸಂಪ್ರದಾಯಬದ್ಧ ಜೀವನವನ್ನು ನಡೆಸಿದರೆ ಮತ್ತೊಂದು ಕಡೆ ನಾರಣಪ್ಪ ಸಂಪ್ರದಾಯಕ್ಕೆ ವಿರುದ್ಧವಾದ ಜೀವನವನ್ನು ನಡೆಸುತ್ತಾನೆ.

ಮಡಿವಂತ ಬ್ರಾಹ್ಮಣರು ನೆಲೆಸಿರುವ ಅಗ್ರಹಾರದಲ್ಲಿ ಸಂಪ್ರದಾಯವನ್ನು ಧಿಕ್ಕರಿಸಿ ಬಾಳುವ ನಾರಣಪ್ಪ ಕುಲಬಾಂಧವರಿಗೆ ಮತ್ತು ಪ್ರಾಣೇಶಾಚಾರ್ಯನಿಗೆ ಸವಾಲಾಗುತ್ತಾನೆ. ನಾರಣಪ್ಪನ ಬದುಕಿನ ರೀತಿ, ನೀತಿ ಹಿಡಿಸದ ಅಲ್ಲಿನ ಬ್ರಾಹ್ಮಣರಿಗೆ ಅವನ ಬಗ್ಗೆ ಅಸಮಧಾನವಿದೆ. ನಾರಣಪ್ಪ ಸತ್ತಾಗ ಸಂಪ್ರದಾಯಸ್ಥ ಬ್ರಾಹ್ಮಣರು ಅವನ ಶವವನ್ನು ಸಂಸ್ಕರಿಸಬಹುದೇ ಎಂಬುದು ಸಮಸ್ಯೆಯಾಗುತ್ತದೆ. ಬ್ರಾಹ್ಮಣರು ಇದಕ್ಕೆ ಪರಿಹಾರ ಕಂಡುಕೊಳ್ಳಲು ಪ್ರಾಣೇಶಾಚಾರ್ಯನಲ್ಲಿಗೆ ಬರುತ್ತಾರೆ. ಶಾಸ್ತ್ರ, ಗ್ರಂಥಗಳಲ್ಲಿ ಮಾಹಿತಿ ಸಿಗದಿದ್ದಾಗ ಮಾರುತಿ ಗುಡಿಗೆ ಹೋದ ಪ್ರಾಣೇಶಾಚಾರ್ಯನು ಅಲ್ಲಿಯೂ ವಿಫಲನಾಗುತ್ತಾನೆ. ಹಿಂತಿರುಗುವಾಗ ದಾರಿಯಲ್ಲಿ ಮೈಮರೆತು ಶೂದ್ರಳಾದ ಚಂದ್ರಿಯಿಂದ ದೇಹ ಸುಖವನ್ನು ಪಡೆಯುತ್ತಾನೆ. ಇಲ್ಲಿ ಪರಂಪರಾಗತ ಮೌಲ್ಯಗಳ ಪರೀಕ್ಷೆಯಿದೆ.

ಸಂಪ್ರದಾಯಸ್ಥನಾದ ಪ್ರಾಣೇಶಾಚಾರ್ಯ ಧಾರ್ಮಿಕ ಮೌಲ್ಯಗಳನ್ನು ನಿಭಾಯಿಸುವ ಪ್ರಯತ್ನದಲ್ಲಿ ವಿಫಲನಾಗುತ್ತಾನೆ. ಚಂದ್ರಿಯನ್ನು ಕೂಡಿದ ಮೇಲೆ ಮೊದಲು ಇರುವಷ್ಟು ಸಾಂಪ್ರದಾಯಿಕವಾಗಿ ಉಳಿಯಲು ಪ್ರಾಣೇಶಾಚಾರ್ಯನಿಗೆ ಸಾಧ್ಯವಾಗುವುದಿಲ್ಲ. ನಾರಣಪ್ಪನ ಶವಸಂಸ್ಕಾರಕ್ಕೆ ಸಂಬಂಧಿಸಿದಂತೆ ಹೊಸ ಮಾಹಿತಿಗಳನ್ನು ಹುಡುಕಲು ಪ್ರಾಣೇಶಾಚಾರ್ಯ ಪ್ರಯತ್ನಿಸುತ್ತಾನೆ. ಹೊಸದೊಂದು ಬದುಕನ್ನು ರೂಪಿಸುವ ಜವಾಬ್ದಾರಿಯನ್ನು ಹೊತ್ತಾಗ ಮುಕ್ತ ಜೀವನ ನಡೆಸಲು ಬಯಸುತ್ತಾನೆ.

ಹಿಂದಿನ ಸಂಪ್ರದಾಯಗಳಿಂದ ಪ್ರಭಾವಿತನಾಗಿದ್ದ ಪ್ರಾಣೇಶಾಚಾರ್ಯನಿಗೆ ನಾರಣಪ್ಪನ ಸಂಸ್ಕಾರದ ಬಗ್ಗೆ ಶಾಸ್ತ್ರದಲ್ಲೂ ಉತ್ತರ ಸಿಗದಿದ್ದಾಗ ಗೊಂದಲಕ್ಕೊಳಗಾಗುತ್ತಾನೆ. ಆಧುನಿಕ ಸಮಾಜದ ಬದಲಾವಣೆಗೆ ಪ್ರಾಣೇಶಾಚಾರ್ಯನು ಹೊಂದಿಕೊಳ್ಳಲು ಪ್ರಯತ್ನಿಸುವುದನ್ನು ಇಲ್ಲಿ ಗಮನಿಸಬಹುದು. "ಸಂಸ್ಕಾರದಲ್ಲಿ ಪ್ರಾಣೇಶಾಚಾರ್ಯರು ತಮ್ಮ ಬ್ರಾಹ್ಮಣ್ಯ ಕಳೆದುಕೊಂಡು ಹೊಸ ಮನುಷ್ಯರಾಗುವ ಪ್ರಕ್ರಿಯೆಯಲ್ಲಿ ಜಾತ್ರೆಯಲ್ಲಿ ಹೋಟೆಲಿಗೆ ಹೋಗಿ ಕಾಫಿ ಕುಡಿಯುವುದೂ ಒಂದು ಮುಖ್ಯ ಘಟ್ಟವೇ ಆಗಿದೆ."[೩] ಸಂಪ್ರದಾಯಬದ್ಧ ಬ್ರಾಹ್ಮಣನೊಬ್ಬ ಹೊಸ ಜೀವನಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸುವಾಗ ದ್ವಂದ್ವಕ್ಕೊಳಗಾಗುತ್ತಾನೆ.

"ಸಂಪ್ರದಾಯ ಮತ್ತು ಪ್ರತಿಭಟನೆ, ವಿರಕ್ತಿ ಮತ್ತು ಇಂದ್ರಿಯ ಲೋಲುಪತೆ, ಧರ್ಮಾಚರಣೆಗಳ ಅರ್ಥ ಮತ್ತು ಅರ್ಥಹೀನತೆ, ಸ್ವಭಾವ ಮತ್ತು ನಿರ್ಬಂಧವಾಗಿ ಧರ್ಮ, – ಇವುಗಳ ನಡುವೆ ಹುಟ್ಟಿಕೊಂಡ ಸಂಘರ್ಷ ಕಾಮ ಮತ್ತು ಮೋಕ್ಷ ಇವೆಲ್ಲವು ಈಗ ಪ್ರಾಣೇಶಾಚಾರ್ಯರ ಅಂತರಾಳದ ಸಮಸ್ಯೆಗಳು. ಈ ಹಂತದಲ್ಲಿ ಕಾದಂಬರಿಯ ಕ್ರಿಯೆ ಹಿಂದೂ ಗ್ರಾಮಸಮುದಾಯದಿಂದ ಬ್ರಾಹ್ಮಣ ಸಮುದಾಯದ ನಾಯಕ ಪ್ರಾಣೇಶಾಚಾರ್ಯರ ದೇಹ ಹಾಗೂ ಆತ್ಮಗಳಲ್ಲಿ ಕ್ರೇಂದ್ರಿಕೃತವಾಗುತ್ತದೆ."[೪] ಸಾಂಪ್ರದಾಯಿಕ ಜೀವನವನ್ನು ನಡೆಸುತ್ತಿದ್ದ ಪ್ರಾಣೇಶಾಚಾರ್ಯನು ಆತುರಪಟ್ಟು ಧಾರ್ಮಿಕ ಮೌಲ್ಯಗಳನ್ನು ಮುರಿದು ಹಾಕುತ್ತಾನೆ.

ಪ್ರಾಣೇಶಾಚಾರ್ಯ ಮತ್ತು ನಾರಣಪ್ಪ ಇವರಿಬ್ಬರೂ ವಿರುದ್ಧ ದಿಕ್ಕಿನಲ್ಲಿ ಚಲಿಸುವ ಪಯಣಿಗರಂತಿದ್ದಾರೆ. ಪ್ರಾಣೇಶಾಚಾರ್ಯನ ಪಾರಂಪರಿಕವಾದ ಜೀವನದೃಷ್ಟಿ ಮತ್ತು ನಾರಣಪ್ಪನ ಆಧುನಿಕ (ಇಲ್ಲಿ ಸ್ವೇಚ್ಛಾಚಾರದ) ಜೀವನ ದೃಷ್ಟಿಕೋನಗಳು ಸಂಪೂರ್ಣವಾಗಿ ಭಿನ್ನವಾಗಿವೆ. ಸುಸಂಸ್ಕೃತ ಮತ್ತು ಸಭ್ಯನಾದ ಆಚಾರ್ಯನನ್ನು ಅಗ್ರಹಾರವು ಗೌರವಿಸುತ್ತದೆ. ಆದರೆ ನಾರಣಪ್ಪನ ಆಲೋಚನಾದಾಟಿ ಮತ್ತು ನಡವಳಿಕೆಯು ಸಮಾಜವಿಮುಖಿಯಾದ್ದರಿಂದ ಅಗ್ರಹಾರದ ಒಟ್ಟು ಜನವರ್ಗಕ್ಕೆ ಸವಾಲಾಗುತ್ತಾನೆ. ಸಂಸ್ಕಾರದ ಕಥನದ ಒಡಲಿನಲ್ಲಿಯೇ ಪರಂಪರೆ ಮತ್ತು ಆಧುನಿಕತೆಗಳಿಗೆ ಪ್ರತೀಕವಾದ ಎರಡು ಮುಖ್ಯ ಪಾತ್ರಗಳು ಪ್ರಾಣೇಶಾಚಾರ್ಯ ಮತ್ತು ನಾರಣಪ್ಪನ ಮೂಲಕ ವ್ಯಕ್ತವಾಗಿವೆ. ಪರಂಪರೆ ಮತ್ತು ಆಧುನಿಕತೆಗಳ ನಿರಂತರ ಘರ್ಷಣೆಯಲ್ಲಿ ಗೆಲ್ಲುವುದು ಯಾವುದೆನ್ನುವ ವಿಚಾರ ಕುತೂಹಲವನ್ನು ಹುಟ್ಟಿಸುತ್ತದೆ. ಏಕೆಂದರೆ ಸತ್ವ ಕಳೆದುಕೊಳ್ಳುತ್ತಿರುವ ಪರಂಪರೆ ಮತ್ತು ಅತಿ ಉತ್ಸಾಹದ ಬುಗ್ಗೆಯಾದ ಆಧುನಿಕತೆ ಇವೆರಡೂ ಸಮಾಜದ ಮೇಲೆ ಗಾಢವಾದ ಪ್ರಭಾವವನ್ನು ಬೀರುತ್ತವೆ. ಇಲ್ಲಿ ಪರಂಪರೆಯ ಮೌಲ್ಯಗಳನ್ನು ಪ್ರಶ್ನಿಸುವುದಕ್ಕಾಗಿಯೇ ನಾರಣಪ್ಪನ ಪಾತ್ರವನ್ನು ಸೃಷ್ಟಿಸಿದಂತಿದೆ. ಹೊಸ ವಿಚಾರಗಳನ್ನು ತಿಳಿದುಕೊಂಡಿರುವ ನಾರಣಪ್ಪ ಸಾಂಪ್ರದಾಯಕವಾದ ಭಾವನೆಗಳಿಗೆ ಸ್ಪಂದಿಸುವುದಿಲ್ಲ. ತನ್ನ ಅನಿಸಿಕೆಗಳನ್ನು ಪ್ರಾಣೇಶಾಚಾರ್ಯನಿಗೆ ವಿವರಿಸಿ

ಅವನಿಗಿಂತ ಪೂರ್ಣ ಭಿನ್ನವಾಗಿ ನಡೆದುಕೊಳ್ಳುವ ತನ್ನ ದಾರಿಯೇ ಸರಿ ಎಂದು ವಾದಿಸುತ್ತಾನೆ. ಇದರಿಂದಾಗಿ ಸಂಘರ್ಷವೇರ್ಪಡುತ್ತದೆ.

ವ್ಯಕ್ತಿಯೊಬ್ಬನ ಆಧುನಿಕ ವಿಚಾರಗಳು ಸಂಪ್ರದಾಯಸ್ಥ ಜನಸಮುದಾಯಕ್ಕೆ ಹೊಂದಾಣಿಕೆಯಾಗದಿದ್ದಾಗ ಸಂಘರ್ಷವೇರ್ಪಡುವುದನ್ನು 'ಭಾರತೀಪುರ' ಕಾದಂಬರಿಯಲ್ಲಿ ಕಾಣಬಹುದು. ಶ್ರೀಮಂತ ಬ್ರಾಹ್ಮಣನಾದ ಜಗನ್ನಾಥನು ದೇವಾಲಯದ ಧರ್ಮದರ್ಶಿಯ ಮನೆತನದವನು. ಬಾಲ್ಯದಲ್ಲಿ ಜಗನ್ನಾಥ ತಂದೆಯನ್ನು ಕಳೆದುಕೊಂಡಿರುತ್ತಾನೆ. ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ತೆರಳಿದ್ದ ಜಗನ್ನಾಥನು ಮರಳಿ ಭಾರತೀಪುರಕ್ಕೆ ಬರುವ ಹೊತ್ತಿಗೆ ಅವನ ತಾಯಿ ಸತ್ತಿರುತ್ತಾಳೆ. ಆಧುನಿಕತೆಯ ಪ್ರತಿನಿಧಿಯಂತಿರುವ ಜಗನ್ನಾಥನಿಗೆ ಇಡೀ ಭಾರತೀಪುರವು ಸಂಪ್ರದಾಯದ ಪ್ರತಿಬಿಂಬದಂತೆ ಕಾಣುತ್ತದೆ. ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿದ್ದ ಜಗನ್ನಾಥನು ವಿಚಾರಶೀಲ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಿರುತ್ತಾನೆ. ಭಾರತೀಪುರವು ಮಂಜುನಾಥನ ದೆಸೆಯಿಂದ ಜಡವಾಗಿದೆ. ಹಳೆಯಮೌಲ್ಯಗಳು, ನಂಬಿಕೆಗಳು ಮನುಷ್ಯ ಜನಾಂಗವನ್ನೇ ಆಳುತ್ತಿವೆ ಎಂದುಕೊಂಡ ಜಗನ್ನಾಥನು ಬದಲಾವಣೆಯನ್ನು ತರಲು ಬಯಸುತ್ತಾನೆ.

ಭಾರತೀಪುರದಲ್ಲಿ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬಗಳಿದ್ದು, ಅಡಿಕೆ ತೋಟಗಳು, ಮಂಡಿಗಳು, ಪುರೋಹಿತರು ಹಾಗೂ ಗೇಣಿದಾರರಿದ್ದಾರೆ. ಮಂಜುನಾಥನ ಮೇಲೆ ಭಯ, ಭಕ್ತಿ ಇರುವ ಊರಿನ ಜನರು ಭೂತರಾಯನನ್ನು ನಂಬುತ್ತಾರೆ. ಸಾಂಪ್ರದಾಯಕ ಸಮಾಜವನ್ನು ಪ್ರಶ್ನಿಸುವ ಜಗನ್ನಾಥನು ಅಲ್ಲಿನ ಪದ್ಧತಿಗಳನ್ನು ಬದಲಿಸಲು ಬಯಸುತ್ತಾನೆ. ತನ್ನ ಸುತ್ತಲಿನ ಪರಿಸ್ಥಿತಿಯನ್ನು ಅರಿತ ಜಗನ್ನಾಥನು ಹಳೆಯ ಮೌಲ್ಯಗಳ ವಿರುದ್ಧ ಆಧುನಿಕ ಮೌಲ್ಯಗಳನ್ನು ಪ್ರತಿಪಾದಿಸಲು ಪ್ರಯತ್ನಿಸುತ್ತಾನೆ. ಅಸ್ಪೃಶ್ಯರಲ್ಲಿ ಜಾಗೃತಿ ಮೂಡಿಸಿ, ಸ್ವಾತಂತ್ರ್ಯವನ್ನು ರೂಢಿಸಿಕೊಳ್ಳುವಂತೆ ಅವರನ್ನು ಹುರಿದುಂಬಿಸುತ್ತಾನೆ. ಹರಿಜನರನ್ನು ಗುಡಿಯೊಳಕ್ಕೆ ಕರೆದುಕೊಂಡು ಹೋಗಲು ನಿರ್ಧರಿಸುತ್ತಾನೆ. ತಾನು ಜಮೀನ್ದಾರನ ಮಗನಾದರೂ ತನ್ನ ಸಂಪ್ರದಾಯವನ್ನು ಮೀರಿ ಹಿಂದುಳಿದ ಜನಾಂಗದವರನ್ನು ಹತ್ತಿರ ಕರೆದುಕೊಳ್ಳುತ್ತಾನೆ. ತನ್ನ ಮನೆತನ ಹಾಗೂ ಭಾರತೀಪುರವು ನಂಬಿದ್ದ ಮಂಜುನಾಥ ದೇವರನ್ನು ಮುಂದಿಟ್ಟುಕೊಂಡು ಆ ಮೂಲಕ ಹೊಸ ಮೌಲ್ಯಗಳನ್ನು ಹುಟ್ಟುಹಾಕಲು ಬಯಸುತ್ತಾನೆ.

ಭಾರತೀಪುರದ ಜಡವಾಗಿದ್ದ ಸಮಾಜವನ್ನು ಪ್ರಶ್ನಿಸಿದ ಜಗನ್ನಾಥನು ಕ್ರಿಯಾಶೀಲತೆಯಲ್ಲಿ ಬದಲಾವಣೆಯನ್ನು ತರಲು ಬಯಸಿದಾಗ ತನ್ನ ಬಂಧು–ಬಳಗದಿಂದ ದೂರವಾಗುತ್ತಾನೆ. ಮೇಲ್ವರ್ಗದವರ ನಿಷ್ಠುರ ಕಟ್ಟಿಕೊಳ್ಳುತ್ತಾನೆ. ಹಿಂದುಳಿದ ಜನರ ಸಲುವಾಗಿ ಬದಲಾವಣೆ ತರಲು ಬಯಸುತ್ತಾನೆ. ಆದರೆ ಅವರು ಜಗನ್ನಾಥನಿಗೆ ಸರಿಯಾಗಿ ಸ್ಪಂದಿಸುವುದಿಲ್ಲ. ತನ್ನ ಮನೆಯ ನರಸಿಂಹ ಸಾಲಿಗ್ರಾಮವನ್ನು ಬೀದಿಗೆ ತಂದು ಅಸ್ಪೃಶ್ಯರನ್ನು ಒತ್ತಾಯಿಸಿ ಆ ವಿಗ್ರಹವನ್ನು ಮುಟ್ಟಿಸುತ್ತಾನೆ. ಜಗನ್ನಾಥನ ಒತ್ತಾಯಕ್ಕೆ ಮಣಿದು ಪಂಚೆತೊಟ್ಟ ಹರಿಜನರು ಹಿಂದಿನಂತೆ ನೆಲದ ಮೇಲೆ ಕೂಡಲಾಗದೆ ಜಗನ್ನಾಥನ ಸರಿಸಮಾನವಾಗಿ ಚಿಟ್ಟೆಯ ಮೇಲೂ ಕೂಡಲಾಗದೆ ಮುಜುಗರದಿಂದ ಗೊಂದಲಕ್ಕೊಳಗಾಗುತ್ತಾರೆ. ಆ ಬಟ್ಟೆ ಸ್ವಾಭಾವಿಕವಾಗಿ ಒಗ್ಗದೆ ಅವರಿಗೆ ವಿಕಾರವೆನಿಸುತ್ತದೆ.

ಭಾರತೀಪುರ ಸಮಾಜದ ಜಿಡ್ಡುಗಟ್ಟಿದ ನಂಬಿಕೆಗಳನ್ನು ಮುರಿಯಬೇಕೆಂಬ ಉತ್ಸಾಹದಲ್ಲಿದ್ದ ಜಗನ್ನಾಥನು ಗೊಂದಲ ಹಾಗೂ ವಿರೋಧದ ನಡುವೆಯೂ ಹರಿಜನರನ್ನು ದೇವಸ್ಥಾನದೊಳಕ್ಕೆ ಕರೆದೊಯ್ಯುತ್ತಾನೆ.

[illegible]

ಹರಿಜನರ ಪ್ರವೇಶಕ್ಕೆ ಮುಂಚಿತವಾಗಿ ದೇವಸ್ಥಾನದ ಅರ್ಚಕನ ಮಗನು ದೇವರ ವಿಗ್ರಹವನ್ನು ಕಿತ್ತು ಹೊಳೆಗೆ ಎಸೆದಿರುತ್ತಾನೆ. ನಿಜಸ್ಥಿತಿ ಅರಿಯದ ಜನರು ಅಸ್ಪೃಶ್ಯರ ಪ್ರವೇಶದಿಂದ ಅಪವಿತ್ರನಾಗುವುದರಿಂದ ತಪ್ಪಿಸಿಕೊಳ್ಳಲು ದೇವರು ಪವಾಡ ಮಾಡಿದ್ದಾನೆಂದು ತಿಳಿಯುತ್ತಾರೆ. ಹೀಗೆ ದೇವರಿಲ್ಲದ ದೇವಸ್ಥಾನಕ್ಕೆ ಹರಿಜನರನ್ನು ಕರೆದು ತಂದ ಜಗನ್ನಾಥನು ಸೋಲುತ್ತಾನೆ. ಈ ನಿಟ್ಟಿನಲ್ಲಿ ಆತನ ಪ್ರತಿಯೊಂದು ಪ್ರಯತ್ನಕ್ಕೂ ಸುತ್ತಲಿನ ಜನತೆಯು ಸ್ಪಂದಿಸುವುದಿಲ್ಲ.

ಹಳೆಯಕಾಲದ ಸಾಂಪ್ರದಾಯಕ ಮೌಲ್ಯಗಳನ್ನು ಪ್ರಶ್ನಿಸಿ, ಆಧುನಿಕ ವಿಚಾರಗಳಿಂದ ಬದಲಾವಣೆ ತರಲು ಬಯಸುವ ಜಗನ್ನಾಥನ ವಿಚಾರವು ಪರಿಣಾಮಕಾರಿಯಾಗದಿದ್ದಾಗ ಗೊಂದಲಕ್ಕೊಳಗಾಗುತ್ತಾನೆ. ಸಂಪ್ರದಾಯಕ್ಕೆ ಹೊಂದಿಕೊಂಡಿದ್ದ, ಹಳೆಯ ಮೌಲ್ಯಗಳಿಗೆ ಬದ್ಧರಾಗಿದ್ದ ಜನರು ಆಧುನಿಕ ವಿಚಾರಗಳಿಂದ ಗೊಂದಲಕ್ಕೊಳಗಾಗುತ್ತಾರೆ. ಸಂಪ್ರದಾಯಸ್ಥ ಕುಟುಂಬದ ಜಗನ್ನಾಥನು ಆಧುನಿಕತೆಯನ್ನು ತರಲು ಮಾಡುವ ಪ್ರಯತ್ನವೆಲ್ಲವೂ ಸಮಸ್ಯೆಯಾಗಿ ಪರಿಣಮಿಸುತ್ತದೆ. ಸಂಪ್ರದಾಯವನ್ನು ಇಡೀ ಭಾರತೀಪುರವು ಪ್ರತಿನಿಧಿಸಿದಾಗ ಆಧುನಿಕತೆಯನ್ನು ಬಯಸುವ ಜಗನ್ನಾಥ ಒಂಟಿಯಾಗುತ್ತಾನೆ. ಹೀಗೆ ಸಂಪ್ರದಾಯ ಹಾಗೂ ಆಧುನಿಕ ವಿಚಾರಗಳ ನಡುವೆ ಸಂಘರ್ಷವೇರ್ಪಟ್ಟಿದೆ.

"ವಸ್ತು-ಸ್ಥಿತಿಯ ಮಟ್ಟದಲ್ಲಿ, ಕಾದಂಬರಿಯ ಮುಖ್ಯ ಗೊಡವೆ ಸಂಪ್ರದಾಯಬದ್ಧ ಸಮಾಜದ ಆಧುನೀಕರಣ; ಆ ಸಮಾಜದ ಮೂರ್ತ-ಅಮೂರ್ತ ಸಂಕೇತಗಳನ್ನು ತೊಡೆದು ಹಾಕುವುದು, ಕನಿಷ್ಟ ಅವುಗಳನ್ನು ಅಪಮೌಲ್ಯಗೊಳಿಸುವುದು, ಹೊಸ ವಸ್ತು ಸ್ಥಿತಿಯನ್ನು ಮೌಲ್ಯಗಳನ್ನು ನಿರ್ಮಿಸುವುದು." [೫] ಇಲ್ಲಿ ಗ್ರಾಮಸಮುದಾಯದ ಸಾಮಾಜಿಕ ಬದಲಾವಣೆಯ ಪ್ರಯತ್ನವಾಗಿ ಆಧುನಿಕತೆಯನ್ನು ಕಾಣಬಹುದು. ಅಲ್ಲದೇ ಪರಂಪರೆ ಮತ್ತು ಆಧುನಿಕತೆಗಳ ಮುಖಾಮುಖಿಯು ಸಂಸ್ಕಾರಕ್ಕಿಂತ ವಿಭಿನ್ನವಾದ ರೀತಿಯಲ್ಲಿ ಇಲ್ಲಿ ಚಿತ್ರಿಸಲಾಗಿದೆ. ಯಾವುದೇ ಬದಲಾವಣೆಯ ಪ್ರಕ್ರಿಯೆಯು ವಿಫಲವಾಗುವ ಅಥವಾ ಅಪಹಾಸ್ಯಕ್ಕೆ ಗುರಿಯಾಗುವ ದುರಂತವನ್ನು ಇಲ್ಲಿ ಕಾಣಬಹುದು. ಇಂತಹ ಪ್ರಕ್ರಿಯೆಗಳು ಸಮಾಜದ ಬೆಂಬಲವನ್ನು ಪಡೆಯುವುದಿಲ್ಲ. ಒಂದುವೇಳೆ ಪಡೆದರೂ ಆದರ ಪ್ರಮಾಣವು ಕಡಿಮೆಯೆಂದೇ ಹೇಳಬಹುದು. ಎಷ್ಟೇ ಆಧುನಿಕವಾದ ಸಮಾಜವಿದ್ದರೂ ಸಹ ಅಲ್ಲಿನ ಬದಲಾವಣೆಯಂತಹ ಮಹತ್ವದ ಪ್ರಶ್ನೆಯನ್ನು ಎದುರಿಸುವಾಗ ಅಂತಹ ಆದರ್ಶಗಳನ್ನು ಅನುಮಾನದಿಂದಲೇ ನೋಡಿದಾಗ ಸಂಘರ್ಷ ಏರ್ಪಡುತ್ತದೆ.

ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿ ಆಧುನಿಕತೆಯನ್ನು ಪ್ರತಿನಿಧಿಸುವ ಪಾತ್ರಗಳನ್ನು 'ದಿವ್ಯ' ಕಾದಂಬರಿಯಲ್ಲಿ ಕಾಣಬಹುದು. ಅಕ್ಕು ಮಡಿವಂತ ಹೆಂಗಸಾದರೂ ಆಧುನಿಕತೆಯನ್ನು ಒಪ್ಪುವ ವಿಚಾರಶೀಲಳಾಗಿದ್ದಾಳೆ. ಕೇಶವ ಸಂಪ್ರದಾಯ ಮತ್ತು ಆಧುನಿಕ ಎರಡೂ ವಿಚಾರಗಳನ್ನು ಮೈಗೂಡಿಸಿಕೊಂಡಿದ್ದಾಳೆ. ಬ್ರಾಹ್ಮಣ ಜಮೀನ್ದಾರರ ಮನೆಯಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದ ಭೂವರಾಹ ಪೂಜೆಯನ್ನು ಮಾಡುವ ಕೇಶವ ಅದಕ್ಕೆ ದಕ್ಷಿಣೆಯನ್ನು ಪಡೆಯುತ್ತಾನೆ. ಈ ಕೆಲಸದ ಜೊತೆಗೆ ಆಧುನಿಕ ಕನ್ನಡ ಸಾಹಿತ್ಯದ ಚೋಮನದುಡಿ ಮುಂತಾದ ಕಾದಂಬರಿಗಳನ್ನು ಓದಿದ್ದಾನೆ. ವೇದಾಂತವನ್ನು ಹೇಳುವ ಕೇಶವ ಆಧುನಿಕ ನೆಲೆಗಟ್ಟಿನ ಬಗೆಗೂ ಮಾತನಾಡುತ್ತಾನೆ. ಹಳ್ಳಿಯ ಜನ ಭವಿಷ್ಯ, ಮುಹೂರ್ತವನ್ನು ಕೇಳಲು ಕೇಶವನನ್ನು ಆಶ್ರಯಿಸಿದ್ದಾರೆ. ಯಕ್ಷಗಾನದಲ್ಲೂ ಆಸಕ್ತಿವಹಿಸುವ ಕೇಶವನಿಗೆ ಕುವೆಂಪು ಅವರ ವಿಚಾರ ಕ್ರಾಂತಿಯಿಂದ ಪ್ರೇರಿತನಾದ ಪುಟ್ಟೇಗೌಡನೆಂಬ ಗೆಳೆಯನಿದ್ದಾನೆ. "ಕೇಶವನ ಕುಟುಂಬದಲ್ಲಿ ಅಕ್ಕು, ಗೌರಿ ಮತ್ತು

[illegible]

[illegible]

[illegible]

[illegible]

[illegible]

ಗಂಗೆ ಇವರ ನಡುವಿನ ಸಂಬಂಧಗಳ ಕಥೆ ಬಿಚ್ಚಿಕೊಳ್ಳುತ್ತಲೇ ಅವರ ಸಂಪ್ರದಾಯ ಶೀಲ ಮನಸ್ಸುಗಳಲ್ಲಿ ಹುದುಗಿರುವ ಆಧುನಿಕ ವಿಚಾರಗಳು, ವಿಶಾಲ ಮನೋಭಾವಗಳು, ಕಾವ್ಯ, ಪುರಾಣ ಭಾಗವತರಾಟದ ಬಗೆಗಿನ ಆಸಕ್ತಿಗಳು ವ್ಯಕ್ತವಾಗುತ್ತವೆ." ೬ ಸಂಪ್ರದಾಯದ ವಿರುದ್ಧ ವಿಚಾರಗಳ ಘರ್ಷಣೆಯ ಜೊತೆಗೆ ಸೇತುವೆಯ ನಿರ್ಮಾಣ, ವಿದ್ಯುಚ್ಛಕ್ತಿ ಮತ್ತು ಹೋಟೆಲುಗಳ ಆಧುನಿಕ ವಿಚಾರಗಳು ಕಾದಂಬರಿಯಲ್ಲಿ ಕಂಡುಬರುತ್ತವೆ. ಘನಶ್ಯಾಮ ಹಾಗೂ ಗೌರಿ ಆಧುನಿಕತೆ ಮತ್ತು ಸಂಪ್ರದಾಯದ ವಿಚಾರಗಳಲ್ಲಿ ನಂಬಿಕೆ ಇಟ್ಟಿದ್ದಾರೆ. ಅಕ್ಕು ಅಕಸ್ಮಾತಾಗಿ ಸಿಗುವ ಮಗುವನ್ನು ಪ್ರೀತಿಯಿಂದ ಸಾಕುತ್ತಾಳೆ. ಆಚಾರದಲ್ಲಿ ಮಡಿವಂತಳಾಗಿದ್ದು ವಿಚಾರದಲ್ಲಿ ಆಧುನಿಕಳಾಗಿದ್ದರಿಂದ ಮಾತ್ರ ಇದು ಅಕ್ಕುಗೆ ಸಾಧ್ಯವಾಗುತ್ತದೆ. ಜಮೀನದಾರ ಮಂಜಯ್ಯನು ಧರ್ಮನಿಷ್ಠನಾಗಿದ್ದು, ಆಧುನಿಕ ವಿಚಾರಗಳನ್ನು ರೂಢಿಸಿಕೊಂಡಿರುತ್ತಾನೆ. ಭೂವರಾಹ ಪೂಜೆಯನ್ನು ಆಚರಿಸುವ ಮಂಜಯ್ಯ ತನ್ನ ಮಗನನ್ನು ವಿದ್ಯಾಭ್ಯಾಸಕ್ಕೆಂದು ವಿದೇಶಕ್ಕೆ ಕಳುಹಿಸುತ್ತಾನೆ. ವಿಧವೆ ಮಗಳಿಗೂ ವಿದ್ಯಾಭ್ಯಾಸ ಮಾಡಲು ಅವಕಾಶ ಕಲ್ಪಿಸಿಕೊಡುತ್ತಾನೆ. ಇದು ಅವನಲ್ಲಿರುವ ಪ್ರಗತಿಪರ ಆಲೋಚನೆಯನ್ನು ತಿಳಿಸುತ್ತದೆ.

ಸಂಸ್ಕಾರ , ಭಾರತೀಪುರ , ಹಾಗೂ ದಿವ್ಯ ಕಾದಂಬರಿಗಳಲ್ಲಿ ವ್ಯಕ್ತಿ ಬಯಸುವ ಬದಲಾವಣೆಯು ನೇರವಾಗಿ ಚಿತ್ರಿತವಾದರೆ ಸಮಾಜವು ಬಯಸುವ ಬದಲಾವಣೆಯನ್ನು ಗೌಣವಾಗಿ ಚಿತ್ರಿಸಲಾಗಿದೆ. ಸಂಸ್ಕಾರ ದಲ್ಲಿ ಹಿಂದಿನದನ್ನು ಬಿಟ್ಟು ಹೊಸತನ್ನು ಅನುಸರಿಸುವ ಸನ್ನಾಹದಲ್ಲಿರುವುದು ಪ್ರಾಣೇಶಾಚಾರ್ಯನೊಬ್ಬನೇ ಅಲ್ಲ ಬ್ರಾಹ್ಮಣ ಸಮಾಜವು ಬದಲಾಗಬೇಕೆಂಬ ಆಶಾ ಭಾವನೆಯನ್ನು ಹೊಂದಿದೆ. ಇದು ಅಲ್ಲಿನ ಬ್ರಾಹ್ಮಣರ ನಡವಳಿಕೆಗಳಿಂದ ಪರೋಕ್ಷವಾಗಿ ಕಾಣುತ್ತದೆ. ಭಾರತೀಪುರದಲ್ಲಿ ಹೊಸತನ್ನು ತರುವ ಗೊಂದಲದಲ್ಲಿರುವುದು ಜಗನ್ನಾಥ. ಆದರೆ ಅಲ್ಲಿನ ಹರಿಜನರು ಹಾಗೂ ಗಣೇಶನಿಗೆ ಬದಲಾವಣೆಯ ಹಂಬಲವಿದೆ. ಆದರೆ ಪ್ರತ್ಯಕ್ಷವಾಗಿ ಎದುರಿಸುವ ಧೈರ್ಯವಿಲ್ಲ. ದಿವ್ಯ ದಲ್ಲಿ ಧರ್ಮನಿಷ್ಟವಾದ ಸಮಾಜವನ್ನು ಬಯಸುವ ಮಂಜಯ್ಯನು ಆ ಸಮಾಜವು ಸ್ವತಂತ್ರವಾದ ಆಲೋಚನೆಯನ್ನು ರೂಢಿಸಿಕೊಂಡಿರಬೇಕೆಂದು ನಿರೀಕ್ಷಿಸುತ್ತಾನೆ.

ಅನಂತಮೂರ್ತಿಯವರು ಕಥಾಸಾಹಿತ್ಯದಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ನಡುವೆ ಸಂಘರ್ಷ ಏರ್ಪಡುವುದರ ವಿವಿಧ ಸ್ತರಗಳನ್ನು ಚಿತ್ರಿಸಿದ್ದಾರೆ. ಸಂಪ್ರದಾಯ ಎನ್ನುವುದು ಒಂದು ಕಾಲದಲ್ಲಿ ಬದುಕಿನ ವ್ಯವಸ್ಥೆಯ ಭಾಗವಾಗಿ ರೂಪುಗೊಂಡ ಸಂಕೇತಗಳೇ ಆಗಿವೆ. ಆದರೆ ಅವು ಕಾಲದ ಪ್ರಸ್ತುತತೆಯನ್ನು ಕಳೆದುಕೊಂಡಾಗ ಅರ್ಥಶೂನ್ಯವಾಗುತ್ತವೆ. ಅವುಗಳನ್ನು ಸಮಕಾಲೀನಗೊಳಿಸಲು ಬಂದ ಅನೇಕ ಸಂಗತಿಗಳು ಆಧುನಿಕವಾಗಿ ಬದುಕಿನಲ್ಲಿ ಜಾಗಪಡೆಯುತ್ತವೆ. ಅದಕ್ಕೆ ಕಾರಣವಾದ ಜನಗಳ ನಡುವೆ ಸಂಘರ್ಷಗಳು ಸಹಜವಾಗಿ ಏರ್ಪಡುತ್ತವೆ. ಪರಿಣಾಮವಾಗಿ ವಿನೂತನವಾದ ಜೀವನ ವಿಧಾನವೊಂದನ್ನು ರೂಢಿಸಿಕೊಳ್ಳುವುದು ಸಾಧ್ಯ ಹಾಗೂ ಅನಿವಾರ್ಯ ಎಂಬುದನ್ನು ಅನಂತಮೂರ್ತಿಯವರು ಕಥನಸಾಹಿತ್ಯದಲ್ಲಿ ಸಾಧಿಸಿ ತೋರಿಸಿದ್ದಾರೆ.

ಸಾಂಸ್ಕೃತಿಕವಾಗಿ ಹೆಚ್ಚು ಸ್ಫುಟಗೊಳ್ಳುವ ಇಲ್ಲಿನ ಪಾತ್ರಗಳು ತಾವು ಬದುಕಿಬಾಳಿದ ಸಂಸ್ಕೃತಿಯ ಪರಿಸರದಿಂದ ಹುಟ್ಟಿ ಬೆಳೆದು ಮೈತುಂಬಿವೆ. ಆ ಕಾರಣಕ್ಕಾಗಿ ಏರ್ಪಡುವ ಮಾನಸಿಕ ಸಂಘರ್ಷ ಕೂಡ ವ್ಯಕ್ತಿಯ ನೆಲೆಯಲ್ಲಿ ವಿರಮಿಸದೆ ಸಂಸ್ಕೃತಿಯ ಸಂಘರ್ಷದ ಸ್ವರೂಪವನ್ನು ಪಡೆದು ಸಾರ್ವತ್ರಿಕವಾಗುತ್ತದೆ. ಇಲ್ಲಿನ ಆಧುನಿಕ ಪಾತ್ರಗಳು ಹಣ್ಣೆಲೆ ಉದುರಿದಾಗ ಹಸಿರೆಲೆ ನಗುವ ಮಾದರಿಯಂತಲ್ಲ. ಬದಲಾಗಿ ಹಸಿರೆಲೆ ನಗುವಾಗ ನಾವು ಒಂದು ಕಾಲದಲ್ಲಿ ನಕ್ಕಿದ್ದೆವು ಎಂಬ ಮಾದರಿಯಂತಿದೆ. ಹಾಗಾಗಿ ಇಲ್ಲಿನ ಸಂಪ್ರದಾಯ

ಮತ್ತು ಆಧುನಿಕತೆಯ ಸಂಘರ್ಷ ಬದುಕಿನ ನಾಶಕ್ಕೆ ಕಾರಣವಾಗುವುದಿಲ್ಲ. ಪರ್ಯಾಯವಾಗಿ ಹೊಸಬದುಕಿನ ದಾರಿಯೊಂದನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗುತ್ತದೆ.

ಸಂಪ್ರದಾಯದಲ್ಲಿ ಆಧುನಿಕತೆ ಸೇರಿಕೊಳ್ಳುವುದು ವಾಸ್ತವದಲ್ಲಿ ಸಹಜವಾದ ಬೆಳವಣಿಗೆಯಾಗಿದೆ. ಸಂಪ್ರದಾಯ ಮತ್ತು ಆಧುನಿಕತೆ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿರುವಂತೆ ಮೇಲುನೋಟಕ್ಕೆ ಕಂಡರೂ ಅವೆರಡೂ ಬದುಕಿನ ಎರಡು ಮಗ್ಗಲುಗಳಾಗಿವೆ. ಸನಾತನತೆಯ ಬದುಕನ್ನು ಬೆಂಬಲಿಸುವ ಜನರಿಗೆ ಆಧುನಿಕತೆಯ ಸೌಲಭ್ಯಗಳನ್ನು ಬಿಟ್ಟು ಬದುಕಲಾಗದ ಅನಿವಾರ್ಯತೆಯಿದೆ. ನಮ್ಮ ಬದುಕಿನ ಕ್ರಮದಲ್ಲಿ ಸಂಪ್ರದಾಯ ಮತ್ತು ಆಧುನಿಕತೆ ಮಿಳಿತವಾಗಿರುವುದರಿಂದ ಒಂದನ್ನು ಬಿಟ್ಟು ಇನ್ನೊಂದು ಇರುವುದು ಸಾಧ್ಯವಾಗದ ಸ್ಥಿತಿಯಾಗಿದೆ. ಆಧುನಿಕ ವಿಜ್ಞಾನದ ಶಕ್ತಿಯನ್ನು ಒಪ್ಪಿಕೊಳ್ಳುವ ಅನಂತಮೂರ್ತಿಯವರು ಅದು ನಮ್ಮ ಅಗತ್ಯವನ್ನು ಮೀರಿ ಮಾಡುವ ಆಕ್ರಮಣದ ಬಗೆಗೆ, ನಮ್ಮ ದೇಹ ಮನಸ್ಸುಗಳನ್ನು ಸಂಪೂರ್ಣವಾಗಿ ಸೆರೆಹಿಡಿಯುವುದರ ಬಗೆಗೆ ಆತಂಕ ವ್ಯಕ್ತಪಡಿಸುತ್ತಾರೆ. ಆಧುನಿಕತೆಯನ್ನು ವಿರೋಧಿಸಲು ಭಾರತೀಯ ಪರಂಪರೆಯಲ್ಲಿ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನಿಸುವುದನ್ನು ಅವರ ಕಥಾಸಾಹಿತ್ಯದಲ್ಲಿ ಗಮನಿಸಬಹುದಾಗಿದೆ.

ಸಮಕಾಲೀನ ಭಾರತವನ್ನು ಅರ್ಥಮಾಡಿಕೊಳ್ಳಲು ಮಾರ್ಕ್ಸವಾದ, ಸಮಾಜಶಾಸ್ತ್ರ, ಮನಃಶಾಸ್ತ್ರ, ಮುಂತಾದ ವಿಷಯಗಳು ಕಟ್ಟಿಕೊಡುವ ವಿಚಾರಗಳಾಚೆ ಬೇರೊಂದು ಮನಸ್ಥಿತಿಯ ಅಗತ್ಯವಿದೆ. ಅದು ಸುತ್ತಲಿನ ಬದುಕನ್ನು ಸೂಕ್ಷ್ಮವಾಗಿ ಅವಲೋಕಿಸುವ, ಆತ್ಮೀಯವಾಗಿ ಅನುಸಂಧಾನಿಸುವ ಒಂದು ಪ್ರಜ್ಞೆಯಾಗಿರಬಹುದು. ಇಲ್ಲವೇ ಗತಿಸಿದ ಮತ್ತು ಸಮಕಾಲೀನ ಸಾಮಾಜಿಕ ಆಯಾಮಗಳ ಸ್ಪಷ್ಟ ಮಾಹಿತಿಯನ್ನು ಹೊಂದಿದ ಪರಂಪರೆಯ ತಿಳಿವಿರುವ ಜಾಗರೂಕ ಮನಸ್ಥಿತಿಯಾಗಿರಬಹುದು. ಇಂಥ ಒಂದು ಮನಸ್ಥಿತಿಯನ್ನು ಅನಂತಮೂರ್ತಿಯವರಲ್ಲಿ ಕಾಣಬಹುದಾಗಿದೆ. ಅನಂತಮೂರ್ತಿಯವರು ಅರಿಯುವ ಈ ವಿಧಾನದಲ್ಲಿ ಪರಂಪರೆ ಪ್ರಧಾನವಾಗುತ್ತದೆ. ಪರಂಪರೆಯನ್ನು ಒಳಗೊಂಡ ಆಧುನಿಕತೆಯ ಗೊಂದಲಗಳಿಗೆ ಬೇರೊಂದು ಮಾರ್ಗವನ್ನು ಹುಡುಕುವ ಚೈತನ್ಯವಾಗಿ ಗಾಂಧಿಯ ರೂಪಕಗಳನ್ನು ಬಳಸುತ್ತಾರೆ. ಅತಿಯಾದ ಆಧುನಿಕತೆಯ ವಿರುದ್ಧ ದನಿಯೆತ್ತುವ ಒಂಟಿಧ್ವನಿಯ ಪ್ರತೀಕವಾಗಿ ಗಾಂಧಿಯು ಪ್ರತಿನಿಧಿತಗೊಂಡಿದ್ದಾರೆ. ಪರಿಪೂರ್ಣಬದುಕಿನ ಹುಡುಕಾಟವನ್ನು ಎರಡು ವೈರುಧ್ಯಗಳನ್ನು ಸೃಷ್ಟಿಸಿ ಚಿಂತನೆಗೆಡೆಮಾಡಿಕೊಡುವ ಮೂಲಕ ಭಾರತೀಯ ಬದುಕನ್ನು ಗ್ರಹಿಸುವ ಕ್ರಮದಲ್ಲಿ ಬದುಕಿನ ಬಹುತ್ವಕ್ಕೆ ಅರ್ಥವನ್ನು ನೀಡುತ್ತಾರೆ.

೧.೨ ಪಾಶ್ಚಾತ್ಯ ಮತ್ತು ಪೌರಾತ್ಯ

ಬ್ರಿಟಿಷ್ ವಸಾಹತುಶಾಹಿ ಆಡಳಿತದಿಂದಾಗಿ ಭಾರತದ ಜನಜೀವನದ ಮೇಲೆ ಪಾಶ್ಚಾತ್ಯ ವಿಚಾರಗಳು ಪ್ರಭಾವ ಬೀರಿದ ಸಂಗತಿ ಚಾರಿತ್ರಿಕವಾಗಿಯೂ ಮುಖ್ಯ ಸಂಗತಿ. ಜನಜೀವನದಲ್ಲಿ ತಲೆದೋರಿದ ಇದರ ಪರಿಣಾಮ ಇಲ್ಲಿನ ಪಾರಂಪರಿಕ ಬದುಕಿನ ಅನೇಕ ಮೌಲ್ಯಗಳನ್ನು ಆಧುನಿಕ ವಿಚಾರಧಾರೆಗಳ ಬೆಳಕಿನಲ್ಲಿ ಒರೆಗೆ ಹಚ್ಚುವುದು ಸಾಧ್ಯವಾಯಿತು. ಸಾಹಿತಿಗಳು ತಮ್ಮ ಸೃಷ್ಟಿಶೀಲ ಬರವಣಿಗೆಯ ಮೂಲಕ ಪಾರಂಪರಿಕ ಮನಸ್ಸು ಹಾಗೂ ಪಾಶ್ಚಾತ್ಯ ಚಿಂತನೆಗಳ ತಾಕಲಾಟಗಳನ್ನು ಚಿತ್ರಿಸಿರುವುದನ್ನು ಕಾಣಬಹುದು. ಕನ್ನಡ ಸಂದರ್ಭದಲ್ಲಿಯೂ ಇಂತಹ ರಚನೆಗಳು ಸಾಕಷ್ಟಿವೆ.

[illegible]

[illegible]

[illegible]

[illegible]

[illegible]

ಪಾಶ್ಚಾತ್ಯರ ಬದುಕಿನ ರೀತಿಗೂ ಪೌರ್ವಾತ್ಯರ ಜೀವನದ ನೀತಿಗೂ ಅಂತರವಿದೆ. ಆಧುನಿಕತೆಯ ಪ್ರಭಾವದಿಂದ ಪರಂಪರಾಗತ ವಿಚಾರಗಳಲ್ಲಿ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುವಾಗ ಸಂಕ್ರಮಣ ಸ್ಥಿತಿಯು ನಿರ್ಮಾಣವಾಗುತ್ತದೆ. ಪಶ್ಚಿಮದಿಂದ ಮಾನವತಾವಾದವನ್ನು ಸ್ವೀಕರಿಸಿದ ಅನಂತಮೂರ್ತಿಯವರು ಸನಾತನ ಮೌಲ್ಯಗಳನ್ನು ಹಾಗೂ ಆಧುನಿಕ ವಿಚಾರಗಳನ್ನು ಇದ್ದಕ್ಕಿದ್ದಂತೆ ಒಪ್ಪಿಕೊಳ್ಳುವುದಿಲ್ಲ. ಇಲ್ಲಿ ಆಧುನಿಕ ಮನಸ್ಸು ಹಾಗೂ ತಾತ್ವಿಕ ಹಿನ್ನೆಲೆಯ ಪ್ರಶ್ನಾತೀತ ಮನಸ್ಸಿನ ನಡುವೆ ತಾಕಲಾಟವಿದೆ ಎಂಬುದನ್ನು ಚಿತ್ರಿಸುತ್ತಾರೆ. ಹೀಗೆ ಪಾಶ್ಚಾತ್ಯ ಮೌಲ್ಯಗಳು ಪೌರ್ವಾತ್ಯ ಸಂಸ್ಕೃತಿಯಲ್ಲಿ ಸೇರಿಕೊಳ್ಳುವಾಗ ಸಂಘರ್ಷ ಹುಟ್ಟಿಕೊಳ್ಳುತ್ತದೆ. ಅನಂತಮೂರ್ತಿಯವರ ಕಥನಗಳಲ್ಲಿ ಪೂರ್ವ ಪಶ್ಚಿಮ ಸಂಸ್ಕೃತಿಗಳ ಮುಖಾಮುಖಿಯಿದೆ. ಪೂರ್ವದ ಜನಜೀವನ ಇಲ್ಲಿಯ ಹಳ್ಳಿ ಜನರ ರೀತಿ ನೀತಿ ಚಿತ್ರಣಗಳ ಮೂಲಕ ವ್ಯಕ್ತವಾದರೆ ಪಶ್ಚಿಮದ ಜೀವನ ದೃಷ್ಟಿ ಪಾಶ್ಚಾತ್ಯೀಕರಣಗೊಂಡ ಭಾರತೀಯರ ಮೂಲಕ ವ್ಯಕ್ತವಾಗುತ್ತದೆ.

ನವ್ಯದ ಸಂದರ್ಭದಲ್ಲಿ ಹೊಸ ಜೀವನ ಕ್ರಮವನ್ನು ಸ್ವೀಕರಿಸಿದ ದೇಶೀಯರು ಪಾಶ್ಚಾತ್ಯ ಶೈಲಿಗೆ ಮಾರುಹೋದರು. ಈ ಸಂಕ್ರಮಣದ ಅವಧಿಯಲ್ಲಿ ದೇಶೀ ಸಂಸ್ಕೃತಿಯ ಪಾರಂಪರಿಕ ಕ್ರಮದಿಂದ ಆಧುನಿಕತೆಯತ್ತ ಸ್ಥಿತ್ಯಂತರವಾಗತೊಡಗಿತು. ಈ ಸಂದರ್ಭದಲ್ಲಿ ನವ್ಯರು ಪಾಶ್ಚಾತ್ಯರ ಚಿಂತನಾಕ್ರಮದ ಮೂಲಕ ದೇಶೀಯ ಸಂಸ್ಕೃತಿಯನ್ನು ಕಟ್ಟುವ ಹಾಗು ತುಲನಾತ್ಮಕವಾಗಿ ಆಲೋಚಿಸುವ ಚಿಂತನೆಯನ್ನು ಕಂಡುಕೊಂಡರು. ಅಂತೆಯೇ ಜೀವನ ವಿಧಾನವು ಇಂತಹ ಚಳುವಳಿಯ ರೂಪದಲ್ಲಿ ಮುಂದುವರಿಯಿತು. ಅನಂತಮೂರ್ತಿಯವರು ನವ್ಯದ ಸಂದರ್ಭದಲ್ಲಿ ಪಾಶ್ಚಾತ್ಯ ಜೀವನ ಶೈಲಿಗೆ ಒಳಗಾಗಿ ಬರೆಯುವ ಕಾಲದಲ್ಲಿ ದೇಶೀಯತೆಯ ಉಳಿವಿನ ಬಗೆಗೆ ತಮಗಿರುವ ಕಾಳಜಿಯನ್ನು ಕಥಾಸಾಹಿತ್ಯದ ಮೂಲಕ ಚಿಂತನೆಗೊಳಪಡಿಸಿದ್ದಾರೆ.

ಪಾಶ್ಚಾತ್ಯ ಹಾಗೂ ಪೌರಾತ್ಯ ವಿಚಾರಧಾರೆಗಳ ಸಂಘರ್ಷದ ದೃಷ್ಟಿಯಿಂದ ಮುಖ್ಯವಾದ ಕತೆ 'ಕ್ಲಿಪ್‌ಜಾಯಿಂಟ್'. ಕೇಶವ ಭಾರತದಲ್ಲಿ ಹುಟ್ಟಿ ಬೆಳೆದವನು. ಇಂಗ್ಲೆಂಡಿನವನಾದ ಸ್ಟೂಆರ್ಟ್‌ನಿಗೆ ಭಾರತದ ಬಗ್ಗೆ ಸುಂದರವಾದ ಕಲ್ಪನೆಗಳಿವೆ. ಭಾರತದ ಕರಾಳ ಸತ್ಯವು ಕೇಶವನಿಗೆ ತಿಳಿದಿದೆ. ಇಂಗ್ಲೆಂಡಿನ ಆಕರ್ಷಕ ಬದುಕಿನ ಇನ್ನೊಂದು ಮುಖದ ಪರಿಚಯ ಸ್ಟೂಆರ್ಟ್‌ನಿಗೆ ಇದೆ. ಕೇಶವ ತಾಯ್ನಾಡಿಗಿಂತ ಪಾಶ್ಚಾತ್ಯ ಬದುಕನ್ನು ಇಷ್ಟಪಡುತ್ತಾನೆ. ಸ್ಟೂಆರ್ಟ್ ಪಾಶ್ಚಾತ್ಯಕ್ಕಿಂತ ಭಾರತೀಯರ ಬದುಕು ಸುಂದರವಾಗಿದೆ ಎನ್ನುತ್ತಾನೆ. ಇಲ್ಲಿ ಪರಸ್ಪರರು ತಮ್ಮದನ್ನು ಬಿಟ್ಟು ಪರರದನ್ನು ಮೆಚ್ಚುತ್ತಾರೆ.

ಚಿಕ್ಕಂದಿನಲ್ಲಿ ತಂದೆಯನ್ನು ಕಳೆದುಕೊಂಡ ಹಿರಿಯ ಮಗ ಕೇಶವನಿಗೆ ಸಂಸಾರದ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿಬರುತ್ತದೆ. ವಿದ್ಯಾರ್ಥಿದೆಸೆಯಲ್ಲಿಯೇ ದುಡಿಯುತ್ತಾ ಓದಿ ಉಪನ್ಯಾಸಕನಾಗುತ್ತಾನೆ. ತಮ್ಮ, ತಂಗಿಯರನ್ನು ಓದಿಸಲು ಹಾಗೂ ಮನೆಯ ಖರ್ಚನ್ನು ನಿಭಾಯಿಸಲು ಕೇಶವ ಟ್ಯೂಷನನ್ನು ಹೇಳಿಕೊಡಲು ಪ್ರಾರಂಭಿಸುತ್ತಾನೆ. ದುಂದುವೆಚ್ಚ ಮಾಡುವ ತಮ್ಮಂದಿರು ಸರಿಯಾಗಿ ಓದುವುದಿಲ್ಲ. ಕೇಶವನ ಅಕ್ಕನ ಮಗಳು ಭಾಗೀರಥಿಯೊಂದಿಗೆ ಮದುವೆ ಮಾಡಬೇಕೆಂಬುದು ತಾಯಿಯ ಇಚ್ಛೆಯಾಗಿದೆ. ಬೇರೆ ಹುಡುಗಿಯನ್ನು ತಂದರೆ ನಾಲ್ಕು ಜನ ಮದುವೆಯಾಗಬೇಕಾದ ತಂಗಿಯರನ್ನು ಹಾಗೂ ತಮ್ಮಂದಿರನ್ನು ಸಹಿಸದೇ ಅವಳು ಬೇರೆ ಮನೆ ಮಾಡಬಹುದೆಂದು ಕೇಶವನ ತಾಯಿ ಭಾವಿಸುತ್ತಾಳೆ. ಭಾಗೀರಥಿಯಾದರೆ ಗದರಿಸಿ ಹದ್ದಿನಲ್ಲಿಟ್ಟುಕೊಳ್ಳಬಹುದೆಂದು ಎಣಿಸುತ್ತಾಳೆ. ಬೋನಸ್‌ನಲ್ಲಿ ಹಣ ಸಿಕ್ಕಾಗ ಮಾಧು ಮನೆಯವರಿಗೆ ಬಟ್ಟೆ ತಂದು ಸಿನಿಮಾ ತೋರಿಸಿ ಒಳ್ಳೆಯವನಾಗುತ್ತಾನೆ. ಸ್ವಕ್ಷೇಮ ದೃಷ್ಟಿಯಿಂದ ತಂಗಿಯರು ಮಾಧು ಹಾಗೂ ಕೇಶವ

[illegible]

[illegible]

[illegible]

[illegible]

ಇಬ್ಬರಿಗೂ ಹೊಂದಿಕೊಂಡು ಹೋಗುತ್ತಾರೆ. ಹೀಗೆ ಭಾರತೀಯ ಸಮಷ್ಠಿ ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸಿದ ಕೇಶವನಿಗೆ ಬದುಕು ಹೊರೆ ಎನಿಸುತ್ತದೆ.

ಬಾಲ್ಯ, ಯೌವನದ ಯಾವುದೇ ಸುಖ ಕಾಣದ ಕೇಶವನಿಗೆ ವೈಯಕ್ತಿಕ ಬದುಕೇ ಇಲ್ಲದಂತಾಗಿ, ಜೀವನ ಬೇಸರ ತರಿಸಿದೆ. ಬೇಜವಾಬ್ದಾರಿ ತಮ್ಮಂದಿರನ್ನು ದಂಡಿಸದ ತಾಯಿಯು, ತನ್ನನ್ನು ಮಾತ್ರ ಸಂಸಾರದ ನಿರ್ವಹಣೆಗಾಗಿ ಕಷ್ಟಪಡು ಎಂದು ಪ್ರೇರಿಸುತ್ತಾಳೆ. ತಮ್ಮಂದಿರಿಗೆ ಬುದ್ಧಿ ಹೇಳಲು ಹೋದರೆ, ನಿನಗೇನು ಅಪ್ಪ ಚೆನ್ನಾಗಿ ಓದಿಸಿದ್ದಾರೆ. ಲೆಕ್ಚರರ್ ಅಂತ ಕೊಬ್ಬು ಎನ್ನುತ್ತಾರೆ. ಕೇಶವ ದುಡಿಯುತ್ತಾ ಕಷ್ಟಪಟ್ಟು ಓದಿದ್ದು ಕುಟುಂಬದವರ ಗಮನಕ್ಕೆ ಬರುವುದಿಲ್ಲ. ಕೇಶವನಿಗೆ ಇದೆಲ್ಲ ಸ್ವಾರ್ಥದ ಜಾಲವೆನಿಸುತ್ತದೆ.

ಕಾಲೇಜಿನಲ್ಲಿ ಒಬ್ಬರನ್ನು ಕಂಡರೆ ಒಬ್ಬರಿಗೆ ಆಗದಂತಹ ಸ್ಥಿತಿಯಿದೆ. ಇಬ್ಬರು ಒಟ್ಟಾದರೆ ಮೂರನೆಯವನ ಬಗ್ಗೆ ಅಪಪ್ರಚಾರ ಮಾಡುತ್ತಾರೆ. ಹಿಂದೆ ಮಾತನಾಡಿಕೊಳ್ಳುವವರನ್ನು, ಅಸೂಯೆಪಡುವವರನ್ನು ಕಂಡು ಇವೆಲ್ಲದರಿಂದ ತಪ್ಪಿಸಿಕೊಳ್ಳಲು ಕೇಶವ ಇಂಗ್ಲೆಂಡಿಗೆ ಬರುತ್ತಾನೆ. ಅಲ್ಲಿ ಸ್ವಲ್ಪ ದಿನಗಳ ನಂತರ ಸ್ಟೂಅರ್ಟ್‌ನ ಪರಿಚಯವಾಗುತ್ತದೆ. ಸಭ್ಯತೆಯ ಹಾಗೂ ಯಾವುದೇ ಜವಾಬ್ದಾರಿಗಳಿಲ್ಲದ ಪಾಶ್ಚಾತ್ಯರ ಸ್ವಚ್ಛಂದದ ಬದುಕು ಕೇಶವನಿಗೆ ಆಕರ್ಷಕವೆನಿಸುತ್ತದೆ.

ಇಂಗ್ಲೆಂಡಿನ ಜೀವನ ಸ್ಟೂಅರ್ಟ್‌ನಿಗೆ ಕೃತಕವೆನಿಸುತ್ತದೆ. ಇಲ್ಲಿನ ಜನ ತಮ್ಮದೇ ಆದ ಪುಟ್ಟ ಲೋಕದಲ್ಲಿ ಜೀವಿಸುತ್ತಾರೆ. ಹದಿನಾರು ವರ್ಷಕ್ಕೆ ಹುಡುಗ ದುಡಿಯಲು ಪ್ರಾರಂಭಿಸಬೇಕು. ಹದಿನೆಂಟು ವರ್ಷಕ್ಕೆ ಮದುವೆಯಾಗಬೇಕು. ಉದ್ಯೋಗ ಸಿಗದಿದ್ದರೆ ನಿರುದ್ಯೋಗ ವೇತನ ಸಿಗುತ್ತದೆ. ಮುದುಕರಾದ ಅಪ್ಪ ಅಮ್ಮನಿಗೆ ವೃದ್ಧಾಶ್ರಮಗಳಿವೆ. ಐಷಾರಾಮದ ವಸ್ತುಗಳನ್ನು ಕೊಳ್ಳುವುದು, ಟಿವಿ ನೋಡುವುದು, ಪಬ್ಬಿಗೆ ಹೋಗಿ ಹರಟೆ ಹೊಡೆಯುವುದು, ಹಾಗೂ ಬೀಚಿಗೆ ಹೋಗುವುದನ್ನು ಬಿಟ್ಟರೆ ಇವರಿಗೂ ಒಟ್ಟು ಜೀವನಕ್ಕೂ ಸಂಬಂಧವಿಲ್ಲ. ಜೀವನವನ್ನು ಪಕ್ವ ಮಾಡುವ ಚಿಂತೆ ಒತ್ತಡ ಯಾವುದೂ ಇಲ್ಲವೆಂದು ತನ್ನ ದೇಶದ ಬಗ್ಗೆ ಸ್ಟೂಅರ್ಟ್ ಬೇಸರಪಡುತ್ತಾನೆ. ಪೌರಾತ್ಯದ ಸಮಷ್ಠಿ ಕುಟುಂಬಗಳಲ್ಲಿನ ವ್ಯಕ್ತಿ ಸಮಾಜದ ನಡುವಿನ ಅವಿನಾಭಾವ ಸಂಬಂಧವನ್ನು ಸ್ಟೂಅರ್ಟ್ ಮೆಚ್ಚುತ್ತಾನೆ.

ಹದಿನಾರು ವರ್ಷಗಳವರೆಗೆ ಟ್ರೇನನ್ನಾಗಲೀ ಎಲೆಕ್ಟ್ರಿಕ್ ದೀಪವನ್ನಾಗಲೀ ಕಂಡಿರದ ಕೇಶವನಿಗೆ ಸ್ಟೂ-ಅರ್ಟ್‌ನದ್ದು ಐಷಾರಾಮದ ಜೀವನವೆನಿಸುತ್ತದೆ. ಹಳ್ಳಿಯಿಂದ ಹಳ್ಳಿಗೆ ಬರಿಗಾಲಲ್ಲಿ ನಡೆದು ಓದಿದ್ದು, ಬಾಲ್ಯ ಯೌವನದ ಯಾವುದೇ ಸುಖ ಕಾಣದಿದ್ದುದು, ಎಲ್ಲವನ್ನು ಕೇಶವ ಸ್ಟೂಅರ್ಟ್‌ನಿಗೆ ಹೇಳುತ್ತಾನೆ. ತಲೆಗೂದಲು ಹಣ್ಣಾಗುತ್ತಿರುವ ವಯಸ್ಸಿನಲ್ಲೂ ಒಂದು ಹುಡುಗಿಯ ಕೈಯನ್ನೂ ಮುಟ್ಟಿಲ್ಲ ಎನ್ನುತ್ತಾನೆ. ಕೇಶವ ಎರಡು ಭಿನ್ನ ಸಂಸ್ಕೃತಿಗಳ ಮೌಲ್ಯಗಳ ಸಂಘರ್ಷದಲ್ಲಿ ಸಿಕ್ಕಿ ಅನುಭವಿಸುವ ಸ್ಥಿತಿ ಶೋಚನೀಯವಾದುದು. ಹೊಸಬಾಳನ್ನು, ಹೊಸಮೌಲ್ಯಗಳನ್ನು ಅಪೇಕ್ಷಿಸಿ, ಇಂಗ್ಲೆಂಡಿಗೆ ಬಂದಿದ್ದನೋ ಅದು ಅಲ್ಲಿ ತನಗೆ ದೊರೆಯಲಾರದು ಎಂಬುದು ಅವನಿಗೆ ಮನದಟ್ಟಾಗುತ್ತದೆ. ಕೇಶವನ ಈ ಮಾತಿಗೆ ಸ್ಟೂಅರ್ಟ್ ಉದ್ದೇಶವಿಲ್ಲದ ಸಲೀಸಾಗಿ ಜಾರಿಬಿಡುವ, ಇಂಗ್ಲೆಂಡಿನ ಜೀವನದಿಂದ ಬೇಸತ್ತಿದ್ದೇನೆ ಎನ್ನುತ್ತಾನೆ. ಬಡತನದ ಅನುಭವವಿಲ್ಲ, ಹಸಿವೆಂದರೆ ಗೊತ್ತಿಲ್ಲ ಹದಿನಾರು ವರ್ಷದಿಂದ ಈವರೆಗೂ ಬೇಕೆನಿಸಿದಾಗಲೆಲ್ಲ ಹೆಣ್ಣಿನ ಸಂಗ ಲಭ್ಯವಾಗಿದೆ. ಕುಡಿದೆ, ತಿಂದೆ, ಮಲಗಿದೆ ಇವೆಲ್ಲಾ ಆಯಿತೆಂದ ಮೇಲೆ ಬದುಕಿನಲ್ಲಿ ಮುಂದೆ ಯಾವ ಹೊಸತನವು ಉಳಿಯುವುದಿಲ್ಲ ಎಂದ ಸ್ಟೂಅರ್ಟ್

ಬಿರುಸು ತಿಕ್ಕಾಟವಿಲ್ಲದೆ, ಇಲ್ಲಿನ ಜೀವನ ಅರ್ಥಹೀನವಾಗಿದೆ. ಅರ್ಥಪೂರ್ಣ ಬದುಕಿಗೆ ಸುಖ ದುಃಖ ಈ ಎರಡೂ ಇರಬೇಕು ಎನ್ನುತ್ತಾನೆ.

ಭಾರತದಿಂದ ಇಂಗ್ಲೆಂಡಿಗೆ ಬಂದ ವಿದ್ಯಾರ್ಥಿಗಳ ಆಸೆಬುರುಕತನದ ಬಗ್ಗೆ ಕೇಶವನಿಗೆ ಬೇಸರವೆನಿಸುತ್ತದೆ. ಸ್ಟೂವರ್ಟ್‌ನಿಗೆ ಇಂಗ್ಲೆಂಡಿನ ಸಭ್ಯತೆಯ ನಾಟಕವು ಹಿಡಿಸುವುದಿಲ್ಲ. ಅವನ ಪ್ರಕಾರ ಇಂಗ್ಲೆಂಡ್ ಸೂಕ್ಷ್ಮ ಅಂತಃಕರಣವನ್ನು ಕಳೆದುಕೊಂಡಿದೆ. ಅನುಭವ ಪರವಾದ ಭಾರತವನ್ನು ಪ್ರೀತಿಸುತ್ತಾನೆ. ಪ್ರತಿಕ್ಷಣವನ್ನು ಮುಂಚಿತವಾಗಿ ಡೈರಿಯಲ್ಲಿ ಬರೆದಿಟ್ಟಂತೆ ಸಾಗುವ ಇಂಗ್ಲೆಂಡಿನ ಜೀವನ ಅತ್ಯಂತ ಸಭ್ಯವಾಗಿದೆ. ಸಂಪೂರ್ಣ ಸ್ವಚ್ಛಂದ ಸಮಾಜವಿದೆ. ಇಲ್ಲಿ ಮಾನವ ಸಂಬಂಧದಲ್ಲಿ ಅನಿವಾರ್ಯವಾದ ನೋವು ಕೊಳಕು ಇಲ್ಲ ಎಂದು ಕೇಶವ ಅಭಿಪ್ರಾಯಪಡುತ್ತಾನೆ. ಹೀಗೆ ಪಾಶ್ಚಾತ್ಯ, ಪೌರಾತ್ಯದ ವಿಚಾರಗಳು ಕೇಶವ ಮತ್ತು ಸ್ಟೂವರ್ಟ್‌ನ ಮೂಲಕ ಕತೆಯಲ್ಲಿ ವ್ಯಕ್ತವಾಗುತ್ತವೆ. ಇಬ್ಬರೂ ತಮ್ಮ ದೇಶದ ಸಂಸ್ಕೃತಿಗಳಲ್ಲಿನ ಭಿನ್ನತೆ, ಕೊರತೆ, ಇತಿಮಿತಿ, ಅತೃಪ್ತಿಗಳನ್ನು ಪರಸ್ಪರ ಹೇಳಿಕೊಳ್ಳುತ್ತಾರೆ. ಇಲ್ಲಿ ಎರಡು ಸಂಸ್ಕೃತಿಗಳ ಮುಖಾಮುಖಿಯನ್ನು ಕಾಣಬಹುದು.

ಅನಂತಮೂರ್ತಿಯವರಿಗೆ ಪಾಶ್ಚಾತ್ಯ ಹಾಗೂ ಪೌರಾತ್ಯ ಇವೆರಡೂ ಸಂಸ್ಕೃತಿಗಳ ಬಗೆಗೆ ಸಮಾನವಾದ ಆಸಕ್ತಿ ಹಾಗೂ ಕುತೂಹಲವಿದೆ. ಅವರೇ ಹೇಳುವಂತೆ ನಾನು ಪರಂಪರೆಯ ಜೊತೆ ಜಗಳವಾಡುವುದು ಹೊರಗಿನವನಾಗಿ ಅಲ್ಲ ಒಳಗಿನವನಾಗಿ ಎನ್ನುವ ಅನಂತಮೂರ್ತಿಯವರ ನಿಲುವು ಕ್ಲಿಪ್‌ಜಾಯಿಂಟ್ ಕತೆಯ ಕೇಶವ ಮತ್ತು ಸ್ಟೂವರ್ಟ್‌ನ ವಿಚಾರಗಳಲ್ಲಿ ವ್ಯಕ್ತವಾಗಿದೆ. ಎರಡೂ ಸಂಸ್ಕೃತಿಗಳಲ್ಲಿ ಕೊಳೆತು ಹೋದ ಅಂಶಗಳ ಜೊತೆಗೆ ಅತ್ಯುತ್ತಮವಾದ ಅಂಶಗಳೂ ಇವೆ ಎಂಬುದನ್ನು ಗುರುತಿಸುತ್ತಾರೆ.

ಸ್ವಸಂಸ್ಕೃತಿಯ ಬಗ್ಗೆ ಅತಿಯಾದ ನಂಬಿಕೆ, ಪರಸಂಸ್ಕೃತಿಯ ಬಗ್ಗೆ ತಿರಸ್ಕಾರ ಇಂತಹ ವಿಭಿನ್ನ ಮನೋಭಾವವನ್ನು 'ರೂತ್ ಮತ್ತು ರಸೂಲ್' ಕತೆಯಲ್ಲಿ ಕಾಣಬಹುದು. ರೂತ್‌ಳಿಗೆ ತನ್ನ ದೇಶದ ನಾಗರಿಕತೆ ಇಷ್ಟವಾಗುವುದಿಲ್ಲ. ಭಾರತೀಯರ ಬದುಕಿನ ರೀತಿಯ ಬಗ್ಗೆ ಅಭಿಮಾನವನ್ನು ಹೊಂದಿದ್ದಾಳೆ. ದಿನೇಶ್ ಪಾಶ್ಚಾತ್ಯ ನಾಗರಿಕತೆಗೆ ಹೊಂದಿಕೊಳ್ಳುತ್ತಾನಾದರೂ ಪೌರಾತ್ಯ ಜೀವನವನ್ನು ಗೌರವಿಸುತ್ತಾನೆ. ಭಾರತೀಯ ಜೀವನಕ್ಕೆ ರೂತ್ ಒಗ್ಗುತ್ತಾಳೊ ಇಲ್ಲವೋ ಎನ್ನುವ ಅನುಮಾನ ರಸೂಲನಿಗಿದೆ. ಇಂಗ್ಲೆಂಡಿನಲ್ಲಿ ಸಾಮಾನ್ಯವೆಂಬಂತೆ ರೂತ್‌ಳ ತಾಯಿಯು ಗಂಡನಿಂದ ವಿವಾಹ ವಿಚ್ಛೇದನ ಪಡೆದ ನಂತರ ಬೇರೆಯವರೊಂದಿಗೆ ಮದುವೆ ಮಾಡಿಕೊಂಡಿದ್ದಳು ತಂದೆಯು ಇನ್ನೊಬ್ಬಳನ್ನು ಕಟ್ಟಿಕೊಂಡಿದ್ದನು. ತಾಯಿ, ತಂದೆಯ ಲಿಬರಲ್ ಧೋರಣೆಯನ್ನು ಒಪ್ಪದ ರೂತಳು ಕಂದಾಚಾರದ ಮುದುಕನಾದರೂ ಕಪಟಿಯಲ್ಲದ ತನ್ನಜ್ಜನನ್ನು ಇಷ್ಟಪಡುತ್ತಾಳೆ. ಕಾಲಾಂತರದಲ್ಲಿ ಅಜ್ಜನು ಸತ್ತಾಗ ಅನಾಥಳಾಗುತ್ತಾಳೆ. ಕುಟುಂಬ ಸಂಬಂಧಕ್ಕೆ ಬೆಲೆಯಿಲ್ಲದ ಇಂಗ್ಲೆಂಡಿನ ಜೀವನ ಅವಳಿಗೆ ಹಿಡಿಸುವುದಿಲ್ಲ.

ಭಾರತೀಯ ಯುವಕ ದಿನೇಶ್‌ನಿಂದ ಸಮಷ್ಠಿ ಕುಟುಂಬದ ವಿಚಾರವು ರೂತ್‌ಳಿಗೆ ತಿಳಿಯುತ್ತದೆ. ದಿನೇಶನನ್ನು ಪ್ರೀತಿಸಿದ ರೂತ್‌ಳು ಅವಿಭಕ್ತ ಕುಟುಂಬದ ಹೊಂದಾಣಿಕೆಯ ಜೀವನವನ್ನು ಇಚ್ಛಿಸುವುದರಿಂದ ಅವನನ್ನೇ ಮದುವೆಯಾಗಲು ಬಯಸುತ್ತಾಳೆ. ದಿನೇಶನ ತಾಯಿಗೆ ಇಂಗ್ಲಿಷ್ ಬರುವುದಿಲ್ಲವೆಂದು ಗೊತ್ತಾದಾಗ ಹಿಂದೂಸ್ತಾನಿಯನ್ನು ಕಲಿಯುತ್ತಾಳೆ. ಅವನನ್ನು ಕುಟುಂಬದಿಂದ ಬೇರೆ ಮಾಡಲು ಇಷ್ಟಪಡುವುದಿಲ್ಲ. ವಿವಾಹ

[illegible]

[illegible]

[illegible]

[illegible]

[illegible]

[illegible]

ಸಂಬಂಧದ ನಿರ್ಧಾರದ ಸಂದರ್ಭದಲ್ಲಿ ರೂತ್‌ಳು ಭಾರತದಲ್ಲಿ ಒಂದು ವರ್ಷ ನೆಲೆಸಿ ಆಮೇಲೆ ಅಲ್ಲಿ ಬದುಕುವುದು ಸಾಧ್ಯವೆನಿಸಿದರೆ ದಿನೇಶನನ್ನು ಮದುವೆಯಾಗಬಹುದೆಂದು ಆಲೋಚಿಸುತ್ತಾಳೆ.

ಭಾರತದಿಂದ ಇಂಗ್ಲೆಂಡಿಗೆ ವಿದ್ಯಾಭ್ಯಾಸಕ್ಕಾಗಿ ಬಂದ ದಿನೇಶನು ರೂತ್‌ಳನ್ನು ಪ್ರೀತಿಸುತ್ತಾನೆ. ಪಂಜಾಬಿನ ಸಂಪ್ರದಾಯಸ್ಥ ಕುಟುಂಬದ ಜಮೀನ್ದಾರರ ಮಗನಾದ ಅವನಿಗೆ ತಂದೆಯೆಂದರೆ ಭಕ್ತಿಯಿದೆ. ತಾನು ಬೇರೆ ದೇಶದ, ಅನ್ಯ ಸಂಸ್ಕೃತಿಯವಳನ್ನು ಮದುವೆಯಾದರೆ ಭವಿಷ್ಯದಲ್ಲಿ ತಂಗಿಯ ಮದುವೆಗೆ ಸಂಪ್ರದಾಯವು ಅಡ್ಡಿ ಆತಂಕವನ್ನು ತರುತ್ತದೆಂಬ ಪೂರ್ವಾಲೋಚನೆಯಿಂದ ಹುಟ್ಟಿ ಬೆಳೆದ ಊರಿನಲ್ಲಿ ಮದುವೆಯಾಗಲು ಹೆದರುತ್ತಾನೆ. ಇಂಗ್ಲೆಂಡಿನಲ್ಲೇ ಮದುವೆಯಾಗೋಣ ಎನ್ನುತ್ತಾನೆ. ಅದಕ್ಕೆ ನಿನ್ನ ದೇಶದಲ್ಲಿ ನಿನ್ನ ಜನರ ಜೊತೆ ಬಾಳಲು ಸಾಧ್ಯವೆನಿಸಿದರೆ ಮಾತ್ರ ನಿನ್ನನ್ನು ಮದುವೆಯಾಗುತ್ತೇನೆಂದು ರೂತ್ ಹೇಳುತ್ತಾಳೆ. ಪರಸ್ಪರರಲ್ಲಿನ ಪಾಶ್ಚಾತ್ಯ ಪೌರಾತ್ಯ ಮನೋಭಾವವು ಸಂಘರ್ಷವನ್ನು ಹುಟ್ಟು ಹಾಕಿದೆ.

ರೂತ್ ನ ಎಲ್ಲ ಕಷ್ಟ, ಸುಖವನ್ನು ರಸೂಲ್ ಹತ್ತಿರದಿಂದ ಕಂಡವನು. ರೂತ್‌ಳನ್ನು ಭಾರತಕ್ಕೆ ಕಳುಹಿಸುವುದು ಅವನಿಗೆ ಇಷ್ಟವಿಲ್ಲ. ಅನ್ಯ ದೇಶದಲ್ಲಿ ಅವಳು ಹೊಂದಿಕೊಳ್ಳಲಾರಳೆಂಬ ಅನುಮಾನವಿದೆ. ಆದಾಗ್ಯೂ ದಿನೇಶ್‌ನ ಸ್ವಭಾವಕ್ಕೆ ಹತ್ತಿರದವನಾದ ಖಾನ್ ನನ್ನು ರಸೂಲನೇ ರೂತ್‌ಳಿಗೆ ಹಿಂದೂಸ್ತಾನಿ ಕಲಿಸಲೆಂದು, ಪರಿಚಯಿಸುತ್ತಾನೆ. ಖಾನನನ್ನು ಅವಳು ಪ್ರೀತಿಸಿದರೆ, ಇಬ್ಬರ ಪ್ರೀತಿಯೂ ವಿಫಲವಾಗಿ ಅವಳು ಪಕ್ವವಾಗುತ್ತಾಳೆ ಎಂದುಕೊಳ್ಳುತ್ತಾನೆ. ರೂತ್‌ಳು ಇಂಡಿಯಾಕ್ಕೆ ಹೋದರೆ ದುರಂತವಾಗುತ್ತದೆಂದು ಭಾವಿಸಿದ ರಸೂಲನು ಮದುವೆಗೆ ಅಡ್ಡಿಪಡಿಸುತ್ತಾನೆ.

ಭಾರತಕ್ಕೆ ರೂತ್ ಬರುವ ನಿರ್ಧಾರದ ಕೇಬಲ್ ತಲುಪಿದ ತಕ್ಷಣ ದಿನೇಶ್ ಇಂಗ್ಲೆಂಡಿಗೆ ಬರುತ್ತಾನೆ. ಅಲ್ಲಿ ಭಾರತೀಯನಾದ ನಿರೂಪಕನ ಪರಿಚಯವಾಗುತ್ತದೆ. ತನ್ನ ಮತ್ತು ರೂತ್‌ಳ ಸಂಬಂಧದ ಬಗ್ಗೆ ಅವನಿಗೆ ಹೇಳುತ್ತಾನೆ. ದಿನೇಶನ ಇಚ್ಛೆಯಂತೆ ನಿರೂಪಕ ರೂತ್‌ಳಿಗೆ ಭಾರತೀಯ ಬದುಕಿನ ನಕಾರಾತ್ಮಕ ಸಂಗತಿಗಳನ್ನು ಹೇಳುತ್ತಾನೆ. ಇಂಡಿಯಾದ ಬದುಕಿನ ಕ್ಷುಲ್ಲಕತೆಯನ್ನು ಎದುರಿಸಲಾರದೆ ನೀನು ಕಂಗಾಲಾಗಿ ಬಿಡುತ್ತೀಯ ಹೊಟ್ಟೆಗಿಲ್ಲದೆ ನರಳುವವರ ಮಧ್ಯೆ ಮೆರೆಯುವ ಡಾಂಭಿಕರೂ ಅಲ್ಲಿದ್ದಾರೆ. ಹಾಗೂ ಧೂಳು ತುಂಬಿದ ರಸ್ತೆಗಳು, ಬಿಸಿಲಿನಲ್ಲಿ ತಲೆ ಕೆದರಿ ಕೂತ ಬೆತ್ತಲೆ ಮಕ್ಕಳ ನಡುವೆ ನೀನು ಸೋಲುವುದು ಖಚಿತವೆನ್ನುತ್ತಾನೆ. ಇದಾವುದಕ್ಕೂ ತನ್ನ ನಿರ್ಧಾರವನ್ನು ಬದಲಿಸದ ರೂತ್ ಗಂಭೀರವಾಗಿದ್ದಳು. ರಸೂಲ್, ದಿನೇಶ್ ಹಾಗೂ ನಿರೂಪಕ ಇಂಗ್ಲೆಂಡಿನಲ್ಲೇ ಅವಳನ್ನು ಇರಿಸಲು ಮಾಡುವ ಪ್ರಯತ್ನವು ವ್ಯರ್ಥವಾಗುತ್ತದೆ.

ಈ ಕತೆಯಲ್ಲಿ ಪಾಶ್ಚಾತ್ಯ ಹಾಗೂ ಪೌರಾತ್ಯರ ಬದುಕಿನ ವಿಧಾನಗಳಲ್ಲಿ ವ್ಯತ್ಯಾಸವು ಕಂಡು ಬರುತ್ತದೆ. ವಿಭಿನ್ನ ನಾಗರಿಕತೆಗಳ ವಿಚಾರಗಳನ್ನು ತಿಳಿದ ರೂತ್‌ಳು ಭಾರತೀಯರ ಆದರ್ಶ ದಾಂಪತ್ಯದ ಬಗ್ಗೆ ಗೌರವವನ್ನು ಹೊಂದಿರುತ್ತಾಳೆ. ಅವಿಭಕ್ತ ಕುಟುಂಬದ ವ್ಯವಸ್ಥೆಗೆ ಮನಸೋತು ದಿನೇಶನನ್ನು ಮದುವೆಯಾಗಲು ಇಚ್ಛಿಸುತ್ತಾಳೆ. ಸಂಪ್ರದಾಯಸ್ಥ ಕುಟುಂಬದಲ್ಲಿ ಹುಟ್ಟಿ ಬೆಳೆದ ದಿನೇಶನು ಭಾರತವನ್ನು ಬಿಟ್ಟು ಇಂಗ್ಲೆಂಡಿನಲ್ಲಿ ಜೀವಿಸುವುದಾದರೆ ಮಾತ್ರ ರೂತಳನ್ನು ಮದುವೆಯಾಗಬಹುದೆಂದು ತೀರ್ಮಾನಿಸುತ್ತಾನೆ. ನಿರೂಪಕ ಹಾಗೂ ರಸೂಲ್ ತಮ್ಮ ಸಂಸ್ಕೃತಿಗಳನ್ನು ಪರೋಕ್ಷವಾಗಿ ಬಿಟ್ಟುಕೊಡದೇ ವಿವಾಹ ಸಂಬಂಧವನ್ನು ಮುರಿಯಲು ಉತ್ತೇಜಿಸುತ್ತಾರೆ. ಅವಿಭಕ್ತ ಕುಟುಂಬದಲ್ಲಿ ಬದುಕಿ ಅಲ್ಲಿನ ಹೊಸತನದ ಅನುಭವಗಳನ್ನು ಪಡೆಯಬೇಕೆಂಬ ಹಂಬಲ ರೂತಳಿಗಿದೆ. ಅವಿಭಕ್ತ ಕುಟುಂಬದಲ್ಲಿಯೇ ಹುಟ್ಟಿ ಬೆಳೆದ ದಿನೇಶನಿಗೆ ಬಾಳ ಸಂಗಾತಿಯೊಂದಿಗೆ ಪ್ರತ್ಯೇಕವಾಗಿ ಪರರಾಷ್ಟ್ರದಲ್ಲಿ

[illegible]

[illegible]

[illegible]

[illegible]

[illegible]

ಜೀವಿಸಬೇಕೆಂಬ ಬಯಕೆಯಿದೆ. ಹೀಗೆ ಪಾಶ್ಚಾತ್ಯ ಹಾಗೂ ಪೌರಾತ್ಯ ವಿಚಾರಗಳಲ್ಲಿನ ಭಿನ್ನತೆಯೊಳಗೆ ಸಂಘರ್ಷವಿದೆ.

ಒಂದು ಸಂಸ್ಕೃತಿಯ ವಿಚಾರದ ಮೇಲೆ ಇನ್ನೊಂದು ಸಂಸ್ಕೃತಿಯ ವಿಚಾರವು ನಡೆಸುವ ಪೈಪೋಟಿಯನ್ನು 'ಆಕ್ರಮಣ'ಕತೆಯಲ್ಲಿ ಕಾಣಬಹುದು. ಭಾರತೀಯನಾದ ನಿರೂಪಕನು ಸೆಮಿನಾರ್‌ಗೆಂದು ಭೂಪಾಲಿಗೆ ಹೋಗಿರುತ್ತಾನೆ. ಅಲ್ಲಿನ ಬಾರ್‌ನಲ್ಲಿ ಆಕಸ್ಮಿಕವಾಗಿ ವಿದೇಶಿಯರಾದ ಶೀಲ ಮತ್ತು ಟಾಮ್ ದಂಪತಿಗಳ ಪರಿಚಯವಾಗುತ್ತದೆ. ಇವರಿಬ್ಬರೂ ಒಂದು ದೇಶವನ್ನು ಹೊಗಳುತ್ತ ಮತ್ತೊಂದು ದೇಶವನ್ನು ತೆಗಳುತ್ತ ಪಾಶ್ಚಾತ್ಯ ಪೌರಾತ್ಯ ವಿಚಾರಗಳ ಮೇಲೆ ಆಕ್ರಮಣ ಮಾಡುತ್ತಾರೆ. ತಾಯ್ನಾಡಿನ ಬಗ್ಗೆ ಇರುವ ಅಕ್ಕರೆಯು ಅನ್ಯ ದೇಶದ ಮೇಲೆ ಇರುವುದಿಲ್ಲವೆಂಬ ಮನೋಭಾವನೆಯನ್ನು ಪ್ರಕಟಿಸಲು ಗಂಡ, ಹೆಂಡತಿ ನಾಟಕೀಯವಾಗಿ ಜಗಳವಾಡುತ್ತಾರೆ. ಟಾಮ್ ಬ್ರಿಟಿಷ್‌ನವನಾದರೆ, ಶೀಲ ಐರಿಷ್‌ನವಳು. ಪೌರಾತ್ಯನಾದ ನಿರೂಪಕ ಪಾಶ್ಚಾತ್ಯರ ವರ್ತನೆಯನ್ನು ಕಂಡು ತಬ್ಬಿಬ್ಬಾಗುತ್ತಾನೆ. ಈ ದಂಪತಿಗಳ ನಡುವೆ ಪ್ರೇಕ್ಷಕನಾಗಬೇಕೆ? ಚೆಂಡಾಟದ ನಡುವಿನ ನೆಟ್ಟಾಗಬೇಕೆ? ಎಂದು ದ್ವಂದ್ವಕ್ಕೊಳಗಾಗುತ್ತಾನೆ. ಐರಿಷ್ ಮಂದಿ ಕುಡುಕರು, ಈ ಜನ ಶುದ್ಧವಾದ ಇಂಗ್ಲಿಷ್ ಮಾತನಾಡಲಾರರು ಹಾಗೂ ಕೆಲಸದಲ್ಲಿ ಆಸಕ್ತಿಯಿಲ್ಲದ ಸೋಮಾರಿಗಳೆಂದು ಟಾಮ್ ಜರಿಯುತ್ತಾನೆ. ಶೀಲ ಬ್ರಿಟಿಷ್‌ನವನಾದ ಟಾಮ್‌ಗೆ ಕಲ್ಪನೆಯೆಂಬುದಿಲ್ಲ, ಸ್ಪಷ್ಟವಾದ ಉಚ್ಚಾರಣೆ ಈ ಜನಕ್ಕೆ ಇಲ್ಲ ಎನ್ನುತ್ತಾಳೆ. ಇವರಿಬ್ಬರ ಭಿನ್ನಾಭಿಪ್ರಾಯಗಳನ್ನು ಕೇಳಿದ ನಿರೂಪಕ ಶೀಲಳನ್ನು ಐರಿಷ್ ಕಾವ್ಯವೆಂದೂ ಟಾಮ್‌ನನ್ನು ಬ್ರಿಟಿಷ್ ಗದ್ಯವೆಂದೂ ಗುರುತಿಸುತ್ತಾನೆ.

ಇಂಗ್ಲೆಂಡ್ ಮತ್ತು ಐರ್ಲೆಂಡ್ ಜನತೆಯ ಮಧ್ಯೆ ಕಂಡು ಬರುವ ವ್ಯತ್ಯಾಸವು ಶೀಲ, ಟಾಮ್ ದಂಪತಿಗಳ ಸಂಭಾಷಣೆಯಲ್ಲಿ ವ್ಯಕ್ತವಾಗಿದೆ. ವಿದೇಶಿ ದಂಪತಿಗಳ ಸಂಬಂಧದ ಎಳೆಗಳನ್ನು ಬಿಡಿಸುತ್ತಾ ಹೋದಂತೆ ಒಬ್ಬರ ವ್ಯಕ್ತಿತ್ವದ ಮೇಲೆ ಇನ್ನೊಬ್ಬರು ನಡೆಸುವ ಆಕ್ರಮಣವನ್ನು ನಿರೂಪಕ ಕಾಣುತ್ತಾನೆ. ಐರಿಷ್ ಜನರು ಜಗಳಗಂಟರೆಂದು ನಿರೂಪಕನಿಗೆ ಟಾಮ್ ಹೇಳುತ್ತಾನೆ. ಶೀಲ ಟಾಮನಿಗೆ ಹಿಡಿಸದ ಸಿಕಂದರಾಬಾದ್‌ನ ಮೇಜರ್ ನಾಯರ್‌ನ ವಿಚಾರವನ್ನು ಹೇಳುತ್ತಾಳೆ. ಇದರಿಂದ ಟಾಮ್‌ನಿಗೆ ಬೇಸರವಾಗುತ್ತದೆ. ಗಂಡನ ಅಸಹನೆಯನ್ನು ಕಂಡ ಶೀಲ ಕಲ್ಪನೆಯಿಲ್ಲದ ಇಂಜಿನಿಯರ್‌ದು ಸ್ಟುಪಿಡ್ ಬುದ್ಧಿ ಎನ್ನುತ್ತಾಳೆ. ಆಗ ಟಾಮ್ ಮೂರು ಮಕ್ಕಳ ತಾಯಿಯಾದ ನಿನಗೀಗ ನಲವತ್ತು ವರ್ಷ ನಾಯರ್ ಇನ್ನೂ ಚಿಕ್ಕವನು ಎನ್ನುತ್ತಾನೆ. ನಿರೂಪಕ ನನಗೂ ನಲವತ್ತು ವರ್ಷ ಆದರೆ ಶೀಲ ತುಂಬಾ ಯಂಗ್ ಆಗಿ ಕಾಣಿಸುತ್ತಾಳೆ ಎನ್ನುತ್ತಾನೆ.

ಐರ್ಲೆಂಡಿನ ಜನರಿಗೆ ಸಂಗೀತ ಹಾಗೂ ಕುಣಿತದ ಬಗ್ಗೆ ಒಲವಿದೆ, ಭಾರತೀಯರಂತೆ ನಾವೂ ಕಲಾಪ್ರಿಯರು ಎಂದು ತನ್ನ ದೇಶದ ಬಗ್ಗೆ ಶೀಲ ಅಭಿಮಾನ ವ್ಯಕ್ತಪಡಿಸುತ್ತಾಳೆ. ನನ್ನ ತಾಯಿ ಸತ್ತ ಸಂದರ್ಭದಲ್ಲಿ ಟಾಮ್ ನನಗೆ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಬಿಡಲಿಲ್ಲ ಎಂದು ಶೀಲ ದೂರುತ್ತಾಳೆ. ಸಂಸಾರ, ಮಕ್ಕಳು ಈ ಗೋಜಲುಗಳನ್ನು ಬಿಟ್ಟಿದ್ದರೆ ಸಂಗೀತಗಾರಳಾಗುತ್ತಿದ್ದೆ ಎನ್ನುತ್ತಾಳೆ. ನಿನ್ನ ಮಲತಂದೆಯ ನಡವಳಿಕೆ ಸರಿಯಿಲ್ಲವೆಂದು ನೀನೇ ಹೇಳಿರುವುದರಿಂದ ನಾನು ಕಳುಹಿಸಲಿಲ್ಲ ಎಂದು ಟಾಮ್ ಹೇಳುತ್ತಾನೆ. ಇಂಜಿನಿಯರ್‌ನಾಗಿರದಿದ್ದರೆ ಬೆಟ್ಟಗಳನ್ನು ಹತ್ತುತ್ತಿದ್ದೆ ಎನ್ನುತ್ತಾನೆ. ವೇಲ್ಸ್ ಬೆಟ್ಟ ಹತ್ತುವಾಗ ತಮ್ಮಿಬ್ಬರ ಪರಿಚಯವಾಯಿತು ಎಂದು ಶೀಲ ಗೆಲುವಿನಿಂದ ಹೇಳುತ್ತಾಳೆ. ಹಾಡುತ್ತಾಳೆಂದು ಇವಳನ್ನು ಒಲಿದದ್ದು ತನ್ನ

ಮೂರ್ಖಘಳಿಗೆ ಎಂದ ಟಾಮ್‌ನ ಮಾತಿಗೆ ಶೀಲ ತನ್ನದೂ ಸಹ ಮೂರ್ಖ ಘಳಿಗೆಯೇ ಎನ್ನುತ್ತಾಳೆ. ಪಾಶ್ಚಾತ್ಯ ದಂಪತಿಗಳ ಜಗಳವನ್ನು ಕಂಡ ನಿರೂಪಕ ತಟಸ್ಥನಾಗುತ್ತಾನೆ.

ಶೀಲ ಸುಂದರಿ, ಅವಳನ್ನು ನಾಲ್ಕು ಜನ ಯುವಕರು ಇಷ್ಟಪಟ್ಟರೂ ಅವಳು ನನ್ನನ್ನು ಮದುವೆಯಾದಳು. ಅವಳಿಗೆ ಒಳ್ಳೆಯ ಅಭಿರುಚಿಯಿದೆ. ಸಂಗೀತ, ಕಾವ್ಯ ಎಲ್ಲದರಲ್ಲೂ ಆಸಕ್ತಿಯಿದೆ. ಎಂದು ಟಾಮ್ ಶೀಲಳ ಅನುಪಸ್ಥಿತಿಯಲ್ಲಿ ಅವಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾನೆ. ಮೊದಲು ಐರಿಷ್‌ನವರನ್ನು ಟೀಕಿಸುತ್ತಿದ್ದ ಅವನು ಇದ್ದಕ್ಕಿದ್ದಂತೆ ಬ್ರಿಟಿಷ್ ಜನಕ್ಕೆ ಬಾಳಸಂಗಾತಿಯ ಆಯ್ಕೆಯ ಅಭಿರುಚಿ ಇರುವುದಿಲ್ಲವೆಂದು ತನ್ನ ತಾಯ್ನಾಡನ್ನು ಕುರಿತು ವಿಮರ್ಶಿಸುತ್ತಾನೆ. ನಿರೂಪಕನು ಶೀಲಳು ಹತಾಶ ಹೆಣ್ಣಿನಂತೆ ಕಾಣುತ್ತಾಳೆಂದಾಗ ಟಾಮ್‌ನು ನನ್ನಲ್ಲಿಯೇ ಅವಳಿಗೆ ಸುಖವಿದೆ ಎನ್ನುತ್ತಾನೆ. ಟಾಮ್ ಇಲ್ಲದಿರುವಾಗ ನಿರೂಪಕನು ಶೀಲಳನ್ನು ತನ್ನತ್ತ ಆಕರ್ಷಿಸಲು ಪ್ರಯತ್ನಿಸುತ್ತಾನೆ.

ತುಂಬಾ ಜಾಣನಾದ ಟಾಮ್‌ನಿಗೆ ಮಕ್ಕಳೆಂದರೆ ಪಂಚಪ್ರಾಣ ಎನ್ನುವ ಶೀಲ ಗಂಡನ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾಳೆ. ಪಾಶ್ಚಾತ್ಯಳಾದ ಶೀಲಳಿಗೆ ಭಾರತೀಯ ಸಂಸ್ಕೃತಿಯ ಬಗ್ಗೆ ಗೌರವವಿದೆ. ವಿದೇಶಿ ಹೆಣ್ಣಿನ ಸಲುಗೆಯನ್ನು ಕೆಲವು ಭಾರತೀಯರು ಅಪಾರ್ಥ ಮಾಡಿಕೊಳ್ಳುತ್ತಾರೆ ಎನ್ನುತ್ತಾಳೆ. ಹಳ್ಳಿಯವನಾದ ನಾನು ಹದಿನಾರನೇ ವಯಸ್ಸಿನವರೆಗೂ ರೈಲು, ವಿದ್ಯುತ್ತನ್ನು ಕಂಡಿರಲಿಲ್ಲ. ಹುಡುಗನಾಗಿದ್ದಾಗ ತುಂಬಾ ಆಚಾರವಂತನಾಗಿದ್ದೆ. ಆಮೇಲೆ ಜನಿವಾರವನ್ನು ಕಿತ್ತೆಸೆದೆ. ಹೀಗೆ ಸಂಪ್ರದಾಯವನ್ನು ಪರಿಪಾಲಿಸುವ ಭಾರತೀಯರಲ್ಲಿ ತನ್ನಂಥ ಕೆಲವರು ಸಂಪ್ರದಾಯವನ್ನೇಕೆ ಬಿಡುತ್ತಿದ್ದಾರೆಂಬ ಚಿಂತನೆಯು ಶತಮಾನಗಳ ಕಾಲ ಭಾರತವನ್ನಾಳಿದ ಬ್ರಿಟಿಷರಿಗಿದೆ ಎಂದು ನಿರೂಪಕ ಹೇಳುತ್ತಾನೆ. ಬ್ರಿಟನ್‌ನನ್ನು ಜರಿಯುವ ಐರಿಷ್‌ನವರು, ಅಲ್ಲಿಯೇ ವಾಸವಾಗಿರುವುದನ್ನು ಟಾಮ್ ಟೀಕಿಸುತ್ತಾನೆ. ಬ್ರಿಟಿಷರು ತಮ್ಮನ್ನು ತುಳಿಯುತ್ತಾರೆಂಬ ಭಾವನೆಯು ಐರ್ಲೆಂಡಿನವರಿಗಿದೆ. ವ್ಯಕ್ತಿಗೆ ತನ್ನ ದೇಶದ ಬಗ್ಗೆ ಅಭಿಮಾನವಿರುತ್ತದೆ. ಯಾವುದೇ ಕಾರಣಕ್ಕೂ ತನ್ನತನವನ್ನು ಬಿಟ್ಟುಕೊಡುವುದಿಲ್ಲ ಎಂಬುದನ್ನು ಇಲ್ಲಿನ ಪಾತ್ರಗಳು ತಿಳಿಸುತ್ತವೆ. ಟಾಮ್ ಮತ್ತು ಶೀಲಾಳಿಗೆ ತಮ್ಮ ತಮ್ಮ ದೇಶದ ಸಂಸ್ಕೃತಿಯೇ ಉತ್ತಮವಾದುದೆಂಬ ಭಾವನೆಯಿದೆ. ಈ ವಿಭಿನ್ನ ಮನೋಧರ್ಮವು ಸಂಘರ್ಷಕ್ಕೆ ಕಾರಣವಾಗಿದೆ. ಪ್ರತಿಯೊಬ್ಬ ವ್ಯಕ್ತಿಗೂ ತನ್ನ ದೇಶದ ಬಗ್ಗೆ ಅಭಿಮಾನವಿರುತ್ತದೆ. ಕೆಲವೊಂದು ಸಲ ಅತಿಯಾದ ಅಭಿಮಾನವು ದುರಭಿಮಾನಕ್ಕೆ ದಾರಿಮಾಡಿಕೊಡುತ್ತದೆ. ಇಂತಹ ಸಂದರ್ಭದಲ್ಲಿ ವ್ಯಕ್ತಿಯು ಕುರುಡು ನೀತಿಯನ್ನು ಅನುಸರಿಸುತ್ತಾನೆ. ತನ್ನ ದೇಶದ ಸಂಸ್ಕೃತಿಯೇ ಶ್ರೇಷ್ಟ ಇತರರದು ಕನಿಷ್ಟ ಎನ್ನುವ ಮಟ್ಟಕ್ಕೂ ತಲುಪುತ್ತಾನೆ. ಇಲ್ಲಿ ಟಾಮ್ ಮತ್ತು ಶೀಲ ದಂಪತಿಗಳು ಈ ರೀತಿಯ ವ್ಯಕ್ತಿತ್ವವನ್ನು ಬೆಳೆಸಿಕೊಂಡವರಾಗಿದ್ದಾರೆ. ಹೀಗಾಗಿ ವ್ಯಕ್ತಿಗೆ ದೇಶದ ಬಗ್ಗೆ ಅಭಿಮಾನವಿರಬೇಕೇ ಹೊರತು ದುರಭಿಮಾನವಲ್ಲ ಎಂಬುದನ್ನು ಕತೆ ಪರೋಕ್ಷವಾಗಿ ಸೂಚಿಸುತ್ತದೆ.

ಭಾರತೀಯ ಸಂಸ್ಕೃತಿಯ ಪರಂಪರಾಗತ ಮೌಲ್ಯಗಳು ಪರೀಕ್ಷೆಗೊಳಗಾಗಿರುವುದನ್ನು 'ಅಕ್ಕಯ್ಯ' ಕತೆಯಲ್ಲಿ ಕಾಣಬಹುದು. ಶ್ರೀನಿವಾಸನಲ್ಲಿ ಬಾಲ್ಯದ ಕಹಿ ಅನುಭವಗಳನ್ನು ದಾಟುವ ಪ್ರಯತ್ನವಿದೆ. ಹಿರಿಯ ಅಕ್ಕನು ಭಾರತೀಯ ಸಂಸ್ಕೃತಿಯ ಮತಶ್ರದ್ಧೆಗೆ ಬಲಿಯಾಗಿದ್ದಾಳೆ. ಭಾರತದಲ್ಲಿ ಹುಟ್ಟಿ ಬೆಳೆದು ಅಕ್ಕಯ್ಯನ ನಂಬಿಕೆ, ಬದುಕಿನ ಶೈಲಿಯನ್ನು ಕಂಡ ತಮ್ಮನು ಅನುಕಂಪ ಪಡುತ್ತಾನೆ. ಆಧುನಿಕತೆಯನ್ನು ಅನುಸರಿಸಿ ಪಾಶ್ಚಾತ್ಯ ಬದುಕನ್ನು ಮೆಚ್ಚಿಕೊಂಡಿದ್ದ ಶ್ರೀನಿವಾಸನಿಗೆ ಪ್ರಾರಂಭದಲ್ಲಿ ಹೆಮ್ಮೆಯೆನಿಸಿತ್ತು. ಪಾಶ್ಚಾತ್ಯ ಬದುಕಿನಲ್ಲೂ

ಹುಸಿಯಾದ ಕೆಲವು ಅರ್ಥಗಳಿವೆ ಎಂದು ನಂತರ ತಿಳಿಯುತ್ತದೆ. ಹೀಗೆ ಪೌರಾತ್ಯ ಹಾಗೂ ಪಾಶ್ಚಾತ್ಯ ವಿಚಾರಗಳ ವಿಶ್ಲೇಷಣೆಗೆ ಒಳಗಾದ ಶ್ರೀನಿವಾಸನು ಸಂಘರ್ಷದಲ್ಲಿ ಸಿಲುಕಿಕೊಳ್ಳುತ್ತಾನೆ. ಆಧುನಿಕತೆಯಿಂದ ಪೋಸ್ಟ್ ಮಾಡರ್ನಿಸ್ಟ್ ಆಗಿ ಹಿಂದಕ್ಕೆ ಹೋಗಲಾರದೆ ಪ್ರಪಂಚ ಸುಳ್ಳು ಅಂತ ಸಾಧಿಸುವ ನಿಯೋಕಲೋನಿಯಸ್ಟ್ ಕೂಡ ಆಗದೆ ದ್ವಂದ್ವಕ್ಕೊಳಗಾಗುತ್ತಾನೆ.

ಶ್ರೀನಿವಾಸ ಹಾಗೂ ಆತನ ಕಥೆಗಾರ ಸ್ನೇಹಿತ ಈ ಇಬ್ಬರೂ ಫಿಲಿಡೆಲ್ಫಿಯಾದಲ್ಲಿ ಭಾರತೀಯ ತತ್ವಪರಂಪರೆಯ ಬದುಕನ್ನು ಅನುಸರಿಸುವ ಅಕ್ಕಯ್ಯನ ರೀತಿಯನ್ನು ಪರೀಕ್ಷಿಸುತ್ತಾರೆ. ಜೊತೆಗೆ ತಾವು ಕಳೆದುಕೊಂಡದ್ದೇನೆಂಬುದನ್ನು ಚಿಂತಿಸುತ್ತಾರೆ. ಪ್ರಾಚೀನ ಹಾಗೂ ಆಧುನಿಕತೆಯ ಮಧ್ಯೆ ಮಾನವೀಯತೆ ಮತ್ತು ಕ್ರೌರ್ಯದ ಕುರಿತು ಕತೆಯು ತುಯ್ದಾಡುತ್ತದೆ. ಜೀವನದಲ್ಲಿ ತಾನು ಬದಲಾಗಿ ಕಳೆದುಕೊಂಡದ್ದೆಷ್ಟು ಹಾಗೂ ಪಡೆದದ್ದೆಷ್ಟು ಎಂಬ ಆಲೋಚನೆಯು ಶ್ರೀನಿವಾಸನನ್ನು ಕಾಡುತ್ತದೆ. ಪಾಶ್ಚಾತ್ಯರ ಜೀವನ ವಿಧಾನಕ್ಕೆ ಮನಸೋತು, ಭಾರತೀಯ ಜೀವನ ವಿಧಾನಕ್ಕೆ ಬೇಸತ್ತು, ಅಮೇರಿಕದಲ್ಲಿಯೇ ನೆಲೆಸಿದ ಅವನು ಅಕ್ಕಯ್ಯನ ಮಾನವತಾವಾದವನ್ನು ಮತ್ತು ಕರ್ಮಸಿದ್ಧಾಂತವನ್ನು ಕುರಿತು ನಂತರದಲ್ಲಿ ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತಾನೆ. ಶ್ರೀನಿವಾಸನು ಅಕ್ಕಯ್ಯನನ್ನು ಸಂಪ್ರದಾಯದ ಪ್ರತಿನಿಧಿಯೆಂದು ತಿಳಿದಿರುತ್ತಾನೆ. ಈ ಅನಿವಾರ್ಯತೆಯ ಅವನನ್ನು ಹಲವಾರು ಸಂದಿಗ್ಧತೆಗಳೊಂದಿಗೆ ಬದುಕುವಂತೆ ಮಾಡಿದೆ.

ಗೆಳೆಯರಿಬ್ಬರೂ ಅಂತರಾಷ್ಟ್ರೀಯ ಏಳಿಗೆಗೆ ಕಾರಣವಾದ ಸೆನ್ಸಿಟಿವಿಟಿಯನ್ನು ಕುರಿತು ಹಾಡುತ್ತಾರೆ. ಅದರಲ್ಲಿ ಸಂದಿಗ್ಧತೆಯ ಕೆಲವು ಅಂಶಗಳಿವೆ. ಒಂದು ಕಡೆ ಸಂಪೂರ್ಣವಾಗಿ ಪಾಶ್ಚಾತ್ಯವನ್ನು ಒಪ್ಪದೇ ಮತ್ತೊಂದು ಕಡೆ ಪರಿಪೂರ್ಣವಾಗಿ ಭಾರತೀಯ ಜೀವನ ವಿಧಾನವನ್ನು ಮೆಚ್ಚದೇ ದ್ವಂದ್ವಕ್ಕೊಳಗಾಗುತ್ತಾರೆ. ತಮ್ಮ ಬದುಕಿನ ಮೂಲ ಬೇರುಗಳನ್ನು ಕಳೆದುಕೊಳ್ಳದ ಅವರು ಭಾರತೀಯರಾಗಿಯೇ ಉಳಿಯಲು ಇಚ್ಛಿಸುತ್ತಾರೆ. ಇಲ್ಲಿ ಅಮೇರಿಕದವರ ನೈಜ ಭೌತವಾದಿ ಪ್ರಜ್ಞೆ ಮತ್ತು ಅದರ ವ್ಯಾಪಾರಿ ಮನೋವೃತ್ತಿಗಳು ಸ್ಪಷ್ಟವಾಗುತ್ತವೆ. ಇವರಿಬ್ಬರೂ ಒಂದಾಗಿ ಹಾಡುವಹಾಡು, ಕುಣಿತಗಳು ಆಧುನಿಕ ಜಗತ್ತನ್ನು ಗೇಲಿ ಮಾಡುವಂತಿವೆ. ಯಜಮಾನ ಸಂಸ್ಕೃತಿಯ ಅಂತರಾಷ್ಟ್ರೀಯತೆ, ಬಂಡವಾಳಶಾಹಿಗಳ ರಾಜಕಾರಣ, ನವ ಭೌತಿಕರ ಎಡಬಿಡಂಗಿತನ ಹಾಗೂ ಬುದ್ಧಿವಂತಿಕೆಯ ಸುರಕ್ಷಿತತೆ ಇವೆಲ್ಲವುಗಳ ತಾಕಲಾಟದಿಂದ ಆತ್ಮಾವಲೋಕನಕ್ಕೆ ಗುರಿಪಡಿಸುತ್ತವೆ.

ಶ್ರೀನಿವಾಸನಿಗೆ ಅಕ್ಕಯ್ಯ ಸಾಂಕೇತಿಕವಾಗಿ ತನ್ನೆಲ್ಲ ಚಿಂತನೆ ಸಂಕಲ್ಪ ಕ್ರಿಯೆಗಳಿಗೆ ಮೂಲವೆನ್ನುವಂತೆ ಇದ್ದಾಳೆ. ಪೌರಾತ್ಯ ಸಂಸ್ಕೃತಿಯ ದುಷ್ಫಲಗಳಿಗೆ ಉದಾಹರಣೆಯಂತೆ ಕರುಣಾಜನಕಳಾಗಿ ಕಂಡಿದ್ದ ಅವಳು ತನ್ನದೇ ಆದ ಜೀವನ ಕ್ರಮವೊಂದನ್ನು ಅನುಸರಿಸುತ್ತಿದ್ದಾಳೆಂಬುದು ನಿಧಾನವಾಗಿ ಶ್ರೀನಿವಾಸನಿಗೆ ತಿಳಿಯುತ್ತದೆ. ಪಾಶ್ಚಾತ್ಯ ಬದುಕನ್ನು ಬೆಂಬಲಿಸುವ ಅವನು ಬೌದ್ಧಿಕತೆಯಲ್ಲಿ ಸರಳ ಬದಲಾವಣೆಯನ್ನೇ ಪ್ರಗತಿ ಎಂದು ಕೊಂಡಿರುತ್ತಾನೆ. ಪ್ರಗತಿಯೇ ಅತ್ಯಂತ ಮುಖ್ಯವಾದ ಮೌಲ್ಯವೆಂದು ಭ್ರಮಿಸಿ, ಅಕ್ಕಯ್ಯನನ್ನು ಮುಗ್ಧಳೆಂದು ತಿಳಿದಿರುತ್ತಾನೆ.

ಹೊಸ ಅರಿವಿನಲ್ಲಿ ಶ್ರೀನಿವಾಸ ಅಕ್ಕಯ್ಯನ ಬದುಕಿನಲ್ಲೂ ತನಗೆ ತಿಳಿಯದ ಅರ್ಥವಿದೆ ಎಂದು ಗುರುತಿಸುತ್ತಾನೆ. ಚಿಕ್ಕವನಿದ್ದಾಗ ತನ್ನ ಚೇಷ್ಟೆಯಿಂದ ಬಡವರ ಗುಡಿಸಲಿಗೆ ಬೆಂಕಿಬಿದ್ದು ನಷ್ಟವಾಗಿತ್ತು. ಅಕ್ಕಯ್ಯ ಪರಿಹಾರವಾಗಿ ಬಡವರಿಗೆ ಬಂಗಾರದ ತನ್ನ ಬಳೆಗಳನ್ನು ಕೊಟ್ಟು ಸಾಂತ್ವನ ಹೇಳಿ ನನ್ನ ತಪ್ಪನ್ನು ಅವಳ ಮೇಲೆ

[illegible]

[illegible]

[illegible]

[illegible]

[illegible]

ಹಾಕಿಕೊಂಡು ತಂದೆ ಹಾಗೂ ತಮ್ಮಂದಿರಿಂದ ಬೈಸಿಕೊಂಡು ಏನೂ ಹೇಳದೇ ಶ್ರೀನಿವಾಸನನ್ನು ಬಚಾವ್ ಮಾಡಿರುತ್ತಾಳೆ. ಅಕ್ಕಯ್ಯನ ಜನ್ಮಾಂತರದ ಕಲ್ಪನೆಗಳು, ದನಕರುಗಳಿಗೆ ತೋರುವ ಅಕ್ಕರೆ, ಮನೆಗೆಲಸದವನಾದ ಪಿಳ್ಳನೊಂದಿಗಿನ ಮಾನವೀಯ ಸಂಬಂಧ ಇವೆಲ್ಲವೂ ಅವಳ ಬದುಕಿನ ಭಾರತೀಯ ಮೌಲ್ಯದ ಪ್ರತೀಕವಾಗಿವೆ.

"ಕತೆಯು ಪೌರಾತ್ಯ, ಪಾಶ್ಚಾತ್ಯ ಈ ಎರಡೂ ನೆಲೆಯ ಮತಿದಾಸ್ಯವನ್ನು ಧಿಕ್ಕರಿಸುತ್ತದೆ. ಜೊತೆಗೆ ತನ್ನದೇ ಆದ ಗ್ರಹಿಕೆಯ ಕ್ರಮಗಳನ್ನು ಒತ್ತಾಯಿಸುತ್ತದೆ. ಅದು ಯಾರನ್ನೂ ವೈಭವೀಕರಿಸುವುದಿಲ್ಲ. ಎಲ್ಲವನ್ನೂ ಸಿನಿಕತನದಿಂದ ನೋಡುವುದಿಲ್ಲ ಬದಲಾಗಿ ಗ್ರಹಿಕೆಯ ಬಹುಮುಖತೆ, ಬಹುರೂಪತೆಗಳ ಅಗತ್ಯವನ್ನು ಮಾತ್ರ ಪ್ರತಿಪಾದಿಸಿ ಏಕಾಕೃತಿಯ ಕಲ್ಪನೆಗಳನ್ನು ಅದು ಪೂರ್ವದ್ದಾಗಿರಲಿ, ಪಶ್ಚಿಮದ್ದಾಗಿರಲಿ ನಿರಾಕರಿಸುತ್ತದೆ."[೭] ಆಧುನಿಕನಾಗಿ ಗ್ರಹಿಕೆಯ ಮಿತಿಯಲ್ಲೇ ಬದುಕುವ ಶ್ರೀನಿವಾಸನಿಗೆ ಇದು ಹಾಸ್ಯಾಸ್ಪದ ಎನಿಸಿರುತ್ತದೆ. ಮುಗ್ಧಳಾದ ಅಕ್ಕಯ್ಯ ಕೊನೆಯುಸಿರನ್ನೆಳೆವಾಗ ಶ್ರೀನಿವಾಸ ಹತ್ತಿರವಿರಲಿಲ್ಲ. ಫ್ರಾನ್ಸ್‌ಗೆ ಓರಿಯಂಟಲಿಸಂ ಕುರಿತಾದ ವಿಚಾರ ಸಂಕಿರಣಕ್ಕೆ ಹೊರಟಿದ್ದನು. ಅಕ್ಕಯ್ಯನ ಸಾವಿನ ಸುದ್ದಿಯನ್ನು ತಿಳಿದು ಫ್ರಾನ್ಸ್‌ಗೆ ಹೋಗದೇ ಶ್ರಾದ್ಧಕ್ಕೆಂದು ಊರಿಗೆ ಬರುತ್ತಾನೆ.

ಪ್ರಾರಂಭದಲ್ಲಿ ಶ್ರೀನಿವಾಸ ಪೌರಾತ್ಯ ಸಂಸ್ಕೃತಿಯ ಗೊಡ್ಡು ನಂಬಿಕೆಗಳಿಗೆ ಅಕ್ಕಯ್ಯ ಬಲಿಯಾಗಿದ್ದಾಳೆಂದು ತನ್ನ ಜೀವನ ಕ್ರಮವನ್ನೇ ಬದಲಿಸಿಕೊಂಡು ಪಾಶ್ಚಾತ್ಯ ಬದುಕನ್ನು ಅನುಸರಿಸುತ್ತಾನೆ. ಕೊನೆಗೆ ಓದಿನಿಂದ ಬಂದ ಜ್ಞಾನವು ಎಷ್ಟೇ ಬಲವಾಗಿದ್ದರೂ ಮೂಲದಲ್ಲಿನ ಮೌಲ್ಯಗಳು ನಾಶವಾಗಲಾರವು ಎಂದುಕೊಳ್ಳುತ್ತಾನೆ. ಆಧುನಿಕ ಬದುಕಿಗೆ ಹೊಂದಿಕೊಂಡ ಶ್ರೀನಿವಾಸನಿಗೆ ಪರಂಪರೆಯ ಮೂಲ ಬೇರುಗಳಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಹೀಗೆ ಪಾಶ್ಚಾತ್ಯ ಹಾಗೂ ಪೌರಾತ್ಯದ ವಿಚಾರಗಳ ಮಧ್ಯೆ ಶ್ರೀನಿವಾಸನ ಮನಸ್ಸಿನಲ್ಲಿ ಸಂಘರ್ಷವೇರ್ಪಡುತ್ತದೆ.

ಎರಡು ಸಂಸ್ಕೃತಿಗಳ ಮುಖಾಮುಖಿಯ ವ್ಯಾಪಕತೆಯನ್ನು 'ಸೂರ್ಯನ ಕುದುರೆ' ಕತೆಯಲ್ಲಿ ಕಾಣಬಹುದು. ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಮೈಸೂರಿನಲ್ಲಿ ಪ್ರೊಫೆಸರ್‌ನಾಗಿರುವ ಅನಂತು ಪಾಶ್ಚಾತ್ಯ ದೃಷ್ಟಿಕೋನದ ಪ್ರತಿನಿಧಿಯಾದರೆ, ಬದುಕಿನಲ್ಲಿ ಬದಲಾವಣೆ ಕಾಣದೆ ಹಳ್ಳಿಯಲ್ಲಿಯೇ ನೆಲೆಸಿರುವ ವೆಂಕಟ ಪೌರಾತ್ಯ ಸಂಸ್ಕೃತಿಯ ಪ್ರತಿನಿಧಿಯಾಗಿದ್ದಾನೆ. ಬಾಲ್ಯ ಸ್ನೇಹಿತನಾದ ಅನಂತನನ್ನು ಧೀರನೆಂದು ಕರೆಯುವ ವೆಂಕಟ ತನ್ನನ್ನು ಮಾತ್ರ ಪೂಜಾರಿಯೆಂದೇ ಗುರುತಿಸಿಕೊಳ್ಳುತ್ತಾನೆ. ಪೂಜಿಸುವುದೇ ತನ್ನ ಜಾಯಮಾನವೆಂದು ತಿಳಿದ ಅವನಿಗೆ ಪ್ರಕೃತಿಯ ಜೊತೆ ಅವಿನಾಭಾವ ಸಂಬಂಧವಿದೆ. ಸಂಸಾರದ ಜವಾಬ್ದಾರಿಯನ್ನು ಹೆಂಡತಿಗೆ ಒಪ್ಪಿಸಿ ನದಿಯ ಹತ್ತಿರದ ಗುಡ್ಡದ ಗವಿಯಲ್ಲಿ ವಾಸಿಸಬೇಕು ಎಂದು ಕನಸು ಕಾಣುತ್ತಾನೆ. ದಾರಿದ್ರ್ಯ, ಅವಮಾನ, ಹಾಗೂ ನಾಚಿಕೆಗೇಡುತನವನ್ನು ಸಹಿಸಿಕೊಂಡು ಬದುಕುವ ವೆಂಕಟ, ಜಡತ್ವದ ಪರಮ ಸ್ಥಿತಿಯಲ್ಲಿಯೇ ಬದುಕುವವರನ್ನು ಸಂಕೇತಿಸುವಂತೆ ಅನಂತುವಿಗೆ ಕಾಣಿಸುತ್ತಾನೆ.

ಪಾಶ್ಚಾತ್ಯ ಸಂಸ್ಕೃತಿಯ ಪ್ರಗತಿ ಹಾಗೂ ಸಾಧನೆಯ ಆದರ್ಶವನ್ನು ಮೆಚ್ಚುವ ಅನಂತು ವೆಂಕಟನ ಮನೋಭಾವವನ್ನು ತಿರಸ್ಕರಿಸುತ್ತಾನೆ. ವೆಂಕಟನಂಥ ಜನರ ಮೌಢ್ಯವನ್ನು ನಾಶಮಾಡದಿದ್ದರೆ, ವಿದ್ಯುಚ್ಛಕ್ತಿ ಆಣೆಕಟ್ಟು ಹಾಗೂ ಜೀವನವಿಕಾಸ ಎಲ್ಲವೂ ನಿಷ್ಪ್ರಯೋಜಕವಾಗುತ್ತವೆ ಎಂದುಕೊಳ್ಳುತ್ತಾನೆ. ವೆಂಕಟನ ವಿರುದ್ಧ ಬಂಡೇಳುವ ಅವನ ಮಗ ಸುಬ್ಬನತ್ತ ಒಲವಿರುವ ಅನಂತು, ತನ್ನದೇ ರೀತಿಯ ಒಂದು ಛಾಯೆಯನ್ನು ಅವನಲ್ಲಿ

ಗುರುತಿಸಿಕೊಳ್ಳುತ್ತಾನೆ. ಅಪ್ಪನಿಗೆ ಎದುರಾಗಿ ನನ್ನ ಮನೆತನದ ನಡವಳಿಕೆಗಳನ್ನು ಧಿಕ್ಕರಿಸಿದ್ದರಿಂದಲೇ ನಾನು ಬೆಳೆದು ಹೀಗಾಗಲು ಸಾಧ್ಯವಾಯಿತು ಎಂದು ಅನಂತು ಹೆಮ್ಮೆ ಪಡುತ್ತಾನೆ.

ಅನಂತುವಿನ ಅಭಿಪ್ರಾಯದಂತೆ ವೆಂಕಟ ಇಡೀ ಊರಿನ ಬಾಯಿಗೆ ಬಿದ್ದವನು. ಪ್ರಿನ್ಸಿಪಾಲರಿಗೆ ಹೊಡೆದ ತನ್ನ ಮಗನಿಗೆ ಜೈಲು ಶಿಕ್ಷೆಯಾಗುತ್ತದೆಂದು ತಿಳಿದ ಮೇಲೆ ಅವನ ಹಣೇಲಿ ಬರೆದದ್ದು ಆಗಬೇಕಲ್ಲ ಎಂದು ಸುಮ್ಮನಿದ್ದವನು. ತನ್ನ ಸ್ವಂತ ಮಗನನ್ನು ಜವಾಬ್ದಾರಿಯ ಅರಿವಿಲ್ಲದಂತೆ ಬೆಳೆಸಿದ್ದಾನೆಂದು ಆತ್ಮೀಯನಾದ ವೆಂಕಟನನ್ನು ಅನಂತು ಗಂಭಿರವಾಗಿ ನೀನೊಬ್ಬ ಪಲಾಯನವಾದಿ, ಬೋಳೀಶಂಕರ, ಬೆನ್ನೆಲುಬಿಲ್ಲದ ನಾಮರ್ದ ಇತ್ಯಾದಿಯಾಗಿ ಬಯ್ಯುತ್ತಾನೆ. ಗೆಳೆಯನ ಮಾತಿಗೆ ವೆಂಕಟ ಬಾ ಅಭ್ಯಂಜನ ಮಾಡಿಸಿ ನಿನ್ನ ಸೊಕ್ಕನ್ನೆಲ್ಲ ಇಳಿಸ್ತೀನಿ ಎನ್ನುತ್ತಾನೆ. ನೆರೆಹೊರೆಯವರೊಂದಿಗೆ ವೆಂಕಟನ ಸಂಬಂಧ, ಜೋಯಿಸವೃತ್ತಿ, ಕುಟುಂಬದ ದೈನಂದಿನ ಸಮಸ್ಯೆಗಳು ಹೀಗೆ ಎಂಥ ದುಗುಡ ಪರಿಸ್ಥಿತಿಯಲ್ಲೂ ಸಮಾಧಾನಿಯಾಗಿರುವ ಹಾಗೂ ಎಲ್ಲವನ್ನೂ ಹಾಸ್ಯದಲ್ಲಿ ನಿಭಾಯಿಸುವ ವೆಂಕಟಿಗನ ನಿರಹಂಕಾರವನ್ನು ಕಂಡು ಅನಂತು ಸೋಜಿಗಪಡುತ್ತಾನೆ. ನಮ್ಮ ದೇಶದ ಜನ ಎಂದೂ ಬದಲಾಗುವುದೇ ಇಲ್ಲವೇನೋ ಎಂದು ಚರ್ಚಿಸುವ ಅನಂತುವಿನ ವಿಚಾರದಲ್ಲಿ ವೆಂಕಟನ ಅಸ್ತಿತ್ವದ, ಜೀವನವಿಧಾನದ ಪ್ರಸ್ತುತತೆ, ಉಪಯುಕ್ತತೆಗಳನ್ನು ಪ್ರಶ್ನಿಸುವ ನೆಲೆಯಿದೆ.

ಹಡೆ ವೆಂಕಟನನ್ನು ಅರಿಯುವ ಪ್ರಯತ್ನದಲ್ಲಿ ಪರ್ಯಾಯವಾಗಿ ಪೌರಾತ್ಯ ಜೀವನಕ್ರಮವನ್ನು ಅರಿಯುವ ಉಪಕ್ರಮವನ್ನು ಅನಂತು ರೂಪಿಸಿಕೊಳ್ಳುತ್ತಾನೆ. ಪಾಶ್ಚಾತ್ಯ ದೃಷ್ಟಿಕೋನದ ಅನಂತುವಿಗೆ ವೆಂಕಟ ತನ್ನ ಐಹಿಕ ಬದುಕನ್ನು ಅಸ್ತವ್ಯಸ್ಥ ಮಾಡಿಕೊಂಡ ಹಡೆಯಾಗಿ ಕಂಡಿರುತ್ತಾನೆ. ಪಾಶ್ಚಾತ್ಯ ಲೇಖಕರು ಭಾರತೀಯರಲ್ಲಿ ಕಂಡ ಸತ್ಯವನ್ನೇ ಅನಂತೂ ಕೂಡ ಕಾಣುತ್ತಾನೆ. ವೆಂಕಟನ ಜೀವನಕ್ರಮವನ್ನು ಗ್ರಹಿಸಿದ ನಂತರ ಅವನಿಗೂ ತನ್ನದೇ ಆದ ತಂತ್ರಾಜ್ಞಾನವಿದೆಯೆನ್ನುವುದನ್ನು ಅನಂತು ಗುರುತಿಸುತ್ತಾನೆ. ಇಲ್ಲಿ ವೆಂಕಟನ ಜೀವನಕ್ರಮದಲ್ಲಿ ಅಂತರ್ಗತವಾದ ಹಡೆತನ ಮತ್ತು ಅನಂತುವಿಗೆ ಓದಿನಿಂದ ಲಭಿಸಿದ ಜ್ಞಾನ ಇವೆರಡೂ ಏಕಕಾಲದಲ್ಲೇ ಎದುರಾಗುತ್ತವೆ. ಪಾಶ್ಚಾತ್ಯ ವಿಚಾರಗಳಿಗೆ ನಿಲುಕದ ಹಲವು ಸಂಗತಿಗಳನ್ನು ಅನಂತು ವೆಂಕಟನಲ್ಲಿ ಕಾಣುತ್ತಾನೆ. ಹಾಗೆಯೇ ವೆಂಕಟನ ಸ್ಥಿತಿಯಲ್ಲಿರುವ ಹಲವು ವೈರುಧ್ಯಗಳಿಂದ ಅನಂತು ಕಸಿವಿಸಿಗೊಳ್ಳುತ್ತಾನೆ. ಈ ಪ್ರಕ್ರಿಯೆಯಲ್ಲಿ ವೆಂಕಟನಲ್ಲಿ ಅಂತರ್ಗತವಾದ ಭಾರತೀಯ ಜೀವನಕ್ರಮ ಹಾಗೂ ಅನಂತುವಿನಲ್ಲಿ ಕಂಡುಬರುವ ಪಾಶ್ಚಾತ್ಯ ದೃಷ್ಟಿಕೋನ ಈ ಎರಡರ ಮುಖಾಮುಖಿಯಿದೆ.

"ಸೂರ್ಯನ ಕುದುರೆ ಇವತ್ತಿನ ಸಮಕಾಲೀನ ಸಂದರ್ಭದಲ್ಲಿ ಭಾರತೀಯರಲ್ಲಿ ಹುಟ್ಟಿಕೊಂಡ ದ್ವಂದ್ವಾನುಭವದ ಶ್ರೇಷ್ಠ ಪ್ರತೀಕವಾಗಿದೆ. ಕತೆ ಒಂದು ನೆಲೆಯಲ್ಲಿ ಅನಂತುವನ್ನು ಒಪ್ಪಿಕೊಂಡರೆ, ಇನ್ನೊಂದು ನೆಲೆಯಲ್ಲಿ ವೆಂಕಟನನ್ನು ಒಪ್ಪಿಕೊಳ್ಳುತ್ತದೆ. ಅದರ ನಿರಾಕರಣೆಯ ಕ್ರಿಯೆಯಲ್ಲಿಯೇ ಈ ದ್ವಂದ್ವವಿದೆ. ಅನಂತು ವೆಂಕಟನನ್ನು ತಿರಸ್ಕರಿಸುವಾಗ ಪಾಶ್ಚಾತ್ಯ ಸಂಸ್ಕೃತಿಯ ಪ್ರಗತಿಯ 'Achievement' ನ ಆದರ್ಶ ಎದುರಿಗಿದೆ." " ಇಲ್ಲಿನ ಕತೆಗಳಲ್ಲಿ ಪರಂಪರೆಯ ಮಿತಿಯನ್ನು ತೋರಿಸಿಕೊಟ್ಟ ವಿದ್ಯಾಭ್ಯಾಸವು ವ್ಯಕ್ತಿಯನ್ನು ಪರಂಪರೆಗೆ ಪರಕೀಯನನ್ನಾಗಿಸುತ್ತಿರುವ ಕ್ರಮ ಒಂದೆಡೆಡೆಯಿದ್ದರೆ, ತನ್ನ ಬದುಕಿನ ಮಾದರಿಯನ್ನು ಬದಲಿಸಿಕೊಂಡ ವ್ಯಕ್ತಿ ಪರಂಪರೆಗೆ ಪರಕೀಯನಾಗುವುದರ ಜೊತೆಗೆ ಪಾಶ್ಚಿಮಾತ್ಯ ಮಾದರಿಯನ್ನು ಸಂಪೂರ್ಣ ತನ್ನದಾಗಿಸಿಕೊಳ್ಳಲಾರದೆ ಅದಕ್ಕೂ ಪರಕೀಯನಾಗುವುದು ಇನ್ನೊಂದೆಡೆಯಿದೆ.

[illegible]

[illegible]

[illegible]

ಒಟ್ಟಿನಲ್ಲಿ ಪ್ರಾಶ್ಚಿಮಾತ್ಯ ಬದುಕು ತಮ್ಮೊಳಗೆ ಬೆಳೆಸುತ್ತಿರುವ ಎಡಬಿಡಂಗಿ ಸ್ಥಿತಿಯನ್ನು ತ್ರಿಶಂಕು ಸ್ಥಿತಿಯನ್ನು ಅನುಭಸುವ ಮೂಲಕ ಇಲ್ಲಿನ ನಾಯಕರು ತಮಗೆ ತಾವೇ ಪರಕೀಯರಾಗುತ್ತಾರೆ. ಪರಂಪರೆಯ ಜೀವನ ಕ್ರಮಕ್ಕೂ ಹಾಗೂ ತಮ್ಮ ಸ್ವಂತಿಕೆಗೂ ಹೊರಗಿನವರಾಗುತ್ತಾರೆ. ಸ್ವಂತಿಕೆಯನ್ನೇ ಕಳೆದುಕೊಳ್ಳುತ್ತಾ ಹೋಗಿ ನಿರ್ವೀರ್ಯತೆಯ ಸ್ಥಿತಿಯನ್ನು ತಲುಪುತ್ತಾರೆ.

ಪಾಶ್ಚಾತ್ಯ ಹಾಗೂ ಪೌರಾತ್ಯ ಸಂಸ್ಕೃತಿಯ ವಿಚಾರಗಳ ನಡುವಿನ ಸಂಘರ್ಷವನ್ನು 'ಸಂಸ್ಕಾರ' ಕಾದಂಬರಿಯಲ್ಲಿ ಕಾಣಬಹುದು. ಪ್ರಾಣೇಶಾಚಾರ್ಯ ಪೌರಾತ್ಯ ಸಂಸ್ಕೃತಿಯ ಪ್ರತಿಪಾದಕನಾಗಿದ್ದಾನೆ. ನಾರಣಪ್ಪ ಪಾಶ್ಚಾತ್ಯ ಸಂಸ್ಕೃತಿಯ ಬದಲಾವಣೆಗೆ ಹೊಂದಿಕೊಂಡಿದ್ದಾನೆ. ಇವರಿಬ್ಬರು ವಿಭಿನ್ನ ಮನೋಭಾವವನ್ನು ಹೊಂದಿದ್ದಾರೆ. ಪಂಡಿತನಾದ ಪ್ರಾಣೇಶಾಚಾರ್ಯನನ್ನು ಅಗ್ರಹಾರದ ಬ್ರಾಹ್ಮಣರು ಮತ್ತು ಊರಿನ ಜನರು ಗೌರವದಿಂದ ಕಾಣುತ್ತಾರೆ. ಬ್ರಾಹ್ಮಣನಾಗಿದ್ದ ನಾರಣಪ್ಪ ದುಶ್ಚಟಗಳಿಗೆ ದಾಸನಾಗಿದ್ದನ್ನು ಅಲ್ಲಿನ ಜನ ಒಪ್ಪುವುದಿಲ್ಲ. ನಾರಣಪ್ಪನನ್ನು ಬದಲಾಯಿಸಬೇಕೆಂದು ಪ್ರಯತ್ನಿಸುತ್ತಿದ್ದ ಪ್ರಾಣೇಶಾಚಾರ್ಯನು ದಾರಿತಪ್ಪಿದಾಗ ಗೊಂದಲಕ್ಕೊಳಗಾಗುತ್ತಾನೆ. "ಸಂಸ್ಕಾರದಲ್ಲಿ ಪ್ರಾಣೇಶಾಚಾರ್ಯ ಮತ್ತು ಅಗ್ರಹಾರದ ಬ್ರಾಹ್ಮಣರು ಪೂರ್ವದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತಿದ್ದರೆ, ನಾರಣಪ್ಪ ಪಶ್ಚಿಮದ ಪ್ರತಿನಿಧಿಯಾಗಿದ್ದಾನೆ."[೯] ರೋಗಿಷ್ಠ ಹೆಂಡತಿಯ ಸೇವೆ ಮಾಡುವ ಪ್ರಾಣೇಶಾಚಾರ್ಯನು ಜನರಿಗೆ ಪುರಾಣ ಪುಣ್ಯ ಕಥೆ ಹಾಗೂ ವ್ರತಗಳ ಬಗ್ಗೆ ಬೋಧಿಸುತ್ತಿರುತ್ತಾನೆ. ಶಾಸ್ತ್ರ ಗ್ರಂಥಗಳ ವಿಚಾರಗಳನ್ನು ಅಪಾರ ನಂಬಿಕೆ ಇರುವ ಪ್ರಾಣೇಶಾಚಾರ್ಯನಿಗೆ ವೇಶ್ಯೆಯ ಸಹವಾಸ ಮಾಡಿ ದುಶ್ಚಟಗಳಿರುವ ನಾರಣಪ್ಪ ಸವಾಲಾಗುತ್ತಾನೆ.

ನಾರಣಪ್ಪ ಸತ್ತಾಗ ಅವನ ಸಂಸ್ಕಾರ ಮಾಡುವ ಬಗ್ಗೆ ಅಗ್ರಹಾರದ ಜನತೆ ಗೊಂದಲದಲ್ಲಿದ್ದಾಗ ಪ್ರಾಣೇಶಾಚಾರ್ಯನು ಪರಿಹಾರ ಕಂಡುಕೊಳ್ಳುವಲ್ಲಿ ವಿಫಲನಾಗುತ್ತಾನೆ. ವೈಯಕ್ತಿಕ ಹಾಗೂ ಸಾಂಸ್ಕೃತಿಕ ಅಂಶಗಳು ಧಾರ್ಮಿಕ ಪ್ರಜ್ಞೆಯನ್ನು ಎದುರಿಸುವಾಗ ಪ್ರಾಣೇಶಾಚಾರ್ಯನಿಗೆ ದ್ವಂದ್ವವನ್ನುಂಟು ಮಾಡುತ್ತವೆ. ತಾನು ನಂಬಿದ್ದ ಸಂಸ್ಕೃತಿಯ ಬಗ್ಗೆ ಅನುಮಾನವೆನಿಸಿದಾಗ ಪ್ರಾಣೇಶಾಚಾರ್ಯನ ಮನೋವೃತ್ತಿ ಬದಲಾಗುತ್ತದೆ. "ಪಾವಿತ್ರ್ಯ+ನಾಶ ಮತ್ತು ಪ್ರತಿ ಸಂಸ್ಕೃತಿಯ ನಿರ್ಮಾಣ ಅನಂತಮೂರ್ತಿ ಸಾಹಿತ್ಯದಲ್ಲಿ ಪುನರಾವರ್ತಿತ ಆಶಯಗಳಾಗುತ್ತವೆ". [೧೦]

ಹೆಚ್.ಎಸ್. ರಾಘವೇಂದ್ರರಾವ್ ಅವರು ದೂರ್ವಾಸಪುರದ ಬ್ರಾಹ್ಮಣ ಮೌಲ್ಯಗಳಿಗೂ ಇಂಗ್ಲಿಷರ ಮೌಲ್ಯಗಳಿಗೂ ಇರುವ ವ್ಯತ್ಯಾಸಗಳತ್ತ ನಮ್ಮ ಗಮನ ಸೆಳೆಯುತ್ತಾರೆ. ದೂರ್ವಾಸಪುರದ ಪ್ರಾಣೇಶಾಚಾರ್ಯರ ಚಕ್ರಾಧಿಪತ್ಯದ ಅಗ್ರಹಾರದ ಹೊರಗೆ ಇಂಗ್ಲಿಷರ ಕಾನೂನಿನ ನಾಗರೀಕತೆಯ ಇನ್ನೊಂದು ವಲಯ ರೂಪಿತವಾಗುತ್ತಿರುತ್ತದೆ. ಅಗ್ರಹಾರದ ಮೌಲ್ಯಗಳಿಗೂ, ಇಂಗ್ಲಿಷರ ಮೌಲ್ಯಗಳಿಗೂ ವಿರೋಧವಿದೆ. ಇಂಗ್ಲಿಷರಿಗೆ ಅಧಿಕಾರವಿರುವುದರಿಂದ ಅದನ್ನು ತಡೆಯುವ ಧೈರ್ಯ ಅಗ್ರಹಾರಕ್ಕಿಲ್ಲ. ಇದ್ದಿದ್ದರೆ ಅವರು ನಾರಣಪ್ಪನಿಗೆ ಬಹಿಷ್ಕಾರ ಹಾಕುತ್ತಿದ್ದರು. ಸಂಸ್ಕಾರ ಕಾದಂಬರಿಯ ಅನುಭವ ಕನ್ನಡವಾಗಿದ್ದರೂ ಅದು ಪಡೆದಿರುವ ಸಂಸ್ಕಾರ ಮತ್ತು ಅದಕ್ಕೆ ಬಂದಿರುವ ಅರ್ಥದ ಮೊನೆ ಇವು ಪ್ರಮುಖವಾಗಿ ಪಾಶ್ಚಾತ್ಯ ದೇಶಗಳ ಸಮಕಾಲೀನ ಸಂಸ್ಕೃತಿಗಳ ಮೂಲಕ ಬಂದವುಗಳಾಗಿವೆ. ಎಂಬ ರಾಜೀವ ತಾರಾನಾಥರ ಅಭಿಪ್ರಾಯವನ್ನು ಇಲ್ಲಿ ಗಮನಿಸಬಹುದಾಗಿದೆ. ಭಾರತೀಯ ಸಂಸ್ಕೃತಿಯ ಕಟ್ಟಳೆಗಳನ್ನು ನಂಬಿ ಬದುಕುತ್ತಿದ್ದ ಪ್ರಾಣೇಶಾಚಾರ್ಯ ಚಂದ್ರಿಯ ಸಹವಾಸದಿಂದಾಗಿ ಸಂಸ್ಕೃತಿಯ ತಳಹದಿಯಲ್ಲಿನ ಮೌಲ್ಯಗಳ ಮೂಲಭೂತ ಸಮಸ್ಯೆಗಳನ್ನು

ಎದುರಿಸಬೇಕಾಗುತ್ತದೆ. ದೈನಂದಿನ ಅನುಭವಗಳೊಂದಿಗೆ ಸಂಬಂಧವನ್ನು ಕಲ್ಪಿಸಿಕೊಂಡ ಪ್ರಾಣೇಶಾಚಾರ್ಯ ಗೊಂದಲಕ್ಕೊಳಗಾದಾಗ ಸಂಘರ್ಷವೇರ್ಪಡುತ್ತದೆ.

'ಭಾರತೀಪುರ' ಕಾದಂಬರಿಯಲ್ಲಿ ಭಾರತೀಪುರವು ಪೂರ್ವದ ಸಂಸ್ಕೃತಿಯನ್ನು ಪ್ರತಿನಿಧಿಸಿದರೆ, ಜಗನ್ನಾಥ ಇಲ್ಲಿನ ಬದುಕನ್ನು ಪಾಶ್ಚಾತ್ಯ ದೃಷ್ಟಿಕೋನದಿಂದ ನೋಡುತ್ತಾನೆ. ಇಂಗ್ಲೆಂಡಿನಲ್ಲಿ ಶಿಕ್ಷಣ ಪಡೆದು ಬಂದ ಜಗನ್ನಾಥನಿಗೆ ತಾನು ಹುಟ್ಟಿದ ಊರು ಪರಕೀಯ ಎನಿಸುತ್ತದೆ. ಮಂಜುನಾಥ ದೇವರಿಂದಾಗಿ ಇಲ್ಲಿನ ಜೀವನ ಕ್ರಮದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಮಂಜುನಾಥನ ಮೇಲೆ ನಂಬಿಕೆ ಇರಿಸಿಕೊಂಡು ಕೊಳೆಯುತ್ತಿರುವ ಇಲ್ಲಿನ ಜನರು ತಮ್ಮ ಜೀವನಕ್ಕೆ ತಾವು ಜವಾಬ್ದಾರರಾಗಿಲ್ಲವೆಂಬ ಅಸಮಧಾನ ಜಗನ್ನಾಥನಿಗಿದೆ. ಜನರನ್ನು ಸೃಷ್ಟಿಶೀಲರಾಗಲು ಭಾರತೀಯ ವಿಚಾರಗಳಲ್ಲಿ ವಿನಾಯಿತಿ ಪಡೆಯಬೇಕೆಂಬುದು ಜಗನ್ನಾಥನ ಬಯಕೆಯಾಗಿದೆ.

ಜಗನ್ನಾಥ ಪಾಶ್ಚಾತ್ಯ ಸಂಸ್ಕೃತಿಯಿಂದ ಪ್ರಭಾವಿತನಾಗಿ ತನ್ನ ಮಣ್ಣಿನೊಡನೆ ಅರ್ಥಪೂರ್ಣವಾದ ಸಂಬಂಧವನ್ನು ಸ್ಥಾಪಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಾನೆ. ಎನ್ನುವ ಸಿ.ಪಿ.ಸಿದ್ಧಾಶ್ರಮ ಅವರ ಅಭಿಪ್ರಾಯವು ಗಮನಾರ್ಹವಾಗಿದೆ. ತನ್ನ ಮನಸ್ಥಿತಿಯನ್ನು ಯಾರೂ ಅರ್ಥಮಾಡಿಕೊಳ್ಳುವುದಿಲ್ಲ ಎಂದು ಜಗನ್ನಾಥ ಬೇಸರಪಡುತ್ತಾನೆ. ಜಗನ್ನಾಥನು ಪರಿವರ್ತಿಸಬೇಕೆಂದುಕೊಂಡಿದ್ದ ಹರಿಜನರು ಅವನ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದಿಲ್ಲ. ಇಂಗ್ಲೆಂಡಿನಲ್ಲಿ ಐದು ವರ್ಷಗಳಿದ್ದರೂ ಭಾರತೀಪುರದ ಎಲ್ಲಾ ವಿಚಾರಗಳು ಜಗನ್ನಾಥನ ನೆನಪಿನಲ್ಲಿವೆ. ಆಧುನಿಕತೆಯ ಪ್ರಭಾವ ದಟ್ಟವಾಗಿದ್ದರೂ ಭಾರತೀಪುರದಲ್ಲಿ ಮಾತ್ರ ಬದಲಾವಣೆಯೇ ಆಗಿಲ್ಲವೆಂದು ಜಗನ್ನಾಥ ಆಲೋಚಿಸುತ್ತಾನೆ. ಅಲ್ಲೊಂದು ಇಲ್ಲೊಂದು ಟೈಟ್‌ಪ್ಯಾಂಟ್ ಹಾಕಿದವರನ್ನು ಬಿಟ್ಟರೆ ಅಂಗಡಿ ಬೆಂಚಿನ ಮೇಲೆ ಕುಳಿತವರೆಲ್ಲ ಹಳಬರಾಗಿದ್ದಾರೆ. ಬೆಳಿಗ್ಗೆ ತಿಂದ ತಿಂಡಿಯನ್ನು ಜೀರ್ಣಿಸಿಕೊಳ್ಳಲು ಹರಟೆಗೆ ಕುಳಿತವರೆಲ್ಲ ಸೋಮಾರಿಗಳಾಗಿದ್ದಾರೆ. ಹಳ್ಳಿಯಲ್ಲಿರುವ ಇವರ ಗದ್ದೆಯ ಕೆಸರನ್ನು ತುಳಿದು ರೈತ ಉಳುತ್ತಾನೆ. ಭೂತರಾಯನಿಗೆ ಹೆದರಿದ ಜನ ಇವರಿಗೆ ಗೇಣಿಕೊಡುತ್ತಾರೆ. ಕುಂಬಳಕಾಯಿ, ಸೌತೆಕಾಯಿ ಹಾಗೂ ಬಾಳೆಗೊನೆಯನ್ನು ಕೊಡುತ್ತಾರೆ. ಹೇಗೋ ಹೊಟ್ಟೆ ತುಂಬುತ್ತದೆ.

ವರ್ಷಕ್ಕೆ ಕಡಿಮೆಯೆಂದರೆ ನಾಲ್ಕೈದು ವೃದ್ಧಿ, ನಾಲ್ಕೈದು ಸೂತಕ, ಹತ್ತಾರು ಮದುವೆ ಅಂತೂ ಕಾಲ ಚಲಿಸುತ್ತದೆ. ಕೂದಲು ನೆರೆಯುತ್ತದೆ, ಹಲ್ಲು ಬೀಳುತ್ತದೆ ಒಟ್ಟು ಮಂಜುನಾಥನನ್ನು ನಂಬಿ ಬದುಕುತ್ತಾರೆ. ಬರುವ ಯಾತ್ರಿಕರನ್ನು ಹೊಳೆಯಲ್ಲಿ ಸ್ನಾನ, ದೇವರ ದರ್ಶನ, ಪಿತೃಗಳಿಗೆ ತರ್ಪಣ, ಗುಡ್ಡದ ಮೇಲಿನ ಭೂತರಾಯನಿಗೆ ಹರಕೆ ಸಲ್ಲಿಕೆ ಹಾಗೂ ಹಿಂದಕ್ಕೆ ಹೋಗುವ ರಿಸರ್ವೇಷನ್ ಇವೆಲ್ಲಕ್ಕೂ ಕಂಟ್ರಾಕ್ಟ್ ಹಿಡಿದಿರುವ ಬ್ರಾಹ್ಮಣ ಹುಡುಗರು ಮನೆಗೆ ಕರೆದುಕೊಂಡು ಹೋಗಲು ಪೈಪೋಟಿ ನಡೆಸುತ್ತಾರೆ. ಯಾತ್ರಿಕರು ಬಂದೊಡನೆ ಮುತ್ತಿಕೊಳ್ಳುವ ಇವರು ಕೆಲವು ಸಲ ವಂಚಿಸುತ್ತಾರೆ. ಪ್ರತಿನಿತ್ಯ ಹೊಸಮುಖಗಳನ್ನು ನೋಡುತ್ತಲೇ ಇರುವ ಹಳೆಪೇಟೆ ಬದಲಾಗದೆ ಉಳಿದಿದೆ. ಇಲ್ಲಿನ ಬದುಕು ಸ್ಥಗಿತವಾಗಿದೆ ಎಂದು ಜಗನ್ನಾಥ ತನ್ನ ಇಂಗ್ಲೆಂಡಿನ ಗೆಳತಿ ಮಾರ್ಗರೆಟ್‌ಗೆ ಬರೆದ ಪತ್ರದಲ್ಲಿ ತಿಳಿಸುತ್ತಾನೆ. ಭಾರತೀಪುರದ ನಾಯಕನ ಆಧುನಿಕ ಚಿಂತನೆಯ ಕ್ರಿಯಾರೂಪಕ್ಕೆ ಅಲ್ಲಿನ ಜನ ಸಮುದಾಯವು ಸರಿಯಾಗಿ ಪ್ರತಿಕ್ರಿಯಿಸುವುದಿಲ್ಲ. ವ್ಯಕ್ತಿಗೆ ತನ್ನ ಬೇರುಗಳೆಂಬುದು ಇಲ್ಲವಾಗಿ ಭೌತಿಕವಾಗಿ, ಮಾನಸಿಕವಾಗಿ ಅವನ ಸ್ವಶಕ್ತಿಯ ಕ್ಷೇತ್ರಗಳು ಇಲ್ಲವಾದಾಗ ಸೃಜನಶೀಲ ಶಕ್ತಿ ಅವನಲ್ಲಿ ಕುಂಠಿತವಾಗಿ ತನ್ನ ಬದುಕಿನಲ್ಲಿ ಸಾಮುದಾಯಿಕ ಬದುಕಿನಲ್ಲಿ ಹೊಸ ಚೈತನ್ಯವನ್ನು ಕಾಣಲು, ತುಂಬಲು

[illegible]

[illegible]

[illegible]

[illegible]

ನಿಶಕ್ತನಾಗುತ್ತಾನೆ. ಇಲ್ಲಿನ ಕಥಾಸಾಹಿತ್ಯದ ನಾಯಕರು ಬರೀ ಪರಂಪರೆಯಿಂದ ಮಾತ್ರ ಹೊರಗೆ ನಿಲ್ಲದೆ ತಮ್ಮಿಂದಲೂ ಹೊರಗೆ ನಿಲ್ಲಲು ಕಾರಣವಾಗುತ್ತಿರುವ ನಾಗರೀಕ ಬದುಕು ಆಧುನಿಕ ವಿದ್ಯಾಭ್ಯಾಸದಿಂದ ದೊರೆತ ಶಿಕ್ಷಣ +ಕ್ರಮ ಇವುಗಳಲ್ಲಿ ಮೂಲವನ್ನು ಹುಡುಕುತ್ತಾರೆ. ಕಾದಂಬರಿಯು ಈ ಸಾಮಾಜಿಕ ದುರಂತವನ್ನು ಭಾರತೀಪುರದ ಸಹಜ ವಿದ್ಯಮಾನಗಳ ಮೂಲಕ ಜನರ ಸ್ವಭಾವ ಮತ್ತು ವರ್ತನೆಗಳ ಮೂಲಕ ಯಶಸ್ವಿಯಾಗಿ ಅರುಹುತ್ತದೆ. ಯಾವುದೇ ಸಾಮಾಜಿಕ ಬದಲಾವಣೆಯು ಎರಡೂ ದಿಕ್ಕಿನಿಂದ ಆಗಬೇಕು ಎನ್ನುವ ಸಂಗತಿ ಅನಂತಮೂರ್ತಿಯವರು ಇಲ್ಲಿ ಸೂಚಿಸಿದ್ದಾರೆ. ಬದಲಾವಣೆ ಮಾಡುವವರು ಸಮಾಜದಲ್ಲಿದ್ದರಷ್ಟೇ ಸಾಲದು, ಬದಲಾವಣೆಯ ಫಲಿತಗಳನ್ನು ಬೆಳೆಸಿಕೊಳ್ಳಲು ಆ ಸಮಾಜವೂ ಸಿದ್ಧವಾಗಿರಬೇಕಾಗುತ್ತದೆ. ಆದರೆ ಜಗನ್ನಾಥನ ಸಾಮಾಜಿಕ ಬದಲಾವಣೆಯ ಉದ್ದೇಶ ಏಕಮುಖಿಯಾಗಿರುವುದರಿಂದ ಅದು ಫಲಿಸದೇ ಅವನು ಸಂಘರ್ಷವನ್ನು ಎದುರಿಸುತ್ತಾನೆ.

ಪಾಶ್ಚಾತ್ಯ ಹಾಗೂ ಪೌರಾತ್ಯ ವಿಚಾರಗಳ ತಾಕಲಾಟವನ್ನು 'ದಿವ್ಯ' ಕಾದಂಬರಿಯಲ್ಲಿ ಕಾಣಬಹುದು. ಸಾಹುಕಾರ ಮಂಜಯ್ಯನ ಮನೆಯಲ್ಲಿ ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ ಕುರುಹುಗಳಿವೆ. ಈ ಅರಮನೆಯ ಯಜಮಾನ ಕಾಶಿ ವಿಶ್ವವಿದ್ಯಾಲಯದಲ್ಲಿ ಓದಿ ಗಾಂಧೀಜಿಯವರ ಆಶ್ರಯದಲ್ಲಿದ್ದು ಬಂದವನಾಗಿದ್ದಾನೆ. ಸನಾತನ ಧರ್ಮದಲ್ಲಿ ನಂಬಿಕೆ ಇರುವ ಮಂಜಯ್ಯನು ಮನೆಯಲ್ಲಿ ನಿತ್ಯ ಭೂವರಾಹ ಪೂಜೆಯನ್ನು ಮಾಡಿಸುತ್ತಾನೆ. ಪೂಜೆಯನ್ನು ಮಾಡಲು ಮಾತ್ರ ಗೊಡ್ಡಲ್ಲದ ವೇದಾಧ್ಯಾಯನ ಮಾಡಿದ ಪಂಡಿತಬೇಕೆಂದು ಬಯಸುತ್ತಾನೆ. ದೇವನಹಳ್ಳಿಯ ಜನ ಸ್ವತಂತ್ರ ಆಲೋಚನೆಯನ್ನು ರೂಢಿಸಿಕೊಳ್ಳಬೇಕೆಂದು ಬಯಸುವ ಮಂಜಯ್ಯನಿಗೆ ಅವರು ತನ್ನ ಮಾತಿಗೆ ಎದುರಾಡಬಾರದೆಂಬ ನಿರೀಕ್ಷೆಯಿದೆ.

ಮಂಜಯ್ಯನಿಗಿರುವ ಇಬ್ಬರು ಮಕ್ಕಳಲ್ಲಿ ಘನಶ್ಯಾಮನನ್ನು ವಿದ್ಯಾಭ್ಯಾಸಕ್ಕೆಂದು ವಿದೇಶಕ್ಕೆ ಕಳುಹಿಸುತ್ತಾನೆ. ಮಗಳು ವಿಮಲಾಳಿಗೆ ಬಾಲ್ಯವಿವಾಹ ಮಾಡಿದ ಮಂಜಯ್ಯನು ಅವಳು ವಿಧವೆಯಾದ ನಂತರ ಪುನಹ ವಿದ್ಯಾಭ್ಯಾಸಕ್ಕೆ ಕಳುಹಿಸುತ್ತಾನೆ. ಘನಶ್ಯಾಮ ಯೂರೋಪಿನ ಜ್ಞಾನದಲ್ಲಿ ಪರಮಾಸಕ್ತಿಯನ್ನು ಹೊಂದಿದ್ದರೂ ವೇಷಭೂಷಣದಲ್ಲಿ ಸರಳತೆಯನ್ನು ಅನುಸರಿಸುತ್ತಾನೆ. ವಿಮಲಾ ತನ್ನ ಕಾರ್ ಡ್ರೈವರ್ ಆದ ಇಂಗ್ಲಿಷ್ ಬಲ್ಲ ಆಧುನಿಕ ಯುವಕ ಮೈಕಲ್‌ನನ್ನು ಪ್ರೀತಿಸುತ್ತಾಳೆ. ಪಾಶ್ಚಾತ್ಯ ವಿಚಾರಗಳಿಂದ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವ ಘನಶ್ಯಾಮ ಸಂಪ್ರದಾಯಸ್ಥ ಗೌರಿಯನ್ನು ಮದುವೆಯಾಗುತ್ತಾನೆ.

ಅನಂತಮೂರ್ತಿಯವರ ಇತ್ತೀಚಿನ ಆಲೋಚನ ಕ್ರಮವನ್ನು ರೂಪಿಸಿರುವ ವಿಚಾರಗಳ ಜಗತ್ತನ್ನು ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಈ ರೀತಿ ಗುರುತಿಸುತ್ತಾರೆ. "ನಮ್ಮ ಚಿಂತನೆಗೂ ತೊಡಗುವಿಕೆಗೂ ನಡುವೆ ಇಂದು ಯೂರೋಪ್ ಅಡ್ಡನಿಂತಿದೆ. ಸಾವಿರಾರು ವರ್ಷದ ವೈವಿಧ್ಯಮಯವಾದ ಭಾರತದ ಚರಿತ್ರೆಗೆ ನಾನು ಹಕ್ಕುದಾರ ಅಂತ ಅನ್ನಿಸದೇ ಇದ್ದಾಗ ನಾನು ನಿಜವಾಗಿ ಸೃಜನಶೀಲನಾಗಲಾರೆ. ಹಿಂದಿನದೆಲ್ಲಾ ಶ್ರೇಷ್ಠ ಎನ್ನುವ ಚಿಂತನೆಯಾಗಲೀ ಹಿಂದಿನದೆಲ್ಲಾ ಗೊಡ್ಡು, ಜಡ ಎಂಬ ವಾಮಪಂಥೀಯ ನಿಲುವಾಗಲಿ ಇವೆರಡೂ ಅನರ್ಥಕಾರಿಯಾದವುಗಳು. ಈ ವಾಸ್ತವ ಪ್ರಪಂಚವನ್ನು ಪಾಶ್ಚಾತ್ಯರು ತಾಂತ್ರಿಕ ಜ್ಞಾನದ ಮೂಲಕ ಅರಿತಂತೆಯೇ ಪೌರಾತ್ಯರು ತಮ್ಮ ಅನುಭವದ ಮೂಲಕ ಅರಿಯಬಲ್ಲವರಾಗಿದ್ದರು. ನಮ್ಮ ದಾರ್ಶನಿಕರು ಈ ಮಣ್ಣಿನ ಪ್ರಪಂಚದಲ್ಲಿದ್ದೂ ದಿವ್ಯಕ್ಕೆ ಕೈಚಾಚಬಲ್ಲವರಾಗಿದ್ದರು. ಪರಕ್ಕೆ ಸಲ್ಲುವುದನ್ನು ಹುಡುಕುವುದರ ಜೊತೆ ಜೊತೆಗೆ ಇಹದಲ್ಲಿ ಸುಖವಾಗಿರುವುದು ಹೇಗೆಂಬುದರ ಬಗ್ಗೆಯೂ ಅವರು ಹುಡುಕಾಟ ನಡೆಸಿದ್ದರು. ಇಂತಹ

ವಿಚಾರಗಳನ್ನು ಅನಂತಮೂರ್ತಿಯವರು ದಿವ್ಯ ಸೃಷ್ಟಿಯಲ್ಲಿ ತಮ್ಮ ಸೃಜನಶೀಲತೆಯ ಏಕಾಗ್ರತೆಯ ಕ್ಷಣಗಳಲ್ಲಿ ಪಶ್ಚಿಮವನ್ನು ಮೀರುವ ಈ ನೆಲದ ಮಣ್ಣಿನ ಹಣತೆಗಳು ಬೆಳಗಿದ ವೈಚಾರಿಕ ದರ್ಶನವನ್ನು ಹಿಡಿಯುವ ಉತ್ಕಟ ಅಪೇಕ್ಷೆಯಲ್ಲಿರುವಂತೆ ತೋರುತ್ತದೆ." ೧೧ ಇಲ್ಲಿ ಪರಂಪರಾಗತ ವಿಚಾರಗಳು ಹಾಗೂ ಆಧುನಿಕ ವಿಚಾರಗಳು ಅನುಸಂಧಾನ ಮಾರ್ಗದಲ್ಲಿ ಚಲಿಸುತ್ತವೆ.

'ಪ್ರಶ್ನೆ , ' ಸಂಸ್ಕಾರ , ಭಾರತೀಪುರ ಈ ಕೃತಿಗಳಲ್ಲಿ ಭಾರತದ ಸಮಾಜ, ಜೀವನ ಕ್ರಮ ಜಿಡ್ಡುಗಟ್ಟಿದ ಸಂಪ್ರದಾಯದಿಂದ ದುಸ್ತರವಾಗಿದ್ದು ಪಾಶ್ಚಾತ್ಯ ಜೀವನ ಕ್ರಮ, ವಿಚಾರಗಳು ಹೊಸ ಚೇತನ್ಯವನ್ನು ಮೂಡಿಸುವಂತೆ ಚಿತ್ರಿಸಲಾಗಿದೆ. ಈ ವಿಚಾರವು ಭಾರತೀಪುರ ದಲ್ಲಿ ಪಾಶ್ಚಾತ್ಯ ವಿದ್ಯಾಭ್ಯಾಸದಿಂದಾಗಿ ಬದಲಾದ ಜಗನ್ನಾಥನ ದೃಷ್ಟಿಕೋನದಿಂದ ತಿಳಿಯುತ್ತದೆ. ಪರಂಪರಾಗತ ಭಾರತೀಯ ಸಮಾಜದಲ್ಲಿ ಬದಲಾವಣೆಯನ್ನು ಜಗನ್ನಾಥ ತರಲು ಬಯಸುವುದನ್ನು ಗಮನಿಸಬಹುದು. ನಂತರದಲ್ಲಿ ಅನಂತಮೂರ್ತಿಯವರ 'ಸೂರ್ಯನ ಕುದುರೆ' ಹಾಗೂ 'ಅಕ್ಕಯ್ಯ' ಕತೆಗಳು ಸಂಸ್ಕೃತಿಯ ಬಗ್ಗೆ ತಮಗೆ ಹಿಂದಿದ್ದ ದೃಷ್ಟಿಕೋನಕ್ಕಿಂತ ವಿರುದ್ಧ ದೃಷ್ಟಿಕೋನವನ್ನು ಬಿಂಬಿಸುತ್ತವೆ. ಇಲ್ಲಿ ಜೀವನದ ಬಗ್ಗೆ ಗೊಂದಲವಿರುವುದು ಪಾಶ್ಚಾತ್ಯೀಕರಣಗೊಂಡ ವ್ಯಕ್ತಿಗಳದ್ದೇ ಹೊರತು ಪರಂಪರಾಗತವಾಗಿ ಜೀವನ ನಡೆಸುವ ಭಾರತೀಯರದ್ದಲ್ಲ ಎಂಬ ನಿಲುವನ್ನು ತಾಳುತ್ತಾರೆ. 'ಪ್ರಶ್ನೆ''ಸಂಸ್ಕಾರ', 'ಭಾರತೀಪುರ'ಗಳಲ್ಲಿ ಭಾರತೀಯ ಸಂಸ್ಕೃತಿಯ ಕೊಳೆತು ಹೋದ ಅಂಶಗಳನ್ನೂ; ಪಾಶ್ಚಾತ್ಯ ಸಂಸ್ಕೃತಿಯ ಅತ್ಯುತ್ತಮ ಅಂಶಗಳನ್ನು ಅನಂತಮೂರ್ತಿ ಕಾಣುತ್ತಿದ್ದರು. ಈಗಿನ ಕತೆಗಳಲ್ಲಿ ಭಾರತೀಯ ಸಂಸ್ಕೃತಿಯ ಅತ್ಯುತ್ತಮ ಅಂಶಗಳನ್ನೂ ಪಾಶ್ಚಿಮಾತ್ಯ ಸಂಸ್ಕೃತಿಯ ಕೊಳೆತ ಅಂಶಗಳನ್ನು ಎತ್ತಿ ಹಿಡಿಯುತ್ತಿದ್ದಾರೆ ಎಂಬ ರಾಮಚಂದ್ರದೇವ ಅವರ ಅಭಿಪ್ರಾಯವು ಸೂಕ್ತವಾಗಿದೆ. ಹೀಗೆ ಎರಡೂ ಸಂಸ್ಕೃತಿಗಳಲ್ಲಿ ಉತ್ತಮ ಮತ್ತು ಕೊಳೆತು ಹೋದ ಅಂಶಗಳಿವೆಯಾದ್ದರಿಂದ ಎರಡೂ ಸಂಸ್ಕೃತಿಗಳಲ್ಲಿನ ಕೊಳೆತು ಹೋದ ಅಂಶಗಳನ್ನು ಬಿಟ್ಟು ಉತ್ತಮ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಜೀವನವನ್ನು ರಚಿಸಿಕೊಳ್ಳುವುದು ಒಳಿತು ಎನ್ನುವ ಆಶಯ ಇಲ್ಲಿ ವ್ಯಕ್ತವಾಗಿದೆ.

ಇಂಗ್ಲಿಷ್ ವಿದ್ಯಾಭ್ಯಾಸ ಪಡೆದಿದ್ದ ತರುಣ ಪೀಳಿಗೆ, ಅದರಲ್ಲೂ ಇಂಗ್ಲಿಷ್ ಸಾಹಿತ್ಯ ಓದಿದ್ದವರಿಗೆ ಅಲ್ಲಿನ ಸಂಸ್ಕೃತಿ ರೂಢಿಸಿಕೊಂಡಿದ್ದ ವ್ಯಕ್ತಿ ಸ್ವಾತಂತ್ರ್ಯ ಇಲ್ಲಿನ ಪರಂಪರೆಯ ಜೊತೆ ಹೋಲಿಸಿಕೊಂಡಾಗ ಮಹತ್ವವಾಗಿ ಕಾಣಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಪಾಶ್ಚಿಮಾತ್ಯ ಜೀವನ ಶೈಲಿಯೊಡನೆ ಹೋಲಿಸಿಕೊಳ್ಳಲು ಆರಂಭಿಸಿದೊಡನೆ ವ್ಯಕ್ತಿಗೆ ಇಲ್ಲಿನ ಬದುಕು ಮತ್ತು ಸಮಾಜದೊಡನೆ ಬಿರುಕು ಆರಂಭವಾಯಿತು. ಹೀಗೆ ಅನುಭವಿಸಿದ ಬಿರುಕಿನ ಸ್ಥಿತಿಯು ಮತ್ತೆ ಪಾಶ್ಚಿಮಾತ್ಯ ಸಾಹಿತ್ಯದಲ್ಲಿ ವ್ಯಕ್ತಿ ತನ್ನ ಮತ್ತು ಜಗತ್ತಿನ ನಡುವೆ ಇರುವ ತಾತ್ವಿಕತೆಯ ಹುಡುಕಾಟದಲ್ಲಿ ತೊಳಲಿದ. ಅನುಭವಿಸಿದ ತಾಕಲಾಟ ಏಕತಾನತೆ ಮುಂತಾದ ಮನಸ್ಸಿನ ಸ್ಥಿತಿಗಳು ಅಸ್ತಿತ್ವವಾದದಲ್ಲಿ ಕಾಣಿಸಿಕೊಂಡವು. ಛಿದ್ರಗೊಂಡ ವ್ಯಕ್ತಿತ್ವಗಳು ತಮ್ಮ ನೆಲೆಯಲ್ಲಿ ತಾವೇ ಕಂಡುಕೊಳ್ಳಲು ತಡಕಾಡುತ್ತಿರುವ ಸಂದರ್ಭದಲ್ಲಿ ಇಲ್ಲಿನ ವ್ಯಕ್ತಿತ್ವಗಳನ್ನು ಪಶ್ಚಿಮದ ತಾತ್ವಿಕತೆಯ ನಡುವೆ ಸಮೀಕರಿಸಿ ನೋಡಿಕೊಂಡ ಬಗೆಯಿಂದಾಗಿ ಅಸ್ತಿತ್ವವಾದದ ಪ್ರಭಾವ ನಮ್ಮ ಸಾಹಿತ್ಯದ ಮೇಲೆ ಆಯಿತು. ಇದಕ್ಕೆ ಅನಂತಮೂರ್ತಿಯವರ ಸಾಹಿತ್ಯವೂ ಹೊರತಾಗಿಲ್ಲ.

೧.೩ ತಲೆಮಾರುಗಳ ಸಂಘರ್ಷ

ಪರಂಪರೆಯ ಉಳಿವಿಗಾಗಿ ಸಂಪ್ರದಾಯವು ಮುಂದುವರಿಯಬೇಕೆಂಬ ಹಂಬಲ ಹಿರಿಯರಿಗಿದೆ. ಜಡ್ಡುಗಟ್ಟಿದ ಸಂಪ್ರದಾಯವನ್ನು ದಾಟಿ ಹೊಸತನ್ನು ಸ್ವೀಕರಿಸಬೇಕೆಂಬ ಉತ್ಸಾಹ ಹೊಸಪೀಳಿಗೆಗೆ ಇದೆ. ಪರಂಪರಾಗತ ಮೌಲ್ಯಗಳನ್ನು ಬಿಟ್ಟು ಬದುಕಲು ಒಪ್ಪದಿರುವುದು ಒಂದಾದರೆ, ತಾವು ರೂಪಿಸಿಕೊಳ್ಳಬಯಸುವ ಹೊಸ ಮೌಲ್ಯಗಳನ್ನು ಅರ್ಥಪೂರ್ಣವಾಗಿ ಸ್ಪಷ್ಟಪಡಿಸಿಕೊಳ್ಳಲಾಗದ ಸ್ಥಿತಿ ಇನ್ನೊಂದು. ತಲೆಮಾರಿನಿಂದ ತಲೆಮಾರಿಗೆ ಕಾಲದ ಅಂತರವಿರುವುದರಿಂದ ಈ ವ್ಯತ್ಯಾಸವು ಕಂಡು ಬರುತ್ತದೆ. ಸಂಪ್ರದಾಯವನ್ನು ಅನುಸರಿಸುವವರು ಒಂದು ಕಡೆಯಾದರೆ, ಅದರಿಂದ ವಿಮೋಚನೆ ಬಯಸುವವರು ಇನ್ನೊಂದು ಕಡೆ. ಇವರಿಬ್ಬರೂ ಎದುರಿಸುವ, ಅನುಭವಿಸುವ ಹಾಗೂ ಕಂಡುಕೊಳ್ಳುವ ನೆಲೆಗಳಲ್ಲಿ ನಿರಂತರ ಹೋರಾಟವಿದೆ.

"ಎರಡು ಮನಸ್ಥಿತಿಗಳ ಸಂಘರ್ಷ ಕ್ರಮೇಣ ಪೀಳಿಗೆಯಿಂದ ಪೀಳಿಗೆಗಳ ನಡುವಣ ಸಂಘರ್ಷವಾಗಿ ಸಂಕ್ರಮಣ ಸ್ಥಿತಿಯ ರೂಪಕವೊಂದು ನಿರ್ಮಾಣಗೊಂಡು ಬಿಡುತ್ತದೆ."[೧೨] ಪೀಳಿಗೆಗಳ ನಡುವಿನ ಸಂಘರ್ಷವನ್ನು ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಕಾಣಬಹುದು.

ಹಳೆಯ ಹಾಗೂ ಹೊಸ ಮೌಲ್ಯಗಳ ಹಿನ್ನೆಲೆಯಲ್ಲಿ ಪೀಳಿಗೆಯಿಂದ ಪೀಳಿಗೆಯ ನಡುವೆ ನಡೆಯುವ ಸಂಘರ್ಷವನ್ನು 'ಪ್ರಕೃತಿ' ಕತೆಯಲ್ಲಿ ಕಾಣಬಹುದು. ಇಲ್ಲಿ ಗದ್ದೆ ಹಾಗೂ ತೋಟಗಳಿಂದ ಬೆಳೆಯನ್ನು ಬೆಳೆದು ವ್ಯವಸಾಯದ ಕಸುಬನ್ನು ಮುಂದುವರಿಸಲು ಸಂಕಪ್ಪಯ್ಯ ಪ್ರಯತ್ನಿಸುತ್ತಾನೆ. ಅವನ ಮಗನಾದ ನಾಣಿಯು ಹಳೆಯ ಮೌಲ್ಯಗಳನ್ನು ಬಿಟ್ಟು ಆಧುನಿಕ ಜೀವನವನ್ನು ಬಯಸುತ್ತಾನೆ. ನವೀನತೆಯ ಪ್ರಭಾವಕ್ಕೆ ಒಳಗಾದ ಇವನು ವ್ಯವಸಾಯದ ವೃತ್ತಿಯನ್ನು ಬಿಟ್ಟು ಹೋಟೆಲಿನ ವ್ಯವಹಾರವನ್ನು ನಡೆಸಬೇಕೆಂದು ನಿರ್ಧರಿಸುತ್ತಾನೆ. ಪೀಳಿಗೆಯಿಂದ ಪೀಳಿಗೆಗೆ ಮನೆತನದವರು ನಡೆಸಿಕೊಂಡು ಬಂದ ವ್ಯವಸಾಯದ ವೃತ್ತಿಯನ್ನು ತಂದೆ ಅವಲಂಬಿಸಿದರೆ, ಹೋಟೆಲಿನ ಉದ್ಯಮದತ್ತ ಮಗನು ತಿರುಗಿಕೊಳ್ಳುತ್ತಾನೆ. ಹೋಟೆಲನ್ನು ನಡೆಸಬೇಕೆಂಬ ಮಗನ ನಿರ್ಧಾರಕ್ಕೆ ತಾಯಿಯು ಸಮ್ಮತಿಸಿದರೆ, ತಂದೆಯು ವಿರೋಧಿಸುತ್ತಾನೆ.

ಹಳೆಯ ಮೌಲ್ಯಗಳನ್ನು ಉಳಿಸಿಕೊಳ್ಳಬಯಸುವ ಸಂಕಪ್ಪಯ್ಯ ಮಗನನ್ನು ತಮ್ಮ ದಾರಿಗೆ ಒಗ್ಗಿಸಿಕೊಳ್ಳದೇ ಹೋಗುತ್ತಾನೆ. ಮಗ ತನ್ನಂತೆಯೇ ಗದ್ದೆಯನ್ನು ನೋಡಿಕೊಂಡು ಹೋಗಬೇಕೆನ್ನುವ ಅವನ ಇಚ್ಛೆ ಇಚ್ಛೆಯಾಗಿಯೇ ಉಳಿಯುತ್ತದೆ. ತನ್ನ ತಲೆಮಾರಿನವರೇ ಆದ ಶಾನುಭೋಗ, ಸೀತಮ್ಮ, ಹಾಗೂ ಅವಳ ಅಣ್ಣ ಆಧುನಿಕತೆಗೆ ವಾಲುತ್ತಿರುವುದನ್ನು ಗಮನಿಸಿ ಬೇಸರ ಪಟ್ಟುಕೊಳ್ಳುತ್ತಾನೆ. ಮಗಳು ಲಕ್ಷ್ಮಿಯ ಬಗೆಗೆ ಅಪಾರ ನಂಬಿಕೆ ಇಟ್ಟುಕೊಂಡ ಸಂಕಪ್ಪಯ್ಯ ಅವಳು ಗಂಡನನ್ನು ಕಳೆದುಕೊಂಡಾಗಲೂ ಎದೆಗುಂದುವುದಿಲ್ಲ. ನಾನು ಗಟ್ಟಿಮುಟ್ಟಾಗಿರುವ ತನಕ ಗಂಡ ಸತ್ತರೆ ಅವಳೇಕೆ ಕೊರಗಬೇಕು ಎಂದುಕೊಳ್ಳುತ್ತಾನೆ.

ಲಕ್ಷ್ಮಿಗೂ ಮಿಕ್ಕ ಹೆಂಗಸರಂತೆ ಸುಖವಾಗಿರಬೇಕೆಂಬ ಆಸೆ ಇರುತ್ತದೆ ಎಂಬ ಸೀತಮ್ಮನ ಆಲೋಚನೆಯನ್ನು ಸಂಕಪ್ಪಯ್ಯ ಒಪ್ಪುವುದಿಲ್ಲ. ನೈಸರ್ಗಿಕ ಬಯಕೆ ಇರಬಹುದು ಆದರೆ ಅವಳೂ ಯಾಕೆ ನನ್ನಂತೆ ಹೋರಾಡಿ ನಿಗ್ರಹಿಸಿಕೊಳ್ಳಬಾರದು ಎನ್ನುತ್ತಾನೆ. ಹುಚ್ಚೆದ್ದು ಕುಣಿಯುವ ಇಂದ್ರಿಯಗಳನ್ನು ನಿಗ್ರಹಿಸುವುದು ಅಸಾಧ್ಯವಲ್ಲ ಎಂಬ ಸಂಕಪ್ಪಯ್ಯನ ಆಲೋಚನೆಯ ಹಿಂದೆ ಸಂಪ್ರದಾಯವನ್ನು ಮೀರದ

[illegible]

[illegible]

[illegible]

[illegible]

[illegible]

[illegible]

ನಂಬಿಕೆಯಿದೆ. ತನಗೆ ಎದುರಾಡುವ ಮಗ ಹಾಗೂ ಹೆಂಡತಿಯಿಂದ ಬೇಸರಗೊಂಡ ಸಂಕಪ್ಪಯ್ಯ, ಮಗಳು ಲಕ್ಷ್ಮಿ ಹಾಗೂ ಶಾಂತ ಇವರಾದರೂ ತನ್ನನ್ನು ಪ್ರೀತಿಯಿಂದ ಕಾಣುತ್ತಾರೆ ಎಂದು ನಂಬಿ ಆ ಸುಖದ ಹಿನ್ನೆಲೆಯಲ್ಲಿ ತೋಟಗದ್ದೆಗಳಿಂದ ಕಿತ್ತಳೆ ಬೆಳೆಯುವ ಕನಸು ಕಾಣುತ್ತಾನೆ. ಹಳೆಯ ಮೌಲ್ಯಗಳನ್ನು ಉಳಿಸಿಕೊಳ್ಳಲು ಯತ್ನಿಸುತ್ತಾನೆ. ಮಗನ ಹೋಟೆಲಿಡುವ ಆಸೆ ಹಾಗೂ ಮಗಳ ಪ್ರಕೃತಿ ಸಹಜ ಪ್ರವೃತ್ತಿಯನ್ನು ಗಮನಿಸದೇ ಹೋಗುತ್ತಾನೆ.

ಧರ್ಮ + ಸೂಕ್ಷ್ಮತೆಯಲ್ಲಿದ್ದ ಪ್ರಶ್ನೆಯನ್ನು ದೇಹಾನುಕೂಲದ ಸಿದ್ಧಾಂತ ತಳ್ಳಿಹಾಕಿಬಿಡುತ್ತದೆ. ಸಾಮಾಜಿಕವಾಗಿ ಮೇಲ್ ಸ್ತರವನ್ನು ಪ್ರತಿನಿಧಿಸುವ ವ್ಯಕ್ತಿಗಳ ಸ್ವಭಾವದಲ್ಲಿ ದೇಹ–ಮನಸ್ಸುಗಳೊಳಗಣ ಗೊಂದಲ ಸಹಜವಾಗಿರುವುದನ್ನು ಗುರುತಿಸಿರುವ ಈ ಭಾಗ ದೇಹದ ಬೇಕು ಬೇಡಗಳಿಗೆ ಮನಸ್ಸು ಶರಣಾಗುವ ಸನ್ನಿವೇಶವನ್ನು ಕಲ್ಪಿಸುವುದರ ಮೂಲಕ ಕತೆಯು ಲೇಖಕರ ಆಶಯವನ್ನು ಎತ್ತಿ ಹಿಡಿಯುತ್ತದೆ.

ಕಿತ್ತಳೆ ಬೆಳೆಗೆ ಹದವೆನಿಸದ ನೆಲದಲ್ಲಿ ಅದೇ ಬೆಳೆಯನ್ನು ಬೆಳೆಯಲು ಪ್ರಯತ್ನಿಸಿದ ಸಂಕಪ್ಪಯ್ಯನು ವಿಫಲನಾದಾಗ ಅವನ ಪರಿಶ್ರಮವು ವ್ಯರ್ಥವಾಗುತ್ತದೆ. ಇಲ್ಲಿ ಕಿತ್ತಳೆ ಬೆಳೆಗೆ ಹದವೆನಿಸದ ನೆಲದಲ್ಲಿ ಬೆಳೆ ಬೆಳೆಯುವುದು ಆಧುನಿಕ ವಿಚಾರಗಳನ್ನು ತುಂಬಿಕೊಂಡ ಬದುಕು ಸಂಪ್ರದಾಯದ ಒಳಗಡೆಯೇ ಹಸನಾಗಲಾರದು ಎಂಬುದನ್ನು ಪರ್ಯಾಯವಾಗಿ ಸಂಕೇತಿಸುತ್ತದೆ. ಗಂಡಸತ್ತ ಮೇಲೆ ಲಕ್ಷ್ಮಿಯು ಶಾನುಭೋಗನ ಮಗ ಕಿಟ್ಟಿಯೊಂದಿಗೆ ಅನೈತಿಕ ಸಂಬಂಧ ಹೊಂದಿರುವುದನ್ನು ನೋಡಿದ ಸಂಕಪ್ಪಯ್ಯ ಮಗಳ ಬಗ್ಗೆ ಬೇಸರಪಡುತ್ತಾನೆ.

ಕಿತ್ತಳೆ ಬೆಳೆ ಹೇಗೆ ಅದಕ್ಕೆ ಹದವೆನಿಸದ ನೆಲದಲ್ಲಿ ಬೆಳೆಯಲಾರದೋ ಹಾಗೆಯೇ ವಿಧವೆಯಾದರೂ ಯೌವನೆಯಾದ ಲಕ್ಷ್ಮಿಯ ಬದುಕು ಸಂಪ್ರದಾಯದ ಒಳಗಡೆ ಬಂಧಿಸಿಡಲಾಗದ್ದು. ಸಂಪ್ರದಾಯದ ಕಾರಣಕ್ಕಾಗಿ ಬದುಕಿಗೆ ಅನಿವಾರ್ಯವಾದ ವಿಚಾರಗಳ ಬಗೆಗೆ ಮುಕ್ತವಾಗಿ ಚಿಂತಿಸಿ ಕಾರ್ಯೋನ್ಮುಖರಾಗಬೇಕಾದ ಅಗತ್ಯವನ್ನು ಕತೆ ಮುಂದಿಡುತ್ತದೆ. ಕಿತ್ತಳೆ ಬೆಳೆಯ ಪ್ರಯತ್ನ ವಿಫಲವಾದ್ದರಿಂದ ಹಾಗೂ ವಿಧವೆ ಮಗಳು ಅನೈತಿಕ ಸಂಬಂಧವನ್ನು ಹೊಂದಿದ್ದರಿಂದ ಪ್ರಕೃತಿಯ ಸಹಜ ಪ್ರವೃತ್ತಿಯ ಮುಂದೆ ಮೇಲಿನ ಎರಡೂ ಸಂದರ್ಭದಲ್ಲಿ ಸಂಕಪ್ಪಯ್ಯ ಸೋಲುತ್ತಾನೆ. ಇಲ್ಲಿ ನಾಣಿಯು ಪ್ರತ್ಯಕ್ಷವಾಗಿ ಹಾಗೂ ಲಕ್ಷ್ಮಿಯು ಪರೋಕ್ಷವಾಗಿ ಸಂಕಪ್ಪಯ್ಯನಿಗೆ ಮುಖಾಮುಖಿಯಾಗುತ್ತಾರೆ.

ಪೀಳಿಗೆಯಿಂದ ಪೀಳಿಗೆಗೆ ಆಚರಿಸಿಕೊಂಡು ಬಂದ ಅನಂತವ್ರತ, ಗೌರಿ ಹಾಗೂ ಗಣೇಶನ ಹಬ್ಬಗಳನ್ನು ಕುಟುಂಬ ಸಮೇತವಾಗಿ ಸಂಕಪ್ಪಯ್ಯ ಮುಂದುವರಿಸಿಕೊಂಡು ಬಂದಿದ್ದನು. ವೈದಿಕ ಬ್ರಾಹ್ಮಣರಿಗೆ ಯೋಗ್ಯವಲ್ಲದ ಅನ್ನವಿಕ್ರಯಕ್ಕಾಗಿ ಹೋಟೆಲನ್ನು ಆರಂಭಿಸಲು ಮಗನು ನಿರ್ಧರಿಸಿದಾಗ ತಾಯಿಯು ಬೆಂಬಲವನ್ನು ನೀಡುತ್ತಾಳೆ. ಆಗ ವಂಶಪಾರಂಪರ್ಯವಾಗಿ ಗುಡ್ಡಗಳ ಜೊತೆ ಸೆಣಸಿ ಬೆಳೆಸಿದ ತೋಟ ಗದ್ದೆಗಳನ್ನು ಪರಭಾರೆ ಮಾಡಲು ಸಂಕಪ್ಪಯ್ಯನು ಒಪ್ಪದಿದ್ದಾಗ ಕುಟುಂಬದಲ್ಲಿ ಸಂಘರ್ಷವೇರ್ಪಡುತ್ತದೆ. ತಮಗೆ ಸೋಲಾದರೂ ತಮ್ಮ ಸಂಪ್ರದಾಯವನ್ನು ಬಿಡದ ಹಠ ಸಂಕಪ್ಪಯ್ಯನದು. ಸಂಪ್ರದಾಯವನ್ನು ಮೀರುವ ಹವಣಿಕೆಯಲ್ಲಿ ನಾಣಿ, ಕಿಟ್ಟಿ, ಲಕ್ಷ್ಮಿ ಇದ್ದಾರೆ. ಕಾಲದ ಬದಲಾವಣೆಗೆ ಸಹಜವೆನ್ನುವಂತೆ ಸೀತಮ್ಮ, ಅವಳ ಅಣ್ಣ ಹಾಗೂ ಶಾನುಭೋಗ ಹೊಂದಿಕೊಳ್ಳುತ್ತಾರೆ. ಹೀಗೆ ಹಳೆಯ ತಲೆಮಾರಿನ ಆಲೋಚನೆಗೂ ಹೊಸ ತಲೆಮಾರಿನ ಚಿಂತನೆಗಳ ಭಿನ್ನತೆಯು ಕತೆಯಲ್ಲಿ ಸಹಜವಾಗಿ ಮೂಡಿಬಂದಿದೆ. ಆದರೆ ಹಳೆಯ ತಲೆಮಾರಿನವರೇ ಆದ

ಶಾನುಭೋಗ, ಸೀತಮ್ಮ ಹಾಗೂ ಅವಳ ಅಣ್ಣ ಹೊಸ ತಲೆಮಾರಿನ ವಿಚಾರಗಳಿಗೆ ಸ್ಪಂದಿಸುವುದು ವಿಶೇಷವೆನಿಸಿದೆ.

ಪರಂಪರೆ ಮತ್ತು ಸಮಕಾಲೀನ ವಿಚಾರಗಳ ವ್ಯತ್ಯಾಸವನ್ನು 'ಎಂದೆಂದೂ ಮುಗಿಯದಕತೆ' ಯಲ್ಲಿ ಕಾಣಬಹುದು. ಸಂಸ್ಕೃತಿಯ ವಾರಸುದಾರಿಕೆಯ ಇಂದಿನ ಸಮಾಜವು ಸಂಪ್ರದಾಯ, ನಂಬಿಕೆಯನ್ನು ಉಳಿಸಿಕೊಂಡು ಬರುವ ಸಾಂಸ್ಕೃತಿಕ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ಗೊಂದಲವಿದೆ. ಹಿಂದೊಮ್ಮೆ ಮೊಮ್ಮಕ್ಕಳು, ಮಕ್ಕಳಾಗಿದ್ದವರು ಇಂದು ಅಜ್ಜ ಅಜ್ಜಿಯರಾಗಿದ್ದಾರೆ. ಅವರಿಗೇ ಈಗ ಮಕ್ಕಳು ಮೊಮ್ಮಕ್ಕಳು ಆಗಿದ್ದಾರೆ. ಅವನ ಅಜ್ಜಿ ಮೊಮ್ಮಗನಿಗೆ ಹೇಳಿದ ಕತೆಯನ್ನು ಅವನ ಮೊಮ್ಮಗ ತನ್ನ ಅಜ್ಜಿಯಿಂದ ಕೇಳುತ್ತಿದ್ದಾನೆ. ಅವನ ತಾತನಿಗೆ ಅನ್ನ ನೀಡಿದ ಭೂಮಿಯೇ ಮೊಮ್ಮಗನಿಗೂ ಅನ್ನವನ್ನು ನೀಡುತ್ತಿದೆ. ಮನೆಯಲ್ಲಿನ ನಾಲ್ಕು ಎಮ್ಮೆಗಳೂ ಅವನ ಮನೆಯಲ್ಲೇ ಹುಟ್ಟಿ ಬೆಳೆದವುಗಳು. ಅವುಗಳ ತಾಯಿಯ ಅಜ್ಜಿಯ ಹಾಲನ್ನು ನಿರಂತರವಾಗಿ ಅಜ್ಜ, ಮಗ, ಮೊಮ್ಮಗ, ಕುಡಿದು ಬೆಳೆದಿದ್ದಾರೆ. ತೊಂಬತ್ತು ವರ್ಷವಾದರೂ ಗಟ್ಟಿಮುಟ್ಟಾಗಿರುವ ಮುದುಕನಿಗೆ ತನ್ನ ಮೇಲೆ ಮಗನಿಗೆ ಇರುವ ಗೌರವ, ಭಕ್ತಿ, ತನ್ನ ಹೆಸರನ್ನೆ ಮೊಮ್ಮಗನಿಗೆ ಇಟ್ಟಿದ್ದಾರೆಂದು, ಹಾಗೂ ಈಗಿನ ಕಾಲದವರಾದರೂ ಮೊಮ್ಮಕ್ಕಳು ತನ್ನನ್ನು ಪ್ರೀತಿಯಿಂದ ಕಾಣುತ್ತಾರೆಂದು ಹೆಮ್ಮೆಯೆನಿಸುತ್ತದೆ.

ಈ ಕತೆಯಲ್ಲಿ ಮಕ್ಕಳು ತಮ್ಮ ಸದ್ಯದ ಬದುಕನ್ನು ತಿಳಿಯುವುದರೊಂದಿಗೆ ಪರಂಪರೆಯನ್ನು ಅವಲೋಕಿಸಿ ತಿಳಿಯುವ ಆತುರದಲ್ಲಿದ್ದಾರೆ. ಮುದುಕ ಒಂದು ತಲೆಮಾರಿನ ಪ್ರತಿನಿಧಿಯಾಗಿದ್ದಾನೆ. ಹಿಂದಿನ ಪಾರಂಪರಿಕ ಸಂಸ್ಕೃತಿಯನ್ನು ಒಡೆದು ಹೇಳುವ ಮುದುಕ ಮುದುಕಿಯರು ಪರಂಪರೆಯ ಬಗ್ಗೆ ಪ್ರೀತಿಯನ್ನಿಟ್ಟುಕೊಂಡಿದ್ದಾರೆ. ತಾವು ತಮ್ಮ ಕಾಲದಲ್ಲಿ ಕಂಡ ಬದುಕಿನ ಹಲವಾರು ಸಂದರ್ಭಗಳನ್ನು ಪ್ರಸ್ತುತ ನೋಡುವ ತವಕದಲ್ಲಿದ್ದಾರೆ. ಆದರೆ ಸದ್ಯದ ಜೀವನದ ಸಂಗತಿಗಳು ಅದನ್ನು ಸ್ಪಷ್ಟಪಡಿಸುವುದಿಲ್ಲ. ಬಾಲ್ಯ, ಪ್ರೀತಿ, ಪ್ರೇಮ ಹೀಗೆ ಬೆಳೆಯುವ ಕೌಟುಂಬಿಕ ವಾತಾವರಣವು ಹಾಗೂ ಬದುಕುವ ಸಾಂಸ್ಕೃತಿಕ ಪರಿಸರವೆಲ್ಲವೂ ಪರಂಪರೆಯಂತೆ ಮುಂದುವರೆಯುತ್ತಲೇ ಇರುತ್ತದೆ. ಆದರೆ ಜೀವನ ಶೈಲಿಯಲ್ಲಿ ಪರಿವರ್ತನೆ ಎಂಬುದು ಕಾಲದ ಮಿತಿಯಲ್ಲಿ ಅನಿವಾರ್ಯವೆನಿಸಿದರೂ ಒಟ್ಟು ಸಾಂಸ್ಕೃತಿಕ ನೆಲೆಯಲ್ಲಿ ಪರಂಪರೆಯ ಗ್ರಹಿಕೆಯು ಅಗತ್ಯವಾಗಿದೆ. ಜವಾಬ್ದಾರಿಯ ಹಿನ್ನೆಲೆಯಲ್ಲಿ ಈ ಸಾಂಸ್ಕೃತಿಕ ವಿಚಾರಗಳು ಉಳಿಯಲೇ ಬೇಕಾದ, ಮೆಲುಕು ಹಾಕಬೇಕಾದ ಒತ್ತಡಗಳು ಸಮಕಾಲೀನ ಜೀವನದಲ್ಲಿ ಅನಿವಾರ್ಯವಾಗಿ ಬೇಕಾಗುತ್ತದೆ.

ಇಂತಹ ಸಾಂಸ್ಕೃತಿಕ ಪರಿಸರವನ್ನು ಮುದುಕ-ಮುದುಕಿಯರು ಒಂದೆಡೆ ಪರಂಪರೆಯ ವಾರಸುದಾರರಾದರೆ ಮಕ್ಕಳು ಪ್ರಸ್ತುತ ಸಾಮಾಜಿಕ ವ್ಯವಸ್ಥೆಯ ವಾರಸುದಾರರು. ಮೊಮ್ಮಕ್ಕಳು ಭವಿಷ್ಯದ ನಿರೀಕ್ಷೆಯನ್ನು ಸೂಚಿಸುತ್ತಾರೆ. ಮೊಮ್ಮಗ ಹಾಗೂ ಅವನ ಹೆಂಡತಿ ಗಟ್ಟಿಯಾಗಿ ನಗುತ್ತಾರೆ ಎಂದು ಮುದುಕ ಗೊಣಗುತ್ತಾನೆ. ನಂತರ ಮೊಮ್ಮಕ್ಕಳನ್ನು ಯಾಕಾದರೂ ದೂರಬೇಕು, ಮದುವೆಯಾಗಿ ಹೆಚ್ಚು ದಿನವಾಗಿಲ್ಲ ಎಂದುಕೊಳ್ಳುತ್ತಾನೆ. ಬಹಳ ಹಿಂದೆ ತಾನೂ ಪಗಡೆಯಾಡದೇ, ಆಡುತ್ತಾ ಜಗಳವಾಡದೇ ಮಲಗಲು ಹೋದ ದಿನ ಒಂದಾದರೂ ಇತ್ತೇ ಎಂದು ನೆನಪಿಸಿಕೊಳ್ಳುತ್ತಾನೆ. ಅದೇ ದಾಳ, ಅದೇ ಹಾಸು, ಅದೇ ಕಾಯಿಗಳಲ್ಲಿ ಮುದುಕನ ಅಜ್ಜಿ ಮತ್ತೆ ಆ ಮುದುಕ, ಆಮೇಲೆ ಅವನ ಮಗ ಈಗ ಮೊಮ್ಮಗ ಎಲ್ಲರೂ ಅವುಗಳಲ್ಲೇ ತಮ್ಮ ಪ್ರೇಮದ ಆಟ ಆಡಿದ್ದಾರೆ. ಹೀಗೆ ಪೀಳಿಗೆಯಿಂದ ಪೀಳಿಗೆಗೆ ಕತೆ ಮುಂದುವರಿದಿದೆ.

ಜೀವನ+ಸ್ಮೃತಿ ಮತ್ತು ಬದಲಾವಣೆ ಎರಡೂ ಒಟ್ಟಾಗಿ ಬಂದಿದೆ. ಪರಂಪರೆಯು ಯಾವಾಗಲೂ ಬೇರೊಂದು ರೂಪದಲ್ಲಿ ಮುಂದುವರಿಯುವ ಸಂಘರ್ಷವಾಗಿದೆ. ಬದಲಾವಣೆ ನಿರಂತರ, ಅದರಿಂದ ಉಂಟಾಗುವ ಸಂಘರ್ಷವೂ ನಿರಂತರವಾಗಿದೆ. ನಿರಂತರತೆಯೇ ಇಲ್ಲಿ ಬದಲಾವಣೆಯ ಸ್ವರೂಪವನ್ನು ಪಡೆದಿದೆ. ಬದಲಾವಣೆಗೂ ಹಾಗೂ ಬದಲಾಗಬೇಕು ಎಂಬ ಆಶಯವಿರುವವರ ನಡುವೆ ಸಂಘರ್ಷವು ಸಹಜವಾಗಿಯೇ ಏರ್ಪಡುತ್ತದೆ.

ಅತ್ತೆ ಸೊಸೆಯ ಸಂಬಂಧದ ವೈರುಧ್ಯಗಳಲ್ಲಿ ತಲೆಮಾರುಗಳ ಸಂಘರ್ಷವು 'ಪ್ರಸ್ತ' ಕತೆಯಲ್ಲಿ ಕಂಡುಬರುತ್ತದೆ. ವೆಂಕಮ್ಮ ಹಳೆಯ ತಲೆಮಾರಿನವರು. ನೇತ್ರಾವತಿ ಹಾಗೂ ಪುಂಡರೀಕನದು ಹೊಸ ತಲೆಮಾರು. ವಯಸ್ಸಾಗಿರುವ ವೆಂಕಮ್ಮನಿಗೆ ಆಧುನಿಕ ಜೀವನ ನಡೆಸುವ ಸೊಸೆಯ ನಡವಳಿಕೆಗಳು ಹಿಡಿಸದಿದ್ದರೆ, ತನ್ನ ಕಾಲದ ಸಹಜಗತಿಗೆ ಚಲಿಸುವ ನೇತ್ರಾವತಿಗೆ ಹಳೆಯ ಕಾಲದ ರೀತಿ ನೀತಿಗಳು ಹಿಡಿಸುವುದಿಲ್ಲ. ಎರಡು ಜೀವನ ಕ್ರಮಗಳ ವ್ಯತ್ಯಾಸವು ಪ್ರಸ್ತ ಕತೆಯಲ್ಲಿ ವಿನ್ಯಾಸಗೊಂಡಿದೆ.

ಜೀವನದಲ್ಲಿ ಸಾಕಷ್ಟು ತೊಂದರೆಯನ್ನು ಅನುಭವಿಸಿದ ವೆಂಕಮ್ಮನಿಗೆ ಹಳೆಯ ಮೌಲ್ಯಗಳ ಮೇಲೆ ನಂಬಿಕೆಯಿದೆ. ತಾನು ಹಿಂದಿನಿಂದ ನಡೆಸಿಕೊಂಡು ಬಂದ ರೀತಿ ನೀತಿಗಳಲ್ಲಿಯೇ ಬದುಕು ಸಾಗಬೇಕೆಂದು ಬಯಸುತ್ತಾಳೆ. ಸೊಸೆ ಮಡಿವಂತಳಾಗಿರಬೇಕು, ಮುತ್ತೈದೆಯಂತೆ ನಡುವೆ ಬೈತಲೆ ತಗೆಯಬೇಕು, ದೊಡ್ಡ ಕುಂಕುಮವಿಡಬೇಕು ಹಾಗೂ ತಾನು ಅತ್ತೆಗೆ ಹೆದರುತ್ತಿದ್ದಂತೆ ಸೊಸೆಯೂ ತಮ್ಮನ್ನು ಗೌರವವಿಸಬೇಕೆಂದು ವೆಂಕಮ್ಮ ನಿರೀಕ್ಷಿಸುತ್ತಾಳೆ. ಮಗನಲ್ಲಿ ಬ್ರಾಹ್ಮಣಾರ್ಥ ಹೊಂದಿದ ಮಡಿವಂತ ಜೀವನವನ್ನು ನಿರೀಕ್ಷಿಸುತ್ತಾಳೆ. ಹೀಗೆ ವೆಂಕಮ್ಮ ಸೊಸೆ ಹಾಗೂ ಮಗನ ಮೇಲೆ ಅಧಿಕಾರ ಹೊಂದಲು ಇಚ್ಛಿಸುತ್ತಾಳೆ.

ಸಣ್ಣ ಕುಂಕುಮವಿಟ್ಟು, ವಾರೆಬೈತಲೆ ತಗೆದು ಹೊಸ ಬದುಕನ್ನು ಅನುಸರಿಸುವ ನೇತ್ರಾವತಿಗೆ ಮಡಿವಂತಿಕೆಯ ಜೀವನ ಬೇಸರವೆನಿಸುತ್ತದೆ. ಈ ಹಾಳು ಜುಟ್ಟನ್ನು ಕತ್ತರಿಸಿ, ಸಂಪೂರ್ಣ ಕ್ರಾಪು ಬಿಡಿ ಎಂದು ಗಂಡನಿಗೆ ಹೇಳುತ್ತಾಳೆ. ಬ್ರಾಹ್ಮಣಾರ್ಥ, ಸಂಭಾವನೆ ಬಿಟ್ಟು ಹೋಟೆಲಿಡಿ ಎಂದು ಒತ್ತಾಯಿಸುತ್ತಾಳೆ. ನೇತ್ರಾವತಿಗೆ ಅತ್ತೆಯ ಯಜಮಾನಿಕೆಯಿಂದ ವಿಮೋಚನೆ ಬೇಕಾಗಿದೆ.

ಹೊಂದಾಣಿಕೆಯ ಆತಂಕದಲ್ಲಿರುವ ಪುಂಡರೀಕ ಆಧುನಿಕ ಬದುಕಿನಿಂದ ಪ್ರಭಾವಿತನಾಗಿದ್ದರೂ ಸಂಪ್ರದಾಯವನ್ನು ಸಂಪೂರ್ಣ ಬಿಡಲು ಸಿದ್ಧನಿಲ್ಲ. ತಾಯಿಗೆ ನೋವಾಗದಿರಲೆಂದು ಹಿಂದಕ್ಕೆ ಜುಟ್ಟುಬಿಟ್ಟು, ಹೆಂಡತಿಗೆ ಇಷ್ಟವಾಗಲೆಂದು ಮುಂದಕ್ಕೆ ಕ್ರಾಪು ಮಾಡಿಸಿದ್ದಾನೆ , ಹೋಟೆಲಿಡುವ ಇಷ್ಟವಿದ್ದರೂ ತಾಯಿ ಒಪ್ಪುತ್ತಾಳೋ ಇಲ್ಲವೋ ಎಂದು ಯೋಚಿಸುತ್ತಾನೆ.

ಸೀತಕ್ಕ ಸಂಪ್ರದಾಯಬದ್ಧ ಜೀವನಕ್ಕೆ ಹೊಂದಿಕೊಂಡಿರುತ್ತಾಳೆ. ಶಾಮಭಟ್ಟನು ಸಂಪ್ರದಾಯ ಹಾಗೂ ಆಧುನಿಕ ಎರಡೂ ಪೀಳಿಗೆಗಳ ನಡುವೆ ಹೊಂದಾಣಿಕೆಯನ್ನು ತರಲು ಬಯಸುತ್ತಾನೆ. ಮಗ ಹಾಗೂ ಸೊಸೆಯ ಬಗೆಗೆ ದೂರನ್ನು ಹೇಳುವ ವೆಂಕಮ್ಮನಿಗೆ ಹೊಸ ತಲೆಮಾರಿನವರ ನಡವಳಿಕೆಗಳ ಅನಿವಾರ್ಯತೆಯನ್ನು ತಿಳಿಸುವಲ್ಲಿ ಶಾಮಭಟ್ಟನು ವಿಫಲನಾಗುತ್ತಾನೆ. ವಯಸ್ಸಾದವರಂತೆ ಸಹಜವಾದ ವರ್ತನೆ ವೆಂಕಮ್ಮನದು

[illegible]

[illegible]

[illegible]

[illegible]

[illegible]

[illegible]

[illegible]

ಹಳೆಯ ಕಾಲದ ಅತ್ತೆಗೆ ಹೊಂದಿಕೊಂಡು ಹೋಗಬೇಕು ಎಂದು ಶ್ಯಾಮಭಟ್ಟನು ನೇತ್ರಾವತಿಗೆ ಬುದ್ಧಿವಾದ ಹೇಳುತ್ತಾನೆ.

ಹಳೆಯ ಕಾಲದ ಪದ್ಧತಿಗಳನ್ನು ಅನುಸರಿಸಿದ ವೆಂಕಮ್ಮ ಸೊಸೆಯು ತನ್ನಂತೆಯೇ ಜೀವನ ನಡೆಸಬೇಕೆಂದು ನಿರೀಕ್ಷಿಸುತ್ತಾಳೆ. ಹೊಸ ಬದುಕಿಗೆ ಹೊಂದಿಕೊಂಡಿರುವ ನೇತ್ರಾವತಿಯು ಗಂಡನೂ ಸಹ ಆಧುನಿಕ ಬದುಕನ್ನು ಅನುಸರಿಸಬೇಕೆಂದು ಬಯಸುತ್ತಾಳೆ. ಈ ಎರಡು ಪರಿಸ್ಥಿತಿಗಳಿಗೆ ಹೊಂದಿಕೊಳ್ಳಬೇಕಾದ ಪುಂಡರೀಕನು ಗೊಂದಲಕ್ಕೊಳಗಾಗುತ್ತಾನೆ. ಶಾಮಭಟ್ಟನು ವೆಂಕಮ್ಮನ ಸಂಸಾರದ ಹಳತು ಹಾಗೂ ಹೊಸ ವಿಚಾರಗಳ ಹೊಂದಾಣಿಕೆ ಮಾಡುವಾಗ ದ್ವಂದ್ವಕ್ಕೊಳಗಾಗುತ್ತಾನೆ. ವೆಂಕಮ್ಮ, ಸೀತಕ್ಕ ಹೊಸಕಾಲದ ಬದುಕಿನ ಜೊತೆಗೆ ಎಂದೂ ರಾಜಿಮಾಡಿಕೊಳ್ಳುವುದಿಲ್ಲ. ಪುಂಡರೀಕ, ನೇತ್ರಾವತಿ ಹಳೆಯ ಮೌಲ್ಯಗಳಿಗಿಂತ ಹೆಚ್ಚಾಗಿ ಹೊಸ ವಿಚಾರಗಳ ಕಡೆ ಆಸಕ್ತಿವಹಿಸುತ್ತಾರೆ. ಪೀಳಿಗೆಗಳ ನಡುವಿನ ಅಂತರವು ವಿಚಾರಗಳ ಸಂಘರ್ಷವನ್ನು ಹುಟ್ಟು ಹಾಕುತ್ತದೆ.

ವೃದ್ಧಾಪ್ಯ ಮತ್ತು ಯೌವ್ವನಗಳ ನಡುವಿನ ಸಂಬಂಧ ಹುಟ್ಟುಹಾಕುವ ಸಂಘರ್ಷವನ್ನು 'ಪ್ರಶ್ನೆ' ಕತೆಯಲ್ಲಿಯೂ ಗಮನಿಸಬಹುದು. ಹೊಸ ತಲೆಮಾರಿನ ರಂಗನಾಥ ಹಳೆಯ ತಲೆಮಾರಿನ ಶಂಕರಯ್ಯನಿಗೆ ಸವಾಲಾಗುತ್ತಾನೆ. ರಂಗನಾಥ ಶಾರದೆಯನ್ನು ಮದುವೆಯಾಗಿ ಹಳ್ಳಿಯಲ್ಲಿಯೇ ನೆಲೆಸಿ ತೋಟವನ್ನು ನೋಡಿಕೊಳ್ಳಬೇಕೆಂಬುದು ಶಂಕರಯ್ಯನ ವಿಚಾರವಾಗಿದೆ. ಶಾರದೆಯನ್ನು ಮದುವೆಯಾಗಿ ಜೊತೆಗೆ ಶಂಕರಯ್ಯನನ್ನು ಪಟ್ಟಣಕ್ಕೆ ಕರೆದುಕೊಂಡು ಹೋಗಬೇಕೆಂದು ರಂಗನಾಥನು ಆಲೋಚಿಸುತ್ತಾನೆ. ರಂಗನ ಆಧುನಿಕ ವಿಚಾರಗಳು ಹಾಗೂ ಶಂಕರಯ್ಯನ ಹಳೆಯ ವಿಚಾರಗಳು ಈ ಸಂದರ್ಭದಲ್ಲಿ ಮುಖಾಮುಖಿಯಾಗುತ್ತವೆ.

ಶಾರದೆಯನ್ನು ಪಡೆಯಬೇಕೆಂಬ ರಂಗನಾಥನಿಗೆ ಶಂಕರಯ್ಯ ಹಾಗೂ ಅವನ ಮನೆತನದ ಆಣೆ-ಭಾಷೆಗಳು ಅಡ್ಡಿಯಾಗುತ್ತವೆ. ಋಣದ ನೆಪಮಾಡಿ ಶಂಕರಯ್ಯ ಶಾರದೆಯನ್ನು ಕಟ್ಟಿ ಹಾಕಿದ್ದಾನೆ. ರಂಗನನ್ನು ಸೇರಲು ಶಾರದೆಗೆ ಸತ್ತ ಅಕ್ಕನ ನೆನಪು ಅಡ್ಡವಾಗಿದೆ. ಗೋಡೆ ಕೊರೆದ ಗೂಡಿನಲ್ಲಿಟ್ಟಿದ್ದ ಮುರಿದಸೊಂಡಲಿನ ಗಣಪತಿಗೆ ಬೂದುಗಟ್ಟಿದಂತೆ ಶಂಕರಯ್ಯನ ಮನಸ್ಸಿಗೆ ಪುರಾತನ ಕಾಲದ ಆಣೆ-ಭಾಷೆಗಳ ಮಂಕು ಕವಿದಿದೆ. ಶಂಕರಯ್ಯನ ಸ್ವಾರ್ಥಕ್ಕೆ ಶಾರದೆ ಬಲಿಯಾಗುವುದನ್ನು ರಂಗನಾಥ ಸಹಿಸುವುದಿಲ್ಲ. ಶಾರದೆಯ ಉಪೇಕ್ಷೆ ಹಾಗೂ ಶಂಕರಯ್ಯನ ಪರೋಕ್ಷ ಗೆಲುವು ರಂಗನನ್ನು ಪೇಚಿಗೆ ಸಿಲುಕಿಸುತ್ತದೆ.

ಶಂಕರಯ್ಯನ ಋಣದ ಒತ್ತಡವಿರುವ ಶಾರದೆಗೆ ರಂಗನಾಥನ ಪ್ರೀತಿಯು ಅಸಹಜವೆನಿಸುತ್ತದೆ. ಗಂಡು ಹೆಣ್ಣಿನ ಅನೈತಿಕ ಸಂಬಂಧವು ತನ್ನ ಅಕ್ಕನ ಅಕಾಲ ಮರಣಕ್ಕೆ ಕಾರಣವೆಂದುಕೊಳ್ಳುತ್ತಾಳೆ. ಶಂಕರಯ್ಯನ ಅನುಕಂಪಕ್ಕೆ ಕಟ್ಟುಬಿದ್ದ ಶಾರದೆ ರಂಗನಾಥನನ್ನು ಪ್ರೀತಿಸಿದರೂ ಅವನೊಂದಿಗೆ ಬಾಳುವ ಧೈರ್ಯ ತೋರಿಸುವುದಿಲ್ಲ. ರಾತ್ರಿಯ ಕಗ್ಗತ್ತಲಿನಲ್ಲಿ ಹುಲಿಯ ಘರ್ಜನೆ ಕೇಳಿದರೂ ತನ್ನ ಕರುವನ್ನು ಬಿಟ್ಟುಹೋಗಲಾರದ ಕೌಲಿ ಹಸುವಿನಂತೆ ಶಾರದೆ ಶಂಕರಯ್ಯನನ್ನು ಒಂಟಿಯಾಗಿ ಬಿಟ್ಟು ರಂಗನಾಥನನ್ನು ಮದುವೆಯಾಗಲು ಒಪ್ಪುವುದಿಲ್ಲ.

ಹೆತ್ತ ಕರುವಿನ ಮೇಲಿನ ಪ್ರೀತಿಯನ್ನು ಸ್ವಲ್ಪ ಕಾಲಕ್ಕೆ ಮರೆತು ಅದನ್ನು ಅದರ ಪಾಡಿಗೆ ಬಿಟ್ಟಿರುವ ಕಾವೇರಿ ಹಸುವಿನಂತೆ ಶಂಕರಯ್ಯನಿಲ್ಲ. ಮಗಳು ಬೇರೊಬ್ಬನೊಟ್ಟಿಗೆ ಓಡಿಹೋದರೂ ಅದೊಂದು ನಿಸರ್ಗದ ಅನಿವಾರ್ಯ ಕ್ರಿಯೆಯೆಂದು ಸುಮ್ಮನಿದ್ದ ಕೊರಗನ ಸಮಾಧಾನ ಚಿತ್ತವೂ ಶಂಕರಯ್ಯನಿಗಿಲ್ಲ. ಇಂಥ ಶಂಕರಯ್ಯನ ದೈನ್ಯಕ್ಕೆ ಶಾರದೆ ಮರುಕಪಡುತ್ತಾಳಲ್ಲ ಎಂದು ರಂಗನಿಗೆ ಆತಂಕವಾಗುತ್ತದೆ.

ತಂದೆ ಹಾಗೂ ಮಗನ ನಡುವಿನ ವಿಚಾರಗಳ ತಾಕಲಾಟವನ್ನು 'ಸೂರ್ಯನ ಕುದುರೆ' ಕತೆಯಲ್ಲಿ ಕಾಣಬಹುದು. ಹಡೆವೆಂಕಟನ ವೃತ್ತಿ ಮತ್ತು ಪ್ರವೃತ್ತಿಗಳು ಒಂದೇ ಆಗಿವೆ. ಎಲ್ಲರಿಗೂ ಅಭ್ಯಂಜನ ಮಾಡಬಯಸುವ ವೆಂಕಟ ಯಾವುದರಿಂದಲೂ ಚಕಿತನಾಗುವುದಿಲ್ಲ. ತಾನಿರುವುದೇ ಪರರ ಒಳಿತಿಗಾಗಿ ಎಂಬಂತೆ ಬದುಕುತ್ತಾನೆ. ಸುತ್ತಲಿನ ಪರಿಸರದಲ್ಲಿ ಆಸಕ್ತಿ ವಹಿಸುವ ಅವನು ಸಂಸಾರ ನಿರ್ವಹಣೆಯ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಮದುವೆ ವಯಸ್ಸಿಗೆ ಬಂದಿರುವ ಹೆಣ್ಣು ಮಕ್ಕಳ ಹಾಗೂ ಪಟ್ಟಣಕ್ಕೆ ಹೋಗಬೇಕೆಂದು ಬಯಸುವ ಮಗನ ಜವಾಬ್ದಾರಿಯನ್ನು ಕುರಿತು ಚಿಂತಿಸುವುದಿಲ್ಲ. ಊರಿನ ಜನತೆಯ ಕಷ್ಟಗಳಿಗೆ ಸ್ಪಂದಿಸುವ ವೆಂಕಟನ ಧೋರಣೆಯನ್ನು ಮಗ ವಿರೋಧಿಸುತ್ತಾನೆ.

ವೆಂಕಟನ ಸಂಸಾರ ದಾರುಣತೆಯಿಂದ ಕೂಡಿರುತ್ತದೆ. ಜೀವನಕ್ಕೆ ಪ್ರತಿಸ್ಪಂದಿಸುತ್ತ ನಡೆಯುವ ಅವನು ಕಷ್ಟ ಸುಖಗಳನ್ನು ಸಮಾನವಾಗಿ ಸ್ವೀಕರಿಸುತ್ತಾನೆ. ಕಾಳಜಿಗಳು ಸಾಂಸಾರಿಕ ಸೀಮಿತವಾದವುಗಳೆಂದು ತಿಳಿದಿದ್ದಾನೆ. ಮಡದಿ ರುಕ್ಕುವಿನ ಬೈಗುಳಗಳಿಂದ ತಪ್ಪಿಸಿಕೊಳ್ಳಬೇಕು ಮತ್ತು ಮಗನ ಸಿಟ್ಟನ್ನು ಕಡಿಮೆ ಮಾಡಬೇಕೆಂದು ನಿರೀಕ್ಷಿಸುತ್ತಾನೆ. ತನ್ನ ಧೋರಣೆಗಳಿಂದ ಮಗ ದಾರಿ ತಪ್ಪಿದ್ದಾನೆಂಬುದು ವೆಂಕಟನ ಗಮನಕ್ಕೆ ಬರುವುದಿಲ್ಲ. ಬಿಸಿಯಾಗಿರುವ ತಲೆಗಳಿಗೆಲ್ಲಾ ಅಭ್ಯಂಜನ ಮಾಡಿಸಿ ತಂಪು ಮಾಡಬೇಕೆಂಬ ಉದ್ದೇಶವಿರುವ ವೆಂಕಟಿಗನು ಸಿಕ್ಕರೆ ಹುಲಿಯನ್ನು ಅಭ್ಯಂಜನಕ್ಕಿಳಿಸುವ ಆಸೆಯನ್ನು ಹೊಂದಿದ್ದಾನೆ. ಪರಿಸರದ ಒಂದು ಭಾಗವಾಗಿ ಬದುಕಬೇಕೆಂಬ ಹಂಬಲ ಅವನಿಗಿದೆ.

ಬೆಳೆದು ನಿಂತ ನಿನ್ನ ಹೆಣ್ಣು ಮಕ್ಕಳಿಗೆ ಮದುವೆ ಮಾಡಿಲ್ಲ, ಅವರು ಕೆಟ್ಟರೆ ಏನು ಗತಿ ಎಂದು ವೆಂಕಟನನ್ನು ಗೆಳೆಯ ಅನಂತು ಕೇಳುತ್ತಾನೆ. ವರದಕ್ಷಿಣೆ ಕೊಡೋಕೆ ನನ್ನಿಂದಾಗದು ನೀನೇ ಗಂಡು ಹುಡುಕು ಎಂದು ವೆಂಕಟ ಹೇಳುತ್ತಾನೆ. ಮುತ್ತಿನಂಥ ಹುಡುಗಿಯರು ಕೆಡುವುದಿಲ್ಲ, ಅಕಸ್ಮಾತ್ ಕೆಟ್ಟರೆ ಅದನ್ನು ನನ್ನಿಂದ ತಪ್ಪಿಸಲಾಗದು ಎನ್ನುತ್ತಾನೆ.

ಹಿಪ್ಪಿ ಕೂದಲನ್ನು ಬಿಟ್ಟಿರುವ ಸುಬ್ಬುವಿಗೆ ಪೇಟೆಯಲ್ಲಿ ಹಿಟ್ಟಿನ ಗಿರಣಿಯನ್ನು ತೆಗೆಯಬೇಕೆಂಬ ಆಸೆಯಿದೆ. ವ್ಯವಹಾರಕ್ಕೆ ದುಡ್ಡು ಹೊಂದಿಸಿಕೊಡಲಾಗದ ತಂದೆಯನ್ನು ದೂರುತ್ತಾನೆ. ಅಪ್ಪನೆಂದರೆ ಊರಿಗೆಲ್ಲ ಸಸಾರ ಎಂದು ಸುಬ್ಬುವಿಗೆ ಬೇಸರವಿದೆ. ಹಾಜರಿ ಸಾಲದೆಂದು ತನ್ನನ್ನು ಪರೀಕ್ಷೆಗೆ ಕೂಡಿಸದ ಪ್ರಿನ್ಸಿಪಾಲರನ್ನು ಹೊಡೆದು ದುಡ್ಡು ಕಸಿದುಕೊಳ್ಳುತ್ತಾನೆ. ಇದರಿಂದ ಅವನಿಗೆ ಜೈಲಾಗುತ್ತದೆ. ಮನೆಯಲ್ಲಿನ ಒಡವೆಗಳನ್ನೆಲ್ಲ ಕದಿಯುತ್ತಾನೆ. ತಂದೆಯ ಪ್ರಾಣವಾದ ಗಿಡಮರ ಹೂವಿನ ತೋಟವನ್ನು ಧ್ವಂಸ ಮಾಡುತ್ತಾನೆ. ವೆಂಕಟನಿಗೆ ಈ ಎಲ್ಲವನ್ನು ಸಹಿಸಿಕೊಳ್ಳುವ ಸಮಾಧಾನ ಚಿತ್ತವಿದೆ. ಗಂಡ ಹಾಗೂ ಮಗನಿಗೆ ಸಮಾಧಾನ ಹೇಳಲು ಹೋದ ರುಕ್ಕು ವಿಫಲಳಾಗುತ್ತಾಳೆ. ಜವಾಬ್ದಾರಿಗಳಿಲ್ಲದ ಗಂಡ ಹಾಗೂ ವಿಚಿತ್ರವಾಗಿ ವರ್ತಿಸುವ ಮಗ ಇಬ್ಬರ ಬಗ್ಗೆಯೂ ಅವಳಿಗೆ ಅಸಮಾಧಾನವಿದೆ. ಇಲ್ಲಿ ಒಂದು ಗಟ್ಟಿ ಸಾಂಸ್ಕೃತಿಕ ಪರಂಪರೆಯ ಬೇರುಗಳಿಂದ ಬಂದ

ವ್ಯಕ್ತಿಯನ್ನು ಅನಂತಮೂರ್ತಿ ಚಿತ್ರಿಸಿದ್ದಾರೆ. ಆ ವ್ಯಕ್ತಿ ಪಡೆದುಕೊಳ್ಳುವ ನೆಲೆ ಅವನ ಶಕ್ತಿ ಸಾಮರ್ಥ್ಯಕ್ಕೆ ಸಂಬಂಧಿಸಿರುತ್ತದೆ. ಪರಂಪರಾಗತ ಮೌಲ್ಯಗಳನ್ನು ಶೋಧಿಸುವ ತೀವ್ರ ಹಂಬಲವಿರುವ ಅನಂತಮೂರ್ತಿಯವರು ಆ ಮೂಲಕ ಚಿಂತನೆಗಳನ್ನು ವಿಚಾರಣೆಗೊಳಪಡಿಸುತ್ತಾರೆ.

ಅತ್ತೆ ಸೊಸೆಯರ ಸಂಬಂಧ ಮಧುರವಾಗಿಲ್ಲದಿರುವುದು ಕಾರ್ತೀಕ ಹಾಗೂ ಪ್ರಸ್ತ ಕತೆಯಲ್ಲಿ ಕಂಡುಬರುತ್ತದೆ. ತಂದೆ-ಮಗನ ಸಂಬಂಧದಲ್ಲಿ ಹೊಂದಾಣಿಕೆ ಇಲ್ಲದೆ ಹುಟ್ಟುವ ಸಂಘರ್ಷವನ್ನು ಸೂರ್ಯನ ಕುದುರೆ, ಕಾರ್ತೀಕ, ಪ್ರಕೃತಿ, ಕತೆಗಳಲ್ಲಿ ಹಾಗೂ ಸಂಸ್ಕಾರ ಕಾದಂಬರಿಗಳಲ್ಲಿ ಚಿತ್ರಿಸಲಾಗಿದೆ. ಹೊಸ ಉದ್ಯೋಗಾವಕಾಶಗಳು ಸೃಷ್ಟಿಸುವ ಬದಲಾದ ಜೀವನ ಕ್ರಮವನ್ನು ಅನುಸರಿಸಲು ಇಲ್ಲಿನ ಪಾತ್ರಗಳು ತುಡಿಯುತ್ತವೆ. ಪ್ರಕೃತಿ ಯ ನಾಣಿ, ಪ್ರಸ್ತ ದ ಪುಂಡರೀಕ ಹೋಟೆಲ್ ಉದ್ಯಮವನ್ನು ಆರಂಭಿಸಬೇಕೆಂಬ ತುರ್ತಿನಲ್ಲಿದ್ದರೆ, ಸೂರ್ಯನ ಕುದುರೆ ಯ ಸುಬ್ಬು ಹಿಟ್ಟಿನ ಗಿರಣಿಯನ್ನು ತೆರೆಯಬೇಕೆಂಬ ಆಸೆಯನ್ನು ಹೊಂದಿದ್ದಾನೆ. ಸಂಸ್ಕಾರ ದಲ್ಲಿನ ಶ್ಯಾಮ ಮಿಲ್ಟ್ರಿಯನ್ನು ಸೇರಿದರೆ, ಶ್ರೀಪತಿ ಯಕ್ಷಗಾನವನ್ನು ಸೇರುತ್ತಾನೆ.

'ಸಂಸ್ಕಾರ' ಕಾದಂಬರಿಯಲ್ಲಿ ಪ್ರಾಣೇಶಾಚಾರ್ಯ ಹಳೆಯ ಮೌಲ್ಯಗಳನ್ನು ನಂಬಿಕೊಂಡು ಬದುಕು ನಡೆಸುತ್ತಾನೆ. ಅಗ್ರಹಾರವು ಪರಂಪರಾಗತ ಮೌಲ್ಯಗಳನ್ನು ಬೆಂಬಲಿಸುತ್ತದೆ. ಹಳೆಯ ಮೌಲ್ಯಗಳಲ್ಲಿ ನಂಬಿಕೆಯಿಲ್ಲದ ನಾರಣಪ್ಪನು ದುಶ್ಚಟಗಳಿಗೆ ದಾಸನಾಗುತ್ತಾನೆ. ಅಗ್ರಹಾರ ನಂಬಿಕೊಂಡು ಬಂದ ಮೌಲ್ಯಗಳನ್ನು ಪರೀಕ್ಷಿಸಲು ನಾರಣಪ್ಪ ಮುಂದಾಗುತ್ತಾನೆ. ಅಗ್ರಹಾರದ ಬ್ರಾಹ್ಮಣ ಸಮುದಾಯದಲ್ಲಿ ಪೂಜೆ ಪುನಸ್ಕಾರ ಆಚರಣೆಗಳು ವ್ಯವಸ್ಥಿತವಾಗಿ ನಡೆದುಕೊಂಡು ಬಂದಿದ್ದವು. ತಲೆತಲೆಮಾರುಗಳಿಂದ ಮುಂದುವರಿದು ಬಂದ ಸಂಪ್ರದಾಯವನ್ನು ನಾರಣಪ್ಪನು ಮುರಿಯುತ್ತಾನೆ. ದೇವಸ್ಥಾನದ ಹೊಳೆಯಲ್ಲಿನ ಮೀನನ್ನು ಹಿಡಿದರೆ ರಕ್ತಕಾರಿ ಸಾಯುತ್ತಾರೆಂಬ ನಂಬಿಕೆಯನ್ನು ನಿರ್ಲಕ್ಷಿಸುತ್ತಾನೆ. ಮುಸಲ್ಮಾನರನ್ನು ಗಣಪತಿ ದೇವಸ್ಥಾನದೊಳಕ್ಕೆ ಕರೆದ್ಕೊಯ್ದು ಎಲ್ಲರ ಕಣ್ಣೆದುರು ಹೊಳೆಯಲ್ಲಿನ ಮೀನುಗಳನ್ನು ಹಿಡಿದುಕೊಂಡು ಹೋಗುತ್ತಾನೆ. ಗರುಡಾಚಾರ್ಯನಿಂದ ಈ ಸಂಗತಿಯನ್ನು ತಿಳಿದ ಪ್ರಾಣೇಶಾಚಾರ್ಯನಿಗೆ ಗಾಬರಿಯಾಗುತ್ತದೆ. ಬ್ರಾಹ್ಮಣನಾದ ನಾರಣಪ್ಪನೇ ದಾರಿ ಹಾಕಿಕೊಟ್ಟ ಮೇಲೆ ನ್ಯಾಯ, ಧರ್ಮದ ಮೇಲೆ ಜನರಿಗೆ ನಂಬಿಕೆ ತಪ್ಪಿಹೋಗುತ್ತದೆಂದು ಪ್ರಾಣೇಶಾಚಾರ್ಯ ಬೇಸರಪಡುತ್ತಾನೆ. ದೈವ ಭಯದಿಂದ ಸಾಮಾನ್ಯ ಜನರಲ್ಲಿ ಈವರೆಗೆ ಧರ್ಮ ಬುದ್ಧಿ ಉಳಿದಿತ್ತು. ದೈವತ್ವ ನಾಶವಾದರೆ ಜನರಲ್ಲಿ ನಂಬಿಕೆ ಉಳಿಯುವುದಿಲ್ಲವೆಂದು ಜಾಗೃತನಾದ ಪ್ರಾಣೇಶಾಚಾರ್ಯ ನಾರಣಪ್ಪನಿರುವಲ್ಲಿಗೆ ಬರುತ್ತಾನೆ.

ಕೋಪದಿಂದ ಬಂದಿದ್ದ ಪ್ರಾಣೇಶಾಚಾರ್ಯರನ್ನು ಗಮನಿಸಿದ ನಾರಣಪ್ಪನು ಅವರಿಗೆ ತೀರ್ಥ ತಂದುಕೊಡು ಎಂದು ಚಂದ್ರಿಗೆ ತಿಳಿಸುತ್ತಾನೆ. ಇಲ್ಲಿಯವರೆಗೆ ಮೌನದಿಂದಿದ್ದ ಪ್ರಾಣೇಶಾಚಾರ್ಯ ಬಾಯಿ ಮುಚ್ಚು ಎಂದು ನಾರಣಪ್ಪನನ್ನು ಗದರಿಸುತ್ತಾನೆ. ಕಾಮ, ಕ್ರೋಧಾಧಿಗಳನ್ನು ಮೀರಿದ ನಿಮಗೂ ಸಿಟ್ಟು ಬರುತ್ತದಯೇ ಎಂದು ನಾರಣಪ್ಪ ಹಂಗಿಸುತ್ತಾನೆ. ನಿಮ್ಮ ಋಷಿಗಳು ಮೀನಿನ ವಾಸನೆಯುಳ್ಳವಳ ಸಂಗವನ್ನು ಮಾಡಿದ್ದರು. ಅಂತಹ ಪರಂಪರೆಯಲ್ಲಿ ಬಂದ ಈ ಅಗ್ರಹಾರದ ಬ್ರಾಹ್ಮಣರನ್ನು ನೋಡಿರಪ್ಪ ಎಂದು ಪ್ರಾಣೇಶಾಚಾರ್ಯನನ್ನು ಗೇಲಿ ಮಾಡುತ್ತಾನೆ. ಬೇಸತ್ತ ಪ್ರಾಣೇಶಾಚಾರ್ಯ ಹೊರಡಲನುವಾದಾಗ ಕೊನೆಗೆ ಗೆಲ್ಲುವುದು ನಾನೋ ಅಥವಾ ನೀವೋ ಎಂದು ಕುಡಿಯುತ್ತಾ ನಾರಣಪ್ಪ ಹೇಳುತ್ತಾನೆ.

ನಾರಣಪ್ಪನು ಆಚಾರ್ಯನಿಗೆ ಪುರಾಣದ ಕಥೆಯೊಂದನ್ನು ನೆನಪಿಸುತ್ತಾನೆ. ಒಂದು ಅಗ್ರಹಾರದಲ್ಲಿ ಆಚಾರ್ಯನಿದ್ದನು. ಅವನ ಹೆಂಡತಿ ರೋಗಿಯಾದ್ದರಿಂದ ಸ್ತ್ರೀಸುಖವೇನೆಂದು ಅವನಿಗೆ ತಿಳಿದಿರಲಿಲ್ಲ. ಉತ್ತಮನಾದ ಅವನ ಖ್ಯಾತಿ ಎಲ್ಲೆಡೆ ಹರಡಿತ್ತು. ಆದರೆ, ಅಗ್ರಹಾರದ ಇತರ ಬ್ರಾಹ್ಮಣರು ಸರ್ವಪಾಪಗಳನ್ನು ಮಾಡಿದ್ದರು. ತಮ್ಮ ಪಾಪವನ್ನು ಆಚಾರ್ಯ ಮಾಡುವ ಪುಣ್ಯ ಮುಚ್ಚುತ್ತದೆಂದು ಭಾವಿಸಿದ ಬ್ರಾಹ್ಮಣರು ಇನ್ನಷ್ಟು ಪಾಪಕಾರ್ಯಗಳಲ್ಲಿ ತೊಡಗಿದ್ದರು. ಹೆಂಡತಿಯಿಂದ ಬೇಸತ್ತಿದ್ದ ಯುವಕನೊಬ್ಬನು ಆಚಾರ್ಯರು ಓದಿದ ಪುರಾಣದಿಂದ ಪ್ರೇರಿತನಾಗುತ್ತಾನೆ. ಕಾಳಿದಾಸನ ಶಕುಂತಲೆಯ ವರ್ಣನೆಯನ್ನು ಕೇಳಿದ ಯುವಕ ಅಲ್ಲಿಂದ ಮೀಯಲೆಂದು ಹೊಳೆಗೆ ಹೋಗುತ್ತಾನೆ. ಸ್ನಾನ ಮಾಡುತ್ತಿದ್ದ ಹರಿಜನರ ಹುಡುಗಿಯೊಬ್ಬಳನ್ನು ಶಕುಂತಲಾ ಎಂದು ಭಾವಿಸಿ ಸೇರುತ್ತಾನೆ. ಈ ಕಥೆಯನ್ನು ಹೇಳಿದ ನಾರಣಪ್ಪ ಪ್ರಾಣೇಶಾಚಾರ್ಯನನ್ನು ಪ್ರಶ್ನಿಸುತ್ತಾನೆ. ಬ್ರಾಹ್ಮಣ್ಯ ಯಾರಿಂದ ಕೆಟ್ಟಿತೆಂದು ಕಾಶಿಗೆ ಹೋಗಿಬಂದ ನೀವೇ ಹೇಳಿ ಎನ್ನುತ್ತಾನೆ. ವೇದ, ಪುರಾಣವನ್ನು ಓದಬೇಕು ಅದನ್ನು ಅರ್ಥೈಸಬಾರದೆಂಬ ಹಿರಿಯರ ಮಾತನ್ನು ನಾರಣಪ್ಪ ನೆನಪಿಸಿಕೊಳ್ಳುತ್ತಾನೆ. ಊರಿನ ಆಚಾರ್ಯನೇ ಬ್ರಾಹ್ಮಣ್ಯವನ್ನು ನಾಶಮಾಡಿದಂತಾಗಲಿಲ್ಲವೆ ಎನ್ನುತ್ತಾನೆ. ನಾರಣಪ್ಪನ ಪ್ರಶ್ನೆಗಳಿಂದ ದಿಗ್ಭ್ರಮೆಗೊಂಡ ಪ್ರಾಣೇಶಾಚಾರ್ಯ ಆ ದೇವರೇ ನಿನ್ನನ್ನು ಕ್ಷಮಿಸಬೇಕು ಎಂದು ಹೇಳುತ್ತಾನೆ.

ರಸಭರಿತ ಪುರಾಣವನ್ನು ಓದುವ ನೀವು ಗೊಡ್ಡಾಗಿ ಬಾಳಲು ಬೋಧಿಸುತ್ತೀರಿ ಆದರೆ, ನನ್ನ ಮಾತಿಗೆ ಒಂದೇ ಅರ್ಥ ಹೆಣ್ಣಿನ ಜೊತೆ ಮಲಗು ಎಂದರೆ ಮಲಗು, ಮೀನು ತಿನ್ನು ಎಂದರೆ ತಿನ್ನು ಎಂದು ತನ್ನನ್ನು ನಾರಣಪ್ಪ ಸಮರ್ಥಿಸಿಕೊಳ್ಳುತ್ತಾನೆ. ನಿಮ್ಮ ರೋಗಗ್ರಸ್ಥ ಹೆಂಡತಿಯನ್ನು ಬಿಟ್ಟು ಪುರಾಣದ ಋಷಿಗಳಂತೆ ಮತ್ಸ್ಯಗಂಧಿಯನ್ನು ತಂದಿಟ್ಟುಕೊಳ್ಳಿ, ಇದರಿಂದ ಪರಮಾತ್ಮನ ದರ್ಶನವಾಗುತ್ತದೆ ಎಂದು ಪ್ರಾಣೇಶಾಚಾರ್ಯನಿಗೆ ಹೇಳುತ್ತಾನೆ. ಕೊನೆಗೆ ಗೆಲ್ಲುವುದು ಸನಾತನ ಧರ್ಮವನ್ನು ಹಿಡಿದ ತನ್ನ ತಪಸ್ಸು ಅಥವಾ ನಾರಣಪ್ಪನ ರಾಕ್ಷಸ ಸ್ವಭಾವವೋ ಎಂದು ಪ್ರಾಣೇಶಾಚಾರ್ಯ ಯೋಚಿಸುತ್ತಾನೆ. ಶನಿಕಾಟದಿಂದ ನಾರಣಪ್ಪ ಹೀಗಾಗಿದ್ದಾನೆ ಎಂದು ತಿಳಿದು ದೇವರಲ್ಲಿ ಪ್ರಾರ್ಥಿಸಿ ಅವನಿಗಾಗಿ ಪ್ರಾಣೇಶಾಚಾರ್ಯ ವಾರದಲ್ಲಿ ಎರಡು ದಿನ ಒಪ್ಪತ್ತು ಮಾಡುತ್ತಾನೆ. ನಾರಣಪ್ಪನ ತಾಯಿಗೆ ಪ್ರಾಣೇಶಾಚಾರ್ಯ ನಿನ್ನ ಮಗನನ್ನು ತಿದ್ದುವೆನೆಂದು ಮಾತು ಕೊಟ್ಟಿರುತ್ತಾನೆ. ಆದ್ದರಿಂದ ಅವನನ್ನು ಒಳ್ಳೆಯ ಮಾರ್ಗಕ್ಕೆ ತರಲು ಪ್ರಯತ್ನಿಸುತ್ತಾನೆ. ಆದರೆ ಪ್ರಾಣೇಶಾಚಾರ್ಯನ ಮಾತನ್ನು ನಾರಣಪ್ಪ ನಿರ್ಲಕ್ಷಿಸುತ್ತಾನೆ.

ನಾರಣಪ್ಪನ ಮಾತನ್ನು ಕೇಳಿ ಗರುಡಾಚಾರ್ಯನ ಮಗ ಮಿಲ್ಟ್ರಿ ಸೇರಿರುತ್ತಾನೆ. ಲಕ್ಷ್ಮಣಾಚಾರ್ಯನ ಅಳಿಯ ಶ್ರೀಪತಿ ನಾರಣಪ್ಪನ ಸಹವಾಸದಿಂದಾಗಿ ಹೆಂಡತಿಯನ್ನು ಬಿಟ್ಟು ಹೊಲತಿಯ ಸಹವಾಸವನ್ನು ಮಾಡುತ್ತಾನೆ. ಶ್ಯಾಮ ಹಾಗೂ ಶ್ರೀಪತಿಯನ್ನು ತನ್ನ ವರ್ಚಸ್ಸಿನಿಂದ ನಾರಣಪ್ಪ ಕಸಿದುಕೊಂಡಿದ್ದಕ್ಕೆ ಪ್ರಾಣೇಶಾಚಾರ್ಯನಿಗೆ ಬೇಸರವಿದೆ. ಗರುಡಾಚಾರ್ಯ ಮತ್ತು ಲಕ್ಷ್ಮಣಾಚಾರ್ಯ ನಾರಣಪ್ಪನ ವಿರುದ್ಧ ಹೇಳುವ ದೂರನ್ನು ಕೇಳಿ ಪ್ರಾಣೇಶಾಚಾರ್ಯ ನಾರಣಪ್ಪನಿಗೆ ಬುದ್ಧಿ ಹೇಳಲು ಹೋದಾಗ ಯದ್ವಾತದ್ವಾ ಬೈಸಿಕೊಳ್ಳುತ್ತಾನೆ. ಶ್ರೀಪತಿಯನ್ನು ಅವನ ಹೆಂಡತಿಯಿಂದ ದೂರಮಾಡಬೇಡ ಎಂದು ಪ್ರಾಣೇಶಾಚಾರ್ಯನು ಹೇಳಿದಾಗ ಸುಖಕೊಡದ ಹುಡುಗಿಯೊಡನೆ ಗೊಡ್ಡು ಬ್ರಾಹ್ಮಣರನ್ನು ಬಿಟ್ಟರೆ ಬೇರೆ ಯಾರೂ ಸಂಸಾರ ಮಾಡುವುದಿಲ್ಲ ಎಂದು ಬ್ರಾಹ್ಮಣರನ್ನು ನಿಂದಿಸುತ್ತಾನೆ.

ಸಂಬಂಧದವಳೆಂಬ ನೆಪದಿಂದ ಭ್ರಾಂತಿ ಹಿಡಿದ ಹುಡುಗಿಯನ್ನು ಕಟ್ಟಿ ನನ್ನನ್ನು ಹಾಳು ಮಾಡಿದಿರಿ. ಇರುವುದು ಒಂದು ಆಯುಷ್ಯವಾದ್ದರಿಂದ ನನ್ನಿಷ್ಟದಂತೆ ನಾನು ಬದುಕುತ್ತೇನೆ ಎನ್ನುತ್ತಾನೆ. ಈ ಭೌತಶರೀರ

ಶಾಶ್ವತವಲ್ಲ ಎಂದ ಪ್ರಾಣೇಶಾಚಾರ್ಯ ಊರಿನ ಹುಡುಗರನ್ನಾದರೂ ಹಾಳು ಮಾಡಬೇಡವೆಂದು ಅಂಗಲಾಚುತ್ತಾನೆ. ಮುಂಡೆಯರ ಆಸ್ತಿಯನ್ನು ಮುಟ್ಟುಗೋಲು ಹಾಕುವ, ಮಾಟಮಂತ್ರ ಮಾಡಿಸುವ ಗರುಡಾಚಾರ್ಯ ನಿಮ್ಮ ಪ್ರಕಾರ ಬ್ರಾಹ್ಮಣನೇ ಎಂದು ನಾರಣಪ್ಪ ಗೇಲಿ ಮಾಡುತ್ತಾನೆ. ಒಂದು ಹೆಣ್ಣಿನ ಸುಖಕ್ಕೆ ಬ್ರಾಹ್ಮಣ್ಯದ ಮರ್ಯಾದೆಯನ್ನೆಲ್ಲಾ ಸುಳಿದು ಹಾಕಿ ಬಿಡುತ್ತೇನೆಂದು ಹೇಳುತ್ತಾನೆ.

ಹೀಗೆ ಅಗ್ರಹಾರದವರ ವಿಚಾರಗಳೆಲ್ಲ ಒಂದೆಡೆಯಾದರೆ ನಾರಣಪ್ಪನ ವಿಚಾರ ಮಾತ್ರ ಭಿನ್ನವಾಗಿದೆ. "ಸಂಸ್ಕಾರ ಕಾದಂಬರಿಯಲ್ಲಿ ಅಗ್ರಹಾರದ ಹೊರಗೆ ನಡೆಯುತ್ತಿರುವ ಆಧುನಿಕರಣ ಪ್ರಕ್ರಿಯೆ ನಿಧಾನವಾಗಿ ಅಗ್ರಹಾರದಲ್ಲೂ ಬದಲಾವಣೆಯನ್ನು ತಂದಿದೆ. ಅದು ಅಲ್ಲಿನ ಜನರ ಆಹಾರ, ವೇಷಭೂಷಣಗಳ ನೆಲೆಯಲ್ಲಿ ಕಾಣಿಸಿಕೊಂಡಿದೆ. ಸಂಭಾವನೆ ಭಟ್ಟರ ಮನೆಯಲ್ಲಿನ ಮಕ್ಕಳು ಮಿಲ್ಟ್ರಿ ಸೇರುವುದು, ಯಕ್ಷಗಾನಕ್ಕೆ ಸೇರಿದ ಹುಡುಗರು ಗುಲೇಬಕಾವಲಿ ನಾಟಕವನ್ನು ಕಲಿಯುವುದು, ಪ್ರಾಣೇಶಾಚಾರ್ಯನ ಹರಿಕಥೆಗಿಂತ ನಾರಣಪ್ಪ ತಂದ ಗ್ರಾಮಫೋನ್ ಹೆಚ್ಚು ಜನಪ್ರಿಯತೆ ಪಡೆಯುವುದು, ಸಂಸ್ಕೃತ ದೇವ+ಭಾಷೆ ಎಂದುಕೊಂಡಿದ್ದ ಅಗ್ರಹಾರಕ್ಕೆ ಇಂಗ್ಲಿಷ್ ಭಾಷೆಯ ಪ್ರವೇಶ, ಖಾದಿಜುಬ್ಬ ಪೈಜಾಮ, ಬಿಳಿ ಟೋಪಿ ಪ್ಯಾಶನ್, ಧರ್ಮಗ್ರಂಥಗಳಿಗಿಂತ ನ್ಯೂಸ್ ಪೇಪರ್ ಆಕರ್ಷಕವಾಗುವುದು." [೧೩]

'ಭಾರತೀಪುರ' ಕಾದಂಬರಿಯಲ್ಲಿ ಜಗನ್ನಾಥನ ಪೂರ್ವಿಕರು ಮಂಜುನಾಥ ದೇವಾಲಯದ ಧರ್ಮದರ್ಶಿಗಳಾಗಿ ಸೇವೆಯನ್ನು ಸಲ್ಲಿಸುತ್ತಾ ಬಂದಿರುತ್ತಾರೆ. ಜಗನ್ನಾಥನು ಮಂಜುನಾಥನ ಹೆಸರಿನಲ್ಲಿ ನಡೆಯುವ ಪರಂಪರಾಗತ ವಿಚಾರಗಳನ್ನು ಆಧುನಿಕತೆಯ ಮೂಲಕ ಬದಲಾಯಿಸಲು ಪ್ರಯತ್ನಿಸಿದಾಗ ಸಂಘರ್ಷವೇರ್ಪಡುತ್ತದೆ. ಜನರು ತನ್ನ ಮನೆತನಕ್ಕೆ ನೀಡುವ ಗೌರವ ಅತಿಯಾದದ್ದೆಂದು ಮುಜುಗರಪಟ್ಟಾಗ ಧರ್ಮದರ್ಶಿಯಾಗಿ ಮುಂದುವರಿಯಲಿಚ್ಛಿಸದೆ ರಾಜೀನಾಮೆ ಕೊಡುತ್ತಾನೆ. ತನ್ನ ಮನೆತನದವರು ಇಲ್ಲಿಯತನಕ ನಡೆಸಿದ ಬಡ್ಡಿ ವ್ಯವಹಾರವನ್ನು ನಿಲ್ಲಿಸಿದ ಜಗನ್ನಾಥ ಸಾಲ ವಸೂಲಾತಿಯ ಪ್ರಾಮಿಸರಿ ನೋಟುಗಳನ್ನು ಹರಿದು ಹಾಕುತ್ತಾನೆ. ಪರಂಪರಾಗತವಾಗಿ ತನ್ನ ಮನೆತನದವರು ಪೂಜಿಸಿಕೊಂಡು ಬಂದಿದ್ದ, ಸಾಲಿಗ್ರಾಮವನ್ನು ಸೇವೆಗೆಂದೆ ಮೀಸಲಾದ ಶೂದ್ರರಿಂದ ಮುಟ್ಟಿಸುತ್ತಾನೆ. ಜಗನ್ನಾಥನ ಈ ವರ್ತನೆಯು ಭಾರತೀಪುರದ ಜನರಿಗೆ ಪಾವಿತ್ರ್ಯನಾಶದ ಕೆಲಸವೆನಿಸುತ್ತದೆ. ಹಂಚಿನ ಕಾರ್ಖಾನೆಯನ್ನು ಪ್ರಾರಂಭಿಸಬೇಕು, ಗಣಿ ತೋಡಿಸಬೇಕು ಮತ್ತು ಹೈಬ್ರಿಡ್ ಬೆಳೆಗಳನ್ನು ಬೆಳೆಯಬೇಕೆಂಬ ಜಗನ್ನಾಥನ ಹಂಬಲವನ್ನು ಯಾರೂ ಬೆಂಬಲಿಸುವುದಿಲ್ಲ. ಭಾರತೀಪುರದ ಜನರನ್ನು ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಪರಿವರ್ತಿಸಬೇಕೆಂಬುದು ಜಗನ್ನಾಥನ ಇಚ್ಛೆಯಾಗಿದೆ.

ಜಗನ್ನಾಥನಂತೆ ಆದರೆ ವೈಯಕ್ತಿಕ ಕಾರಣಕ್ಕಾಗಿ ಬದಲಾವಣೆಯನ್ನು ಬಯಸುವ ಇನ್ನೊಂದು ಪಾತ್ರ ಗಣೇಶನದು. ತನ್ನ ಮಗ ಉತ್ತರಾಧಿಕಾರಿಯಾಗಬೇಕೆಂಬುದು ಮಂಜುನಾಥ ದೇವಾಲಯದ ಮುಖ್ಯ ಪೂಜಾರಿ ಸೀತರಾಮಯ್ಯನ ಬಯಕೆಯಾಗಿದೆ. ತಂದೆಯು ವಿಧಿಸುವ ವಿಧಿನಿಷೇಧಗಳಿಂದ ಬೇಸತ್ತ ಗಣೇಶನು ವೈಯಕ್ತಿಕ ವಿಮೋಚನೆಗಾಗಿ ಬದಲಾವಣೆಯನ್ನು ನಿರೀಕ್ಷಿಸುತ್ತಾನೆ. ಮಂಜುನಾಥನ ಉತ್ತರಾಧಿಕಾರಿಯಾಗಬೇಕಾದ ಗಣೇಶನಿಗೆ ಕೆಲವೊಂದು ನಿರ್ಬಂಧಗಳಿವೆ. ಇಂಗ್ಲಿಷ್ ಓದಬೇಕಿಲ್ಲ, ಕಥೆ ಪುಸ್ತಕ ಓದುವಂತಿಲ್ಲ, ಸಿನಿಮಾ ನೋಡುವಂತಿಲ್ಲ, ಕಾಲರ್ ಇರುವ ಅಂಗಿ ತೊಡುವಂತಿಲ್ಲ, ಚಪ್ಪಲಿ ಹಾಕುವಂತಿಲ್ಲ, ಹೆಂಡತಿ ಯಮುನಾಳೊಂದಿಗೆ ತಿಂಗಳಲ್ಲಿ ಕೆಲವು ದಿನ ಮಾತ್ರ ಅದೂ ವಾರ, ತಿಥಿ ನೋಡಿ ಜೊತೆಗಿರಬೇಕು. ತಪ್ಪು

[illegible]

[illegible]

[illegible]

[illegible]

ಮಾಡಿದರೆ ತಂದೆಯಿಂದ ಹೆಂಡತಿಯೆದುರೇ ಹೊಡೆಸಿಕೊಳ್ಳಬೇಕು. ಇಂತಹ ವಿಧಿ ನಿಷೇಧಗಳಿಂದ ಬೇಸತ್ತ ಗಣೇಶನು ಕದ್ದು ಬೀಡಿ ಸೇದುತ್ತಾನೆ. ಪೋಲಿ ಪುಸ್ತಕಗಳನ್ನು ಓದುತ್ತಾನೆ. ಪವಿತ್ರವಾದುದನ್ನು ಗುಟ್ಟಾಗಿ ಅಪವಿತ್ರಗೊಳಿಸುತ್ತಾನೆ. ಮಂಜುನಾಥನಿಗೆ ಮೈಲಿಗೆಯಾದರೆ ಊರು ಭಸ್ಮವಾಗುತ್ತದೆಂಬ ಅಪ್ಪನ ನಂಬಿಕೆಯನ್ನು ಹುಸಿಗೊಳಿಸಲು ಗಣೇಶ ವಿವಿಧ ರೀತಿಯಲ್ಲಿ ಮಂಜುನಾಥನನ್ನು ಮೈಲಿಗೆ ಮಾಡಿ ಅಪ್ಪನ ಮೇಲಿನ ಸಿಟ್ಟನ್ನು ಆ ಮೂಲಕ ತೀರಿಸಿಕೊಳ್ಳುತ್ತಾನೆ.

ಭಾರತೀಪುರದಲ್ಲಿ ಕ್ರಾಂತಿಕಾರಿಯಾದ ಜಗನ್ನಾಥನ ಪ್ರತಿಭಟನೆಗಿಂತಲೂ ಗಣೇಶನು ಶಿವಲಿಂಗವನ್ನು ಅಪವಿತ್ರಗೊಳಿಸುವ ಪ್ರತಿಭಟನೆ ಹೆಚ್ಚು ಪರಿಣಾಮವನ್ನುಂಟು ಮಾಡುತ್ತದೆ. ತಂದೆ ಹೇಳಿದಂತೆ ಕೇಳಿದರೆ ಸಾಯುವತನಕ ಅದೇ ಕಡಲೆ, ಅದೇ ಕಾಯಿ, ಅದೇ ಕುಂಕುಮ, ಅದೇ ಆರತಿ ಎಂದು ದೇವಸ್ಥಾನದಲ್ಲಿ ಮಂಜುನಾಥನ ಪೂಜೆಯನ್ನು ಗಣೇಶ ನೆನೆದು ಅಸಹ್ಯ ಪಟ್ಟುಕೊಳ್ಳುತ್ತಾನೆ. ಜಗನ್ನಾಥ ಹರಿಜನರನ್ನು ದೇವಸ್ಥಾನದೊಳಕ್ಕೆ ಕರೆದುಕೊಂಡು ಹೋಗುವಲ್ಲಿ ವಿಫಲನಾಗಿಬಿಟ್ಟರೆ, ನಾನು ಪೂಜಾರಿಯಾಗಿಯೇ ಕೊಳೆಯಬೇಕಾಗುತ್ತದೆಂದು ಯೋಚಿಸಿದ ಗಣೇಶ ಮಂಜುನಾಥನನ್ನು ಯಾರಿಗೂ ತಿಳಿಯದಂತೆ ಹೊಳೆಗೆ ಎಸೆಯುತ್ತಾನೆ. "ಗಣೇಶನ ಕ್ರಿಯೆಯ ಅಂತಿಮ ನಿರ್ದಿಷ್ಟ ಪರಿಣಾಮಕತೆಯ ಸಂದರ್ಭದಲ್ಲಿ ಒಂದು ಅಣ್ಖಟಿ ಇಡುಟಿಡಿಥಿನಿ ನ್ನೇ ಸೃಷ್ಟಿಸಿದರೂ ಒಟ್ಟಾರೇ ಅವನ ಕ್ರಿಯೆಯ ಹಿಂದಿನ ಒತ್ತಡ ಒಂದು ಪುರಾತನ ಸಂಸ್ಕೃತಿಯ ಅಂತರ್ ವಿರೋಧಗಳ ಒತ್ತಡವನ್ನೇ ಸಂಕೇತಿಸುವಷ್ಟು ಉಗ್ರವಾಗಿದೆ." [೧೪] ಕಾದಂಬರಿಯಲ್ಲಿ ಬರುವ ಕೆಲವು ಪಾತ್ರಗಳಲ್ಲಿ ವಿರೋಧಾಭಾಸಗಳಿವೆ.

ಇಪ್ಪತ್ತರ ದಶಕದಲ್ಲಿ ವಿಧವಾ ವಿವಾಹವಾಗಿದ್ದ ಪುರಾಣಿಕನು ಸಮಾಜದಲ್ಲಿ ಹೊಸಕ್ರಾಂತಿಯನ್ನುಂಟು ಮಾಡಿದ್ದನು. ಮನೆಯಲ್ಲಿ ಇಂಗ್ಲೆಂಡಿನ ವಾತಾವರಣವನ್ನು ಸೃಷ್ಟಿಸಿಕೊಂಡು ರೇಡಿಯೋ ಮೂಲಕ ಪ್ರಪಂಚದ ಸುದ್ದಿಗಳನ್ನು ಸಂಗ್ರಹಿಸುತ್ತಾನೆ. ಆದರೆ ತಾನು ಜೀವಿಸುತ್ತಿರುವ ಊರಿನಲ್ಲಿ ಪರದೇಶಿಯಾಗಿ ಬದುಕುತ್ತಾನೆ. ಬುದ್ಧಿವಾದವನ್ನು ಹೇಳುವ ಅಡಿಗನು ಹೆಂಡತಿ ಸತ್ತ ನಂತರ ಅವಳ ತಂಗಿಯನ್ನೇ ಮದುವೆಯಾಗಿ ಅವಳಿಂದಲೂ ನಾಲ್ಕಾರು ಮಕ್ಕಳನ್ನು ಪಡೆದಿರುತ್ತಾನೆ. ಆದರ್ಶಕ್ಕಾಗಿಯೇ ಗಾಂಧೀ ಸಮ್ಮುಖದಲ್ಲಿ ಅಂತರ್ಜಾತಿ ವಿವಾಹವನ್ನು ಮಾಡಿಕೊಂಡ ಅನಂತಕೃಷ್ಣನು ಮನೆ ಬಿಟ್ಟು ಓಡಿಹೋಗುತ್ತಾನೆ. ಜಗನ್ನಾಥನನ್ನು ಕೂಡಲು ಇಚ್ಛಿಸಿದ ಕಾವೇರಿಯು ಅವನು ಒಪ್ಪದಿದ್ದಾಗ ಸಹಜವೆಂಬಂತೆ ಶೆಟ್ಟಿಯೊಂದಿಗೆ ಸಂಬಂಧವನ್ನು ಹೊಂದುತ್ತಾಳೆ. ಅತೀ ಮಡಿವಂತನಂತೆ ಕಾಣುವ ಸೀತರಾಮಯ್ಯ ಕಪಟಿಯಾಗಿದ್ದಾನೆ. ಬುದ್ಧಿವಂತಿಕೆಯಿಂದ ಸಿಹಿಯಾಗಿ ಮಾತನಾಡುವ ಪ್ರಭು ಭಾರತೀಪುರದ ಎಲ್ಲಾ ವ್ಯಾಪಾರವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿರುತ್ತಾನೆ. ಇಂತಹ ವ್ಯಕ್ತಿಗಳ ಹಾಗೂ ಅನುಭವಗಳ ಸಂಕೀರ್ಣ ಪರಿಸರ ಭಾರತೀಪುರದಲ್ಲಿದೆ. ಹರಿಜನರು ದೇವಸ್ಥಾನದಲ್ಲಿ ಒಂದು ಹೆಜ್ಜೆ ಇಟ್ಟರೆ ಸಾಕು, ಮಂಜುನಾಥನ ಹಿಡಿತದಿಂದ ಭಾರತೀಪುರ ಬಿಡುಗಡೆಯಾಗುತ್ತದೆ ಎಂದು ಜಗನ್ನಾಥ ಭ್ರಮಿಸುತ್ತಾನೆ. ಅವರ ಒಂದು ಹೆಜ್ಜೆ ಇತಿಹಾಸವನ್ನೇ ಬದಲಿಸುತ್ತದೆಂದು ತಿಳಿದ ಜಗನ್ನಾಥ ಕ್ರಿಯೋನ್ಮುಖಿಯಾದಾಗ ವಿಫಲನಾಗುತ್ತಾನೆ.

ಜಾತಿಪದ್ಧತಿ, ಆಚಾರ-ವಿಚಾರ ಹಾಗೂ ಧಾರ್ಮಿಕ ನಂಬಿಕೆಗಳಲ್ಲಿ ಸೂಕ್ಷ್ಮ ಬದಲಾವಣೆಗಳು ಕಾಣಿಸಿಕೊಳ್ಳುವುದು ಸಹಜವಾಗಿದೆ. ಈ ಬದಲಾವಣೆಯನ್ನು ಸ್ವೀಕರಿಸುವ ಮನೋಭಾವ ತಲೆಮಾರಿನಿಂದ ತಲೆಮಾರಿಗೆ ಭಿನ್ನಪರಿಣಾಮವನ್ನು ಬೀರುತ್ತದೆ. ತಂದೆ ಇದ್ದ ಕಾಲಕ್ಕೂ, ಮಗನಿರುವ ಕಾಲಕ್ಕೂ ಅಂತರವಿದೆ.

[illegible]

[illegible]

[illegible]

[illegible]

[illegible]

ಇಬ್ಬರ ಜೀವನ ದೃಷ್ಟಿ ಭಿನ್ನವಾಗಿರುವುದರಿಂದ ಪೂರ್ವನಿಶ್ಚಿತ ನಂಬಿಕೆಗಳು, ಜಾತಿಯ ಕಟ್ಟುಪಾಡುಗಳು ಹಾಗೂ ವಿಧಿನಿಷೇಧಗಳು ಕೆಲವರಿಗೆ ಆಶಾದಾಯಕವಾಗಿ ಕಂಡರೇ, ಇನ್ನೂ ಕೆಲವರಿಗೆ ಅರ್ಥಹೀನವಾಗಿ ಕಾಣುತ್ತವೆ ಎಂಬುದನ್ನು ಕಾದಂಬರಿಯಲ್ಲಿ ಕಾಣಬಹುದಾಗಿದೆ.

ಸ್ವಭಾವದಲ್ಲಿ ಭಿನ್ನತೆ ಇದ್ದರೂ ವಿಚಾರಗಳ ಅನುಸಂಧಾನವನ್ನು 'ದಿವ್ಯ' ಕಾದಂಬರಿಯಲ್ಲಿ ಕಾಣಬಹುದಾಗಿದೆ. ಇಲ್ಲಿನ ಪಾತ್ರಗಳಾದ ಅಕ್ಕು, ಮಂಜಯ್ಯ ಒಂದು ತಲೆಮಾರಿನವರಾದರೆ, ಗೌರಿ, ಘನಶ್ಯಾಮ, ವಿಮಲಾ ಹಾಗೂ ಕೇಶವ ಇವರು ಇನ್ನೊಂದು ತಲೆಮಾರಿನವರಾಗಿದ್ದಾರೆ. ಅಕ್ಕು ಹಾಗೂ ಮಂಜಯ್ಯ ಹಳೆಯ ವಿಚಾರಗಳ ಜೊತೆಗೆ ಹೊಸವಿಚಾರಗಳಿಗೆ ಸ್ಪಂದಿಸುತ್ತಾರೆ. ಗೌರಿ, ಘನಶ್ಯಾಮ, ವಿಮಲಾ ಹಾಗೂ ಕೇಶವ ಹೊಸವಿಚಾರಗಳಿಂದ ಪ್ರಭಾವಿತರಾಗಿದ್ದರೂ ಹಳೆಯ ಮೌಲ್ಯಗಳ ಬಗ್ಗೆ ಗೌರವವಿರಿಸಿಕೊಂಡಿದ್ದಾರೆ.

ಗಂಡನಿಗೆ ಎರಡನೇ ಹೆಂಡತಿಯಾಗಿ ಬಂದ ಅಕ್ಕು ವಿಧವೆಯಾದ ಮೇಲೆ ಅವನ ಮಕ್ಕಳನ್ನು ತನ್ನ ಸ್ವಂತ ಮಕ್ಕಳಂತೆ ಪ್ರೀತಿಯಿಂದ ಸಾಕುತ್ತಾಳೆ. ಜೊತೆಗೆ ತನ್ನ ತಮ್ಮನೂ ಚಿಕ್ಕವನಿದ್ದುದರಿಂದ ಅವನ ಪಾಲನೆಯ ಜವಾಬ್ದಾರಿಯನ್ನು ಅಕ್ಕು ಹೊರುತ್ತಾಳೆ. ಮಡಿವಂತ ಹೆಂಗಸಾದರೂ ಆಧುನಿಕ ವಿಚಾರಗಳಿಗೆ ಸ್ಪಂದಿಸುವ ಅಕ್ಕುವಿಗೆ ಆಕಸ್ಮಿಕವಾಗಿ ದೊರಕುವ ಮಗುವನ್ನು ಮಮತೆಯಿಂದ ಸಾಕಲು ಮುಂದಾಗುತ್ತಾಳೆ. ಹೀಗೆ ಮಾನವೀಯತೆಯನ್ನು ಮೆರೆಯುವ ಅಕ್ಕುವಿನ ಸ್ವಭಾವದಲ್ಲಿ ಭಿನ್ನತೆ ಇದೆ.

ಜಮೀನ್ದಾರ ಮಂಜಯ್ಯನ ಸ್ವಭಾವದಲ್ಲಿ ವಿರೋಧಾಭಾಸವಿರುವುನ್ನು ಕಾದಂಬರಿಯಲ್ಲಿ ಗಮನಿಸಬಹುದಾಗಿದೆ. ಧರ್ಮನಿಷ್ಠನಾದ ಮಂಜಯ್ಯ ಭೂವರಾಹ ಪೂಜೆಯನ್ನು ನಿತ್ಯ ನೆರವೇರಿಸಬೇಕೆನ್ನುತ್ತಾನೆ. ಆದರೆ ಆ ಪೂಜೆಗೆ ವೇದಾಧ್ಯಾಯನ ಮಾಡಿದ ಪಂಡಿತನೇ ಬೇಕೆಂದು ಬಯಸುತ್ತಾನೆ. ಹೆಂಡತಿ ಸತ್ತನಂತರ ಮದುವೆಯಾಗಲು ನಿರಾಕರಿಸಿದ ಮಂಜಯ್ಯ ಸ್ತ್ರೀ ಲೋಲುಪನಾಗಿದ್ದಾನೆ. ಮಗಳಿಗೆ ಬಾಲ್ಯವಿವಾಹ ಮಾಡಿದ್ದರೂ, ಅವಳು ವಿಧವೆಯಾದ ನಂತರ ಓದಲು ಕಳುಹಿಸುತ್ತಾನೆ. ಆದರೆ ಮಗಳ ಅಂತರ್ಜಾತಿ ವಿವಾಹವನ್ನು ನಿರಾಕರಿಸುತ್ತಾನೆ. ದೇವನಹಳ್ಳಿಯ ಜನರು ಸ್ವತಂತ್ರವಾದ ಆಲೋಚನೆಯನ್ನು ರೂಢಿಸಿಕೊಳ್ಳಬೇಕೆಂಬ ಹಂಬಲವಿರುವ ಮಂಜಯ್ಯನಿಗೆ ಅವರು ತನಗೆ ಹೆದರಿಕೊಳ್ಳಬೇಕೆಂಬ ನಿರೀಕ್ಷೆಯೂ ಇದೆ. ಹೀಗೆ ಮಂಜಯ್ಯ ಗಾಂಧೀ ಪ್ರೇಮಿ, ನೆಹರೂ ವ್ಯಸನಿಯಾಗಿದ್ದಾನೆ.

ವೇದಾಧ್ಯಯನ ಮಾಡಿದ ಕೇಶವ ಆಧುನಿಕ ಸಾಹಿತ್ಯವನ್ನು ಓದಿಕೊಂಡಿರುತ್ತಾನೆ. ಮಂಜಯ್ಯನ ಮನೆಯಲ್ಲಿ ನಿತ್ಯ ಭೂವರಾಹ ಪೂಜೆಯನ್ನು ನೆರವೇರಿಸುವ ಅವನು ಆಧುನಿಕ ವಿಚಾರಗಳಲ್ಲೂ ಆಸಕ್ತಿ ಹೊಂದಿದ್ದಾನೆ. ಘನಶ್ಯಾಮ ಯೂರೋಪಿನ ಜ್ಞಾನದಲ್ಲಿ ಪರಮಾಸಕ್ತನಾಗಿದ್ದರೂ ವೇಷಭೂಷಣಗಳಲ್ಲಿ, ವ್ಯಕ್ತಿತ್ವದಲ್ಲಿ ಸರಳತೆಯನ್ನು ರೂಢಿಸಿಕೊಂಡಿರುತ್ತಾನೆ. ಆಧುನಿಕ ವಿಚಾರಗಳಿಂದ ಪ್ರಭಾವಿತನಾಗಿದ್ದರೂ ಸಂಪ್ರದಾಯಸ್ಥ ಗೌರಿಯನ್ನು ಮದುವೆಯಾಗಲು ಇಚ್ಛಿಸುತ್ತಾನೆ. ಭೂವರಾಹ ಪೂಜೆಯನ್ನು ನಿಲ್ಲಿಸಿದ ಘನಶ್ಯಾಮ ವಿಗ್ರಹವನ್ನು ಅಲಂಕಾರಕ್ಕಾಗಿ ಬಳಸುತ್ತಾನೆ. ಈ ವಿಚಾರವು ಗೌರಿಯ ಮನಸ್ಸಿಗೆ ಹಿಡಿಸದಿದ್ದಾಗ ತಕ್ಷಣ ತನ್ನಲ್ಲಿ ಬದಲಾವಣೆಯನ್ನು ತಂದುಕೊಳ್ಳುತ್ತಾನೆ. ಗೌರಿಯ ವ್ಯಕ್ತಿತ್ವದಲ್ಲೂ ಭಿನ್ನತೆ ಇದೆ. ಸಂಪ್ರದಾಯಸ್ಥಳಾದರೂ ಗೌರಿ ಆಧುನಿಕ ಮನೋಭಾವದ ಘನಶ್ಯಾಮನನ್ನು ಮದುವೆಯಾಗಲು ಒಪ್ಪುತ್ತಾಳೆ. ಶೂದ್ರನಲ್ಲೂ ಕೃಷ್ಣನನ್ನು

[illegible]

[illegible]

[illegible]

[illegible]

[illegible]

[illegible]

ಕಲ್ಪಿಸಿಕೊಳ್ಳುತ್ತಾಳೆ. ವಿಮಲಾ ಸಂಪ್ರದಾಯಸ್ಥ ಮನೆತನದಲ್ಲಿ ಜನಿಸಿದ್ದರೂ ತಂದೆಯು ನೀಡಿದ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡು ಗೆಸ್ಟ್‌ಹೌಸಿನಲ್ಲಿ ಮೈಕಲ್‌ನೊಡನೆ ವಿರಮಿಸುತ್ತಾಳೆ.

ಸ್ಮಾರ್ತ ಕೃಷ್ಣ ಶಾಸ್ತ್ರಿಗಳು ತುಂಗಾ ತೀರದ ಅನ್ನಪೂರ್ಣೇಶ್ವರಿ ದೇವಿಯ ಪರಿಸರವನ್ನು ಕಾಪಾಡಲು ಆಧುನಿಕತೆಯ ವಿರುದ್ಧ ಕರಪತ್ರ ಹಾಕಿಸಿ ಅದರ ಪ್ರಚಾರ ಮಾಡುತ್ತಾರೆ. ಅಣೆಕಟ್ಟು ನಿರ್ಮಿಸಿದರೆ ವಾಹನಗಳು ಸಂಚರಿಸಿ ಶಬ್ದಮಾಲಿನ್ಯ, ವಾಯುಮಾಲಿನ್ಯಗಳಾಗುತ್ತವೆ. ಅಣೆಕಟ್ಟಿನಿಂದಾಗಿ ಭೂಭಾರವಾಗಿ ಭೂಕಂಪನವಾಗುತ್ತದೆ. ಗುಡಿಗೆ ವಿದ್ಯುತ್ ಲೈಟುಗಳು ಬಂದರೆ ಗುಡಿಯು ಆಧ್ಯಾತ್ಮಿಕ ವರ್ಚಸ್ಸನ್ನು ಕಳೆದುಕೊಳ್ಳುತ್ತದೆ. ಅನ್ನಪೂರ್ಣೇಶ್ವರಿಯ ದರ್ಶನವು ಸುಗಮವಾಗಿರಬಾರದು. ಹೊಳೆಯನ್ನು ದಾಟಿ ಅಥವಾ ದೋಣಿಯನ್ನು ಹತ್ತಿ ಪ್ರಯಾಸಪಟ್ಟುಕೊಂಡು ಜನರು ಬರುವಂತಿರಬೇಕು. ಇಂತಹ ಸನಾತನ ಮೌಲ್ಯಗಳನ್ನು ಪ್ರತಿಪಾದಿಸುವ ಕೃಷ್ಣಶಾಸ್ತ್ರಿಗಳು ಗೌರಿ–ಘನಶ್ಯಾಮ, ವಿನೋದಿನಿ–ಕೇಶವ ಇವರಿಗೆ ಮದುವೆ ಮಾಡಿಸುತ್ತಾರೆ.

ಇದುವರೆಗೆ ವಿಶ್ಲೇಷಿಸಿದ ಕತೆ ಹಾಗೂ ಕಾದಂಬರಿಗಳಲ್ಲಿ ಪರಂಪರೆ ಮತ್ತು ಆಧುನಿಕತೆಯ ಸಂಘರ್ಷದ ವಿವಿಧ ಸ್ತರಗಳನ್ನು ಕಾಣಬಹುದು. ಪರಂಪರೆ ಹಳೆಯದು, ಆಧುನಿಕತೆ ಹೊಸತು. ಇದು ಸಹಜವಾಗಿಯೇ ಎರಡು ತಲೆಮಾರುಗಳ ಸಂಘರ್ಷವೂ ಆಗುತ್ತದೆ. ಸಾಂಸ್ಕೃತಿಕಾವಾಗಿ ಪರಂಪರೆ ಮತ್ತು ಆಧುನಿಕತೆಗಳ ಸಂಘರ್ಷವನ್ನು ಕೇಂದ್ರವಾಗಿರಿಸಿಕೊಂಡ ಅನಂತಮೂರ್ತಿಯವರ ಕಥಾಸಾಹಿತ್ಯ ಬದುಕಿನ ವಿವಿಧ ಪಾತಳಿಗಳನ್ನು ತೆರೆದು ತೋರಿಸಿತ್ತದೆ. ಸಂಪ್ರದಾಯದ ಬದುಕಿನ ಮಡಿವಂತರು ಮತ್ತು ಸಂಪ್ರದಾಯವನ್ನು ವಿರೋಧಿಸಿ ಬದುಕುನಡೆಸುವ ಪಾತ್ರಗಳ ನಡುವೆ ಸಂಘರ್ಷವಿದೆ. ವಯಸ್ಸಿನ ವ್ಯತ್ಯಾಸಕ್ಕಾಗಿ ಬಂದ ಆಲೋಚನೆಗಳ ನಡುವಿನ ಸಂಘರ್ಷವಿದೆ. ಎರಡು ವಿಭಿನ್ನ ಸಂಸ್ಕೃತಿಗಳ ನಡುವಿನ ವೈವಿಧ್ಯದ ಕಾರಣಕ್ಕಾಗಿ ಬಂದ ಸಂಘರ್ಷವಿದೆ. ಎರಡು ಜೀವನ ವಿಧಾನಗಳ ಆಯ್ಕೆಯ ಕಾರಣಕ್ಕಾಗಿ ಬಂದ ಸಂಘರ್ಷವಿದೆ. ಹೀಗೆ ವಿವಿಧ ಸಾಂಸ್ಕೃತಿಕ ಸಂಘರ್ಷಗಳ ನೆಲೆಯಿಂದ ಹೊಸ ಬದುಕಿನ ಶೋಧನೆಯಲ್ಲಿ ಇಲ್ಲಿನ ಪಾತ್ರಗಳು ತೊಡಗಿವೆ ಎಂಬುದು ಸ್ಪಷ್ಟವಾಗಿದೆ. ಪ್ರಸ್ತುತ ಶೋಧನೆಯಿಂದ ಇಲ್ಲಿ ವ್ಯಕ್ತಿಗಳ ಕೌಟುಂಬಿಕ ಬದುಕು ಮತ್ತು ಸಾಮಾಜಿಕ ಸ್ಥಿತಿ ಜಟಿಲತೆಯನ್ನು ಕಳೆದುಕೊಂಡು ಹೆಚ್ಚು ಮಾನವೀಯವಾಗುತ್ತದೆ ಎಂಬುದನ್ನು ಕಾಣಬಹುದು.

ಅನಂತಮೂರ್ತಿಯವರ ಕಥನಸಾಹಿತ್ಯದಲ್ಲಿ ಕಂಡು ಬರುವ ಅಂಶಗಳನ್ನು ಹೀಗೆ ಗುರುತಿಸಬಹುದು.

- ಸಾಂಪ್ರದಾಯಿಕ ಚೌಕಟ್ಟಿಗೆ ಸಿಲುಕಿದ ವ್ಯಕ್ತಿಗಳ ಬದುಕಿನ ಅನಾವರಣ
- ದಾಂಪತ್ಯದ ಬದುಕಿನಲ್ಲಿನ ಬಿರುಕುಗಳ ಚಿತ್ರಣ
- ಪರ್ಯಾಯ ಮೌಲ್ಯಗಳ ಹುಡುಕಾಟ

ಇಲ್ಲಿನ ಕತೆ ಮತ್ತು ಕಾದಂಬರಿಗಳಲ್ಲಿ ಸಂಪ್ರದಾಯದಿಂದ ಜಡಗೊಂಡ ಬ್ರಾಹ್ಮಣರ ಬದುಕು ಚಿತ್ರಿತವಾಗಿದೆ. ಪಾಪ–ಪುಣ್ಯ, ಇಹ–ಪರ ಚಿಂತನೆಗಳಲ್ಲಿ ತೊಡಗಿರುವ ಮನಸ್ಸುಗಳನ್ನು ಕಾಣಬಹುದು. ಜೀವವಿರೋಧಿ ವಾತಾವರಣವಿದ್ದು ಇಂತಹ ಪರಿಸರದಲ್ಲಿ ಸಿಲುಕಿದ ಗಂಡು–ಹೆಣ್ಣು ಇವರಿಬ್ಬರ ಬದುಕು ಜಡಗೊಳ್ಳುತ್ತಾ ಹೋಗುತ್ತದೆ.

[illegible]

ದಾಂಪತ್ಯದ ಕುರಿತು ಜಿಜ್ಞಾಸೆಯಿರುವ ಲೇಖಕರು ಚಿತ್ರಿಸಿದ ಪಾತ್ರಗಳಲ್ಲಿ ವೈವಿಧ್ಯತೆಯಿದೆ. ಹೆಂಡತಿಯೊಂದಿಗೆ ಸಲುಗೆಯಿಂದ ವರ್ತಿಸದ ಗಂಡಂದಿರು, ಪಿರಿಪಿರಿ ಮಾಡುವ ಪತ್ನಿಯರು ನಿರಂತರ ಬದುಕಿನ ಪೇಚಿಗೆ ಸಿಲುಕಿದ್ದಾರೆ. ಸಂಪ್ರದಾಯಸ್ಥ ಸಮಾಜದಲ್ಲಿ ಗಂಡ ಹೆಂಡತಿ ಸಲುಗೆಯಿಂದ ಇರುವುದೂ ಅಸಹಜವೆನಿಸುತ್ತದೆ. ಕಾರ್ತೀಕ ದ ರಾಘವನ ತಂದೆ–ತಾಯಿಯ ಸಂಬಂಧವನ್ನು ಗಮನಿಸಬಹುದು. ಗಂಡ ಹೆಂಡತಿಯ ಬಿಗುವು ಒಂದೆಡೆಯಾದರೆ, ಇನ್ನೊಂದೆಡೆ ಗಂಡಂದಿರು ದಾಂಪತ್ಯದ ಜಂಜಾಟದಿಂದ ಬೇಸತ್ತು ವೇಶ್ಯೆಯ ಮನೆಗೆ ಹೋಗುತ್ತಾರೆ. ಆಧುನಿಕತೆಯು ಪ್ರಗತಿಯನ್ನು ತಂದಿದ್ದರೂ ಅದರ ಹಿಂದಿನ ಸಂಪ್ರದಾಯವನ್ನು ನಿರ್ಲಕ್ಷಿಸುವುದು ಸುಲಭವಲ್ಲ. ಇಲ್ಲಿ ಪರ್ಯಾಯ ಮೌಲ್ಯಗಳ ಹುಡುಕಾಟವಿರುವುದನ್ನು ಕಾಣಬಹುದಾಗಿದೆ.

ವ್ಯಕ್ತಿ ತನ್ನ ಕಾಲದ ಅಗತ್ಯಕ್ಕೆ ಅನುಗುಣವಾಗಿ ಬದುಕನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಸಂಪ್ರದಾಯಗಳು, ನಂಬಿಕೆಗಳು ಪರಂಪರೆಯ ಮೌಲ್ಯಗಳು ಮೊದಲಾದ ಸಾಂಸ್ಕೃತಿಕ ಸಂಗತಿಗಳೆಲ್ಲ ಬದುಕಿನ ಮೇಲೆ ಪ್ರಭಾವವನ್ನು ಬೀರಿರುತ್ತವೆ. ಇವುಗಳಿಂದ ಹೊರಬಂದು ಕಾಲಕ್ಕೆ ಹೊಂದಿಕೊಂಡು ಬಾಳುವುದು ವ್ಯಕ್ತಿಗೆ ವೈಯಕ್ತಿಕ ನೆಲೆಯಲ್ಲಿ ಸುಲಭವಲ್ಲ, ಸಾಮಾಜಿಕವಾಗಿಯೂ ದುಸ್ತರವಾದುದೇ ಆಗಿದೆ. ಏಕೆಂದರೆ ಸಂಸ್ಕೃತಿದತ್ತ ಸಂಗತಿಗಳು ರಕ್ತಗತವಾಗಿರುವಾಗ ಅವುಗಳನ್ನು ತೊರೆಯುವಂತಿಲ್ಲ. ತೊರೆದು ಆಧುನಿಕವಾಗಿ ಸಂಗತಿಗಳನ್ನು ಸ್ವೀಕರಿಸುವಾಗಿನ ಭಯ, ಆತಂಕಗಳು ವ್ಯಕ್ತಿಯನ್ನು ತಲ್ಲಣಗೊಳಿಸುತ್ತವೆ. ಹೀಗೆ ಸಾಂಸ್ಕೃತಿಕ ಕಾರಣಗಳಿಗಾಗಿ ನಡೆಯುವ ಸಂಘರ್ಷಗಳು ಹೊಸಜೀವನ ವಿಧಾನವೊಂದಕ್ಕೆ ತೋರುದಾರಿಯಾಗಿರುತ್ತವೆ ಎಂಬುದು ಇಲ್ಲಿ ಗಮನಾರ್ಹ.

ಅನಂತಮೂರ್ತಿಯವರ ಕಥಾಸಾಹಿತ್ಯ ದ್ವಂದ್ವಗಳ ನೆಲೆಯಲ್ಲಿಯೇ ಅಂತ್ಯಗೊಳ್ಳುತ್ತದೆ. ಆದರೂ ಸಾಂಸ್ಕೃತಿಕ ಸಂಘರ್ಷದ ಪರಿಣಾಮಗಳು ಹೊಸ ಆಶಯದ ಆಶಾವಾದವನ್ನು ಪ್ರಕಟಿಸಿ ಓದುಗನನ್ನು ಮಾತ್ರ ಚಿಂತನೆಗೆ ಒಳಗುಮಾಡುವುದನ್ನು ಕೂಡ ಗಮನಿಸಬಹುದು. ಈ ಹಿನ್ನೆಲೆಯಿಂದ ಪರಿಶೀಲಿಸಿದರೆ ಮುಖ್ಯವಾಗಿ ಪರಂಪರಾಗತ ಕೌಟುಂಬಿಕ ಸಂಬಂಧಗಳು ಬದುಕಿಗೆ ಮಾನವೀಯ ಅಗತ್ಯಗಳಾಗಿ ಗೋಚರಿಸುತ್ತವೆ. ಆದರೆ ಜೀವನ ವಿರೋಧಿಸುವ ಸಂಪ್ರದಾಯಗಳ ಅರ್ಥಶೂನ್ಯತೆಯನ್ನು ಕಥಾಸಾಹಿತ್ಯವು ಸ್ಪಷ್ಟವಾಗಿ ಅನಾವರಣಗೊಳಿಸುತ್ತದೆ. ಪಾಶ್ಚಾತ್ಯ ಸಂಸ್ಕೃತಿಯ ಮುಕ್ತ ಸ್ವಚ್ಛಂದ ಬದುಕು ಪಾರಂಪರಿಕ ಬದ್ಧ ಸಮಾಜದ ಸಾಂತ್ವನವನ್ನು ನೀಡಲಾರದು ಎಂಬುದು ಇಲ್ಲಿ ವೇದ್ಯ. ಆದರೆ ಅಲ್ಲಿನ ಜವಾಬ್ದಾರಿಯುತ ಬದುಕು ಸಾಂಸ್ಕೃತಿಕ ಕಾರಣಕ್ಕಾಗಿ ಅಲ್ಲವಾದರೂ ಸಮಕಾಲೀನ ಅಗತ್ಯಗಳಲ್ಲಿ ಒಂದು ಎಂಬುದನ್ನು ಕ್ಲಿಪ್‌ಜಾಯಿಂಟ್ ಕತೆಯಲ್ಲಿ ಕಾಣಬಹುದು.

ನಗರ ಸಂಸ್ಕೃತಿಯ ಆಕರ್ಷಣೆ ಕೇವಲ ಭೌತಿಕ ಕಾರಣಕ್ಕಾಗಿ ಆಗಿರದೆ ಅದು ಸಾಂಸ್ಕೃತಿಕ ಅನಿವಾರ್ಯತೆಯ ಭಾಗವಾಗಿ ರೂಪಿಸುವ ಅಗತ್ಯವನ್ನು ಕಥಾ ಸಾಹಿತ್ಯವು ಪ್ರತಿಪಾದಿಸುತ್ತದೆ. ಆದರೆ ಪರಂಪರೆಯಿಂದ ಬಂದ ಅನುಭವ ವೇದ್ಯ ಸಂಗತಿಗಳು ಕಾಲ ವಿರೋಧಿ ವಿಚಾರಗಳಾಗುತ್ತವೆ ಎಂಬುದನ್ನು 'ಪ್ರಕೃತಿ' ಕತೆ ಸಮಾನವಾಗಿಯೇ ಚಿತ್ರಿಸಿದೆ. ಹೀಗೆ ಪರಂಪರೆ ಮತ್ತು ಆಧುನಿಕತೆಯ ಸಂಘರ್ಷ ಸಂಸ್ಕೃತಿ ಶೋಧನೆಯ ಭಾಗವಾಗಿ ಹೊಸ ಬದುಕಿನ ಅವಿರ್ಭಾವವನ್ನು ಪ್ರೇರಿಸುತ್ತದೆ ಎಂಬುದು ಇಲ್ಲಿನ ಕಥನ ಸಾಹಿತ್ಯದ ಮೂಲಕ ಕಂಡುಕೊಳ್ಳಬಹುದಾಗಿದೆ.

ಅನಂತಮೂರ್ತಿಯವರು ನಮ್ಮ ಸಂಸ್ಕೃತಿಯಲ್ಲಿನ ಅರ್ಥಹೀನತೆಯನ್ನು ಇದು ತೋರಿಸಿಕೊಡುವಷ್ಟೆ ಮುಖ್ಯವಾಗಿ ನಂತರದ ಪೀಳಿಗೆಗಳು ಎದುರಿಸುವ ಸಂಘರ್ಷವನ್ನು ಚಿತ್ರಿಸಿದ್ದಾರೆ. ಹೊಸ ಮೌಲ್ಯಗಳ ಸೃಷ್ಟಿಯಿಂದಾಗಿ ಪರಂಪರೆಯನ್ನು ಎದುರು ಹಾಕಿಕೊಂಡ ಕ್ಷಣಗಳು ತನ್ನದೇ ಮೌಲ್ಯಗಳನ್ನು ಸ್ವಂತದ ಅನುಭವದಲ್ಲಿ ಸ್ಪಷ್ಟಪಡಿಸಿಕೊಂಡಿದ್ದು ಕೇವಲ ಒಂದು ಕ್ಷಣದ ನಿರ್ಧಾರವಾಗಿರದೆ ಅದು ಸಂಪೂರ್ಣ ಸ್ವತಂತ್ರ ಏಕಾಕಿಯಾಗಿ ಅನಿಶ್ಚಿತ ಮೌಲ್ಯಗಳ ನಡುವೆ ತನಗೆ ಹಾಗೂ ಪರರಿಗೆ ಆಯ್ದುಕೊಳ್ಳುತ್ತಾ ತನ್ನ ಬದುಕಿನ ಮುಖಾಂತರ ಹುಡುಕಾಟವನ್ನು ಮಾನವತೆಯ ನೆಲೆಯಲ್ಲಿ ನಡೆಸುತ್ತಾರೆ.

ಅನಂತಮೂರ್ತಿಯವರು ಕಥನಸಾಹಿತ್ಯದಲ್ಲಿ ಸೃಷ್ಟಿಯಾಗಿರುವ ವ್ಯಕ್ತಿ ತನ್ನೊಬ್ಬನ್ನ ಬಿಡುಗಡೆಗೆ ಮಾತ್ರವೇ ಈ ಸಂಘರ್ಷವನ್ನು ನೋಡದೆ ಇಡೀ ಪರಂಪರೆಯೊಳಗಿನ ಎಲ್ಲರ ಜವಾಬ್ದಾರಿಯನ್ನು ಹೊರುವುದರಿಂದ ಪುನರ್ ಸೃಷ್ಟಿಸುತ್ತಾ ಹೋಗುತ್ತಾನೆ. ನಮ್ಮ ಪರಂಪರೆಯ ಮಿತಿಯನ್ನು ಕಂಡುಕೊಂಡು ಆದರೆ ಪರಂಪರೆಯನ್ನು ಬಿಡದೆ ಅದರೊಳಗಿನಿಂದಲೇ ಅನಂತಮೂರ್ತಿಯವರು ನಡೆಸಿದ ಹುಡುಕಾಟ ಸಾಂಸ್ಕೃತಿಕ ನೆಲೆಯಿಂದ ಅತ್ಯಂತ ಮಹತ್ವದ್ದು. ಏಕೆಂದರೆ ಈ ಲೇಖಕರು ಬದಲಾಗುತ್ತಿರುವ ಸಾಮಾಜಿಕ ವಿನ್ಯಾಸಗಳು, ಹಳೆಯ ಸಾಮಾಜಿಕ ಸಂಸ್ಥೆಗಳ ವಿಘಟನೆ, ವೈವಾಹಿಕ ಜೀವನದ ಇಕ್ಕಟ್ಟುಗಳು ಮೌಲ್ಯಗಳಿಂದ ಬಂಧಿತವಾದ ಎಡಬಿಡಂಗಿತನ, ನೈತಿಕ ಇಬ್ಬಂದಿತನ ಇತ್ಯಾದಿಗಳು ಮನುಷ್ಯನ ವರ್ತನೆಯಲ್ಲಿ ಕಾಣಿಸಿಕೊಳ್ಳುವುದು ಇವೇ ಮೊದಲಾದ ನೆಲೆಗಳಲ್ಲಿ ವಸ್ತುವನ್ನು ಆಯ್ದುಕೊಳ್ಳುವುದರಿಂದ ಪರಂಪರೆಯೊಳಗಿನ ವ್ಯವಸ್ಥೆಯ ಕೇಂದ್ರದೆಡೆಗೆ ಒಳನೋಟಗಳು ಸಾಧ್ಯವಾಗುವುದರಿಂದ ಸಾಂಸ್ಕೃತಿಕವಾದ ಬದಲಾವಣೆಗೆ ಮುಖ್ಯವಾದ ದಾರಿ ಇದರಿಂದ ಸಾಧ್ಯವಾಗುತ್ತದೆ. ಏಕೆಂದರೆ ವ್ಯಕ್ತಿಯ ಬದುಕು ಅವ್ಯಕ್ತ ಪ್ರಜ್ಞೆಯಿಂದಲೇ ನಿರ್ದೇಶಿತವಾಗಿರುತ್ತದೆ. ಆ ನಿರ್ದೇಶನಗಳಲ್ಲಿ ಆಗುವ ಚಲನೆಯು ಸಂಸ್ಕೃತಿಯನ್ನು ಹೊಸ ನಿಟ್ಟಿನಲ್ಲಿ ರೂಪಿಸಲು ಅನುಕೂಲವಾಗುತ್ತದೆ. ಹೀಗಾಗಿ ಅಸ್ತಿತ್ವವಾದಿ ಚಿಂತನೆಗಳು ಬದುಕಿನ ಸಂದರ್ಭದಲ್ಲಿ ಅನ್ವಯವಾದ ರೀತಿ ಅಸ್ತಿತ್ವವಾದಿ ಆಲೋಚನೆಗಳು ಒಬ್ಬೊಬ್ಬ ಲೇಖಕನಿಂದಲೂ ಬರೆಯಿಸಿದ ಕ್ರಮ ಅದರ ಮೂಲಕ ಬದುಕನ್ನು ನೋಡುವ ದೃಷ್ಟಿಯಲ್ಲಿ ಆದ ಬದಲಾವಣೆ ಮಹತ್ವದ್ದು.

ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಪರಂಪರೆ ಒಂದು ಮೌಲ್ಯವಾಗಿ ಅಭಿವ್ಯಕ್ತಿಗೊಂಡರೆ, ಆಧುನಿಕತೆ ಪರಂಪರೆಗೆ ಒಂದು ಸವಾಲಾಗಿ ನಿಲ್ಲುತ್ತದೆ. ಪರಂಪರೆಯ ಮೇಲೆ ಹೊಸತನದ ಬದುಕನ್ನು ಕಟ್ಟಿಕೊಳ್ಳುವ ಎರಡು ತಲೆಮಾರುಗಳ ಸಂಘರ್ಷ ಮುಖಾಮುಖಿಯಾಗುತ್ತವೆ. ಪರಂಪರೆ ನಿಂತ ನೆಲೆಯಲ್ಲಿಯೆ ಸೃಜನಶೀಲತೆಗೆ ಅಡ್ಡಿಯಾಗುವ ಆದರೆ ಆಧುನಿಕತೆ ಅದನ್ನು ಮೀರಿ ನಿಲ್ಲುವ ಪ್ರಕ್ರಿಯೆಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ನಗರಸಂಸ್ಕೃತಿ ಮತ್ತು ಆಧುನಿಕ ಶಿಕ್ಷಣದ ಪರಿಣಾಮದ ಆಧುನಿಕ ಮನೋಧರ್ಮ ಒಂದು ತೆರನಾದರೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದ ಆಧುನಿಕತೆ ಇನ್ನೊಂದು ತೆರ. ವಯೋಮಾನದ ಕಾರಣಗಳಿಗಾಗಿ ತಾವು ಬದುಕಿ ಬಾಳಿದ ಪರಿಸರದ ಕಾರಣಕ್ಕಾಗಿ ರೂಪುಗೊಂಡ ಆಧುನಿಕ ವಿಚಾರಧಾರೆ ಮತ್ತೊಂದು ತೆರ. ಹೀಗೆ ಇಲ್ಲಿ ಪರಸ್ಪರ ಎರಡು ಸಂಸ್ಕೃತಿಗಳು ಪರಂಪರೆಯ ಜಾಡಿನಲ್ಲಿಯೇ ಆಧುನಿಕತೆಯನ್ನು ಪಡೆಯುವ ವಿವಿಧ ಹಂತಗಳನ್ನು ಕತೆಗಳ ಮೂಲಕ ಸಂಪ್ರದಾಯ ಮತ್ತು ಆಧುನಿಕತೆ, ಪಾಶ್ಚಾತ್ಯ ಮತ್ತು ಪೌರಾತ್ಯ, ತಲೆಮಾರುಗಳ ಸಂಘರ್ಷ ಎಂಬ ಉಪ ಶೀರ್ಷಿಕೆಗಳ ಅಡಿಯಲ್ಲಿ ಚರ್ಚಿಸಲಾಗಿದೆ.

[illegible]

[illegible]

[illegible]

ಅಡಿ ಟಿಪ್ಪಣಿಗಳು

೧. ಗೋಪಾಲಕೃಷ್ಣ ಅಡಿಗ–ಸಂಕ್ರಮಣ ೧೬; ೧೯೬೭; ಪು: ೬೪.
೨. ನಾಯಕ ಜಿ.ಹೆಚ್–ಸಮಕಾಲೀನ ; ೧೯೭೩ ; ಸಂ. ಮುರಳೀಧರ ಉಪಾಧ್ಯ ಹಿರಿಯಡಕ; ಪು:೨೧೧.
೩. ಅಶೋಕ ಟಿ.ಪಿ– ಯು.ಆರ್.ಅನಂತಮೂರ್ತಿ ಒಂದು ಅಧ್ಯಯನ ; ೨೦೦೧; ಪು: ೧೯.
೪. ರಾಮಾನುಜನ್ ಎ.ಕೆ–ಯು.ಆರ್. ಅನಂತಮೂರ್ತಿ ಸಂ. ಮುರಳೀಧರ ಉಪಾಧ್ಯ ಹಿರಿಯಡಕ; ೨೦೦೦; ಪು:೨೬೯, ೨೭೦.
೫. ವೆಂಕಟರಾಂ.ಎಸ್–ಯು.ಆರ್.ಅನಂತಮೂರ್ತಿ ಸಂ. ಮುರಳೀಧರ ಉಪಾಧ್ಯ ಹಿರಿಯಡಕ; ೨೦೦೦; ಪು;೩೦೧.
೬. ವಿಜಯಸುಬ್ಬರಾಜ್–ದಿವ್ಯ ಅನುಭೂತಿ ಮೂಡಿಸಿದ ದಿವ್ಯ; ಸುಧಾ; ೨೦೦೨ ; ಪು;೨೯.
೭. ಅಶೋಕ ಟಿ.ಪಿ– ಯು.ಆರ್.ಅನಂತಮೂರ್ತಿ ಒಂದು ಅಧ್ಯಯನ ; ೨೦೦೧; ಪು: ೩೩.
೮. ಆಮೂರ ಜಿ.ಎಸ್–ಕನ್ನಡ ಪ್ರಭ; ದೀಪಾವಳಿ ವಿಶೇಷಾಂಕ; ೨೦೦೨ ; ಪು: ೩೬.
೯. ರಾಮಚಂದ್ರದೇವ–ಯು.ಆರ್.ಅನಂತಮೂರ್ತಿ; ಸಂ. ಮುರಳೀಧರ ಉಪಾಧ್ಯ ಹಿರಿಯಡಕ; ಪು:೨೩೮.
೧೦. ಅಶೋಕ ಟಿ.ಪಿ– ಯು.ಆರ್.ಅನಂತಮೂರ್ತಿ ಒಂದು ಅಧ್ಯಯನ ; ೨೦೦೧ ; ಪು:೬೬.
೧೧. ನರಹಳ್ಳಿ ಬಾಲಸುಬ್ರಹ್ಮಣ್ಯ– ಮುಖಾಮುಖಿಯ ಅಗ್ನಿದಿವ್ಯ; ಮಯೂರ; ಸಂಪುಟ ೩೪; ಸಂಚಿಕೆ; ೧೧; ನವೆಂಬರ್;೨೦೦೧;ಪು:೧೧.
೧೨. ಅಶೋಕ.ಟಿ.ಪಿ–ಯು.ಆರ್.ಅನಂತಮೂರ್ತಿ ಒಂದು ಅಧ್ಯಯನ ; ೨೦೦೧; ಪು:೧೯.
೧೩. ಅಶೋಕ ಟಿ.ಪಿ.–ಯು.ಆರ್.ಅನಂತಮೂರ್ತಿ ಒಂದು ಅಧ್ಯಯನ ; ೨೦೦೧; ಪು:೫೦.
೧೪. ಅಶೋಕ ಟಿ.ಪಿ.–ಯು.ಆರ್.ಅನಂತಮೂರ್ತಿ ಒಂದು ಅಧ್ಯಯನ ; ೨೦೦೧; ಪು:೫೬.

ಅಧ್ಯಾಯ ಎರಡು

ಸಮಾಜ ಮತ್ತು ಜಾತಿ ವ್ಯವಸ್ಥೆ

೨.೧ ಬ್ರಾಹ್ಮಣ ಮತ್ತು ಶೂದ್ರ

೨.೨ ಹೆಣ್ಣು ಮತ್ತು ಗಂಡು

೨.೩ ವ್ಯಕ್ತಿ ಮತ್ತು ಸಮಾಜ

ಅಧ್ಯಾಯ–೨

ಸಮಾಜ ಮತ್ತು ಜಾತಿವ್ಯವಸ್ಥೆ

ಮಾನವನ ವ್ಯಕ್ತಿತ್ವ ವಿಕಾಸದೊಂದಿಗೆ ಸಾಮಾಜಿಕ ವ್ಯವಸ್ಥೆಯು ರೂಪುಗೊಂಡಿದೆ. ಬುದ್ಧಿಜೀವಿಯಾದ ಮನುಷ್ಯ ಸಂಘಜೀವಿಯಾದ ಮೇಲೆ ವ್ಯವಸ್ಥಿತವಾದ ಬದುಕನ್ನು ನಡೆಸಲು ಸಮಾಜವನ್ನು ರಚಿಸಿಕೊಂಡನು. ಬದುಕಿನ ಅನುಕೂಲಕ್ಕಾಗಿ ಹಲವು ವೃತ್ತಿಗಳನ್ನು ಅವಲಂಬಿಸಿದನು. ಪುರೋಹಿತವೃತ್ತಿ ಮಾಡುವವನನ್ನು ಬ್ರಾಹ್ಮಣನೆಂದೂ, ತೋಳ್ಬಲದಿಂದ ಹೋರಾಡುವವನನ್ನು ಕ್ಷತ್ರಿಯನೆಂದೂ, ವ್ಯವಹಾರದಲ್ಲಿ ಚತುರನಾದವನನ್ನು ವೈಶ್ಯನೆಂದೂ, ಜೀತದಾಳಾಗಿ ದುಡಿಯುವವನನ್ನು ಶೂದ್ರನೆಂದು ಗುರುತಿಸಲಾಯಿತು. ಹೀಗೆ ವೃತ್ತಿಯಿಂದ ಜಾತಿಯ ವ್ಯವಸ್ಥೆಯು ರೂಪುಗೊಂಡಿತು. ಸಾಮಾಜಿಕ ಜೀವನದ ಎಲ್ಲ ನೆಲೆಗಳಲ್ಲಿ ಜಾತಿಯು ನೆಲೆಸಿದೆ. ಭಾರತೀಯರ ಬದುಕಿನಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ ಈ ವ್ಯವಸ್ಥೆಯಿಂದಾಗಿ ಸಮಾಜದಲ್ಲಿ ಅಸಮಾನತೆಯು ಉಂಟಾಯಿತು. ವಿವಿಧ ಜನಾಂಗಗಳಲ್ಲಿನ ಕಟ್ಟುಪಾಡು, ಆಚರಣೆ ಹಾಗೂ ಆರ್ಥಿಕ ವ್ಯವಸ್ಥೆಯಿಂದಾಗಿ ವರ್ಣ ಹಾಗೂ ವರ್ಗ ಭೇದವು ಸೃಷ್ಟಿಯಾಯಿತು. ಜಾತಿಯ ಕಾರಣಕ್ಕಾಗಿ ವ್ಯಕ್ತಿಯು ಸಾಂಸ್ಕೃತಿಕ ಪರಿವೇಷವನ್ನು ತೊಟ್ಟಿರುತ್ತಾನೆ. ಪರಂಪರಾಗತವಾಗಿ ಬಂದ ಈ ಪರಿವೇಷವನ್ನು ಸಾಮೂಹಿಕವಾಗಿ ಇಲ್ಲವೇ ವೈಯಕ್ತಿಕವಾಗಿ ವಿರೋಧಿಸುವಾಗ ಸಂಘರ್ಷವು ಏರ್ಪಡುತ್ತದೆ. ಸಮಾಜ ಮತ್ತು ಜಾತಿ ವ್ಯವಸ್ಥೆಯಲ್ಲಿನ ಅನುಭವ ವೈಚಿತ್ರ್ಯಗಳನ್ನು ಬಿಚ್ಚಿಡುವುದಕ್ಕೆ ಕಥಾ ಸಾಹಿತ್ಯವು ಸಮರ್ಥ ಮಾಧ್ಯಮವಾಗಿದೆ. ಪ್ರತಿಮೆ, ಸಂಕೇತ, ರೂಪಕಗಳ ಜೊತೆಗೆ ವಸ್ತುವನ್ನು ವಿವರಣಾತ್ಮಕವಾಗಿ ಸೆರೆಹಿಡಿಯಬಲ್ಲ ಭಿತ್ತಿಶಕ್ತಿ ಈ ಪ್ರಕಾರಕ್ಕಿದೆ.

ಸೃಜನ ಮತ್ತು ಸೃಜನೇತರ ಬರಹವು ಒಂದು ಸಮಾಜದ ಮುಖ್ಯ ಉತ್ಪಾದನೆಯಾಗಿರುತ್ತದೆ. ಸೃಜನ ಬರಹದಲ್ಲಿ ಪ್ರಮುಖ ಪಾತ್ರ ವಹಿಸುವ ಕಲ್ಪನೆಯು ಸಮಾಜದ ಇರುವಿಕೆಯಲ್ಲಿ ತನ್ನ ಅಸ್ತಿತ್ವವನ್ನು ಪಡೆಯುತ್ತಿರುತ್ತದೆ. ಸಮಾಜದೊಳಗೆ ತನ್ನ ಬದುಕನ್ನು ಕಂಡುಕೊಂಡ ವ್ಯಕ್ತಿ ಸಮೂಹವು ವಿಶಿಷ್ಟ ಸಂಸ್ಕೃತಿಯ

[illegible]

[illegible]

[illegible]

[illegible]

ಹುಟ್ಟುವಿಕೆಗೆ ಕಾರಣವಾಗುತ್ತದೆ. ವ್ಯಕ್ತಿ ನೆಲೆಯಿಂದ ಸಮೂಹನಿಷ್ಠಗೊಂಡ ಒಂದು ವ್ಯವಸ್ಥೆಯ ಪ್ರತಿರೂಪವಾದ ಸಮಾಜವು ವಿವಿಧ ದೃಷ್ಟಿಕೋನಗಳಿಂದ ಭಿನ್ನ ನೆಲೆಗಳಲ್ಲಿ ಬರಹಕ್ಕೆ ವಸ್ತುವಾಗಿ ಪ್ರತಿಆಕರವಾಗಿ ರೂಪುಗೊಳ್ಳುತ್ತದೆ. ಸಾಹಿತ್ಯವು ಈ ಸಮಾಜವನ್ನು ಕಂಡ ಬಗೆಯ ಹಲವಾರು ಆಯಾ ಸಾಹಿತ್ಯಕ ಪರಿಕ್ರಮಗಳು ಕಾಲಾಂತರದಲ್ಲಿ ಪರಿಸರನ್ನು ಅವಲಂಬಿಸಿ ಪ್ರತಿಪಾದಿತಗೊಂಡಿವೆ. ನವೋದಯ ಹಾಗೂ ನವ್ಯರು ಸಮಾಜವನ್ನು ಕಂಡ ಬಗೆಯಲ್ಲಿ ವ್ಯತ್ಯಾಸವಾಗುವುದಕ್ಕೆ ಪರಿಸರದ ಜೊತೆಗೆ ಬರಹಗಾರನ ಸೈದ್ಧಾಂತಿಕ ನಿಲುವು ಕಾರಣವಾಗುತ್ತದೆ. ಒಂದು ಸೈದ್ಧಾಂತಿಕ ಚೌಕಟ್ಟಿಗೊಳಗಾದ ಯಾವುದೇ ಬರಹಗಾರ ತಾನು ನಿಂತ ನೆಲದ ಕುರಿತಾದ ತಾತ್ವಿಕ ಬದ್ಧತೆಯನ್ನು ಸಾಹಿತ್ಯದ ಮೂಲಕ ಕೊಡಲು ಹಾತೊರೆಯುತ್ತಾನೆ. ಕಾರಣವಾಗಿ ಪರಿಸರದೊಂದಿಗೆ ಈ ಬಗೆಯ ತಾತ್ವಿಕ ಬದ್ಧತೆಗಳು ಕೂಡ ಸಾಹಿತ್ಯದ ಉತ್ಪಾದನೆಗೆ ಮೂಲ ಆಕರಗಳಾಗುತ್ತವೆ. ನವ್ಯ ಸಾಹಿತ್ಯದ ಅನೇಕ ಲೇಖಕರು ಮನುಷ್ಯನ ಮನಸ್ಸಿನ ವಿಕ್ಷಿಪ್ತತೆ, ಏಕಾಂಗಿತನ ಹಾಗೂ ಅನಾಥ ಪ್ರಜ್ಞೆಯಂತಹ ಅನೇಕ ವಿಚಾರಗಳನ್ನು ಜಾತಿಯ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ. ಸಾಮಾಜಿಕ ಶಿಷ್ಟಾಚಾರಗಳ ನೆಪದಲ್ಲಿ ದಾಕ್ಷಿಣ್ಯವಶರಾಗದೇ ಮನಸ್ಸಿನ ಸಂಕೋಚಗಳನ್ನು ಬಿಟ್ಟು ಅನುಭವದ ಅಮೂಲಾಗ್ರ ಪರಿಶೋಧನೆಗೆ ತೊಡಗಿದ್ದ ಶಿವರಾಮಕಾರಂತ, ಕುವೆಂಪು, ಚಂದ್ರಶೇಖರ ಕಂಬಾರ ಹಾಗೂ ಅನಂತಮೂರ್ತಿ ಮೊದಲಾದವರ ಪ್ರಯತ್ನಗಳು ಗಮನಾರ್ಹವಾದವು. ಈ ಕಾಲಘಟ್ಟದಲ್ಲಿ ಬರುವ ಅನಂತಮೂರ್ತಿಯವರು ತಮ್ಮ ಕಥಾ ಸಾಹಿತ್ಯದ ಚೌಕಟ್ಟಿಗೆ ಪೂರಕವಾಗಿ ಜಾತಿ ಮತ್ತು ಅಸ್ಪೃಶ್ಯತೆಯ ವಿಚಾರಗಳನ್ನು ಪರಿಣಾಮಕಾರಿಯಾಗಿ ಹಿಡಿದಿಟ್ಟಿದ್ದಾರೆ. ಅನಂತಮೂರ್ತಿಯವರು ಜಾತಿಯನ್ನು ಉಳಿಸಿಕೊಂಡು ಅದರ ಮೂಲಕವೇ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಬಯಸುತ್ತಾರೆ. ವಾಸ್ತವದಲ್ಲಿ ಗಾಂಧೀಜಿಯವರ ನಿಲುವು ಇದೇ ಆಗಿತ್ತು. ಗಾಂಧಿ ಭಾರತದ ಸಾಮಾಜಿಕ ಸ್ಥಿತಿಯನ್ನು ಗಮನದಲ್ಲಿರಿಸಿಕೊಂಡೇ ರಾಜಕಾರಣದ ನೈತಿಕತೆಯ ಬಗ್ಗೆ ಮಾತನಾಡಿದರು. ರಾಜಕಾರಣವೂ ನಮ್ಮ ಭಾವನಾತ್ಮಕತೆಯಯನ್ನು ಒಡೆಯುವಂತಿರಬಾರದು ಎಂದು ಬಲವಾಗಿ ಅವರು ನಂಬಿದ್ದರಿಂದ ಒಂದು ಕಡೆಗೆ ಬ್ರಿಟೀಷರ ವಿರುದ್ಧವೂ ಮತ್ತೊಂದು ಕಡೆ ಹರಿಜನರ ಪರವಾಗಿ ದನಿಯನ್ನೂ ಎತ್ತಿದರು. ದೇಶೀಯವಾದ ಹಕ್ಕು ಮತ್ತು ರಕ್ಷಣೆಗಳನ್ನು ಒಟ್ಟೊಟ್ಟಿಗೆ ಇಟ್ಟರು.

ಇನ್ನೊಂದೆಡೆಯಲ್ಲಿ, ವ್ಯಕ್ತಿಯ ಸಾಮಾಜಿಕ ಕೌಟುಂಬಿಕ ಸ್ತರಗಳು ಹೆಚ್ಚಾಗಿ ಜಾತಿಯ ಚೌಕಟ್ಟನ್ನು ಅವಲಂಬಿಸಿರುತ್ತವೆ. ಮನುಷ್ಯನ ಬದುಕು ಮುಖಿಯಾದ ಆಲೋಚನೆಯ ಹಿಂದೆ ಜಾತಿಯ ಕಟ್ಟುಪಾಡುಗಳ ನಿಯಂತ್ರಣವಿರುತ್ತದೆ. ವ್ಯವಹಾರಿಕ ವಿಚಾರ ವಲಯವೂ ಇದರಿಂದ ಮುಕ್ತವಾಗಿಲ್ಲ. ಮೇಲು ಕೀಳು ಎಂಬ ಕಲ್ಪನೆಗಳ ಹುಟ್ಟಿಗೆ ಜಾತಿಯು ಮೂಲಭೂತವಾದ ಕಾರಣವಾಗಿದೆ. ಸಾಮಾಜಿಕವಾಗಿ ಪ್ರಾರಂಭವಾದ ಈ ಪ್ರಕ್ರಿಯೆ ಎಲ್ಲಾ ಕ್ಷೇತ್ರಗಳನ್ನೂ ಕ್ರಮೇಣವಾಗಿ ವ್ಯಾಪಿಸಿತು. ಮನುಷ್ಯನ ನಡುವೆ ಮುಟ್ಟುವ, ಮುಟ್ಟದಿರುವ ತಾರತಮ್ಯದ ಪ್ರಕ್ರಿಯೆ ಕಂಡುಬಂದಿತು. ಜಾತಿಯಿಂದ ಮೇಲ್ವರ್ಗದಲ್ಲಿರುವ ಬ್ರಾಹ್ಮಣ ಉಳಿದ ಜಾತಿಗಳಿಗಿಂತ ಉತ್ತಮ ಸ್ಥಾನ ಪಡೆದ. ಇದರಿಂದ ಅವನು ತನ್ನ ಅನುಕೂಲಕ್ಕೆ ತಕ್ಕಂತೆ ನಿಯಮಗಳನ್ನು ರೂಪಿಸತೊಡಗಿದ. ಶೂದ್ರನನ್ನು ಸೇವಕನೆಂದು ಪರಿಗಣಿಸಲಾಯಿತು. ಜಾತಿಯ ಸವಾಲು ಗಂಭೀರವಾಗಿದ್ದು ಸಮಾನವಾಗಿ ಬಾಳಿಬದುಕಬೇಕಾದ ಹೆಣ್ಣು ಗಂಡುಗಳನ್ನು ಪ್ರತ್ಯೇಕಮಾಡುವುದರೊಂದಿಗೆ ತನ್ನ ಸಾಮಾಜಿಕ ಪ್ರತಿಷ್ಠೆಯನ್ನು ಗಳಿಸಿಕೊಳ್ಳುತ್ತದೆ. ಸಂಸ್ಕೃತಿಯನ್ನು ನಿರ್ಮಿಸುವ ಆಶಯಗಳು ಜಾತಿಯನ್ನು ಬಿಟ್ಟಿರುವಂತೆ ಕಂಡುಬಂದರೂ ಅದರ ಪ್ರಭಾವದಿಂದ ತಪ್ಪಿಸಿಕೊಳ್ಳಲಾಗಿಲ್ಲ. ಹೀಗೆ ಜಾತಿಯ ಕಾರಣಕ್ಕಾಗಿ ನಿರ್ಮಾಣಗೊಳ್ಳುವ ಸಂಘರ್ಷಗಳು, ತಾರತಮ್ಯ ನೀತಿಗಳು, ಆರ್ಥಿಕ ಅಸಮಾನತೆಯಿಂದುಂಟಾದ ಗೊಂದಲಗಳು ಬ್ರಾಹ್ಮಣ–ಶೂದ್ರ, ಹೆಣ್ಣು–ಗಂಡು, ವ್ಯಕ್ತಿ–ಸಮಾಜ ಈ ಉಪಶೀರ್ಷಿಕೆಯಡಿಯಲ್ಲಿ ಮುಂದೆ ಚರ್ಚೆಗೊಳಗಾಗಿವೆ.

೨.೧ ಬ್ರಾಹ್ಮಣ ಮತ್ತು ಶೂದ್ರ

ಆದಿಕವಿ ಪಂಪನಿಂದಾದಿಯಾಗಿ ಜಾತಿಯ ವಿಚಾರಗಳು ಸಾಹಿತ್ಯದಲ್ಲಿ ಬೇರೆ ಬೇರೆ ಆಯಾಮಗಳಲ್ಲಿ ಚಿತ್ರಿತವಾಗಿವೆ. ಕಟ್ಟುಪಾಡಿನ ಸಮಾಜದೊಳಗೆ ಜಾತಿಯ ವಿಚಾರದಲ್ಲಿ ಪ್ರತಿಭಟನೆಯಿದ್ದರೂ ರಾಜಪ್ರಭುತ್ವದ ನೆರಳಿನಲ್ಲಿಯೇ ಅದರ ಚಿತ್ರಣವಿದೆ. ಆದರೂ ಅದು ಆಂತರಿಕವಾಗಿ ಆ ಕಾಲಕ್ಕೆ ಒಡ್ಡಿದಂತಹ ಪ್ರಬಲವಾದ ಹೋರಾಟವೇ ಆಗಿತ್ತು. ನಂತರದಲ್ಲಿ ಆಯಾ ಸಾಹಿತ್ಯಕ ಘಟ್ಟಗಳಲ್ಲಿ ಜಾತಿಯ ವಿಚಾರಗಳು ಮೂಡುತ್ತಲೇ ಬಂದವು. ನವ್ಯ ಸಾಹಿತ್ಯದ ಘಟ್ಟವು ಜಾತಿಯ ವಿಚಾರಗಳನ್ನು ಸೂಕ್ಷ್ಮವಾಗಿ ಚಿತ್ರಿಸಿತು. ಜಾತಿಯೊಳಗಿನ ಆಂತರಿಕ ಮನಸ್ಸುಗಳನ್ನು ಹೊರಹಾಕುವ ಮೂಲಕ ನವ್ಯ ಸಾಹಿತ್ಯ ವೈಶಿಷ್ಟ್ಯವನ್ನು ಪಡೆದುಕೊಂಡಿತು. ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಕಂಡುಬರುವ ಜಾತಿಯವಿಚಾರಗಳು ಸಂಘರ್ಷದಿಂದ ಕೂಡಿವೆ. ಲೇಖಕರು ತಮ್ಮ ಕಥಾ ಸಾಹಿತ್ಯದಲ್ಲಿ ಸೃಷ್ಟಿಸಿರುವ ಜಾತಿಯ ಜಗತ್ತನ್ನು ಎರಡು ರೀತಿಯಾಗಿ ಗುರುತಿಸಬಹುದು.

೧. ಬ್ರಾಹ್ಮಣ ಲೋಕ
೨. ಶೂದ್ರ ಲೋಕ

ಅನಂತಮೂರ್ತಿಯವರು ಸ್ವತಃ ಬ್ರಾಹ್ಮಣ ಸಮುದಾಯದಿಂದ ಬಂದವರಾಗಿದ್ದು, ತಮ್ಮ ಸಮುದಾಯದ ಕೌಟುಂಬಿಕ ಆಂತರಿಕ ನೆಲೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಕಥಾಸಾಹಿತ್ಯದಲ್ಲಿ ಅವುಗಳನ್ನು ಅನಾವರಣಗೊಳಿಸಿದ್ದಾರೆ. ಇಲ್ಲಿ ಬ್ರಾಹ್ಮಣ ಮತ್ತು ಶೂದ್ರ ಲೋಕದ ಸಂಬಂಧ ಬೆಳೆಯುವುದು ಮುಖ್ಯವಾಗಿ ಲೈಂಗಿಕ ಮುಖಾಮುಖಿಗಳ ಮೂಲಕವಾಗಿದೆ. ಮೇಲ್ವರ್ಗ,ಜಾತಿ ಸಮುದಾಯದ ಹೆಂಗಸರ ಲೈಂಗಿಕ ಸಂಗತಿಗಳನ್ನು ಅಥವಾ ಅತೃಪ್ತ ಲೈಂಗಿಕ ವ್ಯಕ್ತಿಗಳನ್ನು ಕೆಳವರ್ಗದ ಅಥವಾ ಕೆಳಜಾತಿಯ ವ್ಯಕ್ತಿಗಳು ಸಂಬಂಧ ಹೊಂದಿರುತ್ತವೆ. ಅಲ್ಲದೆ ಬ್ರಾಹ್ಮಣ ಕುಟುಂಬದೊಳಗಿನ ಪುರುಷ ಅತ್ಯಂತ ಆಚಾರನಿಷ್ಠನಾಗಿದ್ದರೂ ಲೈಂಗಿಕವಾಗಿ ಕೆಳವರ್ಗದ ಹೆಂಗಸರೊಂದಿಗೆ ಸಂಬಂಧ ಇರಿಸಿಕೊಳ್ಳುವ ಬಗೆಯನ್ನು ಚಿತ್ರಿಸಿದ್ದಾರೆ.

'ಬ್ರಾಹ್ಮಣ' ಮತ್ತು 'ಶೂದ್ರ' ಪದಗಳನ್ನು ಸಾಹಿತ್ಯದಲ್ಲಿ ಮೊದಲು ಬಳಸಿದವರು ಅನಂತಮೂರ್ತಿ. 'ಶೂದ್ರಪ್ರಜ್ಞೆ' ಎಂಬ ಪದವನ್ನು "Concrete aspects of life" ಎಂಬ ಅರ್ಥದಲ್ಲೂ 'ಬ್ರಾಹ್ಮಣಪ್ರಜ್ಞೆ' ಎಂಬ ಪದವನ್ನು "Intellectual spiritual aspects of life" ಎಂಬ ಅರ್ಥದಲ್ಲಿ ಬಳಸಿದ್ದಾರೆ. ಬಹುಶ: ಲೋಹಿಯಾ ಪ್ರಭಾವದಿಂದ ಅನಂತಮೂರ್ತಿ ಈ ಪದಗಳನ್ನು ಬಳಸಿರಬಹುದು. ಈ ಅರ್ಥದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಶೂದ್ರ ಬ್ರಾಹ್ಮಣ ಸತ್ವಗಳ ಆಗುತ್ತಾನೆ. ಮನುಷ್ಯರಲ್ಲಿ ಜಡ ಚೇತನಗಳಿರುವಂತೆ ಭೋಗದ ಆಸೆ ಮತ್ತು ಇತರ ಆಕಾಂಕ್ಷೆಗಳು ಇರುತ್ತವೆ."[೧] ಅನಂತಮೂರ್ತಿ ಬ್ರಾಹ್ಮಣನನ್ನು ಬುದ್ಧಿಗೆ ಪರ್ಯಾಯವಾಗಿ ಶೂದ್ರನನ್ನು ವೀರ್ಯವಂತಿಕೆಗೆ ಪರ್ಯಾಯ ಪದವಾಗಿಯೂ ಬಳಸುತ್ತಾರೆ. ಹೀಗೆ ಬಳಸುವಾಗ ಈ ಎರಡು ಪದಗಳು ಸ್ಥಿರ ಪದಗಳು. ಆದ್ದರಿಂದ ಅವು ಪ್ರತಿನಿಧಿಸುವ ವ್ಯವಸ್ಥೆ ಸ್ಥಿರ ಎಂದು ತಿಳಿದು ಸಂಕೇತಗಳಾಗಿ ಬಳಸುತ್ತಾರೆ. ಪರಂಪರಾಗತ ಮೌಲ್ಯಗಳನ್ನು ಒಟ್ಟಿಗೆ ಶೋಧಿಸಬೇಕೆಂಬ ಉದ್ದೇಶ ಅನಂತಮೂರ್ತಿಯವರಿಗಿದೆ. ಬ್ರಾಹ್ಮಣರ ಹಳ್ಳಿಯ ಪರಿಸರವು ಅವರ ಕಥೆಗಳ ಮೂಲಬಿಂದುವಾಗಿದೆ. ಕಥೆಗಾರನ ಜೀವನ ದೃಷ್ಟಿಯನ್ನು ಹೆಚ್ಚು ಹತ್ತಿರವಾಗಿ ಜೀವಿಸಿ ತೋರಿಸುವಂತಿರುವ ಪಾತ್ರಗಳಿಗೆ ಇರುವ ತೊಡಕು, ಸಮಸ್ಯೆಗಳು ಹಳ್ಳಿಯ ಸಾಂಪ್ರದಾಯಿಕ ಆವರಣದಲ್ಲಿರುತ್ತವೆ.

ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಮುಖ್ಯವಾಗಿ ವ್ಯಕ್ತವಾಗುವುದು ಅಗ್ರಹಾರದ ಪರಿಸರ ಅಥವಾ ಅದನ್ನು ಕುರಿತಾದ ಚಿಂತನೆಯಾಗಿದೆ. ಬ್ರಾಹ್ಮಣ್ಯ ಇವರ ಕತೆಗಳ ಚೌಕಟ್ಟಾಗಿದೆ. ಕೆಳವರ್ಗದ ಪಾತ್ರಗಳು ಮೇಲ್ವರ್ಗವನ್ನು ಪೋಷಿಸುವ ಅಂಗಗಳಾಗಿ ಬಂದಿದ್ದು ಮೇಲ್ವರ್ಗದ ನೈತಿಕ ಮೌಲ್ಯಗಳ ಪೋಷಣೆಗೆ ಸಾಧನವಾಗಿವೆ. ಲೇಖಕರ ಕಥೆಗಳಲ್ಲಿ ನಡೆಯುವ ಮೌಲ್ಯ ಶೋಧನೆಯ ಕೇಂದ್ರಬಿಂದು ಬ್ರಾಹ್ಮಣ ಪರಿಸರ. ಈ ಪರಿಸರದ ವಲಯದಲ್ಲಿ ಶ್ರದ್ಧೆ, ನಿಷ್ಠೆ, ನಂಬಿಕೆಗಳು ಸಾರ್ವತ್ರಿಕವಾಗಿ ಅರ್ಥವನ್ನು ಕಳೆದುಕೊಳ್ಳುತ್ತವೆ. ಬ್ರಾಹ್ಮಣ ಸಂಸ್ಕೃತಿಯಲ್ಲಿನ ಪೊಳ್ಳುತನವನ್ನು ಅದು ವಿಘಟನೆ ಹೊಂದುತ್ತಿರುವ ರೀತಿಯನ್ನು ಈ ಮುಂದಿನ ಕತೆಗಳಲ್ಲಿ ವಿಶ್ಲೇಷಿಸಲಾಗಿದೆ.

ಬ್ರಾಹ್ಮಣ-ಶೂದ್ರ ಪಾತ್ರಗಳ ನಡುವಿನ ಜನ್ಮಾಂತರ ಸಂಬಂಧಗಳ ಕಲ್ಪನೆಯನ್ನು 'ಅಕ್ಕಯ್ಯ' ಕತೆಯಲ್ಲಿ ಕಾಣಬಹುದು. ಬ್ರಾಹ್ಮಣ ಕುಟುಂಬದ ಅಕ್ಕಯ್ಯನ ಮನೆಯ ಕೊಟ್ಟಿಗೆ ಕೆಲಸಮಾಡುವ ಪಿಳ್ಳ ಶೂದ್ರ. ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಅಕ್ಕಯ್ಯನಿಗೆ ದನಗಳೆಂದರೆ ಪ್ರೀತಿ. ಅವುಗಳಿಗೆ ತನ್ನದೆ ಆದ ರೀತಿಯಲ್ಲಿ ಅಕ್ಕರೆಯನ್ನು ವ್ಯಕ್ತಪಡಿಸುತ್ತಾಳೆ. ಕೊಟ್ಟಿಗೆಯಲ್ಲಿ ಹಿಂದಿನಿಂದ ಇದ್ದ ಎಲ್ಲ ದನಗಳ ಜಾತಕವನ್ನೇ ಹೇಳುತ್ತಾಳೆ. ಮೂಕ ಪ್ರಾಣಿಗಳ ಹಾಗೂ ಮನುಷ್ಯರ ಜನ್ಮಾಂತರದ ಸಂಬಂಧಗಳನ್ನು ಕಲ್ಪಿಸಿ ತಮ್ಮಂದಿರ ಮೊಮ್ಮಕ್ಕಳಿಗೆ ಹಾಗೂ ಪಿಳ್ಳನಿಗೆ ಕಥೆಯನ್ನು ಅರುಹುತ್ತಾಳೆ. ಪೇಟೆಯಲ್ಲಿ ಶಿಕ್ಷಕನಾಗಿದ್ದ ಮಗನು ಪ್ರತಿ ತಿಂಗಳು ತಪ್ಪದೆ ಹಣ ಕಳಿಸುತ್ತಿದ್ದುದರಿಂದ ಪಿಳ್ಳನಿಗೆ ಖುಷಿಯಿದೆ.

ಪಿಳ್ಳನನ್ನು ಸಾಧು ಎಂದುಕೊಂಡಿದ್ದ ಅಕ್ಕಯ್ಯ ಜನ್ಮಾಂತರದ ಸಂಬಂಧವನ್ನು ಕಲ್ಪಿಸಿಕೊಳ್ಳುತ್ತಾಳೆ. ಹಿಂದಿನ ಜನ್ಮದಲ್ಲಿ ಅಕ್ಕಯ್ಯನ ಮೈದುನನಾಗಿದ್ದ ಪಿಳ್ಳನು ನಂತರದಲ್ಲಿ ಬ್ಯಾರಿಯಾದಾಗ ತಾನು ಕುದುರೆಯಾಗಿ ಹುಟ್ಟಿದ್ದೆ ಎಂದುಕೊಳ್ಳುತ್ತಾಳೆ. ಕರ್ಮವಶಾತ್ ಈ ಜನ್ಮದಲ್ಲಿ ಪಿಳ್ಳನದು ಸಗಣಿ ಬಾಚುವ ಕೆಲಸವಾದರೆ, ಅಕ್ಕಯ್ಯನು ಅವನ ಒಡತಿಯಾಗಿದ್ದಾಳೆ. ಮೋಹವಿಲ್ಲದ ಪಿಳ್ಳನಿಗೆ ಇನ್ನೊಂದು ಜನ್ಮವಿಲ್ಲ ಎಂದು ಅಕ್ಕಯ್ಯ ಹೇಳಿದ್ದನ್ನು ಪಿಳ್ಳ ಸುಮ್ಮನೆ ಕೇಳಿಸಿಕೊಳ್ಳುತ್ತಾನೆ.

ಊಟವಾದ ಮೇಲೆ ರಾತ್ರಿ ಅಕ್ಕಯ್ಯ ಹೊರಗಿನ ಬಚ್ಚಲೊಲೆ ಬೆಂಕಿ ಮುಂದೆ ಕುಳಿತು ಹಲಸಿನ ಬೀಜ ಸುಟ್ಟು ದೂರದಲ್ಲಿ ಕುಳಿತು ಪಿಳ್ಳನಿಗೆ ಕೊಡುತ್ತಾಳೆ. ಹೆಂಡವನ್ನು ಮುಚ್ಚಿಟ್ಟುಕೊಂಡು ಕುಡಿಯುತ್ತ, ಹಲಸಿನ ಬೀಜ ತಿನ್ನುತ್ತಾ ಆಕ್ಕಯ್ಯನ ಕತೆಗಳನ್ನು ಪಿಳ್ಳ ಕೇಳಿಸಿಕೊಳ್ಳುತ್ತಾನೆ. ಬಚ್ಚಲೊಲೆ ಮುಂದೆ ಹಲಸಿನ ಬೀಜ ಸುಟ್ಟು ಪಿಳ್ಳನಿಗೆ ಕೊಡ್ತಾ ಇರುವಾಗಲೇ ಹಾಗೆ ಒರಗಿ ಕಣ್ಣು ಮುಚ್ಚಿದಳು. ಪಿಳ್ಳ ಸ್ವಲ್ಪ ಹೊತ್ತು ಕಾದು ಬ್ರಾಹ್ಮಣಳಾದ ಅಕ್ಕಯ್ಯನನ್ನು ಶೂದ್ರನಾದ ತಾನು ಮುಟ್ಟಬಾರದಾದ್ದರಿಂದ ಅವಳ ತಮ್ಮಂದಿರಿಗೆ ಸಾವಿನ ಸುದ್ದಿಯನ್ನು ತಲುಪಿಸುತ್ತಾನೆ. ಅಕ್ಕಯ್ಯ ಸತ್ತ ಮೂರು ತಿಂಗಳಿಗೆ ಪಿಳ್ಳನೂ ಸಾಯುತ್ತಾನೆ. ಅಕ್ಕಯ್ಯನು ಮಾನವೀಯತೆಯಿಂದ ಸ್ಪಂದಿಸಿದರೂ ಪಿಳ್ಳನು ಮಾತ್ರ ತನ್ನ ಜಾತಿಯ ಕಟ್ಟುಪಾಡಿನ ಮಿತಿಯಲ್ಲಿ ನಡೆದುಕೊಳ್ಳುತ್ತಾನೆ. ಬ್ರಾಹ್ಮಣ ಮತ್ತು ಶೂದ್ರ ಪಾತ್ರಗಳು ಅನುಸಂಧಾನ ರೀತಿಯಲ್ಲಿ ವರ್ತಿಸಿದರೂ ಜಾತಿಯ ಕಟ್ಟುಪಾಡುಗಳನ್ನು ಮೀರಲು ಇಲ್ಲಿ ಅವಕಾಶವಿಲ್ಲ. ಶೂದ್ರನಾದ ಪಿಳ್ಳನ ಮಗನು ಪೇಟೆಯಲ್ಲಿ ಶಿಕ್ಷಕನಾಗಿದ್ದರಿಂದ ಜಾತಿಯ ಗೊಂದಲವಿಲ್ಲದೆ ಬದುಕುತ್ತಾನೆ. ಬದಲಾಗುತ್ತಿರುವ ಸಮಾಜ ವ್ಯವಸ್ಥೆಯ ಕಾಲಘಟ್ಟದಲ್ಲಿ ಸ್ವಾಭಾವಿಕವೆನಿಸುವ ಆ ಜಾತಿಯ ಸ್ವಭಾವದ ಪ್ರಾತಿನಿಧಿಕ ಸ್ವರೂಪ ಎಂಬಂತೆ ಈ ಸಂದರ್ಭವನ್ನು ಪರಿಭಾವಿಸಲಾಗಿದೆ. ಹಳ್ಳಿಯಲ್ಲಿ ಬದುಕುವ ಪಿಳ್ಳ ಮಾತ್ರ ತನ್ನ ಜಾತಿಯ ಕಟ್ಟುಪಾಡಿನಂತೆ ನಡೆಯುತ್ತಾನೆ. ಜಾತಿವ್ಯವಸ್ಥೆಯ ವಿರುದ್ಧ ನಡೆದುಕೊಳ್ಳುವುದು

ಸುಲಭವಲ್ಲ ಜೊತೆಗೆ ಬದಲಾವಣೆಯು ಅನಿವಾರ್ಯ ಎನ್ನುವುದನ್ನು ಇಲ್ಲಿ ಕಾಣಬಹುದು. ವ್ಯಕ್ತಿಯು ಜಾತಿ ವ್ಯವಸ್ಥೆಯ ಕಟ್ಟು ಪಾಡುಗಳಿಗನುಸಾರವಾಗಿ ಸಾಗಿದಾಗ ಯಾವುದೇ ಗೊಂದಲವಿಲ್ಲದೆ ಬದುಕಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಸಂಘರ್ಷವನ್ನು ಅನಿವಾರ್ಯವಾಗಿ ಎದುರಿಸಬೇಕಾಗುತ್ತದೆ.

ವ್ಯಕ್ತಿಮೂಲ ಸ್ವಭಾವದಿಂದ ಜಾತಿಮೂಲವಾದ ಗುಣಗಳನ್ನು ಮೀರುವ ಪಾತ್ರಗಳು 'ಕ್ಲಿಪ್‌ಜಾಯಿಂಟ್' ಕತೆಯಲ್ಲಿವೆ. ವೈದಿಕಧರ್ಮವನ್ನು ಪಾಲಿಸುತ್ತಿದ್ದ ಕೇಶವನ ತಂದೆ ಪೂಜೆ, ಪುನಸ್ಕಾರ, ಮಹಾಭಾರತ ಹಾಗೂ ಭಾಗವತ ಪಠಣ ಮಾಡುತ್ತಿದ್ದನು. ರಾಮನವಮಿಯಲ್ಲಿ ದೇವಸ್ಥಾನದ ಕಟ್ಟೆಯ ಮೇಲೆ ಕುಳಿತು ವಾಲ್ಮೀಕಿ ರಾಮಾಯಣವನ್ನು ಓದಿ ವ್ಯಾಖ್ಯಾನ ಮಾಡುತ್ತಿದ್ದನು. ಊರಿನಲ್ಲಿ ಹುಟ್ಟಿದ ಮಕ್ಕಳಿಗೆ ಕುಂಡಲಿ ಬರೆಯುವುದು, ಉಪಕರ್ಮ ಮಾಡಿಸುವುದು, ಗೌರಿಹಬ್ಬದ ದಿನ ಊರಿನ ಹೆಂಗಸರನ್ನೆಲ್ಲ ಕರೆದು ವ್ರತ ಮಾಡಿಸುವುದು, ದನ ತಪ್ಪಿಸಿಕೊಂಡರೆ ಹಲಗೆ ಮಂತ್ರಿಸಿಕೊಡುವುದು ಹಾಗೂ ಖಾಯಿಲೆಯಾದವರಿಗೆ ಬೇರು ಬಳ್ಳಿ ತಂದು ಔಷಧ ಕೊಡುವುದು ಮುಂತಾದ ಪರೋಪಕಾರಿ ಕೆಲಸಗಳನ್ನು ಮಾಡುತ್ತಿದ್ದನು. ಸ್ನಾನ ಸಂಧ್ಯಾವಂದನೆಗೆ ಅಡಚಣೆಯಾಗಬಾರದೆಂದು ಮನೆಯ ಜವಾಬ್ದಾರಿಯನ್ನು ತಮ್ಮನಿಗೆ ಒಪ್ಪಿಸಿದ್ದನು. ಹೆಂಡತಿಗೆ ಸೀರೆ ಬೇಕಾದರೂ ತಮ್ಮನೇ ತರಬೇಕೆಂದು ಹೇಳುತ್ತಿದ್ದನು.

ಜವಾಬ್ದಾರಿಯನ್ನು ದುರುಪಯೋಗ ಪಡಿಸಿಕೊಂಡ ಚಿಕ್ಕಪ್ಪನು ದುಂದುವೆಚ್ಚವನ್ನು ಮಾಡಿದ್ದರಿಂದ ಕೇಶವನ ಕುಟುಂಬಕ್ಕೆ ಸಾಲದ ಹೊರೆಯು ಹೆಚ್ಚಾಗುತ್ತದೆ. ಸಮಾಧಾನಿಯಾಗಿದ್ದ ಕೇಶವನ ತಂದೆಯು ಮನೆಯ ಆರ್ಥಿಕ ಸ್ಥಿತಿಯ ಏರುಪೇರಿನಿಂದಾಗಿ ಕೋಪಿಷ್ಟನಾಗುತ್ತಾನೆ. ವೈದಿಕ ವೃತ್ತಿಯಲ್ಲಿ ತತ್ಪರವಾದ ಅವನ ಮನಸ್ಸು ಹಣದ ಕಡೆ ತಿರುಗಿದಾಗ ಹಳೆಯ ಲೆಕ್ಕಾಚಾರವನ್ನೆಲ್ಲ ಗಮನಿಸತೊಡಗಿದನು. ತಮ್ಮನನ್ನು ಕರೆದು ಅವನ ಅನ್ಯಾಯವನ್ನು ಜರಿಯುತ್ತಾನೆ. ಜನರಿಂದ ತನಗೆ ಬರಬೇಕಾದ ಹಣವನ್ನು ತಗಾದೆ ಮಾಡಿ ವಸೂಲು ಮಾಡಿದನು. ಪೂಜೆ ಮಾಡುವ ಸಮಯದಲ್ಲೂ ವ್ಯವಹಾರವನ್ನು ಕುರಿತು ವಿಚಾರಿಸುತ್ತಿದ್ದ ಕೇಶವನ ತಂದೆಯು ಅಡಿಕೆ ಸುಲಿಯುವವರು ಹಿಂತಿರುಗುವಾಗ ಅಡಿಕೆ ತೆಗೆದುಕೊಂಡು ಹೋಗದಂತೆ ನೋಡಿಕೊಳ್ಳಬೇಕೆಂದು ಹೆಂಡತಿಗೆ ಹೇಳುತ್ತಿದ್ದನು. ಕಣ್ಣಿನ ದೃಷ್ಟಿ ಮಂದವಾದಮೇಲೆ ಅವನ ರಗಳೆ ಇನ್ನಷ್ಟು ಹೆಚ್ಚಿತು. ಹೆಂಡತಿ ಮಕ್ಕಳು ತಾನು ಹಾಕಿದ ಗೆರೆಯನ್ನು ದಾಟಬಾರದೆಂದು ಬಯಸತೊಡಗಿದನು.

ವೈದಿಕ ಧರ್ಮವನ್ನು ನಂಬಿದ್ದ ತನ್ನ ತಂದೆಯು ಜೀವನದ ಸಂಧ್ಯಾಕಾಲದಲ್ಲಿ ಬದಲಾಗಿದ್ದು ಕೇಶವನಿಗೆ ವಿಚಿತ್ರವೆನಿಸಿತು. ಬ್ರಾಹ್ಮಣನಾದ ಚಿಕ್ಕಪ್ಪನು ಸಂಪ್ರದಾಯವನ್ನು ಮೀರಿ ವೇಶ್ಯೆಯರೊಂದಿಗೆ ಸಂಬಂಧವನ್ನು ಹೊಂದಿದ್ದನು. ಬ್ರಾಹ್ಮಣ, ಶೂದ್ರರೆನ್ನದೇ ಸಿಕ್ಕ ಸಿಕ್ಕ ಹೆಣ್ಣುಗಳ ಹಿಂದೆಲ್ಲಾ ಸುತ್ತಾಡುತ್ತಿದ್ದನು. ದುಂದುವೆಚ್ಚ ಹಾಗೂ ಅವ್ಯವಹಾರದಿಂದ ಕೈಯಲ್ಲಿನ ಹಣವನ್ನೆಲ್ಲಾ ಖರ್ಚು ಮಾಡುತ್ತಾನೆ. ಚಿಕ್ಕಪ್ಪನು ಡಯಾಬಿಟಿಸ್ ರೋಗಕ್ಕೆ ತುತ್ತಾದ ಮೇಲೆ ಮಾನ ಮರ್ಯಾದೆಯ ಬಗ್ಗೆ ಯೋಚಿಸುತ್ತಾನೆ. ದುರ್ಗಾ ಪೂಜೆ, ಸತ್ಯನಾರಾಯಣ ವ್ರತ ಕೈಗೊಳ್ಳುವುದರ ಜೊತೆಗೆ ತೀರ್ಥಯಾತ್ರೆ ಮಾಡುತ್ತಾ ಕಾಲ ಕಳೆಯುತ್ತಾನೆ.

ಕೇಶವನ ಕಿರಿಯ ಚಿಕ್ಕಪ್ಪ ಸುಬ್ಬಣ್ಣ ಬಾಲ್ಯದಲ್ಲಿಯೇ ಮನೆಬಿಟ್ಟು ಊರಿನಲ್ಲಿದ್ದ ಮಠವನ್ನು ಸೇರಿರುತ್ತಾನೆ. ಜಪ ತಪ ಮಾಡುತ್ತ ನುಡಿದಂತೆ ನಡೆದುಕೊಳ್ಳುತ್ತಾನೆ. ಪೂಜೆ ಆಚರಣೆಗಳಲ್ಲಿ ತಲ್ಲೀನನಾಗಿ ಮುಂದೊಂದು

ದಿನ ಸನ್ಯಾಸಿಯಾಗಲು ಬದರಿಕಾಶ್ರಮಕ್ಕೆ ಹೋಗುತ್ತಾನೆ. ಬ್ರಾಹ್ಮಣನಾದ ತಂದೆ ಹಾಗೂ ಚಿಕ್ಕಪ್ಪಂದಿರ ನಡವಳಿಕೆಗಳು ಕೇಶವನಿಗೆ ದ್ವಂದ್ವದ ಸ್ಥಿತಿಯನ್ನು ನಿರ್ಮಾಣ ಮಾಡಿದ್ದರಿಂದ ಅವನು ಇಂಗ್ಲೆಂಡಿಗೆ ಹೋಗುತ್ತಾನೆ.

ವಿದೇಶದಲ್ಲಿ ಕೇಶವ ತನ್ನ ಕುಲದ ನಿಯಮವನ್ನು ಬಿಟ್ಟು ಸ್ಟುಆರ್ಟ್ ಜೊತೆ ಕ್ಲಬ್‌ಗಳಿಗೆ ಹಾಗೂ ವೇಶ್ಯೆಯರ ಜಾಗಕ್ಕೆ ಹೋಗುತ್ತಾನೆ. ಹೀಗೆ ವೈಯಕ್ತಿಕ ಹಾಗೂ ಕೌಟುಂಬಿಕ ಸಮಸ್ಯೆಗಳು ಕೇಶವನಿಗೆ ಸಂಘರ್ಷವನ್ನು ಉಂಟುಮಾಡುತ್ತವೆ. ವ್ಯಕ್ತಿಯು ಸಮಾಜದ ನಿಯಮಗಳಿಗೆ ಅನಿವಾರ್ಯವಾಗಿ ಸ್ಪಂದಿಸಬೇಕಾಗುತ್ತದೆ. ಜಾತಿಯು ವ್ಯಕ್ತಿಯ ಮೇಲೆ ವಿಶೇಷ ಪ್ರಭಾವವನ್ನು ಬೀರುತ್ತದೆ. ವ್ಯಕ್ತಿಯು ತನ್ನಲ್ಲಿ ರಕ್ತಗತವಾಗಿರುವ ಜಾತಿಮೂಲವಾದ ಗುಣಗಳನ್ನು ಮೀರಿದಾಗ ದ್ವಂದ್ವವನ್ನು ಎದುರಿಸುತ್ತಾನೆ. ಹೀಗೆ ಜಾತಿಯ ಗುಣಗಳನ್ನು ಮೀರಿದ ಕೇಶವ ಮತ್ತು ಅವನ ಚಿಕ್ಕಪ್ಪ ದ್ವಂದ್ವವನ್ನು ಎದುರಿಸುತ್ತಾರೆ.

ಬ್ರಾಹ್ಮಣ ಮತ್ತು ಶೂದ್ರ ಪರಿಸರದ ವ್ಯಕ್ತಿಗಳಲ್ಲಿನ ವಿಭಿನ್ನ ಮನೋಭಾವವು ಉಂಟು ಮಾಡುವ ಸಂಘರ್ಷವನ್ನು 'ಪ್ರಶ್ನೆ' ಕತೆಯಲ್ಲಿ ಕಾಣುತ್ತೇವೆ. ಶಾರದೆ ಶಂಕರಯ್ಯ ಬ್ರಾಹ್ಮಣ ವರ್ಗದ ಪ್ರತಿನಿಧಿಗಳಾದರೆ, ಕೊರಗ, ಲಚ್ಚಿ ಶೂದ್ರ ವರ್ಗದ ಪ್ರತಿನಿಧಿಗಳು. ಶಾರದೆಯ ಅನಿಶ್ಚಿತ ಜೀವನಕ್ಕೆ ವಿರುದ್ಧವಾಗಿ ಲಚ್ಚಿಯ ವ್ಯಕ್ತಿತ್ವದ ಮುಚ್ಚು ಮರೆಯಿಲ್ಲದ ವ್ಯವಹಾರ ಬಿಚ್ಚಿಕೊಳ್ಳುತ್ತದೆ. ಶಾರದೆ ಅಮೃತ ಶಿಲೆಯ ಸುಂದರವಾದ ಗೋರಿಯಾದರೆ ಲಚ್ಚಿ ದೇವರ ಹೆಣ್ಣು. ಊರ್ವಶಿಯಂತೆ ನೀತಿ ಅನೀತಿಗೆ ಅತೀತಳು. ನಿರ್ದೋಷಿ ಶಾರದೆ ಬಟ್ಟೆ ಬಿಚ್ಚಿದರೂ ಬೆತ್ತಲೆಯಾಗುವುದಿಲ್ಲ. ಬಲಿಗೆ ಹೋಗುವ ಪ್ರಾಣಿಯಂತೆ ಕಾಣುತ್ತಾಳೆ. ಲಚ್ಚಿ ಬಟ್ಟೆ ತೊಟ್ಟರೂ ಬೆತ್ತಲೆ. ದೇವರು ಒಬ್ಬಳನ್ನು ಹಗಲಿನ ಆತ್ಮದ ಸಹವಾಸಕ್ಕೆಂದು ಸೃಷ್ಟಿಸಿದ. ಇನ್ನೊಬ್ಬಳನ್ನು ಕತ್ತಲಿನ ಸುಖಕ್ಕೆಂದು ಸೃಷ್ಟಿಸಿದ ಎಂಬ ಕಲ್ಪನೆ ರಂಗನದು. ಅದಿದ್ದರೆ ಇದಿಲ್ಲ ಇದಿದ್ದರೆ ಅದಿಲ್ಲ ಎಂದುಕೊಳ್ಳುವ ರಂಗನ ವಿಚಾರಗಳಿಂದ ಶಾರದೆ ಮತ್ತು ಲಚ್ಚಿಯ ನಡುವಿನ ಭಿನ್ನತೆಗಳನ್ನು ಗುರುತಿಸಬಹುದು.

ಶೂದ್ರಳಾದ ಲಚ್ಚಿಯ ತಾಯಿಯ ಸಂಗವನ್ನು ಹೊಂದಿರುವ ಬ್ರಾಹ್ಮಣ ಶಂಕರಯ್ಯ ಲಚ್ಚಿಯನ್ನು ಮಗಳೆಂದು ನೇರವಾಗಿ ಒಪ್ಪುವುದಿಲ್ಲ. ತನ್ನ ಮನೆ ಹಳ್ಳಿಯ ಬಗ್ಗೆ ಅಭಿಮಾನವಿರುವ ಮುದುಕ ಹಳೆಯ ಕಂದಾಚಾರಗಳನ್ನು ಬಿಡುವುದಿಲ್ಲ. ಶೂದ್ರಳೊಂದಿಗೆ ದೇಹ ಸಂಬಂಧ ಹೊಂದಿದ್ದ ಶಂಕರಯ್ಯ ಬ್ರಾಹ್ಮಣರ ಕಟ್ಟು ಪಾಡುಗಳನ್ನು ಮುರಿದನೆಂದೆಣಿಸುವುದಿಲ್ಲ. ಬ್ರಾಹ್ಮಣ್ಯ ಮರೆತು ಶೂದ್ರ ಸ್ತ್ರೀ ಸಂಗ ಹೊಂದಿದ್ದ ಶಂಕರಯ್ಯನಿಗೆ ಶೂದ್ರನಾದ ಕೊರಗನಂತೆ ಸಮಾಧಾನಿಯಾಗಿ ಬಂದದ್ದನ್ನು ಸ್ವೀಕರಿಸುವ ಮನಸ್ಥಿತಿ ಏಕಿಲ್ಲ ಎನ್ನುವ ಅನುಮಾನವು ರಂಗನನ್ನು ಕಾಡುತ್ತದೆ.

ಹಳೆಯ ವಿಚಾರಗಳನ್ನು ಬೆಂಬಲಿಸುವ ಮತ್ತು ಹೊಸ ವಿಚಾರಗಳನ್ನು ನಿರಾಕರಿಸುವ ಮನೋಭಾವದ ಶಂಕರಯ್ಯ ತನ್ನಲ್ಲೇ ಗುಪ್ತವಾಗಿರುವ ವಿರುದ್ಧ ನೀತಿಗೆ ಶರಣಾಗಿದ್ದಾನೆ. ಹೊಸ ವಿಚಾರಗಳನ್ನು ಬೆಂಬಲಿಸುವ ರಂಗನಾಥನು ಹಳೆಯ ವಿಚಾರಗಳನ್ನು ನಿರಾಕರಿಸುತ್ತಾನೆ. ಶಾರದೆಯು ತನಗಿಂತ ಭಿನ್ನವಾಗಿ ಯೋಚಿಸುತ್ತಾಳೆಂದು ರಂಗನು ಚಿಂತಿಸುತ್ತಾನೆ. ಶಂಕರಯ್ಯ ಹಾಗೂ ರಂಗನಾಥನ ವಿಚಾರಗಳಲ್ಲಿ ಯಾವುದೇ ಕಾರಣಕ್ಕೂ ಹೊಂದಾಣಿಕೆಯಾಗುವುದಿಲ್ಲ. ಆದರೆ ಶಾರದೆ ಹಾಗೂ ಲಚ್ಚಿ ತಮ್ಮ ತಮ್ಮ ವರ್ಗದ ಗುಣಗಳನ್ನು ಬಿಂಬಿಸುತ್ತಾರೆ. ಕಟ್ಟು ಪಾಡುಗಳನ್ನು ಮೀರಿದ್ದರಿಂದಲೇ ತನ್ನಕ್ಕನ ಸಾವು ಸಂಭವಿಸಿತೆಂದು ನಂಬಿಕೊಂಡಿರುವ ಶಾರದೆಗೆ ರಂಗನ ಹೊಸ ವಿಚಾರಗಳಿಂದ ಗೊಂದಲವೇರ್ಪಡುತ್ತದೆ. ಕೊನೆಗೆ ಹಳೆಯ ವಿಚಾರಗಳ ಕಡೆಗೆ ವಾಲುವ ಅವಳು

ತನ್ನ ಜಾತಿ ಮೂಲವಾದ ಗುಣಗಳನ್ನು ತೊರೆಯುವುದಿಲ್ಲ. ಹೀಗೆ ಬ್ರಾಹ್ಮಣ ಮತ್ತು ಶೂದ್ರ ಜಾತಿ ಮೂಲವಾದ ಗುಣಗಳು ಶಾರದೆ, ಲಚ್ಚಿ, ಶಂಕರಯ್ಯ ಹಾಗೂ ಕೊರಗನ ಪಾತ್ರಗಳ ಮೂಲಕ ವ್ಯಕ್ತವಾಗಿವೆ. ಬ್ರಾಹ್ಮಣ ಮತ್ತು ಶೂದ್ರ ಇವೆರಡು ಗುಣಗಳನ್ನು ಪ್ರತಿನಿಧಿಸುವ ಕೇಶವನು ಸಂಘರ್ಷಕ್ಕೊಳಗಾಗುತ್ತಾನೆ.

ವ್ಯಕ್ತಿಯೊಬ್ಬನು ತನ್ನ ಜಾತಿಯ ಗುಣಗಳನ್ನು ಮೀರಿದಾಗ ಎದುರಿಸುವ ತಾಕಲಾಟವನ್ನು 'ಆಕಾಶ ಮತ್ತು ಬೆಕ್ಕು' ಕತೆಯಲ್ಲಿ ಕಾಣಬಹುದು. ಆಚಾರ್ಯನ ಅಪ್ಪ ರಾಮದೇವರ ದೇವಸ್ಥಾನದ ಪೂಜಾರಿಯಾಗಿದ್ದನು. ಮನೆಯಲ್ಲೇ ಮಗನಿಗೆ ಮಂತ್ರ, ತಂತ್ರಗಳ ವಿದ್ಯಾಭ್ಯಾಸ ಮಾಡಿಸುತ್ತಿದ್ದನು. ಸೋದರ ಮಾವನೊಂದಿಗೆ ಮದುವೆಯಾಗಿದ್ದ ಅಲಕಾವತಿಯು ಸಂಸಾರದಿಂದ ಬೇಸತ್ತು ತವರಿಗೆ ಹಿಂತಿರುಗಿದ್ದಳು. ಸಂಪ್ರದಾಯದಂತೆ ಆಚಾರ್ಯನು ದೇವರ ಪೂಜೆ ಮುಗಿದ ಮೇಲೆ ನೈವೇದ್ಯಕ್ಕೆ ಅಲಕಾವತಿಯ ಮನೆಗೆ ಹೋಗುತ್ತಿದ್ದನು.

ಇಂಗ್ಲಿಷ್ ಎಂದರೆ ಬ್ರಾಹ್ಮಣರು ಮೈಲಿಗೆ ಎಂದುಕೊಳ್ಳುತ್ತಿದ್ದರು. ಆಚಾರ್ಯನು ತಂದೆಗೆ ತಿಳಿಯದಂತೆ ಇಂಗ್ಲಿಷ್ ಕಲಿತಿರುತ್ತಾನೆ. ಸಮಯ ಸಿಕ್ಕಾಗಲೆಲ್ಲಾ ಇಂಗ್ಲಿಷ್ ಪುಸ್ತಕಗಳ ವಿಚಾರವನ್ನು ಅಲಕಾವತಿಗೆ ತಿಳಿಸಿ ಅವಳೊಂದಿಗೆ ಸಂಬಂಧವನ್ನು ಬೆಳೆಸುತ್ತಾನೆ. ದೇವಸ್ಥಾನದ ಪೂಜಾರಿಯಾಗಿದ್ದ ಆಚಾರ್ಯನು ಸಂಪ್ರದಾಯವನ್ನು ಮೀರಿ ಪರಪುರುಷನ ಹೆಂಡತಿಯಾಗಿದ್ದ ಅಲಕಾವತಿಯೊಂದಿಗೆ ಅನೈತಿಕ ಸಂಬಂಧವನ್ನು ಹೊಂದುತ್ತಾನೆ. ಮರ್ಯಾದೆಗೆ ಅಂಜಿದ ಅಲಕಾವತಿಯು ಆಚಾರ್ಯನಿಗೆ ದೂರದ ಊರಿನಲ್ಲಿ ಕೆಲಸ ಹುಡುಕಿಕೊಂಡು ಬರಲು ಪ್ರೇರಿಸುತ್ತಾಳೆ.

ಉದ್ಯೋಗ ಪಡೆಯಲು ದೆಹಲಿಗೆ ಹೋಗಿ ಎರಡು ವರ್ಷ ತರಬೇತಿ ಪಡೆಯುತ್ತಾನೆ. ಕೊನೆಗೆ ಪರೀಕ್ಷೆಯಲ್ಲಿ ಅನುತ್ತೀರ್ಣನಾದ್ದರಿಂದ ಕೆಲಸ ಕಳೆದುಕೊಂಡು ಊರಿಗೆ ಹಿಂತಿರುಗುತ್ತಾನೆ. ಈಗಾಗಲೇ ಅಲಕಾವತಿಯು ಗಂಡನನ್ನು ಕರೆಸಿಕೊಂಡಿದ್ದರಿಂದ ಅವಳು ಆಚಾರ್ಯನನ್ನು ಕಣ್ಣೆತ್ತಿಯು ನೋಡುವುದಿಲ್ಲ. ದೇವರ ಮನೆಯ ಪೂಜೆಯನ್ನು ಗಂಡನೇ ನೋಡಿಕೊಳ್ಳುತ್ತಿದ್ದರಿಂದ ಆಚಾರ್ಯನಿಗೆ ಅಲಕಾವತಿಯನ್ನು ಸಂಧಿಸಲು ಕಷ್ಟವಾಯಿತು. ಒಮ್ಮೆ ಆಚಾರ್ಯನು ಊರು ಬಿಡುವೆನೆಂದು ಅಲಕಾವತಿಗೆ ಹೇಳಿದಾಗ ನಾನು ನಿಮಗೆ ಬೇಕಿಲ್ಲವೇ ಎನ್ನುತ್ತಾಳೆ.

ಊರಿನಲ್ಲಿ ಆಚಾರ್ಯನು ಪೋಸ್ಟ್ ಆಫೀಸಿನಲ್ಲಿ ಪೋಸ್ಟ್ ಮಾಸ್ಟರ್ ಆಗುತ್ತಾನೆ. ಉಪಾಯಗಾರಳಾದ ಅಲಕಾವತಿಯು ತನ್ನ ಗಂಡನಿಗೆ ವ್ಯವಹಾರ ಜ್ಞಾನ ಸಾಲದೆಂದು ಹೇಳಿ ಎಸ್ಟೇಟಿನ ರೈಟರ್ ಆಗಿ ಆಚಾರ್ಯನನ್ನು ನೇಮಿಸುತ್ತಾಳೆ. ಎಸ್ಟೇಟಿನ ಕಾಡಿನಲ್ಲಿ ಆಫೀಸನ್ನು ಕಟ್ಟಿಸುತ್ತಾಳೆ. ಊರಿನ ಶ್ರೀಮಂತಳಾದ್ದರಿಂದ ಅವಳ ಅನೈತಿಕ ಸಂಬಂಧದ ಬಗ್ಗೆ ಜನ ಆಡಿ ಕೊಳ್ಳಲು ಹೆದರಿದರು. ಎಸ್ಟೇಟಿಗೆ ಸಂಬಂಧಪಟ್ಟ ವ್ಯಾಜ್ಯಗಳನ್ನು ನಿರ್ವಹಿಸುತ್ತಿದ್ದ ಆಚಾರ್ಯನಿಗೆ ಕಾನೂನು ವ್ಯವಹಾರವು ಪರಿಚಯವಾಗುತ್ತದೆ.

ಕ್ರಮೇಣ ಆಚಾರ್ಯನಿಗೆ ತನ್ನ ಸ್ವಮರ್ಯಾದೆ ನಷ್ಟವಾಗುತ್ತಿದೆ ಎನಿಸುತ್ತದೆ. ಅನೈತಿಕ ಸಂಬಂಧವನ್ನು ಹೊಂದಿದ್ದ ಆಚಾರ್ಯನಿಗೆ ಮನೆಯ ವ್ಯವಹಾರಗಳನ್ನು ನಿಭಾಯಿಸಲು ಅಲಕಾವತಿಯು ಒಡವೆ, ವಸ್ತ್ರ ಹಾಗೂ ಹಣವನ್ನು ನೀಡಿದಳು. ಕೊನೆಗೆ ಹೆರಿಗೆ ನೋವಿನಿಂದ ಅಲಕಾವತಿಯು ಸಾವನ್ನಪ್ಪುತ್ತಾಳೆ. ಅಲಕಾವತಿಯನ್ನು ಕಳೆದುಕೊಂಡ ಮೇಲೆ ದುಃಖವನ್ನು ಮರೆಯಲು ಆಚಾರ್ಯನು ಶಿವಮೊಗ್ಗಕ್ಕೆ ಬರುತ್ತಾನೆ. ಕೋರ್ಟು ವ್ಯಾಜ್ಯದ

[illegible]

[illegible]

[illegible]

[illegible]

[illegible]

[illegible]

ವಿಚಾರದ ಕಡೆಗೆ ಗಮನವನ್ನು ಹರಿಸುತ್ತಾನೆ. ಗಂಡನನ್ನು ಬಿಟ್ಟು ಬಂದ ಗಂಗೂಬಾಯಿಗೆ ವಿವಾಹ ವಿಚ್ಛೇದನ ಮಾಡಿಕೊಳ್ಳುವಂತೆ ಪ್ರೇರಿಸುತ್ತಾನೆ. ಅನಂತರ ಅವಳೊಂದಿಗೆ ಅನೈತಿಕ ಸಂಬಂಧವನ್ನು ಹೊಂದುತ್ತಾನೆ.

ಊರಿನ ಶ್ರೀಮಂತನಾಗಿದ್ದ ವಿಷ್ಣುಮೂರ್ತಿಯ ವ್ಯವಹಾರವನ್ನು ಆಚಾರ್ಯನು ನೋಡಿಕೊಳ್ಳಲಾರಂಭಿಸುತ್ತಾನೆ. ವಿಷ್ಣುಮೂರ್ತಿಯ ಹೆಂಡತಿಯ ತಂಗಿಯು ವಿಧವೆಯಾಗಿದ್ದಳು. ಅಕ್ಕನ ಮನೆಗೆ ಬಂದ ಅವಳು ವೆಂಕಪ್ಪ ನಾಯಕನಿಂದ ಗರ್ಭವತಿಯಾದಾಗ ಬಸಿರನ್ನು ತೆಗೆಸುತ್ತಾರೆ. ಕೆಲವು ದಿನಗಳ ನಂತರ ಸಂಬಂಧಿಕರಿಂದ ವೆಂಕಪ್ಪನಾಯಕನ ಕೊಲೆಯಾಗುತ್ತದೆ. ಆಗ ಪೋಲಿಸರು ವಿಷ್ಣುಮೂರ್ತಿಯನ್ನು ಅನುಮಾನದ ಮೇಲೆ ಬಂಧಿಸುತ್ತಾರೆ. ಕಾನೂನು ಬಲ್ಲ ಆಚಾರ್ಯನು ಸಾಕ್ಷಿಗಳನ್ನು ಒದಗಿಸಿ ವಿಷ್ಣುಮೂರ್ತಿಯನ್ನು ನಿರಪರಾಧಿಯೆಂದು ಬಿಡುಗಡೆ ಮಾಡಿಸುತ್ತಾನೆ.

ಜಯತೀರ್ಥ ಆಚಾರ್ಯನು ತನ್ನ ಮಗ ಬೇರೆ ಜಾತಿಯವಳನ್ನು ಮದುವೆ ಮಾಡಿಕೊಂಡಿದ್ದಕ್ಕೆ, ಬೇಸರಪಟ್ಟುಕೊಳ್ಳುತ್ತಾನೆ. ದೇವಋಣ, ಪಿತೃಋಣದ ಬಗೆಗೆ ಹೇಳುತ್ತಾನೆ. ನನ್ನ ಶ್ರಾದ್ಧಮಾಡಲು ಇಷ್ಟವಿಲ್ಲವೆಂದು ಬೇರೆ ಜಾತಿಯವಳನ್ನು ಮದುವೆಯಾದೆ ಎಂದು ಮಗನಿಗೆ ಪತ್ರ ಬರೆಯುತ್ತಾನೆ. ಮಗ ಮನೆಗೆ ಕಳುಹಿಸುತ್ತಿದ್ದ ಹಣವನ್ನು ಮುಟ್ಟದ ಆಚಾರ್ಯನು ಮೊಮ್ಮಗ ಹುಟ್ಟಿದ ಮೇಲೆ ಎಲ್ಲವನ್ನು ಮರೆತು ಒಂದಾಗುತ್ತಾನೆ. ಪ್ರಸ್ತುತ ಆರ್ಥಿಕ ಸಾಮಾಜಿಕ ಸವಾಲುಗಳ ಹಿನ್ನಲೆಯಲ್ಲಿ ಸ್ವತಃ ಆಚಾರ್ಯನು ಅಂತರ್ಜಾತಿಯ ವಿವಾಹವನ್ನು ಅಂಗೀಕರಿಸಲೇಬೇಕಾದ ಅನಿವಾರ್ಯ ಸ್ಥಿತಿಯಿದ್ದು ಅದನ್ನು ಸೂಕ್ಷ್ಮವಾಗಿ ಸಂವೇದಿಸಿಕೊಳ್ಳುತ್ತಾನೆ.

ಆಚಾರ್ಯನು ತೀರಿಕೊಂಡಾಗ ಹಿರಿಯ ಮಗಳು ತಮ್ಮನಾದ ಕೃಷ್ಣಮೂರ್ತಿಗೆ ಶ್ರಾದ್ಧ ಕರ್ಮಗಳನ್ನು ನಿರ್ವಹಿಸಲು ಹೇಳುತ್ತಾಳೆ. ಯಾರೂ ಕಾಣದ ಜಾಗಕ್ಕೆ ತಮ್ಮನನ್ನು ಕರೆದುಕೊಂಡು ಹೋಗಿ ಮಸಿಯಿಂದ ತಿಕ್ಕಿದ ಜನಿವಾರವನ್ನು ಹಾಕಿಕೊಳ್ಳಲು ಹೇಳುತ್ತಾಳೆ. ಬ್ರಾಹ್ಮಣ ಸಂಪ್ರದಾಯದಂತೆ ಅಪ್ಪನ ದಿನಕರ್ಮವನ್ನು ಮಾಡಬೇಕೆನ್ನುತ್ತಾಳೆ. ತಂದೆಯು ಜೀವಂತವಾಗಿದ್ದಾಗ ಗಂಗೂಬಾಯಿಯ ಜೊತೆ ಮಡಿಮೈಲಿಗೆ ಎನ್ನದೆ ಸಂಬಂಧ ಹೊಂದಿದ್ದರಿಂದ ಅಸಮಧಾನಗೊಂಡಿದ್ದ ಮಗನು ಅಪ್ಪನ ಶ್ರಾದ್ಧವನ್ನು ನಿರ್ವಹಿಸುವ ಬಗ್ಗೆ ಉಪೇಕ್ಷಿಸುತ್ತಾನೆ. ಕೊನೆಗೆ ಅಕ್ಕನ ಒತ್ತಾಯದ ಮೇರೆಗೆ ಸಂಪ್ರದಾಯವನ್ನು ಮುರಿಯದೆ ಮಸಿ ತಿಕ್ಕಿದ ಹೊಸ ಜನಿವಾರವನ್ನು ಹಳೆಯದರಂತೆ ಹಾಕಿಕೊಳ್ಳುತ್ತಾನೆ. ಅಂತರ್ಜಾತಿ ವಿವಾಹವಾದ ಕೃಷ್ಣಮೂರ್ತಿಯು ವಿಧಿನಿಯಮದಂತೆ ತಂದೆಯ ಶ್ರಾದ್ಧ, ಶಾಸ್ತ್ರವನ್ನು ಮುಗಿಸಿ ದ್ವಂದ್ವ ನೀತಿಯನ್ನು ತಾಳುತ್ತಾನೆ.

ಗಂಡ ಗಂಗೂಬಾಯಿಯೊಡನೆ ಇಟ್ಟುಕೊಂಡಿದ್ದ ಅನೈತಿಕ ಸಂಬಂಧದಿಂದ ರುಕ್ಮಿಣಿಯಮ್ಮ ಬೇಸರಪಟ್ಟಿದ್ದಳು. ಅಂತರ್ಜಾತಿಯವಳನ್ನು ಮದುವೆಯಾದ ಮಗನ ಕೊರಳಲ್ಲಿ ಜನಿವಾರವಿಲ್ಲದ್ದನ್ನು ಕಂಡು ತನ್ನ ಗಂಡ ಅರ್ಧ ಸತ್ತಿದ್ದಾನೆ ಎಂದುಕೊಳ್ಳುತ್ತಾಳೆ. ಕೃಷ್ಣಮೂರ್ತಿಯ ಹೆಂಡತಿಗೆ ಮಡಿ, ಮೈಲಿಗೆ ಗೊತ್ತಿರುವುದಿಲ್ಲ. ತಾಯಿಯು ಸೊಸೆಗೆ ಹೇಳಿಕೊಡುವುದನ್ನು ಮಗ ಸಮ್ಮತಿಸುವುದಿಲ್ಲ. ಕುಲದ ನಿಯಮಗಳನ್ನು ಮೀರಿದ ಗಂಡ ಮತ್ತು ಮಗನ ಬಗ್ಗೆ ರುಕ್ಮಿಣಿಯಮ್ಮನಿಗೆ ಬೇಸರವಿದೆ. ಬ್ರಾಹ್ಮಣನಾದ ಆಚಾರ್ಯನು ತನ್ನ ಜಾತಿಯ ಗುಣಗಳನ್ನು ಮೀರಿ ಹೆಂಡತಿಯಿದ್ದು ಬೇರೆ ಹೆಣ್ಣುಗಳ ಸಹವಾಸವನ್ನು ಮಾಡಿರುತ್ತಾನೆ. ನಂತರದಲ್ಲಿ ತನ್ನ ತಪ್ಪಿನ ಅರಿವಾಗಿ ಹೆಂಡತಿಯೊಡನೆ ಬಾಳುವೆ ನಡೆಸುತ್ತಾನೆ. ಇದಲ್ಲದೆ ತನ್ನ ಮಗನು ಬೇರೆ ಜಾತಿಯವಳನ್ನು ಮದುವೆಯಾದಾಗ ಅದನ್ನು ಆಚಾರ್ಯನು ವಿರೋಧಿಸುತ್ತಾನೆ. ಜಾತಿ ಮೂಲವಾದ ಗುಣಗಳು ದೂರವಾಗಿಲ್ಲ ಎಂಬುದನ್ನು ಅವನ ವರ್ತನೆಯಿಂದ ತಿಳಿಯಬಹುದಾಗಿದೆ. ಜಾತಿಯು ವ್ಯಕ್ತಿಯ ಮೇಲೆ ವಿಶೇಷ ಪ್ರಭಾವವನ್ನು

ಬೀರುತ್ತದೆ. ಜಾತಿಯ ವಿಚಾರಗಳಲ್ಲಿ ವ್ಯಕ್ತಿ ತಕ್ಷಣ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ವ್ಯಕ್ತಿಯಲ್ಲಿ ಅರಿವಿಲ್ಲದಂತೆಯೇ ಆ ಗುಣಗಳು ರಕ್ತಗತವಾಗಿರುತ್ತವೆ. ಈ ಗುಣಗಳ ಪ್ರಭಾವ ಪರೋಕ್ಷವಾಗಿ ವ್ಯಕ್ತಿಯ ನಡವಳಿಕೆಯನ್ನು ನಿಯಂತ್ರಿಸುತ್ತದೆ. ಹೀಗೆ ಜಾತಿಮೂಲವಾದ ಗುಣಗಳು ಮತ್ತು ವ್ಯಕ್ತಿಯ ಸ್ವಭಾವದ ನಡುವಿನ ಸಂಘರ್ಷವನ್ನು ಇಲ್ಲಿ ಕಾಣಬಹುದು.

ಅಗ್ರಹಾರದ ಬ್ರಾಹ್ಮಣರ ಕತೆ 'ಘಟಶ್ರಾದ್ಧ'. ಅಲ್ಲಿನ ಬ್ರಾಹ್ಮಣರ ವಿಧಿ ನಿಷೇಧ ಹಾಗೂ ಕಟ್ಟುಪಾಡುಗಳು ಜಿಡ್ಡುಗಟ್ಟಿವೆ. ಬ್ರಾಹ್ಮಣ ಕುಟುಂಬದವಳಾಗಿದ್ದ ಯಮುನಕ್ಕ ವಿಧವೆಯಾದ ನಂತರ ಅನೈತಿಕ ಸಂಬಂಧವನ್ನು ಹೊಂದಿರುತ್ತಾಳೆ. ಯಮುನಕ್ಕನ ಬದುಕಿನ ಮೇಲೆ ಸಮಾಜವು ಸಂಪ್ರದಾಯದ ವಿಧಿ ನಿಷೇಧಗಳನ್ನು ಹೇರಿದೆ. ಇಡೀ ಅಗ್ರಹಾರ ಸಾಮಾಜಿಕ ಕಟ್ಟುಪಾಡುಗಳನ್ನು ನಂಬಿಕೊಂಡಿದೆ. ಬ್ರಾಹ್ಮಣರ ಸಮಾಜದಲ್ಲಿನ ಮೌಲ್ಯಗಳನ್ನು ತೋರಿಕೆಗಾಗಿ ಒಪ್ಪುವ ಕೆಲವು ಬ್ರಾಹ್ಮಣರು ಒಳಗಿನಿಂದ ಅದನ್ನು ಮೀರುತ್ತಿರುವ ಬದುಕನ್ನು ಇಲ್ಲಿ ಕಾಣಬಹುದಾಗಿದೆ.

ಉಪನಯನಕ್ಕೆ ಮುಂಚೆ ಒಂದು ಬಿಲ್ಲೆ ದಕ್ಷಿಣೆ ಸಿಗುತ್ತಿದ್ದ ನಾಣಿಗೆ ಮುಂಜಿಯಾದ ಮೇಲೆ ಒಂದಾಣೆ ಸಿಗುತ್ತಿರುವುದಕ್ಕೆ ಸಂತೋಷ ಪಡುತ್ತಾನೆ. ಆದರೆ ಮುಂಜಿಯಾದ ಮೇಲೆ ಮರಕೋತಿಯಾಡುವಂತಿಲ್ಲ, ನಾಯಿಗಳಿಗೆ ಕಲ್ಲು ಹೊಡೆಯುವಂತಿಲ್ಲ, ಸದಾ ವಿಧಿ ವಿಧಾನಗಳನ್ನು ಅನುಸರಿಸಬೇಕಲ್ಲ ಎಂದು ಬೇಸರ ಪಡುತ್ತಾನೆ. ನಾಣಿ ಹಂತ ಹಂತವಾಗಿ ಬೆಳೆಯುತ್ತಾನೆ. ಸುಳ್ಳು ಹೇಳುವುದರ ಮೂಲಕ ಪಿತೂರಿಯಲ್ಲಿ ಪಾಲುದಾರನಾಗಿರುತ್ತಾನೆ. ನಿಷೇಧಗಳನ್ನು ಒಂದೊಂದಾಗಿ ಮುರಿಯುತ್ತಾನೆ. ಮೈಲಿಗೆಯಲ್ಲಿ ನಾಗರ ಕಲ್ಲನ್ನು ಮುಟ್ಟುತ್ತಾನೆ. ಹೊಲೆಯ ಕಬೀರನನ್ನು ಮುಟ್ಟಲು ಬಯಸುತ್ತಾನೆ. ಅವನ ಎಲ್ಲ ಭೀತಿಗಳನ್ನು ಪ್ರತಿನಿಧಿಸುವ ಹಾವಿಗೆ, ಕಲ್ಲು ಹೊಡೆಯುತ್ತಾನೆ. ಆ ಮೂಲಕ ಅಲ್ಲಿಯವರೆಗೆ ಬರಿಯ ಪ್ರೇಕ್ಷಕನಾಗಿದ್ದವ, ಸಕ್ರಿಯವಾಗಿ ದುರಂತದಲ್ಲಿ ಭಾಗಿಯಾಗುತ್ತಾನೆ. ಗರ್ಭಪಾತಕ್ಕಾಗಿ ಯಮುನಕ್ಕ ಪರ್ಬು ಹತ್ತಿರ ಹೋದಾಗ ಶೂದ್ರ ಪ್ರಪಂಚ ನೋಡುತ್ತಾನೆ. ಈ ಪ್ರಕ್ರಿಯೆಯಲ್ಲಿ ಜೀವನವನ್ನು ಪ್ರವೇಶಿಸುತ್ತಾನೆ. ಒಂದು ದೃಷ್ಟಿಯಲ್ಲಿ ಕಳೆಯಲೇಬೇಕಾದ ಅವನ ಮುಗ್ಧತೆ ಕಳೆಯುವುದರ ಜೊತೆಗೆ ಅವನ ನೈತಿಕ ಪ್ರಜ್ಞೆ ಬೆಳೆಯುತ್ತದೆ. ವೈದಿಕ ಸಂಸ್ಕೃತಿಯಲ್ಲಿ ಅಡಗಿದ ಕ್ರೌರ್ಯ, ಪ್ರೇಮ ಮತ್ತು ಸಹಾನುಭೂತಿಗಳನ್ನು ಇಲ್ಲಿ ಕಾಣಬಹುದು. ಮುಗ್ಧ ಬಾಲಕನೊಬ್ಬನ ಕಣ್ಣಿನಿಂದ ಪ್ರೌಢ ಪ್ರಪಂಚವನ್ನು ನೋಡುವ ತಂತ್ರವನ್ನು ಬಳಸಲಾಗಿದೆ.

ಗೋದಾವರಮ್ಮ ಮಡಿವಂತ ಹೆಂಗಸಾಗಿದ್ದು ಸಂಪ್ರದಾಯವನ್ನು ಬಿಟ್ಟುಕೊಡುವುದಿಲ್ಲ. ತನ್ನಂತೆಯೇ ವಿಧವೆಯಾದ ಯಮುನಕ್ಕ ಸಂಪ್ರದಾಯವನ್ನು ಮೀರಿರುವುದು ಅವಳಿಗೆ ಹಿಡಿಸುವುದಿಲ್ಲ. ಯಮುನಕ್ಕನ ಮಾಹಿತಿಯನ್ನು ಸಂಗ್ರಹಿಸಲು ಅಗ್ರಹಾರದ ಹುಡುಗರನ್ನು ಗೋದಾವರಮ್ಮ ಬಳಸಿಕೊಳ್ಳುತ್ತಾಳೆ. ಈಗಿನ ಕಾಲದವರು ಹೇಳಿದ ಮಾತು ಕೇಳುವುದಿಲ್ಲ ಜಪ ಮಾಡುವುದಿಲ್ಲ ಎಂದು ಬ್ರಾಹ್ಮಣ ಹುಡುಗರನ್ನು ಕುರಿತು ದೂರುತ್ತಾಳೆ. ಶಾಸ್ತ್ರಿ ಹಾಗೂ ಗಣೇಶ ನಾಣಿಯನ್ನು ನಡೆಸಿಕೊಳ್ಳುವುದು ಒಂದು ಬಗೆಯಾದರೆ, ಬ್ರಾಹ್ಮಣ ಕುಟುಂಬದ ಯಮುನಕ್ಕ ಕದ್ದು ಬಸಿರಾಗುವುದು ಇನ್ನೊಂದು ಬಗೆ. ಯಮುನಕ್ಕ ಜಾತಿಯ ಚೌಕಟ್ಟನ್ನು ಮೀರಿರುವುದನ್ನು ಸಮಾಜವು ನಿಂದಿಸುತ್ತದೆ. ಕದ್ದು ಬೀಡಿ ಸೇದುವ, ಇಸ್ಪೀಟ್ ಆಡುವ ಶಾಸ್ತ್ರಿ ಮತ್ತು ಅವನ ಗೆಳೆಯರು ತಮ್ಮ ಜಾತಿಯ ಚೌಕಟ್ಟನ್ನು ಮೀರಿದವರಾಗಿದ್ದಾರೆ. ಸಮಾಜದ ಒಪ್ಪಿತ ಮೌಲ್ಯಗಳನ್ನು ಧಿಕ್ಕರಿಸಿದ ಯಮುನಕ್ಕ ಜಾತಿ ಬಹಿಷ್ಕಾರಕ್ಕೆ ಒಳಗಾಗುತ್ತಾಳೆ. ಘಟಶ್ರಾದ್ಧಕ್ಕೊಳಗಾದ ಯಮುನಕ್ಕನನ್ನು ಕ್ರೈಸ್ತ ಧರ್ಮಕ್ಕೆ

[illegible]

ಸೇರಲು ಪಾದ್ರಿಯೊಬ್ಬನು ಇಗರ್ಜಿಗೆ ಕರೆಯುತ್ತಾನೆ. ಹೆಣ್ಣಿನ ಅಸಹಾಯಕತೆಯನ್ನು ತನ್ನ ಧರ್ಮ ಪ್ರಚಾರಕ್ಕೆ ಪಾದ್ರಿಯು ಬಳಸಿಕೊಳ್ಳುತ್ತಾನೆ. ಹೀಗೆ ಬ್ರಾಹ್ಮಣರ ಮೌಲ್ಯಗಳ ಆಚರಣೆ ಹಾಗೂ ಘೋಷಣೆಯಲ್ಲಿನ ಅಂತರವು ಸಂಘರ್ಷದ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತದೆ.

ಪ್ರಕೃತಿ ಸಹಜ ಕಾಮನೆಗಳನ್ನು ಹತ್ತಿಕ್ಕುವುದು ಮನುಷ್ಯನ ನಿಯಂತ್ರಣ ಶಕ್ತಿಯನ್ನು ಅವಲಂಬಿಸಿದೆ. ಕಾಮನೆಗಳ ಪೂರೈಕೆ ಕೂಡ ಸಾಮಾಜಿಕ ವ್ಯವಸ್ಥೆಯ ಭಾಗವಾಗಿಯೇ ರೂಪುಗೊಂಡಿರುತ್ತದೆ. ಆದರೆ ಈ ಸಮಾಜದಲ್ಲಿ ಒಂದೊಂದು ಜಾತಿಗೂ ಒಂದೊಂದು ನೀತಿ. ಈ ನೀತಿ ಕಟ್ಟುಪಾಡುಗಳ ಕಾರಣಗಳಿಂದಾಗಿ ಅವು ಚೌಕಟ್ಟಿನಲ್ಲಿ ಅಳವಡುವುದಿಲ್ಲ. ಆದರೆ ಸಮಾಜದಲ್ಲಿ ಶೂದ್ರರೆನಿಸಿಕೊಂಡವರು ಬದುಕಿನಲ್ಲಿ ರೂಢಿಸಿಕೊಂಡ ಸ್ವಾತಂತ್ರ್ಯ, ಬದುಕಿನ ನೀತಿ ಇವೆಲ್ಲ ಬ್ರಾಹ್ಮಣರೆನಿಸಿಕೊಂಡವರಿಗೆ ಇಲ್ಲವಾಗಿದೆ. ಇದಕ್ಕೆ ಆ ಸಮುದಾಯ ಹಾಕಿಕೊಂಡ ನಿರ್ಬಂಧಗಳೇ ಕಾರಣ. ಉಡುಗೆ–ತೊಡುಗೆಗಳು, ಊಟ–ಉಪಚಾರಗಳಲ್ಲಿ ಹಾಗೂ ಆಟ–ಪಾಠಗಳಲ್ಲಿನ ನಿರ್ಬಂಧಗಳ ಕಾರಣವಾಗಿ ಬದುಕು ಅರ್ಥಶೂನ್ಯವಾಗಿದೆ. ಸಾಂಪ್ರದಾಯಿಕವಾಗಿ ಕಟ್ಟಿ ಬೆಳೆಸಿದ ಸಾಂಸ್ಕೃತಿಕ ಪರಿಸರದಲ್ಲಿಯೇ ಜಾತಿಗಳ ಕಾರಣಗಳಿಗಾಗಿ ಏರ್ಪಡುವ ಬದುಕಿನ ಸಂಘರ್ಷದ ಸ್ವರೂಪವನ್ನು ಈ ಕತೆಗಳಲ್ಲಿ ಕಾಣಬಹುದಾಗಿದೆ ಬ್ರಾಹ್ಮಣ ಸಮಾಜವು ಕ್ರಮೇಣವಾಗಿ ತನ್ನ ಧರ್ಮದಲ್ಲಿ ಬ್ರಾಹ್ಮಣತ್ವವನ್ನು ಕರ್ಮದಲ್ಲಿ ಶೂದ್ರತ್ವವನ್ನು ಸ್ವೀಕರಿಸುದ ವ್ಯಕ್ತಿಗಳ ತಾಕಲಾಟವನ್ನು, ಪೊಳ್ಳುತನವನ್ನು ಅನಂತಮೂರ್ತಿಯವರು ಅನಾವರಣಗೊಳಿಸುತ್ತಾರೆ.

ಬ್ರಾಹ್ಮಣನೊಬ್ಬನು ಶೂದ್ರ ಹೆಣ್ಣಿನೊಂದಿಗೆ ಸಂಬಂಧವನ್ನು ಹೊಂದಿದಾಗ ಉಂಟಾಗುವ ಸಂಘರ್ಷವನ್ನು 'ಸಂಸ್ಕಾರ' ಕಾದಂಬರಿಯಲ್ಲಿ ಕಾಣಬಹುದು. ಅಗ್ರಹಾರದೊಳಗೆ ಬ್ರಾಹ್ಮಣರು ಮಡಿವಂತಿಕೆಯ ಜೀವನವನ್ನು ನಡೆಸುತ್ತಿದ್ದರು. ಬ್ರಾಹ್ಮಣನಾಗಿದ್ದ ನಾರಾಣಪ್ಪನು ಶೂದ್ರಳಾದ ಚಂದ್ರಿಯಿಂದ ಊಟ–ಉಪಚಾರವನ್ನು ಪಡೆದಿದ್ದನು. ಮದ್ಯ–ಮಾಂಸವನ್ನು ಸೇವಿಸಿ ಕುಲದ ಕಟ್ಟುಪಾಡುಗಳನ್ನು ಮೀರಿದ್ದರಿಂದ ತನ್ನ ಜಾತಿಯವರಿಂದ ದೂರವಿದ್ದನು. ಸಂಪ್ರದಾಯಬದ್ಧ ಬ್ರಾಹ್ಮಣರು ನಾರಣಪ್ಪನ ರೀತಿ ನೀತಿಗಳನ್ನು ಸಹಿಸದೇ ಅವನನ್ನು ಸನ್ಮಾರ್ಗಕ್ಕೆ ತರುವಂತೆ ಪ್ರಾಣೇಶಾಚಾರ್ಯನಿಗೆ ದೂರು ಸಲ್ಲಿಸಿದ್ದರು.

ನಾರಣಪ್ಪನನ್ನು ದೂಷಿಸುವ ಕೆಲವು ಬ್ರಾಹ್ಮಣರು ಗುಟ್ಟಾಗಿ ಶೂದ್ರ ಹೆಂಗಸರೊಂದಿಗೆ ಸಂಬಂಧವನ್ನು ಹೊಂದಿದ್ದರು. ನಾರಣಪ್ಪ ಮೆಚ್ಚಿದ್ದ ಚಂದ್ರಿಯನ್ನು ದುರ್ಗಾಭಟ್ಟನು ವಾತ್ಸಾಯನೋಕ್ತ ವರ್ಣನೆಯ ಚಿತ್ತಿನಿಯೊಂದಿಗೆ ಸಮೀಕರಿಸುತ್ತಾನೆ. ಚಂದ್ರಿಗಾಗಿ ನಾರಣಪ್ಪ ಸಾಲಿಗ್ರಾಮವನ್ನು ಎಸೆದದ್ದು ಹಾಗೂ ಮಾಂಸ–ಮದ್ಯಾಹಾರ ಸೇವಿಸಿದ್ದು ಆಶ್ಚರ್ಯವೇನಲ್ಲ ಎನ್ನುತ್ತಾನೆ.

ನಾರಣಪ್ಪ ಎಲ್ಲರೆದುರು ಒಪ್ಪಿಕೊಂಡು ಪ್ರಜ್ಞಾಪೂರ್ವಕವಾಗಿ ಎಲ್ಲವನ್ನೂ ಅಪವಿತ್ರಗೊಳಿಸುವ ನಾಶಮಾಡುವ ಕೆಲಸಕ್ಕೆ ಕೈ ಹಾಕಿದರೆ, ಇತರೆ ಬ್ರಾಹ್ಮಣರು ಲೋಭ, ದುರಾಸೆ, ಹೊಟ್ಟೆ ಕಿಚ್ಚುಗಳಿಂದ ಅಗ್ರಹಾರವನ್ನು ಒಳಗಿನಿಂದಲೇ ಅಪವಿತ್ರಗೊಳಿಸುತ್ತಾರೆ. ಬ್ರಾಹ್ಮಣ್ಯ ಮೀರಿದ್ದ ನಾರಣಪ್ಪ ಸತ್ತಾಗ ಅವನ ಸಂಸ್ಕಾರ ಮಾಡುವುದು ಒಂದು ಸಮಸ್ಯೆಯಾಗಿ ಪರಿಣಮಿಸುತ್ತದೆ. "ಬ್ರಾಹ್ಮಣ ಧರ್ಮದ ಸಂಪ್ರದಾಯಬದ್ಧ ಸಾಮಾಜಿಕ ಮತ್ತು ಧಾರ್ಮಿಕ ಕಟ್ಟುಪಾಡುಗಳ ಪರಿಪಾಲನೆ ಒಂದು ಬಹಿರಾಚರಣೆಯ ಹಂತಕ್ಕಿಳಿದು ಕೊನೆಗೆ ಕೊಳೆತು ನಾರುತ್ತಿರುವ ನಾರಣಪ್ಪ ಹೆಣವನ್ನು ಎಂತಾದರೂ ಅತ್ತ ಸಾಗಿಸಿದರೆ, ಸಾಕೆಂಬ ಸ್ಥಿತಿಗೆ ತಲುಪುತ್ತದೆ"[೨]

ಅನಂತಮೂರ್ತಿಯವರ ಬ್ರಾಹ್ಮಣ ಪರಿಸರದ ಪರಂಪರಾಗತ ಮೌಲ್ಯಗಳ ಇತಿಮಿತಿಗಳ ಶೋಧನೆಯನ್ನು ಪರೀಕ್ಷೆಯನ್ನು ಕಥಾಸಾಹಿತ್ಯದಲ್ಲಿ ನಡೆಸುವುದರ ಮೂಲಕ ನಮ್ಮ ಸಂಸ್ಕೃತಿಯ ಪರಂಪರಾಗತ ಮೌಲ್ಯಗಳನ್ನು ಪರೀಕ್ಷಿಸುತ್ತಾರೆ. ಬ್ರಾಹ್ಮಣ ಪರಿಸರದಲ್ಲಿನ ಗುಣ ದೋಷಗಳೊಂದಿಗೆ ಪರಂಪರಾಗತ ಮೌಲ್ಯ ಶೋಧನೆ ಖಚಿತವಾಗಿ ಅನಾವರಣಗೊಳ್ಳುತ್ತದೆ. ಆದರೆ ಅದೇ ಸಮಗ್ರವಾಗಿ ಹಿಂದೂ ಪರಂಪರೆಯಲ್ಲ ಹೀಗಾಗಿ ಅನಂತಮೂರ್ತಿಯವರು ನಮ್ಮ ಪರಂಪರೆಯನ್ನು ಆಂಶಿಕವಾಗಿ ಮಾತ್ರ ಗಮನಿಸಿ ಮೌಲ್ಯ ಶೋಧನೆ ನಡೆಸುತ್ತಾರೆನ್ನಬಹುದು. ಬ್ರಾಹ್ಮಣ ಪರಿಸರದ ಹೊರಗಿನವರು ಶೂದ್ರರಾಗಿದ್ದರೂ ತಮ್ಮದೇ ಆದ ಧರ್ಮ, ನೀತಿಗಳನ್ನು ನಂಬಿ ಬದುಕುವ ಅವರು ಪರಂಪರಾಗತ ಮೌಲ್ಯಪ್ರಜ್ಞೆಯ ಕಷ್ಟಸುಖವನ್ನು ಅನುಭವಿಸುತ್ತಾರೆ.

ನಾರಣಪ್ಪನ ಬಂಧುಗಳಾದ ಲಕ್ಷ್ಮಣಾಚಾರ್ಯ ಮತ್ತು ಗರುಡಾಚಾರ್ಯ ಈ ಇಬ್ಬರಲ್ಲಿ ಯಾರೊಬ್ಬರು ಬೇಕಾದರೂ ಸಂಸ್ಕಾರ ನಡೆಸಬಹುದೆಂದು ಪ್ರಾಣೇಶಾಚಾರ್ಯರು ಹೇಳಿದಾಗ ಯಾವ ಜವಾಬ್ದಾರಿಯನ್ನು ತೆಗೆದುಕೊಳ್ಳಲಿಚ್ಛಿಸದ ಅವರು ನಾರಣಪ್ಪನ ಜೊತೆ ತಮ್ಮ ಬಂಧುತ್ವವನ್ನು ನಿರಾಕರಿಸಲು ಅನೇಕ ಕಾರಣಗಳನ್ನು ಹೇಳಿ ತಪ್ಪಿಸಿಕೊಳ್ಳಲು ಯತ್ನಿಸುತ್ತಾರೆ. ಚಂದ್ರಿ ನಾರಣಪ್ಪನ ಸಂಸ್ಕಾರಕ್ಕೆಂದು ಒಡವೆಯನ್ನು ತೆಗೆದಿಟ್ಟಾಗ ಒಡವೆಯ ಆಸೆಗೆ ಸಂಸ್ಕಾರ ನಡೆಸಲು ಇವರಿಬ್ಬರೂ ಪೈಪೋಟಿ ನಡೆಸುವುದನ್ನು ಗಮನಿಸಿದಾಗ ಅಗ್ರಹಾರದ ಬ್ರಾಹ್ಮಣ ಸಮಾಜದ ತಾತ್ವಿಕ ತಳಹದಿ ಸಡಿಲವಾಗಿರುವುದು ಗೋಚರಿಸುತ್ತದೆ.

ನಾರಣಪ್ಪನನ್ನು ಬದಲಿಸಲೆಂದು ಪಣತೊಟ್ಟ ಪ್ರಾಣೇಶಾಚಾರ್ಯನಿಗೆ ಅವನೊಂದು ಸವಾಲಾಗುತ್ತಾನೆ. ನಾರಣಪ್ಪನ ಸಂಸ್ಕಾರ ವಿಚಾರವಾಗಿ ಧರ್ಮ ಶಾಸ್ತ್ರಗಳನ್ನು ಶೋಧಿಸಿದ ನಂತರ ಮಾರುತಿ ಗುಡಿಯಲ್ಲಿ ಪ್ರಸಾದ ಬೇಡಿದಾಗಲೂ ಉತ್ತರ ಸಿಗದಿದ್ದಾಗ ದ್ವಂದ್ವಕ್ಕೊಳಗಾಗುತ್ತಾನೆ. ಆತ್ಮ ತ್ಯಾಗಕ್ಕಾಗಿ ನಿರ್ಜರಳಾದ ಹೆಂಡತಿಯ ಸೇವೆಯನ್ನು ಮಾಡಿಕೊಂಡು ಅಗ್ರಹಾರದ ಮೇಲೆ ಪ್ರಭಾವಿ ವ್ಯಕ್ತಿತ್ವವನ್ನು ಮೆರೆದ ವೇದಾಂತ ಶಿರೋಮಣಿ ಪ್ರಾಣೇಶಾಚಾರ್ಯ. ನಾರಣಪ್ಪನ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ ಬದಲಾಗಿ ನಾರಣಪ್ಪ ಬದುಕಿದ್ದಾಗ ಯಾವುದನ್ನು ಪ್ರಾಣೇಶಾಚಾರ್ಯ ಖಂಡಿಸಿದ್ದನೋ ಅದನ್ನು ಒಪ್ಪಿಕೊಂಡು ಅನುಸರಿಸುತ್ತಾನೆ. ಆಕಸ್ಮಿಕವಾಗಿ ಚಂದ್ರಿಯೊಡನೆ ಸಂಬಂಧ ಬೆಳೆಸಿದ ಮೇಲೆ ಅದನ್ನು ಒಪ್ಪಿಕೊಳ್ಳಲು ಮನಸ್ಸು ಮಾಡುತ್ತಾನೆ. ಬ್ರಾಹ್ಮಣ್ಯದ ಕಂದಾಚಾರದ ಬದುಕು ಯಾಂತ್ರಿಕವೆನಿಸುತ್ತದೆ. ಯಾವುದನ್ನು ನಿಗ್ರಹಿಸುತ್ತಾ ಬಂದನೋ ಅದಕ್ಕೆ ಜೋತುಬೀಳುತ್ತಾನೆ.

" ಸಂಸ್ಕಾರದ ಸಮಸ್ಯೆ ಬಾಳಿನ ಬದುಕಿನ ಸಮಸ್ಯೆಯಲ್ಲ, ಮಾನವತೆಯ ಸಮಸ್ಯೆಯಲ್ಲ ಅದು ಬ್ರಾಹ್ಮಣ, ಶೂದ್ರದ ಮುಟ್ಟು-ಮೈಲಿಗೆಯ, ಆಚಾರ-ಅನಾಚಾರಗಳ ಸಮಸ್ಯೆ. ಅದು ಆಚಾರ್ಯರು ನಾರಣಪ್ಪನಾಗುವ ಮತ್ತೆ ಆಚಾರ್ಯರಾಗುವ ಆಚಾರ ಸಮಸ್ಯೆ- ಬ್ರಾಹ್ಮಣ - ಶೂದ್ರ, ಬ್ರಾಹ್ಮಣ ಜಾತಿ ಸಮಸ್ಯೆ"[೩] ಅಗ್ರಹಾರದ ಪರಿಸರದಲ್ಲಿನ ಬ್ರಾಹ್ಮಣರ ಪ್ರಪಂಚ ಇಲ್ಲಿ ಅನಾವರಣಗೊಂಡಿದೆ. ಅವರ ಸಂಪ್ರದಾಯ ನಂಬಿಕೆಗಳು, ಆಚಾರ-ವಿಚಾರಗಳು, ಶೂದ್ರರೊಂದಿಗೆ ಹೊಂದಿರುವ ಸಂಬಂಧವನ್ನು ಕಾಣಬಹುದು. ರೋಗಿಷ್ಟ ಹೆಂಡತಿಯ ಸೇವೆಗಾಗಿ ಬದುಕನ್ನು ಮೀಸಲಿಡಲು ಸಿದ್ಧನಾದ ಪ್ರಾಣೇಶಾಚಾರ್ಯ ಒಂದು ಕಡೆಯಾದರೆ, ಜೀವನವಿರುವುದೇ ಸುಖಿಸಲೆಂದು ತಿಳಿದ ನಾರಣಪ್ಪ ಇನ್ನೊಂದು ಕಡೆ. ಇವರಿಬ್ಬರ ಮಧ್ಯೆ ಚಂದ್ರಿ ಇದ್ದಾಳೆ. ಅಗ್ರಹಾರದ ಬ್ರಾಹ್ಮಣರ ದುರಾಸೆ, ಅಸೂಯೆ ಮತ್ತು ಭಯಗಳಿಗೂ ಬ್ರಾಹ್ಮಣ್ಯ ಮೀರಿದರೂ ಚಿಂತೆಯಿಲ್ಲ, ಸೂರು ಭದ್ರವಾಗಲಿ ಎಂದು ಯೋಚಿಸುವುದಕ್ಕೂ ಸಂಬಂಧವಿದೆ. ಪ್ರಾಣೇಶಾಚಾರ್ಯ ಈ ಮನೋಭಾವದಿಂದ

ದೂರವಿದ್ದರೂ, ಬ್ರಾಹ್ಮಣ್ಯವನ್ನು ಮೀರುತ್ತಾರೆ. ಇದು ಬದಲಾವಣೆ ಅನಿವಾರ್ಯವಾಗಿದ್ದು, ಅಗ್ರಹಾರ ಸಮಾಜದ ತಾತ್ವಿಕ ತಳಹದಿ ಸಡಿಲವಾಗಿರುವುದರ ಸೂಚನೆಯಾಗಿದೆ. ಒಂದು ಕಡೆ ಪ್ರಾಣೇಶಾಚಾರ್ಯ ಆಚಾರನಿಷ್ಠ ಬ್ರಾಹ್ಮಣರ ಸಮಾಜದ ಮುಖ್ಯಸ್ಥನಾಗಿದ್ದಾನೆ. ಕುಟಿಲ ಬುದ್ಧಿಯ ಗರುಡಾಚಾರ್ಯ, ಲಕ್ಷ್ಮಣಾಚಾರ್ಯ ಹಾಗೂ ದಾಸಾಚಾರ್ಯ ಆತ್ಮದ್ರೋಹಿಗಳಾಗಿದ್ದಾರೆ. ಇನ್ನೊಂದುಕಡೆ ನಾರಣಪ್ಪ, ಶ್ರೀಪತಿ, ಗಣೇಶ ಮೊದಲಾದವರು ಬ್ರಾಹ್ಮಣ್ಯ ಬಿಟ್ಟು ಹೊಸ ರೀತಿಯ ಜೀವನ ನಡೆಸುತ್ತಿದ್ದಾರೆ. ಮತ್ತೊಂದುಕಡೆ ಶೂದ್ರ ಸಮಾಜವಿದೆ.

ಬಂಗಾರಕ್ಕಾಗಿ ಆಸೆಪಡುವ ಕೆಲವರು ತಮ್ಮ ವರ್ಣದ ಗುಣಗಳನ್ನು ಮೀರಲು ತವಕಿಸುತ್ತಾರೆ. ಇನ್ನು ಕೆಲವರು ವೈಯಕ್ತಿಕ ಕಾರಣಕ್ಕಾಗಿ ಬ್ರಾಹ್ಮಣ್ಯವನ್ನು ಮೀರಿ ತಮ್ಮ ಆಸೆಯನ್ನು ಪೂರೈಸಿಕೊಳ್ಳುತ್ತಾರೆ. ನಾರಣಪ್ಪನನ್ನು ದೂರುವ ಉಳಿದ ಬ್ರಾಹ್ಮಣರಲ್ಲೂ ಜಾತಿ ಮೀರಿದ ಗುಣಗಳಿವೆ. ಸವಲತ್ತಿಗಾಗಿ ಬ್ರಾಹ್ಮಣ್ಯಕ್ಕೆ ಅಂಟಿಕೊಂಡಿವವರಿಗೆ ಹಾಗೂ ಬದಲಾವಣೆಯನ್ನು ಬಯಸುವವರಿಗೆ ಪ್ರಾಣೇಶಾಚಾರ್ಯನ ಮುದ್ರೆ ಬೇಕಾಗಿದೆ. ಹೀಗೆ ಬ್ರಾಹ್ಮಣರ ಮೌಲ್ಯಗಳು ಕುಸಿಯುತ್ತಿರುವುದನ್ನು ಇಲ್ಲಿ ಕಾಣಬಹುದು. ನಿಂತ ನೀರಿನಂತೆ ಕಾಣುವ ಅಗ್ರಹಾರದ ಬ್ರಾಹ್ಮಣ ಸಮಾಜದಲ್ಲಿ ಹುಟ್ಟಿ ಬೆಳೆದ ನಾರಣಪ್ಪನಿಗೆ ಅಲ್ಲಿನ ಮಡಿವಂತರ ನಂಬಿಕೆಗಳ ಪಾವಿತ್ರ್ಯವನ್ನು ಪ್ರಶ್ನಿಸುವ ಹಾಗೂ ಅದನ್ನು ನಾಶಗೊಳಿಸುವ ಧೈರ್ಯವಿದೆ. ಅವನ ಈ ಪ್ರಕ್ರಿಯೆಯು ಕಾದಂಬರಿಯಲ್ಲಿ ಸಂಘರ್ಷವನ್ನು ಹುಟ್ಟುಹಾಕಿದೆ.

ಸಂಸ್ಕಾರದಲ್ಲಿ ಬ್ರಾಹ್ಮಣ ಜಾತಿಯ ವ್ಯಾಪ್ತಿಯೇ ಹೆಚ್ಚಿದ್ದು ಶೂದ್ರರು ಭೋಗ ವಸ್ತುಗಳು ಆದರೆ ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವಿದೆ. ನಾರಣಪ್ಪನ ಕೊಳೆತ ಶವವನ್ನು ಮುಂದಿಟ್ಟುಕೊಂಡು ಅದಕ್ಕೆ ನ್ಯಾಯವಾಗಿ ಮಾಡಬೇಕಾದ ಸಂಸ್ಕಾರವನ್ನು ಮಾಡದೆ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳಲು ಬ್ರಾಹ್ಮಣರು ಹವಣಿಸುತ್ತಿದ್ದಾಗ ಚಂದ್ರಿ ತೋರುವ ಔದಾರ್ಯ ಮತ್ತು ಸಮಯಪ್ರಜ್ಞೆಗಳು ಮೆಚ್ಚುವಂಥವು. ಜಾತಿ ಭಾವನೆಯಿಂದ ಕುಗ್ಗಿ ಹೋಗಿರುವ ಅಗ್ರಹಾರದ ಬ್ರಾಹ್ಮಣರಲ್ಲಿ ಕಾಣದ ಈ ಗುಣವು ಹೆಚ್ಚು ಮಾನವೀಯವಾಗಿದ್ದು ಪ್ರಗತಿಪರ ವಿಚಾರವಾಗಿದೆ. ಚಂದ್ರಿಯ ಈ ಒಳ್ಳೆಯತನವು ಮಡಿವಂತ ಬ್ರಾಹ್ಮಣರಲ್ಲಿ ಅಚ್ಚರಿಯನ್ನುಂಟು ಮಾಡುತ್ತದೆ. ಸ್ವಾರ್ಥಕ್ಕಾಗಿ ಸದಾ ಪೈಪೋಟಿ ನಡೆಸುತ್ತಿದ್ದ ಸೀಮಿತ ಮನಸ್ಸಿನ ಬ್ರಾಹ್ಮಣರೆದುರಿಗೆ ಶೂದ್ರ ಚಂದ್ರಿ ಉದಾರವಾಗಿ ನಡೆದುಕೊಳ್ಳುತ್ತಾಳೆ. ಆಧುನಿಕ ಮನೋಭಾವದ ಪ್ರಗತಿಪರ ವಿಚಾರವು ಇಲ್ಲಿ ಸಾಂಸ್ಕೃತಿಕವಾಗಿ ವಿಶೇಷತೆಯನ್ನು ಪಡೆಯುತ್ತದೆ.

ಆಳುವ ವರ್ಗದ ಪ್ರತಿನಿಧಿಯಾಗಿ ಬ್ರಾಹ್ಮಣನನ್ನು, ಸೇವಕ ವರ್ಗದ ಪ್ರತಿನಿಧಿಯಾಗಿ ಶೂದ್ರನನ್ನು 'ಭಾರತೀಪುರ' ಕಾದಂಬರಿಯಲ್ಲಿ ಕಾಣಬಹುದು. ಶೂದ್ರರು ಸಾಮಾಜಿಕ ಅಸಮಾನತೆಯನ್ನು ಹೊಂದಿರುವುದನ್ನು ಜಗನ್ನಾಥ ಗಮನಿಸುತ್ತಾನೆ. ಈ ಅಸಮಾನತೆಯನ್ನು ಸರಿಪಡಿಸಬೇಕೆಂಬುದು ಜಗನ್ನಾಥನ ಛಲವಾಗಿದೆ. ಅದಕ್ಕಾಗಿ ಅವನು ತನ್ನ ವರ್ಗ ಗುಣವನ್ನು ಮೀರಿ ಶೂದ್ರರ ಪರವಾಗಿ ನಿಲ್ಲುವ ಧೈರ್ಯವನ್ನು ಮಾಡುತ್ತಾನೆ. ಮೊದಲನೆಯದು ಶೂದ್ರರನ್ನು ಹತ್ತಿರ ಕರೆದು, ತನ್ನ ಮನೆಯ ಸಾಲಿಗ್ರಾಮವನ್ನು ಮುಟ್ಟಿಸಿ ಅವರಲ್ಲಿ ಆತ್ಮ ಸ್ಥೈರ್ಯ ತುಂಬಲು ಪ್ರಯತ್ನಿಸುತ್ತಾನೆ. ಎರಡನೆಯದು ಅವರಿಗೆ ಪಂಚೆಯನ್ನು ತೊಟ್ಟುಕೊಳ್ಳುವಂತೆ ಹೇಳುತ್ತಾನೆ. ಇವೆರಡೂ ಕೆಲಸವನ್ನು ಶೂದ್ರರು ಹೆದರಿ ಒತ್ತಾಯ ಪೂರ್ವಕವಾಗಿ ಮಾಡುತ್ತಾರೆಯೇ ಹೊರತು

[illegible]

ಸಂಪೂರ್ಣ ಮನಸ್ಸಿನಿಂದಲ್ಲ. ದೇವಸ್ಥಾನದೊಳಕ್ಕೆ ಮುಜುಗರದಿಂದ, ಹಿಂಜರಿಕೆಯಿಂದ ಪ್ರವೇಶಿಸುತ್ತಾರೆ. ಜಗನ್ನಾಥ ಮಾಡುವ ಪ್ರಯತ್ನ ಶೂದ್ರರಿಗೆ ಆದೇಶ ಪಾಲನೆಯಾಗಿ ಮಾರ್ಪಡುತ್ತದೆ.

ಶೂದ್ರರಿಗೆ ಧೈರ್ಯ ತುಂಬಿ ಅವರನ್ನು ಸ್ವತಂತ್ರಶೀಲರನ್ನಾಗಿ ಬದುಕಲು ಪ್ರೇರಿಸಿ ವಿಫಲನಾದಾಗ ಈ ವರ್ಗ ಭೇದವನ್ನು ಸಹಜವಾಗಿ ತೊಡೆದು ಹಾಕುವ ಇನ್ನೊಂದು ಆಲೋಚನೆಯು ಜಗನ್ನಾಥನ ಮನಸ್ಸನ್ನು ಆವರಿಸುತ್ತದೆ. ಭಾರತೀಪುರದಲ್ಲಿ ಕಾರ್ಖಾನೆ ಸ್ಥಾಪಿತವಾದರೆ ಇದರಿಂದ ಬದಲಾವಣೆ ಸಾಧ್ಯ ಎಂದುಕೊಳ್ಳುತ್ತಾನೆ. ಕಾರ್ಖಾನೆಯ ಸ್ಥಾಪನೆಯಿಂದ ಉದ್ಯೋಗದಲ್ಲಾಗುವ ಬದಲಾವಣೆಗಳು ಕೆಲಸಕ್ಕೆ ಬರುವ ಜನರ ಸಲುವಾಗಿ ಸಾರಿಗೆ ಬಸ್ಸಿನಲ್ಲಿ ಸಮಾನಾವಕಾಶ ದೊರೆಯುತ್ತದೆ. ಶೂದ್ರನಿಗೆ ಸೇವೆಗೆಂದೇ ಮೀಸಲಾದ ಕೆಲಸವನ್ನು ಬಿಟ್ಟು ಬೇರೆ ಕೆಲಸದ ಆಯ್ಕೆಗೆ ಅವಕಾಶವಿರುತ್ತಿತ್ತು. ದೇವಸ್ಥಾನದ ಪೂಜಾರಿ ಹುಡುಗ ಅವನ ಕೈಕೆಳಗಿನ ಕೆಲಸಗಾರನಾದರೂ ಆಶ್ಚರ್ಯ ಪಡಬೇಕಾದ್ದಿಲ್ಲ.

ಊರಿನ ಮಹಾಪಂಡಿತರಿಗೆ ಕಾರ್ಖಾನೆಯ ಕೆಲಸಕ್ಕೆ ಸೇರುವ ಅನಿವಾರ್ಯತೆ ಬಂದೊದಗಿದರೆ ಅವರ ಪಾಂಡಿತ್ಯ ಯಾವ ಉಪಯೋಗಕ್ಕೂ ಬರುವಂತಿಲ್ಲ. ಹೋಟೆಲುಗಳಲ್ಲಿ ಅಡಿಗೆಯವರಾಗಿ ಆಫೀಸ್ ಜವಾನರಾಗಿಯೂ ಸೇರಿಕೊಳ್ಳಬೇಕಾಗುತ್ತದೆ. ಹೋಟೆಲುಗಳಲ್ಲಿ ಬ್ರಾಹ್ಮಣ ಶೂದ್ರ ಸರಿಸಮಾನರಾಗಿ ಕೂಡುವಂತೆಯೂ ಆಗಬಹುದು ಆಗ ಅವರ ಮನಸ್ಸಿನಲ್ಲಿ ಮಡಿ ಮೈಲಿಗೆ ವಿಚಾರಕ್ಕಿಂತ ಹೆಚ್ಚಾಗಿ ಬಡ್ತಿ ಮುಂಬಡ್ತಿಯನ್ನು ಕುರಿತು ಆಲೋಚಿಸುತ್ತಿದ್ದರು. ಉದ್ಯೋಗ ಆಧುನೀಕರಣದ ಅನಿವಾರ್ಯ ಅಂಗವಾಗಿದೆ.

"ವ್ಯಕ್ತಿ ಸ್ಥಿತಿಯ ಮಟ್ಟದಲ್ಲಿ ಆದರ ಮುಖ್ಯಗೊಡವೆ ಬ್ರಾಹ್ಮಣ ಜಮೀನ್ದಾರನ ಕುಟುಂಬದಲ್ಲಿ ಹುಟ್ಟಿದ ಧೀಮಂತನೊಬ್ಬ ತನ್ನ ಜಾತಿ ಹಾಗೂ ವರ್ಗಗಳಿಂದ ಮುಕ್ತನಾಗಿ ತನ್ನ ವರ್ಗ–ಜಾತಿಯ ಶೋಷಣೆಗೆ ಗುರಿಯಾಗಿದ್ದ ದಲಿತರ ಜೊತೆಗೆ ಏಕೀಭಾವ ಸಾಧಿಸುವುದರ ಸಂಕಟ ವಾಗಿದೆ."[೪] ಆಗ ತಂತಾನೆ ಮಂಜುನಾಥನ ಮಹಿಮೆ ಕಡಿಮೆಯಾಗಬಹುದು ಎಂಬ ಆಲೋಚನೆ ಜಗನ್ನಾಥನದಾಗಿದೆ. ಊರಿನ ಶ್ರೀಮಂತ ಬ್ರಾಹ್ಮಣ ಕುಟುಂಬದ ವಾರಸುದಾರನಾದ ಜಗನ್ನಾಥ ತನ್ನ ಮನೆತನದಲ್ಲಿ ಇದುವರೆಗೆ ಪೂಜಿಸಿಕೊಂಡ ಸಾಲಿಗ್ರಾಮವನ್ನು ಹರಿಜನರಿಂದ ಮುಟ್ಟಿಸುತ್ತಾನೆ. ಅವರಿಗೆ ಅದೊಂದು ಸಾಮಾನ್ಯ ಕಲ್ಲೆಂದು ತಿಳಿಸಬೇಕೆಂಬುದು ಜಗನ್ನಾಥನ ವಿಚಾರ. ಆದೇಶವೆಂಬಂತೆ ಒತ್ತಾಯಕ್ಕೆ ಶೂದ್ರರು ಆ ಕೆಲಸವನ್ನು ಮಾಡಿಮುಗಿಸುತ್ತಾರೆ. ದೇವಸ್ಥಾನದ ಒಳಗಡೆ ಹೋಗುವಾಗಲೂ ಶೂದ್ರರು ಹಿಂದು ಮುಂದು ಮಾಡುತ್ತಾರೆ.

ಬ್ರಾಹ್ಮಣನಾದ ಜಗನ್ನಾಥನು ತನ್ನ ವರ್ಗದ ಗುಣಗಳನ್ನು ಮೀರಿದ್ದೇನೆಂದು ಭ್ರಮಿಸಿರುತ್ತಾನೆ. ದೇವಸ್ಥಾನದ ಹರಿಜನರ ಪ್ರವೇಶವು ಕೃತಕವೆಂದು ಜಗನ್ನಾಥನಿಗೆ ತಿಳಿದಾಗ ಬೇಸರವೆನಿಸುತ್ತದೆ. ಇಲ್ಲಿ ಬ್ರಾಹ್ಮಣ ಜಗನ್ನಾಥ ತನ್ನ ವರ್ಗದ ಗುಣವನ್ನು ಸಂಪೂರ್ಣವಾಗಿ ಮೀರಲಾಗುವುದಿಲ್ಲ. ಅದರಂತೆ ಶೂದ್ರರೂ ತಮ್ಮ ವರ್ಗದ ಗುಣಗಳನ್ನು ಸಂಪೂರ್ಣವಾಗಿ ಮೀರಲಾಗದು ಎನ್ನುವ ವಿಚಾರ ಇಲ್ಲಿ ವ್ಯಕ್ತವಾಗಿದೆ. ಜಗನ್ನಾಥನ ಪ್ರಯತ್ನಕ್ಕೆ ಮನಸ್ಸು ನೀಡುವ ಬೆಂಬಲ ಹರಿಜನರಿಗೆ ಸ್ವಯಂ ಪ್ರೇರಿತವಾಗಿ ಬರಬೇಕಾಗಿದೆ ಒತ್ತಾಯದಿಂದಲ್ಲ. ಶೋಷಿತರು ಮತ್ತು ಶೋಷಣೆಗೊಳಗಾದವರು ಇವರಿಬ್ಬರಿಗೂ ತಾವು ಮಾಡುತ್ತಿರುವುದು ಸರಿಯಲ್ಲ ಎಂಬ ತಿಳುವಳಿಕೆ ಮೂಡಬೇಕು.

ಬದಲಾವಣೆ ತರಲು ಬಯಸುವ ಜಗನ್ನಾಥ ಹರಿಜನರೊಡನೆ ಕ್ರಿಯಾತ್ಮಕವಾಗಿ ನಡೆದುಕೊಳ್ಳುತ್ತಾನೆಯೇ ಹೊರತು ಭಾವನಾತ್ಮಕ ಸಂಬಂಧ ಹೊಂದಲು ಸಾಧ್ಯವಾಗುವುದಿಲ್ಲ. ಇದು ಜಗನ್ನಾಥನಿಗೆ ಶ್ರೀಪತಿರಾಯರು ಕೇಳುವ ಪ್ರಶ್ನೆಯಿಂದ ಸ್ಪಷ್ಟವಾಗುತ್ತದೆ. ಹೊಲೆಯರಿಗೆ ಅಕ್ಷರಾಭ್ಯಾಸ ಮಾಡಿಸ್ತಿದ್ದೀನಿ ಅಂದ್ಯಲ್ಲ ಜಗ್ಗಣ್ಣ ನೀನಾಗಲೀ ಅವರಾಗಲಿ ಒಂದು ಸಾರಿಯಾದರೂ ಗೊತ್ತಿದ್ದೇನೆ ಮುಟ್ಟಿಕೊಂಡಿದ್ದೀಯ ಹೇಳು ಎಂದಾಗ ಇಲ್ಲ ಎಂಬ ಜಗನ್ನಾಥನ ಉತ್ತರವು ಅವನು ತನಗರಿವಿಲ್ಲದೆಯೇ ಅವರೊಡನೆ ಅಂತರ ದಾರಿದ್ರ್ಯದಿಂದ ಹೇಸುತ್ತಾನೆ. ಇಲ್ಲಿ ಜಗನ್ನಾಥನಿಗೆ ಶೂದ್ರರು ಅರ್ಥಹೀನವಾಗಿ ಬದುಕುತ್ತಿದ್ದಾರೆಂಬ ಅನುಕಂಪವಿದೆ. ಆದರೆ ತನ್ನ ಜಾತಿ ಗುಣಗಳನ್ನು ಸಂಪೂರ್ಣವಾಗಿ ಅವನಿಗೆ ಮೀರಲಾಗುವುದಿಲ್ಲ. ಜಗನ್ನಾಥನಿಗೆ ತನ್ನ ಕ್ರಿಯೆಯು ತಾನು ಬ್ರಾಹ್ಮಣ್ಯವನ್ನು ತೊರೆಯುವುದಕ್ಕೋ ಅಥವಾ ಶೂದ್ರರಿಗಾಗಿಯೊ ಎಂದು ಗೊಂದಲ ಉಂಟಾಗುತ್ತದೆ.

ಬದಲಾವಣೆಯನ್ನು ತರಲು ಪ್ರಯತ್ನಿಸಿ ಹಲವು ರೀತಿಗಳಲ್ಲಿ ಸೋತ ಜಗನ್ನಾಥ ಮತ್ತೊಮ್ಮೆ ಹೊಸ ಪ್ರಯತ್ನಗಳಿಗಾಗಿ ಪಣ ತೊಡುವುದರೊಂದಿಗೆ ಕಾದಂಬರಿಯು ಮುಗಿಯುತ್ತದೆ. ಈ ಬದಲಾವಣೆ ಎಲ್ಲರಿಗೂ ಅನಿವಾರ್ಯವಾಗಿರುತ್ತದೆ. ಅದು ನಿಧಾನಗತಿಯಲ್ಲಿ ಜೀವನದಲ್ಲಿ ಸೇರಿಕೊಂಡಾಗ ಸಂಘರ್ಷವಿರುವುದಿಲ್ಲ. ಅನಂತಮೂರ್ತಿಯವರು ಇಂದಿನ ಗಾಢವಾದ ಸಮಸ್ಯೆಗಳಾದ ಬ್ರಾಹ್ಮಣ ಬ್ರಾಹ್ಮಣೇತರ ಸಂಬಂಧ, ಮೇಲುಜಾತಿ, ಮಧ್ಯಮ ಜಾತಿ, ದಲಿತರ ಸಂಬಂಧ, ಧರ್ಮದ ಬಗ್ಗೆ ನಂಬಿಕೆ ಇರುವವರು ಮತ್ತು ಇಲ್ಲದವರ ಸಂಬಂಧ ಇವುಗಳನ್ನು ಸದಾ ಆಲೋಚಿಸುತ್ತಾ ಬಂದಿದ್ದಾರೆ. ಪ್ರೀತಿ ತಿರಸ್ಕಾರ ಸಂಬಂಧವನ್ನು ಧರ್ಮದ ಜೊತೆಗಿಟ್ಟಿದ್ದಾರೆ. ಜಾತಿ ಘಟಕ, ವಿಘಟನೆ ಭಾರತೀಪುರದಲ್ಲಿ ಬ್ರಾಹ್ಮಣ ಜಾತಿಯ ಜೊತೆಗೆ ಇತರ ಜಾತಿಗಳು ಸೇರಿಕೊಂಡಿವೆ. ಜಾತಿಗಳ ನಡುವಿರುವ ಚಲನೆ ವ್ಯವಹಾರ ಘರ್ಷಣೆ ಜಾತಿ ವ್ಯವಸ್ಥೆಯ ಬೇರುಗಳು ಸಡಿಲವಾಗುತ್ತಿರುವುದರ ಸೂಚನೆಯಿದ್ದು, ವ್ಯಕ್ತಿಯ ನೆಲೆಯಿಂದ ವಿವರಣೆ ಬಯಸಿ ಸಾಮಾಜಿಕವೆನಿಸುತ್ತದೆ.

ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ವರ್ಗಗಳ ಸಂಬಂಧವನ್ನು 'ಅವಸ್ಥೆ' ಕಾದಂಬರಿಯಲ್ಲಿ ಕಾಣಬಹುದು. ಹಾಲನ್ನು ಚೆಲ್ಲಿ ಮಗುವಿನ ಸಾವಿಗೆ ಕಾರಣವಾಗುವ ನರಸಿಂಹಭಟ್ಟನು ಫ್ಯೂಡಲ್ ವ್ಯವಸ್ಥೆಗೆ ಸೇರಿದ ಬ್ರಾಹ್ಮಣನಾಗಿದ್ದಾನೆ. ಬ್ರಾಹ್ಮಣನಾಗಿದ್ದ ಪುರೋಹಿತನು ಶೂದ್ರನಾದ ಕೃಷ್ಣಪ್ಪನನ್ನು ಜಾತಿಭೇದವಿಲ್ಲದೆ ಮಗನೆಂದು ಭಾವಿಸುತ್ತಾನೆ. ನರಸಿಂಹ ಭಟ್ಟ ಪುರೋಹಿತನ ಜಮೀನನ್ನು ಅಪಹರಿಸಿದಾಗಲೂ ವಿಶ್ವಾಸಘಾತಕನನ್ನು ಪುರೋಹಿತನು ಕ್ಷಮಿಸುತ್ತಾನೆ. ಜನರಿಂದ ನರಸಿಂಹಭಟ್ಟನನ್ನು ಹೊಡೆಸಿ ತಾನೇಕೆ ಪಾಪ ಕಟ್ಟಿಕೊಳ್ಳಬೇಕೆಂಬುದು ಪುರೋಹಿತನ ಲೆಕ್ಕಾಚಾರ. ಮೇಲ್ಜಾತಿಯ ಕೆಲವರ ಸಹಾಯದಿಂದ ಕೃಷ್ಣಪ್ಪ ಪ್ರತಿಷ್ಠಿತ ವ್ಯಕ್ತಿಯಾಗುತ್ತಾನೆ. ಇಲ್ಲಿ ಬ್ರಾಹ್ಮಣ ಮತ್ತು ಶೂದ್ರ ಪಾತ್ರಗಳ ಅನುಸಂಧಾನವಿದ್ದರೂ ಕಾದಂಬರಿಯಲ್ಲಿ ದುಷ್ಟ ಪಾತ್ರವಾಗಿರುವ ನರಸಿಂಹ ಭಟ್ಟನು ಎಲ್ಲರೊಂದಿಗೂ ಅಮಾನವೀಯತೆಯಿಂದ ವರ್ತಿಸುತ್ತಾನೆ ಇಲ್ಲಿ ಪುರೋಹಿತನು ಶೂದ್ರನನ್ನು ಮಾನವೀಯತೆಯಿಂದ ನೋಡಿಕೊಂಡರೆ, ನರಸಿಂಹ ಭಟ್ಟನು ತನ್ನ ಜಾತಿಯನ್ನು ದಬ್ಬಾಳಿಕೆಗೆ ಬಳಸಿಕೊಳ್ಳುತ್ತಾನೆ. ಹೀಗೆ ಜಾತಿ ಮೂಲವಾದ ಗುಣಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆ.

ಬ್ರಾಹ್ಮಣ-ಶೂದ್ರ ಸಂಬಂಧದ ಮೂಲಕ ನವೀನ ಬದುಕಿನ ಹುಡುಕಾಟವನ್ನು 'ಭವ' ಕಾದಂಬರಿಯಲ್ಲಿ ಕಾಣಬಹುದು. ಬ್ರಾಹ್ಮಣರಾದ ಶಾಸ್ತ್ರಿ, ನಾರಾಯಣತಂತ್ರಿ ಹಾಗೂ ದಿನಕರ ಬ್ರಾಹ್ಮಣ್ಯವನ್ನು ಮೀರಿ ನಡೆದುಕೊಳ್ಳುತ್ತಾರೆ. ವೇಶ್ಯೆಯರೊಂದಿಗೆ ಸಂಬಂಧ ಹೊಂದಿರುವ ಶಾಸ್ತ್ರಿ ಮತ್ತು ದಿನಕರ ತಮ್ಮ ಹೆಂಡತಿಯರ ಬಗೆಗೆ ಅನುಮಾನಪಡುತ್ತಾರೆ. ಬ್ರಾಹ್ಮಣಳಾದ ಮಡಿವಂತ ಹೆಂಗಸು ಸೀತಮ್ಮ ಶೂದ್ರರೊಡನೆ ಆತ್ಮೀಯವಾಗಿ

[illegible]

[illegible]

[illegible]

[illegible]

ನಡೆದುಕೊಳ್ಳುವ ರೀತಿಯಿಂದ ಅವಳಲ್ಲಿ ಮಾನವೀಯತೆಯ ಗುಣಗಳಿವೆ ಎಂಬುದು ಅರ್ಥವಾಗುತ್ತದೆ. ಮಡಿ ಮುಸುರೆಗಳಲ್ಲಿ ನಿಷ್ಠವಾದ ಸೀತಮ್ಮ ಚಂದ್ರಪ್ಪನಿಗಾಗಲೀ, ಗಂಗೂಬಾಯಿಗಾಗಲೀ ಅವಳ ಮಗ ಪ್ರಸಾದನಿಗಾಗಲೀ ಮನೆಯ ಒಳಗೆ ಬಿಡಿಸರು; ಆದರೆ ಏನಾದರೂ ತಿನ್ನಲು ಕೊಡದೆಯೂ ಉಪಚಾರ ಮಾಡದೆಯೂ ಕಷ್ಟ ಸುಖ ಕೇಳದೆಯೂ ಎಂದೆಂದೂ ಅವರನ್ನು ಹಿಂದೆ ಕಳಿಸರು. ನಾರಾಯಣತಂತ್ರಿಗೆ ಗಂಗೂಬಾಯಿಯೊಡನೆ ಅನೈತಿಕ ಸಂಬಂಧವಿದೆ ಎಂಬುದು ತಿಳಿದಾಗಲೂ ಸೀತಮ್ಮನಿಗೆ ತನ್ನ ಮಗನ ಮೇಲಿರುವ ಪ್ರೀತಿಯಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ. ಯಾರೂ ಆಸಕ್ತಿವಹಿಸಿ ಮಾತನಾಡಿಸದ ಶೂದ್ರನಾದ ಚಂದ್ರಪ್ಪನನ್ನು ಆಸಕ್ತಿಯಿಂದ ಮಾತನಾಡಿಸುವ ಸೀತಮ್ಮ ಅವನನ್ನು ತನ್ನ ಮಿತಿಯಲ್ಲಿಯೇ ಮುಟ್ಟಿ ಸಂತೈಸುತ್ತಾಳೆ.

ಶಾಸ್ತ್ರಿಯು ಬೊಂಬಾಯಿಯಿಂದ ಕರೆದುಕೊಂಡು ಬಂದಿರುವ ರಾಧೆಯು ವೇಶ್ಯೆಯಾದರೂ ಮಾನವೀಯ ಗುಣದಿಂದ ಎಲ್ಲರ ಮೆಚ್ಚುಗೆಗೆ ಪಾತ್ರಳಾಗಿದ್ದಳು. ಆಸ್ತಿಗೆ ಆಸೆ ಪಡದ ರಾಧೆಯು ಅಸೂಯೆ ಪಡದೆ ಶಾಸ್ತ್ರಿಗೆ ಮದುವೆ ಮಾಡಿಸುತ್ತಾಳೆ. ಶಾಸ್ತ್ರಿ ಕುಟುಂಬದ ಕಷ್ಟ ಸುಖಗಳನ್ನೆಲ್ಲಾ ಸಮಾನವಾಗಿ ಸ್ವೀಕರಿಸುತ್ತಾಳೆ. ಶಾಸ್ತ್ರಿಗಳು ಅವರ ಅನುಭವದಲ್ಲಿ ರಾಧೆಯಂತಹ ಇನ್ನೊಂದು ಜೀವವನ್ನು ಕಂಡಿರಲಿಲ್ಲ. ಅವಳಿಗೆ ಆಸೆ ಇಲ್ಲವೆಂದಲ್ಲ, ಆದರೆ ಅವಳ ಆಸೆ ಸಂಸಾರದ ಮಿತಿಯಲ್ಲಿತ್ತು. ಗಂಜಿಗೆ ತೆಂಗಿನ ಹಾಲು, ಮಾವಿನ ಮಿಡಿಯ ಉಪ್ಪಿನ ಕಾಯಿಯು ಸಿಕ್ಕಂತಾಯಿತಲ್ಲ ಎಂದೇ ಅವಳಿಗೆ ಸಂತೋಷ.

ಇಲ್ಲಿ ಬ್ರಾಹ್ಮಣ-ಶೂದ್ರ ಪಾತ್ರಗಳ ನಡುವೆ ಅನುಸಂಧಾನವಿದೆ. ಸೀತಮ್ಮ-ರಾಧಾ ತಮ್ಮ ಜಾತಿಯ ಇತಿಮಿತಿಯಲ್ಲಿಯೇ ಮಾನವೀಯತೆಯನ್ನು ಮೆರೆದಿದ್ದಾರೆ. ಕಾದಂಬರಿಯೊಳಗೆ ಜಾತಿಗಿಂತ ಮಾನವೀಯತೆಯು ಹೆಚ್ಚಾಗಿ ಕಂಡುಬರುತ್ತದೆ. ವೇಶ್ಯೆಯಾದ ರಾಧೆಯು ತನ್ನ ಸಂಗಾತಿಯಾಗಿದ್ದ ಶಾಸ್ತ್ರಿಯು ಅವನ ಕುಲದವಳನ್ನೇ ಸಾಂಪ್ರದಾಯಿಕವಾಗಿ ಮದುವೆಯಾಗಲೆಂದು ಬಯಸುತ್ತಾಳೆ. ಶಾಸ್ತ್ರಿಯ ಮದುವೆಯ ನಂತರವೂ ಅವನ ಕುಟುಂಬದವರೊಂದಿಗೆ ರಾಧೆಯು ಅನ್ಯೋನ್ಯವಾಗಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಇಲ್ಲಿನ ಪಾತ್ರಗಳು ತಮ್ಮ ಜಾತಿಯ ಗುಣಗಳನ್ನು ಮೀರಿ ಮಾನಸಿಕ ಸಂಘರ್ಷವನ್ನು ಎದುರಿಸಿದರೂ ಬ್ರಾಹ್ಮಣ ಶೂದ್ರ ಸಂಬಂಧಗಳು ಅನುಸಂಧಾನ ಮಾರ್ಗವನ್ನು ಹಿಡಿದಿವೆ.

ಬ್ರಾಹ್ಮಣ-ಶೂದ್ರ ಪಾತ್ರಗಳ ವೈವಿಧ್ಯವನ್ನು 'ದಿವ್ಯ' ಕಾದಂಬರಿಯಲ್ಲಿ ಕಾಣಬಹುದು. ಬ್ರಾಹ್ಮಣರಾದ ಗೌರಿ, ಗಂಗೆ, ಅಕ್ಕು ಹಾಗೂ ಕೇಶವ ಶೂದ್ರರೊಡನೆ ಹೊಂದಿಕೊಂಡು ಬದುಕುವ ರೀತಿಯಿಂದ ಜಾತಿಗಿಂತ ಮಾನವೀಯತೆ ಮುಖ್ಯ ಎನ್ನುವುದನ್ನು ಪ್ರತಿಪಾದಿಸಲಾಗಿದೆ. ಅನಾಥ ಮಗುವೊಂದನ್ನು ಸಾಕಲು ಮುಂದಾಗುವ ಅಕ್ಕು ಮಡಿವಂತ ಹೆಂಗಸಾದರೂ ಮಾನವೀಯ ಗುಣಗಳನ್ನು ಮೈಗೂಡಿಸಿಕೊಂಡಿದ್ದಾಳೆ. ಗೌರಿಗೆ ತನ್ನ ಮನೆಯಲ್ಲಿ ಕೆಲಸ ಮಾಡುವ ಶೂದ್ರನಾದ ಕರಿಯನು ಶ್ಯಾಮಲ ವರ್ಣದ ಕೃಷ್ಣನಾಗಿ ಗೋಚರಿಸುತ್ತಾನೆ. ಬ್ರಾಹ್ಮಣ ಗಣಪಯ್ಯನ ವಿಧವೆ ಮಗಳು ಸರಸ್ವತಿ ಶೂದ್ರನಾದ ದುರುಗಪ್ಪ ಶಿಕ್ಷಕನನ್ನು ಪ್ರೀತಿಸುತ್ತಾಳೆ. ಶ್ರೀಮಂತ ಬ್ರಾಹ್ಮಣ ಮಂಜಯ್ಯನ ಮಗಳು ವಿಮಲಾ ಅನ್ಯ ಜಾತಿಯವನಾದ ಮೈಕಲ್‌ನನ್ನು ಪ್ರೀತಿಸುತ್ತಾಳೆ.

ಅನಂತಮೂರ್ತಿಯವರು ಸೃಷ್ಟಿಸುವ ಬ್ರಾಹ್ಮಣ ಪಾತ್ರಗಳು ಪ್ರಗತಿಪರ ಚಿಂತನೆಯತ್ತ ಮುಖ ಮಾಡಿದಂತೆನಿಸುತ್ತವೆ. ಆದರೆ ಪುರೋಹಿತಶಾಹಿ ಮೌಲ್ಯಗಳು ಅವರನ್ನು ಹಿಂದಕ್ಕೆ ಸೆಳೆದಂತೆನಿಸಿವೆ. ಈ ರೀತಿಯ

ವೈರುಧ್ಯಗಳಿಂದಾಗಿಯೇ ಪಾತ್ರಗಳು ಜೀವ ಪಡೆದುಕೊಳ್ಳುತ್ತವೆ. ಹಾಗಾಗಿಯೇ ಈ ಪಾತ್ರಗಳು ಹೆಚ್ಚು ಅಂತರ್ಮುಖಿಗಳಾಗಿದ್ದು, ಸಂಕೀರ್ಣವೂ ಆಗುತ್ತವೆ. ಇಲ್ಲಿನ ಶೂದ್ರ ಪಾತ್ರಗಳು ಪಾಪಪ್ರಜ್ಞೆಗೆ ಬಲಿಕೆಯಾಗಿದ್ದು ಕೊಲೆಯಾಗುತ್ತವೆ. ಅನಕ್ಷರಸ್ಥ ಶೂದ್ರ ಕರಿಯನಿಗೂ ವಿದ್ಯಾವಂತ ಶೂದ್ರ ದುರುಗನಿಗೂ ವ್ಯತ್ಯಾಸವಿಲ್ಲ. ಒಬ್ಬ ಶೂದ್ರ ಇನ್ನೊಬ್ಬ ಶೂದ್ರನಿಂದ ಕೊಲೆಯಾದರೆ, ಇನ್ನೊಬ್ಬ ಶೂದ್ರ ಬ್ರಾಹ್ಮಣನೊಬ್ಬನಿಂದ ಕೊಲೆಯಾಗುತ್ತಾನೆ. ಇಲ್ಲಿನ ಶೂದ್ರ ಪಾತ್ರಗಳು ಸ್ವಾತಂತ್ರ್ಯ ಪೂರ್ವದ ಗಡಿಯಲ್ಲಿ ಉಳಿದಿವೆ.

ಪ್ರಶ್ನೆ , ಕ್ಲಿಪ್ ಜಾಯಿಂಟ್ , ಭಾರತೀಪುರ ದಂತಹ ಬರವಣಿಗೆಗಳು ಜೀವನದ ಬಗ್ಗೆ ಋಣಾತ್ಮಕ ಧೋರಣೆಯನ್ನು ಮಾತ್ರ ಹೊಂದಿವೆ. ಇದಕ್ಕೆ ಉದಾಹರಣೆಯಾಗಿ ಈ ಲೇಖಕರಿಗೆ ಬಹು ಪ್ರಿಯವಾದ ಬ್ರಾಹ್ಮಣ, ಶೂದ್ರ ಪಾತ್ರಗಳ ವಿವರಣೆಯನ್ನು ಕೂಡ ಗಮನಿಸಬಹುದು. ಬ್ರಾಹ್ಮಣರ ನೀರಸ ಜೀವನಕ್ಕೆ ಹೋಲಿಸಲೆಂದು ಅವರ ಇತರ ಬರವಣಿಗೆಗಳಲ್ಲಿ ಶೂದ್ರ ಪಾತ್ರಗಳಿಗೆ ದೊರಕುವ ಸಾಂಕೇತಿಕ ಅಸ್ತಿತ್ವಕ್ಕಿಂತ ಮೊದಲನೆ ವರ್ಗದ ಬರವಣಿಗೆಗಳಲ್ಲಿ ಆ ಪಾತ್ರಗಳಿಗೂ ಇತರ ಜಾತಿ ವರ್ಗಗಳಿಗೂ ಸೇರಿದ ಪಾತ್ರಗಳಂತೆ ಅಸ್ತಿತ್ವದ ಬಿಕ್ಕಟ್ಟು ನೈತಿಕ ಬಿಕ್ಕಟ್ಟುಗಳು ಇರುವುದನ್ನು ನೋಡಬಹುದು.

ಸಂಸ್ಕಾರ ಕಾದಂಬರಿಯಲ್ಲಿ ಒಂದುಕಡೆ ಪ್ರಾಣೇಶಾಚಾರ್ಯ ಆಚಾರನಿಷ್ಠ ಬ್ರಾಹ್ಮಣರ ಸಮಾಜದ ಮುಖ್ಯಸ್ಥನಾಗಿದ್ದಾನೆ. ಕುಟಿಲ ಬುದ್ಧಿಯ ಗರುಡಾಚಾರ್ಯ, ಲಕ್ಷ್ಮಣಾಚಾರ್ಯ ಹಾಗೂ ದಾಸಾಚಾರ್ಯ ಆತ್ಮದ್ರೋಹಿಗಳಾಗಿದ್ದಾರೆ. ಇನ್ನೊಂದುಕಡೆ ನಾರಣಪ್ಪ, ಶ್ರೀಪತಿ, ಗಣೇಶ, ಮಂಜುನಾಥ ಮೊದಲಾದವರು ಬ್ರಾಹ್ಮಣ್ಯ ಬಿಟ್ಟು ಹೊಸ ರೀತಿಯ ಜೀವನ ಮಾಡುತ್ತಿದ್ದಾರೆ. ಮತ್ತೊಂದು ಕಡೆ ಶೂದ್ರ ಸಮಾಜವಿದೆ. ಇಲ್ಲಿ ಪ್ರಾಣೇಶಾಚಾರ್ಯನ ಜೊತೆಗೆ ಸಂಪ್ರದಾಯದಿಂದ ಜಡವಾದ ಬ್ರಾಹ್ಮಣ ಸಮಾಜವು ಹಳೆಯದನ್ನು ಬಿಟ್ಟು ಹೊಸರೂಪ ಪಡೆಯುವ ಸನ್ನಾಹದಲ್ಲಿದೆ. ಭಾರತೀಪುರದಲ್ಲಿ ಹೊಸರೂಪ ಪಡೆಯುವ ಸಂಕಟದಲ್ಲಿರುವುದು ಜಗನ್ನಾಥ ಮಾತ್ರವೇ ಅಲ್ಲ, ಹೊಲೆಯರು, ಅವರ ದೇವಸ್ಥಾನದ ಪ್ರವೇಶದ ಮೂಲಕ ತಮ್ಮ ಸ್ವಾತಂತ್ರ್ಯದ ಮತ್ತು ಮಾನವೀಯತೆಯ ಅರ್ಥ ಹಿಗ್ಗಿಸಲಿರುವ ಜನತೆ, ಹಾಗೂ ತಂದೆಯ ದಬ್ಬಾಳಿಕೆಯ ವಿರುದ್ಧ ಎದ್ದು ನಿಂತಿರುವ ಗಣೇಶ. ಈ ಗಣೇಶ ಪ್ರಕೃತಿಯ ನಾಣಿಯ ಪ್ರತಿಭಟನೆಯ ಪ್ರತಿನಿಧಿ, ಇವನೇ ನೀಲಕಂಠ ಸ್ವಾಮಿಯಂಥ ಯಡಬಿಡಂಗಿ ರಾಜಕಾರಣಿ, ಕಾಮರೂಪಿಯ ಶಂಕರಬಾಬು ಅವಸ್ಥೆಯಲ್ಲಿ ಹೊಸರೂಪ ಪಡೆಯಲವಣಿಸುವುದು ಕೃಷ್ಣಪ್ಪ ಮಾತ್ರವಲ್ಲ ಇಡೀ ಸಮಾಜ ಭವದಲ್ಲಿ ಹೊಸರೂಪ ಪಡೆಯಲು ಹವಣಿಸುವ ವ್ಯಕ್ತಿಗಳೆಂದರೆ ದಿನಕರ, ವಿಶ್ವನಾಥ ಶಾಸ್ತ್ರಿ, ಪ್ರಸಾದ ಮತ್ತು ನಾರಾಯಣ.

ಅನಂತಮೂರ್ತಿಯವರ ಕಥಾ ಸಾಹಿತ್ಯದಲ್ಲಿ ಬ್ರಾಹ್ಮಣ ಹಾಗೂ ಶೂದ್ರ ಪರಿಸರದ ಅನೇಕ ವಿಚಾರಗಳಿವೆ. ಮಡಿವಂತಿಕೆಯನ್ನು ಪುರಸ್ಕರಿಸುವ ಮೇಲ್ವರ್ಗದವರು ಒಂದು ಕಡೆಯಾದರೆ, ಪ್ರಕೃತಿ ಸಹಜ ಆಸೆಗಳನ್ನು ಸಹಜವಾಗಿ ಸ್ವೀಕರಿಸುವ ಕೆಳವರ್ಗದವರು ಇನ್ನೊಂದು ಕಡೆ. ಅನಂತಮೂರ್ತಿಯವರ ಸಾಹಿತ್ಯದ ಪರಿಸರ ಹೆಚ್ಚಾಗಿ ಬ್ರಾಹ್ಮಣ ಸಮಾಜವಾಗಿದೆ. ಇದಕ್ಕೆ ಕಾರಣ ಅವರು ಅದೇ ಸಮಾಜದಲ್ಲಿ ಹುಟ್ಟಿ ಬೆಳೆದವರು. ಜನ್ಯ ಅನುಭವ ಮತ್ತು ಪಡೆದ ಅನುಭವ ಈ ಎರಡರ ಮುಖಾಮುಖಿಯೇ ಅವರ ಒಟ್ಟು ಸಾಹಿತ್ಯದ ರಚನೆಯಾಗಿದೆ. ಜಾತೀಯತೆಯಿಂದ ಜಡ್ಡುಗಟ್ಟಿದ ಸಮಾಜದಲ್ಲಿ ಅನಿವಾರ್ಯವಾದ ಜೀವನಾನುಭವದ ಒಳಗು-ಹೊರಗುಗಳನ್ನು ಒಟ್ಟಿಗೆ ಬೆಸೆಯುವ ಪ್ರಯತ್ನ ಇಲ್ಲಿದೆ. ಸಾಮಾಜಿಕ ಶಿಷ್ಟಾಚಾರಗಳನ್ನು ಹಾಗೂ ಸಂಕುಚಿತ ನೈತಿಕ ಮೌಲ್ಯಗಳನ್ನು ಧಿಕ್ಕರಿಸುವ ಲೇಖಕರ ಪ್ರಯತ್ನವು ಪರಿಣಾಮಕಾರಿಯಾದುದು. ಶಿಕ್ಷಿತ ಮಂದಿಯಲ್ಲಿ ಬುದ್ಧಿಶಕ್ತಿಯಿದ್ದು ಮಣ್ಣಿನ ಸಂಪರ್ಕದಿಂದ ಒದಗಿ ಬರುವ ಪ್ರಕೃತಿಯ ಪ್ರೇರಣೆ ಇಲ್ಲ. ಅಶಿಕ್ಷಿತ ಜನರಲ್ಲಿ ಮಣ್ಣಿನ ವಾಸನೆಯಿದ್ದು ವಿದ್ಯೆ

ಹಾಗೂ ಬುದ್ಧಿಶಕ್ತಿಯ ಕೊರತೆಯಿದೆ. ಅನಂತಮೂರ್ತಿಯವರು ಬ್ರಾಹ್ಮಣ ಎಂಬ ಶಬ್ದವನ್ನು ಶಿಷ್ಟತೆಯ ಸಂಕೇತವಾಗಿಯೂ ಶೂದ್ರ ಎಂಬ ಶಬ್ದವನ್ನು ಪ್ರಾಕೃತ ಪ್ರವೃತ್ತಿಗಳಿಗೆ ಸಂಕೇತವಾಗಿಯೂ ಬಳಸುತ್ತಾರೆ. ಸಾಮಾಜಿಕ ವ್ಯವಸ್ಥೆಯಲ್ಲಿ ಬೇರೂರಿರುವ ಜಾತಿವ್ಯವಸ್ಥೆಗೆ ಪೋಷಕವಾಗುವಂತೆ ಬ್ರಾಹ್ಮಣ-ಶೂದ್ರ ದ್ವಂದ್ವಗಳನ್ನು ಕಥಾ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿ ಹೆಣೆದಿದ್ದಾರೆ.

ಇಲ್ಲಿನ ಕತೆಗಳಲ್ಲಿ ವ್ಯಕ್ತವಾಗಿರುವ ಜಾತಿಯ ವಿವರಗಳು ಅನೇಕ ಹೊಸ ವಿಚಾರಗಳನ್ನು ಬಿಂಬಿಸುತ್ತವೆ. ಬ್ರಾಹ್ಮಣ ಸಮಾಜದಲ್ಲಿನ ಕಟ್ಟುಪಾಡುಗಳನ್ನು, ಮೌಢ್ಯತೆಯನ್ನು ಪ್ರಶ್ನಿಸುವ ಮಾದರಿಯಲ್ಲಿ ಕೆಲವೊಂದು ಪಾತ್ರಗಳಿವೆ. ಕಟ್ಟುಪಾಡುಗಳಿಂದ ಬೇಸತ್ತು ಅವನ್ನು ಮೀರುವ ವ್ಯಕ್ತಿಗಳು ಮತ್ತು ಮೀರುವಾಗ ಅವರು ಎದುರಿಸುವ ಗೊಂದಲಗಳ ಚಿತ್ರಣವಿದೆ. ಜಾತಿಯನ್ನು ದುರುಪಯೋಗ ಪಡಿಸಿಕೊಳ್ಳುವ ಪಾತ್ರಗಳು, ಮಾನವೀಯ ಮೌಲ್ಯಗಳನ್ನು ಮೆರೆಯುವ ಪಾತ್ರಗಳು, ಪಶ್ಚಾತ್ತಾಪ ಪಡುವವರು ಇಂತಹ ಪಾತ್ರಗಳ ಮೂಲಕ ಜಾತಿಯೊಳಗೆ ಇರಬಹುದಾದ ಒಳಿತು ಮತ್ತು ಕೆಡುಕುಗಳು ವಿಶ್ಲೇಷಿಸಲ್ಪಟ್ಟಿವೆ. ಇಲ್ಲಿನ ಪಾತ್ರಗಳಲ್ಲಿ ಕೆಲವರು ಜಾತಿಯ ಕಾರಣಕ್ಕಾಗಿ ಒಳ್ಳೆಯತನ ಮತ್ತು ಮಾನವೀಯತೆಗಳನ್ನು ಮೈಗೂಡಿಸಿಕೊಂಡಿದ್ದರೆ, ಇನ್ನು ಕೆಲವರು ಅದೇ ಜಾತಿಯನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ. ಬ್ರಾಹ್ಮಣ ಸಮಾಜದವರು ಬೇರೆ ಜಾತಿಯವರೊಡನೆ ಮದುವೆಯಾಗುವ ವ್ಯಕ್ತಿಗಳು, ಬದಲಾದ ಮನೋಧರ್ಮಕ್ಕೆ ತಕ್ಕಂತೆ ವರ್ತಿಸುವ ವ್ಯಕ್ತಿಗಳು, ತಾಕಲಾಟ ಎದುರಿಸುವ ವ್ಯಕ್ತಿಗಳು, ಅನುಸಂಧಾನ, ಸಂಘರ್ಷಕ್ಕೊಳಗಾಗುವವರು – ಹೀಗೆ ಎಲ್ಲ ಬಗೆಯ ವ್ಯಕ್ತಿಗಳೂ ಇಲ್ಲಿ ಬರುತ್ತಾರೆ.

೨.೨ ಹೆಣ್ಣು ಮತ್ತು ಗಂಡು

ಹೆಣ್ಣು ಮತ್ತು ಗಂಡು ಎಂಬ ವ್ಯಕ್ತಿಭೇದ ಪರಿಕಲ್ಪನೆಗಳನ್ನು ಕನ್ನಡ ಸಾಹಿತ್ಯ ಕಂಡ ದೃಷ್ಟಿಯು ವಿಭಿನ್ನ ನೆಲೆಯದಾಗಿದೆ. ಪ್ರಾಚೀನ ಕಾಲದಿಂದಲೂ ಹೆಣ್ಣು ಕಾವ್ಯ ಕನ್ನಿಕೆಯಾಗಿ, ಭೋಗವಸ್ತುವಾಗಿ ಚಿತ್ರಿಸಲ್ಪಟ್ಟಿದ್ದಾಳೆ. ಪಾಶ್ಚಾತ್ಯ ಪ್ರೇರಣೆಯನ್ನು ಪಡೆದ ಭಾರತೀಯ ಲೇಖಕರು ಹೆಣ್ಣನ್ನು ಸ್ತ್ರೀವಾದಿ ನೆಲೆಯಲ್ಲಿ ಹೆಚ್ಚು ಪರಿಭಾವಿಸತೊಡಗಿದರು. ಅದರಲ್ಲಿಯೂ ಹೊಸಗನ್ನಡ ಅರುಣೋದಯದ ಸಂದರ್ಭದಲ್ಲಿ ನವೋದಯ ಪಂಥದವರು ಹೆಣ್ಣನ್ನು ಆರಾಧನಾ ನೆಲೆಯ ಮೂಲಕ ರೊಂಮ್ಯಾಂಟಿಕ್ ಆಗಿ ಚಿತ್ರಿಸಿದರು. ಪ್ರಗತಿಶೀಲ ಪಂಥದ ಲೇಖಕರು ಹೆಣ್ಣನ್ನು ಒಂದು ಸಮಾಜದ ನೆಲೆಯಿಂದ ಅವಳ ವಿಭಿನ್ನ ಚಿತ್ರಣಗಳನ್ನು ನೀಡತೊಡಗಿದರು. ಮಹಿಳಾ ಬರಹಗಾರ್ತಿಯರು ತಮ್ಮದೇ ಆದ ಹಲವಾರು ಸಮಸ್ಯೆಗಳನ್ನು ಸ್ತ್ರೀಕೇಂದ್ರಿತ ಸಾಹಿತ್ಯದಲ್ಲಿ ವಿವರಿಸತೊಡಗಿದರು. ನವ್ಯರು ಹೆಣ್ಣನ್ನು ನಿಷ್ಠುರ ಹಾಗೂ ಆತ್ಮವಿಮರ್ಶಾತ್ಮಕ ದೃಷ್ಟಿಯಿಂದ ಕಂಡರು.

ಅನಂತಮೂರ್ತಿಯವರ ಕಥಾ ಸಾಹಿತ್ಯದಲ್ಲಿ ಬರುವ ಸ್ತ್ರೀ ಪಾತ್ರಗಳೂ ಪುರುಷ ದೃಷ್ಟಿಕೋನದಿಂದಲೇ ಮೈದಾಳಿದಂತಿದೆ. "ಸಮಾಜ ತಾನಾಗಿಯೇ ಕಟ್ಟಿಕೊಂಡ ವಿವಾಹ ಎನ್ನುವ ಸಂಸ್ಥೆ ಗಂಡು-ಹೆಣ್ಣುಗಳ ಸಂಬಂಧಗಳನ್ನು ಯಾವ ರೀತಿ ಪ್ರಭಾವಿಸುತ್ತಿದೆ ಎನ್ನುವುದನ್ನು ಇವರ ಕತೆಗಳಲ್ಲಿ ಕಾಣಬಹುದಾಗಿದೆ."[೫] ಕಥಾ ಸಾಹಿತ್ಯದಲ್ಲಿ ಬರುವ ಕೆಲವು ಪುರುಷರು ಹೆಂಡತಿಯಿದ್ದರೂ ವೇಶ್ಯೆಯರೊಂದಿಗೆ ಅನೈತಿಕ ಸಂಬಂಧವನ್ನು ಹೊಂದಿದವರಾಗಿದ್ದಾರೆ. ಲೇಖಕರು ಬ್ರಾಹ್ಮಣ ಸ್ತ್ರೀಯರನ್ನು ರಸಹೀನವಾಗಿ ಚಿತ್ರಿಸಿ ಶೂದ್ರ ಸ್ತ್ರೀಯರನ್ನು ವರ್ಣನಾತ್ಮಕವಾಗಿ ಚಿತ್ರಿಸಿದ್ದಾರೆ.

ಒಟ್ಟು ಸಮಾಜವನ್ನು ಅನಂತಮೂರ್ತಿಯವರು ತಮ್ಮ ಕಥಾ ಸಾಹಿತ್ಯದಲ್ಲಿ ಹೆಣ್ಣು ಮತ್ತು ಗಂಡು ಎಂಬ ಪರಿಕಲ್ಪನೆಗಳಲ್ಲಿ ವ್ಯಕ್ತಿ ಕೇಂದ್ರಿತ ಸಾಮಾಜಿಕ ಸಂಸ್ಕೃತಿಯನ್ನು ರೂಪಿಸಿ ಎರಡು ನೆಲೆಗಳನ್ನು ವೈರುಧ್ಯದ ನೆಲೆಯಲ್ಲಿ ಸಂಘರ್ಷವನ್ನು ಏರ್ಪಡಿಸುತ್ತಾರೆ. ಆ ಮೂಲಕ ಸಾಂಸ್ಕೃತಿಕ ಆಯಾಮಗಳನ್ನು ವಿಭಿನ್ನವಾಗಿ ಚಿತ್ರಿಸಿದ್ದಾರೆ.ಸಂಪ್ರದಾಯಸ್ಥ ಸಮಾಜದಲ್ಲಿ ನಿಯಮವನ್ನು ಪುರುಷರು ಮೀರುವುದಕ್ಕೂ, ಸ್ತ್ರೀಯರು ಮೀರುವುದಕ್ಕೂ ಇರುವ ವ್ಯತ್ಯಾಸವನ್ನು ಇಲ್ಲಿ ಕಾಣಬಹುದು.

ಜಾತಿಯ ಕಟ್ಟುಪಾಡಿಗೆ ಹೆದರಿ ವಿಧವೆಯೊಬ್ಬಳ ಆತ್ಮಹತ್ಯೆಯಿಂದಾಗಿ ಇನ್ನೊಬ್ಬ ಯುವತಿಯು ಮದುವೆಯ ಬಗೆಗೆ ತಿರಸ್ಕಾರ ಹುಟ್ಟಲು ಕಾರಣವಾಗುವುದನ್ನು 'ಪ್ರಶ್ನೆ' ಕತೆಯಲ್ಲಿ ಕಾಣಬಹುದು. ಪಾರ್ವತಿಯು ಮೈನೆರೆಯುವ ಮುಂಚೆಯೇ ಮದುವೆಯಗಿ ಗಂಡನನ್ನು ಕಳೆದುಕೊಂಡಿರುತ್ತಾಳೆ. ವಿಧವೆಯಾದ ಅವಳು ಅನ್ಯ ಜಾತಿಯವನನ್ನು ಪ್ರೀತಿಸುತ್ತಾಳೆ. ಪಾರ್ವತಿಯನ್ನು ಸಂಪ್ರದಾಯಸ್ಥ ಬ್ರಾಹ್ಮಣರು ನೀನು ಸಕೇಶಿ, ಸ್ನಾನ ಮಾಡಿದ ನಿನ್ನ ತಲೆ ನೀರು ನೆಲಕ್ಕೆ ಬಿದ್ದರೆ ಮೈಲಿಗೆ ಎಂದು ನಿಂದಿಸುತ್ತಿದ್ದರಿಂದ ಅವಳ ಜಾತಿಯವರನ್ನು ಕಂಡರೆ ಪಾರ್ವತಿ ಬೇಸರಪಡುತ್ತಿದ್ದಳು. ಗಂಡ ಸತ್ತ ಮುಂಡೆಯರ ಜೊತೆಗೆ ಮತ್ತು ಗಂಡಸರಿಗೆ ಬಡಿಸಿಯಾದ ಮೇಲೆ ಉಸ್ಸಪ್ಪ ಎಂದು ಎರಡನೆ ಪಂಕ್ತಿಗೆ ಕೂರುವ ಹೆಂಗಸರ ಜೊತೆಗೆ ಪಾರ್ವತಿ ನೆಲೆಸಿದ್ದಳು. ದುರದೃಷ್ಟ ಹೆಣ್ಣಿನ ಹಣೆಬರಹವೇ ಹೀಗಿರಬಹುದೆಂದುಕೊಂಡಿರುತ್ತಾಳೆ. ಅನೈತಿಕವಾಗಿ ಬಸಿರಾದ ಅವಳು ಸಮಾಜದಲ್ಲಿ ತಲೆಯೆತ್ತಿ ಬದುಕಲು ಹೆದರುತ್ತಾಳೆ . ಸ್ವಲ್ಪ ದಿನ ಜ್ವರದ ಗಡ್ಡೆಯೆಂದು ಹೇಳಿಕೊಂಡು ಸುಮ್ಮನಾಗುತ್ತಾಳೆ. ಪರಿಸ್ಥಿತಿ ಕೈಮೀರುತ್ತಿದೆ ಎನ್ನಿಸಿದಾಗ ಒಂದು ದಿನ ರಾತ್ರಿ ತಂಗಿ ಶಾರದೆಗೆ ನಿಜ ಹೇಳುತ್ತಾಳೆ. ಅಕ್ಕ ದುಡುಕಿದ್ದನ್ನು ತಿಳಿದ ಶಾರದೆಯು ಅಸಹ್ಯಪಡುತ್ತಾಳೆ. ಸಾಮಾಜಿಕ ಕಟ್ಟುಪಾಡಿಗೆ ಹೆದರಿದ ಪಾರ್ವತಿಯು ಬೆಳಕುಹರಿಯುವಷ್ಟರಲ್ಲಿ ಆತ್ಮಹತ್ಯೆಯನ್ನು ಮಾಡಿಕೊಂಡಿರುತ್ತಾಳೆ.

ಸಂಪ್ರದಾಯವನ್ನು ಮೀರಿ ಸತ್ತ ಪಾರ್ವತಿಯಿಂದಾಗಿ ಶಾರದೆಗೆ ಮದುವೆಯ ಬಗೆಗೆ ತಿರಸ್ಕಾರವುಂಟಾಗುತ್ತದೆ. ನಂತರ ಶಾರದೆಗೆ ಸತ್ತ ಅಕ್ಕನ ಬಗೆಗೆ ಪಾಪ ಎನಿಸುತ್ತದೆ. ಊರಿನವರ ಬಾಯಿಗೆ ತನ್ನ ಮನೆತನದ ವಿಷಯ ಬರಬಾರದೆಂಬ ಸಾಮಾಜಿಕ ಕಟ್ಟುಪಾಡು ಹಾಗೂ ಅಕ್ಕನ ಸಾವು ಈ ಎರಡು ವಿಚಾರಗಳಲ್ಲಿ ಶಾರದೆಗೆ ದ್ವಂದ್ವವಿದೆ. ಶಾರದೆಯನ್ನು ಮದುವೆಯಾಗಲು ಇಷ್ಟಪಡುವ ರಂಗನಾಥ ಲಚ್ಚಿಯನ್ನು ದೇಹಕ್ಕೆ ಬಯಸುತ್ತಾನೆ. ಈ ದ್ವಂದ್ವವು ಅವನಲ್ಲಿನ ವೈರುಧ್ಯವನ್ನು ತೋರಿಸುತ್ತದೆ. ಜಾತಿಯ ಕಟ್ಟುಪಾಡುಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಭದ್ರವಾದ ತಳಹದಿಯನ್ನು ಹಾಕಿರುತ್ತವೆ. ಅವು ವ್ಯಕ್ತಿಯ ಮೇಲೆ ವಿಶೇಷ ಪ್ರಭಾವವನ್ನು ಬೀರುತ್ತವೆ ಎಂಬುದನ್ನು ಅನಂತಮೂರ್ತಿಯವರು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಸಾಮಾಜಿಕ ಜಾತಿಯ ಕಟ್ಟುಪಾಡುಗಳು ಹೆಣ್ಣು ಮತ್ತು ಗಂಡಿನ ನಡುವೆ ತಾರತಮ್ಯ ನೀತಿಯನ್ನು ಅನುಸರಿಸಿರುವುದನ್ನು 'ಘಟಶ್ರಾದ್ಧ' ಕತೆಯಲ್ಲಿ ಕಾಣಬಹುದು. ವಿಧವೆಯಾದ ಯಮುನಕ್ಕನದು ಪ್ರಮುಖ ಸ್ತ್ರೀ ಪಾತ್ರವಾಗಿದೆ. ಗೋದಾವರಮ್ಮನು ಯಮುನಕ್ಕನ ಅನೈತಿಕ ಸಂಬಂಧದ ವಿವರಗಳನ್ನು ಸಂಗ್ರಹಿಸಲು ಬ್ರಾಹ್ಮಣ ಹುಡುಗರನ್ನು ಪುಸಲಾಯಿಸುತ್ತಾಳೆ. ವೇದಾಧ್ಯಯನಕ್ಕಾಗಿ ಉಡುಪರ ಮನೆಗೆ ಬಂದ ಬ್ರಾಹ್ಮಣ ಹುಡುಗರು ದುಶ್ಚಟಗಳಿಗೆ ಬಲಿಯಾಗಿರುತ್ತಾರೆ. ವಿಧವೆಯಾದ ಯಮುನಕ್ಕ ಕದ್ದು ಬಸಿರಾಗಿದ್ದರೆ, ವೇದಾಧ್ಯಯನ ಮಾಡಲು ಬಂದ ಶಾಸ್ತ್ರಿ, ಗಣೇಶ ಹಾಗೂ ಇನ್ನಿತರ ಬ್ರಾಹ್ಮಣ ಹುಡುಗರು ಕದ್ದು ಬೀಡಿ ಸೇದುತ್ತಾರೆ, ಇಸ್ಪೀಟು ಆಡುತ್ತಾರೆ, ಜೊತೆಗೆ ತಮ್ಮೆಲ್ಲ ತಪ್ಪುಗಳನ್ನು ಯಾರಿಗೂ ಹೇಳಬಾರದೆಂದು ಚಿಕ್ಕವನಾದ ನಾಣಿಯನ್ನು ಪೀಡಿಸಿ

ಹೆದರಿಸುತ್ತಾರೆ. ಸಮಾಜದ ಕಟ್ಟುಪಾಡುಗಳು ಹೆಣ್ಣಾದ ಯಮುನಕ್ಕನಿಗೆ ಅನ್ವಯಿಸಿದಂತೆ ಪುರುಷರಾದ ಶಾಸ್ತ್ರಿ, ಗಣೇಶ, ಹಾಗು ಯಮುನಕ್ಕನ ಬಸಿರಿಗೆ ಕಾರಣನಾದ ಶಿಕ್ಷಕನಿಗೆ ಅನ್ವಯಿಸುವುದಿಲ್ಲ. ಯಮುನಕ್ಕ ಮಾತ್ರ ಯಮಯಾತನೆಗೆ ಗುರಿಯಾಗಿ ಜಾತಿಯಿಂದ ಬಹಿಷ್ಕಾರ ಹಾಕಿಸಿಕೊಳ್ಳುತ್ತಾಳೆ.

ಘಟಾಶ್ರಾದ್ಧಕ್ಕೆ ಒಳಗಾದ ಯಮುನಕ್ಕನನ್ನು ಉಡುಪರು ಜಾತಿಯ ಕಟ್ಟುಪಾಡನ್ನು ಮೀರಿದವಳೆಂದು ಮನೆಯಿಂದ ಹೊರಗೆ ಹಾಕುತ್ತಾರೆ. ಯಮುನಕ್ಕನ ಅನೈತಿಕ ಸಂಬಂಧವನ್ನು ಬಯಲಿಗೆ ತರುವಲ್ಲಿ ಗೋದಾವರಮ್ಮನ ಪಾತ್ರ ಪ್ರಮುಖವಾದುದು. ದಾರಿತಪ್ಪಿದ ಹೆಣ್ಣಿಗೆ ದಿಕ್ಕು ತೋರಿಸದ ಗೋದಾವರಮ್ಮ ನಿಂದನೆಯನ್ನು ಮಾಡುತ್ತಾಳೆ. ಜೊತೆಗೆ ವೃದ್ಧ ಉಡುಪರು ಚಿಕ್ಕ ಹುಡುಗಿಯನ್ನು ಮದುವೆಯಾಗುವುದು ಅಪರಾಧವೇ ಆಗಿದೆ. ಹೀಗೆ ಹೆಣ್ಣು ಗಂಡಿನ ನಡುವಿನ ಪಕ್ಷಪಾತ ಧೋರಣೆಯನ್ನು ಕಾಣಬಹುದಾಗಿದೆ.

ಯಮುನಕ್ಕ ಎಲ್ಲ ನೋವನ್ನು ಅರಗಿಸಿಕೊಡು ಬದುಕುವ ಇಚ್ಛೆಯನ್ನು ವ್ಯಕ್ತಪಡಿಸಿದರೂ ಹೆಣ್ಣಾದ್ದರಿಂದ ಸಮಾಜದ ಬಹಿಷ್ಕಾರವನ್ನು ಸ್ವೀಕರಿಸಬೇಕಾಗುತ್ತದೆ. ಗಣೇಶ, ಶಾಸ್ತ್ರಿ ಇವರೂ ಗುಪ್ತವಾಗಿ ವ್ಯವಸ್ಥೆಯನ್ನು ಮೀರಿದ್ದಾರೆ. ಪುರುಷರಾದ್ದರಿಂದ ವಿನಾಯಿತಿ ಪಡೆದಿದ್ದಾರೆ. ಯಮುನಕ್ಕನನ್ನು ಪತಿತಳನ್ನಾಗಿ ಮಾಡಿದ ಮೇಷ್ಟ್ರು ಹಾಗೂ ಎಳೆಯ ವಯಸ್ಸಿನ ಹುಡುಗಿಯನ್ನು ಮಾಡಿಕೊಳ್ಳುವ ವೃದ್ಧ ಉಡುಪರು ಇವರಿಗೂ ಪುರುಷ ವಿನಾಯಿತಿ ಇದೆ. ಇನ್ನು ವಿಧವೆಯಾದ ಗೋದಾವರಮ್ಮ ತಾನೊಬ್ಬ ಹೆಣ್ಣಾಗಿಯೂ ಇನ್ನೊಬ್ಬ ಹೆಣ್ಣಿನ ಬಗ್ಗೆ ಕಳಕಳಿಯಿಲ್ಲ. ಯಮುನಕ್ಕಳನ್ನು ಪತಿತಳನ್ನಾಗಿ ಮಾಡಿದ ಶಿಕ್ಷಕನು ಪಲಾಯನವಾದಿಯಾಗುತ್ತಾನೆ.

ಬಾಲ ಸಹಜ ಮುಗ್ಧತೆಯನ್ನು ಬಿಟ್ಟ ಶಾಸ್ತ್ರಿ, ಗಣೇಶರು ಯಮುನಕ್ಕನ ಸಂಬಂಧದ ಘಟನೆಗಳಿಗೆ ವ್ಯಂಗ್ಯವಾಗಿ ಪ್ರತಿಕ್ರಿಯಿಸುತ್ತಾರೆ. "ಬಲಾತ್ಕಾರದ ಗರ್ಭಪಾತದ ಮುಂದಿನ ಹೆಜ್ಜೆಯದ ಬಹಿಷ್ಕಾರದ ಘಟನೆಗಳಿಗೂ ಕಡೆಯಲ್ಲಿ ವೃದ್ಧರಾದ ಉಡುಪರು ಎಳೆಯವಯಸ್ಸಿನ ಹುಡುಗಿಯೊಡನೆ ಲಗ್ನ ಮಾಡಿಕೊಳ್ಳುವುದೂ, ಸಮಾಜದ ಮೂಢ ನಂಬಿಕೆಗಳನ್ನು ತೃಪ್ತಿಪಡಿಸುವ ದುರಂತ ವ್ಯಂಗ್ಯವಾಗಿದೆ". [೬] ನಾಣಿಯನ್ನು ಶಾಸ್ತ್ರಿ ಮತ್ತು ಗಣೇಶ ಚುಡಾಯಿಸುವ ಘಟನೆಗಳು ಅವನಿಗೆ ಹಿಂಸೆಯೆನಿಸುತ್ತದೆ. ಇದು ಅವನ ಬೆಳವಣಿಗೆಗೆ ಅಗತ್ಯವಾದರೂ ಕ್ರೂರ ಎನಿಸುತ್ತದೆ. ಇವರ ಸಂಬಂಧದಲ್ಲಿ ನಾಣಿಯನ್ನು ವಿಕಾರಗೊಳಿಸುವ ಅಂಶಗಳ ಜೊತೆಗೆ ಅವನನ್ನು ಪಕ್ವಗೊಳಿಸುವ ಜೀವನ ಸತ್ವಗಳೂ ಇವೆ. ನಾಣಿ ಮತ್ತು ಯಮುನಕ್ಕ ಇಬ್ಬರೂ ಒಂದು ದೃಷ್ಟಿಯಲ್ಲಿ ಮುಗ್ಧರೇ ಇಬ್ಬರ ಮುಗ್ಧತೆಯೂ ಶೋಷಣೆಗೆ ಒಳಗಾಗಿದೆ. ಯಮುನಕ್ಕ ಗರ್ಭವತಿಯಾದಾಗ ಸಂಘರ್ಷವನ್ನೆದುರಿಸುತ್ತಾಳೆ. ವೇದ ಹೇಳುವ ವೈದಿಕರು ಅವಳ ಜೀವನ ಸಮೃದ್ಧಿಯನ್ನು ನಿರಾಕರಿಸುತ್ತಾರೆ. ಅವರ ವಿರುದ್ಧನೀತಿ ಯಮುನಕ್ಕನಿಗೆ ದ್ವಂದ್ವವನ್ನುಂಟು ಮಾಡಿದೆ. ಈ ಕತೆಯಲ್ಲಿ ಅಸಹಾಯಕ ಹೆಣ್ಣಾದ ಯಮುನಕ್ಕಳನ್ನು ಪುರುಷ ಪ್ರಧಾನ ಸಮಾಜವು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡಿದೆ. ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯ ಏಕಮುಖ ಧೋರಣೆಯನ್ನು ಇಲ್ಲಿ ಕಾಣಬಹುದು.

ಹೆಣ್ಣೊಬ್ಬಳ ಜವಾಬ್ದಾರಿಯನ್ನು ಉಪೇಕ್ಷಿಸುವ ಗಂಡಿನ ಬೇಜವಬ್ದಾರಿತನವನ್ನು 'ಸೂರ್ಯನ ಕುದುರೆ' ಕತೆಯಲ್ಲಿ ಕಾಣಬಹುದು. ವೆಂಕಟಿಗನಿಗೆ ಕುಟುಂಬದ ಬಗೆಗಾಗಲೀ ಹೆಂಡತಿಯ ಬಗೆಗಾಗಲೀ ಯಾವ ಜವಾಬ್ದಾರಿಯೂ ಇಲ್ಲ. ಊರಿನ ಕಷ್ಟಸುಖಗಳಿಗೆ ಸ್ಪಂದಿಸುವಾಗ ಎಲ್ಲಿಲ್ಲದ ಆಸಕ್ತಿವಹಿಸುತ್ತಾನೆ. ಅದರಲ್ಲೂ ಜುಗ್ಗ ಶೇಷಣ್ಣನ ಬಗೆಗೆ ವಿಶೇಷ ಆಸಕ್ತಿ ವಹಿಸುತ್ತಾನೆ. ಹೆಂಡತಿಯ ಯಾವ ಮಾತನ್ನೂ ಕಿವಿಗೆ ಹಾಕಿಕೊಳ್ಳದ

ವೆಂಕಟಿಗನು ಅವಳ ಬೈಗುಳಗಳಿಂದ ತಪ್ಪಿಸಿಕೊಳ್ಳುವ ಹೊಂಚು ಹಾಕುತ್ತಾನೆಯೇ ಹೊರತು ತನ್ನ ಜವಾಬ್ದಾರಿಯನ್ನು ಅರಿತುಕೊಳ್ಳುದಿಲ್ಲ.

ಹೆಂಡತಿ ಮಕ್ಕಳ ದುಡಿಮೆಯಲ್ಲಿ ಬದುಕುವ ವೆಂಕಟನಿಗೆ ಮದುವೆಗೆ ಬಂದ ತನ್ನ ಹೆಣ್ಣುಮಕ್ಕಳ ಬಗೆಗಾಗಲೀ ಜೈಲಿಗೆ ಹೋಗುವ ಮಗನ ಬಗೆಗಾಗಲೀ ಚಿಂತೆಯಿಲ್ಲ. ತನ್ನ ಕುಟುಂಬದ ಅಸಹಾಯಕ ಸ್ಥಿತಿಯ ನಡುವೆಯೂ ಶೇಷಣ್ಣನಿಗೆ ಊಟ ಒದಗಿಸುವ ಬಗೆಗೆ ಚಿಂತಿಸುತ್ತಾನೆ. ತಂದೆಯ ಬೇಜವಾಬ್ದಾರಿಯಿಂದ ಮಗ ಮಾತು ಕೇಳದೆ ಎದುರಾಗಿದ್ದಾನೆ. ಮಕ್ಕಳ ಹಾಗೂ ಮನೆಯ ಜವಾಬ್ದಾರಿಯನ್ನು ನೋಡಿಕೊಳ್ಳುವ ಹೆಂಡತಿ ದುಡಿದುಹಾಕುತ್ತಾಳೆ. ಹೀಗೆ ಗಂಡನ ಬೇಜವಾಬ್ದಾರಿಯನ್ನು ಸಹಿಸಿದರೂ ವೆಂಕಟಿಗನಿಗೆ ಗುಹೆಯಲ್ಲಿ ಒಂಟಿಯಾಗಿ ಬದುಕುವ ಇಚ್ಛೆಯಿದೆ. ಗಂಡನ ಬೇಜವಾಬ್ದಾರಿಯನ್ನು ಹಳಿಯುವ ಹೆಣ್ಣು ಜಗಳಗಂಟಿ ಎನಿಸಿಕೊಳ್ಳಬೇಕಾಗುತ್ತದೆ. ಗಂಡನ ಬೇಜವಾಬ್ದಾರಿಯನ್ನು ತಿಳಿದೂ ಅವನನ್ನು ಅನಿವಾರ್ಯವಾಗಿ ಆರಾಧಿಸಬೇಕಾಗುತ್ತದೆ. ಇದನ್ನೇ ಸರಿಯೆಂದು ಸಮಾಜ ವ್ಯವಸ್ಥೆ ಇಲ್ಲಿಯತನಕ ಒಪ್ಪಿಕೊಂಡು ಬಂದಿದೆ. ಅವಳ ಜಗಳಗಂಟತನವನ್ನು ಗುರುತಿಸುವಾಗ ಗಂಡನ ಬೇಜವಬ್ದಾರಿಯ ಬಗ್ಗೆ ಸಾಕಷ್ಟು ತಲೆಕೆಡಿಸಿಕೊಳ್ಳುವುದಿಲ್ಲ. ಕೊನೆಗೆ ಅನಂತುವಿನ ದೃಷ್ಟಿಯಲ್ಲಿ ವೆಂಕಟಿಗನ ವ್ಯಕ್ತಿತ್ವ ವಿಶೇಷತೆಯನ್ನು ಪಡೆಯುತ್ತದೆ. ಆದರೆ ರುಕ್ಕುವನ್ನು ಜಗಳಗಂಟಿ ಎಂದು ಆರೋಪಿಸಿರುವುದಕ್ಕೆ ಸಮರ್ಥನೆ ಸಿಗುವುದಿಲ್ಲ. ಕುಟುಂಬದ ಬಗೆಗೆ ಆಸಕ್ತಿ ವಹಿಸದ ಗಂಡನನ್ನು ದೂರುವುದು ಸಹಜವೇ ಆದರೂ ಸಮಾಜದ ದೃಷ್ಟಿಯಲ್ಲಿ ಜಗಳಗಂಟತನಾವಾಗಿದೆ. ಇಲ್ಲಿ ರುಕ್ಕು ಉಪೇಕ್ಷೆಗೊಳಗಾದಂತೆ ಪ್ರಸ್ತ ಕತೆಯಲ್ಲಿ ಬೇರೊಂದು ರೀತಿಯಲ್ಲಿ ವೆಂಕಮ್ಮ, ಸೀತಕ್ಕ ಗಂಡನಿಂದ ಉಪೇಕ್ಷೆಗೊಳಗಾಗಿರುವುದನ್ನು ಗಮನಿಸಬಹುದಾಗಿದೆ.

ಜಾತಿಯ ಕಟ್ಟುಪಾಡುಗಳು ವಿಧಿಸಿದ ನಿಷೇಧಗಳಿಂದಾಗಿ ಹೆಣ್ಣೊಬ್ಬಳಿಗೆ ವೈಯಕ್ತಿಕ ಬದುಕೇ ಇಲ್ಲದಂತಾಗುವುದನ್ನು 'ಅಕ್ಕಯ್ಯ' ಕತೆಯಲ್ಲಿ ಕಾಣಬಹುದು. ಅಕ್ಕಯ್ಯನಿಗೆ ಮೈನೆರೆಯುವ ಮುಂಚೆ ಮದುವೆಯಾಗಿರುತ್ತದೆ. ಹುಬ್ಬಳ್ಳಿಯಲ್ಲಿ ಎಮ್ಮೆ ವ್ಯಾಪಾರ ಮಾಡುತ್ತಿದ್ದ ಅವಳ ಗಂಡ ಲಫಂಗನಾಗಿರುತ್ತಾನೆ. ಮದುವೆಗಿಂತ ಮೊದಲೇ ವೇಶ್ಯೆಯ ಸಂಗ ಮಾಡಿದ್ದಾನೆಂದು ತಿಳಿಯದೆ ಹಿರಿಯರು ಅಕ್ಕಯ್ಯನೊಂದಿಗೆ ಅವನ ವಿವಾಹ ಮಾಡುತ್ತಾರೆ. ಅಕ್ಕಯ್ಯನ ಗಂಡನಿಗೆ ಬಂಗಾರ, ಬೆಳ್ಳಿ, ಬೇಕು. ಹೆಂಡತಿ ಮಾತ್ರ ಬೇಡ. ಬೆಳ್ಳಿ, ಬಂಗಾರ ಇನ್ನಷ್ಟು ಬೇಕೆಂದು ಅಕ್ಕಯ್ಯನ ಬೆನ್ನಿನ ಮೇಲೆ ಮೂರು ಬರೆ ಹಾಕಿ ತವರಿಗೆ ಕಳುಹಿಸುತ್ತಾನೆ. ಇದನ್ನೇ ನೆಪ ಮಾಡಿಕೊಂಡು ತಾನೂ ತಲೆ ಮರೆಸಿಕೊಳ್ಳುತ್ತಾನೆ.

ಅಕ್ಕಯ್ಯನ ತಮ್ಮಂದಿರು ಮುಂದೊಂದು ದಿನ ಅವಳ ಗಂಡನನ್ನು ಪತ್ತೆ ಹಚ್ಚುತ್ತಾರೆ. ಪೋಲೀಸರ ಸಹಾಯದಿಂದ ಠಾಣೆಗೆ ಕರೆಸಿ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಅವನನ್ನು ಪ್ರೇರಿಸುತ್ತಾರೆ. ಶಾಸ್ತ್ರದ ಪ್ರಕಾರ ಪ್ರಸ್ತ ಮಾಡಿಕೊಂಡರೆ ದಾನ ದಕ್ಷಿಣೆ ಸ್ವೀಕರಿಸುವ ಹಕ್ಕು ಸಿಗುತ್ತದೆಂದು ಅಕ್ಕಯನನ್ನು ತನ್ನ ಹೆಂಡತಿಯೆಂದು ಒಪ್ಪಿಕೊಳ್ಳುತ್ತಾನೆ. ಕೊನೆಗೂ ಅವನು ಒಪ್ಪಿಕೊಳ್ಳುವುದು ನಿಜವಾದ ಪ್ರಾಯಶ್ಚಿತ್ತಕ್ಕಲ್ಲ.

ಜೀವನದ ಸಂಧ್ಯಾಕಾಲದಲ್ಲಿ ಪ್ರಸ್ತ ಮಾಡಿಕೊಳ್ಳಲು ಒಪ್ಪುವ ಅಕ್ಕಯ್ಯನ ಗಂಡ ಮಾವಯ್ಯ ಬಂಗಾರ ಕೊಡಲಿಲ್ಲವೆಂದು ನಿಂದಿಸುತ್ತಾನೆ. ಕೊನೆಗೂ ತನ್ನ ಸ್ವಭಾವವನ್ನು ಬಿಡದ ಅವನು ಪಶ್ಚಾತಾಪ ಪಡುವುದಿಲ್ಲ . ತನ್ನ ತಪ್ಪಿನ ಅರಿವು ಅವನಿಗಾಗುವುದಿಲ್ಲ. ಅಕ್ಕಯ್ಯನಿಗೆ ಬಾಲ್ಯ ವಿವಾಹ ನೆರವೇರಿಸಿ ಅವಳ ತಂದೆ ತನ್ನ

ಜವಾಬ್ದಾರಿಯಿಂದ ಮುಕ್ತನಾಗುತ್ತಾನೆ. ಅಕ್ಕಯ್ಯನ ತಮ್ಮಂದಿರು ಪ್ರಸ್ತ ಶಾಸ್ತ್ರ ಪೂರೈಸುವುದಕ್ಕಾಗಿ ಅವಳ ಗಂಡನನ್ನು ಹುಡುಕುತ್ತಾರೆಯೇ ಹೊರತು ಅವಳ ವೈಯಕ್ತಿಕ ಸುಖಕ್ಕಾಗಿ ಅಲ್ಲ ಎನ್ನುವುದು ಅವಳಿಗೆ ವಯಸ್ಸಾದ ಮೇಲೆ ಪ್ರಸ್ತ ನೆರವೇರಿಸುವುದರಿಂದ ತಿಳಿಯುತ್ತದೆ. ಅಕ್ಕಯ್ಯನ ಗಂಡನು ಅಕ್ಕಯ್ಯನೊಡನೆ ಪ್ರಸ್ತಕ್ಕೆ ಒಪ್ಪಿಕೊಳ್ಳುವುದು ತನಗೆ ದಾನ ದಕ್ಷಿಣೆ ಸಿಗುತ್ತದೆಂಬ ಕಾರಣಕ್ಕಾಗಿಯೇ ಹೊರತು ಅಕ್ಕಯ್ಯನ ಮೇಲಿನ ಪ್ರೀತಿಯಿಂದಲ್ಲ. ಅಕ್ಕಯ್ಯನ ಬಗ್ಗೆ ವಾತ್ಸಲ್ಯವಿರುವ ಅವಳ ತಮ್ಮ ಶ್ರೀನಿವಾಸನು ಅಕ್ಕಯ್ಯನ ಜೀವನದ ಬಗ್ಗೆ ಕಾಳಜಿ ಇದ್ದರೂ ಏನೂ ಮಾಡಲಾಗುವುದಿಲ್ಲ. ಏಕೆಂದರೆ ಅವನಿಗೆ ತಿಳುವಳಿಕೆ ಬರುವಷ್ಟರಲ್ಲಿ ಅಕ್ಕಯ್ಯನಿಗೆ ವಯಸ್ಸಾಗಿರುತ್ತದೆ. ಅಕ್ಕಯ್ಯನನ್ನು ಅವಳ ಗಂಡ ಹಿಂಸಿಸಿ ತಾನು ವೇಶ್ಯೆಯನ್ನಿಟ್ಟುಕೊಂಡಿದ್ದರೂ ಅವನಿಗೆ ಅಕ್ಕಯ್ಯನ ಕುಟುಂಬದವರಿಂದ ಏನೂ ಮಾಡಲಾಗುವುದಿಲ್ಲ. ಅಕ್ಕಯ್ಯನ ಜೀವನ ಕ್ರಮದಿಂದ ಬೇಸತ್ತ ಶ್ರೀನಿವಾಸನು ರೂಪಿಸಿಕೊಂಡ ಜೀವನ ಕ್ರಮವು ತನ್ನ ಜಾತಿಗೆ ವಿರುದ್ಧವಾದರೂ ಅವನ ವಿರುದ್ಧ ಅಣ್ಣಂದಿರು ಮಾಡುವ ಪ್ರತಿಭಟನೆ ಅವನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

ವ್ಯಕ್ತಿಯೊಬ್ಬನು ತೆಗೆದುಕೊಳ್ಳುವ ನಿರ್ಧಾರದಲ್ಲಿ ತಾರತಮ್ಯ ನೀತಿಯನ್ನು ಅನುಸರಿಸಿರುವುದನ್ನು 'ಹುಲಿಯ ಹೆಂಗರುಳು' ಕತೆಯಲ್ಲಿ ಕಾಣಬಹುದು. ಒಂದು ಪ್ರಾಣಿಯನ್ನು ಹಿಂಸಿಸದ ಸಿದ್ಧನದು ಹೆಂಗರುಳು. ತನ್ನ ಹೆಂಡತಿಗೆ ಸೀನಸೆಟ್ಟಿಯೊಂದಿಗೆ ಅನೈತಿಕ ಸಂಬಂಧವಿದೆ ಎಂದು ಸಿದ್ಧನಿಗೆ ತಿಳಿಯುತ್ತದೆ. ಅಂದಿನಿಂದ ಹುಚ್ಚನಂತೆ ಅಲೆಯುತ್ತಾನೆ. ಬದುಕಿನ ಬಗ್ಗೆ ಜಿಗುಪ್ಸೆ ಹೊಂದುತ್ತಾನೆ. ಹೆಂಡತಿಯನ್ನು ಅನೈತಿಕ ಸಂಬಂಧದ ಬಗ್ಗೆ ವಿಚಾರಿಸುತ್ತಾನೆ. ಅದಕ್ಕೆ ಅವಳು ನೀನೇ ಮನೆ ಬಿಟ್ಟುಹೋಗು ನನ್ನಿಷ್ಟದಂತೆ ನಾನಿರುತ್ತೇನೆ ಎನ್ನುತ್ತಾಳೆ. ಕೊಪದಿಂದ ಆವೇಶಕ್ಕೊಳಗಾದ ಸಿದ್ಧನು ಹೆಂಡತಿಯನ್ನು ಕತ್ತಿಯಿಂದ ಕೊಲ್ಲುತ್ತಾನೆ.

ಸಿದ್ಧನ ಊರಿನಲ್ಲಿ ಭಾರಿ ಮಳೆಯಿಂದಾಗಿ ಪ್ರವಾಹ ಬಂದಿರುತ್ತದೆ. ಪ್ರವಾಹದಲ್ಲಿ ವ್ಯಕ್ತಿಯೊಬ್ಬನು ಸಿಕ್ಕಿಬಿದ್ದಿರುತ್ತಾನೆ. ಅವನನ್ನು ಬದುಕಿಸಲು ಸಿದ್ಧ ಮುಂದಾಗುತ್ತಾನೆ. ಭೋರ್ಗರೆಯುವ ಮಳೆ, ಪ್ರವಾಹವನ್ನು ಎದುರುಹಾಕಿಕೊಂಡು ತನ್ನ ಜೀವನದ ಬಗ್ಗೆ ಆಸೆಯಿಲ್ಲದೆ ದೋಣಿಗೆ ಸಿದ್ಧ ಹುಟ್ಟು ಹಾಕುತ್ತಾನೆ. ಹತ್ತಿರ ಹೋದಾಗ ಆ ವ್ಯಕ್ತಿ ಸೀನಸೆಟ್ಟಿ ಎಂಬುದು ತಿಳಿಯುತ್ತದೆ. ದೇವರೇ ಅವನಿಗೆ ಶಿಕ್ಷೆ ಕೊಟ್ಟರೂ ನಾನು ಬದುಕಿಸಲು ಬಂದೆನಲ್ಲಾ ಎಂದು ಸಿದ್ಧ ಒಂದು ಕ್ಷಣ ಯೋಚಿಸುತ್ತಾನೆ. ಹೆಂಡತಿಯನ್ನು ಇವನಿಗಾಗಿ ಕೊಂದು ಇವನನ್ನು ಬದುಕಿಸಬೇಕಾಯಿತಲ್ಲ ಎಂದು ಪರಿತಪಿಸುತ್ತಾನೆ. ಮಾನವೀಯ ದೃಷ್ಟಿಯಿಂದ ಅವನನ್ನು ರಕ್ಷಿಸುತ್ತಾನೆ.

ಸಿದ್ಧನು ಆವೇಶದಲ್ಲಿ ಹೆಂಡತಿಯನ್ನು ಕೊಲ್ಲುತ್ತಾನಾದರೂ ಹೆಣ್ಣಾದ್ದರಿಂದ ಅವಳ ತಪ್ಪಿಗೆ ಇಲ್ಲಿ ಕ್ಷಮೆ ಸಿಗುವುದಿಲ್ಲ. ಸೀನಶೆಟ್ಟಿಯು ಗಂಡಾದ್ದರಿಂದ ಮಾನವೀಯತೆಯ ನೆಪದಿಂದ ಸಿದ್ಧನಿಂದ ರಕ್ಷಿಸಲ್ಪಡುತ್ತಾನೆ. ಹೀಗಾಗಿ ಸಿದ್ಧನು ಮಾನಸಿಕ ಸಂಘರ್ಷವನ್ನು ಅನಿವಾರ್ಯವಾಗಿ ಎದುರಿಸುತ್ತಾನೆ.

ವೈವಾಹಿಕ ಸಂಬಂಧಗಳ ನಡುವಿನ ಸಂಘರ್ಷವನ್ನು 'ಪ್ರಸ್ತ' ಕತೆಯಲ್ಲಿ ಕಾಣಬಹುದು. ಪ್ರವೀರಾಚಾರ್ಯನಿಗೆ ಎರಡನೇ ಹೆಂಡತಿ ವೆಂಕಮ್ಮನ ಬಗ್ಗೆ ಅಸಡ್ಡೆಯಿದೆ. ಅವನಿಗೆ ಜ್ವರ ಬಂದಾಗಲೂ ಹೆಂಡತಿಯು ಹತ್ತಿರ ಬಂದರೆ ರೇಗುತ್ತಾನೆ. ಆದರೆ ಬಸುರೂರಿನ ವೇಶ್ಯೆಯನ್ನು ತುಂಬಾ ಹಚ್ಚಿಕೊಂಡಿರುತ್ತಾನೆ. ವೆಂಕಮ್ಮನ ಮಗಳು ಸೀತಕ್ಕನ ಗಂಡ ಸಿನಪ್ಪಯ್ಯ ಮಾವನಿಗಿಂತ ಒಂದು ಹೆಜ್ಜೆ ಮುಂದಿದ್ದಾನೆ. ಇಟ್ಟುಕೊಂಡವಳ ಮಾತು ಕೇಳಿ ಕಟ್ಟಿಕೊಂಡವಳಿಗೆ ಬರೆ ಹಾಕುತ್ತಾನೆ. ಹೆಂಡತಿಯ ಒಡವೆಗಳನ್ನೆಲ್ಲಾ ಕಸಿದುಕೊಂಡು ತವರಿಗೆ

[illegible]

[illegible]

[illegible]

[illegible]

[illegible]

ಕಳುಹಿಸುತ್ತಾನೆ. ಜೀವನಾಂಶ ಕೊಡಬೇಕಾಗುತ್ತದೆಂದು ಊರುಬಿಟ್ಟು ಹೋಗುತ್ತಾನೆ. ವಿವಾಹ ಬದುಕಿನಲ್ಲಿ ಆಸಕ್ತಿ ಇಲ್ಲದ ಶ್ಯಾಮಭಟ್ಟನು ವೇಶ್ಯೆಯೊಂದಿಗೆ ಸಂಬಂಧ ಬೆಳೆಸುತ್ತಾನೆ. ಹೆಂಡತಿ ಎಂದರೆ ಹಕ್ಕು, ಸೂಳೆಯೆಂದರೆ ಹಂಗು ಎಂಬ ಮನೋಭಾವನೆಯನ್ನು ಈ ಮೂವರು ಹೊಂದಿರುತ್ತಾರೆ.

ಹೆಂಡತಿಯೊಂದಿಗೆ ಕೋಪದಿಂದ ವರ್ತಿಸುವ ಇವರು ವೇಶ್ಯೆಯೊಂದಿಗೆ ಪ್ರೀತಿಯಿಂದ ನಡೆದುಕೊಳ್ಳುತ್ತಾರೆ. ಪ್ರವೀರಾಚಾರ್ಯನಿಗೆ ಮನೆಯ ವಹಿವಾಟನ್ನು ಗಮನಿಸಲು ಕಷ್ಟದಲ್ಲಿ ಪಾಲ್ಗೊಳ್ಳಲು ಹೆಂಡತಿ ಬೇಕು. ಪ್ರೀತಿ ಹಾಗೂ ಸುಖವನ್ನು ವೇಶ್ಯೆಗೆ ಮೀಸಲಿರಿಸಿದ್ದಾನೆ. ಸಿನಪ್ಪಯ್ಯನಿಗೆ ಹೆಂಡತಿಯ ಒಡವೆ ಬೇಕು, ಸಂಸಾರದ ಜವಾಬ್ದಾರಿ ಬೇಡ. ಸಂಧ್ಯಾಕಾಲದಲ್ಲಿ ಶ್ಯಾಮಭಟ್ಟರು ಪತ್ತೆ ಹಚ್ಚಿದಮೇಲೆ ಸೀನಪ್ಪಯ್ಯ ಪ್ರಸ್ತದ ಶಾಸ್ತ್ರಕ್ಕೆ ಒಪ್ಪಿಕೊಳ್ಳುತ್ತಾನೆ. ಹೀಗೆ ಪ್ರಸ್ತಕ್ಕೆ ಸಮ್ಮತಿಸಲು ಎರಡು ಪ್ರಮುಖ ಕಾರಣಗಳಿವೆ. ಒಂದು ತನ್ನ ಎಮ್ಮೆಯ ವ್ಯಾಪಾರಕ್ಕೆ ಗಿರಾಕಿ ಸಿಗಬಹುದೆಂಬ ಹಂಬಲ. ಇನ್ನೊಂದು ದಾನವನ್ನು ಹಿಡಿಯುವ ಅಧಿಕಾರ ಬೇಕಾಗಿದೆ. ತನ್ನನ್ನು ಚೆನ್ನಾಗಿ ನೋಡಿಕೊಂಡಿರದ ಗಂಡನ ಸ್ವಭಾವದ ವಿರುದ್ಧ ದನಿಯೆತ್ತುವ ವೆಂಕಮ್ಮ ಹೆಂಡತಿಯನ್ನು ಚೆನ್ನಾಗಿ ನೋಡಿಕೊಳ್ಳುವ ಮಗ ಪುಂಡರೀಕನನ್ನು ದೂರುತ್ತಾಳೆ. ಅವಳ ಸ್ವಭಾವದಲ್ಲೇ ವೈರುಧ್ಯವಿದೆ. ಇಲ್ಲಿ ಬರುವ ಪ್ರವೀರಾಚಾರ್ಯ, ಶಾಮಭಟ್ಟ ಹಾಗೂ ಸೀತಕ್ಕನ ಗಂಡ ಈ ಮೂವರೂ ವೇಶ್ಯೆಯ ಸಂಗವನ್ನು ಮಾಡಿದವರಾಗಿದ್ದಾರೆ. ತಮ್ಮ ಜಾತಿಯನ್ನು ಮೀರಿರುವುದು ಪುರುಷರಿಗಿರುವ ಸ್ವಾತಂತ್ರ್ಯವನ್ನು ಬಿಂಬಿಸುತ್ತದೆ. ಯಾವುದೇ ತಪ್ಪು ಮಾಡದ ವೆಂಕಮ್ಮ ಹಾಗೂ ಸೀತಕ್ಕ ಗಂಡಂದಿರ ತಿರಸ್ಕಾರಕ್ಕೆ ಒಳಗಾಗಿದ್ದಾರೆ. ಇನ್ನೊಂದು ವೈರುಧ್ಯವೆಂದರೆ ತನ್ನ ಕಷ್ಟವನ್ನು ಹೇಳಿಕೊಳ್ಳುವ ವೆಂಕಮ್ಮ ಸೊಸೆಯ ಸಂಸಾರ ಚೆನ್ನಾಗಿರುವುದನ್ನು ಒಪ್ಪುವುದಿಲ್ಲ. ಇಲ್ಲಿ ಕೌಟುಂಬಿಕ ಸಂಘರ್ಷವೇರ್ಪಟ್ಟಿರುವುದನ್ನು ಕಾಣಬಹುದು.

ಹೆಣ್ಣನ್ನು ಭೋಗದ ವಸ್ತುವನ್ನಾಗಿ 'ಸಂಸ್ಕಾರ' ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಕಾದಂಬರಿಯಲ್ಲಿನ ಕೆಲವು ಬ್ರಾಹ್ಮಣ ಪುರುಷರು ಗುಟ್ಟಾಗಿ ಶೂದ್ರ ಹೆಣ್ಣಿನೊಡನೆ ಸಂಬಂಧ ಬೆಳೆಸುತ್ತಾರೆ. ಅದಕ್ಕೆ ಅವರು ನೀಡುವ ಕಾರಣವೇನೆಂದರೆ ತಮ್ಮ ಬ್ರಾಹ್ಮಣ ಸ್ತ್ರೀಯರು ಭೋಗಕ್ಕೆ ಯೋಗ್ಯರಲ್ಲವೆಂಬುದಾಗಿದೆ. ಬ್ರಾಹ್ಮಣಸ್ತ್ರೀಯರನ್ನು ಸ್ತ್ರೀಯರೇ ಅಲ್ಲವೆನ್ನುವಂತೆ ಅವರ ಪುರುಷರು ಗ್ರಹಿಸಿದರೆ, ಶೂದ್ರ ಸ್ತ್ರೀಯರನ್ನು ವರ್ಣಿಸುತ್ತಾರೆ. ಆದರೆ ಇಬ್ಬರಲ್ಲೂ ಕೊರತೆಯನ್ನು ಪುರುಷರೇ ಗುರುತಿಸಿಕೊಳ್ಳುತ್ತಾರೆ. ಬ್ರಾಹ್ಮಣ ಮಡದಿಯರೆಂದರೆ ಬಚ್ಚುಗಲ್ಲದ ಬತ್ತಿದ ಮೊಲೆಯ ಬೇಳೆ ಹುಳಿ ವಾಸನೆ ಬರುವ , ತೊಡೆಯನ್ನು ಗಂಟುಹಾಕಿ ಕೌಂಚಿ ಮಲಗುವ ಸ್ತ್ರೀಯರು. ಆದರೆ ಇತರ ಜಾತಿಯ ಹೆಣ್ಣುಗಳನ್ನು ಬ್ರಾಹ್ಮಣ ಗಂಡಸರ ಕಾಮದ ಕೈಗೊಂಬೆಗಳಂತೆ ಕಾಮಪ್ರಚೋದಕಿಯರೆಂಬಂತೆ ಚಿತ್ರಿಸಲಾಗಿದೆ. ಬಹಿಷ್ಕೃತ ಹಾಗೂ ಕೆಳ ಜಾತಿಯ ಚಂದ್ರಿ ಮತ್ತು ಬೆಳ್ಳಿಯರನ್ನು ಪವಿತ್ರಗೊಳಿಸಿ ಅಭಿಜಾತ ಕಾವ್ಯದ ಶಕುಂತಲಾ, ಮೇನಕೆ ಮುಂತಾದ ನಾಯಕಿಯರೊಡನೆ ಸಮೀಕರಿಸಿ ವೈಭವೀಕರಿಸಲಾಗಿದೆ. ಇದಲ್ಲದೆ ಚಂದ್ರಿಯಂಥವರ ಅಭಿಜಾತ ಕಾವ್ಯದ ಕನ್ನಿಕೆಯಂತೆ ಕಂಡರೂ ಈ ಮಣ್ಣಿಗಂಟಿದವರೂ ಅನೀತಿವಂತರೂ ನಿರಾತಂಕ ಕಾಮ ಸಂತೃಪ್ತಿಯ ಅಭಿಲಾಷೆ ಉಳ್ಳವರೂ ಆಗಿರುತ್ತಾರೆ.

ಕಾದಂಬರಿಯಲ್ಲಿ ಬರುವ ನಾರಣಪ್ಪ ಮಾತ್ರ ಹೆಂಡತಿಯನ್ನು ತೊರೆದು ಬ್ರಾಹ್ಮಣ್ಯವನ್ನು ಬಿಟ್ಟು ಶೂದ್ರಳಾದ ಚಂದ್ರಿಯೊಡನೆ ಜೀವನ ಸಾಗಿಸುತ್ತಾನೆ. ನಾರಣಪ್ಪನ ಬ್ರಾಹ್ಮಣ್ಯ ಮೀರಿದ ಜೀವನ ಕ್ರಮವನ್ನು ವಿರೋಧಿಸುವ ಪ್ರಾಣೇಶಾಚಾರ್ಯ ತಾನು ಕೊನೆಗೆ ಚಂದ್ರಿಯೊಡನೆ ಸಂಬಂಧ ಬೆಳೆಸುತ್ತಾನೆ.ಶೂದ್ರ ಸ್ತ್ರೀಯರ ಸಂಗವನ್ನು ಬಯಸುವ ಬ್ರಾಹ್ಮಣ ಪುರುಷರು ಅವರನ್ನು ಕೇವಲ ಭೋಗಕ್ಕಾಗಿ ಇಷ್ಟಪಡುತ್ತಾರೆಯೇ ಹೊರತು

ಜೀವನ ಸಾಗಿಸಲು ಅಲ್ಲ. ಹೆಂಡತಿಯನ್ನು ಇಷ್ಟಪಡದ ಶ್ರೀಪತಿಯು ಶೂದ್ರ ಬೆಳ್ಳಿಯು ಮಲಗಲು ಯೋಗ್ಯವೇ ಹೊರತು ಮಾತನಾಡಲು ಅಲ್ಲ ಎಂದು ಅವನು ಹೆಣ್ಣನ್ನು ಗ್ರಹಿಸಿರುವ ರೀತಿಯಲ್ಲಿ ಇದು ಸ್ಪಷ್ಟವಾಗುತ್ತದೆ. ಇಲ್ಲಿ ಪುರುಷರು ಬ್ರಾಹ್ಮಣ ಸ್ತ್ರೀಗಾಗಲೀ ಅಥವಾ ಶೂದ್ರ ಸ್ತ್ರೀಗಾಗಲೀ ಇಬ್ಬರಿಗೂ ಒಳ್ಳೆಯ ಸ್ಥಾನವನ್ನು ಕಲ್ಪಿಸಿಲ್ಲ.

ಹೆಣ್ಣು ಕೌಟುಂಬಿಕ ಆವರಣದ ಮಿತಿಯಲ್ಲಿ ಬದುಕಬೇಕೆಂಬ ಪುರುಷರು ತಾವು ಸ್ವತಂತ್ರವಾಗಿರಬೇಕೆಂದು ಬಯಸುವ ಪಾತ್ರಗಳನ್ನು 'ಭಾರತೀಪುರ' ಕಾದಂಬರಿಯಲ್ಲಿ ಕಾಣಬಹುದು. ಇಲ್ಲಿನ ಕೆಲವು ಪುರುಷರು ಬೆಳಿಗ್ಗೆ ತಿಂದ ತಿಂಡಿಯನ್ನು ಕರಗಿಸಿಕೊಳ್ಳಲು ಇಡೀ ದಿನ ಹರಟೆಗೆ ಕೂಡುತ್ತಾರೆ. ಅವರ ಹೆಂಗಸರು ಹೊಗೆ ತುಂಬಿದ ಒಲೆಯ ಮುಂದೆ ಇಡೀ ದಿನ ಕೂಡಬೇಕಾಗುತ್ತದೆ. ಜಗನ್ನಾಥನು ಜೋಯಿಸರ ಸೊಸೆ ನಾಗಮಣಿಯನ್ನು ಕಂಡು ಈ ರೀತಿ ಚಿಂತಿಸುತ್ತಾನೆ. ಮೈಯಲ್ಲಿ ಅರಳುತ್ತಿರುವ ಸೌಂದರ್ಯದ ಪರಿವೆ ಇಲ್ಲದ ಇವಳು ಸದಾ ಅಡಿಗೆ ಮನೆಯಲ್ಲಿ ರುಚಿರುಚಿಯಾದ ಕೂಳು ಬೇಯಿಸಲೆಂದೇ ಬದುಕುವ ಹೆಂಗಸರ ಗುಂಪಿಗೆ ಸೇರುತ್ತಾಳೆ ಎಂದು ಕೊಳ್ಳುತ್ತಾನೆ. "ನಾಗಮಣಿಗೆ ಅರಳಬೇಕೆಂದು, ಭಾರತೀಪುರದ ಪೌರರು ಕ್ರಿಯಾಶೀಲರಾಗಬೇಕೆಂದು ಕುದಿಯುವ ಜಗನ್ನಾಥ ಸ್ವತಹ ತಾನೇ ಕ್ರಿಯಾಶೀಲನಾಗಿದ್ದಾನೆಯೇ ಎಂದು ಯೋಚಿಸುವುದೇ ಇಲ್ಲ. ಆದರೆ, ತನ್ನ ಸ್ನೇಹದ ನಡವಳಿಕೆಯಿಂದ ನಾಗಮಣಿಯನ್ನು ಆಕರ್ಷಿಸಲು ಪ್ರಯತ್ನಿಸುವಾಗಲೇ ಭಾರತೀಪುರದ ಜಡತ್ವ, ನಿರ್ವೀರ್ಯತೆ, ನೋವು, ಕ್ರಿಯಾಹೀನ ಬದುಕಿಗೆ ಜೀವಂತ ಸಾಕ್ಷಿಯಾಗುವ ಅವಳ ಸಾವು ಅವನಿಗೆ ಆಘಾತವುಂಟು ಮಾಡುತ್ತದೆ. ಆದರೆ ಇಂತಹ ನೋವನ್ನು ಸೀಳಿಕೊಂಡು ಬರಬೇಕಾದ ಬದಲಾವಣೆ ಆ ಸಮಾಜದ ಅಂತಃಸತ್ವವನ್ನೇ ಅವಲಂಬಿಸಿದೆಯಾದ್ದರಿಂದ ಜಗನ್ನಾಥ ಮತ್ತೆ ಇಲ್ಲಿ ಅಸಹಾಯಕನಾಗುತ್ತಾನೆ." [೬] ಮಾರ್ಗರೇಟ್‌ಳೊಂದಿಗೆ ಸಂಬಂಧವನ್ನು ಬೆಳೆಸಿರುವ ಜಗನ್ನಾಥ ಅವಳು ಬೇರೆಯವನೊಂದಿಗೆ ಸಲಿಗೆಯಿಂದಿರುವುದನ್ನು ಇಷ್ಟಪಡುವುದಿಲ್ಲ. ಬದಲಾವಣೆಯನ್ನು ಬಯಸುವ ಜಗನ್ನಾಥ ತಾಯಿಯ ಅನೈತಿಕ ಸಂಬಂಧದ ಬಗ್ಗೆ ತಿಳಿದಾಗ ಮಾನಸಿಕ ಸಂಘರ್ಷವನ್ನು ಎದುರಿಸುತ್ತಾನೆ. ಹೀಗೆ ಹೆಣ್ಣು ಮತ್ತು ಗಂಡಿನ ವಿಚಾರಗಳು ಪರಿಸ್ಥಿತಿಗೆ ತಕ್ಕಂತೆ ಕಾದಂಬರಿಯಲ್ಲಿ ಸಹಜವಾಗಿ ಮೂಡಿಬಂದಿವೆ.

'ಅವಸ್ಥೆ' ಕಾದಂಬರಿಯಲ್ಲಿ ಕೃಷ್ಣಪ್ಪ ಅನೇಕ ಹೆಣ್ಣುಗಳೊಂದಿಗೆ ಸಂಬಂಧ ಹೊಂದಿರುತ್ತಾನೆ. ಹೆಂಡತಿಯನ್ನು ತಿರಸ್ಕಾರದಿಂದ ಕಾಣುತ್ತಾನೆ. ಅವಳು ಮನೆಯ ಬಗ್ಗೆ ಇಟ್ಟುಕೊಂಡಿರುವ ಕಾಳಜಿಯನ್ನು ಸಂಚು–ಕಪಟತನವೆಂದು ಕೃಷ್ಣಪ್ಪ ಗ್ರಹಿಸುತ್ತಾನೆ. ಗಂಡನೊಡನೆ ಸದಾ ಕಿರಿಕಿರಿ ಮಾಡುವ ಸೀತೆ ಅವನ ಶುಶ್ರೂಷೆಯನ್ನು ಮಾಡಬೇಕಾಗುತ್ತದೆ. ತಾನು ಹೊಡೆಯುವುದನ್ನು ಸಹಿಸಿಕೊಂಡಿದ್ದ ಹೆಂಡತಿಯ ಸಹನೆಯು ಕೃಷ್ಣಪ್ಪನಿಗೊಂದು ಸವಾಲಾಗುತ್ತದೆ. ಇಲ್ಲಿ ಬರುವ ಇನ್ನೊಂದು ಸ್ತ್ರೀ ಪಾತ್ರ ಜ್ಯೋತಿಯದು. ತನ್ನ ಪ್ರೇಮಿಗೆ ಕೆಲಸ ಸಿಗಬಹುದೆಂಬ ಆಸೆಯಿಂದ ಕೃಷ್ಣಪ್ಪನ ಸೇವೆಯನ್ನು ಆಸಕ್ತಿಯಿಂದ ಮಾಡುತ್ತಾಳೆ. ಗೌರಿ ದೇಶಪಾಂಡೆಗೆ ಗಂಡಸಿನ ಸಂಗದ ಆಸೆ ಇದ್ದರೂ ತನ್ನ ದೇಹ ಮಕ್ಕಳನ್ನು ಪಡೆಯುವ ಸಾಧನವಾಗಲು ಇಷ್ಟಪಡುವುದಿಲ್ಲ. ಇಂಗ್ಲಿಷ್ ಹೇಳಿಕೊಡುವ ನೆಪದಲ್ಲಿ ಅಣ್ಣಾಜಿಯು ಚೆನ್ನವೀರಯ್ಯನ ಹೆಂಡತಿಯೊಡನೆ ಸಂಬಂಧ ಬೆಳೆಸುತ್ತಾನೆ. ಮನೆಯ ಜವಾಬ್ದಾರಿಯನ್ನು ನಿಭಾಯಿಸುವ ಹೆಂಡತಿಯ ಕುರಿತು ಕಾಳಜಿಯಿಲ್ಲದ ಕೃಷ್ಣಪ್ಪನು ರಾಜಕೀಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾನೆ. ಊರಿಗೆ ಪರೋಪಕಾರಿಯಾದ ಕೃಷ್ಣಪ್ಪನು ಮನೆಯ ಕೆಲಸಗಳ ಬಗೆಗೆ ಆಸಕ್ತಿಯನ್ನು ತೋರಿಸುವುದಿಲ್ಲ. ಶಾಂತಿ ಸಮಾಧಾನದ ಪ್ರತೀಕವಾಗಿರುವ ಹೆಣ್ಣಿನ ಗುಣಕ್ಕೆ

[illegible]

[illegible]

[illegible]

ವಿರುದ್ಧವಾಗಿ ಸೀತೆಯು ಗಂಡನೊಂದಿಗೆ ವರ್ತಿಸುತ್ತಾಳೆ. ಹೀಗೆ ಕಾದಂಬರಿಯಲ್ಲಿ ಕೃಷ್ಣಪ್ಪ ಹಾಗೂ ಸೀತೆಯು ಪರಸ್ಪರ ವಿರುದ್ಧ ಗುಣಗಳನ್ನು ಪ್ರತಿನಿಧಿಸಿದಾಗ ಸಂಘರ್ಷ ಉಂಟಾಗುತ್ತದೆ.

ವಿವಾಹೇತರ ಗಂಡು ಹೆಣ್ಣಿನ ಸಂಬಂಧದಲ್ಲಿರುವ ಸೌಹಾರ್ದತೆಯನ್ನು 'ಭವ' ಕಾದಂಬರಿಯಲ್ಲಿ ಕಾಣಬಹುದು. ಮದುವೆಗೆ ಮುಂಚೆ ರಾಧ ಎಂಬುವವಳೊಡನೆ ಸಂಬಂಧ ಬೆಳೆಸಿದ್ದ ಶಾಸ್ತ್ರಿ ಅವಳ ಒಪ್ಪಿಗೆಯ ಮೇರೆಗೆ ಸರೋಜಳೊಡನೆ ಮದುವೆಯಾಗುತ್ತಾನೆ. ಸರೋಜಳಿಗೆ ಮಕ್ಕಳಗಾಗುವಂತೆ ಪೂಜೆ ಮಾಡಿಸುವ ಶಾಸ್ತ್ರಿಗೆ ಅವಳು ಪೂಜೆ ಮುಗಿದ ನಂತರ ಪಂಡಿತನೊಡನೆ ಸೇರಿದಳೆಂದು ತಿಳಿದು ಅವಳನ್ನು ಕೊಲ್ಲಲು ಪ್ರಯತ್ನಿಸಿ ಓಡಿಹೋಗುತ್ತಾನೆ. ಇನ್ನೊಂದು ಮದುವೆಯನ್ನು ಮಾಡಿಕೊಂಡ ಶಾಸ್ತ್ರಿಗೆ ಮಂಜುಳ ಎಂಬ ಮಗಳು ಹುಟ್ಟುತ್ತಾಳೆ.

ದಿನಕರನು ಅನೇಕ ಹೆಣ್ಣುಗಳೊಂದಿಗೆ ಸಂಬಂಧ ಇಟ್ಟುಕೊಳ್ಳುತ್ತಾನೆ. ಅವನ ಹೆಂಡತಿಯು ಇಟ್ಟುಕೊಂಡ ಸಂಬಂಧವನ್ನು ದಿನಕರನು ಸಹಿಸುವುದಿಲ್ಲ. ಚಂದ್ರಪ್ಪನೊಂದಿಗೆ ಮದುವೆಯಾದ ಗಂಗೂಬಾಯಿಯೊಂದಿಗೆ ದಿನಕರ ಹಾಗೂ ನಾರಾಯಣತಂತ್ರಿ ಇಬ್ಬರೂ ಸಂಬಂಧವಿರಿಸಿಕೊಂಡಿದ್ದಾರೆ. ಇಲ್ಲಿ ಮನುಷ್ಯ ಮನುಷ್ಯನ ಸಂಬಂಧಗಳು ಗಂಡು ಹೆಣ್ಣಿನ ನಡುವಿನ ಸಂಬಂಧ ದೈಹಿಕ ಪಾತಳಿಗಳ ಮೇಲೆ ನಿಂತಿವೆ. ದಿನಕರನು ತನ್ನ ಮಗನೋ ಅಥವಾ ಪಂಡಿತನ ಮಗನೋ ಎಂದು ಶಾಸ್ತ್ರಿಯು ಗೊಂದಲಕ್ಕೊಳಗಾಗುತ್ತಾನೆ. ಪ್ರಸಾದನು ತನ್ನ ಮಗನೋ ಅಥವಾ ನಾರಾಯಣ ತಂತ್ರಿಯ ಮಗನೋ ಎಂದು ದಿನಕರನು ಚಿಂತಿಸುತ್ತಾನೆ. ನಾರಾಯಣತಂತ್ರಿಯದು ಇಂತಹುದೇ ಆಲೋಚನೆಯಾಗಿದೆ. ಆದರೆ ತನ್ನ ಹೆಂಡತಿ ಬೇರೆಯವರೊಂದಿಗೆ ಸಂಬಂಧವಿರಿಸಿಕೊಂಡಿದ್ದಾಳೆಂದು ತಿಳಿದ ಚಂದ್ರಪ್ಪನಿಗೆ ಯವುದೇ ಗೊಂದಲವಿಲ್ಲ. ಗಂಗೂಬಾಯಿಯು ಆ ಬಗ್ಗೆ ಚಿಂತಿಸುವುದಿಲ್ಲ. ಸೀತಮ್ಮನು ಅವರ ಸಂಬಂಧವನ್ನು ಟೀಕಿಸುವುದಿಲ್ಲ, ಗೋಪಾಲನು ತಂದೆಯನ್ನು ನಿಂದಿಸಿದರೆ ಪ್ರಸಾದನು ತಾಯಿಯನ್ನು ನಿಂದಿಸುತ್ತಾನೆ.

ಪರಕೀಯಳಾದ ಹೆಣ್ಣನ್ನು ಸ್ವಕೀಯಳನ್ನಾಗಿಸಿಕೊಳ್ಳುವ ಸಾಮಾಜಿಕ ಕ್ರಮವನ್ನು ಭವ ಅಲ್ಲಗಳೆಯುವುದಿಲ್ಲ. ಗಂಡು ಹೆಣ್ಣಿನಿಂದ ಪಡೆಯಬಹುದಾದ ಪ್ರಯೋಜನಗಳ ಬಗ್ಗೆಯೂ ಈ ಕಾದಂಬರಿಗೆ ಅರಿವಿದೆ. ಆದರೆ ಕಾಮವೊಂದನ್ನು ಬಿಟ್ಟು, ಬೇರೆ ವಿಧಾನಗಳಿಂದಲೂ ಹೆಣ್ಣಿನೊಡನೆ ಸಂಬಂಧ ಅಷ್ಟೇ ಉತ್ಕಟವಾಗಲ್ಲದೆಂಬುವುದನ್ನು ಭವ ಸಮರ್ಥವಾಗಿ ನಿರೂಪಿಸುತ್ತದೆ. ದಿನಕರ ಮತ್ತು ಸೀತಮ್ಮ ಅವರ ಸಂಬಂಧ ಆ ಬಗೆಯದು. ಎಂಬ ಕೀರ್ತಿನಾಥ ಕುರ್ತಕೋಟಿಯವರ ಅಭಿಪ್ರಾಯವು ಗಮನಾರ್ಹವಾಗಿದೆ. ಮದುವೆ ಎಂಬ ಸಾಮಾಜಿಕ ವ್ಯವಸ್ಥೆ ಕುಸಿಯುತ್ತಿರುವುದರ ಬಗೆಗಿನ ಚಿಂತನೆ ಕಾದಂಬರಿಯಲ್ಲಿದೆ. ಇಲ್ಲಿ ಬರುವ ದಾಂಪತ್ಯವೆಲ್ಲವೂ ವಿಷಮ ದಾಂಪತ್ಯಗಳಾಗಿ ಚಿತ್ರಿತವಾಗಿದ್ದು, ದಾಂಪತ್ಯೇತರ ಗಂಡು ಹೆಣ್ಣಿನ ಸಂಬಂಧದಲ್ಲಿ ಸೌಹಾರ್ದವನ್ನು ಕಾಣಬಹುದು. ಅನೈತಿಕ ಸಂಬಂಧದ ವಿಚಾರವು ವಸ್ತುವಾಗಿರುವ ಈ ಕಾದಂಬರಿಯಲ್ಲಿ ಗಂಡು ಹೆಣ್ಣಿನ ನಡುವಿನ ಸಂಬಂಧಗಳಲ್ಲಿ ಅನುಮಾನ ಬಂದಾಗ ಮಾನಸಿಕ ನೆಮ್ಮದಿಯು ಕೆಡುವ ಚಿತ್ರಣವನ್ನು ಲೇಖಕರು ನೈಜವಾಗಿ ಚಿತ್ರಿಸಿದ್ದಾರೆ.

ಸ್ತ್ರೀ ಪಾತ್ರಗಳಲ್ಲಿನ ವಿಶಿಷ್ಟ ಗತಿ ಶೀಲತೆಯನ್ನು 'ದಿವ್ಯ'ಕಾದಂಬರಿಯಲ್ಲಿ ಕಾಣಬಹುದು. ತನ್ನ ಗಂಡನಿಗೆ ಎರಡನೇ ಹೆಂಡತಿಯಾಗಿ ಬಂದ ಅಕ್ಕು ಅವನ ಮಕ್ಕಳನ್ನು ತನ್ನ ಮಕ್ಕಳಂತೆ ಸಾಕುತ್ತಾಳೆ. ಗಣಪಯ್ಯನ ಮಗಳು

[illegible]

[illegible]

[illegible]

[illegible]

ಸರಸ್ವತಿಗೆ ಬಾಲ್ಯವಿವಾಹವನ್ನು ಮಾಡಿರುತ್ತಾನೆ. ಗಂಡ ಸತ್ತಮೇಲೆ ವಿಧವೆಯಾದ ಮಗಳಿಗೆ ಉನ್ನತ ವ್ಯಾಸಂಗಕ್ಕಾಗಿ ಕಾಲೇಜಿಗೆ ಕಳುಹಿಸುತ್ತಾನೆ. ವಿದ್ಯಾಭ್ಯಾಸಕ್ಕಾಗಿ ಕಾಲೇಜಿಗೆ ಬಂದ ಸರಸ್ವತಿಯು ಉಪನ್ಯಾಸಕನಾದ ದುರುಗನನ್ನು ಪ್ರೀತಿಸುತ್ತಾಳೆ. ವಿದ್ಯೆಯ ಸಂಪಾದನೆಗೆ ಹೋದ ಮಗಳು ಅಂತರ್ಜಾತಿ ವಿವಾಹಕ್ಕೆ ಮನಸೋತಾಗ ಗಣಪಯ್ಯನು ವಿರೋಧಿಸುತ್ತಾನೆ. ಹೆಣ್ಣು ಪರಪುರುಷನೊಂದಿಗೆ ಸಂಬಂಧವನ್ನು ಹೊಂದಿದರೆ ಮನೆತನಕ್ಕೆ ಕಳಂಕವೆಂದು ತಿಳಿದ ಗಣಪಯ್ಯನು ತನ್ನ ಮಗಳನ್ನು ಮದುವೆಯಾಗಲು ಬಯಸಿದ ದುರುಗನನ್ನು ಕೊಲೆ ಮಾಡಿಸುತ್ತಾನೆ.

ಮಂಜಯ್ಯನ ವಿಧವೆಯಾದ ಮಗಳು ವಿಮಲಾ ಓದನ್ನು ಮುಂದುವರೆಸುತ್ತಾಳೆ. ವಿಮಲಾ ಹಾಗೂ ಮೈಕಲ್ ನಡುವೆ ಪ್ರೀತಿ ಹುಟ್ಟುತ್ತದೆ. ಮಂಜಯ್ಯನು ಮಗಳು ಮರುಮದುವೆಯಾಗುವ ನಿರ್ಧಾರವನ್ನು ತಿರಸ್ಕರಿಸುತ್ತಾನೆ. ವಿಮಲಾ ತನ್ನ ಹಠವನ್ನು ಸಾಧಿಸಿ ಮೈಕಲ್‌ನನ್ನು ಮದುವೆಯಾದಾಗ ತಂದೆಗೆ ದಿಕ್ಕು ತೋಚದಂತಾಗುತ್ತದೆ. ಯುವಕ ಯುವತಿಯರು ಯೌವನದ ಆಕರ್ಷಣೆಯೊಂದಿಗೆ ಪ್ರೀತಿ ಪ್ರೇಮದ ಜಾಲದಲ್ಲಿ ಸಿಲುಕುತ್ತಾರೆ. ಹೀಗೆ ಹೆಣ್ಣು ಸಂಪ್ರದಾಯವನ್ನು ಮೀರಿದಾಗ ಗಂಡು ಅಂತರ್ಜಾತಿಯವನಾದಾಗ ಹಿರಿಯರು ಸಮ್ಮತಿಸದಿದ್ದಾಗ ಸಂಘರ್ಷವೇರ್ಪಡುತ್ತದೆ.

ಬಾಲವಿಧವೆಯರಾಗಿ ಸಂಸಾರ ಸುಖದಿಂದ, ದೇಹ ಸುಖದಿಂದ ವಂಚಿತರಾಗಿದ್ದ ಲಕ್ಷ್ಮಿ, ಪಾರ್ವತಿ, ಯಮುನಕ್ಕನಂಥ ಬ್ರಾಹ್ಮಣ ವಿಧವೆಯರು ಸಂಪ್ರದಾಯವನ್ನು ನಂಬಿ ಬದುಕಿದವರು. ಆದರೆ, ಯಾವುದೋ ಕೆಲವು ಕ್ಷಣಗಳಲ್ಲಿ ಗುಪ್ತವಾಗಿ ಕಾಮದ ಮಟ್ಟಿಗೆ ಮಾತ್ರ ಅದನ್ನು ಮೀರುವವರು. ಹಾಗೆ ಅವರು ಮೀರುವುದು ಪರಂಪರಾಗತ ಮೌಲ್ಯವನ್ನು ಪ್ರಶ್ನಿಸುವ ಉದ್ದೇಶದಿಂದಲ್ಲ. ಅದಕ್ಕೆ ಬೇಕಾದ ಬೌದ್ಧಿಕ ನಿಲುವು, ದಿಟ್ಟತನವಿಲ್ಲ. ಲಚ್ಚಿ, ನಂಜಿ, ಅಬ್ಬಕ್ಕ ಕಾಮದ ಮಟ್ಟಿಗೆ ಮಾತ್ರ ಪರಂಪರಾಗತ ಮೌಲ್ಯ ಪ್ರಜ್ಞೆಯ ಅಸಾರತೆಯನ್ನು ಎತ್ತಿ ತೋರಿಸುವಂತಿರುವವರು. ಅವರ ಬದುಕಿಗಷ್ಟೆ ಅಲ್ಲ ಜೊತೆಗೆ ಕಾಮಕ್ಕೆ ಸಂಬಂಧಿಸಿದಂತೆ ಬ್ರಾಹ್ಮಣರಲ್ಲಿರುವ ನೀತಿ ಅನೀತಿಯನ್ನು ಕುರಿತಂತೆಯೂ ನೇರವಾಗಿ ಸವಾಲಾಗುವುದು ಆ ಶೂದ್ರಪಾತ್ರಗಳಿಗೆ ಸಾಧ್ಯವೇ ಇಲ್ಲ. ಲಕ್ಷ್ಮಿ, ಪಾರ್ವತಿ, ಯಮುನಕ್ಕನಂಥವರೂ ಬ್ರಾಹ್ಮಣ ಸಮಾಜವನ್ನು ಎದುರಿಸಲು ಕಷ್ಟವಾಗಿ ನಿಲ್ಲುವ ಶಕ್ತಿಯುಳ್ಳವರಲ್ಲ. ಅವರನ್ನೇ ನಿವಾರಿಸಿಕೊಳ್ಳಬಹುದಾದ ಸತ್ಯ ಹಾಗೂ ದಾರಿ ಆ ಸಮಾಜಕ್ಕಿದೆ. ಪಾರ್ವತಿಯ ಆತ್ಮಹತ್ಯೆ ಹಾಗೂ ಯಮುನಕ್ಕನಿಗಾದ ಘಟಶ್ರಾದ್ಧ ನೆನೆಯಬಹುದು. ಆದರೆ ಬ್ರಾಹ್ಮಣನಾಗಿದ್ದ ನಾರಣಪ್ಪ ಇಡೀ ಅಗ್ರಹಾರಕ್ಕೆ ನಿವಾರಿಸಿಕೊಳ್ಳಲಾಗದ ಸವಾಲಾಗುತ್ತಾನೆ. ಚಂದ್ರಿಯನ್ನು ನಾರಣಪ್ಪ ಇಟ್ಟುಕೊಂಡುದು ಮಾತ್ರ ಬ್ರಾಹ್ಮಣರನ್ನು ಕಾಡುವ ಅಂಶವಲ್ಲ. ಅನಂತಮೂರ್ತಿ ಕಥೆಗಳಲ್ಲಿ ಬರುವ ಬ್ರಾಹ್ಮಣ ಗಂಡಸರು ಶಂಕರಯ್ಯ (ಪ್ರಶ್ನೆ) ಶಾಮಭಟ್ಟ (ಪ್ರಸ್ತ) ಪ್ರಾಣೇಶಾಚಾರ್ಯ, ಸೀನಪ್ಪಯ್ಯ, ಸಂಸ್ಕಾರದ ದುರ್ಗಾಭಟ್ಟ ಮೊದಲಾದವರು ಶೂದ್ರ ಹೆಣ್ಣುಗಳ ಸಂಪರ್ಕ ಮಾಡುತ್ತಾರೆ. ನಾರಣಪ್ಪ ಪರಂಪರಾಗತ ಮೌಲ್ಯ ಪ್ರಜ್ಞೆಯನ್ನು ಪ್ರಶ್ನಿಸುವವನಾಗಿರುವುದರಿಂದ ಸಂಸ್ಕಾರ ಸೃಜನಾತ್ಮಕ ಸವಾಲನ್ನು ದೊಡ್ಡದಾಗಿಸುತ್ತದೆ.

ಅನಂತಮೂರ್ತಿಯವರು ತಮ್ಮ ಕೃತಿಗಳಲ್ಲಿ ವಿವಾಹೇತರ ಗಂಡು-ಹೆಣ್ಣಿನ ಸಂಬಂಧವನ್ನು ಚಿತ್ರಿಸುತ್ತಾರೆ. ವೈವಾಹಿಕ ಸಂಬಂಧವನ್ನು ಗುಮಾನಿಯಿಂದ ನೋಡುತ್ತಾರೆ. ಇಂತಹ ಚಿತ್ರಣ ಕೇವಲ ಆಕಸ್ಮಿಕವಾದುದಾಗಿರದೆ ಅದರ ಹಿಂದೆ ಒಂದು ತಾತ್ವಿಕತೆ ಇದ್ದಂತೆ ತೋರುತ್ತದೆ. ಆಧುನಿಕ ಬದುಕಿನಲ್ಲಿ ಮದುವೆಯ ಪಾವಿತ್ರ್ಯ ಸತ್ವವನ್ನು ಕಳೆದುಕೊಳ್ಳುತ್ತಿರುವುದರಿಂದ ತಮಗೆ ಸರಿಯೆನಿಸುವ ದಾರಿಯನ್ನು ಆರಿಸಿಕೊಳ್ಳಬಹುದೆನ್ನುವುದು ಲೇಖಕರ ಅಭಿಪ್ರಾಯವಾಗಿದೆ. ಮದುವೆಯ ಭದ್ರತೆಯೆ ಇಲ್ಲದ, ಆಕೆಯ ಉಳಿದ

ಸಾಧನೆಗಳನ್ನು ಸಾಧ್ಯತೆಗಳನ್ನು ಗಮನಿಸದೆ ಕಾಮದ ವಿಷಯದಲ್ಲಿ ಮಾತ್ರ ಬದ್ಧತೆಯನ್ನು ಮೀರಿದ ಹೆಣ್ಣಿನ ಮಾದರಿಯನ್ನು ಕೊಡುತ್ತಾರೆ. ಹೀಗೆ ಹೆಣ್ಣನ್ನು ಚಿತ್ರಿಸುವಾಗ ಆಕೆಯ ಅಸ್ತಿತ್ವವನ್ನು ದೇಹಕ್ಕಿಳಿಸಿ, ಪ್ರಾಚೀನ ಕವಿಗಳು ಹೆಣ್ಣನ್ನು ಕಂಡರಿಸಿದ ರೀತಿಯಿಂದ ಹೆಚ್ಚು ಭಿನ್ನರಾಗದೇ ಉಳಿಯುತ್ತಾರೆ.

ಅನಂತಮೂರ್ತಿಯವರು ಹೆಣ್ಣನ್ನು ಗುಪ್ತ ಅಥವಾ ರಹಸ್ಯಾತ್ಮಕ ಪಾತ್ರವೆಂಬಂತೆ ಚಿತ್ರಿಸಿದ್ದಾರೆ. ಪಾಶ್ಚಾತ್ಯ ಸಾಹಿತ್ಯದ ಪ್ರಭಾವದೊಂದಿಗೆ ಕಾಮ, ಪ್ರೇಮ ಮುಂತಾದವನ್ನು ಪ್ರಧಾನವಾಗಿರಿಸಿಕೊಂಡ ಲೇಖಕರು ಹೆಣ್ಣನ್ನು ಸಾಮಾಜಿಕ ಸಂಘರ್ಷಕ್ಕೆ ಮೂಲ ಬಿಂದುವಾಗಿ ಗುರುತಿಸಿದರು. ಅನಂತಮೂರ್ತಿಯವರ ಕಥಾ ಸಾಹಿತ್ಯದಲ್ಲಿ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಸಂಘರ್ಷದ ನೆಲೆಯಲ್ಲಿ ಕಂಡುಬರುತ್ತಾಳೆ. ವಿಧವೆಯಾಗಿ, ಪತ್ನಿಯಾಗಿ, ದಾಸಿಯಾಗಿ ಹಾಗೂ ವೇಶ್ಯೆಯಾಗಿ ಚಿತ್ರಿತವಾಗಿದ್ದಾಳೆ. ಬ್ರಾಹ್ಮಣ ಮತ್ತು ಶೂದ್ರ ನೆಲೆಯ ಎರಡು ಸಮುದಾಯಗಳಲ್ಲಿ ತನ್ನದೇ ವಿಶಿಷ್ಟವಾದ ಪ್ರಕ್ರಿಯೆಯಲ್ಲಿ ಹೆಣ್ಣು ಮತ್ತು ಗಂಡಿನ ಪಾತ್ರಗಳು ಚಿತ್ರಿತವಾಗಿವೆ. ಇಲ್ಲಿ ಹೆಣ್ಣು ಪುರುಷನೊಂದಿಗೆ ಮುಖಾಮುಖಿಯಾದಾಗ ಹೆಣ್ಣಿನ ಸೂಕ್ಷ್ಮ ಹಾಗೂ ಗಂಡಿನ ನಿಷ್ಠುರ ಮನೋಭಾವವನ್ನು ಲೇಖಕರು ನೈಜವಾಗಿ ಚಿತ್ರಿಸಿದ್ದಾರೆ. ಅನಂತಮೂರ್ತಿಯವರ ಕಥಾ ಸಾಹಿತ್ಯದಲ್ಲಿ ಹೆಣ್ಣು ಮತ್ತು ಗಂಡಿನ ಸಂದರ್ಭಗಳನ್ನು ಕೆಲವು ಅಂಶಗಳಲ್ಲಿ ಈ ಕೆಳಗಿನಂತೆ ಗುರುತಿಸಬಹುದು.

೧. ಬ್ರಾಹ್ಮಣ ಹೆಣ್ಣು – ಬಾಲ್ಯವಿವಾಹ, ವಿಧವೆ ಅಥವಾ ಕೆಳವರ್ಗದ ಜಾತಿಯವರೊಂದಿಗೆ ಲೈಂಗಿಕ ಸಂಬಂಧವನ್ನು ಹೊಂದಿರುತ್ತಾಳೆ. ಸಾಮಾಜಿಕ ಮರ್ಯಾದೆ ಗೌರವಕ್ಕಾಗಿ ರಹಸ್ಯ ಲೈಂಗಿಕ ಸಂಬಂಧವಿರುತ್ತದೆ.

ಕಾಮದ ಮಟ್ಟಿಗೆ ಮಾತ್ರ ಪರಂಪರಾಗತ ಧರ್ಮವನ್ನು ಗುಪ್ತವಾಗಿ ಮೀರುವ ಬಾಲವಿಧವೆಯರು–ಪ್ರಕೃತಿಯ ಲಕ್ಷ್ಮಿ, ಪ್ರಶ್ನೆಯ ಪಾರ್ವತಿ, ಘಟಶ್ರಾದ್ಧದ – ಯಮುನಕ್ಕ, ದಿವ್ಯದ ಶೆಟ್ಟಿಯ ಮಗಳು, ಮಂಜಯ್ಯನ ಮಗಳು

ಕಾಮದ ಮಟ್ಟಿಗೆ ಪರಂಪರಾಗತ ಧರ್ಮವನ್ನು ಮೀರಲಾಗದಿದ್ದ ಬಾಲವಿಧವೆಯರುಮುದಿವಯಸ್ಸಿನಲ್ಲಿಅರೆಮರಳು,ಮಾನವದ್ವೇಷಿಗಳಾವುದು ಪ್ರಸ್ತದ ವೆಂಕಮ್ಮ, ಮೌನಿಯ ಸೀತಕ್ಕ, ಸಂಸ್ಕಾರದ ಲಕ್ಷ್ಮಿದೇವಮ್ಮ

ಕಾಮದ ಮಟ್ಟಿಗೆ ಪರಂಪರಾಗತ ಧರ್ಮವನ್ನು ಮೀರಲಾಗದಿದ್ದ ಬಾಲವಿಧವೆಯರು–ಅಕ್ಕಯ್ಯದ ಅಕ್ಕಯ್ಯ, ಪ್ರಸ್ತದ ಸೀತಕ್ಕ, ದಿವ್ಯದ ಅಕ್ಕು,

ಆಚಾರ – ವಿಚಾರಗಳ ನಡುವೆಯು ದ್ವಂದ್ವದಲ್ಲಿ ಸಿಲುಕಿ ಅತೃಪ್ತ ಕಾಮ ಬಯಕೆಯಲ್ಲಿ ಬೆಂದುಹೋಗಿರುತ್ತಾಳೆ. ಬಾಲ್ಯವಿವಾಹಾದಿಗಳಿಂದ ವೈಧವ್ಯ ಹೊಂದಿದ ತರುಣಿಯಾಗಿ ಅತೃಪ್ತ ಬಯಕೆಗಳಲ್ಲಿ ಜೀವನ ನಡೆಸುತ್ತಿರುತ್ತಾಳೆ. ಅಕ್ಕಯ್ಯದ ಅಕ್ಕಯ್ಯ, ಪ್ರಸ್ತದ ಸೀತಕ್ಕ ಪತಿಯ ಲೈಂಗಿಕ ತೃಷೆಯನ್ನು ಈಡೇರಿಸಲಾಗದ ರೋಗಿಯಾಗಿರುತ್ತಾಳೆ. ಸಂಸ್ಕಾರದ ಭಾಗೀರಥಿ

[illegible]

[illegible]

[illegible]

[illegible]

[illegible]

[illegible]

ಬೇರೆ ಸ್ತ್ರೀಯೊಂದಿಗೆ ಪತಿ ಇರಿಸಿಕೊಂಡ ಲೈಂಗಿಕ ಸಂಬಂಧವನ್ನು ಮೌನವಾಗಿ ಒಪ್ಪುತ್ತಾಳೆ. ಮತ್ತು ಅಂತರಂಗದಲ್ಲಿ ನಲುಗುತ್ತಾಳೆ. ಸಂಸ್ಕಾರದ ಶ್ರೀಪತಿಯ ಹೆಂಡತಿ

ಹೀಗೆ ಕಾಮದ ವಿಷಯದಲ್ಲಿ ಬ್ರಾಹ್ಮಣ ಹೆಣ್ಣುಗಳ ಧೋರಣೆಯು ವಿಭಿನ್ನವಾಗಿದೆ. ಆದರೆ ಶೂದ್ರ ಹೆಣ್ಣುಗಳ ಧೋರಣೆಯು ಹೆಚ್ಚು ಕಡಿಮೆ ಒಂದೇ ರೀತಿಯದಾಗಿದೆ. ಪ್ರಶ್ನೆಯ ಲಚ್ಚಿ, ನಂಜಿ ಕಾರ್ತಿಕದ ಅಬ್ಬಕ್ಕ, ಸಂಸ್ಕಾರದ ಬೆಳ್ಳಿಯನ್ನು ನೆನಪಿಸಿಕೊಳ್ಳಬಹುದು.

೨. ಶೂದ್ರ ಹೆಣ್ಣು – ವಿಧವೆ, ಬಾಲ್ಯವಿವಾಹ ಇದ್ದರೂ ನಿರ್ಭಿಡೆಯ ಬದುಕು ಈಕೆಯದು. ತನ್ನ ಜೀವನ ನಿರ್ವಹಣೆಗಾಗಿ ಮೇಲ್ವರ್ಗದ ಪುರುಷನೊಂದಿಗೆ ಲೈಂಗಿಕ ಸಂಬಂಧವಿರುತ್ತದೆ. ಪ್ರಶ್ನೆಯ ಲಚ್ಚಿ, ಸಂಸ್ಕಾರದ ಚಂದ್ರಿ, ಬೆಳ್ಳಿ,

ಸಮಾಜದ ಯಾವ ಕಟ್ಟುಪಾಡುಗಳಿಗೂ ಎದೆಗುಂದದ ಈಕೆ ಮೇಲ್ವರ್ಗದ ಅಥವಾ ಬ್ರಾಹ್ಮಣ ಪುರುಷನೊಂದಿಗೂ ಮುಕ್ತವಾಗಿ ಲೈಂಗಿಕ ಸಂಬಂಧ ಹೊಂದುತ್ತಾಳೆ. ಪ್ರಶ್ನೆಯ ಲಚ್ಚಿ,

ಶೋಷಣೆಗೊಳಗಾಗಿದ್ದರೂ ತಾನು ನಂಬಿದ ಪುರುಷನ ಒಳಿತನ್ನೇ ಬಯಸುತ್ತಾಳೆ. ಭವದ

೩. ಗಂಡು – ನಗರ ಮತ್ತು ಗ್ರಾಮ ಪರಿಸರದಲ್ಲಿ ಪುರುಷ ಪುರೋಹಿತನಾಗಿ, ಊರಿನ ನಾಯಕನಾಗಿ, ಹಲವಾರು ನೆಲೆಯಲ್ಲಿ ಚಿತ್ರಿಸಲ್ಪಟ್ಟಿರುತ್ತಾನೆ. ಸಂಸ್ಕಾರದ ಪ್ರಾಣೇಶಾಚಾರ್ಯ, ಆಕಾಶ ಮತ್ತು ಬೆಕ್ಕು ನ ಆಚಾರ್ಯ

ಪರಂಪರೆಯನ್ನು ಮೀರಲಾಗದೆ ಅದರೊಳಗೆ ಹಲವಾರು ದ್ವಂದ್ವಗಳನ್ನು ಎದುರಿಸುವ ವ್ಯಕ್ತಿಯಾಗಿ ಚಿತ್ರಿಸಲ್ಪಟ್ಟಿದ್ದಾನೆ. ಇಲ್ಲಿ ಶೂದ್ರ ಹೆಣ್ಣು ಮಕ್ಕಳಾದ ನಂಜಿ, ಲಚ್ಚಿ (ಪ್ರಶ್ನೆ) ಅಬ್ಬಕ್ಕ (ಕಾರ್ತಿಕ) ಮತ್ತು ಬ್ರಾಹ್ಮಣ ಬಾಲವಿಧವೆಯರಾದ ಲಕ್ಷ್ಮಿ (ಪ್ರಕೃತಿ) ಪಾರ್ವತಿ (ಪ್ರಶ್ನೆ) ಯಮುನಕ್ಕ (ಘಟಶ್ರಾದ್ಧ) ಇವರೆಲ್ಲರ ವಿಸ್ತೃತರೂಪವಾಗಿ ಸಂಸ್ಕಾರದ ನಾರಣಪ್ಪ ದೊಡ್ಡ ಸವಾಲಾಗುತ್ತಾನೆ. ಲಚ್ಚಿ, ನಂಜಿ, ಅಬ್ಬಕ್ಕ ಇವರೆಲ್ಲ ಶೂದ್ರರಾದರೆ ನಾರಣಪ್ಪ ಬ್ರಾಹ್ಮಣನೇ. ಅನಂತಮೂರ್ತಿಯವರ ಕಥೆಗಳಲ್ಲಿ ಕೇವಲ ಹೊರಗಿನ ಕುತೂಹಲಗಳಾಗಿ ಬರುತ್ತಿದ್ದ ಶೂದ್ರ ಹೆಣ್ಣು ಮಕ್ಕಳ ಮೂಲಕ ಧ್ವನಿತವಾಗುತ್ತಿದ್ದ ಅಂಶ ಬ್ರಾಹ್ಮಣ ಪರಿಸರದ ಒಳಗೇ, ಬ್ರಾಹ್ಮಣನೇ ಆದ ನಾರಣಪ್ಪನಲ್ಲಿ ಪ್ರಕಟವಾಗಿದೆ.

ಪರಂಪರೆಯನ್ನು ಮೀರಿ ಆಧುನಿಕ ಜಗತ್ತಿಗೆ ಮುಖಾಮುಖಿಯಾಗಿ ನಿಲ್ಲುವ ಮೇಲ್ಜಾತಿ, ಕೆಳಜಾತಿಯ ಹೆಣ್ಣು ಮತ್ತು ಗಂಡು ಪಾತ್ರಗಳ ಚಿತ್ರಣವಿದೆ.

ಅನಂತಮೂರ್ತಿಯವರ ಕಥಾ ಸಾಹಿತ್ಯದಲ್ಲಿ ಬ್ರಾಹ್ಮಣ ಸ್ತ್ರೀಯರು ಮತ್ತು ಅವರ ಬದುಕು. ಬ್ರಾಹ್ಮಣ ಸ್ತ್ರೀಯರನ್ನು ರಸಹೀನರನ್ನಾಗಿ ಚಿತ್ರಿಸಿದ್ದಾರೆ. (ಪ್ರಶ್ನೆಯ ಪಾರ್ವತಿ, ಘಟಶ್ರಾದ್ಧದ ಯಮುನಕ್ಕ ಪ್ರಕೃತಿಯ ಲಕ್ಷ್ಮಿ, ಪ್ರಸ್ತದ ನೇತ್ರಾವತಿ ದಿವ್ಯದ ಗಂಗೆ-ಗೌರಿ ಇವರನ್ನು ಬಿಟ್ಟು) ಬಚ್ಚಗಲ್ಲದ, ಬತ್ತಿದ ಎದೆಯ, ಬೇಳೆಹುಳಿ ವಾಸನೆ ಬರುವ ಬಾಯಿಯ, ಮೊಂಡು ಜಡೆಯ, ಸೊರಗಿದ ಮೋರೆಯ ಮುತ್ತೈದೆಯರು. ಉದಾಹರಣೆಗೆ ಸಂಸ್ಕಾರದ ಭಾಗೀರಥಿ, ಮೌನಿಯ ಗೌರಮ್ಮ, ಪ್ರಸ್ತದ ವೆಂಕಮ್ಮ ಮುಂತಾದವರು. ಶೂದ್ರ ಸ್ತ್ರೀಯರನ್ನು ರಸವತ್ತಾಗಿ ವರ್ಣಿಸಿದ್ದಾರೆ. ಪ್ರಶ್ನೆಯ ಲಚ್ಚಿ-ನಂಜಿ, ಕಾರ್ತೀಕದ ಅಬ್ಬಕ್ಕ, ಸಂಸ್ಕಾರದ ಚಂದ್ರಿ-ಬೆಳ್ಳಿ, ಈ ಅಂಶಗಳಿಗೆ ಅವರ ಕಥಾ ಸಾಹಿತ್ಯದುದ್ದಕ್ಕೂ ಹಲವಾರು ನಿದರ್ಶನಗಳಿವೆ. ಹೀಗೆ ಇಲ್ಲಿಅನಾವರಣಗೊಳ್ಳುವ ಸ್ತ್ರೀ ಮತ್ತು ಪುರುಷ ಪಾತ್ರಗಳು ಕೌಟುಂಬಿಕ ಆವರಣದಲ್ಲಿಯೇ ಪೂರ್ತಿಯಾಗಿ ಚಿತ್ರಿಸಿಕೊಂಡು ನಂತರ ಸಮಾಜ ಮುಖಿಯಾದ ಧೋರಣೆಗೆ ಬರುತ್ತವೆ.

೨.೩ ವ್ಯಕ್ತಿ ಮತ್ತು ಸಮಾಜ

ಸಂಸ್ಕೃತಿಯಲ್ಲಿ ವ್ಯಕ್ತಿ ಮತ್ತು ಸಮಾಜ ಎರಡು ಪ್ರಮುಖ ಧೋರಣೆಗಳಾಗಿವೆ. ವ್ಯಕ್ತಿಯು ಸಮಾಜದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದಾನೆ. ಸಾಮಾಜಿಕ ಪರಿಸರದ ಹಿನ್ನೆಲೆಗೆ ತಕ್ಕಂತೆ ವ್ಯಕ್ತಿಯ ಆಲೋಚನೆ, ವಿಚಾರಗಳು ಮೂಡಿಬರುತ್ತವೆ. ಒಂದು ಹಂತದವರೆಗೆ ವ್ಯಕ್ತಿ ಮತ್ತು ಸಮಾಜ ಸಮಪಾತಳಿಯಲ್ಲಿ ಚಲಿಸುತ್ತಾ ಸಮತೋಲನವನ್ನು ಕಾಯ್ದುಕೊಂಡಿರುತ್ತವೆ. ಇವೆರಡರ ನಡುವೆ ಅಂತರವುಂಟಾದಾಗ ಅಸಮತೋಲನ ಸ್ಥಿತಿಯಿಯಿಂದಾಗಿ ಸಂಘರ್ಷವೇರ್ಪಡುತ್ತದೆ.

ನವ್ಯರು ಕಥನಸಾಹಿತ್ಯದಲ್ಲಿ ಪ್ರತಿಯೊಂದು ಸಮಸ್ಯೆಗಳಂತೆ ಸಾಮಾಜಿಕ ಸಮಸ್ಯೆಯನ್ನೂ ಸಹ ವ್ಯಕ್ತಿನಿಷ್ಠತೆಯ ನೆಲೆಯಲ್ಲಿ ಶೋಧಿಸಿ ಅವುಗಳಿಗೆ ವೈಯಕ್ತಿಕ ರೀತಿಯಲ್ಲಿ ಪರಿಹಾರ ಕಂಡುಕೊಳ್ಳಲು ಪ್ರಯತಿನಿಸುತ್ತಾರೆ. ಈ ದೃಷ್ಟಿಯಿಂದ ನೋಡಿದಾಗ ಅನಂತಮೂರ್ತಿಯವರ ಸಾಹಿತ್ಯದಲ್ಲಿ ನಡೆದ ವೈಯಕ್ತಿಕ ಮೌಲ್ಯಗಳ ಶೋಧನೆ ಕೂಡ ಇದೇ ಲಕ್ಷಣವನ್ನು ಬಿಂಬಿಸುತ್ತದೆ. ಶಾಂತಿನಾಥ ದೇಸಾಯಿ, ಪೂರ್ಣಚಂದ್ರ ತೇಜಸ್ವಿ, ಮುಂತಾದವರ ಸಾಹಿತ್ಯದಲ್ಲಿ ಸಾಮಾಜಿಕ ಸಮಸ್ಯೆಗಳು ವೈಯಕ್ತಿಕ ಸ್ವರೂಪ ಪಡೆಯುತ್ತವೆ. ಅನಂತಮೂರ್ತಿಯವರು ಸಾಮಾಜಿಕ ವಿಷಯಗಳಿಂದ ಬದುಕಿನ ಮೂಲ ಮತ್ತು ಹೆಚ್ಚು ಗಂಭೀರ ಸಮಸ್ಯೆಗಳ ಕಡೆಗೆ ಗಮನಹರಿಸುತ್ತಾರೆ. ಇಲ್ಲಿ ಸಾಮಾಜಿಕ ವಾಸ್ತವಿಕತೆಗಳಿಗಿಂತ ವ್ಯಕ್ತಿನಿಷ್ಠತೆ ಮತ್ತು ವೈಯಕ್ತಿಕತೆ ಹೆಚ್ಚು ಮಹತ್ವವನ್ನು ಪಡೆಯುತ್ತವೆ. ಸಮಸ್ಯೆಯನ್ನು ವ್ಯಕ್ತಿನಿಷ್ಠತೆಯ ನೆಲೆಯಲ್ಲಿ ತಲಸ್ಪರ್ಶಿಯಾಗಿ ಶೋಧಿಸುತ್ತಾರೆ. ಈ ಸಂದರ್ಭದಲ್ಲಿ ಯಾವುದೇ ರೀತಿಯ ಒಪ್ಪಂದ ಮಾಡಿಕೊಳ್ಳದೇ ಅವನ್ನು ಆಯಾ ವ್ಯಕ್ತಿಗಳ ಬದುಕಿನಲ್ಲೇ ಅವರವರ ಅನುಭವದ ಮಿತಿಯಲ್ಲೇ ಪರಿಹಾರಕ್ಕೆ ಯತ್ನಿಸುತ್ತಾರೆ. ಇವರ ದೃಷ್ಟಿ ಸೃಷ್ಟಿ ವೈಯಕ್ತಿಕ ನೆಲೆಯಲ್ಲಿದೆ.

ಅನಂತಮೂರ್ತಿಯವರು ವ್ಯಕ್ತಿ ಹಾಗೂ ಕುಟುಂಬದ ಚಿತ್ರಣದ ಮೂಲಕ ಸಾಂಸ್ಕೃತಿಕವಾದ ಚಾಲನೆಯನ್ನು ಒದಗಿಸಿದ್ದಾರೆ. ವ್ಯಕ್ತಿ ಸಮಾಜದೊಂದಿಗಿನ ಸಂಬಂಧವನ್ನು ಕಳೆದುಕೊಂಡಾಗ ಪರಕೀಯನಾಗುತ್ತಾನೆ. ಆಗ ವ್ಯಕ್ತಿ ಮತ್ತು ಸಮಾಜದ ನಡುವೆ ಬಿರುಕುಂಟಾಗುತ್ತದೆ. ವ್ಯಕ್ತಿಯ ಹಾಗೂ ಕುಟುಂಬದಲ್ಲಿನ ವಿಚಾರಗಳ ಭಿನ್ನತೆಯು ಘರ್ಷಣೆಗೆ ಕಾರಣವಾಗುತ್ತದೆ. ಈ ಘರ್ಷಣೆ ಸಮಾಜದ ಅಸ್ತಿತ್ವವನ್ನುಳಿಸಿಕೊಳ್ಳುವ ಉದ್ದೇಶವನ್ನು ಹೊಂದಿರುತ್ತದೆ. ಈ ವಿಚಾರಗಳು ಕೌಟುಂಬಿಕ ಆವರಣವನ್ನು ತಿಳಿಗೊಳಿಸಬಹುದು. ಇಲ್ಲವೆ ಸಂಘರ್ಷದಲ್ಲಿ ಕೊನೆಗೊಳ್ಳಬಹುದು. ಕುಟುಂಬದ ಸದಸ್ಯರು ತಮ್ಮ ತಮ್ಮ ಬೌದ್ಧಿಕ ನೆಲೆಯನ್ನು ಆಶ್ರಯಿಸಿದಾಗ ಪರಸ್ಪರ ಮುಖಾಮುಖಿಯಾಗುತ್ತಾರೆ. ಇಂತಹ ಮುಖಾಮುಖಿಯನ್ನು ಈ ಮುಂದಿನ ಕತೆಗಳಲ್ಲಿ ವಿವೇಚಿಸಲಾಗಿದೆ.

ವ್ಯಕ್ತಿಯ ಅವಶ್ಯಕತೆ ಮತ್ತು ಸಾಮಾಜಿಕ ನಿರ್ಬಂಧಗಳ ನಡುವಿನ ಸಂಘರ್ಷವನ್ನು 'ಘಟಶ್ರಾದ್ಧ' ಕತೆಯಲ್ಲಿ ಕಾಣಬಹುದು. ಶೇಷಗಿರಿ ಉಡುಪರದು ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬವಾಗಿದೆ. ಹೆಂಡತಿಯನ್ನು ಕಳೆದುಕೊಂಡ ಉಡುಪರಿಗೆ ಯಮುನಕ್ಕ ಒಬ್ಬಳೇ ಮಗಳು. ಮದುವೆಯಾದ ಸ್ವಲ್ಪದಿನಗಳಲ್ಲಿ ಯಮುನಕ್ಕನ ಗಂಡ ಹಾವು ಕಚ್ಚಿ ಸಾಯುತ್ತಾನೆ. ವಿಧವೆಯಾದ ಯಮುನಕ್ಕ ತಂದೆಯ ಮನೆಯಲ್ಲಿ ಆಶ್ರಯ ಪಡೆಯುತ್ತಾಳೆ. ಬೇರೆ ಬೇರೆ ಕಡೆಯಿಂದ ವೇದಾಧ್ಯಯನ ಮಾಡಲು ಬಂದ ವಿದ್ಯಾರ್ಥಿಗಳಿಗೆ ಉಡುಪರು ಪಾಠ ಹೇಳಿಕೊಡುತ್ತಾರೆ. ಮನೆಯ ವಹಿವಾಟನ್ನು ನೋಡಿಕೊಂಡು ಉಡುಪರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅಡಿಗೆ ಮಾಡಿ ಹಾಕುವುದು ಯಮುನಕ್ಕನ ಕೆಲಸವಾಗಿದೆ. ಯಾಗಕ್ಕೆಂದು ಗೋಕರ್ಣಕ್ಕೆ ಹೊರಟ ಶೇಷಗಿರಿ ಉಡುಪರು ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡಲು ಉಪಾಧ್ಯರಿಗೆ ಒಪ್ಪಿಸುತ್ತಾರೆ. ವಿದ್ಯಾರ್ಥಿಗಳ ಮೇಲೆ ನಿಗಾ ಇಡಬೇಕೆಂದು ಯಮುನಕ್ಕನಿಗೆ ಉಡುಪರು ಹೇಳುತ್ತಾರೆ.

ಯಮುನಕ್ಕನ ಹತ್ತಿರವಿರುವ ವಿದ್ಯಾರ್ಥಿಗಳಲ್ಲಿ ಶಾಸ್ತ್ರಿ ಹಾಗು ಗಣೇಶ ನಾಣಿಗಿಂತ ದೊಡ್ಡವರು. ದುಶ್ಚಟಗಳಿಗೆ ಬಲಿಯಾದ ಅವರು ಚಿಕ್ಕವನಾದ ನಾಣಿಯನ್ನು ಪೀಡಿಸುತ್ತಿದ್ದರಿಂದ ಅವನು ಹೆಚ್ಚಾಗಿ ಯಮುನಕ್ಕನ ಹತ್ತಿರ ಇರುತ್ತಾನೆ. ಶೇಷಗಿರಿ ಉಡುಪರು ಊರಲ್ಲಿ ಇಲ್ಲದ ಸಂದರ್ಭದಲ್ಲಿ ಯಮುನಕ್ಕನಿಗೆ ಪಕ್ಕದ ಶಾಲೆಯ ಶಿಕ್ಷಕನೊಂದಿಗೆ ಅನೈತಿಕ ಸಂಬಂಧ ಬೆಳೆಯುತ್ತದೆ. ಯಮುನಕ್ಕನ ಅಕ್ರಮ ಬಸಿರು ಬೆಳೆದಂತೆ ಹೊರಗಿನ ಸಮಾಜದ ಸಂಬಂಧದಿಂದ ದೂರ ಉಳಿಯಲು ಬಯಸಿದ ಯಮುನಕ್ಕ ದೇವಸ್ಥಾನಕ್ಕೆ ಹೋಗುವುದನ್ನು ನಿಲ್ಲಿಸುತ್ತಾಳೆ. ಮನೆಯಲ್ಲೇ ಹೆಚ್ಚಾಗಿರುತ್ತಿದ್ದುದರಿಂದ ಅವಳು ಹೊರಗಿನ ವಿಷಯವನ್ನು ತಿಳಿದುಕೊಳ್ಳಲು ನಾಣಿಯನ್ನು ಅವಲಂಬಿಸುತ್ತಾಳೆ.

ಶೇಷಗಿರಿ ಉಡುಪರೆಂದರೆ ಭಯಪಡುವ ನಾಣಿಗೆ ತನ್ನಮ್ಮನಿಗಿಂತ ಚಿಕ್ಕವಳಾಗಿದ್ದ ಯಮುನಕ್ಕನೆಂದರೆ ಸಲಿಗೆಯಿದೆ. ಉಡುಪರು ಊರಿಗೆ ಹೋಗಿದ್ದರಿಂದ ತನ್ನನ್ನು ಶಾಸ್ತ್ರಿ ಹಾಗೂ ಗಣೇಶ ಇನ್ನು ಹೆಚ್ಚು ಕಾಡಿಸಬಹುದೆಂದು ತಿಳಿದುಕೊಂಡ ನಾಣಿ ತಾನು ಊರಿಗೆ ಹೋಗುವುದಾಗಿ ಯಮುನಕ್ಕನಿಗೆ ತಿಳಿಸುತ್ತಾನೆ. ನೀನು ಅವರ ಜೊತೆ ಹೊಗಬೇಡ ಎಂದು ನಾಣಿಯನ್ನು ಸಮಾಧಾನಪಡಿಸಿದ ಯಮುನಕ್ಕ ಗೋಪಾಲ ಜೋಯಿಸರ ಮನೆಗೆ ಬಿಲ್ವ ಪತ್ರೆಯನ್ನು ತರಲು ಅವನನ್ನು ಕಳಿಸುತ್ತಾಳೆ. ಗೋಪಾಲ ಜೋಯಿಸರ ಅಕ್ಕ ವಿಧವೆಯಾದ ಗೋದಾವರಮ್ಮ ಮಡಿವಂತ ಹೆಂಗಸು. ಯಮುನಕ್ಕನ ಅನೈತಿಕ ಸಂಬಂಧದ ಗುಟ್ಟು ಗೋದಾವರಮ್ಮನಿಗೆ ತಿಳಿದಿರುತ್ತದೆ. ಖಷಪಡಿಸಿಕೊಳ್ಳಲು ಮುಗ್ಧನಾದ ನಾಣಿಯಿಂದ ಯಮುನಕ್ಕನ ವಿಚಾರವನ್ನು ಉಪಾಯವಾಗಿ

[illegible]

[illegible]

[illegible]

[illegible]

ತಿಳಿದು ಕೊಳ್ಳಲು ಪ್ರಯತ್ನಿಸುತ್ತಾಳೆ. ಯಮುನಕ್ಕ ದೇವಸ್ಥಾನಕ್ಕೆ ಬಂದಿರಲಿಲ್ಲ ಎಂದು ಗೋದಾವರಮ್ಮ ಕೇಳಿದ್ದಕ್ಕೆ ತಲೆ ಸುತ್ತು ಬಂದಿದ್ದರಿಂದ ಮಲಗಿದ್ದಾರೆ ಎನ್ನುತ್ತಾನೆ ನಾಣಿ. ಗೋದಾವರಮ್ಮ ಆಗ ಗೋಪಾಲಜೋಯಿಸರಿಗೆ ಕೇಳಿದೆಯೇನೋ ಜ್ವರ ಬರದೇನೇ ಜ್ವರದ ಗಡ್ಡೆ ಬೆಳೆದಿರಬೇಕು ಪಾಪ ಎಂದು ಗೋದಾವರಮ್ಮ ವ್ಯಂಗ್ಯವಾಗಿ ಹೇಳುತ್ತಾಳೆ.

ಗೋದಾವರಮ್ಮ ಹೇಳಿದ್ದನ್ನು ನಾಣಿಯಿಂದ ತಿಳಿದ ಯಮುನಕ್ಕ ಅಳುತ್ತಾಳೆ. ಇನ್ನು ಮುಂದೆ ತನ್ನನ್ನು ಯಾರು ಕೇಳಿದರೂ ಜ್ವರ ಬರುತ್ತಿದೆ ಎಂದು ನಾಣಿ ಹೇಳಲು ತಿಳಿಸುತ್ತಾಳೆ. ಸಂಪ್ರದಾಯಸ್ಥ ಜೀವನ ನಡೆಸುತ್ತಿದ್ದ ಯಮುನಕ್ಕ ಅಕಸ್ಮಾತ್ ಅನೈತಿಕ ಸಂಬಂಧ ಹೊಂದಿದ್ದರಿಂದ ಸಮಾಜದಲ್ಲಿ ತಲೆ ಎತ್ತಿ ಬದುಕಲು ಹೆದರುತ್ತಾಳೆ. ಸಮಾಜದ ನಿಂದೆಗೆ ಗುರಿಯಾದ ಅವಳು ಶಾಸ್ತ್ರಿ, ಗಣೇಶರಿಗೆ ಬುದ್ಧಿ ಹೇಳುವ ಅಧಿಕಾರವನ್ನು ಕಳೆದುಕೊಳ್ಳುತ್ತಾಳೆ. ಸೂಕ್ಷ್ಮವಾಗಿ ಯಮುನಕ್ಕನ ವಿಚಾರವನ್ನು ಗ್ರಹಿಸಿದ ಉಪಾಧ್ಯರು ಪಾಠ ಹೇಳಿಕೊಡುವುದನ್ನು ನಿಲ್ಲಿಸುತ್ತಾರೆ. ಗಣೇಶನನ್ನು ಅವರ ತಂದೆ ಮರಳಿ ಮನೆಗೆ ಕರೆದುಕೊಂಡು ಹೋಗುತ್ತಾರೆ. ಗೋದಾವರಮ್ಮ ಕೊಂಕು ಮಾತನಾಡಿ ವಿಷಯವನ್ನು ಬಹಿರಂಗಪಡಿಸಿದಾಗ ಯಮುನಕ್ಕನನ್ನು ಶಾಸ್ತ್ರಿ ನಿಂದಿಸುತ್ತಾನೆ.

ಸಾಮಾಜಿಕ ಕಟ್ಟುಪಾಡುಗಳನ್ನು ಮೀರಿದ ಯಮುನಕ್ಕ, ಎದುರಾಗುವ ಸಮಸ್ಯೆಯನ್ನು ಒಂಟಿಯಾಗಿ ಎದುರಿಸಬೇಕಾಗುತ್ತದೆ. ಸಮಾಜದಲ್ಲಿ ತನ್ನ ಬಗ್ಗೆ ಮೂಡುವ ಪ್ರತಿಕ್ರಿಯೆಗಳನ್ನು ನಾಣಿಯಿಂದ ತಿಳಿದು ಕೊಳ್ಳಬೇಕಾಗುತ್ತದೆ. ಯಮುನಕ್ಕನ ಬಸಿರಿಗೆ ಕಾರಣನಾದ ಶಿಕ್ಷಕನು ಗರ್ಭಪಾತ ಮಾಡಿಸಿಕೊಳ್ಳಲು ಒತ್ತಾಯಿಸಿದಾಗ ಅನಿವಾರ್ಯವಾಗಿ ಘಟಶ್ರಾದ್ಧ ಮಾಡಿಸಿಕೊಳ್ಳುತ್ತಾಳೆ. ಯಮುಕನಕ್ಕನ ಜೊತೆಗೆ ಇರುವ ಹಾಗೆ ಇದ್ದು ಅವನ ತಂದೆ ಐತಾಳರು ಆರಂಭದಲ್ಲೇ ಅದೃಷ್ಟವಶಾತ್ ಬಿಟ್ಟುಹೋಗುತ್ತಾರೆ. ನಾಣಿ ಎಂಬ ಆಚಾರವಂತ ಬ್ರಾಹ್ಮಣರ ಮುಗ್ಧ ಹುಡುಗ ಕ್ರಮೇಣವಾಗಿ ಮುಗ್ಧತೆಯನ್ನು ಕಳೆದುಕೊಂಡು ವಿಕೃತವಾಗುವುದನ್ನು ಲೇಖಕರು ಯಥಾರ್ಥವಾಗಿ ಗುರುತಿಸಿದ್ದಾರೆ. ನಾಣಿಯು ಹೀಗೆ ಮುಗ್ಧತೆಯನ್ನು ಕಳೆದುಕೊಳ್ಳುತ್ತಿರುವಾಗಲೇ ಯಮುನಕ್ಕ ಮದುವೆಗೆ ಮುಂದೆ ಗರ್ಭಿಣಿಯಾಗಿ, ಸಾಮಾಜಿಕ ಶಕ್ತಿಗಳೊಂದಿಗೆ ಸೆಣಸುತ್ತಾಳೆ.

ಯಮುನಕ್ಕನ ವಿಷಯ ತಿಳಿದ ನಾಣಿಯ ತಂದೆ ಅವನನ್ನು ಮನೆಗೆ ಕರೆದುಕೊಂಡು ಹೋಗುತ್ತಾರೆ. ಸುದ್ದಿ ತಿಳಿದ ಉಡುಪರು ಮಗಳು ಸತ್ತಳೆಂದು ಶ್ರಾದ್ಧ ಮಾಡುತ್ತಾರೆ. ಯಮುನಕ್ಕನನ್ನು ತಮ್ಮ ಜಾತಿಯಿಂದ ಬಹಿಷ್ಕಾರ ಹಾಕಿ ಚಿಕ್ಕ ಹುಡುಗಿಯನ್ನು ಮದುವೆ ಮಾಡಿಕೊಳ್ಳುತ್ತಾರೆ. ಸಾಮಾಜಿಕ ಶಕ್ತಿಗಳನ್ನು ಒಂಟಿಯಾಗಿ ಎದುರಿಸಲಾಗದ ಯಮುನಕ್ಕ ಸೋಲುತ್ತಾಳೆ. "ಯಮುನಕ್ಕ ಎಲ್ಲ ನೋವನ್ನು ಅರಗಿಸಿಕೊಂಡು ಬದುಕುವ ಇಚ್ಛೆಯನ್ನು ವ್ಯಕ್ತಪಡಿಸಿದರೂ ಸಮಾಜದ ಒತ್ತಡಕ್ಕೆ ಸಿಕ್ಕು ಬಹಿಷ್ಕಾರವನ್ನು ಪಡೆಯುತ್ತಾಳೆ. ಜಾತಿಯಕಟ್ಟುಪಾಡುಗಳು ಹೆಣ್ಣಿಗೊಂದು ನೀತಿ ಗಂಡಿಗೊಂದು ನೀತಿ ಅನುಸರಿಸಿರುವುದನ್ನು ಯಮುನಕ್ಕ ಮತ್ತು ಉಡುಪರ ಮೇಲಾಗಿರುವ ಪರಿಣಾಮದಿಂದ ತಿಳಿಯಬಹುದು." [೮]

'ಮೌನಿ' ಕತೆಯಲ್ಲಿ ಒಂಟಿಯಾದ ಕುಪ್ಪಣ್ಣ ಭಟ್ಟ ಸಮಾಜವನ್ನು ಎದುರಿಸಲಾಗದೆ ಮೌನಿಯಾಗುತ್ತಾನೆ. ಸಮಾಜದ ವ್ಯವಹಾರಗಳಲ್ಲಿ ಬದುಕನ್ನು ತೊಡಗಿಸಿಕೊಂಡ ಕುಪ್ಪಣ್ಣ ಭಟ್ಟನದು ಹಠದ ಸ್ವಭಾವ. ಜಗಳಗಂಟನಾದ ಇವನನ್ನು ಶ್ರೀಮಠವಾಗಲೀ ಕೆಲಸ ಮಾಡುವವರಾಗಲಿ ಹೀಗೆ ಸಮಾಜದ ಯಾರೂ ಮೆಚ್ಚುವುದಿಲ್ಲ. ಉಬ್ಬಸ ರೋಗದ ಮಡದಿ, ಮದುವೆ ವಯಸ್ಸಿಗೆ ಬಂದ ಮಗಳು ಹಾಗೂ ಜ್ವರದ ಗಡ್ಡೆಯಿಂದ

[illegible]

[illegible]

[illegible]

[illegible]

[illegible]

ಹೊಟ್ಟೆ ಡೊಳ್ಳಾದ ಮಗ ಇವರನ್ನು ನೋಡಿಕೊಳ್ಳುವ ಮನೆಯ ಜವಾಬ್ದಾರಿ ಒಂದು ಕಡೆಯಾದರೆ, ಬೆಳೆ ಬರದ ತೋಟ, ಸಂದಾಯ ಮಾಡಬೇಕಾದ ಗೇಣಿ, ಕಮ್ತಿಯ ಅಂಗಡಿಯಲ್ಲಿ ಬೆಳೆದ ಸಾಲದ ಜವಾಬ್ದಾರಿ ಇನ್ನೊಂದು ಕಡೆಗಿದೆ. ಅಕ್ಕನ ಮನೆಯ ಸ್ಥಿತಿಯನ್ನು ಕಂಡು ಸಹಾಯ ಮಾಡಲು ಮುಂದಾದ ಸುಬ್ರಹ್ಮಣ್ಯನನ್ನು ಕುಪ್ಪಣ್ಣ ಭಟ್ಟ ಬೈದು ಕಳಿಸುತ್ತಾನೆ. ಹಠದ ಸ್ವಭಾವ ಹಾಗೂ ಜಗಳಗಂಟತನದಿಂದ ಕುಪ್ಪಣ್ಣಭಟ್ಟ ಸಮಾಜದಿಂದ ದೂರ ಉಳಿಯುತ್ತಾನೆ.

ನಾಜೂಕಾದ ಮಾತಿನ ಕಲೆಯನ್ನು ಕರಗತ ಮಾಡಿಕೊಂಡ ಅಪ್ಪಣ್ಣಭಟ್ಟ ಸಮಾಜಕ್ಕೆ ಬೇಕಾದವನಾಗುತ್ತಾನೆ. ಅಡಿಕೆ ತೋಟ, ಗದ್ದೆ ಹಾಗೂ ಮನೆಯನ್ನು ಹೊಂದಿದ ಇವನು ಸಮೃದ್ಧವಾದ ಜೀವನ ನಡೆಸುತ್ತಾನೆ. ಮನೆಗೆ ಬಂದ ಸಾಲ ವಸೂಲಿಗಾರರಿಗೆ ಬಣ್ಣದ ಚಾಪೆ ಹಾಕಿ, ಕಾಫಿಕೊಟ್ಟು ಸಾಲದ ಲೆಕ್ಕವನ್ನು ಚುಕ್ತ ಮಾಡುತ್ತಾನೆ. ಸ್ಥಿತಿವಂತನಾದ್ದರಿಂದ ಕುಪ್ಪಣ್ಣಭಟ್ಟನ ಸಾಲ ವಸೂಲಿಗೆಂದು ಬಂದ ಜನರಿಗೆ ಅಪ್ಪಣ್ಣಭಟ್ಟ ಹಣವಸೂಲಿಯ ಉಪಾಯವನ್ನು ಹೇಳಿಕೊಡುತ್ತಾನೆ. ಸಮಾಜದಲ್ಲಿ ಉತ್ತಮಸ್ಥಾನ ಪಡೆದ ಶ್ರೀಮಠವು ಸ್ಥಿತಿವಂತನಾದ ಅಪ್ಪಣ್ಣಭಟ್ಟನನ್ನು ಬೆಂಬಲಿಸಿದರೆ, ಗೇಣಿ ಸಂದಾಯ ಮಾಡದ ಕುಪ್ಪಣ್ಣ ಭಟ್ಟನನ್ನು ನಿಂದಿಸುತ್ತದೆ. ಕುಟುಂಬ, ಹಾಗೂ ಸಮಾಜದಿಂದ ದೂರ ಉಳಿದ ಕುಪ್ಪಣ್ಣಭಟ್ಟ ಏಕಾಂಗಿಯಾಗಿ ಸೋಲುತ್ತಾನೆ.

ಕುಪ್ಪಣ್ಣ ಭಟ್ಟ ವ್ಯಾವಹಾರಿಕವಾದ ಘಟನೆಗಳಿಂದ ಕಾಯುವ ಹೊಂದಿಕೊಳ್ಳುವ ಮೂಲಗಳಿಂದಲೇ ಅಸಹಕಾರದಿಂದ ಅವಮಾನದಿಂದ ವಿಶಿಷ್ಟ ಸಂಸ್ಕಾರಗಳನ್ನು ಪಡೆಯುತ್ತ ಬಂದಂತೆ ತನ್ನ ಪರಿಗಳನ್ನು ಕೀಳುತ್ತ ಕೀಳುತ್ತ ಜೈವಿಕ ಪ್ರಪಂಚದಿಂದ ದೂರವಾಗುತ್ತಾ ಒಂಟಿಯಾಗುತ್ತಾನೆ. ಜೀವನದ ಮೂರ್ತ ರೂಪದಲ್ಲಿ ಶ್ರೀಮಠ, ಸಮಾಜ, ನೆರೆಹೊರೆ ಕೆಲಸದಾಳುಗಳು (ಸೌದೆ ಕಡಿಯುವ ಮಂಜನೂ ಸೀಟಿನ ಕೆರೆ ಅಯ್ಯನವರದ್ದಾದ ಮೇಲೆ ಎನ್ನುತ್ತಾನೆ). ಭಾವ ಸುಬ್ರಹ್ಮಣ್ಯ, ಕೊನೆಗೆ ಮಡದಿ, ಮಕ್ಕಳು ಕೂಡ ದೂರವಾದರೆ, ಬದುಕಿನ ಅಮೂರ್ತ ಪ್ರಪಂಚದಲ್ಲಿ ಬದುಕುವ ಕೆಚ್ಚು, ಗೆಲ್ಲುವ ಛಲ, ಸಂಬಂಧ ಸ್ಥಾಪಿಸಿಕೊಳ್ಳುವ ಅತೀವ ಆಕಾಂಕ್ಷೆ, ಆಸೆ – ಇವುಗಳಿಂದ ದೂರವಾಗುತ್ತಾನೆ.''[೯] ವ್ಯಕ್ತಿಯನ್ನು ಕಾಪಾಡಬೇಕಾದ ಸುಮಾರು (ಅಪ್ಪಣ್ಣ ಭಟ್ಟ, ಕಂತಿ ಸಾಬ) ವ್ಯಕ್ತಿಯನ್ನು ಸುಲಿಯುವ ದಾರಿಯಲ್ಲಿ ಶ್ರೀಮಠದ ಜೊತೆ ಸೇರಿಕೊಳ್ಳುತ್ತ ವ್ಯಕ್ತಿಯ ಆರ್ತತೆಯನ್ನು ಕೇಳಿಸಿಕೊಳ್ಳುವುದಿಲ್ಲ. ಭಟ್ಟರ ಹೆಂಡತಿ ಮಕ್ಕಳು ಅವನನ್ನು ಒಂಟಿ ಮಾಡುತ್ತಾರೆ. ಹೀಗೆ ಸಂಬಂಧಗಳನ್ನು ಕಳೆದುಕೊಂಡ, ಸ್ಥಾಪಿಸ ಬಯಸದ ಪ್ರತಿಯೊಂದು ವ್ಯಕ್ತಿಯೂ ಇಲ್ಲಿ ಮೌನಿಯಾಗಿ ಗೋಚರಿಸುತ್ತಾನೆ.

ವ್ಯಕ್ತಿಯೊಬ್ಬ ವಿಭಿನ್ನ ಮನೋಧರ್ಮವು ಕುಟುಂಬದ ಸಮಾಜದ ಸಂಘರ್ಷಕ್ಕೆ ಕಾರಣವಾಗುವುದನ್ನು 'ಸೂರ್ಯನ ಕುದುರೆ' ಕತೆಯಲ್ಲಿ ಕಾಣಬಹುದು. ಮನೆಯ ಬಗ್ಗೆ ಕಾಳಜಿವಹಿಸದ ವೆಂಕಟಿಗ ಹೆಂಡತಿಗೆ ಬೇಜವಾಬ್ದಾರಿ ವ್ಯಕ್ತಿಯಾಗಿ ಕಾಣುತ್ತಾನೆ. ಮಗನು ತಂದೆಗಿಂತ ಭಿನ್ನವಾಗಿ ಬದುಕಲು ಬಯಸುತ್ತಾನೆ. ಬಾಲ್ಯದ ಗೆಳೆಯನಾದ ಅನಂತುವಿಗೆ ವೆಂಕಟಿಗ ಪಲಾಯನವಾದಿಯಂತೆ ತೋರುತ್ತಾನೆ. ವ್ಯವಹಾರಿಕ ದೃಷ್ಟಿಕೋನವಿಲ್ಲದ ವೆಂಕಟಿಗನು ಮುಗ್ಧ ವ್ಯಕ್ತಿಯಾಗಿದ್ದಾನೆ. ಮನಸ್ಸಿನ ಇಚ್ಛೆಯಂತೆ ಬದುಕುವ ಅವನ ನಡವಳಿಕೆಯು ಸಮಾಜಕ್ಕೆ ವಿಚಿತ್ರವೆನಿಸುತ್ತದೆ.

ಕುಟುಂಬ ನಿರ್ವಹಣೆಯ ಜವಾಬ್ದಾರಿಯನ್ನು ಲೆಕ್ಕಿಸದೇ ಇತರರಿಗೆ ಅಭ್ಯಂಜನ ಮಾಡಿಸುವ ವೆಂಕಟಿಗನು ಜಡತ್ವದ ಪ್ರತಿ ನಿಧಿಯೆನಿಸುತ್ತಾನೆ. ಪ್ರಕೃತಿಯನ್ನು ಇಷ್ಟಪಡುವ ಅವನು ನವಿಲು ಗುಡ್ಡದ ಗುಹೆಯಲ್ಲಿ ಹೋಗಿ

ನೆಲೆಸಬೇಕೆಂದು ಕೊಳ್ಳುತ್ತಾನೆ. ಹಾಯಲು ಬಂದದ್ದಕ್ಕೆ ಎದುರಾಗದೇ ಸರಿದು ನಿಲ್ಲುವ ವೆಂಕಟ ಎಲ್ಲರನ್ನು ನಗಿಸುತ್ತಾನೆ. ಸ್ವಂತ ಮಗನನ್ನು ಜವಾಬ್ದಾರಿಯ ಅರಿವಿಲ್ಲದಂತೆ ಬೆಳೆಸಿದ ವೆಂಕಟಿಗ ಎಲ್ಲವನ್ನು ಹಾಸ್ಯದಲ್ಲಿ ತೆಗೆದುಕೊಳ್ಳುತ್ತಾನೆ. ಊರಿನ ಬಾಯಿಗೆ ಬಿದ್ದ ಇವನು ಪಲಾಯನವಾದಿಯಂತೆ ಅನಂತುವಿಗೆ ಕಾಣಿಸುತ್ತಾನೆ. ವೆಂಕಟನ ಜೀವನ ಕ್ರಮದ ಪ್ರಸ್ತುತತೆ ಮತ್ತು ಉಪಯುಕ್ತತೆಗಳನ್ನು ಪ್ರಶ್ನಿಸುವ ನೆಲೆ ಇಲ್ಲಿ ಅನಂತುವಿನದಾಗಿದೆ.

ನೀವೇನೋ ಈ ಊರಲ್ಲಿ ಕೊಳೆಯುತ್ತೀರಿ ಎಂದರೆ ಈಗಿನ ಕಾಲದ ನಿಮ್ಮ ಮಗ ಕೊಳೆಯುವುದಿಲ್ಲ. ಊರಿಗೆಲ್ಲ ಉಪಕಾರ ಮಾಡಿದ ನೀವು ಜನರಿಗೆ ಸಸಾರವಾಗಿದ್ದೀರಿ. ನಿಮ್ಮಿಂದಾಗಿ ದುಗ್ಗಾಣಿ ಬೆಲೆ ನಮಗಿಲ್ಲ. ಮಗನಿಗೆ ಹೇಗೆ ಗೌರವ ಬರತ್ತೆ ಹೇಳಿ. ನೀವೋ ಹೋದರೆ ಹೋದಲ್ಲಿ ಬಂದರೆ ಬಂದಲ್ಲಿ ಹಿ ಹಿ ಅಂತ ಇದ್ದು ಬಿಡ್ತೀರಿ. ನಿಮ್ಮಂಥವರಿಂದ ಮಕ್ಕಳು ಏನು ಕಲಿತಾವು ? ನಿಮ್ಮಂಥವರಿಗೇಕೆ ಸಂಸಾರ. ಎಷ್ಟೋ ವರ್ಷದಿಂದ ಪೆನ್‌ಶನ್ ಕೂಡ ಬಂದಿಲ್ಲ. ಎಲ್ಲಾ ನಾನೇ ಮಾಡಿ ಸಾಯಬೇಕು. ದೊನ್ನೆಕಟ್ಟಬೇಕು. ಎಲೆ ಮಾಡಬೇಕು ಮನೆ ಒಪ್ಪ ಓರಣ ನೋಡಿಕೊಳ್ಳಬೇಕು. ಮಕ್ಕಳನ್ನು ಹದ್ ಬಸ್ತಲ್ಲಿಡಬೇಕು. ಒಂದು ಕಾಸು ಬಿಚ್ಚದ ಆ ಜುಗ್ಗ ಶೇಷಣ್ಣನಿಗೆ ಮೂರು ಮೂರು ಸಾರಿ ಬೇಯಿಸಿ ತಿನ್ನಿಸಬೇಕು. ಅನ್ನ ಸಾರು ಕಳಿಸಿದ್ದಕ್ಕೆ ಶೇಷಣ್ಣ ಮಾವಿನಮಿಡಿ ಕಳಿಸಬಾರ್ದಾ ನಿಮ್ಮ ತಾಯಿ ಕೈ ಯಾಕೆ ಹೀಗೆ ಗಿಡ್ಡ ಅಂದ್ನಂತೆ. ಬಿಟ್ಟಿ ಗೇಯೊದಲ್ದೆ ಅವನಿಂದ ನಾನು ಹೀಗೆ ಅನ್ನಿಸ್ಕೊಬೇಕಾ ಈ ಹಾಳು ಊರು ಬಿಟ್ಟು ನಾನಾಗಲೀ ನನ್ನ ಮಕ್ಕಳಿಗಾಗಲಿ ಜಾತ್ರೆ, ಸಿನಿಮಾ, ಪಟ್ಟಣ ಹೀಗೆ ನಾವೇನು ಕಂಡಿದ್ದೀವಿ ಹೇಳಿ ಕೆಟ್ಟದ್ದು ನಿಮಗೆ ತಿಳಿಯಲಿಲ್ಲ. ಶುದ್ಧ ಭೋಳೆ ನೀವು ಹೀಗೆ ಮುಗ್ಧನಾದ ವೆಂಕಟಿಗನನ್ನು ಹೆಂಡತಿಯು ನಿಂದಿಸುತ್ತಾಳೆ.

ಒಮ್ಮೆ ಶೇಷಣ್ಣನಿಗೆ ವೆಂಕಟಿಗ ಔಷಧಿ ತಂದು ಕೊಡುತ್ತಾನೆ. ಶೇಷಣ್ಣನು ಚಿಲ್ಲರೆಯನ್ನು ಎಣಿಸುವಾಗ ಅದರಲ್ಲಿ ಪಾವಲಿಯೊಂದು ಸವೆದಿದೆ ಎನ್ನುತ್ತಾನೆ. ಪಾವಲಿಯನ್ನು ಬದಲಿಸಲಿಕ್ಕಾಗಿ ವೆಂಕಟಿಗ ಮೂರು ಮೈಲಿ ನಡೆಯಬೇಕಾದ ಬಗ್ಗೆ ಶೇಷಣ್ಣ ಚಿಂತಿಸುವುದಿಲ್ಲ. ಕೊನೆಗೆ ಸವೆದ ಪಾವಲಿಯನ್ನು ತೆಗೆದುಕೊಂಡು ತನ್ನಲ್ಲಿದ್ದ ಪಾವಲಿಯನ್ನು ಶೇಷಣ್ಣಗೆ ಕೊಡುತ್ತಾನೆ. ಅದನ್ನು ತಿಳಿದ ರುಕ್ಕೂ ಶೇಷಣ್ಣ ಸತ್ತಮೇಲೆ ಸವೆದ ಪಾವಲಿಯನ್ನು ಅವನ ಹೆಣದ ಮೇಲೆ ಹಾಕಿ ಎನ್ನುತ್ತಾಳೆ. ಇಷ್ಟೆಲ್ಲಾ ಆದ ಮೇಲೂ ಶೇಷಣ್ಣನನ್ನು ಪ್ರೀತಿಯಿಂದ ಕಾಣುವ ವೆಂಕಟ ಅವನಿಗೆ ಗಂಜಿ ಮಾಡಿಕೊಡಲು ಹೆಂಡತಿಯನ್ನು ಕಾಡುತ್ತಾನೆ. ಆಗ ರುಕ್ಕು ಶೇಷಣ್ಣನ ಮಗ ತಿಂಗಳಿಗೆ ಐನೂರು ಕಳಿಸುತ್ತಾನಂತೆ, ನಿಮಗೊಂದು ದುಗ್ಗಾಣಿ ಬಿಚ್ಚಲಿಲ್ಲ. ನಿಮಗೋ ಹೊಟ್ಟೇಲಿ ಹುಟ್ಟಿದ ಮಗನ ಚಿಂತೆ ಇಲ್ಲಾ. ನಾನ್ಯಾಕೆ ಆ ಜುಗ್ಗನ ಶುಶ್ರೂಷೆ ಮಾಡಲಿ ಆ ಮುದುಕ ಇದ್ದರೇನು ಸತ್ತರೇನು ಎನ್ನುತ್ತಾಳೆ. ಆಗ ವೆಂಕಟ ಮಗಳು ಶಕುಂತಲಳ ಹತ್ತಿರ ಗಂಜಿ ಮಾಡಿಸಿಕೊಂಡು ಶೇಷಣ್ಣನಿಗೆ ಕೊಡುತ್ತಾನೆ.

ನಿನ್ನ ಹೆಣ್ಣು ಮಕ್ಕಳಿಗೆ ಮದುವೆ ವಯಸ್ಸಾಗಿದೆ. ನಾಳೆ ಕೆಟ್ಟರೆ ಏನುಗತಿ ಎಂದು ಅನಂತು ವೆಂಕಟಿಗನಿಗೆ ಹೇಳುತ್ತಾನೆ. ನೀನೇ ಒಂದು ಗಂಡು ನೋಡು ಎನ್ನುತ್ತಾನೆ. ವರದಕ್ಷಿಣೆ ನಾನೆಲ್ಲಿಂದ ತರಲಿ ಮುತ್ತಿನಂಥ ಹುಡುಗೀರು ಅವರ್ಯಾಕೆ ಕೆಡುತ್ತಾರೆ. ಕೆಡುವುದಾದರೆ ಅದು ಅವರ ಜಾಯಮಾನವೆನ್ನುತ್ತಾನೆ. ಪ್ರಿನ್ಸಿಪಾಲರಿಗೆ ಹೊಡೆದ ಮಗನಿಗೆ ಜೈಲಾಗುತ್ತದೆ ಎಂದು ತಿಳಿದಾಗಲು ವೆಂಕಟಿಗ ಅವನ ಹಣೇಲಿ ಬರದದ್ದು ಆಗುತ್ತದೆ ಎನ್ನುತ್ತಾನೆ. ಊರಿನವರಿಗೆ ಜೋಯಿಸನಾಗಿ ನಿಮಿತ್ಯ ಹೇಳುತ್ತ, ಮಣಿ ಮಂತ್ರಿಸಿ ಕೊಡುತ್ತ ತನ್ನ ಕೈಲಾದ ಸಹಾಯವನ್ನು ಮಾಡುವ ವೆಂಕಟಿಗ ಎಲ್ಲವನ್ನು ಸಮಾಧಾನ ಚಿತ್ತದಿಂದ ಎದುರಿಸುತ್ತಾನೆ. ಹಡೆತನದಿಂದ ಇರುವ ಅವನನ್ನು ಸಮಾಜ ತಮಾಷೆಯಾಗಿ ಕಾಣುತ್ತದೆ. ಹೀಗೆ ನೆರೆ ಹೊರೆಯವರೊಂದಿಗಿನ ವೆಂಕಟಿಗನ

ಸಂಬಂಧಗಳು ಕುಟುಂಬದ ನಿರೀಕ್ಷಣೆ ವಿರುದ್ಧವಾಗಿ ಸಾಗುತ್ತವೆ. ದೈನಂದಿನ ಸಮಸ್ಯೆಗಳಿಂದಾಗಿ ಸಂಘರ್ಷವನ್ನು ಎದುರಿಸಬೇಕಾಗುತ್ತದೆ.

'ಪ್ರಕೃತಿ' ಕತೆಯಲ್ಲಿ ಸಂಕಪ್ಪಯ್ಯನು ಸಾಮಾಜಿಕ ಬದಲಾವಣೆಯ ಎದುರು ಸೋಲುತ್ತಾನೆ. ಮಲೆನಾಡಿನ ಅತ್ಯುತ್ತಮ ಬೇಸಾಯಗಾರನಾದ ಸಂಕಪ್ಪಯ್ಯನು ಗುಡ್ಡಗಳೊಡನೆ ಹೋರಾಡಿ ತೋಟಗಳನ್ನು ಮಾಡಿಕೊಂಡಿರುತ್ತಾನೆ. ಕೆಚ್ಚಿರುವವರೆಗೂ ಹೋರಾಟ ವ್ಯರ್ಥವಲ್ಲ ಎಂದು ನಂಬಿದ ಸಂಕಪ್ಪಯ್ಯನು ಕಿತ್ತಳೆ ತೋಟಕ್ಕಾಗಿ ಹೆಂಡತಿಯ ಒಡವೆಗಳನ್ನು ಅಡವಿಡುತ್ತಾನೆ. ಆದರೆ ಬೆಳೆ ಮಾತ್ರ ಕೈಗತ್ತುವುದಿಲ್ಲ. ಮಗ ನಾರಾಯಣನು ತಂದೆಯ ವ್ಯವಸಾಯ ವೃತ್ತಿಯನ್ನು ಮುಂದುವರಿಸಲು ಇಚ್ಛಿಸದೇ ಹೋಟೆಲನ್ನು ಪ್ರಾರಂಭಿಸಲು ಬಯಸುತ್ತಾನೆ. ಸಮಾಜದಲ್ಲಿ ಗೌರವದಿಂದ ಬದುಕಲು ಬಯಸುವ ಸಂಕಪ್ಪಯ್ಯನ ನಡವಳಿಕೆಗಳಿಗೂ ಹಾಗೂ ಮಗನ ವಿಚಾರಗಳಿಗೂ ಮಧ್ಯೆ ಸಂಘರ್ಷವೇರ್ಪಡುತ್ತದೆ.

ನಾರಾಯಣನ ಮೇಲಕ್ಕೆ ಬಾಚಿದ ಕ್ರಾಪು ಪೇಟೆಯ ಲಫಂಗನಂತೆ ಕತ್ತಿಗೆ ಸುತ್ತಿದ್ದ ಮಫ್ಲರನ್ನು ಕಂಡ ಸಂಕಪ್ಪಯ್ಯನು ಮಗನನ್ನು ಮೂದಲಿಸುತ್ತಾನೆ. ಮಗನ ಕಿಸೆಯಲ್ಲಿ ಬೀಡಿ ಕಟ್ಟು ಬೆಂಕಿ ಪೊಟ್ಟಣವು ಇರಬಹುದೆಂದು ಅನುಮಾನಿಸುತ್ತಾನೆ. ಗಂಡ ಮತ್ತು ಮಗನ ನಡುವಿನ ಭಿನ್ನಾಭಿಪ್ರಾಯವನ್ನು ಕಂಡ ಸೀತಮ್ಮನು ಮಗನ ವಿಚಾರಗಳನ್ನು ಬೆಂಬಲಿಸುತ್ತಾಳೆ. ತನ್ನ ಗಂಡ ಮಾಡಿದ ಇಪ್ಪತ್ತು ಸಾವಿರ ರೂಪಾಯಿಗಳ ಸಾಲವನ್ನು ಅವನೇ ತೀರಿಸಿಕೊಳ್ಳಲಿ ಎಂದು ಸೀತಮ್ಮನು ನಿಂದಿಸುತ್ತಾಳೆ. ಸಂಕಪ್ಪಯ್ಯ ಹುಟ್ಟಿ ಬೆಳೆದ ನೆಲದಲ್ಲೇ ವಾಸಿಸಬೇಕೆನ್ನುತ್ತಾನೆ. ನಾರಾಯಣ ಸೀತಮ್ಮ ಪಟ್ಟಣದ ವಾಸವನ್ನು ಬಯಸುತ್ತಾರೆ. ಸಮಾಜದಲ್ಲಿ ಬದಲಾಗುತ್ತಿರುವ ಮೌಲ್ಯಗಳಿಗೆ ತಾಯಿ ಮಗ ಸ್ಪಂದಿಸಿದರೆ, ಸಂಕಪ್ಪಯ್ಯ ಗೊಂದಲಕ್ಕೊಳಗಾಗುತ್ತಾನೆ. ಪರಂಪರೆಯಿಂದ ಬಂದುದನ್ನು ಬಿಟ್ಟು ಬ್ರಾಹ್ಮಣರಿಗೆ ಸಲ್ಲದ ಅನ್ನವಿಕ್ರಯವನ್ನು ಮಾಡುವುದಕ್ಕೆ ಸಂಕಪ್ಪಯ್ಯ ಅನುಮತಿ ಕೊಡುವುದಿಲ್ಲ. ನಾರಾಯಣನು ತಂದೆಯ ನಂಬಿಕೆಗಳನ್ನು ಹುಸಿಗೊಳಿಸುತ್ತಾನೆ. ಹಳೆಯ ಮೌಲ್ಯಗಳನ್ನು ಉಳಿಸಿಕೊಳ್ಳಲು ಸಂಕಪ್ಪಯ್ಯ ಹೋರಾಡುತ್ತಾನೆ.

ವಿಧವೆಯಾದ ಲಕ್ಷ್ಮಿ ಸಾಮಾಜಿಕ ಕಟ್ಟು ಪಾಡಿನಂತೆ ಬದುಕುತ್ತಾಳೆಂಬ ಸಂಕಪ್ಪಯ್ಯನ ನಂಬಿಕೆ, ಆಲೋಚನೆಗಳು ಅವಳ ಅನೈತಿಕ ಸಂಬಂಧವನ್ನು ತಿಳಿದ ಮೇಲೆ ತಲೆಕೆಳಾಗುತ್ತವೆ. ಸಮಾಜದಲ್ಲಾಗುವ ಬದಲಾವಣೆಗೆ ಮಗ ಹೊಂದಿಕೊಳ್ಳುತ್ತಾನೆ. ಹೆಂಡತಿ ಅವನನ್ನು ಬೆಂಬಲಿಸುತ್ತಾಳೆ. ಮೂಲಭೂತ ಪ್ರವೃತ್ತಿಯ ಎದುರು ಲಕ್ಷ್ಮಿ ಬಾಗುತ್ತಾಳೆ. ಇವರೆಲ್ಲರೂ ಸಮಾಜದ ಗತಿಗೆ ಚಲಿಸುತ್ತಾರೆ. ಸಂಕಪ್ಪಯ್ಯ ಒಂಟಿಯಾಗುತ್ತಾನೆ. ಹೆಂಡತಿ ಮಗ ಮಗಳು ಎಲ್ಲರನ್ನು ಪೇಟೆಗೆ ಕಳಿಸಿ ತೋಟವನ್ನು ಮಾರಿ ಸಂಕಪ್ಪಯ್ಯ ಹಳ್ಳಿಯಲ್ಲಿ ಉಳಿಯುತ್ತಾನೆ. ಸಮಾಜದಲ್ಲಿ ಬದಲಾವಣೆ ಸ್ವಾಭಾವಿಕ ಅದನ್ನು ವ್ಯಕ್ತಿಯ ನೇರಕ್ಕೆ ಬಾಗಿಸಿಕೊಳ್ಳುವುದು ಸಾಧ್ಯವಿಲ್ಲ ಎನ್ನುವುದನ್ನು ಕತೆ ತಿಳಿಸುತ್ತದೆ.

'ಅಕ್ಕಯ್ಯ' ಕತೆಯಲ್ಲಿನ ಅಕ್ಕಯಳಿಗೆ ಮೈನೆರೆಯುವ ಮುಂಚೆ ಮದುವೆ ಮಾಡಿರುತ್ತಾರೆ. ಮದುವೆಯಾದವನು ಹುಬ್ಬಳ್ಳಿಯಲ್ಲಿ ಎಮ್ಮೆ ವ್ಯಾಪರಸ್ಥನಾಗಿರುತ್ತಾನೆ. ಅವನು ಮದುವೆಗೆ ಮುಂಚೆಯೇ ವೇಶ್ಯೆಯ ಜೊತೆ ಸಂಬಂಧ ಹೊಂದಿರುತ್ತಾನೆ. ಶ್ರೀಮಂತ ಜಮೀನ್ದಾರನಾದ ಅಕ್ಕಯ್ಯಳ ತಂದೆಗೆ ಹನ್ನೆರಡು

[illegible]

[illegible]

[illegible]

[illegible]

[illegible]

[illegible]

ಮಕ್ಕಳಿರುತ್ತಾರೆ. ಬೆಳ್ಳಿ ಬಂಗಾರ ಸಾಲದೆಂದು ಪೀಡಿಸುವ ಅಕ್ಕಯ್ಯನ ಗಂಡನು ಅಕ್ಕಯ್ಯ ತವರಿನಿಂದ ಹಣವನ್ನು ತರದಿದ್ದಾಗ ಬೆನ್ನಿನ ಮೇಲೆ ಮೂರು ಬರೆ ಹಾಕಿ ತವರಿಗೆ ಕಳಿಸಿ ತಲೆ ಮರೆಸಿಕೊಳ್ಳುತ್ತಾನೆ.

ಚಿಕ್ಕವನಿದ್ದಾಗ ಶ್ರೀನಿವಾಸ ತುಂಟನಾಗಿರುತ್ತಾನೆ. ಶ್ರೀನಿವಾಸ ಸೇದಿದ ಬೀಡಿಯ ತುಂಡೊಂದು ಬಣವಿಗೆ ಬಿದ್ದು ಬೆಂಕಿ ಹತ್ತಿ ಗುಡಿಸಲು ಸುಟ್ಟು ಹೋಗುತ್ತದೆ. ಬೆಂಕಿ ಹಚ್ಚಿದ್ದು ಯಾರೆಂದು ಕೇಳಿದ ಅಕ್ಕಯ್ಯನಿಗೆ ಶ್ರೀನಿವಾಸನು ಉತ್ತರಕೊಟ್ಟಿರಲಿಲ್ಲ. ರಾತ್ರಿ ಕನವರಿಸಿ ಬೆಚ್ಚುತ್ತಿದ್ದ ಶ್ರೀನಿವಾಸನನ್ನು ಗಮನಿಸಿದ ಅಕ್ಕಯ್ಯ ತಮ್ಮನೇ ಬೆಂಕಿ ಹಚ್ಚಿರಬಹುದೆಂದು ಅನುಮಾನಿಸಿ ನಿರಾಶ್ರಿತರಾದವರಿಗೆ ಗುಡಿಸಲು ಕಟ್ಟಿಕೊಳ್ಳಲು ತನ್ನಲ್ಲಿದ್ದ ಎರಡು ಬಂಗಾರದ ಕೈಬಳೆಗಳನ್ನು ಕೊಡುವುದರೊಂದಿಗೆ ತನ್ನ ಸಾಮಾಜಿಕ ಕಾಳಜಿಯನ್ನು ತೋರ್ಪಡಿಸುತ್ತಾಳೆ. ತಂದೆ ಹಾಗೂ ತಮ್ಮಂದಿರಿಂದ ತನ್ನ ಧಾರಾಳತನಕ್ಕಾಗಿ ಬೈಸಿಕೊಳ್ಳುತ್ತಾಳೆ.

ಅಕ್ಕಯ್ಯನಿಂದ ದೂರವಾಗಿದ್ದ ಗಂಡನನ್ನು ಅವಳ ತಮ್ಮಂದಿರು ಪತ್ತೆ ಹಚ್ಚುತ್ತಾರೆ. ಪೋಲಿಸರ ಸಹಾಯದಿಂದ ಅವನನ್ನು ವಿಚಾರಣೆಗೆ ಗುರಿಪಡಿಸುತ್ತಾರೆ. ಪೋಲೀಸರ ಮುಂದೆ ತುಟಿ ಪಿಟಿಕ್ ಎನ್ನದೆ ಅಕ್ಕಯ್ಯನನ್ನು ತನ್ನ ಹೆಂಡತಿ ಎಂದು ಒಪ್ಪಿಕೊಳ್ಳುತ್ತಾನೆ. ಪ್ರಸ್ತವನ್ನು ಮಾಡಿಕೊಳ್ಳದೆ ಹೆಂಡತಿಯನ್ನು ಬಿಟ್ಟ ಅವನಿಗೆ ಜನರಿಂದ ದಾನ ದಕ್ಷಿಣೆಯನ್ನು ಸ್ವೀಕರಿಸುವ ಹಕ್ಕಿರುವುದಿಲ್ಲ. ಸಾಮಾಜಿಕ ವ್ಯವಸ್ಥೆಯ ಪ್ರಕಾರ ಪ್ರಸ್ತವಾದರೆ ಆ ಹಕ್ಕು ಸಿಗುತ್ತದೆಂದು ಶಾಸ್ತ್ರ ನೆರವೇರಿಸಲು ಒಪ್ಪಿಕೊಳ್ಳುತ್ತಾನೆ.

ಮನೆಯವರಿಂದ ದೂರವಾಗಿದ್ದ ಹಾಗೂ ಸ್ವತಂತ್ರ ಬದುಕನ್ನು ಬಯಸುವ ಶ್ರೀನಿವಾಸ ಪಂಜಾಬಿ ವೈದ್ಯಳನ್ನು ಪ್ರೇಮ ವಿವಾಹವಾಗುತ್ತಾನೆ. ಬ್ರಾಹ್ಮಣ ಕುಲಕ್ಕೆ ಹಾಗೂ ತಮ್ಮ ಮನೆತನಕ್ಕೆ ಅವಮಾನವಾಯಿತೆಂದು ಸಹೋದರರು ಶ್ರೀನಿವಾಸನನ್ನು ದೂರುತ್ತಾರೆ. ಮುಗ್ಧಳಾದ ಅಕ್ಕಯ್ಯ ತಮ್ಮನ ಅಂತರ್ಜಾತಿಯ ವಿವಾಹದ ಸಂದರ್ಭದಲ್ಲಿ ತಟಸ್ಥಳಾಗುತ್ತಾಳೆ. ತಮ್ಮನ ಹೆಂಡತಿಗೆ ಒಲವಿನ ಉಡುಗೊರೆಗಳನ್ನು ಕೊಡುತ್ತಾಳೆ. ಆದ್ದರಿಂದ ರಾಮಕೃಷ್ಣ ಪರಮಹಂಸ, ಅಕ್ಕ ಮಹಾದೇವಿ ಹಾಗೂ ಅಕ್ಕಯ್ಯನಿಗೆ ಈ ಜಗತ್ತಿನಲ್ಲಿ ಜಾಗವಿಲ್ಲವೆಂದು ಶ್ರೀನಿವಾಸ ಭಾವಿಸುತ್ತಾನೆ. ಏಕೆಂದರೆ ಅವರು ನಾರ್ಮಲ್ ಅಲ್ಲ ಎನ್ನುವುದು ಶ್ರೀನಿವಾಸನ ಕಲ್ಪನೆಯಾಗಿದೆ.

ಕೌಲಿ ಅಕ್ಕಯ್ಯನ ಸಂಬಂಧದ ಕತೆಯೊಂದು ಹೀಗಿದೆ: ಒಂದು ಸಂಜೆ ಕೌಲಿಯ ಕರು ನಂದಿನಿ ಕೊಟ್ಟಿಗೆಗೆ ಬಂದಿರಲಿಲ್ಲ. ನಂದಿನಿಯನ್ನು ಕಾದ ಅಕ್ಕಯ್ಯ ಕಟ್ಟು ಬಾಯ್ ಎಂದು ಕರೆಯುತ್ತಾ, ಮಗಳನ್ನು ಕರಿ ಎಂದು ಕೌಲಿಗೆ ಹೇಳಿದಳು. ಕೌಲಿಯು ಅಂಬಾ ಅಂಬಾ, ಎಂದು ಆರ್ತವಾಗಿ ಕೂಗಿತು. ನಂದಿನಿ ಬರದಿದ್ದನ್ನು ಕಂಡು ಪಕ್ಕದ ಅರಣ್ಯಕ್ಕೆ ಹುಡುಕಲು ಹೋಗುತ್ತಾಳೆ. ರಾತ್ರಿಯೆಲ್ಲಾ ಕಾಡಿನಲ್ಲಿ ನಂದಿನಿಯನ್ನು ಕಾದು ಬೆಳಗಾಗುವ ಹೊತ್ತಿನಲ್ಲಿ ತೂಕಡಿಸುತ್ತಿದ್ದ ಅಕ್ಕಯ್ಯನನ್ನು ನಂದಿನಿ ಮೂಸುತ್ತಿದ್ದಳು. ಕಣ್ಣು ಬಿಟ್ಟ ಅಕ್ಕಯ್ಯ ನಂದಿನಿಯನ್ನು ಬೈದು ಮೇಲೆ ನೋಡಿದಾಗ ಉಪ್ಪಿನ ಕಾಯಿಗೆ ಪ್ರಶಸ್ತವಾದ ಮಿಡಿ ಮಾವಿನಕಾಯಿಗಳು ಮರದಲ್ಲಿ ಕಾಣಿಸುತ್ತವೆ. ಮರ ಹತ್ತಿ ಮಿಡಿ ಗೊಂಚಲುಗಳನ್ನು ಕೊಯ್ದು ಸೆರಗಿನಲ್ಲಿ ತುಂಬಿಕೊಂಡು ಪಕ್ಕದಲ್ಲಿ ನಂದಿನಿಯನ್ನು ನಡೆಸಿಕೊಂಡು ಮನೆ ಸೇರುತ್ತಾಳೆ. ಕಾಡಿನಿಂದ ಅವಳು ಬರುವಾಗ ಶ್ರೀನಿವಾಸನಿಗೆ ವನದುರ್ಗೆಯಂತೆ ಕಾಣಿಸುತ್ತಾಳೆ.

ಸಾಯುವಂತಿದ್ದ ಕೌಲಿ ಗರ್ಭಧರಿಸಿದಾಗ ಪ್ರಸವ ಸಮಯದಲ್ಲಿ ತೊಂದರೆಗೊಳಗಾಗುತ್ತದೆ. ಅಕ್ಕಯ್ಯ ತನಗೆ ಗೊತ್ತಿರುವ ಮದ್ದನ್ನೆಲ್ಲಾ ಕೊಟ್ಟರೂ ಸುಖ ಪ್ರಸವ ಆಗುವುದಿಲ್ಲ. ಯಮಧರ್ಮರಾಯ ಅಡ್ಡಿ ಮಾಡಿದ್ದಾನೆಂದು ತಿಳಿದ ಅಕ್ಕಯ್ಯ ನೋವಿನಲ್ಲಿ ಕೌಲಿಗೆ ಸುಳಿದು ಹಾಕುತ್ತಾಳೆ. ಇವಳನ್ನು ಮುದಿಯಾಗಿ ಸಾಯಲು ಬಿಡು ಮಾರಾಯ ಎಂದು ಯಮಧರ್ಮರಾಯನನ್ನು ಬೇಡುತ್ತಾಳೆ. ಹಲ್ಲಿ ಶಕುನವಾದಾಗ ಕೊಟ್ಟಿಗೆಯ ಹೊಸಲಿನ ಮೇಲೆ ಕುಳಿತು ಕೈಯಲ್ಲಿನ ಹಿಡಿ ಸೂಡಿಯನ್ನು ಅಲುಗಿಸುತ್ತಾ ನೀನೇನಾದರೂ ಕೌಲಿಯನ್ನು ಕರೆದುಕೊಂಡು ಹೋಗಲು ಬಂದರೆ ಸಗಣಿಯಲ್ಲಿ ಅದ್ದಿದ ಈ ಸೂಡಿಯಿಂದಲೇ ನಿನಗೆ ಪೂಜೆ ಮಾಡಿ ಬಿಡ್ತೀನಿ. ಮಾರಿಯಾಗಿ, ನಿನ್ನ ಬೆನ್ನಟ್ಟಿ ಕಾಡ್ತೀನಿ ಎಂದು ಯಮಧರ್ಮರಾಯನನ್ನು ಕಾಯುತ್ತಾ ಇಡೀ ರಾತ್ರಿ ಅಕ್ಕಯ್ಯ ಕಾದಿರುತ್ತಾಳೆ. ಬೆಳಗಾಗುವ ಮುನ್ನ ಕೌಲಿಗೆ ಪ್ರಸವವಾಗಿರುತ್ತದೆ. ಹೀಗೆ ದನಕರುಗಳೊಂದಿಗೆ ಅಕ್ಕರೆಯಿಂದ ತನ್ನದೇ ಆದ ಭಾಷೆಯಲ್ಲಿ ಮಾತನಾಡಿಸುತ್ತಾ ಅವುಗಳ ಜೊತೆ ಬದುಕುವ ಅಕ್ಕಯ್ಯನಿಗೆ ಹಿಂದಿನ ನರಜನ್ಮ, ನಾಯಿ ಜನ್ಮ, ಪಕ್ಷಿ ಜನ್ಮ ಈ ರೀತಿಯ ಜನ್ಮಾಂತರ ಸಂಬಂಧವಿದೆ ಎಂಬ ಕಲ್ಪನೆಯನ್ನು ನಂಬುತ್ತಾಳೆ.

ಅಕ್ಕಯ್ಯನ ತಂದೆ ಸಮಾಜದ ಚೌಕಟ್ಟಿನಂತೆ ಚಿಕ್ಕಂದಿನಲ್ಲೇ ಮದುವೆ ಮಾಡಿ ತನ್ನ ಜವಾಬ್ದಾರಿಯನ್ನು ಕಳೆದುಕೊಳ್ಳುತ್ತಾನೆ. ಗಂಡನು ತೌರು ಮನೆಗೆ ಓಡಿಸಿದಾಗ ಆಶ್ರಯ ನೀಡಿ ಅವಳ ಹಣೆ ಬರಹವೆಂದು ಸುಮ್ಮನಾಗುತ್ತಾನೆ. ತಮ್ಮಂದಿರು ಶಾಸ್ತ್ರದ ಪ್ರಕಾರ ಆಗಬೇಕಾದೆಲ್ಲಾ ಆಗಬೇಕೆಂದು ಮುದುಕನಾದ ಗಂಡ ನನ್ನ ಪತ್ತೆ ಹಚ್ಚಿ ಪ್ರಸ್ತ ಶಾಸ್ತ್ರ ಮುಗಿಸಿ ತಮ್ಮ ಜವಾಬ್ದಾರಿಯಿಂದ ಮುಕ್ತರಾಗುತ್ತಾರೆ. ಸ್ವಾರ್ಥಿಯಾದ ಗಂಡ ದಾನ ದಕ್ಷಿಣೆ ಸ್ವೀಕರಿಸುವ ಹಕ್ಕಿಗಾಗಿ ಪ್ರಸ್ತ ಶಾಸ್ತ್ರಕ್ಕೆ ಒಪ್ಪಿಕೊಳ್ಳುತ್ತಾನೆ. ಹೀಗೆ ಅಕ್ಕಯ್ಯನಿಗೆ ವೈಯಕ್ತಿಕ ಬದುಕೇ ಇಲ್ಲದಂತೆ ಆಗುತ್ತದೆ. ದನಕರುಗಳೊಂದಿಗೆ ಅವಿನಾಭಾವ ಸಂಬಂಧವನ್ನು ಮಾನವೀಯತೆಯನ್ನು ಹೊಂದಿರುವ ಅಕ್ಕಯ್ಯನು ತನ್ನ ಪಾಡಿಗೆ ತಾನು ಇರುತ್ತಾಳೆ. ಅನಕ್ಷರಸ್ಥಳಾದ, ಮುಗ್ಧಳಾದ ಅಕ್ಕಯ್ಯ ಸಾಮಾಜಿಕ ಹಾಗೂ ಕುಟುಂಬದ ಸಮಸ್ಯೆಗಳಿಗೆ ತನ್ನ ಇತಿಮಿತಿಯಲ್ಲಿ ಪರಿಹಾರವನ್ನು ಕಂಡುಕೊಳ್ಳುತ್ತಾಳೆ.

ವೈಯಕ್ತಿಕ ಕಾರಣಗಳಿಂದ ವ್ಯಕ್ತಿಯು ಸಮಾಜದಿಂದ ದೂರಾಗುವುದನ್ನು 'ಸಂಸ್ಕಾರ' ಕಾದಂಬರಿಯಲ್ಲಿ ಕಾಣಬಹುದು. ಪಂಡಿತನಾದ ಪ್ರಾಣೇಶಾಚಾರ್ಯ ಅಗ್ರಹಾರದಲ್ಲಿ ಸಾಧುತ್ವದ ಪ್ರತಿಮೂರ್ತಿಯಂತಿದ್ದನು. ರೋಗಿಷ್ಟ ಹೆಂಡತಿಯ ಸೇವೆಯನ್ನು ತನ್ನ ಕರ್ತವ್ಯದ ಒಂದು ಭಾಗವಾಗಿ ಪ್ರಾಣೇಶಾಚಾರ್ಯ ಸ್ವೀಕರಿಸಿದ್ದಾನೆ. ವೈಯಕ್ತಿಕ ಆಸೆಗೆ ಬೆಲೆ ಕೊಡದ ಅವನ ತ್ಯಾಗದ ಬಹುಕನ್ನು ಸುತ್ತಲಿನ ಸಮಾಜ ಗೌರವಿಸುತ್ತದೆ. ವೈಯಕ್ತಿಕ ಆಸೆಗಾಗಿ ಹೆಂಡತಿಯನ್ನು ಬಿಟ್ಟು ವೇಶ್ಯೆಯೊಡನೆ ಜೀವನ ನಡೆಸುವ ನಾರಣಪ್ಪ ಸಮಾಜದಿಂದ ದೂರ ಉಳಿಯುತ್ತಾನೆ. ವ್ಯಕ್ತಿಯ ಅಸ್ತಿತ್ವಕ್ಕೆ ಸಂಬಂಧಿಸಿದ ಸಮಸ್ಯೆ ಅನಂತಮೂರ್ತಿಯವರ ಕೃತಿಗಳಲ್ಲಿಯ ಮುಖ್ಯ ಸಮಸ್ಯೆಗಳಲ್ಲೊಂದಾಗಿದೆ. ಅಂದರೆ ಇಲ್ಲಿ ಸಮಾಜದ ದ್ವಂದ್ವ ಮತ್ತು ವಿಪರ್ಯಾಸಗಳಲ್ಲಿ ಸಿಕ್ಕಿದ ವ್ಯಕ್ತಿಯು ಸುಲಭೋಪಾಯಗಳನ್ನು ಒಪ್ಪುವುದಿಲ್ಲ. ಹೋರಾಟ ಮನೋಭಾವದ ಅವನು ತನ್ನ ಅಸ್ತಿತ್ವದ ಮೂಲವನ್ನು ಅರಿಯುವ ಮತ್ತು ಸರಿಪಡಿಸುವ ಅಪೇಕ್ಷೆಯನ್ನು ಹೊಂದಿರುತ್ತಾನೆ.

ಅಪೇಕ್ಷೆ ಮತ್ತು ಪ್ರಶ್ನೆಗಳು ಒದಗಿಬರುವ ಸಂದರ್ಭಗಳು ಸಾಮಾಜಿಕ ಸನ್ನಿವೇಶಗಳಿಂದ ಆಗಿರುವುದರಿಂದ ಅದು ವ್ಯಕ್ತಿಸಂಬಂಧಿತ ಸಾಮಾಜಿಕ ಪ್ರಶ್ನೆಯಾಗುತ್ತದೆ. ಪ್ರಾಣೇಶಾಚಾರ್ಯ ಮತ್ತು ನಾರಣಪ್ಪ ಸಂಘಜೀವಿಗಳು. ಇಬ್ಬರೂ ತಮ್ಮ ರೀತಿಯಲ್ಲಿ ಸಮಾಜವನ್ನೂ ನಡೆಸಬೇಕೆಂಬ ಉದ್ದೇಶವಿರುವವರು.

[illegible]

[illegible]

[illegible]

[illegible]

[illegible]

ಅಗ್ರಹಾರದ ಬ್ರಾಹ್ಮಣ್ಯವನ್ನು ಪ್ರಾಣೇಶಾಚಾರ್ಯ ರಕ್ಷಿಸಿದರೆ ಅಲ್ಲಿನ ತರುಣರನ್ನು ಹಾದಿ ತಪ್ಪಿಸುತ್ತಾನೆ ಎಂಬ ಆರೋಪಕ್ಕೆ ನಾರಣಪ್ಪ ಗುರಿಯಾಗುತ್ತಾನೆ. ಒಂದು ಸಮಾಜದ ಅಥವಾ ಸಂಸ್ಕೃತಿಯ ಬದಲಾವಣೆಗಳು ಏಕ ಕಾಲದಲ್ಲಿ ನಡೆಯದೆ ಅನೇಕ ಹಂತಗಳಲ್ಲಿ ನಡೆಯುತ್ತಿರುತ್ತವೆ. ಅದರಲ್ಲಿ ಒಂದು ಹಂತವನ್ನು ಈ ಕಾದಂಬರಿಯು ಏಕ ವ್ಯಕ್ತಿ ಕೇಂದ್ರಿತ ನೆಲೆಯಲ್ಲಿ ಕಲಾತ್ಮಕವಾಗಿ ಮುಂದಿಡುತ್ತವೆ. ಎಂಬ ಮೋಹನ ಕುಂಟಾರ್ ಅವರ ಅಭಿಪ್ರಾಯವು ಸೂಕ್ತವಾಗಿದೆ. ಸಂಸ್ಕಾರ ರಚನೆಯಾದ ಕಾಲದ ಸಾಮಾಜಿಕ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು ಈ ಸಂಗತಿಯನ್ನು ಗಮನಿಸಿದಾಗ ಅದರ ಸಾಂಸ್ಕೃತಿಕ ಮಹತ್ವವು ತಿಳಿಯುತ್ತದೆ. ಪರಂಪರೆಯಿಂದಲೂ ನಡೆದುಕೊಂಡು ಬಂದ ಮಡಿ ಮೈಲಿಗೆಗಳು ಮತ್ತು ದೈವತ್ವದಲ್ಲಿನ ನಂಬಿಕೆಗಳನ್ನು ನಿರ್ಲಕ್ಷ್ಯ ಮಾಡುವ ಮುಖಾಂತರ ಅವುಗಳ ಅರ್ಥಪೂರ್ಣತೆಯನ್ನು ನಾರಣಪ್ಪ ಪ್ರತ್ಯಕ್ಷವಾಗಿ ಪ್ರಶ್ನೆ ಮಾಡುತ್ತಾನೆ. ಇದು ಬ್ರಾಹ್ಮಣರಿಬ್ಬರಲ್ಲಿ ಇರುವ ಸಾಮಾಜಿಕ ಮತ್ತು ಧಾರ್ಮಿಕ ಮೌಲ್ಯಗಳ ವೈದೃಶ್ಯವಾಗಿದೆ. ಅಲ್ಲದೇ ಒಂದು ನಿರ್ದಿಷ್ಟ ಜಾತಿ ಸಮುದಾಯದಲ್ಲೇ ನಡೆಯುವ ಒಳ ಬಂಡಾಯವನ್ನು ಇಲ್ಲಿ ಕಾಣಬಹುದಾಗಿದೆ.

ಅಗ್ರಹಾರದ ಬ್ರಾಹ್ಮಣರು ನಾರಣಪ್ಪನ ಅನುಚಿತ ವರ್ತನೆಗೆ ಕಡಿವಾಣ ಹಾಕುವಂತೆ ಪ್ರಾಣೇಶಾಚಾರ್ಯನನ್ನು ಕೇಳಿಕೊಳ್ಳುತ್ತಾರೆ. ಪ್ರಾಣೇಶಾಚಾರ್ಯನಿಗೂ ನಾರಣಪ್ಪನು ಸವಾಲಾಗುತ್ತಾನೆ. ಅವನ ಸಾವು ಅಗ್ರಹಾರದ ಬ್ರಾಹ್ಮಣರಿಗೆ ಸಮಸ್ಯೆಯನ್ನು ಹುಟ್ಟು ಹಾಕುತ್ತದೆ. ಬ್ರಾಹ್ಮಣ್ಯವನ್ನು ಬಿಟ್ಟ ಅವನ ಸಂಸ್ಕಾರವನ್ನು ಮಾಡುವ ಬಗೆಗೆ ಗೊಂದಲವೇರ್ಪಡುತ್ತದೆ. ಧರ್ಮ ಶಾಸ್ತ್ರ ಗ್ರಂಥಗಳು ಹಾಗೂ ಮಾರುತಿ ದೇವರ ಪ್ರಸಾದದಿಂದಲೂ ಅದಕ್ಕೆ ಪರಿಹಾರ ಸಿಗದಿದ್ದಾಗ, ಪ್ರಾಣೇಶಾಚಾರ್ಯ ಸಂದಿಗ್ಧವನ್ನು ಎದುರಿಸುತ್ತಾನೆ. ಬೇಸರದಿಂದ ಪ್ರಾಣೇಶಾಚಾರ್ಯನಿಗೆ ಆಕಸ್ಮಿಕವಾಗಿ ನಡೆದ ಚಂದ್ರಿಯೊಂದಿಗಿನ ಸಮಾಗಮವು ಸಾಮಾಜಿಕ ವ್ಯಕ್ತಿತ್ವಕ್ಕಿಂತ ವೈಯಕ್ತಿಕ ವ್ಯಕ್ತಿತ್ವಕ್ಕೆ ಬೆಲೆಕೊಡುವಂತೆ ಅವನನ್ನು ಪ್ರೇರಿಸುತ್ತದೆ. ತಾನು ನಂಬಿದ್ದ ಮೌಲ್ಯಗಳು ಬದುಕಿಗೆ ನಿಜವಾದ ಅರ್ಥವನ್ನು ಕೊಟ್ಟಿಲ್ಲವೆಂದು ತಿಳಿದಾಗ ಈ ಅರಿವಿಗೆ ಕಾರಣವಾದ ಚಂದ್ರಿಯ ಸಂಗ, ಒಂದು ಯೋಜಿತ ಘಟನೆ ಎಂಬ ತಿಳುವಳಿಕೆ ಮೂಡಿ ಆ ಘಟನೆಯನ್ನು ಸಂಪೂರ್ಣ ಎಚ್ಚರದಲ್ಲಿ ಜವಾಬ್ದಾರಿಯಿಂದ ಇನ್ನೊಮ್ಮೆ ಬದುಕಿ, ಈ ಹೊಸ ಅರಿವಿನ ಜವಾಬ್ದಾರಿಯನ್ನು ಸ್ವತಃ ಹೊರಬೇಕೆಂದು ನಿರ್ಧರಿಸಿ ಅಗ್ರಹಾರವನ್ನು ಬಿಟ್ಟು ಹೊರಡುತ್ತಾನೆ. ತಾನು ಪಡೆದ ಹೊಸ ಅನುಭವದಿಂದ ಬಿಡಿಸಿಕೊಳ್ಳಲಾಗದ ಅವನು ಸಮಾಜದಿಂದ ದೂರ ಉಳಿಯುವ ಪ್ರಯತ್ನ ಮಾಡುತ್ತಾನೆ. ಸಮಾಜ ತನ್ನ ತಪ್ಪನ್ನು ಹೇಗೆ ಸ್ವೀಕರಿಸಬಹುದೆಂದು ಆತಂಕವಾಗುತ್ತದೆ. ತನ್ನ ಅನುಭವಗಳಿಗೆ ತಕ್ಕ ಮೌಲ್ಯಗಳನ್ನು ಸೃಷ್ಟಿಸಿಕೊಂಡು ಬಾಳನ್ನು ರೂಪಿಸಿಕೊಳ್ಳುವ ಸಾಮರ್ಥ್ಯವಿಲ್ಲದೇ ಒಂಟಿಯಾಗುತ್ತಾನೆ.

ಪ್ರಾಣೇಶಾಚಾರ್ಯನಿಗೆ ತನ್ನ ಸಂಸ್ಕಾರದಿಂದ ಪಡೆದ ಮೌಲ್ಯಗಳಿಗೂ ವೈಯಕ್ತಿಕ ಅನುಭವಗಳಿಗೂ ಬಿರುಕುಂಟಾದಾಗ ಪ್ರಾಣೇಶಾಚಾರ್ಯನಿಗೆ ಅಗ್ರಹಾರದ ಬ್ರಾಹ್ಮಣರನ್ನು ಎದುರಿಸುವ ಬಗ್ಗೆ ಆತಂಕಗೊಳ್ಳುತ್ತಾನೆ. ಬ್ರಾಹ್ಮಣಿಕೆಯನ್ನು ಬಿಟ್ಟ ನಂತರ ಸಮಾಜವನ್ನು ಪ್ರತಿನಿಧಿಸುತ್ತಿದ್ದ ಅವನು ಸಮಷ್ಠಿ ಪ್ರಜ್ಞೆಯಿಂದ ವ್ಯಷ್ಠಿಯಾಗಿ ಮಾರ್ಪಡುತ್ತಾನೆ. ಹೀಗೆ ವೈಯಕ್ತಿಕ ಹಾಗೂ ಸಾಮಾಜಿಕ ಮುಖಗಳನ್ನು, ಕಾಳಜಿಗಳನ್ನು ಪರಸ್ಪರ ಪೂರಕವಾಗಿ ಅನಂತಮೂರ್ತಿಯವರು ಬೆಸೆದಿದ್ದಾರೆ. ಇಲ್ಲಿ ಪರಂಪರಾಗತ ಮೌಲ್ಯದ ಪರೀಕ್ಷೆಗೆ ಕೌಟುಂಬಿಕ ಪರಿಸರವನ್ನು ಬಳಸಲಾಗಿದ್ದು ಸಂಕೀರ್ಣತೆಯು ಹೆಚ್ಚಾಗಿದೆ. ಒಂದು ಸಾಮಾಜಿಕ ಪರಿಸರ ಅಂದರೆ ಒಂದು ಅಗ್ರಹಾರದ ಬದುಕಿನ ವ್ಯಾಪ್ತಿಯು ಇಲ್ಲಿದೆ. ಈ ದೃಷ್ಟಿಯಿಂದ ಮೌಲ್ಯ ಶೋಧನೆಯ ಆವರಣದ ವ್ಯಾಪ್ತಿ ಹಿಗ್ಗಿದೆ. ಪ್ರಾಣೇಶಾಚಾರ್ಯ ಸಂಪ್ರದಾಯದ ಪ್ರಾತಿನಿಧಿಕ ಚೈತನ್ಯವಾಗುವುದರ ಮೂಲಕ ಸಮಷ್ಟಿ ಚೇತನವಾಗುತ್ತಾನೆ.

ಚಂದ್ರಿಯ ಸಮಾಗಮದ ಅನಂತರದಲ್ಲಿ ತನ್ನ ವೈಯಕ್ತಿಕ ಅನುಭವ ಮತ್ತು ಅನಿಸಿಕೆಗಳ ಆವರಣದಲ್ಲಿ ತನ್ನನ್ನು ಕಂಡುಕೊಳ್ಳುವ ಮತ್ತು ತನ್ನಲ್ಲಿಯ ವ್ಯಕ್ತಿಯನ್ನು ಗುರುತಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗುತ್ತಾನೆ.

ವ್ಯಕ್ತಿಯೊಬ್ಬನು ಸಮಾಜವನ್ನು ಬದಲಾಯಿಸಲು ಪ್ರಯತ್ನಿಸಿ ವಿಫಲವಾಗುವುದನ್ನು 'ಭಾರತೀಪುರ' ಕಾದಂಬರಿಯಲ್ಲಿ ಕಾಣಬಹುದು. ಜಗನ್ನಾಥನು ಭಾರತೀಪುರದ ಜಿಡ್ಡುಗಟ್ಟಿದ ಸಮಾಜವನ್ನು ಸುಧಾರಣೆ ಮಾಡುವ ಉತ್ಸಾಹದಲ್ಲಿದ್ದಾನೆ. ಜಗನ್ನಾಥನ ದುರಂತವೆಂದರೆ ಅವನು ಒಂಟಿಯಾಗಿ ಕಾರ್ಯವನ್ನು ಕೈಗೊಳ್ಳುತ್ತಾನೆ. ಕಲ್ಲನ್ನು ಕಲ್ಲೆಂದು ಹರಿಜನರಿಗೆ ಹೇಳಿದರೂ ಅದನ್ನವರು ಸಾಲಿಗ್ರಾಮವೆಂದು ಗೌರವಿಸುತ್ತಾರೆ. ದೇವಾಲಯವನ್ನು ಹರಿಜನರು ಪ್ರವೇಶಿಸುವಂತೆ ಮಾಡಿದ ಜಗನ್ನಾಥನ ಪ್ರಯತ್ನ ಬೇರೊಂದು ರೂಪ ಪಡೆಯುತ್ತದೆ. ಹರಿಜನರು ದೇವರ ಬಗ್ಗೆ ನಂಬಿಕೆಯನ್ನು ಕಳೆದುಕೊಳ್ಳುವ ಬದಲು ಮಂಜುನಾಥನ ಮಹತ್ಮೆಯಿಂದ ನಂಬಿಕೆ ಹೆಚ್ಚಾಗುತ್ತದೆ. ಸಾಲಿಗ್ರಾಮವನ್ನು ಎತ್ತಿ ಹೊರತಂದು ಹರಿಜನರಿಂದ ಮುಟ್ಟಿಸುವುದು ಜಗನ್ನಾಥನಿಗೆ ತಾನು ಬಯಸುವ ಬದಲಾವಣೆಯ ಕ್ರಿಯೆ. ಆದರೆ ಈ ಕ್ರಿಯೆಯಿಂದ ಜಗನ್ನಾಥ ಮತ್ತಷ್ಟು ಗೊಂದಲಕ್ಕೊಳಗಾಗುತ್ತಾನೆ.

ನಾನೊಬ್ಬನೇ ನನ್ನಲ್ಲಿ ಪಡೆಯಬಹುದಾದ ನಿವೃತ್ತಿಯಿಂದ ಪ್ರಯೋಜನವಿಲ್ಲ ಎಂದು ಜಗನ್ನಾಥ ಸಮಾಜದ ಒಳಗಿದ್ದೆ ಈ ವಾಸ್ತವವನ್ನು ಮೂಲಭೂತವಾಗಿ ಎದುರಿಸಬೇಕು ಎಂದುಕೊಳ್ಳುತ್ತಾನೆ. ಅನಂತಮೂರ್ತಿಯವರು ಸಾಮಾಜಿಕ ಆಶೋತ್ತರಗಳಿಗೆ ವೈಯಕ್ತಿಕ ಅವಶ್ಯಕತೆಗಳನ್ನು ಮುಖಾಮುಖಿಯಾಗಿಸುತ್ತಾರೆ. ಆ ದ್ವಂದ್ವ ವಿನ್ಯಾಸದಲ್ಲಿ ಕ್ರಿಯೆಯ ಅರ್ಥ ಆಶಯಗಳನ್ನು ಅದರ ಬಹುಮುಖಿ ಆಯಾಮಗಳಲ್ಲಿ ಹಿಡಿದಿಡುತ್ತಾರೆ. ಸಮಾಜದದಲ್ಲಿದ್ದು ಸಮಾಜವನ್ನು ಮೂಲಭೂತವಾಗಿ ಬದಲಾಯಿಸಬಲ್ಲ ಕ್ರಿಯೆಯಲ್ಲಿ ತೊಡಗಿಸಿಕೊಳ್ಳದಿದ್ದರೆ ತಾನು ಇದ್ದೂ ಸತ್ತಂತೆ ಎಂಬುದು ಜಗನ್ನಾಥನ ವಿಚಾರವಾಗಿದೆ. ವೈಯಕ್ತಿಕ ನೆಲೆಯಲ್ಲಿ ಜಗನ್ನಾಥ ಪ್ರಾರಂಭಿಸುವ ಬದಲಾವಣೆಯ ಪ್ರಕ್ರಿಯೆ ನಿಧಾನವಾಗಿ ಸಾಮಾಜಿಕ ಸುಧಾರಣೆಯ ಕಡೆಗೆ ಅದರ ವ್ಯಾಪ್ತಿ ಹಿಗ್ಗುತ್ತದೆ. ಸುಧಾರಣೆಯನ್ನು ಜಗನ್ನಾಥನು ಪ್ರತಿಭಟನೆ ನೆಲೆಯಿಂದ ಪ್ರಾರಂಭಿಸಿದಾಗ ಅವನ ಸುತ್ತಲಿನ ಸಮಾಜವು ಅದನ್ನು ವಿರೋಧಿಸುತ್ತದೆ. ಯಾವುದೇ ಆಯ್ಕೆ ಇಲ್ಲದೆ ಮೌಲ್ಯಗಳಲ್ಲಿ ನಂಬಿಕೆ ಇಟ್ಟಿರುವ ಸಮಾಜವು ಆ ನಂಬಿಕೆಗೆ ಧಕ್ಕೆಯಾದಾಗ ಆತಂಕಗೊಳ್ಳುತ್ತದೆ.

ಮಂಜುನಾಥನ ದೇವಸ್ಥಾನದೊಳಗೆ ಹರಿಜನರು ಪ್ರವೇಶಿಸುವುದನ್ನು ಬಯಸುವ ಜಗನ್ನಾಥನಿಗೆ ಒಂದು ಕಡೆ ಸಮಾಜ ಸುಧಾರಣೆಯ ಆದರ್ಶದ ಸಂಗತಿಯಾದರೆ, ಇನ್ನೊಂದು ಕಡೆ ವೈಯಕ್ತಿಕ ಆಧ್ಯಾತ್ಮಿಕ ಅಗತ್ಯವಾಗಿದೆ. ಭಾರತೀಪುರದಲ್ಲಿ ಲೇಖಕರು ಸಾಮಾಜಿಕ ಸಮಸ್ಯೆಯೊಂದನ್ನು ಗಂಭೀರ ಚಿಂತನೆಗೆ ಒಳಪಡಿಸಿಕೊಂಡಿದ್ದಾರೆ. ಆದರೆ ಆ ಚಿಂತನೆ ಇಡೀ ಸಮಾಜವನ್ನು ಅದರ ಆಗು ಹೋಗುಗಳನ್ನು ಒಳಗೊಳ್ಳುವುದಿಲ್ಲ. ಜಗನ್ನಾಥನ ಮೂಲಕ ಒಂದು ರೀತಿಯಲ್ಲಿ ಸತ್ವಯುತ ಎನ್ನಬಹುದಾದ ವೈಚಾರಿಕತೆ ಕಾದಂಬರಿಯಲ್ಲಿ ಮೈತಳೆಯುತ್ತದೆ."[೧೧] ಜಗನ್ನಾಥ ಸಂಪೂರ್ಣವಾಗಿ ಸಾಮಾಜಿಕ ಸಂಬಂಧಗಳಲ್ಲಿ ಬೆರೆಯದ ಕಾರಣ ವಿಫಲನಾಗುತ್ತಾನೆ. ಭಾರತೀಪುರದಲ್ಲಿ ಮೇಲುಕೀಳು ಭಾವನೆಯನ್ನು ನಿರ್ಮೂಲನೆ ಮಾಡಲು ಜಗನ್ನಾಥನು ಶ್ರಮಿಸುತ್ತಾನೆ. ವಿದೇಶದಲ್ಲಿ ವಿದ್ಯಾಭ್ಯಾಸ ಮಾಡಿದ ಅವನಿಗೆ ತನ್ನ ಊರಿನ ಮೂಲ ಬೇರುಗಳ ಬಗ್ಗೆ ಸ್ಪಷ್ಟವಾದ ಕಲ್ಪನೆಯಿರುವುದಿಲ್ಲ. ಆತುರ ಸ್ವಭಾವದವನಾಗಿದ್ದ ಜಗನ್ನಾಥನು ತಕ್ಷಣದ ಬದಲಾವಣೆಯನ್ನು ನಿರೀಕ್ಷಿಸಿದಾಗ ಸಮಾಜದ ಕಟ್ಟುಪಾಡುಗಳ ಎದಿರು ಸೋಲುತ್ತಾನೆ.

[illegible]

'ಅವಸ್ಥೆ' ಕಾದಂಬರಿಯಲ್ಲಿ ಕೃಷ್ಣಪ್ಪ ದುಡುಕು ಸ್ವಭಾವದ ವ್ಯಕ್ತಿಯಾಗಿರುತ್ತಾನೆ. ಸ್ನೇಹಿತನು ರಿಪೇರಿಗೆ ಕೊಟ್ಟ ವಾಚನ್ನು ತರುವುದಕ್ಕೆ ಕೃಷ್ಣಪ್ಪ ಅಂಗಡಿಗೆ ಹೋದಾಗ ಅಂಗಡಿಯವನು ವಾಚ್ ಕೊಡಲು ನಿರಾಕರಿಸುತ್ತಾನೆ. ಆಗ ಕೃಷ್ಣಪ್ಪ ನಿಮ್ಮ ಗಾಜಿನ ಗೂಡನ್ನು ಪುಡಿ ಪುಡಿ ಮಾಡಿಬಿಡುತ್ತೇನೆ ಎನ್ನುತ್ತಾನೆ. ಅಂಗಡಿಯವನು ಬಡವನ ಕೋಪ ದವಡೆಗೆ ಮೂಲ ಎಂದದ್ದಕ್ಕೆ ಕೃಷ್ಣಪ್ಪನು ವಾಚ್ ಇಟ್ಟಿದ್ದ ಗಾಜಿನ ಗೂಡನ್ನು ನೆಲಕ್ಕೆ ಒಗೆಯುತ್ತಾನೆ. ಕೋಪಿಷ್ಠನಾದ ಅವನನ್ನು ಕಂಡರೆ ಎಲ್ಲರೂ ಹೆದರುತ್ತಿದ್ದರು. ಕೃಷ್ಣಪ್ಪನಲ್ಲಿದ್ದ ಧೈರ್ಯವನ್ನು ಗುರುತಿಸಿದ ಮಹೇಶ್ವರಯ್ಯ ಅವನಿಗೆ ಸಹಾಯ ಮಾಡುತ್ತಾನೆ. ಕೃಷ್ಣಪ್ಪನಿಗೆ ಸಹಪಾಠಿ ಗೌರಿದೇಶಪಾಂಡೆ ಹಾಗೂ ಅಣ್ಣಾಜಿಯ ಬೆಂಬಲ ದೊರೆಯುತ್ತದೆ.

ಕ್ರಾಂತಿಕಾರಿಯಾದ ಕೃಷ್ಣಪ್ಪ ಹಠವಾದಿಯಾಗಿದ್ದಾನೆ. ಹಠಮಾರಿತನದ ಜೊತೆಗೆ ಬೆಳೆದು ಬಂದ ಕೋಪದಿಂದಾಗಿ ಸುತ್ತಲಿನ ಸಮಾಜದ ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸಲು ಪ್ರಯತ್ನಿಸುತ್ತಾನೆ. ಕೃಷ್ಣಪ್ಪ ತನ್ನನ್ನು ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿ ಇದ್ದಾಗ ಅವನ ಸುತ್ತಲಿನ ಜನ ಅವನ ಅಸಹಾಯಕತೆಯನ್ನು ತಮ್ಮ ಉಪಯೋಗಕ್ಕಾಗಿ ಬಳಸಿಕೊಳ್ಳುತ್ತಾರೆ. ಇಲ್ಲಿ ಕೃಷ್ಣಪ್ಪ ಮತ್ತು ಅವನ ಸಮಕಾಲೀನ ಸಮಾಜಿಕ ಸಂದರ್ಭ ಎರಡೂ ಸಂಘರ್ಷಕ್ಕೊಳಗಾಗಿವೆ. ಬಾಲ್ಯದಲ್ಲಿ ಕೃಷ್ಣಪ್ಪ ಎದುರಿಸಿದ್ದ ಅವಮಾನ ವ್ಯವಸ್ಥೆಯ ಕ್ರೌರ್ಯ, ತಂದೆಯ ಕೊಲೆ, ಅಣ್ಣಾಜಿಯ ಕೊಲೆ ಹಾಗೂ ಪೋಲಿಸ್ ಅಧಿಕಾರಿಯೊಬ್ಬನಿಂದ ಅತ್ಯಾಚಾರ ಹಾಗೂ ಹಳ್ಳಿಯಲ್ಲಿ ನರಸಿಂಹಭಟ್ಟನ ದೌರ್ಜನ್ಯವನ್ನು ವಿರೋಧಿಸಿರುತ್ತಾನೆ. ಸಮಾಜದ ವ್ಯವಸ್ಥೆಯನ್ನು ಸರಿಪಡಿಸಲು ಕೃಷ್ಣಪ್ಪ ಪ್ರಮಾಣಿಕವಾಗಿ ಪ್ರಯತ್ನ ಮಾಡುತ್ತಾನೆ. ಅಣ್ಣಜಿಯ ಕೊಲೆಯನ್ನು ವಿರೋಧಿಸಿ, ಪೋಲಿಸನ ಕತ್ತಿನಪಟ್ಟಿ ಹಿಡಿದು ಕೃಷ್ಣಪ್ಪ ಹೊಡೆಯಲು ಹೋಗುತ್ತಾನೆ. ನರಸಿಂಹಭಟ್ಟನ ಕ್ರೌರ್ಯವನ್ನು ಸಗಣಿ ಪೊರಕೆಯಲ್ಲಿ ವಿರೋಧಿಸುತ್ತಾನೆ. ನಾಡಿನ ಕ್ಷೇಮದ ಬಗೆಗೆ ರಾಜ್ಯಪಾಲರ ಭಾಷಣದಲ್ಲಿ ಕಳಕಳಿಯಿಲ್ಲ ಎಂದು ತಿಳಿದಾಗ ಭಾಷಣದ ಪ್ರತಿಯನ್ನು ಕಾಲಲ್ಲಿ ತುಳಿದು ವಿರೋಧ ವ್ಯಕ್ತಪಡಿಸುತ್ತಾನೆ.

ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ಆಸಕ್ತಿ ಇರುವ ಕೃಷ್ಣಪ್ಪನಿಗೆ ಕೌಟುಂಬಿಕ ಸ್ಥಿರತೆಯನ್ನು ಕಾಪಾಡಿಕೊಳ್ಳಲಾಗುವುದಿಲ್ಲ. ಊಟೋಪಚಾರಕ್ಕಾಗಿ ಹೆಂಡತಿಯು ಮೀಸಲೆಂದು ಬಯಸುವ ಕೃಷ್ಣಪ್ಪನ ಸೀಮಿತ ಉದ್ದೇಶವು ಹೆಂಡತಿ ಸೀತಾಳಿಗೆ ಹಿಡಿಸದೆ ಸಂಬಂಧ ಸಾಮರಸ್ಯವನ್ನು ಕಳೆದುಕೊಳ್ಳುತ್ತದೆ. ಹೀಗೆ ವ್ಯಕ್ತಿ–ಕುಟುಂಬ ಹಾಗೂ ಸಮಾಜದಲ್ಲಿ ಅನ್ಯಾಯವನ್ನು ಸಹಿಸದೆ ಹೋರಾಡುವ ಕೃಷ್ಣಪ್ಪ ಒಂಟಿಯಾಗುತ್ತಾನೆ. ಕೃಷ್ಣಪ್ಪನ ವೈಯಕ್ತಿಕ ಬದುಕು ಹಾಗೂ ಸಾಮಾಜಿಕ ಬದುಕಿನ ನಡುವೆ ಬಿರುಕುಂಟಾದಾಗ ಸಂಘರ್ಷವೇರ್ಪಡುತ್ತದೆ. ಅವಸ್ಥೆಯಲ್ಲಿ ಅನಂತಮೂರ್ತಿಯವರ ಪ್ರಮುಖ ಕಾಳಜಿ ವ್ಯಕ್ತಿ ಮತ್ತು ಸಮಾಜ ಇಲ್ಲವೆ ಮಾನವ ವ್ಯಕ್ತಿ ಹಾಗೂ ಮಾನವೀಯ ಪರಿಸರ ಇವುಗಳ ಸಂಬಂಧವನ್ನು ವ್ಯಕ್ತಿಯ ದೃಷ್ಟಿಕೋನದಿಂದ ಇವು ಅವನ ಪ್ರಜ್ಞೆಯಲ್ಲಿ ಮೂಡಿಬರುವ ರೀತಿಯ ನೆಲೆಯಿಂದ ಪರಿಶೀಲಿಸಲಾಗಿದೆ. ಎಂಬ ಯಶವಂತ ಚಿತ್ತಾಲರ ಅಭಿಪ್ರಾಯವು ಸೂಕ್ತವಾಗಿದೆ. ಆಯಾ ಪ್ರಾದೇಶಿಕ ಪರಿಸರದೊಂದಿಗೆ ವ್ಯಕ್ತಿಯು ಮಿಳಿತಗೊಂಡಾಗ ಸಮಾಜವು ಸಾಹಿತ್ಯದ ಮುಖೇನ ಪ್ರತಿರೂಪಗೊಳ್ಳುತ್ತದೆ. ಪರಿಸರದ ಪ್ರಭಾವದಿಂದ ಪ್ರಾದೇಶಿಕ ಸಂಸ್ಕೃತಿಯ ಚರಿತ್ರೆಯು ಕಥೆಯಾಗಿ, ಕಾವ್ಯವಾಗಿ, ಕಾದಂಬರಿಯಾಗಿ ಹಾಗೂ ಸಂಶೋಧನೆಯಾಗಿ ದಾಖಲಾಗುತ್ತದೆ. ಹೀಗೆ ಸಮೂಹನಿಷ್ಠ ಸಮಾಜವು ಸಾಹಿತ್ಯಕ್ಕೆ ವಸ್ತುವಾಗುತ್ತದೆ. ಸಮಾಜ ಮತ್ತು ವ್ಯಕ್ತಿಯ ನಡುವಿನ ಸಂಬಂಧವು ಸಾಹಿತ್ಯದ ಬಹುಮುಖ್ಯ ಚರ್ಚೆಯಾಗುತ್ತದೆ.

'ದಿವ್ಯ' ಕಾದಂಬರಿಯಲ್ಲಿ ಅಕ್ಕು ಪ್ರಾಯದಲ್ಲಿ ಗಂಡನನ್ನು ಕಳೆದುಕೊಂಡ ವಿಧವೆಯಾಗುತ್ತಾಳೆ. ನಂತರ ಅವಳ ಸವತಿಯ ಮಕ್ಕಳಾದ ಗಂಗೆ–ಗೌರಿಯ ಪಾಲನೆಯ ಜೊತೆಗೆ ತನ್ನ ತಮ್ಮನನ್ನು ಸಂಬಾಳಿಸುವ ಹೊಣೆಗಾರಿಕೆಯನ್ನು ನಿಭಾಯಿಸುತ್ತಾಳೆ. ಚಳಿಗಾಲದಲ್ಲಿ ತಣ್ಣೀರಿನಲ್ಲಿ ಸ್ನಾನ ಮಾಡಿ ಆರಿದ ಊಟವನ್ನೇ ಮಾಡುತ್ತಾ ಬದುಕಿನಲ್ಲಿ ತಂಪನ್ನು ಬಯಸುವ ಇತರರಿಗೆ ತಂಪೆರೆಯುವ ಜೀವಿ ಅಕ್ಕು. ಜೀವನದಲ್ಲಿ ಒಂದು ನಿರ್ಧಿಷ್ಟ ಗುರಿಯನ್ನು ಇಟ್ಟುಕೊಂಡಿರದ ವ್ಯಕ್ತಿ ತನ್ನ ಬಾಳಿನಲ್ಲಿ ತನ್ನನ್ನು ಮನೆಯಲ್ಲಿ ಸವತಿ ಮಕ್ಕಳನ್ನು ಪೋಷಿಸುತ್ತಾ ತಮ್ಮನನ್ನು ಬೆಳೆಸುತ್ತಾ ಹೊಸ ಆಸೆಗಳಿಲ್ಲದೆ ತನ್ನ ಗಂಗೆ ಗೌರಿ ಕ್ಷೇಮವನ್ನೇ ಬಯಸುವ ಜೀವಿ.

ಒಂದು ಸಂಜೆ ಕಾಡಿನಲ್ಲಿ ಗಂಗೆಯು ಜಿಂಕೆಯನ್ನು ಕಂಡು ಪಡೆದು ಸಾಕಿ ಆದರೆ ಅದು ಅಕಾಲಿಕ ಮರಣಕ್ಕೆ ತುತ್ತಾದಾಗ ಅದರ ಅಗಲಿಕೆಯಲ್ಲಿ ಆಕೆಯೂ ಸಾಯುತ್ತಾಳೆ. ಈ ಪ್ರಸಂಗದ ಕರಿನೆರಳು ಗೌರಿಯ ಮೇಲೆ ಬೀಳುತ್ತದೆ. ಮೊದಲು ಸಂತಸದ ಚೂಟಿಯಾಗಿದ್ದ ಗೌರಿ ಮೌನಿಯಾಗುತ್ತಾಳೆ. ಅವಳು ಓಡಾಡುವ ವ್ಯಕ್ತಿಯಾಗುತ್ತಾಳೆ. ಹೆಚ್ಚು ಕಾಲ ಕಾಡಿನ ಒಡನಾಟ ಅವಳಿಗೆ ಆಪ್ತವಾಗುತ್ತದೆ. ಇತರರ ಪಾಲಿಗೆ ಇವಳು ನಿಗೂಢವಾಗಿ ಹೋಗುತ್ತಾಳೆ. ಅವಳ ವರ್ತನೆ ಸುತ್ತ ಮುತ್ತಲಿನವರಿಗೆ ಒಗಟಾಗಿ ಕಡೆಗೆ ದೇವಿಯಾಗಿ ಆರಾಧನೆಗೆ ಆಸದ್ಯವಾಗುತ್ತಾಳೆ. ಅವಳನ್ನು ಕುರಿತು ಒಮ್ಮೆ ಅಕ್ಕು ದೇವರ ಕೂಸು ಎನ್ನುತ್ತಾಳೆ. ಅವಳು ತನ್ನ ಚಿತ್ತ ಕನ್ನಡಿಯಲ್ಲಿ ಅವ್ಯಕ್ತವಾದುದನ್ನು ಪ್ರತಿಫಲಿಸಿಕೊಂಡಂತೆ ನಿತ್ಯವಾಗಿದೆ ಅದನ್ನು ಮೀರಿದ ರೀತಿಯಲ್ಲಿ ಅವಳ ವ್ಯಕ್ತಿತ್ವ ರೂಪುಗೊಳ್ಳುತ್ತಾ ಹೋಗುತ್ತದೆ. ಯಜ್ಞಕುಂಡದ ದಿವ್ಯಾಗ್ನಿಯಂತೆ ಅವಳು ಬೆಳೆಯುತ್ತಾಳೆ. ಇದಕ್ಕೆ ಪರ್ಯಾಯವೆಂಬುದಂತೆ ಅಕ್ಕುವಿನ ವ್ಯಕ್ತಿತ್ವ ಮೂಢ ಜನರ ಮುಗರೂ ಬಂದು ಇವಳ ದೇವಿಯ ಎಂದು ನಂಬಿ ತಮ್ಮ ಮಕ್ಕಳನ್ನು ಗೌರಿಯ ಕಾಲ ಬಳಿಯಿಟ್ಟು ಹರಸುವಂತೆ ಬೇಡುತ್ತಾರೆ. ಹೀಗೆ ಈ ಭಾಗದಲ್ಲಿ ಪಾತ್ರಗಳು ಸರಳ ಜೀವಿಗಳೂ ಯಾವ ಆದರ್ಶಗಳ ಆಸೆಗಳೂ ಇಲ್ಲದೆ ಬಂದಂತೆ ಜೀವನ ಸಾಗಿಸುವ ಇತರರಿಗೆ ಹಿತ ಬಯಸುತ್ತಾ ಸಹಕಾರಿಯಾಗಿ ಮುನ್ನಡೆಯುತ್ತಿರುವ ಮುಗ್ಧ ಜೀವಿಗಳು. ಇವರ ಜೀವನ ಕ್ರಮಗಳನ್ನು ಕಂಡು ನಿಜಕ್ಕೂ ಸ್ವರ್ಗೀಯವೆಂದು ದಿವ್ಯ ವೆಂದೂ ಕಾದಂಬರಿಕಾರರು ಪರಿಭಾವಿಸಿರಬೇಕು.

ಗೌರಿ ಭಾವನಾತ್ಮಕ ನೆಲೆಯಲ್ಲಿ ಕಾಡಿನ ಕಲ್ಲು ಬಂಡೆಯ ಮೇಲೆ ಕುಳಿತು ಕರಿಯನ ಸಾನಿಧ್ಯವನ್ನು ಪಡೆಯದಿದ್ದ ಸರಸ್ವತಿ ವಾಸ್ತವ ಜಗತ್ತಿನಲ್ಲಿ ತನ್ನದಾಗಿಸಿಕೊಳ್ಳುತ್ತಾಳೆ. ದುರುಗಪ್ಪ ಕ್ರಾಂತಿಕಾರಿ ನಿಲುವಿನ ಆದರ್ಶವಾದಿ ಮಾತ್ರವಲ್ಲ ವಾಸ್ತವ ಬದುಕನ್ನು ಎದುರಿಸುವ ಛಲವಂತೆ ಸರಸ್ವತಿಯೊಡನೆ ಅವನು ಕಾಣುವ ಹೊಸ ಬದುಕಿನ ಕನಸುಗಳಿಗೆ ನಿರ್ದಿಷ್ಟ ಯೋಜನೆಗಳಿವೆ. ಆದರೆ ಕ್ರೂರ ಜಗತ್ತು ಅವನ ಕನಸುಗಳನ್ನು ಹೊಸಕಿ ಹಾಕಿದೆ. ಸರಸ್ವತಿಯ ಬಸಿರನ್ನು ತೆಗೆಸಲು ಗಣಪಯ್ಯ ಪ್ರಯತ್ನಿಸುತ್ತಾನೆ. ಆದರೆ ಸರಸ್ವತಿ ತಾಯಿ ಯಮುನಮ್ಮ ತನ್ನ ಮೊಮ್ಮಗುವನ್ನು ರಕ್ಷಿಸುತ್ತಾಳೆ. ಅವಳ ಶಕ್ತಿ ನಿಲುವುಗಳು ದಾವಣಗೆರೆಯಲ್ಲಿದ್ದ ದುರುಗಪ್ಪನ ತಂದೆ ಮೋಚಿಯನ್ನು ಶೂದ್ರನಾದರೂ ಅವನ ಪಾದದ ಬಳಿ ತನ್ನ ಮಗುವನ್ನಿಟ್ಟು ಸರಸ್ವತಿ ನಮಸ್ಕರಿಸುತ್ತಾಳೆ. ವ್ಯಕ್ತಿಯ ನೆಲೆಗಟ್ಟಿನ ಮೇಲೆ ರೂಪುಗೊಂಡ ಪಾತ್ರಗಳು ಇಲ್ಲಿ ನಿರೂಪಿತವಾಗಿವೆ.

ನವ್ಯರಲ್ಲಿ ವಿಶಿಷ್ಟ ಪ್ರಜ್ಞೆಯ ಮೂಲಕ ವ್ಯಕ್ತಿಯ ಬದುಕನ್ನು ನೋಡುವ ಪರಿಪಾಠವು ರೂಢಿಯಾಗಿತ್ತು. ವ್ಯಕ್ತಿಯ ಅಸ್ತಿತ್ವ ಹಾಗೂ ಸಾಮಾಜಿಕ ಸ್ಥಿತಿಯನ್ನು ಕುರಿತ ಮೂಲಭೂತ ವಿಚಾರಗಳು ಇಲ್ಲಿ ಶೋಧನೆಗೆ ಒಳಗಾಗಿವೆ. ಜೀವನಾನುಭವದಿಂದ ವ್ಯಕ್ತಿಯ ಮನಸ್ಸಿನಲ್ಲಿ ಮೂಡಿಬರುವ ಪ್ರತಿಕ್ರಿಯೆಗಳು ಇವರಿಗೆ ಮುಖ್ಯವೆನಿಸಿವೆ. ಈ ಕಾಲಘಟ್ಟದಲ್ಲಿ ಸಾಹಿತ್ಯವನ್ನು ರಚಿಸಿದ ಅನಂತಮೂರ್ತಿಯವರ ಕತೆ ಹಾಗೂ

[illegible]

ಕಾದಂಬರಿಗಳಲ್ಲಿ ವ್ಯಕ್ತಿಯ ಒಳಮನಸ್ಸಿನ ವಿಶ್ಲೇಷಣೆ, ಸ್ವಾನುಭವದಲ್ಲಿ ಕಂಡುಕೊಂಡ ಅನುಭವದ ಪರೀಕ್ಷೆ ಹಾಗೂ ಬದುಕನ್ನರಿಯುವ ಪ್ರಯತ್ನವನ್ನು ಕಾಣಬಹುದು.

ಈ ಅಧ್ಯಾಯದಲ್ಲಿ ಬ್ರಾಹ್ಮಣ ಮತ್ತು ಶೂದ್ರ, ಹೆಣ್ಣು ಮತ್ತು ಗಂಡು, ವ್ಯಕ್ತಿ ಮತ್ತು ಸಮಾಜ ಎಂಬ ಉಪಶೀರ್ಷಿಕೆಗಳಡಿಯಲ್ಲಿ ಅನಂತಮೂರ್ತಿಯವರ ಕತೆಗಳಲ್ಲಿ ಹೇಗೆ ಎಡೆಪಡೆದಿವೆ ಎಂಬುದನ್ನು ಚರ್ಚಿಸಲಾಗಿದೆ. ಮುಖ್ಯವಾಗಿ ಇವರ ಕತೆಗಳಲ್ಲಿ ಬ್ರಾಹ್ಮಣಲೋಕ ಅನಾವರಣಗೊಳ್ಳುವುದು ಅವರ ಸಂಸ್ಕೃತಿಯ ಚೌಕಟ್ಟಿನ ಹಿನ್ನೆಲೆಯಲ್ಲಿ. ಅಂದರೆ ಅಲ್ಲಿ ಚಿತ್ರಿಸುವ ಪಾತ್ರಗಳು ಶೂದ್ರರಾಗಿರಬಹುದು, ಬ್ರಾಹ್ಮಣರಾಗಿರಬಹುದು ಆ ಎರಡೂ ಸಂಸ್ಕೃತಿಗಳು ಮುಖಾಮುಖಿಯಾಗುತ್ತವೆ. ವಿಘಟನೆಗೊಳ್ಳುತ್ತವೆ. ಹಾಗೆಯೇ ಹೆಣ್ಣು ಮತ್ತು ಗಂಡಿನ ಸಂಬಂಧಗಳು ಕೂಡ ಇವರ ಕತೆಗಳಲ್ಲಿ ರೋಚಕವಾಗಿ ಮೂಡಿಬಂದಿವೆ. ನಗರ ಮತ್ತು ಗ್ರಾಮೀಣ ಪರಿಸರದ್ ಹೆಣ್ಣು ಮತ್ತು ಗಂಡುಗಳ ನಡುವಿನ ಸಂಬಂಧಗಳನ್ನು ಸೂಕ್ಷ್ಮಒಳನೋಟ ಗಳ ಮೂಲಕ ಅಭಿವ್ಯಕ್ತಿಪಡಿಸುತ್ತಾರೆ. ಹಾಗೆಯೇ ವ್ಯಕ್ತಿ ಮತ್ತು ಸಮಾಜವನ್ನು ಕೂಡಾ ತುಂಬಾ ಸೂಕ್ಷ್ಮವಾಗಿ ಕಾಣುತ್ತಾರೆ. ಇಂತಹ ಹಲವಾರು ಚರ್ಚೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಮುಖ್ಯವಾಗಿ ಅನಂತಮೂರ್ತಿಯವರ ಬರಹದ ಮೂಲಕ ಸಮಾಜ–ಸಂಸ್ಕೃತಿಯ ಸಂಬಂಧವನ್ನು ಚರ್ಚಿಸುವುದು ಈ ಅಧ್ಯಾಯದ ಮುಖ್ಯ ಉದ್ದೇಶವಾಗಿದೆ. ಅನಂತಮೂರ್ತಿಯವರು ತಮ್ಮ ಕಥೆ ಕಾದಂಬರಿಗಳಲ್ಲಿ ಈ ಸಮಾಜವನ್ನು ಅತ್ಯಂತ ಶಕ್ತವಾಗಿ ಚಿತ್ರಿಸಿದ್ದಾರೆ. ನವ್ಯದ ಕಾಲಮಾನದಲ್ಲಿ ಬರೆದ ಇವರ ಸಾಹಿತ್ಯದಲ್ಲಿ ಸಮೂಹ ನಿಷ್ಠ ಸಂಸ್ಕೃತಿ ಅಥವಾ ಸಮಾಜ ಆ ಕಾಲಮಾನದ ಪರಿಸರಕ್ಕೆ ತಕ್ಕಂತೆ ವ್ಯೈವೆತ್ತಿದೆ. ನವ್ಯ ಸಾಹಿತ್ಯದ ಸೈದ್ಧಾಂತಿಕ ನೆಲೆಗಳನ್ನು ಅತ್ಯಂತ ಪ್ರಭಾವಿಯಾಗಿ ಆವಾಹಿಸಿಕೊಂಡಿದ್ದ ಅನಂತಮೂರ್ತಿಯವರಿಗೆ ಪಾಶ್ಚಾತ್ಯ ಓದಿನೊಂದಿಗೆ ಲೋಹಿಯಾರ ಸಮಾಜವಾದದ ತಾತ್ವಿಕ ಬದ್ಧತೆಯಿತ್ತು. ಈ ಕಾರಣವಾಗಿ ನವ್ಯರ ಸಂದರ್ಭ ಈ ಸಮಾಜವನ್ನು ಕಂಡದ್ದು ವಿಶೇಷ ನೆಲೆಯಿಂದ ಎನ್ನಬಹುದು. ಅದರಲ್ಲಿಯೂ ನವ್ಯದ ಲಂಕೇಶ್, ಚಂದ್ರಶೇಖರ ಕಂಬಾರ, ಗೋಪಾಲಕೃಷ್ಣ ಅಡಿಗ, ಯಶವಂತಚಿತ್ತಾಲ, ರಾಮಚಂದ್ರಶರ್ಮ ಇವರೆಲ್ಲ ಕಂಡ ಸಾಮಾಜಿಕ ನಿಲುವುಗಳಿಗೂ ಅನಂತಮೂರ್ತಿಯವರು ಕಂಡ ಸಾಮಾಜಿಕ ನಿಲುವುಗಳಿಗೂ ತನ್ನದೇ ಆದ ಸಾದೃಶ್ಯ- ವೈದೃಶ್ಯಗಳಿವೆ. ಅನಂತಮೂರ್ತಿಯವರು ತೀವ್ರ ವೈಚಾರಿಕತೆ ಮತ್ತು ಪ್ರಶ್ನಾ ಮನೋಭಾವದಿಂದ ಜೀವನವನ್ನು ಶೋಧಿಸ ಹೊರಟವರು.

ಪರಂಪರಾಗತ ಮೌಲ್ಯ ಪ್ರಜ್ಞೆಯನ್ನು ಶಾಪವೆನ್ನುವಂತೆ ಗ್ರಹಿಸಿದ ಅನಂತಮೂರ್ತಿಯವರು ಅದು ಬ್ರಾಹ್ಮಣ ಸಮಾಜದ ಬದುಕಿನ ಎಲ್ಲ ನಿಸ್ಸಾರತೆಗೆ ಕಾರಣವೆಂಬಂತೆ ಚಿತ್ರಿಸುತ್ತಾರೆ. ಅವರ ಕಥಾಸಾಹಿತ್ಯದಲ್ಲಿ ಒಬ್ಬ ವ್ಯಕ್ತಿ ಅಥವಾ ಸಮಾಜವು ಪರಂಪರಾಗತ ಮೌಲ್ಯದ ಒತ್ತಡಕ್ಕೊಳಗಾಗುತ್ತದೆ. ವ್ಯಕ್ತಿಯ ದೌರ್ಬಲ್ಯ, ಅಚಾತುರ್ಯ, ಅತಿಭಾವುಕತೆ, ಬದುಕಿನ ಪೇಚು ಇತ್ಯಾದಿಗಳಿಂದ ಅನುಭವಿಸಬಹುದಾದ ಬದುಕಿನ ಅಸ್ವಸ್ಥತೆ, ದುಃಖ, ಯಾತನೆಗಳನ್ನು ಹಾಗೂ ಸಾಧ್ಯತೆಗಳನ್ನು ಚಿತ್ರಿಸುತ್ತಾರೆ. ಪ್ರತಿಯೊಬ್ಬ ವ್ಯಕ್ತಿ ಮತ್ತು ಪ್ರತಿಯೊಂದು ಸಮಾಜದಲ್ಲಿರುವ ದ್ವಂದ್ವಗಳನ್ನು ಸಮಾಜದೊಳಗೆ ವ್ಯಕ್ತಿಯೊಳಗೆ ಅಂತರ್ಗತವಾದ ಮನುಷ್ಯನ ಘನತೆಗೆ ಮತ್ತು ಅವನ ಅತ್ಯುತ್ತಮ ಸಾಧ್ಯತೆಗಳ ಅನ್ವೇಷಣೆಗೆ ಬದ್ಧವಾಗಿರುತ್ತದೆ.

ಕಾರ್ತೀಕ, ಪ್ರಶ್ನೆ ಕತೆಗಳಲ್ಲಿ ಈ ಬದಲಾವಣೆ ವೈಯಕ್ತಿಕ ಸಾಂಸಾರಿಕ ಮಟ್ಟದ್ದಾಗಿದೆ. ಸಂಪ್ರದಾಯಬದ್ಧ ರೀತಿಯಲ್ಲಿ ಬಾಲ್ಯ ಕಳೆದು ಈಗ ಹೊಸ ಬಗೆಯ ಜೀವನ ಪ್ರಾರಂಭಿಸುವ ಈ ಕತೆಗಳ ರಾಘವ, ರಂಗನಾಥ

[illegible]

[illegible]

[illegible]

[illegible]

[illegible]

ಇವರಿಗೆ ವ್ಯಕ್ತಿತ್ವ ಹೇಗಿರಬೇಕೆಂಬ ಹುಡುಕಾಟವಿದೆ. ವಿಘಟಿತ ಜೀವನವನ್ನು ಬೆಸೆಯುವಾಗಿನ ಸಂಕಟ ಈ ಕೃತಿಗಳ ವಸ್ತುವಾಗಿದೆ. ಘಟಶ್ರಾದ್ಧದಲ್ಲಿ ಇಡೀ ಒಂದು ಸಮಾಜ ಬದಲಾವಣೆಗೆ ಸಿಕ್ಕಿರುವುದನ್ನು ಅನಂತಮೂರ್ತಿ ಚಿತ್ರಿಸುತ್ತಾರೆ. ಬ್ರಾಹ್ಮಣ ಸಮಾಜ ಅವನತಿಯ ದಾರಿ ಹಿಡಿದಿದೆ. ಕ್ರೂರವಾಗಿದೆ. ಅವನತಿಯ ಈ ಕ್ರೂರಲೋಕದಲ್ಲಿ ರೂಪುಗೊಳ್ಳಬಹುದಾಗಿದ್ದ ಹೊಸತು ಯಮುನಕ್ಕನ ಭ್ರೂಣದಂತೆ ಹತ್ಯೆಗೊಳಗಾಗಿದೆ. ಸಾಂಪ್ರದಾಯಿಕ ಅಗ್ರಹಾರದ ಜೀವನಕ್ಕಿಂತ ಬೇರೆ ಬಗೆಯ ಜೀವನವನ್ನು ಮುಚ್ಚುಮರೆಯಲ್ಲಿ ನಡೆಸುವ ಗಣೇಶ, ಶಾಸ್ತ್ರಿ, ಇವರದು ಬೇಜವಾಬ್ದಾರಿ ವ್ಯಕ್ತಿತ್ವವಾಗಿದೆ. ಯಮುನಕ್ಕನನ್ನು ಬಸಿರು ಮಾಡಿರುವನು ಇದೇ ರೀತಿಯವನು. ಕ್ರೂರ ನಾಣಿ ಜವಾಬ್ದಾರಿಯಿಂದ ನಡೆದುಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಅವನು ಚಿಕ್ಕವನಾಗಿದ್ದಾನೆ. ಹೀಗಾಗಿ ಹಳೆಯ ಸಮಾಜ ನಶಿಸುತ್ತಿದ್ದರೂ ರೂಪು ಪಡೆಯುತ್ತಿರುವ ಹೊಸತು ಏನೆಂಬುದು ಸ್ಪಷ್ಟವಾಗಿ ಗೋಚರಿಸುವುದಿಲ್ಲ.

ಸಂಸ್ಕಾರದ ಪ್ರಾಣೇಶಾಚಾರ್ಯ ಪ್ರಾಮಾಣಿಕನಾದರೂ ಬ್ರಾಹ್ಮಣ್ಯದಿಂದ ಅವನಿಗೆ ಉತ್ತರ ಸಿಗುವುದಿಲ್ಲ. ಏಕೆಂದರೆ ವ್ಯಕ್ತಿಯ ಸಮಸ್ಯೆಗೆ ಪರಿಹಾರ ಹುಡುಕಬೇಕಾದಾಗ ಶಾಸ್ತ್ರ, ಮತ, ಜಾತಿಗಳಲ್ಲಿ ಅದು ಸಿಗುವುದಿಲ್ಲ. ಪ್ರಾಣೇಶಾಚಾರ್ಯ ದೂರ್ವಾಸಪುರಕ್ಕೆ ಮರಳಿದ ಬಳಿಕ ಪಡೆಯಲಿರುವ ಹೊಸ ವ್ಯಕ್ತಿತ್ವ ಸಹಾ ಆಕರ ಪಡೆಯದ ಭ್ರೂಣದಂತಿದೆ. ಮೂರನೇ ಭಾಗ ಆಕಾರ ತಳೆಯಲು ಹೊರುವ ಪ್ರಾಣೇಶಾಚಾರ್ಯನ ಹೊಸ ವ್ಯಕ್ತಿತ್ವದ ಸಂಕಟಗಳನ್ನು ಚಿತ್ರಿಸುತ್ತದೆ. ಹೊಸ ವ್ಯಕ್ತಿತ್ವ ಪಡೆದಾಗ ಹೆಚ್ಚು ಜವಾಬ್ದಾರಿಯುತ ವ್ಯಕ್ತಿತ್ವವಾಗುತ್ತದೆ. ಶ್ರೀಪತಿ, ಗಣೇಶ, ಜಗನ್ನಾಥ ಇವರ ವ್ಯಕ್ತಿತ್ವವೂ ಸೃಜನಶೀಲ ಹೊಸ ಸಮಾಜ ಕಟ್ಟುವಷ್ಟು ಗಟ್ಟಿಯಾಗಿಲ್ಲ. ವ್ಯಕ್ತಿ ಜೊತೆಗೆ ಸಮಾಜವು ಹೇಗೆ ಹೊಸರೂಪ ಪಡೆಯಬಹುದೆಂದು ಯೋಚಿಸುವ ಮತ್ತು ಅದರ ಸಂಕಟಗಳನ್ನು ಚಿತ್ರಿಸುವುದರಿಂದ ಅನಂತಮೂರ್ತಿಯವರಿಗೆ ವ್ಯಕ್ತಿ, ಸಂಸಾರ, ಸಮಾಜ ಮತ್ತು ಇವುಗಳ ಅವಿನಾಭಾವ ಸಂಬಂಧವನ್ನು ಗುರುತಿಸಿದಂತಾಗುತ್ತದೆ. ಬ್ರಾಹ್ಮಣ್ಯವನ್ನು ಬಿಟ್ಟ ನಂತರ ಅದು ಬರೀ ಹಿಂದೂ ಧರ್ಮಕ್ಕೆ ಮಾತ್ರ ಸಂಬಂಧಿಸಿದ ಸಮಸ್ಯೆಯಾಗದೇ ವ್ಯಕ್ತಿ ಮತ್ತು ಸಮಾಜದ ನಡುವಿನ ಸಮಸ್ಯೆಯಾಗಿ ಮಾರ್ಪಡುತ್ತದೆ. ಪ್ರಾಣೇಶಾಚಾರ್ಯನಂತೆ ಭಾರತೀಪುರ ದ ಜಗನ್ನಾಥ ಕೂಡ ಇದೇ ಬಗೆಯ ಸಂಬಂಧ ಮತ್ತು ಸಂಘರ್ಷಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾನೆ. ದೂರ್ವಾಸಪುರದ ಬ್ರಾಹ್ಮಣರನ್ನು ಉದ್ಧರಿಸುವ ಉದ್ದೇಶ ಪ್ರಾಣೇಶಾಚಾರ್ಯನಿಗಿದ್ದರೆ ಹರಿಜನರನ್ನು ಉದ್ಧರಿಸುವ ಕೆಲಸದಲ್ಲಿ ಜಗನ್ನಾಥನಿದ್ದಾನೆ. ಸಂಸ್ಕಾರ ಕಾದಂಬರಿಯ ಬ್ರಾಹ್ಮಣ್ಯ, ಭಾರತೀಪುರದ ಅಸ್ಪೃಶ್ಯತೆ ಇವು ಸಾಮಾಜಿಕ ವಸ್ತುಗಳು. ವ್ಯಕ್ತಿ ಮತ್ತು ಸಮಾಜಗಳ ಸಂಬಂಧ, ಪ್ರಜ್ಞೆ ಮತ್ತು ಪರಿಸರಗಳ ಸಂಬಂಧ ಈ ಸಂದರ್ಭದಲ್ಲಿ ಮುಖ್ಯವಾಗುತ್ತವೆ. ಅನಂತಮೂರ್ತಿ ತಮ್ಮನ್ನು ಒಬ್ಬ Critical Insider ಎಂದು ಕರೆದುಕೊಂಡಿದ್ದಾರೆ. ಈ ಮಾತು ಸಾಮಾಜಿಕ ಸಂಬಂಧಗಳ ಬಗ್ಗೆ ಈ ಕಾದಂಬರಿಗಳ ದೃಷ್ಟಿಕೋನವೆನಿಸಬಹುದೆಂಬುದನ್ನು ಸೂಚಿಸುತ್ತಿದೆ.

ಸಮಾಜದ ಬಹುತೇಕ ವಿವಾದಗಳಿಗೆ ವ್ಯಕ್ತಿಗಳ ಜೊತೆಗೆ ಜಾತಿ ಮತ್ತು ಧರ್ಮಗಳು ಕಾರಣವಾಗಿರುವ ಸಂದರ್ಭವನ್ನು ಕಾಣುತ್ತಿದ್ದೇವೆ. ಜಾತಿ, ಧರ್ಮಗಳ ಕಟ್ಟುಪಾಡುಗಳನ್ನು ಕಿತ್ತೊಗೆಯುವ ಸಾಧನವಾಗಬೇಕಾಗಿದ್ದ ನಾಗರೀಕತೆ ಮತ್ತು ಆಧುನಿಕತೆಗಳು ಸ್ವಾರ್ಥ, ಗುಂಪುಗಾರಿಕೆ ಮತ್ತು ಸ್ವಜನ ಪಕ್ಷಪಾತಗಳನ್ನು ಬೆಳೆಸುವ ಕೇಂದ್ರಗಳಾಗಿವೆ. ಇದು ಭಾರತದಂತಹ ಜಾತಿ ಪ್ರಧಾನ ರಾಷ್ಟ್ರಕ್ಕೆ ವಿಪರ್ಯಾಸವಾಗಿದೆ. ಪ್ರಗತಿಪರ ಚಿಂತನೆಗಳನ್ನು ಬೆಳೆಸುವ ಶಿಕ್ಷಣದಲ್ಲೂ ಜಾತಿಯ ಪ್ರಭಾವವಿದೆ. ಜಾತಿಯನ್ನು ಸಮಾಜದಿಂದ ತೊಲಗಿಸಬೇಕೆಂಬ ಆಶಯಕ್ಕೂ ಪ್ರಸ್ತುತ ಭಾರತದ ವಾಸ್ತವಕ್ಕೂ ಅಜಗಜಾಂತರವಿದೆ.ಪ್ರಸ್ತುತ ಸಂದರ್ಭದಲ್ಲಿ ಜಾತಿ, ಧರ್ಮಗಳು ವಿವಾದದ ಮೂಲಗಳಾಗಿವೆ. ಸಮಾಜವನ್ನು ಸ್ಫೋಟಿಸುವ ಸಾಧ್ಯತೆಯನ್ನು ಇಂದು ಜಾತಿ, ಧರ್ಮ ಮೊದಲಾದ

ಶಕ್ತಿಗಳು ಪಡೆದುಕೊಂಡಿವೆ. ನಮ್ಮ ಸಾಮಾಜಿಕ ಶ್ರೇಣೀಕರಣ ಧಾರ್ಮಿಕ ಮೂಲಭೂತವಾದ ಮತ್ತು ಇವುಗಳಿಂದ ಒದಗಬಹುದಾದ ಅಪಾಯಗಳು ಅತ್ಯಂತ ಸೂಕ್ಷ್ಮವಾಗಿ ಮತ್ತು ನಿರ್ಭಿಡೆಯಾಗಿ ಚಿತ್ರಿತವಾಗಿವೆ. ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಇಂತಹ ಅನೇಕ ವಿಚಾರಗಳಿರುವುದನ್ನು ಗಮನಿಸಬಹುದು. ಕನ್ನಡದ ಪ್ರಮುಖ ಸಾಹಿತಿಗಳೆಲ್ಲರೂ ಇಂತಹ ಪ್ರತಿಗಾಮಿ ಧೋರಣೆಗಳಿಂದ ಹೊರಬಂದವರಾಗಿರುವುದರಿಂದ ನಿರ್ಲಿಪ್ತವಾಗಿ ಪ್ರಸ್ತುತ ಸಮಾಜದ ವಿದ್ಯಮಾನಗಳನ್ನು ದಾಖಲಿಸಿ ವಿವರಿಸುವುದು ಲೇಖಕರಿಗೆ ಸಾಧ್ಯವಾಗಿದೆಯೆಂದು ತೋರುತ್ತದೆ.

ಇಲ್ಲಿ ಮುಖ್ಯವಾಗಿ ಅನಂತಮೂರ್ತಿಯವರ ಕತೆಗಳಲ್ಲಿ ಆ ಕಾಲದ ಸಂಸ್ಕೃತಿಗೆ ಅನುಗುಣವಾಗಿ ಸಮಕಾಲೀನ ಪರಿಸರದ ವರ್ಗ ಮತ್ತು ವರ್ಣ ವ್ಯವಸ್ಥೆಯು ಸಾಹಿತ್ಯದ ಮೂಲಕ ಸವಾಲು ಹಾಕುವ ಅನುರೂಪ ಸಾಧ್ಯತೆಗಳನ್ನು ಅಭಿವ್ಯಕ್ತಿ ಪಡಿಸಲಾಗಿದೆ. ನವ್ಯದ ಸಂದರ್ಭದಲ್ಲಿ ಆ ಸಾಹಿತ್ಯಕ ಚಳುವಳಿಯ ಭಾಗವಾಗಿ ಆ ಕಾಲದ ಲೇಖಕರು ವರ್ಗ ಮತ್ತು ವರ್ಣವನ್ನು ಕಂಡ ಬಗೆ ವಿಶೇಷವಾದುದು. ಪಾರಂಪರಿಕ ಸಾಹಿತ್ಯ ಜಾತಿಯನ್ನು ಪ್ರತಿರೋಧಾತ್ಮಕ ನೆಲೆಯಲ್ಲಿ ಅಲ್ಲಲ್ಲಿ ಬಿಂಬಿಸಿದ್ದರೂ ಪ್ರಗತಿಶೀಲ ಪಂಥದ ನಂತರ ಜಾತಿಯನ್ನು ಅಭಿವ್ಯಕ್ತಿ ಪಡಿಸಿದ ರೀತಿಗೆ ಒಂದು ಚಳುವಳಿ ರೂಪದ ಮುಖಾಮುಖಿ ದೊರೆಯಿತು. ಆ ಮೂಲಕ ನವ್ಯ ಪಂಥದ ಬಹುಮುಖ್ಯ ಲೇಖಕರಾದ ಅನಂತಮೂರ್ತಿಯವರು ತಮ್ಮದೇ ಆದಂತಹ ವಿಶೇಷವಾದ ಕಥಾಜಗತ್ತನ್ನು ಪ್ರತಿನಿರ್ಮಿಸುತ್ತಾರೆ. ಸಾಮಾಜಿಕ ಆವರಣದಲ್ಲಿ ನಡೆಯುವ ಮತ್ತು ಚಾಲ್ತಿಯ ಲ್ಲಿರುವ ಜಾತಿಯನ್ನು, ವ್ಯಕ್ತಿ ನೆಲೆಯಲ್ಲಿ, ಲಿಂಗ ನೆಲೆಯಲ್ಲಿ ಪರಿಭಾವಿಸಿದ ಬಗೆ ಕನ್ನಡ ಸಾಹಿತ್ಯಕ್ಕೆ ಹೊಸದು. ತಮ್ಮ ತಲೆಮಾರಿನ ಸಾಹಿತ್ಯ ಸಂದರ್ಭದಲ್ಲಿ ಅನಂತಮೂರ್ತಿಯರು ಆರಿಸಿಕೊಂಡ ಕಥಾ ಸಾಹಿತ್ಯದ ವಸ್ತು ಹಳೆಯದಾದಾರೂ ಆ ವಸ್ತುವಿಗೆ ಅನುಭವದ ಆಳ ಮತ್ತು ಸಂಕೀರ್ಣತೆಯನ್ನು ತಂದುಕೊಡುವಲ್ಲಿ ಹೆಚ್ಚುಗಾರಿಕೆಯಿದೆ. ಅನಂತಮೂರ್ತಿಯವರ ಬರವಣಿಗೆಯ ಮಹತ್ವ ಮತ್ತು ಸಾಧನೆಯನ್ನು ಅವರ ತಲೆಮಾರಿನ ಸಂದರ್ಭದಲ್ಲಿ ಗುರುತಿಸುವಾಗ ಅವರ ಕಥಾ ಸಾಹಿತ್ಯದ ಘನೋದ್ದೇಶ್ಯ ಮತ್ತು ನಿರ್ವಹಣೆಯ ವಿಧಾನ ಮತ್ತು ಅಭಿವ್ಯಕ್ತಿ ಪ್ರಕ್ರಿಯೆಯ ಮೂಲಕ ಅನುಭವಕ್ಕೆ ಬರುವ ಶಕ್ತಿ ಸಮೃದ್ಧಿಯನ್ನು ಅವುಗಳ ಗುಣದೋಷದೊಂದಿಗೆ ನೋಡಬೇಕಾಗುತ್ತದೆ.

[illegible]

[illegible]

ಅಡಿ ಪಟ್ಟಿಗಳು

೧. ಮುರಳೀಧರ ಉಪಾಧ್ಯ ಹಿರಿಯಡಕ–ಶೂದ್ರಪ್ರಜ್ಞೆ ದಲಿತ ಸಾಹಿತ್ಯ; ಇತ್ಯಾದಿ; ಸಂಕ್ರಮಣ ೫೯; ೧೯೭೪; ಪು; ೫೭.

೨. ಮಳಲಿ ವಸಂತಕುಮಾರ್–ಸ್ವಸ್ತಿ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ; ಮೈಸೂರು; ೧೯೮೩; ಪು; ೮೨.

೩. ಪೋಲಂಕಿ ರಾಮಮೂರ್ತಿ–ಡಾ.ಯು.ಆರ್.ಅನಂತಮೂರ್ತಿ;ಸಂ.ಡಾ. ಮೋಹನ್‌ಕುಂಟಾರ ೧೯೯೫; ಪು; ೦೭.

೪. ವೆಂಕಟರಾಮ ಎಸ್–ಯು.ಆರ್.ಅನಂತಮೂರ್ತಿ;ಸಂ. ಮುರಳಿಧರ ಉಪಾಧ್ಯ ಹಿರಿಯಡಕ; ೨೦೦೦;ಪು;೩೦೧

೫. ಆಮೂರ ಜಿ.ಎಸ್–ಕನ್ನಡ ಪ್ರಭ ; ದೀಪಾವಳಿ ವಿಶೇಷಾಂಕ; ೨೦೦೨ ; ಪು; ೨೮.

೬. ವಿಜಯ ಕುಮಾರ್ ಜಿ–ಚಿನ್ಮಯ ; ೧೯೭೬ ; ಪು;೧೦೫.

೭. ರಂಗನಾಥರಾವ್ .ಜಿ.ಎನ್–ಹೊಸಕಾದಂಬರಿ ಹೊಸತಿರುವು ಅಕ್ಷರ ಪ್ರಕಾಶನ; ೧೯೭೪;ಪು ;೬೩.

೮. ವಿಜಯ ಕುಮಾರ್ ಜಿ ; ಚಿನ್ಮಯ ; ೧೯೭೬ ; ಪು;೧೦೪.

೯. ಸುಬ್ರಾಯಚೊಕ್ಕಾಡಿ–ಅನಂತಮೂರ್ತಿಯವರ ಮೌನಿ;ಯು.ಆರ್.ಅನಂತಮೂರ್ತಿ;ಸಂ. ಮುರಳೀಧರ ಉಪಾಧ್ಯ ಹಿರಿಯಡಕ ;೨೦೦೦;ಪು;೧೭೯.

೧೦. ಶೇಷಗಿರಿರಾವ್ ಎಲ್.ಎಸ್–ಹೊಸಗನ್ನಡ ಸಾಹಿತ್ಯ;೧೯೭೫ ; ಪು; ೧೯೯

ಅಧ್ಯಾಯ ಮೂರು

ಆದರ್ಶ ಮತ್ತು ವಾಸ್ತವ

೩.೧ ವ್ಯವಸ್ಥೆ ಮತ್ತು ಸಮಕಾಲೀನತೆ

೩.೨ ಸಾಂಕೇತಿಕತೆ ಮತ್ತು ವಾಸ್ತವಿಕತೆ

೩.೩ ಅಂತರಂಗ ಹಾಗೂ ಬಹಿರಂಗ

ಅಧ್ಯಾಯ – ೩

ಆದರ್ಶ ಮತ್ತು ವಾಸ್ತವ

ಆದರ್ಶ ಮತ್ತು ವಾಸ್ತವವನ್ನು ಕುರಿತ ವಿಚಾರಗಳನ್ನು ಅನಂತಮೂರ್ತಿಯವರು ಕಥಾಸಾಹಿತ್ಯದಲ್ಲಿ ಸಂಘರ್ಷದ ನೆಲೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ವ್ಯಕ್ತಿಯ ಖಾಸಗೀ ವಾಸ್ತವವನ್ನು ಸಮಷ್ಠಿಯ ಜೊತೆಗೆ ತೊಡಗಿಸಬಲ್ಲಂತಹ ಹೊಸ ಮೌಲ್ಯ ಹುಟ್ಟಿಕೊಳ್ಳುವಾಗ ಆದರ್ಶ ಮತ್ತು ವಾಸ್ತವಗಳು ಮುಖಾಮುಖಿಯಾಗುತ್ತವೆ. ವ್ಯಕ್ತಿಯ ಜೀವನದ ಕೆಲವು ಸಂದರ್ಭಗಳಲ್ಲಿ ತೋರಿಕೆ ಮತ್ತು ನೈಜತೆಯಲ್ಲಿ ದ್ವಂದ್ವ ಉಂಟಾಗುತ್ತದೆ. ಸಮಾಜವಾದೀ ಚಿಂತನೆಗಳಿಂದ ಪ್ರಭಾವಿತರಾದ ಅನಂತಮೂರ್ತಿಯವರು ಅಂಥ ಸಮಾಜವಾದೀ ಆದರ್ಶ ಹಾಗೂ ಕ್ರಿಯೆಗಳಿಗೆ ಹೊರತಾದ ಸಂದರ್ಭವನ್ನು ತಮ್ಮ ಕೃತಿಗಳಲ್ಲಿ ಸೃಷ್ಟಿಸಿದ್ದಾರೆ. ಒಂದು ಸಾಮಾಜಿಕ ಸಮುದಾಯದಲ್ಲಿ ರೂಪುಗೊಂಡ ಉನ್ನತ ಆದರ್ಶ, ಉನ್ನತಿಕೆಯ ನೆಲೆಗಳಲ್ಲಿ ಹುದುಗಿರುವ ಪರಿಮಿತಿಗಳನ್ನು ಇವರ ಕತೆಗಳು ವಿಶ್ಲೇಷಿಸುತ್ತವೆ.

ಸಾಹಿತ್ಯವನ್ನು ಜೀವನ ವಿಶ್ಲೇಷಣೆಯ ಮಾಧ್ಯಮವನ್ನಾಗಿ ಮಾಡಿಕೊಂಡ ಅನಂತಮೂರ್ತಿಯವರ ಆಲೋಚನೆಯ ಹಿಂದೆ, ವ್ಯಕ್ತಿ ಜೀವನದ ದೃಷ್ಟಿಯಿಂದ ಜೀವನಾನುಭವವಾಗಿ ಸಂಭವಿಸುವಷ್ಟು ಆದರ್ಶ ಮಾತ್ರ ನಿಜ ಎಂಬ ಅಸ್ತಿತ್ವವಾದದ ನಿಲುವಿದೆ. ಲೇಖಕರು ಭಾಷೆ ಮತ್ತು ಜೀವನದ ಬಗ್ಗೆ ನಿಷ್ಠುರವಾದ ನಿಲುವಿನಿಂದ ಬರೆಯುವುದರಿಂದಲೇ ಬುದ್ಧಿಪೂರ್ವಕವಾಗಿ ಗ್ರಹಿಸಿದ ವಿಚಾರಗಳ ಸಮರ್ಥನೆಗೆ ಅವರ ಸಾಹಿತ್ಯ ಬರಿಯ ವಾಹಕವಾಗದೆ ಶೋಧನೆಯ ಕ್ರಿಯೆಯಾಗಿ ಪರಿಣಮಿಸಿದೆ.

ಎಲ್ಲ ಕಾಲದ ಸಾಹಿತ್ಯವೂ ಸಮಕಾಲೀನತೆಯನ್ನು ಒಳಗೊಂಡೇ ಹೊಸರೂಪವನ್ನು ಪಡೆಯುತ್ತದೆ. ಸಂಸ್ಕೃತಿಯಲ್ಲಿನ ಸಾತತ್ಯವನ್ನು ಹಲವಾರು ಅರ್ಥಪೂರ್ಣ ನೆಲೆಗಳಿಂದ ವ್ಯಾಖ್ಯಾನಿಸಿಕೊಳ್ಳಬೇಕಾದ ಅಗತ್ಯವಿದೆ. ಅಲ್ಲದೇ ಆ ಸಾಹಿತ್ಯವು ತನ್ನ ಸಮಕಾಲೀನ ಸಮಷ್ಠಿಯ ಶೋಧನೆಗೆ ತೊಡಗುವುದರಿಂದ ಹೊಸ ಸಾಂಸ್ಕೃತಿಕ ವಾತಾವರಣದ ನಿರ್ಮಾಣಕ್ಕೆ ದಾರಿಮಾಡಿಕೊಡುತ್ತದೆ. ಅನಂತಮೂರ್ತಿಯವರ ಸಾಹಿತ್ಯವು ಪರಂಪರೆಯ

[illegible]

[illegible]

[illegible]

[illegible]

[illegible]

[illegible]

ಜೀವಂತಿಕೆಯನ್ನು ಸಮಕಾಲೀನ ನೆಲೆಯಲ್ಲಿ ಶೋಧಿಸುತ್ತಾ ಬಂದಿದೆ. ಪರಂಪರೆಯ ನೆಲೆಗಳು ಆಧುನಿಕ ಸಂದರ್ಭದಲ್ಲಿ ಸ್ಫೋಟಿಸುವ ಕ್ರಿಯಾತ್ಮಕತೆಯನ್ನು ಇವರ ಕಥಾಸಾಹಿತ್ಯದಲ್ಲಿ ಕಾಣಬಹುದು. ನಮ್ಮ ಸಮಕಾಲೀನ ಬದುಕಿನ ಭಾಗವಾಗಿರುವ ರಾಜಕೀಯ ಸ್ಥಿತ್ಯಂತರಗಳನ್ನು ಬೇರೆಬೇರೆ ಆಯಾಮಗಳಲ್ಲಿಟ್ಟು ಅದನ್ನು ತಾತ್ವಿಕ ನೆಲೆಯನ್ನಾಗಿಸುವ ಬಗೆಯನ್ನು ಲೇಖಕರ ಕೃತಿಗಳಲ್ಲಿ ನೋಡಬಹುದಾಗಿದೆ.

ಸ್ವಾತಂತ್ರ್ಯ ಸಿಗುವ ತನಕ ನಮ್ಮ ಗುರಿ ಸ್ವಾತಂತ್ರ್ಯ ಒಂದೇ ಆಗಿತ್ತು. ಆದರೆ ನಂತರದ ಗುರಿಗಳು ಅಷ್ಟು ಸ್ಪಷ್ಟವೂ ಸರಳವೂ ಆಗಿರಲಿಲ್ಲ ಜೊತೆಗೆ ನಮ್ಮ ಜನರೇ ನಮ್ಮನ್ನು ಆಳ ತೊಡಗಿದರು. ಹಿಂದಿನ ಆದರ್ಶಗಳು ಕುಸಿದು ಅದರೊಳಗಿನ ನಿಜವಾದ ವ್ಯಕ್ತಿತ್ವಗಳು ಎದ್ದು ಕಾಣತೊಡಗಿದವು. ಸ್ವಾರ್ಥ, ಅಧಿಕಾರ ದಾಹ ಭ್ರಷ್ಟತೆ ಇವು ತಾನೇ ತಾನಾಗಿ ವಿಜೃಂಭಿಸ ತೊಡಗಿದಾಗ ವ್ಯಕ್ತಿ ಸ್ವಾತಂತ್ರ್ಯ ನಂತರದ ಕನಸುಗಳು ಹುಸಿಯಾಗ ತೊಡಗಿದವು. ವಿದ್ಯಾಭ್ಯಾಸ ಪಡೆದವರೆಲ್ಲರೂ ತಮ್ಮ ಕುಲಕಸುಬುಗಳನ್ನು ತ್ಯಜಿಸಿ ಪಟ್ಟಣದೆಡೆಗೆ ಮುಖಮಾಡಿ ನಿಂತಾಗ ಸಹಜವಾಗಿಯೇ ಪಟ್ಟಣದಲ್ಲಿ ಉದ್ಯೋಗಕ್ಕಾಗಿ ಸ್ವಾರ್ಥ ಹೆಚ್ಚಾಗತೊಡಗಿತು. ಹಳ್ಳಿಗಳಿಂದ ನಗರಗಳಿಗೆ ಪ್ರವೇಶ ಮಾಡಿದ ವ್ಯಕ್ತಿ ಅಲ್ಲಿನ ಬದುಕಿನ ಕ್ರಮವನ್ನು ತನ್ನ ಹಿಂದಿನ ಜೀವನ ಕ್ರಮದೊಡನೆ ಹೋಲಿಸಿಕೊಂಡಾಗ ಪರಿಸರದ ಭಿನ್ನತೆ ಅನುಭವಿಸಬೇಕಾಗಿ ಬಂತು. ಇಂತಹ ಸಂದರ್ಭದಲ್ಲಿ ಸಾಮಾಜಿಕವಾಗಿ ಮನುಷ್ಯನ ಒಳಗು ಮತ್ತು ಹೊರಗು ಬೇರೆಯಾಗಿಯೇ ಕೆಲಸ ಮಾಡುತ್ತಿರುವುದನ್ನು ಅವನು ಕಂಡುಕೊಳ್ಳುತ್ತಾನೆ. ಪುಸ್ತಕಗಳಿಂದ ದೊರಕಿಸಿಕೊಂಡ, ಹಿರಿಯ ಅಮೃತವಾಣಿಯಿಂದ ಕಟ್ಟಿಕೊಂಡಿದ್ದ ಮಾದರಿಗಳ ನಡುವಿನ ಭಿನ್ನತೆಯನ್ನು ಗುರುತಿಕೊಂಡಾಗ ಗೊಂದಲಗೊಳ್ಳುತ್ತಾನೆ. ಹೀಗೆ ಛಿದ್ರಗೊಂಡ ವಿದ್ಯಾವಂತ ತರುಣನ ಮನಸ್ಸು ಸಮಾಜಕ್ಕೆ ಹೇಗೆ ಸ್ಪಂದಿಸಿತು ಎಂಬುದು ಇಲ್ಲಿನ ಕಥನಸಾಹಿತ್ಯದಲ್ಲಿ ಮೂಡಿಬಂದಿದೆ. ಬದುಕಿಗೊಂದು ಗುರಿ ಇಲ್ಲವಾದದ್ದು, ಆದರ್ಶಗಳ ಕುಸಿತ ಇದರೊಡನೆ ಹೊಸ ಬದುಕಿನ ಮಾದರಿಗಳು ತಕ್ಷಣವೇ ಕೈಗೆ ಸಿಗದೇ ಹೋದದ್ದು, ಇವೆಲ್ಲಕ್ಕಿಂತಲೂ ಹೆಚ್ಚಾಗಿ ಶಿಕ್ಷಣ ದೊರಕಿಸಿಕೊಳ್ಳುತ್ತಿರುವಾಗಲೇ ಅಥವಾ ಶಿಕ್ಷಣ ಪಡೆದು ಹೊರಬಂದವರು ಶಿಕ್ಷಣದಿಂದ ದೊರಕಿಸಿಕೊಂಡ, ಮಾನದಂಡಗಳಿಂದಲೇ ಬದುಕನ್ನು ನೋಡಲು ಹೊರಟವರಿಗೆ ಜೀವನ ಎಂಬುದು ತಿಳಿದುಕೊಂಡದ್ದಕ್ಕಿಂತ ಬೇರೆಯೇ ಆಗಿತ್ತು. ಶಿಕ್ಷಣ ಮತ್ತು ಬದುಕು ಇವೆರಡೂ ಬೇರೆಯಾಗಿ ಕಾಣಿಸಿದ್ದು, ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ದೊಡ್ಡ ಅಡಚಣೆಯಾಯಿತು.

ಸ್ವಾತಂತ್ರೋತ್ತರ ನಂತರದ ಜೀವನ ಕ್ರಮದಲ್ಲಿ ಏರ್ಪಟ್ಟ ಭ್ರಷ್ಟತೆ, ಗೋಸುಂಬಿತನ, ಸ್ವಾರ್ಥ ಇವುಗಳಿಂದಾಗಿ ಭ್ರಮನಿರಸನಗೊಂಡು ತಾನಿದುವರೆಗೂ ಬೋಧಿಸಿದ ಜೀವನಕ್ರಮಕ್ಕೂ ಆದರ್ಶಗಳಿಗೂ ವಾಸ್ತವದಲ್ಲಿ ಅಜಗಜಾಂತರವಿರುವುದನ್ನು ಅನುಭವದ ಮೂಲಕ ಕಂಡುಕೊಳ್ಳುತ್ತಾರೆ. ವಿದ್ಯಾಭ್ಯಾಸದಿಂದ ಪಡೆದುಕೊಂಡ ಜೀವನ ಕ್ರಮವು ವಾಸ್ತವದಲ್ಲಿ ಇಲ್ಲದೆ ಇರುವುದರ ದ್ವಂದ್ವವನ್ನು ವ್ಯಕ್ತಿಗಳ ಬದುಕಿನಲ್ಲೂ ಮತ್ತು ಪರಂಪರೆಯ ಜೀವನಕ್ರಮದಲ್ಲೂ ಗುರುತಿಸಿಕೊಳ್ಳುತ್ತಾರೆ. ಇಲ್ಲಿನ ವ್ಯಕ್ತಿಗಳು ಬೋಧಿಸುವ ಆದರ್ಶ ಆದರೆ ವಾಸ್ತವದಲ್ಲಿ ಅವರೇ ಅದಕ್ಕೆ ವ್ಯತಿರಿಕ್ತವಾಗಿ ಬದುಕುತ್ತಿರುವ ಬಗೆ ಇಲ್ಲೆಲ್ಲಾ ಬಿರುಕಿರುವುದನ್ನು ಗುರುತಿಸಿಕೊಂಡವರಿಗೆ ಕ್ರಮೇಣ ಹೀಗೆ ಗುರುತಿಸಿಕೊಂಡ ಕ್ರಮದಿಂದಾಗಿಯೇ ತಮ್ಮ ಮತ್ತು ಸಮಾಜದ ನಡುವೆಯೂ ಬಿರುಕುಂಟಾಗುತ್ತದೆ. ಈ ಸಂದರ್ಭದಲ್ಲಿ ಸಾಮಾಜಿಕ ಬದುಕಿನಿಂದ ಹೊರಗೆ ನಿಂತು ಪರಕೀಯತೆಯನ್ನು ಅನುಭವಿಸುತ್ತಾರೆ.

ಆದರ್ಶದ ಗುಂಗಿನೊಳಗೆ ಇದ್ದವರಿಗೆ ಅದರೊಳಗಿನ ಪೊಳ್ಳುತನವು ಅರಿವಿಗೆ ಬರುತ್ತಿದ್ದಂತೆ ಹೊರಗಿನ ಯಾವ ಧ್ಯೇಯವು ಇಲ್ಲದಂತಾಗಿ ಮತ್ತೆ ತನ್ನ ಒಳಗನ್ನೇ ನೋಡಿಕೊಳ್ಳುವಂತಾಗುತ್ತದೆ. ಆದರ್ಶಗಳ ಮಿತಿಯನ್ನು

[illegible]

[illegible]

[illegible]

[illegible]

ಗುರುತಿಸಿಕೊಂಡಾಗ ವಾಸ್ತವದಲ್ಲಿನ ಅನುಭವವು ದ್ವಂದ್ವವನ್ನುಂಟು ಮಾಡುತ್ತದೆ. ಇಂತಹ ಸಂದರ್ಭದಲ್ಲಿ ಕಾಮವು ಪ್ರಧಾನ ಪಾತ್ರವಹಿಸಿದ್ದು, ಮನುಷ್ಯನ ವಿಶೇಷ ಶಕ್ತಿಯಾದ ಪ್ರೇಮವನ್ನು ಪಕ್ಕಕ್ಕಿಟ್ಟಿದೆ. ಪ್ರಜ್ಞೆಯ ನೆಲೆಯಲ್ಲಿ ವಿಶ್ಲೇಷಿಸಿದ ಕಾಮವು ವ್ಯಕ್ತಿಯ ತೃಪ್ತಿಗೆ ಸಾಮಾಜಿಕವಾದ ಹುಡುಕಾಟವಾಗಿದೆ. ಇಂತಹ ದ್ವಂದ್ವ ಸ್ಥಿತಿಯನ್ನು ಕೆಲವೊಂದು ಸಂಕೇತಗಳ ಮೂಲಕ ಅನಂತಮೂರ್ತಿಯವರು ಗುರುತಿಸುತ್ತಾರೆ.

ಪರಂಪರೆಯಿಂದ ಕೊಡಲ್ಪಟ್ಟ ಜೀವನ ಕ್ರಮದೊಳಗೆ ಇರುವುದಕ್ಕೂ, ಹೇಳುವುದಕ್ಕೂ ಇರುವ ವ್ಯತ್ಯಾಸ, ಅಂತರ ಕಂಡುಕೊಂಡವರು ಮತ್ತೊಮ್ಮೆ ಸೂಕ್ಷ್ಮ ಸಂವೇದನಾಶೀಲರಾಗುತ್ತಾರೆ. ವಿಶ್ಲೇಷಣಾ ಶಕ್ತಿಯನ್ನು ಬೆಳೆಸಿಕೊಳ್ಳುತ್ತಾರೆ. ಈ ವಿಶ್ಲೇಷಣಾ ಸಾಮರ್ಥ್ಯವನ್ನು ವಿದ್ಯಾಭ್ಯಾಸದಿಂದ ಪಡೆದುಕೊಂಡವರಿಗೆ ಪರಂಪರೆಯ ಬಗೆಗೂ ಅದೇ ದೃಷ್ಟಿಯೇ ಮುಖ್ಯವಾಗುತ್ತದೆ. ಆದರೆ ಇನ್ನೊಂದೆಡೆ ವಿಶ್ಲೇಷಣಾ ಸಾಮರ್ಥ್ಯದ ದೆಸೆಯಿಂದಾಗಿಯೇ ಪರಂಪರೆಯೊಳಗಿನ ದ್ವಿಮುಖತೆಯನ್ನು ಗುರುತಿಸಿ ಅದರಿಂದ ಹೊರಗೆ ಬಂದರೂ ಓದಿನಿಂದ ದೊರಕಿಸಿಕೊಂಡ ಮಾದರಿಗಳು ತಲೆಯೊಳಗಿದ್ದರೂ, ಅದೇ ಬದುಕನ್ನು ಮಾದರಿಯಾಗಿಸಿಕೊಂಡು ಬದುಕಲಾರದವರಾಗುತ್ತಾರೆ. ತಮ್ಮ ಮತ್ತು ಸಾಮಾಜಿಕತೆಯ ನಡುವೆ ಇರುವ ಬಿರುಕುಗಳನ್ನು ತೊಡೆದು ಹಾಕಲು ಅಧಿಕೃತ ಸಂದರ್ಭಗಳ ಹುಡುಕಾಟದಲ್ಲಿ ತೊಡಗುತ್ತಾರೆ. ತಮ್ಮ ಬಯಕೆಗಳ ಮನಸ್ಸಿನ ಅಧಿಕೃತತೆಗೆ ತಕ್ಕಂತೆ ಸಾಮಾಜಿಕವಾಗಿ ಬದುಕಬಹುದಾದ ಸಾಧ್ಯತೆಗಳನ್ನು ಅನ್ವೇಷಣೆ ಮಾಡುತ್ತಾರೆ.

ಭೌತಿಕ ಸತ್ಯಗಳೇ ಸಂಸ್ಕೃತಿ ನಾಗರೀಕತೆಯ ನಿರ್ಧಾರಕಗಳಲ್ಲ. ಭೌತಿಕತೆಯೊಂದಿಗೆ ಆಧ್ಯಾತ್ಮಿಕ ನೆಲೆಗಳನ್ನು ವರ್ತಮಾನದಲ್ಲಿ ಚಿಂತಿಸಬೇಕೆಂಬುದು ಇವರ ಪ್ರತಿಪಾದನೆಯಾಗಿದೆ. ಬದುಕಿಗೆ ಅನಿವಾರ್ಯವಾದ ಸಾವಿನ ಕುರಿತು ಅನಂತಮೂರ್ತಿಯಾವರು ಕಥನ ಸಾಹಿತ್ಯದ ಮೂಲಕ ಮಂಡಿಸುತ್ತಾರೆ. ಪರಂಪರೆ, ಆಚರಣೆ ಮೌಲ್ಯಗಳ ನೆಲೆಗಟ್ಟು ವ್ಯಕ್ತಿ ಪ್ರಜ್ಞೆಯಲ್ಲೇ ಹುಟ್ಟುವ ಅರಿವಿನ ಸ್ಫೋಟ ಹಾಗೂ ಜೀವನ ಶ್ರಮದ ಒಳಗಡೆ ಹುದುಗಿಕೊಂಡಿರುವ ಸಂಘರ್ಷ ಇವೆಲ್ಲ ಒಂದು ಕ್ರಿಯಾಶಾಲೀ ರೂಪಕವಾಗಿರುವ ಇವರ ಕೃತಿಗಳ ನೆಲೆಗಳು ಭಿನ್ನಸ್ವರೂಪವನ್ನು ಪಡೆದು ಸಮುದಾಯದಲ್ಲಿನ ಸಂಘರ್ಷವನ್ನು ಗುರುತಿಸುತ್ತವೆ.

ಪರಕೀಯರ ಆಳ್ವಿಕೆಯಿಂದ ಮುಕ್ತಗೊಂಡ ಭಾರತೀಯ ಸಮಾಜಕ್ಕೆ ತನ್ನದೇ ಆದ ಹೊಸ ಜೀವನಶೈಲಿಗೆ, ಆಲೋಚನೆಗಳಿಗೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಇತ್ತು. ಈ ಸಂದರ್ಭದಲ್ಲಿ ಸ್ವಾತಂತ್ರ್ಯಪೂರ್ವ ಕಾಲಘಟ್ಟವು ನೀಡಿದ್ದ ಪರಂಪರೆಯ ಬಗೆಗಿನ ಗೌರವ, ಆದರ್ಶ ಮುಂತಾದವು ಬದಲಾದ ಹೊಸ ಸನ್ನಿವೇಶದಲ್ಲಿ ಪುನರ್‌ಪರಿಶೀಲನೆಗೆ ಒಳಗಾದವು. ಪುನರ್ ವ್ಯಾಖ್ಯಾನಗೊಳ್ಳಬೇಕಾದ ಸಂದರ್ಭ ಸೃಷ್ಟಿಯಾಗುತ್ತಿರುವುದನ್ನು ಅವು ಸೂಚಿಸಿದವು. ಮನೋವಿಜ್ಞಾನ, ತಾತ್ವಿಕತೆ, ವೈಜ್ಞಾನಿಕ ಸಂಶೋಧನೆಗಳ ಪ್ರಭಾವದಿಂದ ಇಲ್ಲಿನ ಬದುಕಿನ ಗ್ರಹಿಕೆಯ ಪರಿಕಲ್ಪನೆಯಲ್ಲಿ ಬದಲಾವಣೆಯಾಯಿತು. ಸಮಾಜದ ಮೂಲ ಘಟಕವಾದ ಶಿಕ್ಷಣವನ್ನು ಆಧುನಿಕ ರೀತಿಯಲ್ಲಿ ಪಡೆದ ವ್ಯಕ್ತಿಯು ಪರಂಪರೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ ಬಗೆಯು ಮುಖ್ಯವಾದುದು. ಧರ್ಮ ಮತ್ತು ಅವಿಭಕ್ತ ಕುಟುಂಬಗಳು ಪ್ರಧಾನವಾಗಿದ್ದ ಸಮಾಜದಲ್ಲಿ ವ್ಯಕ್ತಿಗೆ ದೊರೆತ ಶಿಕ್ಷಣ ಮತ್ತು ಸ್ವಾತಂತ್ರ್ಯವು ತನ್ನ ವೈಶಿಷ್ಟ್ಯವನ್ನು ಗುರುತಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿತು. ವರ್ತಮಾನ ಬದುಕಿನ ವ್ಯಕ್ತ ಮತ್ತು ಅವ್ಯಕ್ತ ಶಕ್ತಿಗಳ ಹಿಡಿತದಿಂದ ಹೊರಬಂದು ತನ್ನದೇ ಆದ ಬದುಕನ್ನು ನಿರ್ಮಿಸಿಕೊಳ್ಳುವ ಹಠ ಮನುಷ್ಯನ ಅಂತರಂಗಕ್ಕೆ ಹೆಚ್ಚು ಒತ್ತು ಕೊಟ್ಟಿತು. ಇದರಿಂದ ವ್ಯಕ್ತಿಯು ತನ್ನನ್ನು ಒಂದು ಶಕ್ತಿಯಾಗಿ ಗುರುತಿಸಿಕೊಂಡ. ಅದೇ ವೇಳೆ, ಸಾಹಿತ್ಯದಲ್ಲಿಯೂ ಸಂದರ್ಭೋಚಿತವಾಗಿ ಹಲವು ಬದಲಾವಣೆಗಳು ವ್ಯಕ್ತವಾಗತೊಡಗಿದವು. ಅನುಭವದ ಮೂಲಕ ದೊರಕಿಸಿಕೊಂಡ ಅರಿವಿನಿಂದಾಗಿ ಕಥಾವಸ್ತುವಿನಷ್ಟೇ

[illegible]

ಪ್ರಾಮುಖ್ಯತೆಯನ್ನು ಅದನ್ನು ಅಭಿವ್ಯಕ್ತಿಗೊಳಿಸುವ ಕ್ರಮಕ್ಕೂ ಕೊಡಲಾಯಿತು. ಹಿಂದೆ ಇದ್ದ ಅಭಿವ್ಯಕ್ತಿಯ ಕ್ರಮವನ್ನು ವಸ್ತುವಿನ ವಿಶಿಷ್ಟತೆಯಿಂದಾಗಿ ಬದಲಿಸಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಯಿತು. ಪರಂಪರೆಯ ವಿರುದ್ಧ ಸೃಜನಶೀಲ ಬೆಳವಣಿಗೆಗೆ ಸಾಧನವಾಗುವ ಅಂಶಗಳ ಹುಡುಕಾಟ ಪ್ರಾರಂಭವಾಯಿತು. ಕ್ರಮೇಣ ಅಭಿವ್ಯಕ್ತಿಯ ರೂಪವು ಹೆಚ್ಚು ಪ್ರಜ್ಞಾಪೂರ್ವಕವಾಗಿ ಸಾಹಿತ್ಯ ಕೃತಿಯಲ್ಲಿ ಬಳಸಲಾಯಿತು. ಇದರಿಂದಾಗಿ ಸಾಹಿತ್ಯ ಕೃತಿಗಳ ಮೇಲೆ ಪ್ರಜ್ಞೆಯ ಹಿಡಿತ ಗಾಢವಾಗಿದ್ದರಿಂದ ಪರಕೀಯತೆ ಹಾಗೂ ಅಸ್ತಿತ್ವವಾದದಂತಹ ಧೋರಣೆಗಳು ವ್ಯಕ್ತವಾದವು. ಈ ಸಂದರ್ಭದಲ್ಲಿ ಅಭಿವ್ಯಕ್ತಿಗೆ ಸಾಂಕೇತಿಕತೆಯು ಅನಿವಾರ್ಯವಾದ ತಂತ್ರವಾಯಿತು. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯೋತ್ತರ ಭಾರತದ ಚಿಂತನೆಯ ಎಳೆಗಳು ಕನ್ನಡದಲ್ಲಿ ಮೂಡಿದಂತೆ ಅನಂತಮೂರ್ತಿಯವರ ಸಾಹಿತ್ಯದಲ್ಲಿ ಕಂಡುಬಂದವು. ವ್ಯಕ್ತಿವಾದಕ್ಕೆ ಒತ್ತು ನೀಡಿದ ನಿಟ್ಟಿನಲ್ಲಿ ಅನಂತಮೂರ್ತಿಯವರ ಸಾಹಿತ್ಯವು ಬದಲಾದ ಸಮಾಜದ ಧೋರಣೆಗಳನ್ನು ಹಿಡಿದಿಟ್ಟಿದೆ. ತನ್ನ ಚೈತನ್ಯವನ್ನು ಮಿತಿಗೊಳಿಸಲು ಇಲ್ಲವೆ ಕಟ್ಟಿ ಹಾಕಲು ಯತ್ನಿಸುವ ಈ ಅನ್ವೇಷಣೆಯನ್ನು ಅನುಭವದ ಮೂಲಕ ಕಂಡುಕೊಳ್ಳುವ ಹವಣಿಕೆಯನ್ನು ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಕಾಣಬಹುದು.

೩.೧ ವ್ಯವಸ್ಥೆ ಮತ್ತು ಸಮಕಾಲೀನತೆ

ರಾಜಕಾರಣದ ವ್ಯವಸ್ಥೆ ಮತ್ತು ಸಾಮಾಜಿಕ ಸಂರಚನೆಯೊಂದರಲ್ಲಿ ಅದರ ಪಾತ್ರವನ್ನು ಚರ್ಚಿಸುವ ಪ್ರಯತ್ನವನ್ನು ಮಾಡಿದಾಗ ನಗರ ಜೀವನದ ಮತ್ತು ಅಧಿಕಾರದ ಕೇಂದ್ರವಾಗಿ ರಾಜಕಾರಣದ ಮಹತ್ವವನ್ನು ಗಮನಿಸಬಹುದು. ಭ್ರಷ್ಟ ವ್ಯವಸ್ಥೆಯು ವೈಯಕ್ತಿಕ ಜೀವನಕ್ಕೆ ಲಗ್ಗೆ ಹಾಕಿದಾಗ ವ್ಯಕ್ತಿಯು ಕೌಟುಂಬಿಕ ಸಾಮರಸ್ಯವನ್ನು ಕಳೆದುಕೊಳ್ಳುತ್ತಾನೆ. ತನ್ನ ಕುತಂತ್ರ ಸ್ವಾರ್ಥ ಸಾಧನೆಗೆ ಬಲಿಯಾಗುವ ವ್ಯಕ್ತಿಯು ಆಧುನಿಕತೆಯ ರೂಪವಾದ ನಾಗರೀಕತೆಯಲ್ಲಿ ಪ್ರಾಮಾಣಿಕತೆ, ನಿಷ್ಠೆಯು ದುಡಿಮೆ ಸಜ್ಜನಿಕೆಗಳು ತಿರಸ್ಕೃತವಾಗುವ ದುರಂತವನ್ನು ಎದುರಿಸುತ್ತಾನೆ. ರಾಜಕಾರಣದ ಸಾಧಕ ಬಾಧಕಗಳನ್ನು, ತಲ್ಲಣ, ವಿಷಾದಗಳನ್ನು ರಾಜಕಾರಣ ಅಂತಿಮವಾಗಿ ತಂದುಕೊಡುವ ನಿರಾಸೆ ಮತ್ತು ಭ್ರಮನಿರಸನತೆಯನ್ನು ಇಲ್ಲಿನ ಕಥನ ಸಾಹಿತ್ಯದಲ್ಲಿ ಕಾಣಬಹುದು.

ಒಂದು ರಾಜಕೀಯ ಘಟಕ ಪ್ರಾಮಾಣಿಕವಾಗಿರಲು ಬಯಸುತ್ತದೆ. ಸಮೂಹ ಆ ಘಟಕವನ್ನು ತನ್ನ ಅನಿವಾರ್ಯತೆಯಲ್ಲಿ ಒಡೆದು ಹಾಕುತ್ತದೆ. ಇಂಥ ವ್ಯವಸ್ಥೆಯನ್ನು ತಿರಸ್ಕರಿಸಿ ಬದುಕಲಾಗದ ಪರಿಸ್ಥಿತಿಯನ್ನು ಸಮೂಹ ನಿರ್ಮಾಣ ಮಾಡಿದೆ. ಭಾರತದ ಮುಖ್ಯ ರಾಜಕೀಯ ವಿದ್ಯಮಾನಗಳು, ಆ ಸುತ್ತ ಹುಟ್ಟಿಕೊಂಡ ಪ್ರಶ್ನೆಗಳು ಹಾಗೂ ಕ್ರಿಯಾಶೀಲತೆಯ ಬಿಕ್ಕಟ್ಟು ಹಾಗೂ ದ್ವಂದ್ವಗಳನ್ನು ಲೇಖಕರು ಚಿತ್ರಿಸಿದ್ದಾರೆ. ಒಂದು ಸಾಂಸ್ಕೃತಿಕ ಸಂದರ್ಭದಲ್ಲಿ ಸಮಕಾಲೀನ ರಾಜಕಾರಣ, ತತ್ವಗಳ ತಾಕಲಾಟ ಹಾಗೂ ದೈನಂದಿನ ಬದುಕಿನ ಮಧ್ಯೆ ಉದ್ಭವಿಸುವ ವ್ಯಕ್ತಿಯ ದ್ವಂದ್ವವನ್ನು ನಿಶ್ಚಿತ ಯೋಜನೆಯಿಲ್ಲದೇ ಇಂದಿನ ರಾಜಕೀಯ ವ್ಯವಸ್ಥೆಯೊಳಗಿನ ಆಂತರಿಕ ಸಂಘರ್ಷವನ್ನು ಲೇಖಕರು ಹಿಡಿದಿಟ್ಟಿದ್ದಾರೆ.

ವ್ಯಕ್ತಿಯೊಬ್ಬನು ರಾಜಕೀಯ ನಾಯಕನಾಗಲು ನಡೆಸುವ ಕುತಂತ್ರವನ್ನು 'ಕಾಮರೂಪಿ' ಕತೆಯಲ್ಲಿ ಕಾಣಬಹುದು. ಶಂಕರಬಾಬುವಿನ ತಂದೆ ಕುಡಿತಕ್ಕೆ ದಾಸನಾಗಿರುತ್ತಾನೆ. ತಾಯಿಯ ದುಡಿಮೆಯಲ್ಲಿ ಶಂಕರಬಾಬು ಮತ್ತು ಅವನ ತಂಗಿಯರು ಓದಿ ಬೆಳೆದಿರುತ್ತಾರೆ. ಲಿವರ್ ಡ್ಯಾಮೇಜಿನಿಂದ ತಂದೆ ಸತ್ತರೆ, ವಯಸ್ಸಾದ ಮೇಲೆ

ತಾಯಿ ಕಾಯಿಲೆ ಬೀಳುತ್ತಾಳೆ. ಸಂಸಾರದ ಜವಾಬ್ದಾರಿಯನ್ನು ಶಂಕರಬಾಬು ನಿರ್ವಹಿಸಬೇಕಾಗುತ್ತದೆ. ತನ್ನ ಜಾತಿಯ ಮಂತ್ರಿಯೊಬ್ಬನಿಂದ ಶಂಕರಬಾಬು ದೇಶಸೇವೆಯ ಸ್ಫೂರ್ತಿಯನ್ನು ಪಡೆಯುತ್ತಾನೆ. ತನ್ನ ಆಪ್ತ ಕಾರ್ಯದರ್ಶಿಗೆ ಮಂತ್ರಿಯೇ ಆಸಕ್ತಿ ವಹಿಸಿ ಶಂಕರ ಬಾಬುವಿನ ಮೊದಲ ತಂಗಿ ಸರೋಜಳನ್ನು ಮದುವೆ ಮಾಡಿಸುತ್ತಾನೆ. ಕಾರ್ಯದರ್ಶಿಗೆ ವಯಸ್ಸಾಗಿದ್ದರೂ ಸ್ಥಿತಿವಂತನಾದ್ದರಿಂದ ಸರೋಜ ಒಪ್ಪುತ್ತಾಳೆ. ತನ್ನ ಜಾತಿಯಲ್ಲಿ ಓದಿದವರು ಕಡಿಮೆಯಾದ್ದರಿಂದ ಕಾರ್ಯದರ್ಶಿ ಸರೋಜಳನ್ನು ಮದುವೆಯಾಗಿರುತ್ತಾನೆ.

ಸ್ವಲ್ಪ ದಿನಗಳ ನಂತರ ಕಾರ್ಯದರ್ಶಿಯು ಶಂಕರಬಾಬುವಿನ ಇನ್ನೊಬ್ಬ ತಂಗಿಯನ್ನು ಮದುವೆಯಾಗಲು ಬಯಸುತ್ತಾನೆ. ನಿನ್ನ ತಂಗಿಯನ್ನು ಮದುವೆಗೆ ಒಪ್ಪಿಸಿದರೆ ನಿನ್ನ ರಾಜಕೀಯ ಪ್ರವೇಶಕ್ಕೆ ಸಹಾಯ ಮಾಡುವುದಾಗಿ ಶಂಕರ ಬಾಬುವಿಗೆ ಕಾರ್ಯದರ್ಶಿಯು ತಿಳಿಸುತ್ತಾನೆ. ಗೀತಾಳನ್ನು ಮದುವೆಗೆ ಒಪ್ಪಿಸುವುದಾಗಿ ತಿಳಿಸಿದ ಶಂಕರಬಾಬು ಬಾವನನ್ನು ಪುಸಲಾಯಿಸಿ ಹಣ ಇಸಿದುಕೊಂಡು ಹೋಗುತ್ತಾನೆ. ವಿಷಯ ತಿಳಿದ ಶಂಕರಬಾಬುವಿನ ತಾಯಿ ಆ ಪಾಪದ ಹಣ ನಮಗೆ ಬೇಡ. ನಾನು ಮುಸುರೆ ತಿಕ್ಕಿ ಸಂಪಾದಿಸುತ್ತೇನೆ ಎನ್ನುತ್ತಾಳೆ. ನಮ್ಮ ಕುಲದವರ ಜೊತೆ ಬದುಕಿ ಕ್ರಾಂತಿ ಮಾಡುತ್ತೇನೆಂದು ಗೀತಾ ಹೇಳುತ್ತಾಳೆ. ದುಡ್ಡೇನು ಆಕಾಶದಿಂದ ಸುರಿಯುತ್ತಾ ಬಾವನೇ ಕೊಡಬೇಕು ಎಂದುಕೊಂಡು ತಾಯಿ, ತಂಗಿಯನ್ನು ಒಪ್ಪಿಸಲು ಹೋದ ಶಂಕರಬಾಬು ಉಗಿಸಿಕೊಳ್ಳುತ್ತಾನೆ. ಒಂದು ಕಡೆ ಗೀತಾಳನ್ನು ಒಪ್ಪಿಸದೇ ನನ್ನ ಮನೆಗೆ ಬರಬೇಡ ಎಂದು ಬಾವ ಹೇಳಿದರೆ ಮತ್ತೊಂದು ಕಡೆ ಮಂತ್ರಿ ಮಾತನಾಡುವುದನ್ನೇ ನಿಲ್ಲಿಸುತ್ತಾನೆ. ಬಾವನನ್ನು ಪುಸಲಾಯಿಸಲು ತಾಯಿಗೆ ಕಾಯಿಲೆಯೆಂದು ಶಂಕರಬಾಬು ಕಣ್ಣೀರು ಹಾಕುತ್ತಾನೆ. ಗೀತಾ ಒಪ್ಪಿಯೇ ಒಪ್ಪುತ್ತಾಳೆ, ಅವಳಿಗೆ ನಮ್ಮ ಮಂತ್ರಿಗಳ ಕ್ರಾಂತಿಕಾರಿ ಸುಧಾರಣೆಗಳಲ್ಲಿ ನಂಬಿಕೆಯಿದೆ ಎನ್ನುತ್ತಾನೆ. ತಾಯಿಯ ಶುಶ್ರೂಷೆಗೆಂದು ಸುಳ್ಳು ಹೇಳಿ ಬಾವನಿಂದ ಸಾವಿರ ರೂಪಾಯಿಗಳನ್ನು ಪಡೆದುಕೊಳ್ಳುತ್ತಾನೆ.

ಮಜಾಮಾಡಿ ಉಳಿದ ಹಣವನ್ನು ಶಂಕರಬಾಬು ತಾಯಿಗೆ ಕೊಡುತ್ತಾನೆ. ಬಾವ ನಿನ್ನ ಶುಶ್ರೂಷೆಗೆ ಹಣ ನೀಡಿದರು. ಗೀತಾಳನ್ನು ಮದುವೆಗೆ ಒಪ್ಪಿಸು ಎಂದು ತಾಯಿಗೆ ಹೇಳುತ್ತಾನೆ. ಅಣ್ಣನ ಮಾತನ್ನು ಕೇಳಿಸಿಕೊಂಡ ಗೀತಾ ಅಮ್ಮನಿಂದ ಹಣವನ್ನು ಕಸಿದು ಉರಿಯುತ್ತಿದ್ದ ಸ್ಟೌವ್ ಮೇಲಿಡುತ್ತಾಳೆ. ಸುಡುವ ನೋಟುಗಳನ್ನು ಬರೆಸಿ ಜೇಬಿಗೆ ಹಾಕಿಕೊಂಡ ಶಂಕರಬಾಬು ಒಂದು ದಿನವೆಲ್ಲ ಕೆಲಸಮಾಡಿದರೂ ಇಷ್ಟು ಹಣ ಸಿಕ್ಕುತ್ತಿರಲಿಲ್ಲ ಎನ್ನುತ್ತಾನೆ. ಕತ್ತಿಯಿಂದ ತಂಗಿಯ ಕೂದಲನ್ನು ಕತ್ತರಿಸಲು ಹೋಗುತ್ತಾನೆ. ಕತ್ತಿಯನ್ನು ಕಸಿದುಕೊಂಡ ತಂಗಿ ಅಣ್ಣನನ್ನು ಕೊಚ್ಚಲು ಮುಂದಾಗುತ್ತಾಳೆ. ಪೊರಕೆಯಿಂದ ಅವನನ್ನು ಹೊಡೆದು ಹೊರಗೆ ಹಾಕಿ ಬಾಗಿಲು ಹಾಕುತ್ತಾಳೆ. ವೃದ್ಧನಾದ ಅಕ್ಕನಗಂಡ ಕಾರ್ಯದರ್ಶಿಯೊಂದಿಗೆ ಮದುವೆಯಾಗಲು ಒಪ್ಪದ ಗೀತಾ ಮನೆ ಬಿಟ್ಟು ಹೋಗುತ್ತಾಳೆ. ಇನ್ನುಮುಂದೆ ತನ್ನನ್ನು ಮಂತ್ರಿ ಹಾಗೂ ಬಾವ ಹತ್ತಿರ ಸೇರಿಸಿಕೊಳ್ಳುವುದಿಲ್ಲವೆಂದು ಶಂಕರಬಾಬು ಚಿಂತಿಸುತ್ತಾನೆ.

ಮಂತ್ರಿಗಳಿಗೆ ತುಂಬಾ ಬೇಕಾಗಿದ್ದ, ತನ್ನ ಜಾತಿಯವನೇ ಆದ ಶ್ರೀಮಂತ ವ್ಯಕ್ತಿಯೊಬ್ಬನಿಗೆ, ಯುವಕರ ಬೆಂಬಲ ಬೇಕಾಗಿದೆ ಎಂಬ ವಿಷಯವು ಶಂಕರಬಾಬುವಿಗೆ ತಿಳಿಯುತ್ತದೆ. ಶ್ರೀಮಂತನನ್ನು ಮೆಚ್ಚಿಸಲು ಉಪಾಯಮಾಡಿ ಪ್ರತಿಷ್ಠಿತ ವ್ಯಕ್ತಿಗಳ ಜೊತೆ ತನಗೆ ಪರಿಚಯವಿದೆ ಎನ್ನುವಂತೆ ಬಗೆ ಬಗೆಯ ಫೋಟೋಗಳನ್ನು ತೆಗೆಸಿಕೊಳ್ಳುತ್ತಾನೆ.

[illegible]

ವಿಮಾನ ನಿಲ್ದಾಣದ ಲಾಂಜಿನಲ್ಲಿ ಶಂಕರಬಾಬು ನಿರೂಪಕನನ್ನು ಪರಿಚಯ ಮಾಡಿಕೊಳ್ಳುತ್ತಾನೆ. ತನ್ನ ಹಿಂದಿನ ಕೆಲವು ಫೋಟೋಗಳನ್ನು ಅವನಿಗೆ ತೋರಿಸುತ್ತಾನೆ. ವಿವಿಧ ಭಂಗಿಯ ತನ್ನ ಫೋಟೋಗಳನ್ನು ತೆಗೆಯುವಂತೆ ನಿವೇದಕನನ್ನು ಕೇಳಿಕೊಳ್ಳುತ್ತಾನೆ. ರಾಜಕಾರಣಿಗಳ ಹಾಗೆ ಕುತಂತ್ರದಿಂದ ಮುನ್ನುಗ್ಗ ಬಯಸಿದ ತನ್ನ ಕತೆಯನ್ನು ನಿವೇದಕನಿಗೆ ತಿಳಿಸುವಾಗ ಶಂಕರಬಾಬು ಆತ್ಮಾವಲೋಕನ ಮಾಡಿಕೊಳ್ಳುತ್ತಾನೆ.

ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಯಾಗಬೇಕೆಂಬ ಶಂಕರಬಾಬುವಿನ ಬಯಕೆ ಸಾಮಾನ್ಯವಾಗಿದೆ. ಆದರೆ ಅವನ ಕುಟುಂಬ ಬಡತನದಲ್ಲಿದ್ದುದರಿಂದ ಇದು ಸಾಧ್ಯವಾಗುವುದಿಲ್ಲ ಎಂಬ ಸತ್ಯ ಅವನಿಗೆ ತಿಳಿದಿದೆ. ಕುಟುಂಬವನ್ನು ಪುಸಲಾಯಿಸಿ ತಂಗಿಯೊಬ್ಬಳನ್ನು ರಾಜಕೀಯ ವ್ಯಕ್ತಿಯೊಬ್ಬನಿಗೆ ಮದುವೆ ಮಾಡಿಕೊಡುತ್ತಾನೆ. ತಂಗಿಯ ಗಂಡ ಶಂಕರಬಾಬುವಿನ ಎರಡನೆಯ ತಂಗಿಯನ್ನೂ ತನಗೇ ಮದುವೆ ಮಾಡಿಕೊಡು ಎಂದು ಕೇಳಿದಾಗ ಕುಟುಂಬದಲ್ಲಿ ರಾದ್ಧಾಂತವಾಗುತ್ತದೆ. ಇತ್ತ ಕುಟುಂಬದವರನ್ನು ಪುಸಲಾಯಿಸಿ ಸೋತ ಶಂಕರಬಾಬು ಬಾವನನ್ನು ಹಾಗೂ ಬಾವನಿಗೆ ಹತ್ತಿರದವನಾದ ರಾಜಕೀಯ ವ್ಯಕ್ತಿಯನ್ನು ಪುಸಲಾಯಿಸುವಲ್ಲಿ ಸೋಲುತ್ತಾನೆ. ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ಅವನು ಇಷ್ಟಾದರೂ ತನ್ನ ಪ್ರಯತ್ನವನ್ನು ಬಿಡುವುದಿಲ್ಲ. ಹೀಗೆ ವ್ಯಕ್ತಿಯೊಬ್ಬನು ತನ್ನ ರಾಜಕೀಯ ಲಾಲಸೆಗಾಗಿ ಹಲವಾರು ತಂತ್ರಗಳನ್ನು ಬಳಸಲು ತವಕಿಸುವುದನ್ನು ಇಲ್ಲಿ ಗಮನಿಸಬಹುದು.

ವ್ಯಕ್ತಿಯೊಬ್ಬನು ನಡೆಸುವ ಹಳ್ಳಿಯ ರಾಜಕೀಯವು ಇನ್ನೊಬ್ಬ ವ್ಯಕ್ತಿಯನ್ನು ನಿರ್ಗತಿಕನನ್ನಾಗಿಸುವ ಮಟ್ಟಕ್ಕೆ ತಲುಪುವುದನ್ನು 'ಮೌನಿ' ಕತೆಯಲ್ಲಿ ಕಾಣಬಹುದು. ದುಗ್ಗಾಣಿಯಿಲ್ಲದ ಅಪ್ಪಣ್ಣಭಟ್ಟ ಹಾಗೂ ಕುಪ್ಪಣ್ಣಭಟ್ಟ ಇಬ್ಬರೂ ಅಡಿಕೆ ತೋಟ ಮಾಡಲು ಘಟ್ಟದ ಕೆಳಗಿನಿಂದ ಬಂದಿರುತ್ತಾರೆ.. ಅಡಿಕೆ ಬೆಳೆಯುವಲ್ಲಿ ವಿಫಲನಾದ್ದರಿಂದ ಕುಪ್ಪಣ್ಣ ಭಟ್ಟನ ಸಾಲದ ಹೊರೆಯು ಹೆಚ್ಚುತ್ತದೆ. ಅದೃಷ್ಟವೆಂಬಂತೆ ತನ್ನ ಅಡಿಕೆ ತೋಟದಲ್ಲಿ ಉತ್ತಮ ಇಳುವರಿ ಪಡೆದ ಅಪ್ಪಣ್ಣಭಟ್ಟ ಶ್ರೀಮಂತನಾಗುತ್ತಾನೆ.

ಕುಪ್ಪಣ್ಣಭಟ್ಟನ ದುಸ್ಥಿತಿಯನ್ನು ಕಂಡು ಅವನನ್ನು ನಿರ್ಗತಿಕನನ್ನಾಗಿ ಮಾಡಲು ಅಪ್ಪಣ್ಣಭಟ್ಟ ಹವಣಿಸುತ್ತಾನೆ. ಜನರನ್ನು ಉಪಚರಿಸಿ ಉಪಾಯದಿಂದ ಕುಪ್ಪಣ್ಣಭಟ್ಟನಿಗೆ ಸಂಬಂಧಿಸಿದ ಸುದ್ದಿಗಳನ್ನು ಸಂಗ್ರಹಿಸುತ್ತಾನೆ. ಬ್ರಾಹ್ಮಣ ಜನಾಂಗದ ಜೀವನಕ್ರಮಕ್ಕೆ ಭಿನ್ನವಾಗಿರುವ ಶುಚಿಯಿಲ್ಲದೆ ಕುಪ್ಪಣ್ಣಭಟ್ಟನ ಮನೆಯ ವಾತಾವರಣ ಹಾಗೂ ಅವನ ಜಗಳಗಂಟತನ ಜನರಿಂದ ಅವನನ್ನು ದೂರವಿಡುತ್ತದೆ. ನಯನಾಜೂಕಿನಿಂದ ಮಾತನಾಡಿಸಿ ಎಲ್ಲರನ್ನೂ ಉಪಚರಿಸುವ ಅಪ್ಪಣ್ಣಭಟ್ಟ ಜನರಿಗೆ ಬೇಕಾದವನಾಗುತ್ತಾನೆ. ಅಪ್ಪಣ್ಣಭಟ್ಟ ರಚಿಸಿದ ಜಾಲದಲ್ಲಿ ಕುಪ್ಪಣ್ಣಭಟ್ಟ ಸಿಕ್ಕಿಹಾಕಿಕೊಳ್ಳುತ್ತಾನೆ.

ಕುಪ್ಪಣ್ಣಭಟ್ಟನ ಕುಟುಂಬ ಮಗನ ಉಪನಯನವನ್ನು ಆಗುಂಬೆಯಲ್ಲಿ ನೆರವೇರಿಸಿದ ವಿಷಯ ಅಪ್ಪಣ್ಣಭಟ್ಟನಿಗೆ ತಿಳಿಯುತ್ತದೆ. ಕುಪ್ಪಣ್ಣಭಟ್ಟನಿಗೆ ನಾನಂತೂ ಆಗುವುದಿಲ್ಲ ಹೋಗಲಿ ಇನ್ನುಳಿದ ಬ್ರಾಹ್ಮಣರಿಗಾದರೂ ಉಪಚರಿಸಬಹುದಿತ್ತಲ್ಲ ಎಂದು ಅಪ್ಪಣ್ಣಭಟ್ಟ ಹೇಳುತ್ತಾನೆ. ಆಗುಂಬೆ ದೇವಸ್ಥಾನಕ್ಕೆ ಹೋಗಿ ಒಂದಕ್ಕೆರಡು ಖರ್ಚು ಮಾಡುವುದನ್ನು ಬಿಟ್ಟು ಹಾಸಿಗೆ ಇದ್ದಷ್ಟು ಕಾಲು ಚಾಚಬಹುದಿತ್ತು. ಮನೆಯಲ್ಲಿ ಅವರಿಗೆ ಗಂಟು ಸಿಕ್ಕಿದೆ ಇಲ್ಲದಿದ್ದರೆ ಹೀಗೆ ಖರ್ಚುಮಾಡಲು ಮುಂದಾಗುತ್ತಿರಲಿಲ್ಲ ಎಂದು ಅಪ್ಪಣ್ಣಭಟ್ಟ ತನ್ನ ಮನೆಗೆ ಬಂದ ಬ್ರಾಹ್ಮಣರಿಗೆ ಹೇಳುತ್ತಾನೆ.

[illegible]

ಶ್ರೀಮಠದ ಗುರುಗಳನ್ನು ಪಾದಪೂಜೆಗೆ ಕರೆಸಿದ ಅಪ್ಪಣ್ಣಭಟ್ಟ ದಕ್ಷಿಣೆಯನ್ನು ಕೊಡುತ್ತಾನೆ. ಮಠದ ಉಗ್ರಾಣಿಗೆ ಊಟೋಪಚಾರ ಮಾಡಿಸಿ ಅಡಿಕೆಯನ್ನು ಕೊಡುತ್ತಾನೆ. ಕಮ್ತಿಯ ಅಂಗಡಿಯ ಲೆಕ್ಕವನ್ನು ಸರಿಯಾಗಿ ಚುಕ್ತಮಾಡುತ್ತಾನೆ. ತೋಟದ ಕೆಲಸಗಾರರನ್ನು ಆದರದಿಂದ ಉಪಚರಿಸಿ ಕಳುಹಿಸುತ್ತಾನೆ.

ಕುಪ್ಪಣ್ಣಭಟ್ಟನ ಮನೆಗೆ ಸಾಲ ವಸೂಲಿಗೆಂದು ಹೋಗುವವರನ್ನು ಅಪ್ಪಣ್ಣಭಟ್ಟ ಕರೆದು ಅವರ ಹತ್ತಿರ ಹಣವಿದೆ ವಸೂಲಿ ಮಾಡದೆ ಬಿಡಬೇಡಿ ಎಂದು ಹೇಳಿಕಳಿಸುತ್ತಾನೆ. ಕೆಲಸಗಾರರಿಗೆ ಮುಂಗಡವನ್ನು ಕೊಡಲು ಕುಪ್ಪಣ್ಣಭಟ್ಟ ಹೆಂಡತಿಯ ಒಡವೆಯನ್ನು ಅಡವಿಡುತ್ತಾನೆ. ಮುಂಗಡಹಣವನ್ನು ಕುಪ್ಪಣ್ಣಭಟ್ಟನಿಂದ ಪಡೆದ ಕೆಲಸಗಾರರು ಅಪ್ಪಣ್ಣಭಟ್ಟನ ತೋಟದ ಕೆಲಸಕ್ಕೆ ಹೋಗುವುದನ್ನು ನಿಲ್ಲಿಸುತ್ತಾರೆ. ಕೆಲಸಗಾರರು ಕೈಕೊಟ್ಟಿದ್ದರಿಂದ ಅಪ್ಪಣ್ಣಭಟ್ಟ ಕೋಪಗೊಳ್ಳುತ್ತಾನೆ. ಎಲ್ಲೋ ಕುಪ್ಪಣ್ಣಭಟ್ಟನಿಗೆ ಗಂಟು ಸಿಕ್ಕಿದೆ, ಆದ್ದರಿಂದ ಈ ಆಟಾಟೋಪವೆಲ್ಲ ಎಂದು ಊರೆಲ್ಲ ಸಾರುತ್ತಾನೆ.

ಜನರಿಂದ ಅಡಿಕೆಯನ್ನು ಸಂಗ್ರಹಿಸಿದ ಕುಪ್ಪಣ್ಣಭಟ್ಟ ಬೆಲೆ ಏರಿದಾಗ ಮಾರಬೇಕೆಂದುಕೊಂಡಿರುತ್ತಾನೆ. ಅಡಿಕೆ ಬೆಲೆಯು ಕುಸಿಯುತ್ತದೆ. ನಿಮ್ಮ ದುಡ್ಡು ನೀರುಪಾಲಾಯಿತು ಎಂದು ಕುಪ್ಪಣ್ಣಭಟ್ಟನಿಗೆ ಅಡಿಕೆ ಮಾರಿದವರಿಗೆಲ್ಲಾ ಅಪ್ಪಣ್ಣಭಟ್ಟ ಹೇಳಿಕೊಡುತ್ತಾನೆ. ಸಾಲಗಾರರ ಕಾಟ ಹೆಚ್ಚಾದಾಗ ಬಡ್ಡಿಯಂತೆ ಹಣ ತಂದು ಕೊಟ್ಟ ಕುಪ್ಪಣ್ಣಭಟ್ಟ ಉಳಿದ ಬಾಕಿಯನ್ನು ನಂತರ ಕೊಡುತ್ತೇನೆಂದು ಅವರನ್ನು ಪ್ರಾರ್ಥಿಸುತ್ತಾನೆ. ಕುಪ್ಪಣ್ಣಭಟ್ಟನ ಹತ್ತಿರ ಹಣ ಓಡಾಡುತ್ತಿರುವುದನ್ನು ತಿಳಿದ ಅಪ್ಪಣ್ಣಭಟ್ಟ ಗೋಪಾಲ ಕಮ್ತಿಗೆ ಹಚ್ಚಿಕೊಡುತ್ತಾನೆ. ಮಠದ ಏಜೆಂಟರನ್ನು ಕರೆದು ನಿಮಗೆ ಲೆಕ್ಕ ಚುಕ್ತವಾಗಲು ಇದು ಸರಿಯಾದ ಸಮಯ ಎಂದು ಪ್ರೇರಿಸುತ್ತಾನೆ.

ಕುಪ್ಪಣ್ಣಭಟ್ಟನಿಗೆ ಸಾಲಗಾರರ ಕಾಟವನ್ನು ತಪ್ಪಿಸಲು ಸುಬ್ರಹ್ಮಣಿಯು ತನ್ನ ಊರಿಗೆ ಭಾವನನ್ನು ಕರೆಯುತ್ತಾನೆ. ಇದಕ್ಕೆ ಒಪ್ಪದ ಹಠಸ್ವಭಾವದ ಕುಪ್ಪಣ್ಣಭಟ್ಟ ಕೊನೆಗೆ ಹೆಂಡತಿ ಮಕ್ಕಳನ್ನು ಮಾತ್ರ ಕಳಿಸಲು ಒಪ್ಪುತ್ತಾನೆ. ಸಂಪತ್ತನ್ನೆಲ್ಲ ಕುಪ್ಪಣ್ಣಭಟ್ಟ ಹೆಂಡತಿ ಊರಿಗೆ ಹೊರಿಸಿ ಕಳಿಸಿದ್ದಾನೆಂದು ಅಪ್ಪಣ್ಣಭಟ್ಟ ಅಪಪ್ರಚಾರ ಮಾಡುತ್ತಾನೆ. ಮನೆಯ ಸಾಮಾನು ಹರಾಜಾಗಿ ಪರಿಸ್ಥಿತಿಯು ಕೈಮೀರಿದಾಗ ಕುಪ್ಪಣ್ಣಭಟ್ಟ ಮೌನಿಯಾಗುತ್ತಾನೆ.

ವ್ಯಕ್ತಿಯ ಆರ್ಥಿಕ ಸುಸ್ಥಿಯನ್ನು ಗಮನಿಸಿ ಅಸೂಯೆಯನ್ನು ಪಡುವ ವ್ಯಕ್ತಿಗಳನ್ನು ಸಮಾಜದಲ್ಲಿ ಕಾಣಬಹುದು. ಅದರಂತೆಯೇ ವ್ಯಕ್ತಿಯ ಆರ್ಥಿಕ ದುರ್ಬಲತೆಯನ್ನು ಕಂಡು ಹೀಯ್ಯಾಳಿಸುವ ಮತ್ತು ಇನ್ನಷ್ಟು ಹೀನಸ್ಥಿಗೆ ತರಲು ಪ್ರಯತ್ನಿಸುವ ವ್ಯಕ್ತಿಗಳೂ ಸಮಾಜದಲ್ಲಿ ಇದ್ದಾರೆ. ಇಂತಹ ವ್ಯಕ್ತಿಯ ಗುಣಗಳ ಪ್ರತೀಕವಾಗಿ ಕತೆಯಲ್ಲಿ ಅಪ್ಪಣ್ಣಭಟ್ಟನಿದ್ದಾನೆ. ಕುಪ್ಪಣ್ಣಭಟ್ಟನಿಗೆ ತನ್ನದೇ ಆದ ಆದರ್ಶವಿದೆ. ತಾನು ಮಾಡಿದ ಸಾಲವನ್ನು ನಿಯತ್ತಿನಿಂದ ತೀರಿಸಬೇಕೆಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಾನೆ. ಆದರೆ ಸಮಕಾಲೀನ ವ್ಯವಸ್ಥೆ ಅವನಿಗೆ ಸಹಕರಿಸುವುದಿಲ್ಲ. ಬಡವನಾದ ಅವನ ಸ್ಥಿತಿಯನ್ನು ವ್ಯವಸ್ಥೆ ಅರ್ಥಮಾಡಿಕೊಳ್ಳುವುದಿಲ್ಲ. ಕುಟುಂಬದವರು ಅವನನ್ನು ಒಂಟಿಯಾಗಿ ಬಿಟ್ಟು ಹೋದಾಗಲೂ ಸ್ವಾಭಿಮಾನಿಯಾದ ಕುಪ್ಪಣ್ಣಭಟ್ಟ ಊರುಬಿಟ್ಟುಹೋಗುವ ಆಲೋಚನೆಯನ್ನು ಮಾಡುವುದಿಲ್ಲ. ಕುಪ್ಪಣ್ಣಭಟ್ಟನ ಆದರ್ಶಕ್ಕೂ ವಾಸ್ತವದ ಬದುಕಿಗೂ ಅಂತರವುಂಟಾದಾಗ ಸಂದಿಗ್ಧಕ್ಕೆ ಸಿಲುಕುತ್ತಾನೆ.

ಸಾಮಾಜಿಕ ವ್ಯವಸ್ಥೆಯ ಬದುಕಿನಲ್ಲಿ ಅಧಿಕಾರವು ರಾಜಕೀಯದೊಂದಿಗೆ ಹೊಂದಿರುವ ಸಂಬಂಧವನ್ನು 'ಬರ' ಕತೆಯಲ್ಲಿ ಕಾಣಬಹುದು. ಸಾಮಾಜಿಕ ಪರಿವರ್ತನೆಯನ್ನು ಬಯಸುವ ಸತೀಶ ಉದ್ದೇಶಪೂರ್ವಕವಾಗಿ ಬರಪೀಡಿತ ಪ್ರದೇಶಕ್ಕೆ ಜಿಲ್ಲಾಧಿಕಾರಿಯಾಗಿ ಬರುತ್ತಾನೆ. ಈ ಪ್ರದೇಶದಲ್ಲಿ ವಕೀಲನಾಗಿದ್ದ ಭೀಮೋಜಿಯು ಚುನಾವಣೆಯಲ್ಲಿ ಸೋತ ರಾಜಕೀಯ ಧುರೀಣನಾಗಿದ್ದಾನೆ. ಹೋಟೆಲ್ ಮಾಣಿಯಾಗಿ, ಟ್ಯಾಕ್ಸಿ ಡ್ರೈವರ್‌ನಾಗಿ, ಮುಂಬೈ ಕೂಲಿಕಾರರ ಸಂಘಗಳಲ್ಲಿ ಕೆಲಸ ಮಾಡಿದ್ದ ಭೀಮೋಜಿಯು ರೈತ ಸಂಘದ ಅಧ್ಯಕ್ಷ ಹಾಗೂ ಮುನ್ಸಿಪಲ್ ಕೆಲಸಗಾರರ ಕಾರ್ಯದರ್ಶಿಯಾಗಿದ್ದಾನೆ. ರಾಜ್ಯ ಸರ್ಕಾರವು ತಮ್ಮ ಜಿಲ್ಲೆಯನ್ನು ಬರಪಿಡಿತ ಪ್ರದೇಶವೆಂದು ಘೋಷಿಸಿದರೆ ಜನತೆಗೆ ಪರಿಹಾರ ಸಿಗುತ್ತದೆಂಬುದು ಸತೀಶ ಹಾಗೂ ಭೀಮೋಜಿಯ ಅಭಿಪ್ರಾಯ ಒಂದೇ ಆಗಿದೆ. ಆದರೆ ಜನತೆಗೆ ನೆರವನ್ನು ದೊರಕಿಸಲು ಇವರಿಬ್ಬರು ಅನುಸರಿಸುವ ಮಾರ್ಗ ಮಾತ್ರ ಭಿನ್ನವಾಗಿದೆ.

ಜನರ ಜೊತೆ ಹೇಗೆ ವರ್ತಿಸಬೇಕೆಂಬುದು ಭೀಮೋಜಿಗೆ ತಿಳಿದಿದೆ. ಭೀಮೋಜಿಯಂಥ ವ್ಯಕ್ತಿಗಳಿಗೆ ಬರ ಒಂದು ರಾಜಕೀಯ ಅವಕಾಶವಾಗಿದೆ. ತನ್ನ ಪ್ರತಿಸ್ಪರ್ಧಿಯಾದ ರುದ್ರಪ್ಪನನ್ನು ಸೋಲಿಸುವ ಅವಕಾಶಕ್ಕಾಗಿ ಭೀಮೋಜಿ ಕಾದಿರುತ್ತಾನೆ. ರುದ್ರಪ್ಪನಿಗೆ ಬೆಂಬಲ ನೀಡುವ ಗಂಗಾಧರಸ್ವಾಮಿ ಹಾಗೂ ಎಸ್.ಪಿ.ನಾಗರಾಜನನ್ನು ಬಗ್ಗು ಬಡಿಯಬೇಕೆಂದು ಭೀಮೋಜಿ ನಿರ್ಧರಿಸುತ್ತಾನೆ.

ಗಂಜಿ ಕೇಂದ್ರಗಳಿಗೆ ಭೇಟಿ ಕೊಟ್ಟು ಸತೀಶ, ಗಂಗಾಧರಸ್ವಾಮಿಯ ಗೋಡಾನನ್ನು ರೈಡ್ ಮಾಡಿಸುತ್ತಾನೆ. ಇಂಥ ಸಂದರ್ಭವನ್ನು ಕಾಯುತ್ತಿದ್ದ ಭೀಮೋಜಿ ಜನತೆಯನ್ನು ಪ್ರೇರಿಸಿ ಆಹಾರಧಾನ್ಯಗಳ ಅಂಗಡಿಗಳನ್ನು ಲೂಟಿ ಮಾಡಿಸಿದಾಗ ಗುಂಪು ಘರ್ಷಣೆ ಉಂಟಾಗುತ್ತದೆ. ನಿಯಂತ್ರಿಸಲು ಪ್ರಯತ್ನಿಸಿದ ಎಸ್.ಪಿ.ಗೆ ಗಾಯವಾಗುತ್ತದೆ. ಗಲಭೆಯ ಮಧ್ಯೆ ತನ್ನ ಮಗ ರಾಹುಲ ಸಿಕ್ಕಿ ಹಾಕಿಕೊಂಡಿದ್ದಾನೆಂಬುದು ಸತೀಶನಿಗೆ ತಿಳಿಯುತ್ತದೆ. ಪರಿಸ್ಥಿತಿ ಕೈಮೀರಿದಾಗ ಫೈರಿಂಗ್ ಮಾಡಲು ಎಸ್.ಪಿಗೆ ಸತೀಶನು ಆದೇಶವನ್ನು ನೀಡುತ್ತಾನೆ. ಈ ಗಲಭೆಯಿಂದಾಗಿ ರುದ್ರಪ್ಪ ಮಿನಿಸ್ಟರ್ ಪಟ್ಟ ಕಳೆದುಕೊಂಡರೆ, ಸತೀಶ ನೌಕರಿಗೆ ರಾಜೀನಾಮೆ ನೀಡುತ್ತಾನೆ.

ಭೀಮೋಜಿ ಸ್ಥಳೀಯರನ್ನು ಗುಂಪುಗೂಡಿಸಿ ಕುತಂತ್ರದಿಂದ ಗೆಲುವು ಸಾಧಿಸುತ್ತಾನೆ. ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿದ ರುದ್ರಪ್ಪ ಅಧಿಕಾರವನ್ನು ಕಳೆದುಕೊಳ್ಳುತ್ತಾನೆ. ಕೊನೆಗೆ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲಾಗುತ್ತದೆ. ಭೀಮೋಜಿ ಹಾಗೂ ರುದ್ರಪ್ಪನ ರಾಜಕೀಯ ಪೈಪೋಟಿಯ ಮಧ್ಯೆ ಸತೀಶ ಸಿಕ್ಕಿ ಹಾಕಿಕೊಳ್ಳುತ್ತಾನೆ. ಸಮೂಹದ ಹೋರಾಟದಲ್ಲಿ ಸತೀಶನಿಗೆ ಅಹಿಂಸೆ ನಿಯಮವನ್ನು ಪಾಲಿಸಲಾಗುವುದಿಲ್ಲ. ಅನ್ನ ನೀರು ಬಿಟ್ಟು ತನ್ನ ಮೊಮ್ಮಗನ ಬಂಧನವನ್ನು ಪ್ರತಿಭಟಿಸುವ ಮುದುಕಿಯೊಬ್ಬಳಿಗೆ ಸತೀಶನ ಅಧಿಕಾರವು ಉತ್ತರ ಕೊಡುವುದಿಲ್ಲ. ಅದು ಅವನ ಬದುಕನ್ನು ಯಾಂತ್ರಿಕವಾಗಿಸಿರುತ್ತದೆ. ಭೀಮೋಜಿ ಸಮಯ ಸಾಧಿಸಿಕೊಳ್ಳುತ್ತಾನೆ.ಸಾಧಿಸಬೇಕೆಂದುಕೊಂಡಿದ್ದ ಆದರ್ಶಕ್ಕೆ ಸಮಕಾಲೀನ ವ್ಯವಸ್ಥೆ ಸ್ಪಂದಿಸುವುದಿಲ್ಲ. ಸತೀಶನ ಆದರ್ಶಕ್ಕೂ ವಾಸ್ತವಕ್ಕೂ ಅಂತರವುಂಟಾಗಿ ಸಂಘರ್ಷವನ್ನು ಎದುರಿಸುತ್ತಾನೆ.

"ಬರ ಒಂದು ರಾಜಕೀಯ ಕತೆ. ಈ ಕತೆಯ ಮುಖ್ಯ ಆಸ್ಥೆಯಿರುವುದು ಸಾಮಾಜಿಕ ಪರಿವರ್ತನೆಯ ಸಾಧ್ಯತೆಗಳಲ್ಲಿ. ಸತೀಶನ ಸೋಲಿಗೆ ರಾಜಕೀಯವಲ್ಲದ ವೈಯಕ್ತಿಕ ಕಾರಣಗಳೂ ಇವೆ. ಅವನಲ್ಲಿ ಆತ್ಮವಂಚನೆಯ ಭಯವಿದೆ. ಸೃಜನ ಶೀಲತೆಯನ್ನು ಕಳೆದುಕೊಂಡ ವಿಷಾದವಿದೆ. ಇದಲ್ಲಕ್ಕಿಂತ ಹೆಚ್ಚಾಗಿ ತಾನು

[illegible]

[illegible]

[illegible]

[illegible]

[illegible]

ಏನನ್ನು ಸಾಧಿಸಬೇಕೆಂದಿಟ್ಟುಕೊಂಡಿದ್ದನೋ ಅದನ್ನು ಸಾಧಿಸಲಾರೆ ಎಂಬ ಹತಾಶೆಯೂ ಇದೆ. ಸತೀಶ ಎದುರಿಸುವ ಬರ ಕೈ ಕತೆಯಲ್ಲಿ ಹಲವಾರು ಆಯಾಮಗಳಿವೆ. ಅದು ನೀರು ಆಹಾರಗಳ ಬರವಾಗಬಹುದು, ಗಂಗಾಧರಯ್ಯ ಮೊದಲಾದವರ ನೈತಿಕ ಬರವಾಗಬಹುದು, ಅಥವಾ ಸತೀಶನಲ್ಲಿದ್ದಂತೆ ಸಶಕ್ತ ಕ್ರಿಯೆಯ ಬರವೂ ಆಗಬಹುದು?".[೧] ವ್ಯಕ್ತಿಯ ಆದರ್ಶಗಳಿಗೂ ಮತ್ತು ಜೀವನದಲ್ಲಿನ ವಾಸ್ತವಕ್ಕೂ ನಡುವೆ ವ್ಯತ್ಯಾಸವುಂಟಾದಾಗ ಸಂಘರ್ಷ ಉಂಟಾಗುವುದು ಸಹಜವಾಗಿದೆ. ಸತೀಶನು ವಿದ್ಯಾವಂತ ಯುವಕನಾಗಿದ್ದು ಅನೇಕ ಆದರ್ಶಗಳ ಕನಸನ್ನು ಕಟ್ಟಿಕೊಂಡು ಅದಕ್ಕೆ ಪೂರಕವಾಗಿ ತನ್ನ ಬದುಕನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಅದಕ್ಕಾಗಿ ಬೇಕೆಂದೇ ಬರಪೀಡಿತ ಪ್ರದೇಶಕ್ಕೆ ಜಿಲ್ಲಾಧಿಕಾರಿಯಾಗಿ ಬರುತ್ತಾನೆ. ಆ ಊರಿನ ಹಿರಿಯ ರಾಜಕೀಯ ಕುತಂತ್ರಿಗಳ ಬಲೆಗೆ ಸತೀಶ ಸಿಕ್ಕಿಕೊಂಡಿದ್ದರಿಂದ ಅವನು ಮಾಡುವ ಪ್ರಾಮಾಣಿಕ ಪ್ರಯತ್ನವೆಲ್ಲವೂ ವಿಫಲವಾಗುತ್ತದೆ. ಅವನ ಆದರ್ಶದ ಕನಸು ಮತ್ತು ವಾಸ್ತವದ ಘಟನೆಗಳ ನಡುವೆ ಬಿರುಕುಂಟಾದಾಗ ಸತೀಶ ಗೊಂದಲಕ್ಕೊಳಗಾಗುತ್ತಾನೆ.

ಜಾತಿಯ ರಾಜಕೀಯಕ್ಕಾಗಿ ಉಂಟಾಗುವ ಘರ್ಷಣೆಯನ್ನು 'ಮೂಲ' ಕತೆಯಲ್ಲಿ ಕಾಣಬಹುದು. ಗುರುಪುರದ ಆಶ್ರಮದಲ್ಲಿ ಸ್ವಾಮಿಗಳಾಗಿರುವ ಚಿದಂಬರರು ಸರಳ ಜೀವಿ. ಆಶ್ರಮದ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸುವ ಅವರು ತಾವೇ ಅತಿಥಿಗಳನ್ನು ಸತ್ಕರಿಸುತ್ತಾರೆ. ಆಶ್ರಮಕ್ಕೆ ಬಂದ ಭಕ್ತಾದಿಗಳನ್ನು ನಗುತ್ತಾ ಮಾತನಾಡಿಸಿ ತಪ್ಪು ಮಾಡಿದವರನ್ನು ಗದರಿಸಿ ಬುದ್ಧಿ ಹೇಳುತ್ತಾರೆ. ಕೊರತೆಗಳನ್ನು ಹೇಳಿಕೊಂಡವರಿಗೆ ಪರಿಹಾರವಾಗಿ ಸಾಂತ್ವನ ಹೇಳಿ, ಔಷಧಿ ಹಾಗೂ ಉಗುಳು ಸ್ವಾಮಿಗಳ ಪ್ರಸಾದವಾದ ಬೂದಿಯನ್ನು ಕೊಡುತ್ತಾರೆ. ತಬ್ಬಲಿಯಾದ ಗುರುಮೂರ್ತಿಯನ್ನು ಚಿದಂಬರ ಸ್ವಾಮಿಗಳೇ ಸಾಕಿ ಬೆಳೆಸಿರುತ್ತಾರೆ. ಸೇವಾಶ್ರಮ ಶ್ರೀಕಂಠಶರ್ಮನ ನಿಯಂತ್ರಣದಲ್ಲಿರುತ್ತದೆ. ಆಶ್ರಮದಲ್ಲಿ ಅಧ್ಯಾಪಕನಾಗಿದ್ದ ಗುರುಲಿಂಗಪ್ಪ ಅಲ್ಲಿನ ಆಡಳಿತ ಕ್ರಮವನ್ನು ಕುರಿತು ಶ್ರೀಕಂಠಶರ್ಮನನ್ನು ಪ್ರಶ್ನಿಸತೊಡಗಿದಾಗ ಅವನನ್ನು ಶರ್ಮ ಕೆಲಸದಿಂದ ವಜಾಮಾಡುತ್ತಾನೆ. ಆಗ ಶ್ರೀಕಂಠಶರ್ಮ ಹಾಗೂ ಗುರುಲಿಂಗಪ್ಪನ ನಡುವೆ ಜಾತಿಯ ವೈಶ್ಯಮ್ಯ ಬೆಳೆಯುತ್ತದೆ. ಇವರಿಬ್ಬರ ಮಧ್ಯೆ ಚಿದಂಬರಸ್ವಾಮಿ ಸಿಕ್ಕಿಕೊಳ್ಳುತ್ತಾನೆ.

ಗುರುಮೂರ್ತಿ ಸಾರ್ವಜನಿಕ ಕೆಲಸಗಳಲ್ಲಿ ಆಸಕ್ತಿಯಿರುವ ಯುವಕನಾಗಿದ್ದಾನೆ. ಆಶ್ರಮದಲ್ಲಿರುವ ಗುರುಮೂರ್ತಿಯು ತನಗೆ ಪ್ರತಿಸ್ಪರ್ಧಿಯಾಗುವನೆಂದುಕೊಂಡ ಶ್ರೀಕಂಠಶರ್ಮ ಅದನ್ನು ತಡೆಯಲು ಅವನ ಗಮನವನ್ನು ಬೇರೆಡೆಗೆ ತಿರುಗಿಸಲು ಯತ್ನಿಸುತ್ತಾನೆ. ಆಶ್ರಮದ ಹುಡುಗಿ ಉಮೆಯನ್ನು ಮದುವೆಯಾಗಲು ಗುರುಮೂರ್ತಿಯನ್ನು ಪುಸಲಾಯಿಸುತ್ತಾನೆ. ಗುರುಮೂರ್ತಿ ತನ್ನ ಮದುವೆಗೆ ಗುರುಗಳಾದ ನಿರೂಪಕನನ್ನು ಆಹ್ವಾನಿಸುತ್ತಾನೆ. ಪತ್ರದಲ್ಲಿ ಆಶ್ರಮದ ಬಗ್ಗೆ ಹಾಗೂ ಚಿದಂಬರ ಸ್ವಾಮಿಯ ಸರಳತೆಯ ಬಗ್ಗೆ ತಿಳಿಸಿರುತ್ತಾನೆ. ಮದುವೆಗೆ ಬಂದ ನಿವೇದಕ ಚಿದಂಬರಸ್ವಾಮಿಯ ಸತ್ಕಾರವನ್ನು ಸ್ವೀಕರಿಸಿದರೂ ಅವರನ್ನು ಗುರುತಿಸಲಾಗುವುದಿಲ್ಲ. ನಂತರ ತಿಳಿದಾಗ ಅವರ ಸರಳತನವನ್ನು ಗೌರವಿಸುತ್ತಾನೆ.

ಬ್ರಹ್ಮಚಾರಿಯಾದ ಶ್ರೀಕಂಠಶರ್ಮನು ಚಿದಂಬರ ಸ್ವಾಮಿಗಳ ನಂತರ ಉತ್ತರಾಧಿಕಾರಿಯಾಗುವ ಎಲ್ಲ ಅರ್ಹತೆಯನ್ನು ಪಡೆದುಕೊಂಡಿರುತ್ತಾನೆ. ಆಶ್ರಮ ಪ್ರಾರಂಭವಾದಾಗಿನಿಂದ ಅಲ್ಲಿನ ವ್ಯವಹಾರವನ್ನೆಲ್ಲ ಅವನೇ ನೋಡಿಕೊಳ್ಳುತ್ತಿರುತ್ತಾನೆ. ಆಶ್ರಮವು ನಡೆಯಲು ಅಗತ್ಯವಾದ ಅನುಮತಿ ಹಾಗೂ ಆಡಳಿತದಲ್ಲಿನ

ರಾಜಕೀಯವನ್ನು ಅವನು ತಿಳಿದವನಾಗಿದ್ದಾನೆ. ಗುರುಮೂರ್ತಿಯ ಮದುವೆಗೆ ಬಂದ ನಿರೂಪಕನಿಗೆ ಶ್ರೀಕಂಠಶರ್ಮ ಆಶ್ರಮವನ್ನು ಪರಿಚಯಿಸುತ್ತಾನೆ.

ಚಿದಂಬರಸ್ವಾಮಿಗಿಂತ ಹಿಂದಿದ್ದ ಉಗುಳು ಸ್ವಾಮಿಯ ಬಗ್ಗೆ ನಿರೂಪಕನಿಗೆ ತಿಳಿಸುತ್ತಾನೆ. ಪೂರ್ವಾಶ್ರಮದ ಹೆಸರಾಗಲೀ ಇತಿಹಾಸವಾಗಲೀ ಯಾರಿಗೂ ತಿಳಿಯದು, ಅದೊಂದು ರಹಸ್ಯವಾದ್ದರಿಂದ ನಾವದನ್ನು ಕೆದಕಬಾರದೆನ್ನುತ್ತಾನೆ. ಋಷಿಮೂಲ, ನದಿಮೂಲ ಕೆದಕಬಾರದೆಂಬ ನಾಣ್ಣುಡಿಯನ್ನು ನೆನಪಿಸುತ್ತಾನೆ. ಚಿದಂಬರಸ್ವಾಮಿಯ ಕನಸಿನಲ್ಲಿ ಈಗಲೂ ಉಗುಳುಸ್ವಾಮಿ ಬರುತ್ತಾರೆಂದು ತಿಳಿಸುತ್ತಾನೆ. ವೀರಶೈವ ಧರ್ಮದ ಷಟ್‌ಸ್ಥಲಗಳಲ್ಲಿನ ಮೇಲಿನ ಸ್ಥಲವನ್ನು ಉಗುಳುಸ್ವಾಮಿಗಳು ಮುಟ್ಟಿದ್ದರು ಎಂದು ಹೇಳುತ್ತಾನೆ. ಜಾತಿಮತಗಳನ್ನು ಮೀರಿದ ಅವರನ್ನು ಯಾರೂ ಗೌರವದಿಂದ ಕಾಣಲಿಲ್ಲ. ಆದರೆ ಉಗುಳುಸ್ವಾಮಿಗಳ ಮಹತ್ವವನ್ನು ಗುರುತಿಸಿದ ಚಿದಂಬರಸ್ವಾಮಿ ಆಶ್ರಮವನ್ನು ಕಟ್ಟಿದರು ಎಂದು ತಿಳಿಸುತ್ತಾನೆ.

ಶ್ರೀಕಂಠಶರ್ಮನಿಂದ ಅವಮಾನಕ್ಕೊಳಗಾದ ಅಧ್ಯಾಪಕ ಗುರುಲಿಂಗಪ್ಪನಿಗೆ ಆಶ್ರಮದ ಮೇಲೆ ಒಂದು ಕಣ್ಣಿರುತ್ತದೆ. ಆಶ್ರಮದಲ್ಲೇ ಕೆಲಸ ಮಾಡಿದ ಅವನಿಗೆ ಅಲ್ಲಿನ ಹುಳುಕುಗಳು ತಿಳಿದಿರುತ್ತವೆ. ಶ್ರೀಕಂಠಶರ್ಮನ ದಬ್ಬಾಳಿಕೆಯನ್ನು ಪ್ರಶ್ನಿಸಿ ಕೆಲಸ ಕಳೆದುಕೊಂಡ ಗುರುಲಿಂಗಪ್ಪ ತನ್ನ ಜಾತಿಯವರ ಬೆಂಬಲ ಪಡೆಯುತ್ತಾನೆ. ಚಿದಂಬರಸ್ವಾಮಿ ಮೂಲ ವಿಗ್ರಹವಾದರೆ, ಶರ್ಮ ಉತ್ಸವ ಮೂರ್ತಿಯೆಂದು ತಿಳಿದಿದ್ದ ಗುರುಲಿಂಗಪ್ಪ, ಶರ್ಮನನ್ನು ಎದುರಿಸಲಿಕ್ಕಾಗಿ ಚಿದಂಬರಸ್ವಾಮಿಯ ಮೂಲವನ್ನು ಕೆದಕಬೇಕೆಂದುಕೊಳ್ಳುತ್ತಾನೆ.

ಎಂದಿನಂತೆ ಬೆಳಿಗ್ಗೆ ಐದು ಗಂಟೆಗೆ ಆಶ್ರಮದ ಯೋಗಾಸಾನ ಕಾರ್ಯಕ್ರಮ ಶುರುವಾಗುತ್ತದೆ. ಮದುವೆಯಾಗಲಿದ್ದ ಗಂಡುಹೆಣ್ಣು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಸರ್ವಧರ್ಮ ಪ್ರಾರ್ಥನೆಯಾದ ಮೇಲೆ ಶಿಸ್ತು, ಸಂಯಮ ಹಾಗೂ ದೇಶಸೇವೆ ಕುರಿತು ಚಿದಂಬರ ಸ್ವಾಮಿಗಳು ಮಾತನಾಡುತ್ತಾರೆ. ವೇದಿಕೆ ಹತ್ತಿದ ಶ್ರೀಕಂಠಶರ್ಮ ಗುರುಮೂರ್ತಿ ಹಾಗೂ ಉಮಾಗೆ ಮದುವೆ ಮಾಡಿಸುತ್ತಾನೆ. ಜನಸಮೂಹವಿರುವ ಸಂದರ್ಭವನ್ನು ಕಾದಿದ್ದ ಗುರುಲಿಂಗಪ್ಪ ಸಂಗಡಿಗರೊಂದಿಗೆ ವೇದಿಕೆ ಮೇಲೆ ಬರುತ್ತಾನೆ. ಶ್ರೀಕಂಠಶರ್ಮ ಅವರನ್ನು ತಡೆಯಲೆತ್ನಿಸಿದಾಗ ಬಿಡ್ರೀ ಸ್ವಾಮಿಗಳ ಹತ್ತಿರ ಮಾತನಾಡುವುದಿದೆ ಎನ್ನುತ್ತಾನೆ.

ಆಶ್ರಮದ ವಿದ್ಯಾರ್ಥಿಗಳು ಗುರುಲಿಂಗಪ್ಪನನ್ನು ತಡೆಯಬೇಡಿ ಮೇಲೆ ಬರಲಿ ಬಿಡಿ ಎನ್ನುತ್ತಾರೆ. ವೇದಿಕೆ ಮೇಲೆ ಹೋಗಿ ಗುರುಲಿಂಗಪ್ಪ ನಾವು ವಿಚಾರವಾದಿಗಳು ಸತ್ಯವನ್ನು ಬಯಲು ಮಾಡಲು ಬಂದಿದ್ದೇವೆ ಎನ್ನುತ್ತಾನೆ. ಸ್ವಾಮಿಯನ್ನು ನಿಮ್ಮ ನಿಜವಾದ ಹೆಸರೇನು ಎಂದಾಗ ಚಿದಂಬರರು ನಾರಾಯಣಸ್ವಾಮಿ ಎನ್ನುತ್ತಾರೆ. ನೀವು ಯಾರು ಎಂಬ ಇನ್ನೊಂದು ಪ್ರಶ್ನೆಗೆ ಒಬ್ಬ ಸಾಮಾನ್ಯ ಜನಸೇವಕನೆನ್ನುತ್ತಾರೆ. ನಿಮಗೆ ಎಪ್ಪತ್ತೈದು ವರ್ಷ ಆಗಿರೋದು ನಿಜವೇನ್ರೀ ಎಂದಾಗ ನಾನೇನು ನನ್ನ ಬಗ್ಗೆ ಹೇಳಿಕೊಂಡಿಲ್ಲ ಎನ್ನುತ್ತಾರೆ. ಉಳಿದವರ ಸುಳ್ಳನ್ನು ಯಾಕೆ ಅನುಮೋದಿಸುತ್ತೀರಿ ಎಂದಾಗ ನಿಮಗೆ ಗೊತ್ತಿರುವ ನಿಜವನ್ನು ಹೇಳುವುದಕ್ಕೆ ನಾನು ಅಡ್ಡಿಮಾಡಿಲ್ಲವಲ್ಲ ಎನ್ನುತ್ತಾರೆ.

ಈ ವಾಗ್ವಾದವನ್ನು ನೋಡುತ್ತಿದ್ದ ಶರ್ಮ ಮಧ್ಯೆ ಪ್ರವೇಶಿಸುತ್ತಾನೆ. ಆಶ್ರಮ ಹಾಗೂ ಸ್ವಾಮಿಯ ಅಪಪ್ರಚಾರಕ್ಕೆ ನಿಮ್ಮ ಜಾತಿಯ ಜಮೀನ್ದಾರರ ಬೆಂಬಲ ಪಡೆದು ಬಂದಿರುವೆ ಎನ್ನುತ್ತಾನೆ. ಆಗ ಗುರುಲಿಂಗಪ್ಪ ಈ ದರಿದ್ರ ದೇಶದಲ್ಲಿ ಹೊಟ್ಟೆಪಾಡಿಗೆ ಇನ್ನೇನು ಮಾಡಬೇಕಿತ್ತು ಎನ್ನುತ್ತಾನೆ. ಒಂಟಿಯಾಗಿದ್ದ ನನ್ನನ್ನು ನೀವು

ಕೆಲಸದಿಂದ ತೆಗೆದು ಹಾಕಿದ ಮೇಲೆ ನನ್ನ ಜಾತಿಯವರ ಬೆಂಬಲ ಪಡೆದೆ ಎನ್ನುತ್ತಾನೆ. ಅನಂತರ ನೀವು ಸತ್ಯವನ್ನು ಒಪ್ಪಿ ಸ್ವತಂತ್ರರಾಗಬೇಕು ಎಂದು ಸ್ವಾಮಿಯನ್ನು ಕೇಳಿಕೊಳ್ಳುತ್ತಾನೆ. ಸತ್ಯದ ಆಧಾರದ ಮೇಲೆ ಒಳ್ಳೆಯ ಕೆಲಸಗಳನ್ನು ಮಾಡಬೇಕು ಎನ್ನುತ್ತಾನೆ. ಈ ದೇಶ ಪುರಾಣಗಳನ್ನು ಕಟ್ಟಿಕೊಂಡು ಮೂಢ ನಂಬಿಕೆಯಲ್ಲಿ ನರಳುತ್ತಿದೆ. ಇದರಿಂದ ಕಳಚಿಕೊಂಡರೆ ಎಲ್ಲರೂ ನೆಮ್ಮದಿಯಿಂದ ಬಾಳಬಹುದು ಎನ್ನುತ್ತಾನೆ. ಗುರುಲಿಂಗಪ್ಪನ ಮಾತನ್ನು ಕೇಳಿದ ಚಿದಂಬರಸ್ವಾಮಿಯು ಆಶ್ರಮ ಹಾಗೂ ಜನರಿಗೆ ಬೇಡವಾದ ದಿನ ನಾನು ಹೊರಟು ಹೋಗುತ್ತೇನೆ ಎನ್ನುತ್ತಾರೆ. ತಕ್ಷಣ ಶರ್ಮ ಗುರುಲಿಂಗಪ್ಪನ ಹತ್ತಿರ ಜಗಳ ಕಾಯುತ್ತಾನೆ. ಉಗುಳುಸ್ವಾಮಿಗಳಿಂದ ಉಗಿಸಿಕೊಂಡ ನನಗೆ ಗರ್ವವಿಲ್ಲ ಅವಮಾನವಿಲ್ಲ ಎಂದ ಚಿದಂಬರ ಸ್ವಾಮಿಗಳು ಆಶ್ರಮದಲ್ಲಿ ಹಿಂಸೆಗೆ ಅವಕಾಶ ಇಲ್ಲ ಎನ್ನುತ್ತಾರೆ.

ಆಶ್ರಮದಲ್ಲಿ ವಿವಾಹ ಸಂದರ್ಭದಲ್ಲಿ ಆಕಸ್ಮಿಕವಾಗಿ ಸಂಭವಿಸಿದ ಘರ್ಷಣೆಯನ್ನು ನಿರೂಪಕ ಗಮನಿಸುತ್ತಾನೆ ಅವನನ್ನು ಆಶ್ರಮದ ಹೊರಗೆ ಸಂಧಿಸಿದ ಗುರುಲಿಂಗಪ್ಪ ಮಾತನ್ನು ಆರಂಭಿಸುತ್ತಾನೆ. "ಆ ಕಂತ್ರಿ ಗುರುಮೂರ್ತಿ ನಿಮಗೆ ಇಷ್ಟದವನಂತೆ ನಿಜವೇನ್ರೀ"ಎನ್ನುತ್ತಾನೆ. ಉಗುಳುಸ್ವಾಮಿಯ ಹೆಸರನ್ನು ಉಪಯೋಗಿಸಿಕೊಂಡು ಸ್ಥಳೀಯ ಲಿಂಗಾಯತರ ಬೆಂಬಲ ಪಡೆದು ಚಿದಂಬರಸ್ವಾಮಿ ಆಶ್ರಮ ಕಟ್ಟಿದ್ದಾನೆ. ಚಿದಂಬರಸ್ವಾಮಿಯ ತಂಗಿ ಸಾಹುಕಾರನೊಬ್ಬನ ಹಿಂದೆ ಓಡಿ ಹೋಗಿರುತ್ತಾಳೆ. ಅವಳನ್ನು ಹುಡುಕಿ ಸುಸ್ತಾಗಿ ಅಕಸ್ಮಾತ್ ಇಲ್ಲಿಗೆ ಬಂದಿದ್ದಾನೆ.

ಚಿದಂಬರಸ್ವಾಮಿಯು ತನ್ನ ಜಾತಿ, ವಯಸ್ಸನ್ನು ಮುಚ್ಚಿಟ್ಟು ಜನರಿಗೆ ಯೋಗಾಸನ ಕಲಿಸುತ್ತಿದ್ದಾನೆಂದು ಚಿದಂಬರ ಸ್ವಾಮಿಯ ಹಿಂದಿನ ವೃತ್ತಾಂತವನ್ನು ತಿಳಿಸಿದ ಗುರುಲಿಂಗಪ್ಪ ಈ ತಲೆ ಹಿಡುಕ ಅದೇಗೆ ಸಂತನಾಗಿಬಿಟ್ಟಾರಿ ಎನ್ನುತ್ತಾನೆ. ನಿವೇದಕನು ಯಾಕಾಗಬಾರದು ಎರಡು ಅಹಂಕಾರವಿಲ್ಲದ ಅವಸ್ಥೆಗಳಲ್ಲವಾ ಎನ್ನುತ್ತಾನೆ. ಆಗ ಗುರುಲಿಂಗಪ್ಪ ದ್ವಂದ್ವಕ್ಕೆ ಸಿಲುಕುತ್ತಾನೆ. ಜಾತಿ ಧರ್ಮಗಳ ಹೆಸರಿನಲ್ಲಿ ನಡೆಯುವ ರಾಜಕೀಯವು ಆಶ್ರಮದಲ್ಲಿ ಸಂಘರ್ಷವನ್ನು ಹುಟ್ಟುಹಾಕುತ್ತದೆ.

ಶ್ರೀಕಂಠಶರ್ಮ ಹಾಗೂ ಚಿದಂಬರಸ್ವಾಮಿ ವಿರುದ್ಧವಾದ ಆಲೋಚನೆಯನ್ನು ಹೊಂದಿದ್ದಾರೆ. ಮೂಲ ಕತೆ ಧರ್ಮದ ಆದರ್ಶಗಳು ನಶಿಸಿ ಹೋಗುತ್ತಿರುವ ನೆಲೆಗಳು, ಅದರಲ್ಲಿ ಪಾತ್ರವಹಿಸುವ ವ್ಯವಸ್ಥೆಯಲ್ಲಿ ಒಂದಾದ ಸಂಘ ಸಂಸ್ಥೆಗಳು ಅವುಗಳ ಕ್ರೂರತನ ಮೊದಲಾದವುಗಳನ್ನು ಹೇಳುತ್ತದೆ. ವ್ಯಕ್ತಿಯ ಮೇಲೆ ಸಮಾಜವು ಯಾವಾಗಲೂ ಕಣ್ಣಿಟ್ಟಿರುತ್ತದೆ. ವ್ಯಕ್ತಿಯ ನಡವಳಿಕೆಗಳು ಸಮಾಜದ ಚೌಕಟ್ಟಿಗೆ ಒಳಪಟ್ಟಿರಬೇಕೆಂದು ಅದು ಬಯಸುತ್ತದೆ. ಪ್ರತಿಷ್ಠಿತ ವ್ಯಕ್ತಿಯಾಗಿದ್ದರಂತೂ ಅಂತಹ ವ್ಯಕ್ತಿಯ ಪೂರ್ವ–ಪರ ವಿಚಾರಗಳ ಬಗೆಗೆ ಸಮಾಜವು ವಿಶೇಷವಾದ ಆಸಕ್ತಿಯನ್ನು ಹೊಂದಿರುತ್ತದೆ. ಒಂದು ವೇಳೆ ಆ ವ್ಯಕ್ತಿಯ ಹಿಂದಿನ ಜೀವನ ಸರಿಯಾಗಿಲ್ಲವೆಂಬ ಅನುಮಾನ ಸಮಾಜಕ್ಕೆ ಬಂದರೆ ಈಗ ಅವನು ಆದರ್ಶದ ಜೀವನವನ್ನು ನಡೆಸಿಕೊಂಡಿದ್ದರೂ ಅದನ್ನು ಸಮಾಜವು ಒಪ್ಪದೇ ಅವನ ಮೂಲವನ್ನು ಹುಡುಕಲು ಮುಂದಾಗುತ್ತದೆ. ಆಗ ವ್ಯಕ್ತಿಯು ಸಂಘರ್ಷಕ್ಕೊಳಗಾಗುತ್ತಾನೆ. ಇಲ್ಲಿ ಚಿದಂಬರಸ್ವಾಮಿ ಇಂತಹ ಸಂದಿಗ್ಧಕ್ಕೆ ಸಿಲುಕಿದ್ದಾನೆ. ಚಿದಂಬರಸ್ವಾಮಿಯ ಪೂರ್ವ ಚರಿತ್ರೆ ಸರಿಯಾಗಿರುವುದಿಲ್ಲ. ನಂತರದಲ್ಲಿ ಆದರ್ಶದ ಜೀವನವನ್ನು ಆಯ್ದುಕೊಂಡು ಪ್ರಾಮಾಣಿಕವಾಗಿ ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಿರುತ್ತಾನೆ. ಆಶ್ರಮದ ಆಡಳಿತವನ್ನು ನೋಡಿಕೊಳ್ಳುವ ಶ್ರೀಕಂಠಮೂರ್ತಿ ಹಾಗೂ ಸಹ ಶಿಕ್ಷಕ ಗುರುಲಿಂಗಪ್ಪ ಇವರ ನಡುವೆ ಜಾತಿಯ

[illegible]

[illegible]

[illegible]

[illegible]

[illegible]

ವೈಶಮ್ಯವಿರುತ್ತದೆ. ಆಡಳಿತವನ್ನು ಪ್ರಶ್ನಿಸಿದನೆಂದು ಗುರುಲಿಂಗಪ್ಪನನ್ನು ಶ್ರೀಕಂಠಶರ್ಮ ಕೆಲಸದಿಂದ ವಜಾಮಾಡುತ್ತಾನೆ. ಇದರಿಂದ ಗುರುಲಿಂಗಪ್ಪ ಆಶ್ರಮದ ಕೆಲವು ಅವ್ಯವಹಾರಗಳನ್ನು ಬಯಲಿಗೆ ತಂದು ಚಿದಂಬರಸ್ವಾಮಿಯ ಮೂಲವನ್ನು ಹುಡುಕಲು ಪ್ರಯತ್ನಿಸುತ್ತಾನೆ. ಆಗ ಚಿದಂಬರಸ್ವಾಮಿಯ ಈಗಿನ ಆದರ್ಶ ಜೀವನಕ್ಕೂ ಹಿಂದಿನ ವಾಸ್ತವ ಜೀವನಕ್ಕೂ ಮುಖಾಮುಖಿಯಾದಾಗ ಅವನು ದ್ವಂದ್ವವನ್ನೆದುರಿಸುತ್ತಾನೆ.

ಎರಡು ವಿರುದ್ಧ ಜೀವನ ದೃಷ್ಟಿಕೋನಗಳ ಅವಲೋಕನದಿಂದ ವ್ಯಕ್ತಿಯೊಬ್ಬನು ಎದುರಿಸುವ ದ್ವಂದ್ವವನ್ನು 'ಆಕಾಶ ಮತ್ತು ಬೆಕ್ಕು' ಕತೆಯಲ್ಲಿ ಕಾಣಬಹುದು. ನಾಯರ್ ಮತ್ತು ಆಚಾರ್ಯರು ಒಟ್ಟಿಗೆ ದೆಹಲಿಯಲ್ಲಿ ರೈಲ್ವೆ ಖಾತೆಯಲ್ಲಿ ವೃತ್ತಿಯನ್ನು ಪ್ರಾರಂಭಿಸಿರುತ್ತಾರೆ. ಮೆಡಿಕಲ್ ಪರೀಕ್ಷೆಯಲ್ಲಿ ನಪಾಸಾದ ಆಚಾರ್ಯನು ನೌಕರಿ ಕಳೆದುಕೊಳ್ಳುತ್ತಾನೆ. ಮುಷ್ಕರದಲ್ಲಿ ಪಾಲ್ಗೊಂಡಿದ್ದಕ್ಕೆ ನಾಯರ್ ನೌಕರಿ ಕಳೆದುಕೊಂಡಿದ್ದರಿಂದ ಕೇರಳಕ್ಕೆ ತೆರಳುತ್ತಾನೆ. ಅಲ್ಲಿ ಹಿಂಸಾತ್ಮಕ ರಾಜಕೀಯ ಚಳುವಳಿಯನ್ನು ಆರಂಭಿಸುತ್ತಾನೆ. ಊರಿಗೆ ಹಿಂತಿರುಗಿದ ಆಚಾರ್ಯನು ದೇವಸ್ಥಾನದ ಪೂಜೆಯ ವೃತ್ತಿಯನ್ನು ಅವಲಂಬಿಸುತ್ತಾನೆ.

ಮದುವೆಯಾಗಿದ್ದ ಶ್ರೀಮಂತ ಅಲಕಾವತಿಯೊಂದಿಗೆ ಆಚಾರ್ಯನು ಅನೈತಿಕ ಸಂಬಂಧ ಬೆಳೆಸುತ್ತಾನೆ. ಗರ್ಭಿಣಿಯಾದ ಅವಳು ಹೆರಿಗೆಯ ನೋವಿನಿಂದ ಚೇತರಿಸಿಕೊಳ್ಳದೇ ಸಾಯುತ್ತಾಳೆ. ಅನಂತರ ಗಂಡನನ್ನು ಬಿಟ್ಟು ಬಂದ ಗಂಗೂ ಬಾಯಿ ಎನ್ನುವ ಶಿಕ್ಷಕಿಯೊಂದಿಗೆ ಆಚಾರ್ಯನು ಸಂಬಂಧ ಬೆಳೆಸುತ್ತಾನೆ. ಕೋರ್ಟು ಕಛೇರಿ ವ್ಯವಹಾರಗಳಲ್ಲಿ ನಿಷ್ಣಾತನಾಗಿ ಶ್ರೀಮಂತರ ಬೆಂಬಲಕ್ಕೆ ನಿಲ್ಲುತ್ತಾನೆ. ಚಿಕ್ಕಂದಿನಿಂದಲೂ ಆಚಾರ್ಯನಿಗೆ ನಕ್ಷತ್ರಗಳೆಂದರೆ ಇಷ್ಟ ವೈಜ್ಞಾನಿಕ ವಿಚಾರಗಳನ್ನು ಆಸಕ್ತಿಯಿಂದ ತಿಳಿದುಕೊಂಡಿದ್ದನು.

ಹೆಂಡತಿ, ಮಗ ಹಾಗೂ ವಿಧವೆಯಾದ ಮಗಳೊಂದಿಗೆ ಆಚಾರ್ಯನು ಜೀವನ ಸಾಗಿಸುತ್ತಿದ್ದನು. ಮಗ ಕೃಷ್ಣಮೂರ್ತಿಯು ಪ್ರೇಮ ವಿವಾಹವನ್ನು ಮಾಡಿಕೊಂಡಾಗ ಆಚಾರ್ಯನು ವಿರೋಧಿಸುತ್ತಾನೆ. ಪೇಟೆಗೆ ಹೋಗಿ ನೆಲಸಿದ ಕೃಷ್ಣಮೂರ್ತಿಗೆ ಮಗುವು ಜನಿಸಿದ ಮೇಲೆ ಆಚಾರ್ಯನು ರಾಜಿಯಾಗುತ್ತಾನೆ. ಕೊಲೆಯೊಂದರ ವಿಚಾರದಲ್ಲಿ ನಿರಪರಾಧಿಯಾಗಿದ್ದ ಶ್ರೀಮಂತ ವಿಷ್ಣುಮೂರ್ತಿಯನ್ನು ಆಚಾರ್ಯನು ಕಾನೂನಿನ ನೆರವಿನಿಂದ ರಕ್ಷಿಸುತ್ತಾನೆ. ಆತ್ಮೀಯನಾದ ವಿಷ್ಣುಮೂರ್ತಿಯು ಭದ್ರತೆಯ ದೃಷ್ಟಿಯಿಂದ ತನ್ನಲ್ಲಿದ್ದ ಬಂಗಾರವನ್ನು ಆಚಾರ್ಯನ ಮನೆಯಲ್ಲಿ ಇಟ್ಟಿರುತ್ತಾನೆ. ದಿನಕಳೆದಂತೆ ಆಚಾರ್ಯನ ರಾಜಕೀಯ ಆಸಕ್ತಿಯು ಕಡಿಮೆಯಾದಾಗ ಸಮಯ ಸಾಧಕನಾದ ವಿಷ್ಣುಮೂರ್ತಿಯು ತನ್ನ ಬಂಗಾರವನ್ನು ವಾಪಾಸು ಪಡೆಯುತ್ತಾನೆ. ಆಗ ಆಚಾರ್ಯನು ಕಷ್ಟಕಾಲದಲ್ಲಿ ವಿಷ್ಣುಮೂರ್ತಿಯನ್ನು ರಕ್ಷಿಸಿದ್ದು ವ್ಯರ್ಥವಾಯಿತೆಂದುಕೊಳ್ಳುತ್ತಾನೆ.

ಆಚಾರ್ಯನು ಸತ್ತಮೇಲೆ ಗೋವಿಂದ ನಾಯರ್ ಕೃಷ್ಣಮೂರ್ತಿಗೆ ನಿನ್ನ ಅಪ್ಪ ಮೂರ್ಖನಂತೆ ಜೀವಿಸಿದ್ದ ಎನ್ನುತ್ತಾನೆ. ನಾಯರ್‌ಗೆ ರಾಜಕೀಯ ಬದುಕನ್ನು ಬಿಟ್ಟು ಬೇರಾವುದರಲ್ಲೂ ಆಸಕ್ತಿಯಿರಲಿಲ್ಲ. ಫಲವತ್ತಾದ ಮಣ್ಣಿನಲ್ಲಿ ನಾನೊಂದು ಬೀಜವಾಗಿರಬೇಕು ಎನ್ನುತ್ತಾನೆ. ನಾಯರ್‌ನ ಅತಿಯಾದ ರಾಜಕೀಯ ಹಂಬಲ ಕೃಷ್ಣಮೂರ್ತಿಗೆ ಹಿಡಿಸುವುದಿಲ್ಲ. ತಂದೆ ಮತ್ತು ನಾಯರ್‌ನ ಭಿನ್ನವಾಗಿದ್ದ ದೃಷ್ಟಿಕೋನಗಳ ಬಗ್ಗೆ ಆಲೋಚಿಸಿದ ಕೃಷ್ಣಮೂರ್ತಿಯು ಗೊಂದಲಕ್ಕೊಳಗಾಗುತ್ತಾನೆ.

[illegible]

[illegible]

[illegible]

[illegible]

[illegible]

[illegible]

[illegible]

ಇಲ್ಲಿ ಸಾರ್ಥಕ ಜೀವನದ ಹುಡುಕಾಟವಿದೆ. ಕೃಷ್ಣಮೂರ್ತಿಗೆ ತನ್ನ ತಂದೆ ಹಾಗೂ ನಾಯರ್ ಇವರಿಬ್ಬರ ಜೀವನ ವಿಧಾನದ ಬಗೆಗೆ ಗೊಂದಲವಿದೆ. ನಾಯರ್ ವೈಯಕ್ತಿಕ ಜೀವನವನ್ನು ಕಡೆಗಣಿಸಿ ಸಮಾಜ ಸುಧಾರಣೆಯ ಕೆಲಸಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದಾನೆ. ನಿಷ್ಠುರ ವ್ಯಕ್ತಿತ್ವದ ನಾಯರ್ ಕೋಪಿಷ್ಠನಾಗಿದ್ದು ತಪ್ಪು ಮಾಡಿದವರನ್ನು ನೇರವಾಗಿ ಖಂಡಿಸುತ್ತಾನೆ. ಅದರಂತೆ ಒಂದೆರಡು ಸಲ ಪ್ರತಿಷ್ಠಿತ ವ್ಯಕ್ತಿಗಳ ಮೇಲೆ ಹಲ್ಲೆಯನ್ನೂ ನಡೆಸಿರುತ್ತಾನೆ. ಆಚಾರ್ಯ ಸಾಯುವಾಗಲೂ ತನ್ನ ರಾಜಕೀಯದ ವಿಚಾರಗಳನ್ನೇ ಚರ್ಚಿಸುತ್ತಾನೆ. ಆಚಾರ್ಯ ಸತ್ತ ತಕ್ಷಣವೇ ಹೊರಡಲನುವಾದದ್ದಲ್ಲದೇ ತಾನು ಬಂದು ಹೋಗುವ ಖರ್ಚನ್ನು ಕೃಷ್ಣಮೂರ್ತಿಯನ್ನು ಕೇಳಿ ಇಸಿದುಕೊಳ್ಳುತ್ತಾನೆ. ಅನ್ಯಾಯದ ವಿರುದ್ಧ ಬಂಡೇಳುವ ನಾಯರ್‌ನ ಆದರ್ಶವನ್ನು ಮೆಚ್ಚಿಕೊಂಡಿದ್ದ ಕೃಷ್ಣಮೂರ್ತಿಗೆ ಅವನ ನಿಷ್ಠುರ ಪ್ರವೃತ್ತಿಗಳು ಬೇಸರ ತರಿಸುತ್ತವೆ. ತನ್ನ ತಂದೆಯು ವೈಯಕ್ತಿಕ ಕಾರಣಕ್ಕಾಗಿ ಬ್ರಾಹ್ಮಣ್ಯವನ್ನು ಮೀರುವ ಕೆಲಸಗಳನ್ನು ಮಾಡಿದ್ದರೂ ಶ್ರೀಮಂತರ ಪರವಹಿಸಿ ಅವರಿಗೆ ನ್ಯಾಯ ದೊರಕಿಸಿಕೊಟ್ಟಿರುತ್ತಾನೆ. ಹೀಗೆ ಇವರಿಬ್ಬರೂ ತಮ್ಮದೇ ಆದ ಆದರ್ಶಕ್ಕೆ ಬದ್ಧರಾಗಿದ್ದು ವಾಸ್ತವ ಜೀವನಕ್ಕೆ ಸರಿಯಾಗಿ ಸ್ಪಂದಿಸಿರುವುದಿಲ್ಲ. ಆಚಾರ್ಯ ಹಾಗೂ ನಾಯರ್‌ನ ಜೀವನ ವೈರುಧ್ಯಗಳಿಂದಾಗಿ ಕೃಷ್ಣಮೂರ್ತಿಯು ಗೊಂದಲಕ್ಕೊಳಗಾಗುತ್ತಾನೆ.

ವ್ಯಕ್ತಿಯೊಬ್ಬನು ವ್ಯವಸ್ಥೆಯ ವಿರುದ್ಧ ಚಟುವಟಿಕೆಗಳಲ್ಲಿ ತೊಡಗಿದಾಗ ಸಮಕಾಲೀನ ಸಮಾಜದಲ್ಲಿ ಉಂಟಾಗುವ ಸಂಘರ್ಷವನ್ನು 'ಸಂಸ್ಕಾರ' ಕಾದಂಬರಿಯಲ್ಲಿ ಕಾಣಬಹುದು. ಅಗ್ರಹಾರದ ಬ್ರಾಹ್ಮಣರಲ್ಲಿ ತಮ್ಮ ಜಾತಿಯ ಶುದ್ಧತೆಯನ್ನು ಕಾಯ್ದುಕೊಳ್ಳುವುದರ ಹಂಬಲವಿದೆ. ವಂಚನೆ,ದುರಾಸೆಯಿರುವ ಬ್ರಾಹ್ಮಣರು ಬ್ರಾಹ್ಮಣ್ಯವನ್ನು ಬಿಟ್ಟ ನಾರಣಪ್ಪನನ್ನು ಕಂಡರೆ ಅಸೂಯೆಯಿದೆ. ನಾರಣಪ್ಪ ಸತ್ತಾಗ ಅವನ ಶವ ಸಂಸ್ಕಾರವನ್ನು ಮಾಡಲು ಯಾರೂ ಒಪ್ಪುವುದಿಲ್ಲ. ಸಂಸ್ಕಾರದ ಖರ್ಚಿಗೆ ಚಂದ್ರಿಯು ತನ್ನ ಆಭರಣಗಳನ್ನು ಕೊಡಲು ಮುಂದಾದಾಗ ಬ್ರಾಹ್ಮಣರು ಸಂಸ್ಕಾರ ಮಾಡಲು ಪೈಪೋಟಿ ನಡೆಸುತ್ತಾರೆ.

ಗರುಡಾಚಾರ್ಯ ಮೊದಲು ಶವಸಂಸ್ಕಾರದ ವಿಚಾರ ಬಂದಾಗ ನಾರಣಪ್ಪ ನನಗೆ ಸಂಬಂಧಿಕನಾದರೂ ನಾನೂ ಅವನ ಅಪ್ಪನೂ ತೋಟದ ಕಾರಣಕ್ಕಾಗಿ ಜಗಳವಾಡಿ ಕೋರ್ಟನ್ನು ಹತ್ತಿದ್ದೇವೆ. ನಾರಣಪ್ಪನ ಅಪ್ಪ ಸತ್ತ ಮೇಲೆ ನಾನು ಧರ್ಮಸ್ಥಳದಿಂದ ನ್ಯಾಯ ತಂದರೂ ಅವನು ದೈವಾಜ್ಞೆಯನ್ನು ಧಿಕ್ಕರಿಸಿದ. ನನಗೂ ಅವನಿಗೂ ಇನ್ನುಮುಂದೆ ತಲೆತಲಾಂತರಕ್ಕೂ ಮಾತುಕತೆ, ಮದುವೆಮುಂಜಿ, ಊಟೋಪಚಾರ ನಡೆಯದಂತೆ ಆಣೆಯಾಗಿದೆ. ಹೀಗಾಗಿ ನಾರಣಪ್ಪನ ಸಂಸ್ಕಾರವನ್ನು ನಾನು ಮಾಡುವಂತಿಲ್ಲ ಎನ್ನುವ ಕಾರಣ ನೀಡಿ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ತಂತ್ರ ಹೂಡುತ್ತಾನೆ.

ಇನ್ನೊಬ್ಬ ಸಂಬಂಧಿ ಲಕ್ಷ್ಮಣಾಚಾರ್ಯ ನಾರಣಪ್ಪನ ಸಂಸ್ಕಾರದ ವಿಚಾರವಾಗಿ ಈ ರೀತಿ ಸಮರ್ಥಿಸಿಕೊಳ್ಳುತ್ತಾನೆ. ತಾಳಿ ಕಟ್ಟಿದ ಹೆಂಡತಿಯನ್ನು ಬಿಟ್ಟು ಬೇರೆಯವಳ ಜೊತೆ ಇದ್ದಾನೆ. ಬ್ರಾಂತಿ ಹಿಡಿದು ಸತ್ತ ಅವನ ಹೆಂಡತಿಯ ಸಂಸ್ಕಾರ, ಶ್ರಾದ್ಧವನ್ನೂ ನಾರಣಪ್ಪ ಮಾಡಲಿಲ್ಲ. ತಲೆತಲಾಂತರದಿಂದ ಪೂಜೆ ಮಾಡಿದ್ದ ಸಾಲಿಗ್ರಾಮವನ್ನು ಎಲ್ಲ ಬ್ರಾಹ್ಮಣರ ಎದುರಿಗೆ ಹೊಳೆಗೆ ಎಸೆದು ಥೂ ಎಂದು ಉಗಿದುಬಿಟ್ಟ. ಇಷ್ಟೂ ಸಾಲದೆಂದರೆ ನಮ್ಮ ಅಂಗಳಕ್ಕೆ ತುರುಕರನ್ನು ಕರೆತಂದು ಅವರೊಂದಿಗೆ ಮಾಂಸವನ್ನು ತಿಂದ. ಬುದ್ಧಿ ಹೇಳಲು ಹೋದವರನ್ನು ತರಾಟೆಗೆ ತೆಗೆದುಕೊಳ್ಳುವ ನಾರಣಪ್ಪನಿಗೆ ಹೆದರಿಕೊಂಡು ಬದುಕಬೇಕಾಗಿತ್ತು ಎನ್ನುತ್ತಾನೆ. ಲಕ್ಷ್ಮಣಾಚಾರ್ಯನ ಮಾತುಗಳಲ್ಲಿ ನಾರಣಪ್ಪನು ಬ್ರಾಹ್ಮಣ ಸಮಾಜದ ಧಾರ್ಮಿಕ ಅಪೇಕ್ಷೆಗಳನ್ನು

[illegible]

[illegible]

[illegible]

[illegible]

ಉದ್ದೇಶಪೂರ್ವಕವಾಗಿ ಮುರಿದು ಹಾಕಿದ್ದುದರ ಸ್ಪಷ್ಟಸೂಚನೆಯಿದೆ. ತಮ್ಮ ಗಂಡಂದಿರ ಅಭಿಪ್ರಾಯಗಳನ್ನು ಗರುಡಾಚಾರ್ಯ, ಲಕ್ಷ್ಮಣಾಚಾರ್ಯನ ಹೆಂಡತಿಯರು ಬೆಂಬಲಿಸುತ್ತಾರೆ. ಇನ್ನುಳಿದ ಬ್ರಾಹ್ಮಣರು ನಾರಣಪ್ಪನ ಅವಗುಣಗಳನ್ನು ತೆಗಳಿದರೆ, ದಾಸಾಚಾರ್ಯ ತನ್ನ ಅಳಲನ್ನು ತೋಡಿಕೊಳ್ಳುತ್ತಾನೆ. ನಾರಣಪ್ಪನಂಥವನು ನಮ್ಮ ಅಗ್ರಹಾರದಲ್ಲಿದ್ದುದರಿಂದ ಸಂತರ್ಪಣೆ, ಬ್ರಾಹ್ಮಣಾರ್ಥಕ್ಕೆ ಬೇರೆ ಕಡೆಯಿಂದ ಕರೆ ಬರದೇ ಇದ್ದುದನ್ನು ನೆನೆಯುತ್ತಾನೆ. ಈಗ ದುಡಿಕಿ ನಾವೇನಾದರೂ ಶವಸಂಸ್ಕಾರ ಮಾಡಿದ್ದೇ ಆದರೆ ಬ್ರಾಹ್ಮಣಾರ್ಥಕ್ಕೆ ಸೊನ್ನೆಯೇ ಸರಿ ಎಂದು ತನ್ನ ಯೋಚನೆಯನ್ನು ತಿಳಿಸುತ್ತಾನೆ.

ಚಂದ್ರಿ ತನ್ನ ನಾಲ್ಕೆಳೆ ಬಂಗಾರದ ಸರ, ಕಡಗ ಬಳೆಗಳನ್ನು ನಾರಣಪ್ಪನ ಸಂಸ್ಕಾರಕ್ಕೆ ಕೊಡಲು ನಿರ್ಧರಿಸುತ್ತಾಳೆ. ಬ್ರಾಹ್ಮಣರ ಮನಸ್ಸಿನಲ್ಲಿ ಬಂಗಾರದ ಆಸೆಯಿಂದ ಬ್ರಾಹ್ಮಣ್ಯ ನಾಶವಾದೀತೆಂದು ದಿಗಿಲಾಯಿತು. ನಂತರದಲ್ಲಿ ನಾನಲ್ಲದೇ ಬೇರೆಯವರು ನಾರಣಪ್ಪನ ಸಂಸ್ಕಾರಕ್ಕೆ ಒಪ್ಪಿ ಬ್ರಾಹ್ಮಣ್ಯವನ್ನು ಮೀರದೆ ಬಂಗಾರವನ್ನು ಪಡೆದುಕೊಂಡರೆ ಎಂದು ಪ್ರತಿಯೊಬ್ಬರೂ ಯೋಚಿಸತೊಡಗುತ್ತಾರೆ. ಯಾರು ಎಲ್ಲಿ ಒಪ್ಪಿಬಿಡುತ್ತಾರೋ ಎಂಬ ಭಯದಿಂದ ಪ್ರತಿಯೊಬ್ಬ ಬ್ರಾಹ್ಮಣನೂ ನಾರಣಪ್ಪನಿಂದ ತಮಗಾದ ಅನ್ಯಾಯಕ್ಕಿಂತ ಇನ್ನೊಬ್ಬನಿಗಾದ ಅನ್ಯಾಯವನ್ನು ಪರಸ್ಪರ ವಿವರಿಸಲನುವಾಗುತ್ತಾರೆ.

ಸಂಬಂಧಿಕ ಗರುಡಾಚಾರ್ಯನ ಹೆಂಡತಿ ಸೀತಾದೇವಿ ಚಂದ್ರಿಯ ಆಭರಣ ತಮಗೆ ಸೇರಿದ್ದೇ ಆದರೆ ಮಗನನ್ನು ಮಿಲ್ಟ್ರಿಯಿಂದ ಬಿಡಿಸಿಕೊಳ್ಳಲು ಮಾರ್ಗವಾಯಿತೆಂದು ಯೋಚಿಸುತ್ತಾಳೆ. ಬೇರೆ ಯಾರೂ ನಾರಣಪ್ಪನ ಸಂಸ್ಕಾರ ಮಾಡದಂತೆ ತನ್ನ ಗಂಡನೇ ಮಾಡುವಂತಾಗಲೆಂದು ಮಾರುತಿಗೆ ಹಣ್ಣುಕಾಯಿ ಹರಕೆ ಮಾಡಿಕೊಳ್ಳುತ್ತಾಳೆ. ಇಲ್ಲಿಯತನಕ ನಾರಣಪ್ಪನನ್ನು ದೂರುತ್ತಿದ್ದವಳಿಗೆ ಈಗ ನಾರಣಪ್ಪ ಮಾಂಸಹಾರ ಮಾಡಿದ್ದು ಪಾಪವೆನಿಸುವುದಿಲ್ಲ. ಗಂಡನೊಡನೆ ಈ ವಿಷಯವನ್ನು ಚರ್ಚಿಸಿದಾಗ ಹೆಂಡತಿಯ ಮಾತನ್ನು ಒಪ್ಪದಂತೆ ನಟಿಸಿ ಪ್ರಾಣೇಶಾಚಾರ್ಯನ ಮನೆಗೆ ಅದೇ ಕೆಲಸಕ್ಕೆ ಗರುಡಾಚಾರ್ಯನು ಹೋಗುತ್ತಾನೆ. ಅಲ್ಲಿ ಪ್ರಾಣೇಶಾಚಾರ್ಯ ಹಿಂದೆ ಹೇಳಿದ ವಿಷಯಗಳನ್ನು ನೆನಪಿಸಿ ಉತ್ತರ ತಾಳೆ ಹಾಕಲು ಪುಸಲಾಯಿಸುತ್ತಾನೆ. ಆಪದ್ಧರ್ಮ ಪಾಲಿಸಿ ಎನ್ನುತ್ತಾನೆ. ನಾರಣಪ್ಪನ ಸಂಸ್ಕಾರದ ಜವಾಬ್ದಾರಿಯನ್ನು ತನಗೇ ನೀಡುವಂತೆ ಪ್ರಾಣೇಶಾಚಾರ್ಯನನ್ನು ಒತ್ತಾಯಿಸುತ್ತಾನೆ.

ಲಕ್ಷ್ಮಣಾಚಾರ್ಯನ ಹೆಂಡತಿ ಅನಸೂಯ ತನ್ನ ಗಂಡನಿಗೆ ನಾರಣಪ್ಪನ ಸಂಸ್ಕಾರ ಮಾಡಲು ಒಪ್ಪಿಕೊಳ್ಳುವಂತೆ ಪ್ರೇರಿಸುತ್ತಾಳೆ. ತನ್ನ ತಂಗಿಯ ಕೊರಳಿನಲ್ಲಿರಬೇಕಾಗಿದ್ದ ಆಭರಣ ಪರವಶವಾಯಿತೆಂದು ಕಣ್ಣೀರಿಡುತ್ತಿದ್ದ ಅವಳು ಈಗ ನಾರಣಪ್ಪನ ಶವಸಂಸ್ಕಾರ ಮಾಡಲು ಗಂಡನಿಗೆ ಹೇಳುತ್ತಾಳೆ. ಎಷ್ಟೆಂದರೂ ನಾರಣಪ್ಪನು ತನ್ನ ಸೋದರಮಾವನ ಮಗನಾಗಿದ್ದನು. ಮಾವ ಬದುಕಿದ್ದರೆ, ನನ್ನ ತಂಗಿ ಸತ್ತಿರದಿದ್ದರೆ, ನಮ್ಮ ನಾರಣಪ್ಪ ಗರುಡಾಚಾರ್ಯನ ಮಾಟಕ್ಕೆ ಬಲಿಯಾಗಿರದಿದ್ದರೆ ಅಷ್ಟೊಂದು ಚಿನ್ನವನ್ನು ಪರಭಾರೆ ಮಾಡಿ ಹೀಗೆ ಪರದೇಶಿಯಂತೆ ಶವಸಂಸ್ಕಾರವಿಲ್ಲದೇ ಕೊಳೆಯಬೇಕಾಗಿರಲಿಲ್ಲ ಎನ್ನುತ್ತಾಳೆ. ಅವನ ಸಂಸ್ಕಾರ ತಾವು ಮಾಡದಿದ್ದಲ್ಲಿ ಪ್ರಾಣ ಕಳೆದುಕೊಳ್ಳುತ್ತೇನೆ ಲಕ್ಷ್ಮಣಾಚಾರ್ಯನಿಗೆ ಅನಸೂಯ ಹೇಳುತ್ತಾಳೆ. ಸಂಪ್ರದಾಯ, ಸಂಸ್ಕೃತಿ ಹಾಗೂ ಪೂಜೆ ಪುನಸ್ಕಾರಗಳು ಅಗ್ರಹಾರದ ಬ್ರಾಹ್ಮಣ ಕುಲಸ್ಥರಲ್ಲಿ ರೂಢಿಗತವಾಗಿದ್ದವು. ಬ್ರಾಹ್ಮಣ್ಯವನ್ನು ಬಿಟ್ಟ ನಾರಣಪ್ಪನು ವ್ಯವಸ್ಥೆಗೆ ವಿರೋಧವಾದ ಕೆಲಸಗಳನ್ನು ಮಾಡಿ ಅದರಲ್ಲಿಯೇ ಸಂತೋಷವನ್ನು ಪಡುತ್ತಿದ್ದನು. ಪ್ರಾಣೇಶಾಚಾರ್ಯನು ವೈದಿಕ ಧರ್ಮಕ್ಕೆ ಬದ್ಧವಾದ ಆದರ್ಶಗಳನ್ನು ಬದುಕಿನಲ್ಲಿ ರೂಢಿಸಿಕೊಂಡಿರುತ್ತಾನೆ. ಚಂದ್ರಿಯೊಂದಿಗಿನ ಸಂಬಂಧದ ನಂತರ ಆದರ್ಶಗಳು ಬದುಕಿಗೆ

ಅರ್ಥವನ್ನು ನೀಡಲಾರವೆಂದು ತಿಳಿದುಕೊಳ್ಳುತ್ತಾನೆ. ನಾರಣಪ್ಪನು ಸಾವನ್ನಪ್ಪಿದಾಗ ಶವಸಂಸ್ಕಾರದ ಸಂದರ್ಭದಲ್ಲಿ ಸಮಕಾಲೀನ ಕಟ್ಟುಪಾಡುಗಳನ್ನು ಅನುಸರಿಸುವಾಗ ಸಂಘರ್ಷವೇರ್ಪಡುತ್ತದೆ.

ಸಂಸ್ಕಾರವನ್ನು ನೆರವೇರಿಸಲು ಉಗ್ರವಾಗಿ ನಿರಾಕರಿಸಿದ್ದ ಎಲ್ಲ ಬ್ರಾಹ್ಮಣರೂ ತಮಗೆ ಬರಲಿರುವ ಒಡವೆಗಳ ಆಸೆಯಿಂದ ಸಂಸ್ಕಾರವನ್ನು ಮಾಡಲು ಮುಂದಾಗುತ್ತಾರೆ. ಬಂಗಾರದ ಆಸೆಯಿಂದಾಗಿ ತಾವೇ ಕಟ್ಟಿಕೊಂಡ ತತ್ವಗಳನ್ನು ಮುರಿಯಬಲ್ಲ ಕಪಟತನವನ್ನು ಇಲ್ಲಿ ಗಮನಿಸಬಹುದಾಗಿದೆ. ಆದರ್ಶವನ್ನು ಅನೂಚಾನವಾಗಿ ಪಾಲಿಸಿಕೊಂಡು ಬಂದಿರುವ ಅಗ್ರಹಾರದ ಬ್ರಾಹ್ಮಣರ ಬದುಕು ಎಷ್ಟು ಅಮಾನವೀಯವಾಗಿದೆಯೆಂದರೆ ಆದರ್ಶವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತಿರುಗಿಸಿಕೊಂಡು ಬದುತ್ತಿದ್ದಾರೆಂಬುದು ಗೊತ್ತಾಗುತ್ತದೆ. ಅವರ ವ್ಯಾಮೋಹ ಯಾವ ಕೀಳುಮಟ್ಟುಕ್ಕೂ ಇಳಿಯಬಹುದೆಂಬುದನ್ನು ಇಲ್ಲಿ ಕಾಣಬಹುದು. ಹೀಗೆ ಅವರ ಆದರ್ಶ ಮತ್ತು ವಾಸ್ತವದಲ್ಲಿ ವ್ಯತ್ಯಾಸವಿದೆ.

ವ್ಯವಸ್ಥೆಯ ಸಮಕಾಲೀನ ಸಮಸ್ಯೆಯನ್ನು 'ಭಾರತೀಪುರ' ಕಾದಂಬರಿಯಲ್ಲಿ ಕಾಣಬಹುದು. ಭಾರತೀಪುರದಲ್ಲಿ ಜಮೀನ್ದಾರಿ ವ್ಯವಸ್ಥೆ ಮುಂದುವರಿದಿರುತ್ತದೆ. ಜಮೀನ್ದಾರಿ ಕುಟುಂಬದ ಜಗನ್ನಾಥ ವ್ಯವಸ್ಥೆಯಲ್ಲಿನ ವರ್ಗಭೇದವನ್ನು ಸರಿಪಡಿಸಲು ತನ್ನ ವರ್ಗದ ವಿರುದ್ಧ ನಿಲ್ಲುತ್ತಾನೆ. ಹೀಗೆ ಸಾಮಾಜಿಕ ಸಮಾನತೆಯನ್ನು ತರಲು ರಾಜಕೀಯ ಹೋರಾಟವನ್ನು ಕೈಗೊಳ್ಳುವ ಜಗನ್ನಾಥನಿಗೆ ಅದರ ಹಿಂದಿರುವ ಸಂಕೀರ್ಣ ಒತ್ತಡಗಳ ಅನುಭವವಾಗುತ್ತದೆ. ಔದ್ಯೋಗಿಕರಣದ ಸೋಂಕಿಲ್ಲದ ಒಂದು ಹಳ್ಳಿಯ ಜಡಬದುಕಿನ ಚಿತ್ರಣವನ್ನು ಭಾರತೀಪುರ ಒಳಗೊಂಡಿದೆ. ಇದು ಸಮಕಾಲೀನ ಭಾರತೀಯ ಪರಿಸ್ಥಿತಿಯ ವಿಶ್ಲೇಷಣೆಯನ್ನು ಪ್ರತಿನಿಧಿಸುತ್ತದೆ. ಭಾರತದಲ್ಲಿ ಕ್ರಾಂತಿಯ ಅವಶ್ಯಕತೆ ಮತ್ತು ಸಾಧ್ಯತೆಯ ಕುರಿತು ವಿಚಾರಗಳನ್ನು ಮಂಡಿಸುತ್ತದೆ. ಅದನ್ನು ಸಾಧ್ಯವಾಗುವಂತೆ ಮಾಡುವ ಕ್ರಿಯೆಯಲ್ಲಿ ತೊಡಗುವುದು ಲೇಖಕರ ಆಶಯವಾಗಿದೆ.

ಆಳುವವರ್ಗದಲ್ಲಿ ಹುಟ್ಟಿ ಜಾತಿಸಂಸ್ಕಾರದಲ್ಲಿ ಬೆಳೆದ ಜಗನ್ನಾಥನಿಗೆ ಜಾತಿ ವರ್ಗವಾಗಿ ಪರಿವರ್ತನೆಯಾಗಿರುವುದು ಗಮನಿಸಿ ವರ್ಗ ಮುಕ್ತನಾಗಲು ಬಯಸುತ್ತಾನೆ. ಜಮೀನ್ದಾರರು ದಬ್ಬಾಳಿಕೆಯನ್ನು ತಮ್ಮ ಹಕ್ಕು ಎನ್ನುವಂತೆ ಪ್ರತಿಪಾದಿಸಿದರೆ, ಅವರ ದಬ್ಬಾಳಿಕೆಯನ್ನು ಹರಿಜನರು ಸರಿಯಾದುದೆಂದೇ ತಿಳಿದಿದ್ದಾರೆ. ಮಂಜುನಾಥ ದೇವರು ಇವರಿಬ್ಬರ ನಂಬಿಕೆಗೆ ಭದ್ರವಾದ ತಳಪಾಯ ಹಾಕಿದ್ದಾನೆ. ತನ್ನ ವರ್ಗದ ಹಿತಾಸಕ್ತಿಗಳಿಂದ ಬೇಸತ್ತು ಅದಕ್ಕೆ ವಿರುದ್ಧವಾದ ಜೀವನಕ್ರಮವೊಂದನ್ನು ರೂಪಿಸಿಕೊಳ್ಳುವ ಪ್ರಕ್ರಿಯೆ ಜಗನ್ನಾಥನ ಮೂಲಕ ಸೂಚಿತವಾಗುತ್ತದೆ. ಜಾಗೃತಿವಿಹೀನರಾದ ಹರಿಜನರನ್ನು ಮೇಲೆತ್ತಲು ಪ್ರಯತ್ನಿಸುತ್ತಾನೆ. ಜಗನ್ನಾಥನ ಈ ಪ್ರಕ್ರಿಯೆಗೆ ಪ್ರತಿಕ್ರಿಯೆ ತೋರುವ ವ್ಯಕ್ತಿಗಳು ವ್ಯವಸ್ಥೆಯ ಪರವಾಗಿಯೇ ನಿಲ್ಲುತ್ತಾರೆ.

ನಾಗರಾಜ ಜೋಯಿಸ ಆಸ್ತಿಕವಾದ ಹಾಗೂ ನಾಸ್ತಿಕವಾದ ಎರಡರ ಬಗೆಗೂ ಮಾತನಾಡುತ್ತಾನೆ. ಗಾಳಿ ಬಂದ ಕಡೆ ತೂರುವ ಸ್ವಭಾವ ಅವನದಾಗಿದೆ. ಶ್ರೀಪತಿರಾಯರು ಮೊದಲು ಹೋರಾಟಗಾರರಾಗಿದ್ದವರು ನಂತರದಲ್ಲಿ ವ್ಯವಸ್ಥೆಗೆ ಹೊಂದಿಕೊಂಡಿದ್ದರಿಂದ ಜಗನ್ನಾಥನಿಗೆ ಸ್ಪಂದಿಸುವುದಿಲ್ಲ. ಸ್ಥಳೀಯ ಎಂ.ಎಲ್.ಎ ಗುರಪ್ಪಗೌಡ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಯಾವುದೋ ಕೆಲಸದ ನೆವ ಹೇಳಿ ಬೆಂಗಳೂರಿಗೆ ಹೊರಡುತ್ತಾನೆ. ಡಿ.ಸಿ. ಸತ್ಯಪ್ರಕಾಶ್ ಗೊಂದಲದಲ್ಲಿ ಸಿಲುಕಬಾರದೆಂಬ ಉದ್ದೇಶದಿಂದ ಜಾತ್ರೆಯ ದಿನ ಹರಿಜನರ ಪ್ರವೇಶ ಬೇಡ ಬೇರೆ ದಿನ ಇಟ್ಟುಕೊಂಡರೆ ನಿಮ್ಮ ಜೊತೆ ನಾನಿರುತ್ತೇನೆ ಎನ್ನುತ್ತಾನೆ.

ಸಮಾಜವಾದಿ ಪಕ್ಷದ ನಾಯಕ ನೀಲಕಂಠಸ್ವಾಮಿ ಜಗನ್ನಾಥನನ್ನು ಕುರಿತು ನಿಮಗಿನ್ನೂ ರಾಜಕೀಯ ಹೊಸದು ಗ್ಲೌಸ್ ಹಾಕಿದ ಕೈಯಿಂದ ಕ್ರಾಂತಿ ಸಾಧ್ಯವಿಲ್ಲ, ಕೈ ಕೊಳೆ ಮಾಡಿಕೊಳ್ಳೋಕೆ ಅಸಹ್ಯ ಪಡಬಾರದು ಎನ್ನುತ್ತಾನೆ. ಹೀಗೆ ದೇವಾಲಯದೊಳಗೆ ಹರಿಜನರನ್ನು ಪ್ರವೇಶಿಸುವ ಕ್ರಾಂತಿಯ ಮೂಲಕ ಬದಲಾವಣೆಯನ್ನು ತರಬೇಕೆಂದುಕೊಳ್ಳುವ ಜಗನ್ನಾಥನ ಆದರ್ಶದ ಕನಸು ನನಸಾಗುವುದಿಲ್ಲ. ಅದು ಅಲ್ಲಿನ ವ್ಯವಸ್ಥೆಯ ಹಿತಾಸಕ್ತಿಯನ್ನೆದುರಿಸುವ ವಾಸ್ತವಕ್ಕೆ ಮುಖಾಮುಖಿಯಾದಾಗ ವಿಫಲವಾಗುತ್ತದೆ. ಇಲ್ಲಿ ಜಗನ್ನಾಥನ ತೊಡಗುವಿಕೆಗಿಂತ ಪರಿಣಾಮ ಮುಖ್ಯವೆನಿಸುತ್ತದೆ.

ವ್ಯವಸ್ಥೆಯ ವೈರುಧ್ಯಗಳು ಜಗನ್ನಾಥನ ಕ್ರಿಯೆಗೆ ಅಡ್ಡಿಯಾಗುತ್ತವೆ. ಯಾರಿಗಾಗಿ ತಾನು ಬದಲಾವಣೆ ತರಬೇಕೆಂದು ಬಯಸುತ್ತಾನೋ ಅವರು ಜಗನ್ನಾಥನಿಗೆ ಸ್ಪಂದಿಸುವುದಿಲ್ಲ. ಜೊತೆಗೆ ಜಗನ್ನಾಥನಿಗೂ ತನ್ನ ವರ್ಗ ಗುಣಗಳನ್ನು ಸಂಪೂರ್ಣವಾಗಿ ಮೀರಲಾಗುವುದಿಲ್ಲ.ಅವರ ಸಮಸ್ಯೆಯನ್ನು ಸರಿಯಾಗಿ ಅರ್ಥಮಾಡಿಸಲು ಜಗನ್ನಾಥನಿಗೆ ಸಾಧ್ಯವಾಗದೆ ಅವನ ಎಲ್ಲ ಪ್ರಯತ್ನ ಕೃತಕವೆನಿಸುತ್ತದೆ. ಹರಿಜನನಾಗಿದ್ದ ಸತ್ಯಪ್ರಕಾಶ್ ಡಿ.ಸಿ ಆಗಿರುವುದರಿಂದ ಅವನು ತನ್ನ ವರ್ಗದ ಪರ ವಹಿಸುವುದರಿಂದ ತನ್ನ ಜಾತಿಯ ಪರವಾಗಿ ನಿಲ್ಲುವುದಿಲ್ಲ. ಬಂಡವಾಳಶಾಹಿ ವೆಂಕಟರಾಯ ಪ್ರಭುಗಳು ವೃತ್ತಿ ರಾಜಕಾರಣಿ. ನೀಲಕಂಠಸ್ವಾಮಿಯಂಥವರಿಗೆ ಜಗನ್ನಾಥನ ಕ್ರಿಯೆಯ ಲಾಭ ಪಡೆಯುವ ಆತುರವಿದೆ. ಸಮಾಜವಾದಿ ಪಕ್ಷದವರು ಜಗನ್ನಾಥ ತಮ್ಮ ಪಾರ್ಟಿಯ ಅಧ್ಯಕ್ಷ್ಯ ಅಥವಾ ಅಭ್ಯರ್ಥಿಯಾಗಬಹುದೆಂದು ಲೆಖ್ಖ ಹಾಕುತ್ತಾರೆ.ಚಳುವಳಿಯಲ್ಲಿ ಭಾಗವಹಿಸುತ್ತಿದ್ದ ಜಗನ್ನಾಥನ ಗೆಳೆಯನೂ ವಾಸ್ತವಕ್ಕೆ ಹೆಚ್ಚು ಸ್ಪಂದಿಸುತ್ತಾನೆ.ಇಲ್ಲಿ ಊಳಿಗಮಾನ್ಯ ವ್ಯವಸ್ಥೆಯಿದ್ದು ಆಗ ತಾನೇ ಆಧುನಿಕತೆಯ ಅಲ್ಪ ಪರಿಚಯ ಪಡೆಯುತ್ತಿರುವ ಗ್ರಾಮೀಣ ಬದುಕು ಈ ಕಾದಂಬರಿಯ ಜಗತ್ತನ್ನು ರೂಪಿಸಿದೆ. ಇಲ್ಲಿ ಊಳಿಗಮಾನ್ಯ ವ್ಯವಸ್ಥೆ ಮತ್ತು ಪುರುಷ ಪ್ರಧಾನ ವ್ಯವಸ್ಥೆಯ ಅಧಿಕಾರ ರಚನೆಯಿದೆ. ಹೀಗೆ ಜಗನ್ನಾಥನ ಹೋರಾಟದ ಆದರ್ಶ ವಾಸ್ತವದ ನಡುವಿರುವ ಕಂದರವು ಸಂಘರ್ಷವನ್ನುಂಟು ಮಾಡುತ್ತದೆ.

ಪ್ರಾಮಾಣಿಕ ರಾಜಕೀಯ ವ್ಯಕ್ತಿಯೊಬ್ಬನು ವ್ಯವಸ್ಥೆಯ ಎದುರಾಗಿಸೋಲುವುದನ್ನು 'ಅವಸ್ಥೆ'ಕಾದಂಬರಿಯಲ್ಲಿ ಕಾಣಬಹುದು. ಇಲ್ಲಿ ಸಮಕಾಲೀನ ರಾಜಕೀಯ ಸಂಸ್ಕೃತಿಯ ಶೋಧನೆಯಿದೆ. ಕೃಷ್ಣಪ್ಪನು ಚಿಕ್ಕಂದಿನಲ್ಲಿ ಬಡತನದ ಮನೆತನದಿಂದ ಬಂದವನಾಗಿದ್ದರೂ ಸ್ವಾಭಿಮಾನಿಯಾಗಿದ್ದನು. ಅನ್ಯಾಯವನ್ನು ಸಹಿಸದ ಕೃಷ್ಣಪ್ಪನು ಅಣ್ಣಾಜಿಯೆಂಬ ರಾಜಕೀಯ ವ್ಯಕ್ತಿಯೊಬ್ಬನ ಪ್ರಭಾವಕ್ಕೆ ಒಳಗಾಗುತ್ತಾನೆ. ಯಾವುದೋ ಕಾರಣಕ್ಕೆ ಅಣ್ಣಾಜಿಯನ್ನು ಪೋಲೀಸರು ಬಂಧಿಸಿದಾಗ ಅದನ್ನು ವಿಚಾರಿಸಲು ಹೋದ ಕೃಷ್ಣಪ್ಪನಿಗೆ ಅವನು ಕೊಲೆಯಾದ ವಿಷಯ ತಿಳಿಯುತ್ತದೆ. ಪೋಲೀಸರ ಅಮಾನುಷ ವರ್ತನೆಯನ್ನು ಖಂಡಿಸಿ ಅವರ ಮೇಲೆ ಕೈಮಾಡಿದ ಕೃಷ್ಣಪ್ಪ ಬಂಧಿತನಾಗುತ್ತಾನೆ. ಅಣ್ಣಾಜಿಯ ಕುರಿತ ರಹಸ್ಯ ವಿಷಯಗಳಿಗಾಗಿ ಪೋಲೀಸರು ಕೃಷ್ಣಪ್ಪನನ್ನು ಚಿತ್ರಹಿಂಸೆಗೆ ಗುರಿಪಡಿಸುತ್ತಾರೆ.ಮಹಿಳೆಯೊಬ್ಬಳ ಮೇಲೆ ಅಲ್ಲಿ ನಡೆದ ಅತ್ಯಾಚಾರವನ್ನು ತಡೆಯಲಾಗದ ತನ್ನ ಅಸಹಾಯಕತೆಗೆ ಬೇಸರಪಡುತ್ತಾನೆ. ಕೊನೆಗೆ ಮಹೇಶ್ವರಯ್ಯ ಎಂಬ ಹಿತೈಷಿಗಳ ಪ್ರಯತ್ನದಿಂದ ಕೃಷ್ಣಪ್ಪನ ಬಿಡುಗಡೆಯಾಗುತ್ತದೆ.

ರಾಜಕೀಯ ವ್ಯವಸ್ಥೆಯಲ್ಲಿನ ಅನ್ಯಾಯವನ್ನು ಸರಿಪಡಿಸಬೇಕೆಂದು ನಿರ್ಧರಿಸಿದ ಕೃಷ್ಣಪ್ಪನು ಗೇಣಿ ರೈತರನ್ನು ಸಂಘಟಿಸಿ ಮಾಡಿದ ಚಳುವಳಿಯಿಂದಾಗಿ ಜನಪ್ರಿಯತೆಯನ್ನು ಗಳಿಸುತ್ತಾನೆ. ಇದು ಮುಂದೆ ಅವನು ಚುನಾವಣೆಯಲ್ಲಿ ಸ್ಪರ್ಧಿಸಲು ಅನುಕೂಲವಾದಂತೆ ವಿಧಾನಸಭೆಯಲ್ಲಿ ವಿರೋಧಪಕ್ಷದ ನಾಯಕನಾಗಲು

ಸಹಾಯವಾಗುತ್ತದೆ. ಅವನ ಜನಪ್ರಿಯತೆಯಿಂದಾಗಿ ಆಡಳಿತ ಪಕ್ಷದವರೂ ಕೃಷ್ಣಪ್ಪನನ್ನು ಕಂಡರೆ ಭಯ, ಗೌರವಗಳನ್ನಿಟ್ಟುಕೊಂಡಿರುತ್ತಾರೆ. ಮುಖ್ಯಮಂತ್ರಿ ಪದವಿಯ ಅವಕಾಶವನ್ನು ನಿರೀಕ್ಷಿಸುತ್ತಿದ್ದ ಕೃಷ್ಣಪ್ಪನಿಗೆ ಹುಡುಗಿಯೊಬ್ಬಳ ಅತ್ಯಾಚಾರಕ್ಕೆ ತನ್ನ ಅನುಯಾಯಿಯೊಬ್ಬನ ಮಗ ಕಾರಣನಾಗಿದ್ದಾನೆ ಎಂದು ತಿಳಿದಾಗ ತನ್ನ ಪದವಿ ಯೋಚನೆಯನ್ನು ಬಿಟ್ಟು ಸದಸ್ಯತ್ವಕ್ಕೂ ರಾಜೀನಾಮೆ ನೀಡುತ್ತಾನೆ. ನಂತರದಲ್ಲಿ ಅನಾರೋಗ್ಯಕ್ಕೆ ಗುರಿಯಾದ ಕೃಷ್ಣಪ್ಪನ ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಳ್ಳುವ ಕೆಲವು ರಾಜಕೀಯ ವ್ಯಕ್ತಿಗಳ ಕುತಂತ್ರವನ್ನು ಗಮನಿಸಿ ಅವರಿಂದ ದೂರವಿರಲು ಬಯಸುತ್ತಾನೆ. "ಅವಸ್ಥೆ ಕಾದಂಬರಿಯಲ್ಲಿ ಸಮಗ್ರತೆಯತ್ತ ಪ್ರಾಮಾಣಿಕತೆಯತ್ತ ಮುಖಮಾಡಿದ ಮನುಷ್ಯ ಪ್ರಜ್ಞೆಯ ವಿವಿಧ ಅವಸ್ಥಾಂತರಗಳನ್ನು ಕೃಷ್ಣಪ್ಪನ ಜೀವನದ ವಿವಿಧ ಹಂತಗಳ ಮುಖಾಂತರ ಇಂದಿನ ಭ್ರಷ್ಟ ರಾಜಕೀಯದ ಹಿನ್ನೆಲೆಯಲ್ಲಿ ನಿಜಗೊಳಿಸಲು ಮಾಡಿದ ಪ್ರಯತ್ನವನ್ನು ಕಾಣಬಹುದು."[೨] ಹೀಗೆ ಪ್ರಾಮಾಣಿಕತೆಗೆ ಬೆಲೆಕೊಡುವ ಮನುಷ್ಯ ಪ್ರಜ್ಞೆಯ ಅವಸ್ಥಾಂತರಗಳನ್ನು ಕೃಷ್ಣಪ್ಪನ ಜೀವನದ ವಿವಿಧ ಹಂತಗಳ ಮುಖಾಂತರ ಇಂದಿನ ಭ್ರಷ್ಟ ರಾಜಕೀಯದ ಹಿನ್ನಲೆಯನ್ನು ಲೇಖಕರು ಚಿತ್ರಿಸಿದ್ದಾರೆ. ಲೋಕದ ಸ್ಥಿತಿಯಲ್ಲಿ ಅಸ್ಥಿತಿಯಿದೆ. ವ್ಯವಸ್ಥೆಯಲ್ಲಿರುವ ಅವ್ಯವಸ್ಥೆಯನ್ನು ಇಲ್ಲಿ ಕಾಣಬಹುದಾಗಿದೆ. ಇಂದಿನ ಲೇಖಕ ಇಂಥ ಸಂದಿಗ್ಧಗಳನ್ನು ಎದುರಿಸಬೇಕಾಗಿರುವುದು ಸ್ವಾಭಾವಿಕವಾದರೂ ತನ್ನ ಕೃತಿಯ ಮಿತಿಯೊಳಗಾದರೂ ಖಚಿತ ಸಾಮಾಜಿಕ ಚಿಂತನೆ ಮತ್ತು ರಾಜಕೀಯ ಗ್ರಹಿಕೆಗಳನ್ನು ಸ್ವಾಯತ್ತ ಮಾಡಿಕೊಳ್ಳುವವುದು ಅಪೇಕ್ಷಣೀಯವಗಿದೆ. ಪೋಲೀಸು ವ್ಯವಸ್ಥೆ ಭ್ರಷ್ಟವಾಗಿದೆ ಎಂಬುದನ್ನು ಕಂಡುಕೊಳ್ಳುವ ಅರಿವು ಆ ವ್ಯವಸ್ಥೆಯನ್ನು ನಿರಾಕರಿಸುವಂತೆ ಮಾಡಿದೆ.

ಸ್ವಾತಂತ್ರ್ಯೋತ್ತರ ಭಾರತದ ಸ್ಥೂಲರಾಜಕಾರಣದ ಸೂಕ್ಷ್ಮ ಚಿತ್ರಣವನ್ನು ಇಲ್ಲಿ ಕಾಣಬಹುದಾಗಿದೆ. ರಾಜಕಾರಣದ ಮೂಲಭೂತ ಪ್ರಶ್ನೆಗಳನ್ನು ಎತ್ತಿ ವಾಸ್ತವಕ್ಕೆ ಮುಖಾಮುಖಿ ಮಾಡುತ್ತದೆ. ಅವಕಾಶವಾದೀ ರಾಜಕಾರಣ, ಜನಪರ ಹೋರಾಟಗಳ ಸೈದ್ಧಾಂತಿಕ ರಾಜಕಾರಣ ಸೇರಿಕೊಂಡಿರುವ ಸಂಕೀರ್ಣ ಸ್ಥಿತಿಯನ್ನು ತಿಳಿಸುತ್ತದೆ. ಕಾದಂಬರಿಯಲ್ಲಿ ಮಾರ್ಕ್ಸ್ ವಾದ, ಗಾಂಧೀವಾದ, ಲೋಹಿಯಾವಾದಗಳ ನೇರ ಮುಖಾಮುಖಿಯಿದೆ. ಹೀಗೆ ಸಮಕಾಲೀನ ರಾಜಕಾರಣದ ವಿದ್ಯಮಾನಗಳ ಜೊತೆಗೆ ಮನುಷ್ಯನ ಮೂಲ ಅವಸ್ಥೆಯ ನೆಲೆಯನ್ನು ಶೋಧಿಸುತ್ತದೆ.

ಕೃಷ್ಣಪ್ಪನ ರಾಜಕೀಯ ವ್ಯಕ್ತಿತ್ವ ಈ ಸಂದಿಗ್ಧದಲ್ಲಿ ಸಿಲುಕಿಕೊಂಡಿರುವಾಗ ಅವನ ಒಳಬಾಳಿನಲ್ಲಿ ಮಹತ್ವದ ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ. ಇವು ಮುಖ್ಯವಾಗಿ ಅವನ ಮಾನವೀಯತೆಯ ವಿಕಾಸಕ್ಕೆ ಸಂಬಂಧಿಸಿವೆ. ತನ್ನ ಆರೈಕೆಗೆಂದು ನೇಮಿಸಲ್ಪಟ್ಟ ಜ್ಯೋತಿಯ ಜೀವನದಲ್ಲಿ ಕೃಷ್ಣಪ್ಪ ವಹಿಸುವ ನಿರಪೇಕ್ಷ ಆಸಕ್ತಿ ಇಂಥ ಬದಲಾವಣೆಗೆ ನಿದರ್ಶನವಾಗಿದೆ. ಜ್ಯೋತಿಗೆ ಸಹಾಯ ಮಾಡಲು ವೀರಣ್ಣನ ಸಹಕಾರ ಪಡೆಯುವುದು ಕೃಷ್ಣಪ್ಪನಿಗೆ ತಪ್ಪೆನಿಸುವುದಿಲ್ಲ. ಅಸೆಂಬ್ಲಿಗೆ ರಾಜೀನಾಮೆ ಕೊಟ್ಟರೂ ಕೂಡ ಕೃಷ್ಣಪ್ಪ ತನ್ನ ಸೋಲನ್ನು ಒಪ್ಪುವುದು ಆದರ್ಶ ಮತ್ತು ವಾಸ್ತವಗಳೆರಡಕ್ಕೂ ಇರುವ ಅವನು ಜೀವನದಲ್ಲಿ ಮಾಡಿಕೊಂಡ ಒಪಂದವನ್ನು ಸೂಚಿಸುತ್ತದೆ. ನಾವು ಇಡಿಯಾಗಿ ಉಳಿಯೋದೇ ಇಲ್ಲಾಂತ ಅನ್ನಿಸತ್ತೆ ಗೌರಿ –ಕೃಷ್ಣಪ್ಪ ಬಹಳ ಕಷ್ಟಪಡುತ್ತ ತನ್ನ ಸಧ್ಯದ ಪಾಡನ್ನು ಹೇಳಿಕೊಳ್ಳಲು ನೋಡಿದ. ತನ್ನ ಹೃದಯವನ್ನು ಸೂಚಿಸುವಂತೆ ಎದೆಯನ್ನು ಮುಟ್ಟಿ ಹೇಳಿದ. ಇಲ್ಲೂ ನನಗೆ ಇಂಟೆಗ್ರಿಟಿ ಸಾಧ್ಯ ಆಗ್ತಾ ಇಲ್ಲ. ಕೈಯನ್ನು ಹೊರಚಾಚಿ ರಾಜಕೀಯ ಲೋಕವನ್ನು ಸೂಚಿಸಲು ಪ್ರಯತ್ನಿಸುತ್ತ ಹೇಳಿದ. ಅಲ್ಲೂ ನನಗೆ ಇಂಟೆಗ್ರಿಟಿ ಸಾಧ್ಯ ಆಗ್ತಾ ಇಲ್ಲ . ಹೀಗೆ ಹೇಳಿದ ನಂತರ

ಹಗುರವಾಗಿ ನಿಟ್ಟುಸಿರಿಟ್ಟ ಅವನು ಈ ಕೋಲಿಗೆ ಆತುಕೊಂಡು ನಿಲ್ಲುವುದು ಸಾಧ್ಯವೆ ಎಂದು ಪ್ರಯತ್ನಿಸುದಷ್ಟೆ ಈಗ ತನಗೆ ಉಳಿದ ಕೆಲಸವಾಗಿದೆ ಎನ್ನುತ್ತಾನೆ.

ಕೃಷ್ಣಪ್ಪನ ವ್ಯಕ್ತಿತ್ವದಲ್ಲಿ ದೋಷಗಳಿವೆ. ಉದಾಹರಣೆಗೆ, ಕೃಷ್ಣಪ್ಪನ ಕ್ಷುದ್ರತೆಯ ಜೀವನವು ಹೆಂಡತಿಯನ್ನು ಹೊಡೆಯುವ ಅರ್ಥಹೀನವಾದ ಹಿಂಸೆಗೆ ಅವನನ್ನು ಎಳೆಯುತ್ತದೆ. ಮತ್ತು ಅವನ ಮಾನವೀಯತೆಯಲ್ಲಿನ ಕೊರತೆಯನ್ನು ತೋರಿಸುತ್ತದೆ. ಇಂದಿನ ನಾಗರೀಕತೆಯಲ್ಲಿ ಮಾನವನಾಗಿ ಬಾಳುವ ಬಗೆಗೆ ಸಮಕಾಲೀನ ಆಹ್ವಾನಕ್ಕಿಂತ ಅವನ ನಾಯಕ ಗುಣದ ಆದರ್ಶಗಳೇ ಕೃಷ್ಣಪ್ಪನಿಗೆ ಹೆಚ್ಚು ಪ್ರಸ್ತುತವೆನಿಸುತ್ತವೆ. "ಇನ್ನೂ ಎರಡು ಆಸೆಗಳು ನನಗಿವೆ. ಅಶ್ವತ್ಥದ ಮರದ ಬುಡದಲ್ಲಿ ಕೂತು ಕಾಲದ ನಿರಂತರತೇನ್ನ ಅನುಭವಿಸಬೇಕು ಅನಿಸುತ್ತದೆ. ಇನ್ನೊಂದು ಆಸೆಯಿದೆ, ಅದು ಇದು ಬೇರೆ ಬೇರೆ ಅಂತ ನನಗೆ ಅನ್ನಿಸಲ್ಲ. ನಮ್ಮ ದೈನಿಕಗಳ ಪ್ರಭೆ ಪಡೆಯೋದು ಸಾಧ್ಯ ಅಂತ ಯಾವೊತ್ತೂ ನಮ್ಮ ಚರಿತ್ರೇಲಿ ದಡ ಹತ್ತದೇನೇ ಇದಾರಲ್ಲ ಅವರಿಗೆ ಸಿಟ್ಟು ಬರೋಹಾಗೆ ಮಾಡಕ್ಕೆ ಸಾಧ್ಯವಾದರೆ ಆ ಸಿಟ್ಟು ಸಮಾಜದ ಕ್ಷುದ್ರತೇನ ಸುಟ್ಟೀತು ಅಲ್ವ? ಆ ಆಸೆ ಇನ್ನೂ ಉಳ್ಕೊಂಡಿದೆ ." "ಉತ್ಸಾಹಿ ಪ್ರಾಮಾಣಿಕ ರಾಜಕೀಯ ನಾಯಕನೊಬ್ಬನು ಭ್ರಷ್ಟ ರಾಜಕಾರಣದ ಬಲೆಯಲ್ಲಿ ಸಿಲುಕಿ ಸೋಲುವ ಕಥೆ, ರೈತ ಚಳುವಳಿಯ ರಾಜಕಾರಣದ ಸೋಲಿನ ಕಥೆ."[೩] ಆದರ್ಶ ವ್ಯಕ್ತಿತ್ವವನ್ನು ರೂಢಿಸಿಕೊಂಡ ಕೃಷ್ಣಪ್ಪನು ಪ್ರಾಮಾಣಿಕತೆಗೆ ಬೆಲೆ ಕೊಡುತ್ತಿದ್ದನು. ವಾಸ್ತವದಲ್ಲಿ ನಿಷ್ಠುರವಾಗಿ ನಿರ್ಣಯವನ್ನು ಕೈಗೊಳ್ಳುತ್ತಿದ್ದ ಅವನು ತನ್ನ ಪಕ್ಷದಲ್ಲಿ ಅನ್ಯಾಯ ಕಂಡುಬಂದಾಗ ರಾಜೀನಾಮೆ ಕೊಡುತ್ತಾನೆ. ಕೃಷ್ಣಪ್ಪನ ಆದರ್ಶ ಗುಣಗಳಿಗೂ ವಾಸ್ತವ ಸಮಾಜದ ವ್ಯವಸ್ಥೆಗೂ ಹೊಂದಾಣಿಕೆಯಾಗದಿದ್ದಾಗ ಸಂಘರ್ಷವೇರ್ಪಡುತ್ತದೆ.

'ದಿವ್ಯ'ಕಾದಂಬರಿಯಲ್ಲಿ ಗಾಂಧೀಜಿಯ ಆದರ್ಶ ವಿಚಾರಗಳಲ್ಲಿ ನಂಬಿಕೆ ಇರುವ ಮಂಜಯ್ಯನು ಹರಿಜನೋದ್ಧಾರ ಹಾಗೂ ಸಮಾಜ ಸೇವಾಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾನೆ. ತನ್ನ ವರ್ಗದ ತನ್ನ ಜಾತಿಯ ಸಮುದಾಯದ ಕಡೆಯಿಂದ ಆಗಾಗ ಎದುರಾಗುವ ಸಂಘರ್ಷಗಳೂ ಅವನ ರಾಜಕೀಯ ಮುತ್ಸದ್ಧಿತನದಿಂದ ಮತ್ತು ಅವನ ಮನಸ್ಸಿನಿಂದ ಪ್ರಭಾವದಿಂದ ಸಲೀಸಾಗಿ ಪರಿಹಾರವಾಗುತ್ತಿದ್ದವು. ಆದರೆ ಬದುಕಿನಲ್ಲಿ ಉನ್ನತ ಶಿಖರದಲ್ಲಿ ನಿಂತ ಮಂಜಯ್ಯ ಆದರ್ಶಮೀರಿ ಕೊಲೆ ಕೇಸಿನಲ್ಲಿ ಸಾಕ್ಷ್ಯದ ಮೂಲಕ ಗಣಪಯ್ಯನ ಪರವಾಗಿ ನಿಂತಿದ್ದರಿಂದ ವಾಸ್ತವದಲ್ಲಿ ಮಂಜಯ್ಯನ ನೈತಿಕ ಪತನವಾಗುತ್ತದೆ. ರಸಿಕತೆಯ ಕಾರಣದಿಂದ ಗುಪ್ತರೋಗಿಯಾಗುತ್ತಾನೆ. ಜಗತ್ತಿನ ಎಲ್ಲಾ ಇಸಂಗಳು ಕೇಶವ, ಪುಟ್ಟೇಗೌಡನ ಮಾತಿನಲ್ಲಿ ಘನಶಾಮ ಮಂಜಯ್ಯನ ವ್ಯಕ್ತಿತ್ವ ಗಾಂಧಿವಾದ, ಸಮಾಜವಾದ, ಮಾರ್ಕ್ಸ್ ಹಾಗೂ ದೇಸೀವಾದ ಬ್ರಾಹ್ಮಣ ಜಾತಿ ಆಧ್ಯಾತ್ಮ ಸ್ಮೃತಿ ಪುರಾಣ ಸಂಪ್ರದಾಯ ಮತ್ತು ಆಧುನಿಕ ವಿಚಾರ ಎಲ್ಲಾ ವಿಷಯಗಳು ಹಾದುಹೋಗುತ್ತವೆ.

ಪುಟ್ಟೇಗೌಡ ಕೇಶವನ ಆತ್ಮೀಯ ಗೆಳೆಯನಾಗಿದ್ದಾನೆ. ಇವನು ಗೇಣೀದಾರರ ಸಂಘಗಳಲ್ಲಿ ಸಮಾಜವಾದಿ ಚಳುವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಅವರ ಹೋರಾಟಗಳನ್ನು ಬೆಂಬಲಿಸಿ ಜೈಲಿಗೂ ಹೋಗಿ ಬಂದಿರುತ್ತಾನೆ. ಕೃಷ್ಣಶಾಸ್ತ್ರಿ ಪರಿಸರ ಉಳಿಸಿ ಹೋರಾಟದಲ್ಲಿ ಭಾಗವಹಿಸುತ್ತಾನೆ. ಗಣಪಯ್ಯ ಗೇಣೀದಾರರ ಪರವಾಗಿದ್ದಾನೆ. ಮಂಜಯ್ಯ ಭೂಮಾಲಿಕನಾಗಿದ್ದು ಗಾಂಧೀಜಿಯವರ ಜೊತೆ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಇವನು ಗಾಂಧಿ ಹಾಗೂ ನೆಹರೂ ವಿಚಾರಗಳಿಂದ ಪ್ರಭಾವಿತನಾಗಿದ್ದರೂ ತನ್ನ ಆಸ್ತಿ ಕಾಪಾಡಿಕೊಳ್ಳುತ್ತಾನೆ.

[illegible]

[illegible]

[illegible]

[illegible]

ಮಂಜಯ್ಯನ ಮಗ ಘನಶ್ಯಾಮನು ರಾಜಕೀಯ ಮಹಾತ್ವಾಕಾಂಕ್ಷೆ ಯುಳ್ಳವನಾಗಿದ್ದಾನೆ. ತಂದೆ ಸತ್ತೊಡನೆ ಆಸ್ತಿಯಲ್ಲಿ ಐದ್ನೈದೆಕರೆ ಜಮೀನನ್ನು ತಂಗಿ ಹಾಗೂ ಮಲತಂಗಿಗೆ ಕೊಟ್ಟು ಉಳಿದಿದ್ದನ್ನು ಹಳ್ಳಿಯ ಅಭಿವೃದ್ಧಿಗೆ ಟ್ರಸ್ಟ್ ಮಾಡಿ ಅದಕ್ಕೆ ದಾನವಾಗಿ ಕೊಟ್ಟು ಪ್ರಚಾರ ಗಿಟ್ಟಿಸಿಕೊಳ್ಳುತ್ತಾನೆ.ರಾಜಕೀಯಕ್ಕಾಗಿಯೇ ಇದನ್ನೆಲ್ಲ ಮಾಡುತ್ತಾನೆ. ಕಾದಂಬರಿಯ ಎರಡನೆಯ ನೆಲೆ ಲೌಕಿಕ ಪ್ರಪಂಚದ ರಾಜಕೀಯಕ್ಕೆ ಸಂಬಂಧಿಸಿದ್ದು. ನೆಲೆಯಿಂದ ನೆಲೆಗೆ ಹೋಗುವಾಗ ರಾಜಕೀಯ ವರ್ಚಸ್ಸು ಧೋರಣೆಗಳ ದ್ವಂದ್ವವಿದೆ. ಗಾಂಧಿ, ನೆಹರುರವರ ಆದರ್ಶ–ವಿಚಾರಗಳಿಂದ ಪ್ರೇರಿತನಾದ ಮಂಜಯ್ಯನು ವಾಸ್ತವ ಬದುಕಿನಲ್ಲಿ ಸಮಯಸಾಧಕನಾಗಿರುತ್ತಾನೆ.

ಸಂಸ್ಕಾರದಲ್ಲಿ ಕಾದಂಬರಿಯಲ್ಲಿ ಒಂದಕ್ಕೊಂದು ಸ್ಪಂದಿಸಲಾರವೆನ್ನುವಷ್ಟು ದೂರದ್ದಲ್ಲಿದ್ದ ಆದರ್ಶ ಮತ್ತು ವಾಸ್ತವಗಳ ನಡುವಿನ ಅಂತರ ಅದರ ಅನಂತರದ ಕಾದಂಬರಿಗಳಲ್ಲಿ ಕಡಿಮೆಯಾಗುತ್ತಾ ಹೋಗುತ್ತದೆ. ಸಂಸ್ಕಾರದ ಪ್ರಾಣೇಶಾಚಾರ್ಯ ನಂಬಿದ ಮೌಲ್ಯಗಳಿಗೆ ಆಧಾರಭೂತವಾದ ಸನಾತನ ಸಂಸ್ಕೃತಿಯಲ್ಲಿ ಅವನಿಗೆ ಗೊತ್ತಿಲ್ಲದೆಯೇ ಮೂಲಭೂತವಾದ ಬದಲಾವಣೆಗಳು ನಡೆದುಹೋಗಿರುತ್ತವೆ. ವಾಸ್ತವದ ಅನುಭವದ ಮೂಲಕ ತಾನು ನಂಬಿಕೊಂಡ ಮೌಲ್ಯಗಳ ಅರ್ಥಹೀನತೆಯನ್ನು ಪ್ರಾಣೇಶಾಚಾರ್ಯ ಕಂಡುಕೊಂಡಾಗ ಅವನ ಅಸ್ಮಿತೆ ಚೇತರಿಸಿಕೊಳ್ಳಲಾರದಂತಹ ಆಘಾತದಿಂದ ಒಡೆದು ಹೋಗುತ್ತದೆ. ಹೊಸ ಮೌಲ್ಯಗಳನ್ನೊಪ್ಪಿಕೊಂಡು ತನ್ನ ಜೀವನಕ್ಕೆ ಅರ್ಥಪೂರ್ಣವಾದ ತಿರುವನ್ನು ಪ್ರಾಣೇಶಾಚಾರ್ಯ ಕೊಡಬಲ್ಲ ಸಾಧ್ಯತೆಗಳನ್ನು ಕಾದಂಬರಿಯ ಕೊನೆಯ ಭಾಗ ಸೂಚಿಸುತ್ತಿದೆಯಾದರೂ ಈ ಆಶಾವಾದಕ್ಕೆ ಭದ್ರವಾದ ನೆಲೆಯಿಲ್ಲ.

ಬುದ್ಧಿಜೀವಿಯಾದ ಭಾರತೀಪುರದ ನಾಯಕ ಜಗನ್ನಾಥ ವೈಚಾರಿಕವಾಗಿ ಈ ಅಂತರವನ್ನು ಅಳಿಸಿಹಾಕಬಲ್ಲ. ಆದರೆ ಅವನ ಆದರ್ಶದ ಕಲ್ಪನೆ ಹಾಗೂ ವಾಸ್ತವದ ಗ್ರಹಿಕೆ ಎರಡೂ ಬೌದ್ಧಿಕ ಪಾತಳಿಯ ಮೇಲೆಯೇ ನಿಲ್ಲುವುದರಿಂದ ಕ್ರಿಯೆಯಲ್ಲಿ ನಿಜವಾಗುವುದು ಅವನಿಗೆ ಸಾಧ್ಯವಾಗುವುದಿಲ್ಲ. ಆದರ್ಶದೊಡನೆ ಅವನ ಒಡನಾಟ ಆತ್ಮರತಿಯ ಪ್ರದರ್ಶನವಾದರೆ, ವಾಸ್ತವದೊಡನೆ ಅವನು ಹೊಂದುವ ಸಂಬಂಧಗಳು ಹಾಸ್ಯಮಯವಾಗುತ್ತವೆ.

ಅವಸ್ಥೆಯಲ್ಲಿ ನಡೆಯುವ ಆದರ್ಶ–ವಾಸ್ತವಗಳ ವಿಚಾರ ಯಶಸ್ವಿಯಾಗಿರುವುದಕ್ಕೆ ಇಲ್ಲಿನ ನಾಯಕನ ಸಮರ್ಪಕ ಆಯ್ಕೆ ಮತ್ತು ಸಮಕಾಲೀನ ಸಾಂಸ್ಕೃತಿಕ ಸಂದರ್ಭದ ಸಂಕೀರ್ಣತೆ ಕಾರಣವಾಗಿದೆ. ಸಂಸ್ಕಾರ ಹಾಗೂ ಭಾರತೀಪುರಗಳ ನಾಯಕರಂತೆ ಬುದ್ಧಿಜೀವಿಯಲ್ಲದ ಕೃಷ್ಣಪ್ಪ ಶ್ರಮಿಕವರ್ಗಕ್ಕೆ ಸೇರಿದವನು. ನೆಲದೊಡನೆ ಗಾಢ ಸಂಬಂಧಗಳನ್ನು ಹೊಂದಿರುವವ. ಹೀಗೆ ವ್ಯವಸ್ಥೆಗಳು ಆಯಾ ಕಾಲದ ಅಗತ್ಯಗಳಿಗಾಗಿ ರೂಪುಗೊಂಡವುಗಳು. ಕಾಲಕಳೆದಂತೆ ವ್ಯವಸ್ಥೆ ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ. ಸಮಕಾಲೀನ ಮಾನವರ ಅಗತ್ಯಗಳಿಗೆ ಹಾಗೂ ಆಸಕ್ತಿಗಳಿಗೆ ಅನುಗುಣವಾಗಿ ವ್ಯವಸ್ಥೆಗಳು ಬದಲಾಗುತ್ತವೆ. ಅಥವಾ ವ್ಯವಸ್ಥೆಗಳಿಗೆ ಒಳಗಾಗಿ ಬದುಕುವುದು ದುಸ್ತರವಾಗುತ್ತದೆ. ಹೀಗೆಲ್ಲಾ ಸಂಘರ್ಷಗಳು ಸಹಜ. ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಅವುಗಳನ್ನು ಸ್ಪಷ್ಟವಾಗಿಯೇ ಪ್ರತಿಪಾದಿಸಿದ್ದಾರೆ.

ವ್ಯವಸ್ಥೆಗಳು ಆಯಾಕಾಲದ ಅಗತ್ಯಗಳಿಗಾಗಿ ರೂಪುಗೊಂಡವುಗಳಾಗಿವೆ. ಕಾಲಕಳೆದಂತೆ ವ್ಯವಸ್ಥೆ ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ. ಸಮಕಾಲೀನ ಮಾನವರ ಅಗತ್ಯಗಳಿಗೆ ಹಾಗೂ ಆಸಕ್ತಿಗಳಿಗೆ ಅನುಗುಣವಾಗಿ ವ್ಯವಸ್ಥೆಗಳು ಬದಲಾಗುತ್ತವೆ. ಅಥವಾ ವ್ಯವಸ್ಥೆಗಳಿಗೊಳಗಾಗಿ ಬದುಕುವುದು ದುಸ್ತರವಾಗುತ್ತದೆ. ಇಂತಹ

ಸಂದರ್ಭದಲ್ಲಿ ಸಂಘರ್ಷಗಳು ಸಹಜ. ಅನಂತಮೂರ್ತಿಯವರು ಕಥಾಸಾಹಿತ್ಯದಲ್ಲಿ ಅವುಗಳನ್ನು ಸೂಕ್ಷ್ಮವಾಗಿ ಪ್ರತಿಪಾದಿಸಿದ್ದಾರೆ.

೩.೨ ಸಾಂಕೇತಿಕತೆ ಮತ್ತು ವಾಸ್ತವಿಕತೆ

ನವ್ಯರು ದ್ವಂದ್ವ ಪ್ರವೃತ್ತಿಗಳನ್ನು ಕಥಾ ಸಾಹಿತ್ಯದಲ್ಲಿ ತರುವ ಸಾಧ್ಯತೆಗಾಗಿ ಕಾವ್ಯದ ಕಾವನ್ನು ಉಳಿಸಿಕೊಂಡ ಗದ್ಯವನ್ನು ಉಪಯೋಗಿಸಿದರು. ಮಾನಸಿಕ ಅನುಭವವನ್ನು ಸಂಪೂರ್ಣವಾಗಿ ಅರ್ಥೈಸುವ ಸಾಮರ್ಥ್ಯ ಸಂಕೇತಗಳಿಗಿರುವುದನ್ನು ನವ್ಯರು ಮನಗಂಡರು. ಕಾವ್ಯದಲ್ಲಿ ಸಂಕೇತಗಳು ಅರ್ಥವನ್ನು ಧ್ವನಿಸಿದಂತೆ ಕಥಾ ಸಾಹಿತ್ಯದಲ್ಲೂ ಅವುಗಳ ಬಳಕೆ ಸೂಕ್ತವೆಂದುಕೊಂಡರು. ಸಾಂಕೇತಿಕತೆಯು ಧ್ವನಿಸುವ ಅರ್ಥಗಳು ವಾಸ್ತವಕ್ಕೆ ಧಕ್ಕೆಯಾಗದಂತೆ ಕತೆಯ ಒಂದು ಭಾಗವಾಗಿ ಮಾತ್ರ ಬಳಸಲಾಯಿತು. ನವ್ಯರಿಗೆ "ಮಾನಸಿಕ ವ್ಯಾಪಾರಗಳ ಸೂಕ್ಷ್ಮ ವಿಷಯಗಳನ್ನೆಲ್ಲ ಬೆದಕಿನೋಡಿ, ಅವುಗಳಿಗೆ ಮೂರ್ತ ಸ್ವರೂಪ ಕೊಡುವುದಕ್ಕೆ ಸಂಕೇತಗಳು ಅವಶ್ಯವಾದವು."[೪] ಕಥಾವಸ್ತುವಿನೊಡನೆ ನಿರೂಪಕನ ತಾದ್ಯಾತ್ಮ ತೀವ್ರವಾದಂತೆಲ್ಲ ನಿರೂಪಣೆಯಲ್ಲಿ ಕಾವ್ಯಾತ್ಮಕತೆ ಮತ್ತು ಚಿತ್ರಕಗುಣ ಹೆಚ್ಚು ಸ್ಪಷ್ಟವಾಗುತ್ತದೆ.

ಸಂಸ್ಕೃತಿಯ ಅನೇಕ ವಾಸ್ತವ ವಿವರಗಳನ್ನು ಧ್ವನಿಪೂರ್ಣವಾಗಿಯೇ, ವಾಚ್ಯವಾಗಿಯೇ ಹೇಳುವುದು ಅಶಕ್ಯವೆನಿಸಿದಾಗ ಸಂಕೇತವನ್ನು ಬಳಸುವುದು ರೂಢಿ. ಸಂಕೇತಗಳು ಸಂಸ್ಕೃತಿಯ ನೆಲೆಗಟ್ಟಿನ ಮೇಲೆಯೇ ಅರ್ಥವತ್ತಾಗುತ್ತವೆ. ಆಗ ಸಂಘರ್ಷ ನೇರವಾಗಿ ಗರಿಗೊಳ್ಳದೇ ಸಭ್ಯತೆಯ ಸ್ತರದಲ್ಲಿಯೇ ಧ್ವನಿ ವ್ಯಾಪ್ತಗೊಳ್ಳುತ್ತದೆ. ಅನಂತಮೂರ್ತಿಯವರ ಕಥಾಸಾಹಿತ್ಯದ ಸಂದರ್ಭದಲ್ಲಿಯೂ ಸಂಕೇತಗಳನ್ನು ಈ ಹಿನ್ನೆಲೆಯಲ್ಲಿ ಪರಿಭಾವಿಸಬಹುದು.

ವ್ಯಕ್ತಿ ಮಾನಸಿಕವಾಗಿ ಅನುಭವಿಸುವ ಸೂಕ್ಷ್ಮ ವಿಚಾರಗಳನ್ನು ಸಂಕೇತಿಸಲು ಅನಂತಮೂರ್ತಿಯವರು ಲೌಕಿಕ ವಸ್ತುಗಳನ್ನು ಬಳಸಿದರು. ಹುಲಿ, ಹಾವು, ಪ್ರವಾಹ, ಸೂರ್ಯನ ಕುದುರೆ ಹಾಗೂ ಪ್ರಕೃತಿಗಳನ್ನು ಸಂಕೇತಗಳಾಗಿ ಬಳಸಿಕೊಂಡರೂ ಹುಲಿ ಹೆಚ್ಚಾಗಿ ಬಳಕೆಯಾಗಿದೆ. ಇವರ ಕಥಾ ಸಾಹಿತ್ಯದಲ್ಲಿ ಸಂಕೀರ್ಣ ಪ್ರತಿಮೆಯಾಗಿ ಬಳಕೆಯಾದ ಹುಲಿ ಭೌತಿಕ ವಿವರವಾಗಿ ಬರುವುದರ ಜೊತೆಗೆ ಒಂದು ಪರಿಸರದ ವಿವರವಾಗಿಯೂ ಬಂದಿದೆ. ಹುಲಿಯ ಮೇಲೆ ನಿಯಂತ್ರಣವಿಲ್ಲದ ಮನುಷ್ಯ ಅದನ್ನು ಅನಿವಾರ್ಯವಾಗಿ ಎದುರಿಸಬೇಕಾಗುತ್ತದೆ. ಮನುಷ್ಯನ ಶಕ್ತಿ ಸಂಯಮಗಳಿಗೆ ಮೀರಿದ ಅಂಶವಾಗಿ ಕಾಣಿಸಿಕೊಳ್ಳುವ ಹುಲಿ ಅದಮ್ಯ ಶಕ್ತಿಗೆ ಸಂಕೇತವಾಗಿ ಬಳಕೆಯಾಗಿದೆ. ಹುಲಿ ಕೆಲವೊಮ್ಮೆ ಕತೆಗಳಲ್ಲಿನ ಪಾತ್ರವಾಗಿಯೂ ಕಾಣಿಸಿಕೊಂಡಿದೆ.

ಹುಲಿಗೆ ಸಿಕ್ಕುವುದೆಂದರೆ ಪ್ರಕೃತಿಯ ಅದಮ್ಯ ಸೆಳೆತಕ್ಕೆ ಸಿಕ್ಕಂತೆಯೇ ಸರಿ. ಹೀಗಾಗಿ ಮನುಷ್ಯನ ಮೂಲ ಪ್ರಕೃತಿಗಳಿಗೂ ಕೆಲವೊಮ್ಮೆ ಸಂವಾದಿಯಾಗಿ ಹುಲಿಕಾಣಿಸಿಕೊಳ್ಳುತ್ತದೆ. ಅನಂತಮೂರ್ತಿಯವರು ಹುಲಿ ಯನ್ನು ಸಾಂಕೇತಿಕವಾಗಿ ಬಳಸಿದ್ದಾರೆ. ಈ ಹುಲಿ ಕೇವಲ ಭೌತಿಕ ವಿವರವಾಗಿ ಬರುವುದಿಲ್ಲ. ಬಹುತೇಕ ಒಂದು ಪರಿಸರದ ವಿವರವಾಗಿ, ಕೆಲವೂಮ್ಮೆ ಒಂದು ಪಾತ್ರವಾಗಿಯೂ ಅದು ಕಾಣಿಸಿಕೊಳ್ಳುತ್ತದೆ.

ಭೌತಿಕ ವಿವರದಲ್ಲಿ ಹುಲಿ ಒಂದು ಸಂಕೀರ್ಣ ಪ್ರತಿಮೆಯಾಗಿ ಬಳಕೆಯಾಗಿದೆ. ಹುಲಿ ಇಲ್ಲಿನ ಕತೆಗಳಲ್ಲಿ ಅದಮ್ಯವಾದ ಶಕ್ತಿಗೆ ಸಂಕೇತವಾಗಿದೆ. ಮನುಷ್ಯನ ಶಕ್ತಿ ಸಂಯಮಗಳಿಗೆ ಅತೀತವಾಗಿ ಅವನನ್ನು ಆವರಿಸುವ ಅಂಶವಾಗಿ ಚಿತ್ರಿಸಲ್ಪಟ್ಟಿದೆ. ಅದರ ಮೇಲೆ ನಿಯಂತ್ರಣವಿಲ್ಲದ ಮನುಷ್ಯ ಅದನ್ನು ಎದುರಿಸುವ ಪ್ರಯತ್ನ ಮಾಡಬಹುದಾಗಿದೆ. ಹಾಗಾಗಿ ಹುಲಿಗೆ ಸಿಕ್ಕುವುದೆಂದರೆ ಪ್ರಕೃತಿಯ ಅದಮ್ಯ ಸೆಳೆತಕ್ಕೆ ಸಿಕ್ಕಂತೆಯೇಸರಿ. ಹೀಗಾಗಿ ಮನುಷ್ಯನ ಮೂಲ ಪ್ರಕೃತಿಗಳಿಗೂ ಕೆಲವೂಮ್ಮೆ ಸಂವಾದಿಯಾಗಿ ಹುಲಿ ಕಾಣಿಸಿಕೊಳ್ಳುತ್ತದೆ.

'ಘಟಶ್ರಾದ್ಧ' ಕತೆಯಲ್ಲಿ ಹಾವು ಯಮುನಕ್ಕನ ಸಂದಿಗ್ಧ ಸ್ಥಿತಿಗೆ ಸಾಂಕೇತಿಕವಾಗಿ ಬಂದಿದೆ. ಅಕ್ರಮ ಬಸಿರಿಗೆ ಕಾರಣನಾದ ಶಿಕ್ಷಕನನ್ನು ಗುಟ್ಟಾಗಿ ಸಂಧಿಸಲು ಹೋಗುವ ಯಮುನಕ್ಕನ ಗುಪ್ತ ವಿಚಾರವನ್ನು ತೋರಿಸಲು ಶಾಸ್ತ್ರಿ, ಗಣೇಶ ಇವರಿಬ್ಬರೂ ಸೇರಿ ನಾಣಿಯನ್ನು ಕರೆದುಕೊಂಡು ಹೋಗುತ್ತಾರೆ. ಹಾಳುಬಿದ್ದ ಅಗ್ರಹಾರದಲ್ಲಿ ಬರುವ ಹಾವಿನ ಪ್ರಸಂಗವು ಯಮುನಕ್ಕ ಹಾಗೂ ಶಿಕ್ಷಕನ ನಡುವಿನ ಸಂಬಂಧವನ್ನು ಪ್ರತಿಬಿಂಬಿಸುತ್ತದೆ.

ಹೊರಗಿನ ಬಿರುಕಿನಿಂದ ನೋಡುತ್ತಾ ಕುಳಿತ ನಾಣಿಗೆ ಹಾವು ನಿಧಾನವಾಗಿ ಹರಿಯುವುದು ಕಾಣಿಸುತ್ತದೆ. ಯಮುನಕ್ಕನ ಕಡೆಗೆ ಅದು ಹರಿದರೂ ಅವಳು ಅದನ್ನು ಗಮನಿಸುವುದಿಲ್ಲ. ಅವರಿಬ್ಬರ ನಡುವಿನ ಸಂಭಾಷಣೆಯನ್ನು ಮತ್ತು ಹಾವು ಕಲ್ಲು ಚಪ್ಪಡಿಯಲ್ಲಿ ಹೋಗಿ ಬಂದದ್ದನ್ನು ನಾಣಿ, ಶಾಸ್ತ್ರಿ ಹಾಗೂ ಗಣೇಶ ಗಮನಿಸುತ್ತಾರೆ. ಕಲ್ಲು ಚಪ್ಪಡಿಯ ಸಂಧಿಯಲ್ಲಿ ಹಾವಿಗೆ ಜಾಗ ಸಾಕಾಗದ ಕಾರಣ ಹೊರಗೆ ಬರುತ್ತದೆ. ಮೋಡದಿಂದ ತೂರಿಕೊಂಡು ಹೊರಗೆ ಬಂದ ಸಂಜೆಯ ಸೂರ್ಯನ ಬೆಳಕಿನಲ್ಲಿ ಹಾವು ಪಳಪಳ ಹೊಳೆಯುತ್ತಿತ್ತು. ಅನಂತರ ಹಾವಿಗೆ ಕಲ್ಲೆಸೆದಾಗ ಇವರನ್ನು ಹಿಂಬಾಲಿಸಿ ಹಾವು ಮಾಯವಾಗುತ್ತದೆ. ಈ ಹಾವಿನ ಪ್ರಸ್ತಾಪವು ಯಮುನಕ್ಕನ ಸಂದಿಗ್ಧ ಪರಿಸ್ಥಿತಿಗೆ ಸಂಕೇತವಾಗಿ ಬಂದಿದೆ.

"ಘಟಶ್ರಾದ್ಧ ದಲ್ಲಿ ಇಷ್ಟೇ ಶಕ್ತಿಪೂರ್ಣವಾದ ಆದರೆ ಇನ್ನೂ ನಿರ್ದಿಷ್ಟವಾದ ಸಾಂಕೇತಿಕತೆಯಿದೆ. ನಾಣಿ ಮತ್ತು ಶಾಸ್ತ್ರಿಯ ಸಂಬಂಧದ ಘಟನೆಗಳು ಯಮುನಕ್ಕ ಮತ್ತು ಮೇಷ್ಟ್ರರ ಸಂಬಂಧದ ಮುಖ್ಯ ವೃತ್ತಕ್ಕೆ ಸಾಂಕೇತಿಕ ಕಥನವಾಗುತ್ತದೆ."[೫] ಅನೈತಿಕ ಸಂಬಂಧದಿಂದಾಗುವ ಅವಮಾನವನ್ನು ಸಹಿಸದ ಯಮುನಕ್ಕ ವಾಸ್ತವದಲ್ಲಿ ಗರ್ಭಪಾತ ಮಾಡಿಸಿಕೊಳ್ಳುತ್ತಾಳೆ. ದುಷ್ಟಟಗಳಿಗೆ ಬಲಿಯಾದ ಶಾಸ್ತ್ರಿ ಮತ್ತು ಗಣೇಶ, ತಮ್ಮ ತಪ್ಪನ್ನು ತಿದ್ದಿಕೊಳ್ಳಲು ಯತ್ನಿಸುವುದಿಲ್ಲ. ಆದರೆ ಯಮುನಕ್ಕ ಹಾಗೂ ಶಿಕ್ಷಕನ ನಡುವಿನ ರಹಸ್ಯ ಸಂಬಂಧವು ನಾಣಿಗೆ ತಿಳಿಸುವ ಪ್ರಯತ್ನ ಮಾಡುತ್ತಾರೆ. ಯಮುನಕ್ಕನ ಅನೈತಿಕ ಸಂಬಂಧದ ಗುಟ್ಟಿನ ವಿಚಾರವು ರಟ್ಟಾದಾಗ ಸಮಾಜವು ಅವಳಿಗೆ ಬಹಿಷ್ಕಾರವನ್ನು ಹಾಕುತ್ತದೆ.

'ತಾಯಿ' ಕತೆಯ ಅಬ್ಬಕ್ಕ ಗಂಡನನ್ನು ಕಳೆದುಕೊಂಡ ಮೇಲೆ ಇದ್ದ ಒಬ್ಬನೇ ಮಗ ಚೆಲುವನನ್ನು ಹದಿಮೂರು ವರ್ಷಗಳವರೆಗೆ ಕೂಲಿ ಮಾಡಿ ಅಕ್ಕರೆಯಿಂದ ಸಾಕುತ್ತಾಳೆ. ಅಬ್ಬಕ್ಕನಿಗೆ ಬೇರೆಯವನೊಂದಿಗೆ ಆಕಸ್ಮಿಕವಾಗಿ ಕೂಡಿಕೆ ಮಾಡಿಕೊಳ್ಳುವ ಸಂದರ್ಭ ಒದಗಿ ಬರುತ್ತದೆ. ಕೂಡಿಕೆಯನ್ನು ವಿರೋಧಿಸಿ ಚೆಲುವ ಮನೆಬಿಟ್ಟು ಹೋಗುತ್ತಾನೆ. ಬೇರೆಯವರ ಮಾತನ್ನು ಕೇಳಿ ಚೆಲುವ ತನಗೆ ತಿರುಗಿಬಿದ್ದನಲ್ಲ ಎಂದು ಅಬ್ಬಕ್ಕ ಯೋಚಿಸುತ್ತಾಳೆ. ಮನೆಬಿಟ್ಟು ಹೋಗುವ ಚೆಲುವನನ್ನು ಅಬ್ಬಕ್ಕ ತಡೆಯುವುದಿಲ್ಲ. ಒಲಿದವನು ರಸಿಕ ಹಾಗೂ ಸಭ್ಯನಾಗಿದ್ದಾನೆ. ಅವಳಿಗೆ ಮಗನೂ ಬೇಕು ಒಲಿದವನೂ ಬೇಕು. ಕೂಡಿಕೆಯನ್ನು ಚೆಲುವ ವಿರೋಧಿಸಿದಾಗ

[illegible]

[illegible]

[illegible]

[illegible]

[illegible]

[illegible]

ಸೀತು ಮಾಡಿಕೊಂಡಿಲ್ಲವೆ? ಎಂದು ಇತರರ ನಿದರ್ಶನಗಳನ್ನು ನೀಡಿ ತನ್ನನ್ನು ತಾನು ಸಮರ್ಥಿಸಿಕೊಳ್ಳುತ್ತಾಳೆ. ಕೂಡಿಕೆ ಮಾಡಿಕೊಂಡವನ ಜೊತೆ ಜೀವನ ನಡೆಸುತ್ತಾಳೆ.

ಕೂಡಿಕೆಯ ನಂತರ ಜನಿಸಿದ ಸೀನನಿಗೆ ಕತೆಯ ರೂಪದಲ್ಲಿ ತನ್ನ ಕಥೆಯನ್ನೇ ಅಬ್ಬಕ್ಕ ಹೇಳುತ್ತಾಳೆ. ಕೂಡಿಕೆಯು ಮಗನ ಅಗಲಿಕೆಗೆ ಕಾರಣವಾಯಿತೆಂದು ದುಃಖಿಸುವ ತಾಯಿ ಮಮತೆ ಒಂದು ಕಡೆಯಾದರೆ, ತನ್ನನ್ನು ಒಲಿದವನು ಸಭ್ಯನಾಗಿದ್ದಾನೆಂದು ಚಿಂತಿಸುವ ಮನಸ್ಥಿತಿ ಇನ್ನೊಂದು ಕಡೆಗಿದೆ. ಅಬ್ಬಕ್ಕನ ಮನಸ್ಸಿನ ಹೊಯ್ದಾಟವು ಸಂಕೀರ್ಣತೆಯನ್ನು ಹುಟ್ಟು ಹಾಕುತ್ತದೆ.

ತನ್ನ ಅವಸರದ ನಿರ್ಧಾರದಿಂದಾಗಿ ಮಗನನ್ನು ಕಳೆದುಕೊಂಡೆ ಎಂದು ಕೊರಗುವ ಅಬ್ಬಕ್ಕ, ಕೂಡಿಕೆ ಮಾಡಿಕೊಂಡವನ ಒಳ್ಳೆಯತನವನ್ನು ಮೆಚ್ಚುತ್ತಾಳೆ. ಇವೆರಡರ ನಡುವಿನ ಇಬ್ಬಂದಿತನಕ್ಕೆ ಹುಲಿ ಸಂಕೇತವಾಗಿ ಬಂದಿದೆ. ಮಗುವನ್ನು ಹುಲಿ ಹಿಡಿಯಿತು ಎಂದು ಹೇಳುವ ತಾಯಿಯೂ ಇಲ್ಲಿ ಹುಲಿಗೆ ಸಿಕ್ಕಿದ್ದಾಳೆ. ಹುಲಿ ಸುಂದರ ಇಲ್ಲವೆ ಕ್ರೂರ ಈ ಎರಡೂ ಅಲ್ಲ. ಇದೊಂದು ಪ್ರಾಕೃತಿಕ ಸ್ಥಿತಿಯ ಸಂಕೇತವಾಗಿ ಬಳಕೆಯಾಗಿದೆ. ದುಡುಕಿ ಮೋಹಪರವಶಳಾಗಿ ತಪ್ಪುಮಾಡಿದ ನಾನು ಯೌವನದಲ್ಲಿ ರಸಿಕನೊಬ್ಬನಿಗಾಗಿ ಎಲ್ಲ ಮರೆತುಬಿಟ್ಟೆ. "ತಾನು ಪಾಪಿಯೇ, ಸೂಳೆಯ ಹಾಗೆ ನಡೆದುಕೊಂಡೆನೆ?" ಎಂದು ಚೆಲುವನ ನೆನಪಾದಾಗಲೆಲ್ಲ ಅಬ್ಬಕ್ಕನ ಮನಸ್ಸಿನಲ್ಲಿ ಮೂಡಿದ ಭಾವನೆಗಳು ವಾಸ್ತವಿಕ ವಿವರಗಳಾಗಿ ಬರುತ್ತವೆ.

'ಪ್ರಶ್ನೆ' ಕತೆಯಲ್ಲಿ ಸಾಂಕೇತಿಕವಾಗಿ ಹುಲಿಯ ಪ್ರಸ್ತಾಪವು ಬರುತ್ತದೆ.ಒಂದು ಸಂಜೆ ಶಾರದೆ ನೀರು ಸೇದುತ್ತಿದ್ದಾಗ ಹುಲಿ ಕೂಗಿದಂತೆ ಕೇಳಿಸುತ್ತದೆ. ಅದು ನಿಜವೆ ಅಥವ ಮನಸ್ಸಿನ ಭ್ರಮೆಯೊ ಎಂದು ಗೊಂದಲದಲ್ಲಿದ್ದ ಶಾರದೆಗೆ ನಂತರ ಇದ್ದರೂ ಇರಬಹುದು ಗಾಯವಾದ ಹುಲಿಯೊಂದು ಬಂದು ನಮ್ಮ ಕಾನು ಸೇರಿದ ಬಗೆಗೆ ಕೊರಗ ಹೇಳಿದ್ದು ನೆನಪಾಗುತ್ತದೆ.

ರಂಗನಿಗೆ ಶಾರದೆಯ ಮೇಲಿರುವ ಪ್ರೀತಿ ಅದನ್ನು ಅವಳು ನಿರಾಕರಿಸುವ ರೀತಿ ವಾಸ್ತವಿಕತೆಯನ್ನು ಬಿಂಬಿಸುತ್ತದೆ. ಹುಲಿಯ ಪ್ರಸ್ತಾಪ ಸಾಂಕೇತಿಕತೆಯನ್ನು ಬಿಂಬಿಸುತ್ತದೆ. ಮಲೆನಾಡಿಗರ ಜೀವನದಲ್ಲಿ ಉಳಿದೆಲ್ಲ ವಿವರಗಳ ಹಾಗೆ ಹುಲಿಯ ಪ್ರಸ್ತಾಪ ಮತ್ತೆ ಮತ್ತೆ ಬರುತ್ತದೆ. ಮಲೆನಾಡಿಗರಿಗೆ ಈ ಹುಲಿಯು ಅನಿವಾರ್ಯವಾಗಿ ಎದುರಿಸಲೇಬೇಕಾದ ಸವಾಲಾಗಿದೆ. "ಶಂಕರಯ್ಯನ ದೃಷ್ಟಿಯಿಂದ ಶಾರದೆಯನ್ನು ಅಪಹರಿಸಿಕೊಂಡು ಹೋಗಬಹುದಾದ ರಂಗ ಹುಲಿ. ಶಂಕರಯ್ಯನ ಹಿಡಿತದಿಂದ ಶಾರದೆಯನ್ನು ಪಾರು ಮಾಡುತ್ತೇನೆ ಎಂದು ಕೊಳ್ಳುವ ರಂಗನಿಗೆ ಶಂಕರಯ್ಯನೇ ಹುಲಿ. ಶಾರದೆಗೆ ಇವರಿಬ್ಬರೂ ಅತ್ತದರಿ ಇತ್ತಪುಲಿ"[೬] ಎಂಬ ಸಂಗತಿಯು ಕತೆಯಲ್ಲಿನ ಸಾಂಕೇತಿಕತೆಯನ್ನು ಪ್ರತಿಬಿಂಬಿಸುತ್ತದೆ.

ವಾಸ್ತವವಾಗಿ ಶಂಕರಯ್ಯ-ರಂಗ-ಶಾರದೆ ಮುಖಾಮುಖಿಯಾಗುವುದರಲ್ಲಿ ಸಂಘರ್ಷವಿದೆ. ಒಬ್ಬರ ಪರಿಸ್ಥಿತಿಯನ್ನು ಇನ್ನೊಬ್ಬರು ಅರ್ಥಮಾಡಿಕೊಳ್ಳುವುದಿಲ್ಲ. ಶಂಕರಯ್ಯನಿಗೆ ರಂಗನು ನಿರನುಭವಿಯಾಗಿ ಕಂಡರೆ ರಂಗನಿಗೆ ಶಂಕರಯ್ಯನು ಹಳೆಯ ಕಾಲದ ಗೊಡ್ಡು ನಂಬಿಕೆಯ ಪ್ರತೀಕವೆನಿಸುತ್ತಾನೆ. ಶಾರದೆ ಇವರಿಬ್ಬರ ನಡುವೆ ಗೊಂದಲಕ್ಕೆ ಒಳಗಾದರೂ ಸಂಪ್ರದಾಯದ ಕಡೆಯೇ ವಾಲುತ್ತಾಳೆ. ರಂಗನಿಗೆ ಅವಳೊಂದು ದೊಡ್ಡ ಪ್ರಶ್ನೆಯಾಗಿ ಕಾಣುತ್ತಾಳೆ. ರಂಗನಾಥನು ಶಾರದೆಯನ್ನು ಪ್ರೀತಿಸುತ್ತಾನೆ. ರಂಗನು ಶಾರದೆಯನ್ನು ಮದುವೆಯಾಗಬೇಕಾದಾಗ

ಹಲವಾರು ಅಡ್ಡಿ ಆತಂಕಗಳು ಎದುರಾಗುತ್ತವೆ. ಸಾಕಿ ಬೆಳೆಸಿದ ಶಂಕರಯ್ಯನನ್ನು ಒಂಟಿಯಾಗಿ ಬಿಟ್ಟು ಶಾರದೆ ರಂಗನಾಥನೊಡನೆ ಹೋಗಲು ಇಷ್ಟಪಡುವುದಿಲ್ಲ. ಶಾರದೆಯ ಸಲುವಾಗಿ ರಂಗನಾಥ ಹಳ್ಳಿಯಲ್ಲಿರಲು ಒಪ್ಪುವುದಿಲ್ಲ. ಇವರಿಗೆ ಭವಿಷ್ಯದ ಬದುಕನ್ನು ಕುರಿತು ಖಚಿತವಾದ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದಿಲ್ಲ.

"ವಾಸ್ತವ ಹಾಗೂ ಸಾಂಕೇತಿಕ ಪಾತಳಿಗಳ ಮೇಲೆ ಏಕಕಾಲಕ್ಕೆ ಕ್ರಿಯಾಶೀಲವಾಗುವ ಮೂಲಕ ಪ್ರಶ್ನೆ ತನ್ನ ಶಕ್ತಿ ವೈಶಿಷ್ಟ್ಯಗಳನ್ನು ಗಳಿಸಿಕೊಳ್ಳುತ್ತದೆ. ವಾಸ್ತವದ ನೆಲೆಯಲ್ಲಿ ಕತೆ ಒಂದು ಖಚಿತವಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂದರ್ಭದಲ್ಲಿ ನಂಬಲರ್ಹವಾದ ಮನುಷ್ಯ ಸಂಬಂಧಗಳ ಸನ್ನಿವೇಶವನ್ನು ಸೃಷ್ಟಿಸುತ್ತದೆ."[೭] ಇಲ್ಲಿನ ಪಾತ್ರಗಳು ನಿರ್ಧಾರ ತೆಗೆದುಕೊಳ್ಳುವಾಗಿನ ಗೊಂದಲಕ್ಕೆ ಸಂಕೇತವಾಗಿ ಹುಲಿ ಬಂದಿದೆ.

'ಪ್ರಕೃತಿ' ಕತೆಯಲ್ಲಿ ಲೇಖಕರು ಸಾಂಕೇತಿಕತೆ ಮತ್ತು ವಾಸ್ತವಿಕತೆಯನ್ನು ಒಟ್ಟಿಗೆ ತರುವ ಪ್ರಯತ್ನ ಮಾಡಿದ್ದಾರೆ. ಸಂಕಪ್ಪಯ್ಯ ಹುಲಿಯನ್ನು ಎದುರಾಗುವ ಸಂದರ್ಭವನ್ನು ಗಮನಿಸಿದಾಗ ಈ ಸಂಗತಿಯು ಸ್ಪಷ್ಟವಾಗುತ್ತದೆ. ತನ್ನವರು ಎನಿಸಿಕೊಂಡ ಒಬ್ಬರು ಇಲ್ಲದಿದ್ದರೂ ಒಂಟಿಯಾಗಿ ಕಾಲ ಕಳೆಯುತ್ತೇನೆ ಎಂಬ ಆತ್ಮವಿಶ್ವಾಸ ಸಂಕಪ್ಪಯ್ಯನದು. ಮಗ ಕೋರ್ಟಿಗೆ ಹೋದರೆ ಮನೆತನದ ಮರ್ಯಾದೆ ಹೋಗುತ್ತದೆ ಎಂದು ಸಂಕಪ್ಪಯ್ಯ ಆತಂಕಗೊಳ್ಳುತ್ತಾನೆ.

ಸಾವಿರಾರು ರೂಪಾಯಿಗಳನ್ನು ಸುರಿದು ಕಿತ್ತಳೆಯನ್ನು ಬೆಳೆಯುವ ಸಂಕಪ್ಪಯ್ಯನ ಸತತ ಹೋರಾಟ ವ್ಯರ್ಥವಾಗುತ್ತದೆ. ಪೇಟೆಯಲ್ಲಿ ಹೋಟೆಲಿಡಬೇಕೆಂಬ ಮಗನ ಆಸೆಯನ್ನು ಸೀತಮ್ಮ ಬೆಂಬಲಿಸಿದ್ದಕ್ಕೆ ಸಂಕಪ್ಪಯ್ಯ ಬೇಸರಪಡುತ್ತಾನೆ. ತಂದೆಗೆ ಮಗಳ ಬಗ್ಗೆ ನಂಬಿಕೆ ಬಲವಾಗಿರುತ್ತದೆ. ಆ ನಂಬಿಕೆಯನ್ನು ಲಕ್ಷ್ಮಿ ಹುಸಿಗೊಳಿಸಿದಾಗ ಸಂಕಪ್ಪಯ್ಯನ ಸಂಕಲ್ಪಬಲವು ಸೋಲುತ್ತದೆ. ಹೀಗೆ ಸಂಕಪ್ಪಯ್ಯನಿಗೆ ಸವಾಲಾದ ಹೆಂಡತಿ, ಲಕ್ಷ್ಮಿ, ಮಗ ಹಾಗೂ ತೋಟ ಇಲ್ಲಿ ವಾಸ್ತಾವಿಕ ವಿವರಗಳಾಗಿವೆ. ಹುಲಿ ಸಾಂಕೇತಿಕ ವಿವರವಾಗಿ ಬಂದಿದೆ.

ಆನೆ ಹೊಕ್ಕು ತೋಟವನ್ನು ಧ್ವಂಸ ಮಾಡಿರುವುದು ಸಂಕಪ್ಪಯ್ಯನಿಗೆ ಗೊತ್ತಾದಾಗ ಆತಂಕಗೊಳ್ಳುತ್ತಾನೆ. ಕೂದಲು ಕತ್ತರಿಸಿದ ಮುಂಡೆಯಂತಿದ್ದ ತೋಟವನ್ನು ನೋಡುತ್ತಿದ್ದ ಅವನ ಸುತ್ತ ಸೊನ್ನೆಗಳು, ಮಿಡತೆಗಳಂತೆ ಮುತ್ತಿದ್ದವು. ಈ ಎಲ್ಲ ವಿವರಗಳು ಸಂಕಪ್ಪಯ್ಯನ ಸಂಕಲ್ಪಬಲವನ್ನು ಕುಗ್ಗಿಸುವ ಸಂಕೇತಗಳಾಗಿ ಬರುತ್ತವೆ. ತಾನು ಮಾಡಿದ್ದೆಲ್ಲ ಆಗೇ ಆಗುತ್ತದೆ ಎಂಬ ಅವನ ಹಠ ಪೂರ್ಣಗೊಳ್ಳುವುದಿಲ್ಲ. ಆದರೂ ಆನೆ ನುಗ್ಗುತ್ತದೋ ನುಗ್ಗಲಿ, ಭೂಮಿ ಬಾಯಿಬಿಟ್ಟು ಅಣಕಿಸುತ್ತದೋ ಅಣಕಿಸಲಿ, ಎಂದು ಸಂಕಪ್ಪಯ್ಯ ಧೈರ್ಯ ತಂದುಕೊಳ್ಳುತ್ತಾನೆ. ಅಲ್ಲಿಂದ ಮನೆಗೆ ಬರುವಾಗ ದಾರಿಯಲ್ಲಿ ಮಗಳು ಲಕ್ಷ್ಮಿ ಶಾನುಭೋಗನ ಮಗ ಕಿಟ್ಟನನ್ನು ತಬ್ಬಿಕೊಂಡು ಹಾಯಾಗಿ ಮಲಗಿರುವುದನ್ನು ನೋಡುತ್ತಾನೆ. ದಾರಿ ತಪ್ಪಿದೆನೆ? ಎಂದು ತನ್ನಲ್ಲೇ ತಾನು ಅಂದುಕೊಳ್ಳುತ್ತಾನೆ. ತನ್ನ ನಿರ್ಧಾರವನ್ನು ಬದಲಿಸಿಕೊಳ್ಳುವ ಸಂದರ್ಭದಲ್ಲಿ ಅಬ್ಬರಿಯ ತಳದಲ್ಲಿ ನಿಶ್ಚಿಂತೆಯಿಂದ ಮಲಗಿದ್ದ ಹುಲಿಯೊಂದನ್ನು ಕೊಗ್ಗನು ಕೊಂದ ವಿವರ ಬರುತ್ತದೆ. ಹೀಗೆ ಸಂಕಪ್ಪಯ್ಯನ ಆತ್ಮವಿಶ್ವಾಸದ ಪ್ರತೀಕವಾಗಿ ಬರುವ ಹುಲಿ ಅಲ್ಲಿಂದ ತೋಟದ ನಾಶ ಹಾಗೂ ಮಗಳ ವಿಶ್ವಾಸವನ್ನು ಕಳೆದುಕೊಳ್ಳುವುದನ್ನು ಬಿಂಬಿಸುತ್ತದೆ.

ವಿಧವೆಯಾದ ಮಗಳು ಶಾನುಭೋಗನ ಮಗ ಕಿಟ್ಟನೊಂದಿಗೆ ಅನೈತಿಕ ಸಂಬಂಧ ಹೊಂದಿರುವುದನ್ನು ತಿಳಿದ ಸಂಕಪ್ಪಯ್ಯನು ಚಿಂತೆಗೊಳಗಾಗುತ್ತಾನೆ. ಅಬ್ಬರಿಯ ತಳದಲ್ಲಿ ಕಂತಿದ್ದ ಸಂಕಪ್ಪಯ್ಯನ ಕಣ್ಣುಗಳು ಚಿಕ್ಕದಾಗುತ್ತ

ದೊಡ್ಡದಾಗಿ ಅರಳಿ ಮತ್ತೆ ಮುಚ್ಚುತ್ತವೆ. ಕಂಡದ್ದನ್ನು ಮೈತುಂಬ ತುಂಬಿಕೊಂಡು ನಡುಗುತ್ತಾನೆ. ಮತ್ತೆ ಕಣ್ಣು ತೆರೆದು ನೇರವಾಗಿ, ನಿರ್ಭಯವಾಗಿ ನೋಡುತ್ತಾನೆ. ಅಬ್ಬರಿಯ ತಳದಲ್ಲಿ ಮಲಗಿದ್ದ ಹುಲಿಯೂ ಸಂಕಪ್ಪಯ್ಯನನ್ನು ನೋಡಿತು. ನಿರ್ಭಯವಾಗಿ ಯಾವ ಎಗ್ಗಿಲ್ಲದೆ ನೋಡಿದ ಹುಲಿಯನ್ನು ಕಂಡ ಸಂಕಪ್ಪಯ್ಯನಿಗೆ ಬದುಕಿದರೆ ಹುಲಿಯ ಹಾಗೆ ನಿರ್ಭಯವಾಗಿ ಬದುಕಬೇಕೆಂದೆನಿಸುತ್ತದೆ. ಇಲ್ಲಿ ಹುಲಿಯ ಪ್ರಸ್ತಾಪವು ಸಂಕಪ್ಪಯ್ಯನ ಆತ್ಮವಿಶ್ವಾಸಕ್ಕೆ ಸಂಕೇತವಾಗಿ ಬರುತ್ತದೆ.

ಹುಲಿಯ ಪ್ರಸ್ತಾಪವನ್ನು ಇಲ್ಲಿ ಗಮನಿಸಬಹುದು. "ಇದು ಒಂದು ಅಪೂರ್ವ ಭೇಟಿಯ ವಾಸ್ತವಿಕ ವರದಿಯೇನೋ ನಿಜ, ಆದರೆ ಈ ವಾಸ್ತವಿಕತೆಯಲ್ಲೇ ಸಂಕೇತಾರ್ಥಗಳು ಇಣುಕುತ್ತವೆ. ಓದುತ್ತಿರುವ ಹಾಗೆ ಹುಲಿಯು ಬರಿಯ ಹುಲಿಯಾಗಿ ಉಳಿಯದೆ ಸಂಕಪ್ಪಯ್ಯನ ಪ್ರಚಂಡ ಇಚ್ಚಾಶಕ್ತಿಯ ಅವತಾರವಾಗಿ ಬಿಡುತ್ತದೆ. ಈ ಭೇಟಿಯು ತರುವ ಸ್ತಬ್ಧಭಾವ ಗಮನಾರ್ಹವಾಗಿದೆ."[೮] ಹೀಗೆ ಅಬ್ಬರಿಯ ತಳದಲ್ಲಿ ಎಗ್ಗಿಲ್ಲದೆ ನಿಶ್ಚಲವಾಗಿ ಕುಳಿತ ಹುಲಿಯಷ್ಟೇ ಸಂಕಪ್ಪಯ್ಯನ ನಿರ್ಧಾರವೂ ನಿಶ್ಚಲವಾಗಿರುತ್ತದೆ. ಆದರೆ ಹುಲಿಯನ್ನು ಹಿಂದಿನಿಂದ ಗುಂಡುಹಾರಿಸಿ ಕೊಂದ ಘಟನೆ ಸಂಕಪ್ಪಯ್ಯನ ಇಚ್ಚಾಶಕ್ತಿಯ ಪತನಕ್ಕೆ ಸಂಕೇತವಾಗಿದೆ. ಬದುಕಿನಲ್ಲಿ ಆದರ್ಶ ಗುಣಗಳನ್ನು ಪ್ರತಿಪಾದಿಸುವ ಸಂಕಪ್ಪಯ್ಯನಿಗೆ ವಾಸ್ತವ ಜೀವನದಲ್ಲಿ ಕುಟುಂಬವು ಅವನ ನಿರೀಕ್ಷೆಯನ್ನು ಹುಸಿಗೊಳಿಸಿದಾಗ ಸಂಘರ್ಷವು ಹುಟ್ಟಿಕೊಳ್ಳುತ್ತದೆ.

'ಹುಲಿಯ ಹೆಂಗರುಳು' ಕತೆಯಲ್ಲಿ ಪ್ರವಾಹಕ್ಕೆ ಸಿಕ್ಕ ವ್ಯಕ್ತಿಯೊಬ್ಬನ ಪ್ರಾಣವನ್ನುಳಿಸಲು ಸಿದ್ಧ ಪ್ರಯತ್ನಿಸುತ್ತಾನೆ. ಪ್ರವಾಹದ ವರ್ಣನೆಯು ಸಿದ್ಧನ ಭಾವನೆಗಳ ಹೊಯ್ದಾಟವನ್ನು ಸಂಕೇತಿಸುತ್ತದೆ. ಆವೇಶದಲ್ಲಿ ಹೆಂಡತಿಯನ್ನು ಕೊಂದು ಬಂದಿದ್ದ ಸಿದ್ಧನು ಸೀನಸೆಟ್ಟಿಯು ಪ್ರವಾಹದಲ್ಲಿ ಸಿಲುಕಿರುವಾಗ ದ್ವಂದ್ವಕ್ಕೊಳಗಾಗುತ್ತಾನೆ. ಸಿದ್ಧ ಒಂದು ಬಡಜೀವಿಯನ್ನು ಉಳಿಸಿದರೆ ಎಂಥ ಪುಣ್ಯನೋಡು, ಪುಣ್ಯ ಹೋಗಲಿ ಮಾಡಿದ ಪಾಪ ತೀರೀತೆ ಎಂದು ಅವನ ಕುರಿತು ಅಲ್ಲಿ ನೆರೆದ ಜನ ಮಾತನಾಡಿಕೊಳ್ಳುತ್ತಾರೆ. ಹೊಳೆಯ, ಮಳೆಯ ಮೊರೆತವನ್ನು ಸಿದ್ಧನು ಪ್ರವಾಹದಲ್ಲಿ ಹುಟ್ಟು ಹಾಕುವಾಗ ಎದುರಿಸುತ್ತಾನೆ. ಅದನ್ನು ಮೀರಿದ ಮೊರೆತವನ್ನು ಮನಸ್ಸಿನಲ್ಲಿ ಎದುರಿಸುತ್ತಾನೆ. ದೋಣಿ ಹಾಯಿಸುವುದರಲ್ಲಿ ಅವನಿಗೆ ಸಾಟಿ ಮತ್ತೊಬ್ಬನಿರಲಿಲ್ಲ. ಆದರೆ ಬಾಳದೋಣಿ ನಡೆಸುವಲ್ಲಿ ದುಡುಕಿದ್ದನು. ಹೆಂಡತಿ ಸೀನಸೆಟ್ಟಿಯೊಂದಿಗೆ ಅನೈತಿಕ ಸಂಬಂಧ ಹೊಂದಿರುವುದನ್ನು ತಿಳಿದ ಸಿದ್ಧನು ಬದುಕಿನ ಬಗ್ಗೆ ಬೇಸರಪಡುತ್ತಾನೆ. ಆ ವಿಷಯವಾಗಿ ಸಿದ್ಧ ಹೆಂಡತಿಯನ್ನು ಕೇಳಿದಾಗ ನಿಂದೇನು ನನ್ನ ಇಷ್ಟ, ನೀನೇ ಮನೆಬಿಟ್ಟು ಹೋಗು ಎನ್ನುತ್ತಾಳೆ. ಒಂದು ಕುರಿಯನ್ನೂ ಕಡಿದಿರದ ಶುದ್ಧ ಹೆಂಗರುಳಿನ ಸಿದ್ಧನಿಗೆ ಹೆಂಡತಿಯ ಮಾತುಗಳನ್ನು ಸಹಿಸಲಾಗಲಿಲ್ಲ. ಸಹನೆ ಮೀರಿ ಕತ್ತಿಯಿಂದ ಅವಳನ್ನು ಕಡಿದು ಹಾಕುತ್ತಾನೆ.

ಹೆಂಡತಿಯನ್ನು ಕೊಂದ ಸಿದ್ಧನು ಸೀನಸೆಟ್ಟಿಯನ್ನು ಪ್ರವಾಹದಿಂದ ರಕ್ಷಿಸಲು ಸಿದ್ಧನಾಗುತ್ತಾನೆ. ಆಗ ಅವನ ಮನಸ್ಸಿನಲ್ಲಾದ ಹೊಯ್ದಾಟವನ್ನು ಇಲ್ಲಿ ಗಮನಿಸಬಹುದು. ತೇಂಕಿ ತೇಂಕಿ ಸಿದ್ಧ ಒದರಿದನು. ಆಹ್! ಸೀನಸೆಟ್ಟಿ, ಬಂಡೆಯ ಮೇಲಿನ ಜೀವಜಂತು ಬದುಕೇ ಕುರಿಯಂತೆ ಅಮ್ಮಾ ನೋಡಲಾರೆಮ್ಮಾ ಕತ್ತರಿಸಬೇಕಾದ ಬಡಜೀವಿಯ ಅಂಗ ಅಂಗವೂ ಪ್ರಾಣಭಿಕ್ಷೆ ಯಾಚಿಸಿತು. ಅಯ್ಯೋ ಅಮ್ಮಾ ಕುರಿ ಕಡಿಯಬೇಡಿ ಎಂದು ಕುರಿಯನ್ನು ಕಡಿಯುವಾಗ ಸಿದ್ಧನಿಗೆ ಸಹಿಸದ್ದನ್ನು ಮತ್ತೆ ನೆನಪಿಸಿಕೊಳ್ಳುತ್ತಾನೆ. ತನ್ನ ಹೆಂಡತಿಯ ಪ್ರಾಣ ತೆಗೆಯಲು ಕಾರಣನಾದವನನ್ನು ರಕ್ಷಿಸಲು ಬಂದೆನಲ್ಲ ಎಂದು ಸಿದ್ಧ ಗೊಂದಲಕ್ಕೊಳಗಾಗುತ್ತಾನೆ.

[illegible]

[illegible]

[illegible]

[illegible]

[illegible]

ದೇವರೇ ಸೀನಸೆಟ್ಟಿಗೆ ಶಿಕ್ಷೆ ಕೊಟ್ಟಿದ್ದರೂ ನಾನು ರಕ್ಷಿಸಲು ಬಂದೆನಲ್ಲ ಎಂದು ಯೋಚಿಸುತ್ತಾನೆ. "ಕೊನೆಗೂ ತನ್ನ ಮನಸ್ಸಿನ ದ್ವಂದ್ವವನ್ನು ಕಳೆದುಕೊಂಡ ಸಿದ್ಧನು ತನ್ನ ಶತೃವನ್ನು ಬದುಕಿಸಲು ಸಿದ್ಧನಾಗುತ್ತಾನೆ. ಅದರ ಸಂಕೇತವಾಗಿ ಅವನ ಕೈಲಿದ್ದ ಕತ್ತಿಯೂ ಪ್ರವಾಹಕ್ಕೆ ಬಿದ್ದುಬಿಡುತ್ತದೆ. ಈ ಕತೆಯ ಉದ್ದಕ್ಕೂ ಸಂಕೇತಗಳು ಪರಿಣಾಮಕಾರಿಯಾಗಿ ಬರುತ್ತವೆ."[೯] ಈ ಕತೆಯಲ್ಲಿ ಹುಲಿ ಒಂದು ಭೌತಿಕ ವಿಶೇಷವಾಗಿ ಬರುವುದಿಲ್ಲ. ಪದಗಳಲ್ಲಿ ವಿವರಿಸಲಾಗದ ಅಮೂರ್ತ ಶಕ್ತಿಯಾಗಿ ಕಾಣಿಸಿಕೊಂಡಿದೆ. ಕತೆಯು ಒಂದು ಸಂದರ್ಭದಲ್ಲಿ ಮಾತ್ರ ಸಿದ್ಧನನ್ನು ಹುಲಿಗೆ ಹೋಲಿಸಲಾಗಿದೆ. ಅಯ್ಯೋ ನನ್ನ ಮಗ ಶಕ್ತಿಯಲ್ಲಿ ಹುಲಿ. ಆದರೆ ಕುರಿಯನ್ನೂ ಕಡಿಯಲಾರದ ಕರುಣೆ ನಮ್ಮ ಸಿದ್ಧನದು ಶುದ್ಧ ಹೆಂಗರುಳು ಎಂದು ವಿವರಿಸಲಾಗಿದೆ. ಸಿದ್ಧನ ದಾಂಪತ್ಯ ಒಡೆಯಲು ಒಂದು ಬಗೆಯಲ್ಲಿ ಸೀನಸೆಟ್ಟಿ ಕಾರಣನಾಗಿರುತ್ತಾನೆ.

"ಅನಂತಮೂರ್ತಿ ಕಥಾಸಾಹಿತ್ಯದಲ್ಲಿ ಮನುಷ್ಯಾತೀತ ಸ್ಥಿತಿಯೊಂದಕ್ಕೆ ಹುಲಿಯು ಸಂಕೇತವಾಗಿ ಕಾಣಿಸಿಕೊಳ್ಳುತ್ತದೆ."[೧೦] ಆದರ್ಶ ಬದುಕನ್ನು ನಡೆಸುತ್ತಿದ್ದ ಸಿದ್ಧನು ತನ್ನ ಹೆಂಡತಿ ಪರಪುರುಷನೊಂದಿಗೆ ಅನೈತಿಕ ಸಂಬಂಧ ಹೊಂದಿರುವುದನ್ನು ತಿಳಿದಾಗ ಕಂಗಾಲಾಗಿ ಹೆಂಡತಿಯನ್ನು ಕೊಂದು ವಾಸ್ತವ ಬದುಕಿನಲ್ಲಿ ಸಂಘರ್ಷವನ್ನು ಎದುರಿಸುತ್ತಾನೆ. ಇಲ್ಲಿನ ಕತೆಗಳಲ್ಲಿ ಸಂಕೇತದ ಬಳಕೆಯು ಸನ್ನಿವೇಶಕ್ಕೆ ತಕ್ಕಂತೆ ನಿರೂಪಿತವಾಗಿದೆ. ಅಸ್ಪಷ್ಟವಾದ ಸಂಗತಿಗಳು ಸಾಹಿತ್ಯಕೃತಿಯಲ್ಲಿ ಅಭಿವ್ಯಕ್ತಿ ಪಡೆಯುವಾಗ ಸಂಕೇತಗಳಾಗುತ್ತವೆ. ಇಂತಹ ಅಸ್ಪಷ್ಟತೆಯ ಮನುಷ್ಯನ ಸ್ಥಿತಿಯನ್ನು ಇನ್ನೂ ಕೆಲವು ಆಯಾಮಗಳಿಂದ ಕಂಡುಕೊಳ್ಳಬಹುದಾದ ಸೃಜನಾತ್ಮಕ ನೆಲೆಯಲ್ಲಿ ಮುಗ್ಧನಾದ ವೆಂಕಟಿಗ ಸೂರ್ಯನಕುದುರೆಗೆ ಹೋಲಿಕೆಯಾಗುತ್ತಾನೆ. ಸಂಕಪ್ಪಯ್ಯನ ಮಗಳು ಲಕ್ಷ್ಮಿಯು ಕಿಟ್ಟಿಗೊಂದಿಗಿನ ಸಂಬಂಧಕ್ಕೆ ಸಂಕೇತವಾಗಿ ಹುಲಿ ಬಂದಿದೆ. ಯಮುನಕ್ಕ ಮತ್ತು ಶಿಕ್ಷಕನ ಸಂಬಂಧಕ್ಕೆ ಹಾವು ಸಂಕೇತವಾಗಿ ಬಂದಿದೆ. ವ್ಯಕ್ತಿ ತನಗೆ ತಾನೇ ಅನುಭವಿಸುವ ಮಾನಸಿಕ ಹಿಂಸೆಯನ್ನು ಸಾಂಕೇತಿಕತೆಯ ಹಿನ್ನಲೆಯಲ್ಲಿ ಹೇಳಲಾಗಿದೆ. ಒಳಗಿನ ವ್ಯಕ್ತಿತ್ವದ ಸ್ಥಿತಿಯನ್ನು ಭೌತಿಕವಾಗಿ ಬದಲಾವಣೆ ಮಾಡುವುದರ ಮೂಲಕ ಹೇಳಲಾಗುತ್ತದೆ. ಯಾವುದೋ ಕಣ್ಣಿಗೆ ಕಾಣದ ವಿಧಿ ನಿಷೇಧಗಳ ಚೌಕಟ್ಟನ್ನು ನಿರಂತರವಾಗಿ ಪರೀಕ್ಷೆಗೊಳಗಾದಾಗ ಮನುಷ್ಯನ ಸ್ಥಿತಿಯನ್ನು ಸಂಕೇತದ ಮೂಲಕ ಅನಂತಮೂರ್ತಿಯವರು ನಿರೂಪಿಸುತ್ತಾರೆ.

'ಸಂಸ್ಕಾರ' ಕಾದಂಬರಿಯಲ್ಲಿ ಪ್ರಾಣೇಶಾಚಾರ್ಯನು ತನ್ನ ಬಾಲ್ಯ ಮಿತ್ರ ಮಹಾಬಲನ ಲಂಪಟ ಜೀವನಕ್ಕೆ ವಿರುದ್ಧವಾದ ಜೀವನವನ್ನು ರೂಪಿಸಿಕೊಳ್ಳುತ್ತಾನೆ. ಬಾಳು ಹದವಾಗಬೇಕೆಂದು ರೋಗಿಷ್ಠ ಹೆಂಡತಿಯನ್ನು ಮದುವೆ ಮಾಡಿಕೊಳ್ಳುತ್ತಾನೆ. ಫಲಾಪೇಕ್ಷೆಯಿಲ್ಲದೇ ಅವಳ ಸೇವೆಯನ್ನು ಮಾಡಿ ಧನ್ಯನಾದೆ ಎಂದುಕೊಳ್ಳುತ್ತಾನೆ. ಸಾತ್ವಿಕ ಜೀವನ ನಡೆಸುವ ಪ್ರಾಣೇಶಾಚಾರ್ಯನಿಗೆ ಧರ್ಮವನ್ನು ಧಿಕ್ಕರಿಸಿ ಬದುಕುವ ನಾರಣಪ್ಪ ಸವಾಲಾಗುತ್ತಾನೆ. ನಾರಣಪ್ಪನನ್ನು ತಿದ್ದಲು ಪ್ರಯತ್ನಿಸಿ ಪ್ರಾಣೇಶಾಚಾರ್ಯ ವಿಫಲನಾಗುತ್ತಾನೆ. ನಾರಣಪ್ಪ ಸತ್ತಾಗ ಬ್ರಾಹ್ಮಣ್ಯ ಮೀರಿದ ಅವನ ಸಂಸ್ಕಾರ ಮಾಡುವ ವಿಷಯದಲ್ಲಿ ಗೊಂದಲವೇರ್ಪಡುತ್ತದೆ.

ನಾರಣಪ್ಪನ ಸಂಸ್ಕಾರದ ಸಮಸ್ಯೆಯನ್ನು ನಿವಾರಿಸಲು ಪ್ರಾಣೇಶಾಚಾರ್ಯ, ಧರ್ಮ, ಶಾಸ್ತ್ರ ಗ್ರಂಥಗಳನ್ನು ಹುಡುಕಿ ಕೊನೆಗೆ ದೇವರಲ್ಲಿ ಮೊರೆಯಿಡುತ್ತಾನೆ. ಇದಾವುದರಿಂದಲೂ ಉತ್ತರ ದೊರೆಯದೇ ಇದ್ದಾಗ ಸಂದಿಗ್ಧವನ್ನು ಎದುರಿಸುತ್ತಾನೆ. ಸಮಸ್ಯೆಯನ್ನು ಪರಿಹರಿಸಲಾಗದೇ ಹತಾಶನಾಗಿದ್ದ

ಪ್ರಾಣೇಶಾಚಾರ್ಯನಿಗೆ ಆಕಸ್ಮಿಕವಾಗಿ ಚಂದ್ರಿಯೊಂದಿಗೆ ಸಮಾಗಮವಾಗುತ್ತದೆ. ಚಂದ್ರಿಯ ಸಂಬಂಧವು ಅವನನ್ನು ಬದಲಿಸುತ್ತದೆ. ನಿಸರ್ಗವನ್ನು ಹೊಸ ರೀತಿಯಲ್ಲಿ ನೋಡತೊಡಗುತ್ತಾನೆ. ವಾಸ್ತವದಲ್ಲಿ ಪ್ರಾಣೇಶಾಚಾರ್ಯನಿಗಾದ ಅನುಭವವು ನಿಸರ್ಗದ ಸಾಂಕೇತಿಕ ವಿವರಗಳಲ್ಲಿ ವ್ಯಕ್ತವಾಗಿದೆ. ತನ್ನ ಬಾಲ್ಯಕ್ಕೊಮ್ಮೆಗೆ ಮುಗುಚಿಕೊಂಡು ಬಿಟ್ಟಂತೆನಿಸಿ ಅಮ್ಮನ ತೊಡೆಯ ಮೇಲೆ ದಣಿವು ಕಳೆದುಕೊಳ್ಳುತ್ತಿದ್ದುದು ಮರುಕಳಿಸಿದಂತಾಗುತ್ತದೆ. ಬೆರಗಿನಿಂದ ನೋಡಿದಾಗ ಗರಿಬಿಚ್ಚಿದ ನವಿಲಿನಂತಹ ಅಕ್ಷಯ, ನಕ್ಷತ್ರ ರಾಶಿ, ಸಪ್ತಋಷಿಮಂಡಲವಿದೆ. ವಸಿಷ್ಠರ ಪಕ್ಕದಲ್ಲಿ ನಾಚಿ ಮಿನುಗುವ ಅರುಂಧತಿ ಇದ್ದಾಳೆ. ಕೆಳಗೆ ಹುಲ್ಲಿನ ಹಸಿಮಣ್ಣಿನ ವಿಷ್ಣುಕಾಂತಿಯ ಸುಗಂಧಿಯ ಹೆಣ್ಣಿನ ಬೆವರಿನ ಮೈಯ ವಾಸನೆಯಿದೆ. ಕತ್ತಲು ಆಕಾಶ ನೆಮ್ಮದಿಯಿಂದ ನಿಂತ ವೃಕ್ಷಗಳಿವೆ. ಕನಸೋ ಎಂದು ಪ್ರಾಣೇಶಾಚಾರ್ಯ ಕಣ್ಣುಜ್ಜಿಕೊಳ್ಳುತ್ತಾನೆ. ಎಲ್ಲಿಂದ ಇಲ್ಲಿಗೆ ಬಂದೆ ಎಲ್ಲಿಗೆ ಹೋಗಬೇಕೆಂದು ಬಂದು ಮರೆತುಬಿಟ್ಟೆ ಎಂದು ಕಳವಳಿಸುತ್ತಾನೆ.

ಚಂದ್ರಿ ಎಂದು ಕರೆದು ಪೂರ್ಣ ಎಚ್ಚರವಾಗುತ್ತಾನೆ. ಆಲಿಸಿದಾಗ ಕಾಡಿನಲ್ಲಿ ಮೌನದಲ್ಲಿ ಗುಟ್ಟುಗಳನ್ನು ಹೇಳುತ್ತಿರುವಂತಹ ಚಿಲಿಪಿಲಿ ಎನ್ನುವ ಕತ್ತಲಿದೆ. ಚಿಲಿಪಿಲಿ ಎನ್ನುವ ಶಬ್ದ ಮಿಣಕ್ ಮಿಣಕ್ ಎನ್ನುವ ಬೆಳಕಾಗಿ ರಾಶಿ ರಾಶಿಯಾದ ಮಿಣುಕು ಹುಳುಗಳು ತೇರಿನಂತೆ ಏರಿಬಂದು ಪೊದೆಯಿಂದ ಹೊರಗೆ ಬಂದು ಪ್ರತ್ಯಕ್ಷ್ಯವಾದವು. ಕಣ್ಣು ತುಂಬುವಂತೆ, ಕಿವಿ ತುಂಬುವಂತೆ ಆಲಿಸುತ್ತ ನೋಡುತ್ತಾನೆ. ಸುತ್ತಲೂ ಮಿಣುಕು ಹುಳುಗಳ ರಾಶಿ ರಾಶಿ ತೇರು ಪ್ರಾಣೇಶಾಚಾರ್ಯನಿಗೆ ಚಂದ್ರಿಯ ಸಂಬಂಧದಿಂದಾಗಿ ನಿಸರ್ಗದ ಸಂಬಂಧವೂ ಸಿಕ್ಕಾಗ ಈ ಸನ್ನಿವೇಶವು ಸಾಂಕೇತಿಕತೆಯನ್ನು ಬಿಂಬಿಸುತ್ತದೆ.

"ನಿತ್ಯರೋಗಿ ಭಾಗೀರಥಿಯನ್ನು ಬೇಕೆಂದೇ ಮದುವೆಯಾಗಿರುವುದರಿಂದಲೂ ಮತ್ತು ತಮ್ಮಿಬ್ಬರ ಸಂಬಂಧದಲ್ಲಿ ಪ್ರಾಣೇಶಾಚಾರ್ಯರು ಒಂದು ಅರ್ಥವನ್ನು ಕಂಡುಕೊಂಡಿರುವುದರಿಂದಲೂ ಕಾಡಿನಲ್ಲಿ ಪ್ರಾಣೇಶಾಚರ್ಯರು ಚಂದ್ರಿ ಸುಲಿದುಕೊಟ್ಟ ಬಾಳೆಯ ಹಣ್ಣನ್ನು ತಿಂದು ಅವಳೊಡನೆ ಮಲಗುವುದು ಸಾಂಕೇತಿಕವಾಗಿದೆ. ಪ್ರಾಣೇಶಾಚಾರ್ಯರು ಚಂದ್ರಿಯೊಡನೆ ಮಲಗುವುದು ತಾವು ಬಿಟ್ಟೆನೆಂದುಕೊಂಡಿದ್ದ ಮಣ್ಣಿಗೆ ಹಿಂತಿರುಗುವುದರ ಸಂಕೇತ." [೧೧] ಪ್ರಾಣೇಶಾಚಾರ್ಯನ ಹೆಂಡತಿ ರೋಗಗ್ರಸ್ತವಾಗಿರುವುದು ಅವನ ಜೀವನದ ಅರ್ಧಭಾಗ ಇದ್ದೂ ಸತ್ತಂತೆ ಕಳೆದಿದ್ದಾನೆ ಎಂಬುದನ್ನು ಸಂಕೇತಿಸುತ್ತದೆ. ದೂರ್ವಾಸಪುರಕ್ಕೆ ಬರುವ ಪ್ಲೇಗು ಹಳೆಯ ರೂಢಿಗ್ರಸ್ತ ಸಮಾಜದ ಕೊಳೆಯ ಸಂಕೇತವಾಗಿ ಬಂದಿದೆ.

ಕಾದಂಬರಿಯಲ್ಲಿ ಕೇಂದ್ರಬಿಂದು ಎಂದರೆ ಎರಡು ವಿರುದ್ಧವಾದ ಪಾತ್ರಗಳಲ್ಲಿಯ ವಿರೋಧ ಇಲ್ಲವಾಗಿ ಒಂದು ಇನ್ನೊಂದರಂತಾಗುವುದು ಇಲ್ಲಿ ಸಾಂಕೇತಿಕತೆ ಪ್ರಮುಖ ತಾಂತ್ರಿಕ ಪ್ರೇರಣೆಯಾಗಿದೆ. ಪ್ರಾಣೇಶಾಚಾರ್ಯನ ಬದಲಾವಣೆಯಿಲ್ಲದ ಜೀವನದ ಯಾಂತ್ರಿಕ ಜೀವನವನ್ನು ಸಂಕೇತಿಸಲು ಒಣಗಿ ಮುರುಟಿದ ಭಾಗೀರಥಿಯ ಕೀಚುಗಾಯಿ ದೇಹಕ್ಕೆ ಸ್ನಾನ ಮಾಡಿಸಿ, ಮಡಿಯುಡಿಸಿ, ಯಥಾವತ್ತಾಗಿ ಪೂಜೆ ನೈವೇದ್ಯಾದಿಗಳು ಮುಗಿದ ಮೇಲೆ ದೇವರ ಪ್ರಸಾದದ ಹೂ ಮುಡಿಸಿ ತೀರ್ಥ ಕೊಟ್ಟು ಅವಳಿಂದ ಕಾಲು ಮುಟ್ಟಿಸಿಕೊಂಡು ಆಶೀರ್ವದಿಸಿ ರವೆ ಗಂಜಿಯನ್ನು ಬಟ್ಟಲಲ್ಲಿ ಪ್ರಾಣೇಶಾಚಾರ್ಯರು ತಂದರು. ಇಪ್ಪತ್ತು ವರ್ಷಗಳಿಂದ ಅವರಿಬ್ಬರ ಸಂಬಂಧದ ಕುರಿತು ನಡೆಯುವ ನಿತ್ಯ ಕರ್ಮ ತಪ್ಪದ ಆಚಾರವಾಗಿದೆ. ಪ್ರಾಣೇಶಾಚಾರ್ಯ ಹಾಗೂ ನಾರಣಪ್ಪನ ನಡುವಿನ ಸಂಬಂಧದಲ್ಲಿನ ಗೊಂದಲವನ್ನು

[illegible]

[illegible]

[illegible]

[illegible]

ಸಂಕೇತಿಸಲು ಕಾದಂಬರಿಯಲ್ಲಿ ವೇದ, ಪುರಾಣಗಳು ಹಾಗೂ ಕೆಲವು ಭಕ್ತಿಯ ಮಾದರಿಗಳನ್ನು ಇಲ್ಲಿ ಪ್ರತಿಮೆಗಳಾಗಿ ಬಳಸಲಾಗಿದೆ.

ಚಂದ್ರಿಯ ಸಮಾಗಮದ ನಂತರ ಪ್ರಾಣೇಶಾಚಾರ್ಯ ಗೊಂದಲಗೊಳ್ಳುತ್ತಾನೆ. ಒಂದು ಆದರ್ಶದೊಳಗೆ ಬದುಕುತ್ತಲೇ ಅದನ್ನು ಸರ್ವಸ್ವವೆಂದು ಭಾವಿಸಿದ್ದ ಪ್ರಾಣೇಶಾಚಾರ್ಯನಿಗೆ ಅನುಭವದಲ್ಲಿ ಎದುರಾಗುವ ಘಟನೆಗಳು ಅದರ ಮಿತಿಯನ್ನು ತಿಳಿಸಿಬಿಡುತ್ತವೆ. ಚಂದ್ರಿಯ ಸಮಾಗಮದ ನಂತರ ಆದರ್ಶದ ಹೆಸರಿನಲ್ಲಿ ವಾಸ್ತವತೆಯನ್ನು ಮರೆತವನಿಗೆ ಚಂದ್ರಿಯ ರೂಪದಲ್ಲಿ ಎದುರಾಗುವ ವಾಸ್ತವತೆ ತಾನಿದುವರೆಗೂ ಕಳೆದುಕೊಂಡದ್ದೇನೆಂಬುದನ್ನು ತಿಳಿಸುತ್ತದೆ. ವಾಸ್ತವತೆಯನ್ನು ಮರೆತು ಆದರ್ಶವನ್ನು ಬೋಧಿಸುವ ಪರಂಪರೆ ಇಂದಿನ ವಾಸ್ತವತೆಯ ಎಲ್ಲ ಬೇಡಿಕೆಗಳನ್ನು ಪೂರೈಸುವಲ್ಲಿ ವಿಫಲವಾಗುತ್ತಿದೆ ಎಂಬ ಅರಿವು ಪ್ರಾಣೇಶಾಚಾರ್ಯನಲ್ಲಿ ಮೂಡುತ್ತದೆ. ನಾರಣಪ್ಪನ ವಿಷಯದಲ್ಲಿ ಎದುರಾಗುವ ತೊಂದರೆಗಳಿಗೆ ಪ್ರಾಣೇಶಾಚಾರ್ಯನ ಆದರ್ಶದ ಜೀವನದಲ್ಲಿ ಉತ್ತರವಿಲ್ಲವೆಂಬ ವಾಸ್ತವವು ಅವನಲ್ಲಿ ಸಂದಿಗ್ಧತೆಯನ್ನು ತಂದಿದೆ.

'ಭಾರತೀಪರ' ದಲ್ಲಿ ಜಗನ್ನಾಥನ ಕ್ರಿಯೆಯೆಲ್ಲವೂ ಸಾಂಕೇತಿಕವಾದರೆ, ಗಣೇಶನಿಗೆ ಸಂಕೇತ ಕೂಡ ಭಯಗೊಳಿಸುವಷ್ಟು ವಾಸ್ತವವಾಗಿದೆ. ವಾಸ್ತವವಾಗಿ ಅದು ಮಂಜುನಾಥ ದೇವರಿಂದ ನಿಯಂತ್ರಿಸಲ್ಪಡುವ ದಿನನಿತ್ಯದ ಅನುಭವಗಳ ವಿರುದ್ಧದ ಅವನ ಬಂಡಾಯ. ಆದ್ದರಿಂದ ಅದು ಮಂಜುನಾಥ ಕೊಡುವ ಪ್ರಸಾದದ ವಿರುದ್ಧದ ಬಂಡಾಯವೂ ಆಗಿದೆ.

ವ್ಯವಸ್ಥೆಯು ಗಣೇಶನ ಪ್ರತಿಭಟನೆಯ ಕ್ರಿಯೆಯನ್ನು ತನ್ನ ಉಳಿಯುವಿಕೆಗಾಗಿ ಕುತಂತ್ರದಿಂದ ಉಪಯೋಗಿಸಿಕೊಳ್ಳುತ್ತದೆ. ಅವನ ಪಾವಿತ್ರ್ಯನಾಶದ ಕ್ರಿಯೆಯನ್ನು ಸಮಾಜ ತನ್ನ ಲೌಕಿಕ ಮತ್ತು ಮತೀಯ ಅಧಿಕಾರಗಳನ್ನು ಸ್ಥಿರಪಡಿಸಿಕೊಳ್ಳಲು ಉಪಯೋಗಿಸುತ್ತದೆ. ಶಿವಲಿಂಗವನ್ನು ಗಣೇಶನು ಹೊಳೆಗೆ ಹಾಕಿದ ಸತ್ಯವನ್ನು ರಹಸ್ಯವಾಗಿರುವಂತೆ ನೋಡಿಕೊಳ್ಳುತ್ತದೆ. ಭಾರತೀಪುರದಲ್ಲಿ ಕಾದಂಬರಿಯ ಕೇಂದ್ರವಾದ ದೇವಸ್ಥಾನವು ವ್ಯವಸ್ಥೆಯ ಸಂಕೇತವಾಗಿದೆ. ವ್ಯವಸ್ಥೆ ಇಲ್ಲಿ ಬದಲಾವಣೆಯ ಸ್ಫೋಟಕ್ಕಾಗಿ ಕಾದಿರುವ ಜಗನ್ನಾಥನ ಪ್ರಯತ್ನ ಹಾಗೂ ಗಣೇಶನ ಪ್ರತಿಭಟನೆಯ ಕ್ರಿಯೆ ಇವೆರಡೂ ಬೇರೊಂದು ರೀತಿಯ ಪರಿಣಾಮವನ್ನು ಬೀರುತ್ತವೆ.

"ಜಗನ್ನಾಥ ತನ್ನಿಂದ ಹೊರಗೆ ಯಾರನ್ನೂ ಪ್ರೀತಿಸಲಾರ, ಗೌರವಿಸಲಾರ, ತನ್ನ ಕ್ರಿಯೆಗಳಿಗೆ ತಾನು ಜವಾಬ್ದಾರ ಎಂದುಕೊಳ್ಳುತ್ತಲೇ ಇತರರನ್ನು ಜವಾಬ್ದಾರರನ್ನಾಗಿ ಮಾಡುತ್ತಾನೆ."[೧೨] ಜಗನ್ನಾಥನು ವ್ಯವಸ್ಥೆಯಲ್ಲಿನ ಅಸಮಾನತೆಯನ್ನು ಸರಿಪಡಿಸಬೇಕೆಂಬ ಆದರ್ಶವನ್ನು ಇಟ್ಟುಕೊಂಡಿದ್ದಾನೆ. ಆದ್ದರಿಂದ ಅವನಿಗೆ ದೇವಾಲಯದೊಳಗೆ ಹರಿಜನರ ಪ್ರವೇಶವು ಕ್ರಾಂತಿಕಾರಿ ವಿಚಾರವಾಗಿ ಕಾಣುತ್ತದೆ. ವಾಸ್ತವದಲ್ಲಿ ಈ ವಿಚಾರವು ಅವನಿಗೆ ಮುಖ್ಯವೆನಿಸಿದಂತೆ ವ್ಯವಸ್ಥೆಯನ್ನು ಒಪ್ಪಿಕೊಂಡಿರುವ ಹರಿಜನರಿಗೆ ಮುಖ್ಯವಾಗುವುದಿಲ್ಲ. ಜಗನ್ನಾಥನ ಆದರ್ಶವು ವಾಸ್ತವದಲ್ಲಿ ಪರಿಣಾಮಕಾರಿಯಾಗದೆ ಸೋಲುತ್ತದೆ. ಅವನ ಆದರ್ಶದ ಕಲ್ಪನೆ ಮತ್ತು ತಿಳುವಳಿಕೆ ಎರಡೂ ವಾಸ್ತವದಲ್ಲಿ ಸಮಾಜವು ಅವನಿಗೆ ಸ್ಪಂದಿಸದೇ ಸಂಘರ್ಷವೇರ್ಪಡುತ್ತದೆ.

[illegible]

[illegible]

[illegible]

[illegible]

[illegible]

[illegible]

'ಅವಸ್ಥೆ' ಕಾದಂಬರಿಯಲ್ಲಿ ಸಂಕೀರ್ಣ ಆಶಯದ ಧ್ವನಿಪೂರ್ಣ ಅಭಿವ್ಯಕ್ತಿಯ ಸಂಕೇತವಾಗಿ ಹುಲಿಯನ್ನು ಬಳಸಲಾಗಿದೆ. ನಿನ್ನಲ್ಲಿ ಒಂದು ಹುಲಿಯಿದೆ, ಅದನ್ನು ಸವಾರಿ ಮಾಡಬೇಕು ಎಂದು ಕೃಷ್ಣಪ್ಪನಿಗೆ ಮಹೇಶ್ವರಯ್ಯ ಹೇಳುತ್ತಾನೆ. ಇದು ಅಧಿಕಾರಶಾಹಿ ಶಕ್ತಿಗಳ ಪ್ರಮುಖ ಅಸ್ತ್ರವಾದ ಹಿಂಸೆಯ ವಿವಿಧ ಅಮಾನವೀಯ ಮುಖಗಳ ವರ್ಣನೆ ಇದೆ. ಕೃಷ್ಣಪ್ಪನ ವಾರಂಗಲ್ ಯಾತ್ರೆಯಲ್ಲಿ ಈ ಎಲ್ಲಾ ಕ್ರೂರ ಶಕ್ತಿಗಳ ವಿರುದ್ಧ ಒಬ್ಬ ವ್ಯಕ್ತಿ ನಡೆಸಬಹುದಾದ ಹೋರಾಟದ ಸಂಕೇತವಾಗಿದೆ. ವಾಸ್ತವಿಕ ವಿವರಗಳಿವೆ. ಈ ಕಾದಂಬರಿಯಲ್ಲಿ ಕೃಷ್ಣಪ್ಪ ಜೀವನದುದ್ದಕ್ಕೂ ಶೋಷಣೆ ದಬ್ಬಾಳಿಕೆಗಳ ವಿರುದ್ಧ ಸೆಣಸಾಡಿ ಅವುಗಳಿಂದ ತನ್ನನ್ನು ಬೇರೆಯವರನ್ನು ಬಿಡಿಸಿಕೊಳ್ಳಲು ಯತ್ನಿಸುತ್ತಾನೆ. ಈ ರೀತಿಯ ಅನುಭವಗಳಿಂದ ಪಕ್ವವಾಗಿ ಪ್ರೇಮವಿಲ್ಲದೆ ಕ್ರಾಂತಿಗೆ ಅರ್ಥವಿಲ್ಲ ಎಂಬ ತೀರ್ಮಾನಕ್ಕೆ ಬಂದ ಅವನು ಹೊಸ ನೈತಿಕ ಮೌಲ್ಯಗಳನ್ನು ಅರಿತುಕೊಳ್ಳುತ್ತಾನೆ.

ಸಮಕಾಲೀನ ಸಾಂಸ್ಕೃತಿಕ ಸಂದರ್ಭ ಅನಂತಮೂರ್ತಿಯವರ ಕಾದಂಬರಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಕಾದಂಬರಿಯ ಆರಂಭದಲ್ಲಿ ಕೃಷ್ಣಪ್ಪನ ಜೀವನವನ್ನು ವಿವಿಧ ಮನೋಧರ್ಮ ಹೊಂದಿದ ನಾಲ್ಕು ಜನ ಪ್ರಭಾವಿಸುತ್ತಾರೆ. ಕೃಷ್ಣಪ್ಪನಲ್ಲಿ ಸುಪ್ತವಾದ ಅಸಾಮಾನ್ಯ ಗುಣಗಳನ್ನು ಗುರುತಿಸಿದ ಮಹೇಶ್ವರಯ್ಯ ಅವನನ್ನು ಸುಶಿಕ್ಷಿತನನ್ನಾಗಿ ಮಾಡುತ್ತಾನೆ. ಕೃಷ್ಣಪ್ಪನನ್ನು ಪ್ರಭಾವಿಸುವ ಇನ್ನೊಬ್ಬ ವ್ಯಕ್ತಿ ಅಣ್ಣಾಜಿ. ವರ್ಗ ಹೋರಾಟದ ಮುಂಚೋಣಿಯಲ್ಲಿ ನಿನ್ನಂಥವರು ನಿಲ್ಲಬೇಕೆಂದು ಕೃಷ್ಣಪ್ಪನಿಗೆ ಅಣ್ಣಾಜಿಯು ಕ್ರಾಂತಿಯನ್ನು ಬೋಧಿಸುತ್ತಾನೆ. ಚೆನ್ನವೀರಯ್ಯನ ಹೆಂಡತಿ ಉಮೆಯೊಡನೆ ಅಣ್ಣಾಜಿಯ ಅನೈತಿಕ ಸಂಬಂಧವನ್ನು ಒಪ್ಪದಿದ್ದರೂ ಕೃಷ್ಣಪ್ಪ ಬೌದ್ಧಿಕವಾಗಿ ಅಣ್ಣಾಜಿಯ ಪ್ರಭಾವಕ್ಕೆ ಒಳಗಾಗುತ್ತಾನೆ. ಗುಹೆಯಲ್ಲಿ ವಾಸಿಸುವ ಬೈರಾಗಿಯ ಏಕಾಗ್ರತೆಯು ಕೃಷ್ಣಪ್ಪನಿಗೆ ತನ್ನ ಜೀವನ ಉದ್ದೇಶವನ್ನು ಕಂಡುಕೊಳ್ಳುವುದರಲ್ಲಿ ನೆರವಾಗುತ್ತದೆ. ಈ ಮೂವರಿಗಿಂತ ವಿಭಿನ್ನವಾದ ರೀತಿಯಲ್ಲಿ ಗೌರಿ ದೇಶಪಾಂಡೆಯು ಕೃಷ್ಣಪ್ಪನ ಉದ್ದೇಶಗಳು ಸ್ಪಷ್ಟವಾಗುವುದಕ್ಕೆ ಕಾರಣಳಾಗುತ್ತಾಳೆ.

ಆಪ್ತರಾಗಿದ್ದ ಈ ನಾಲ್ವರಲ್ಲೂ ಕೃಷ್ಣಪ್ಪನಿಗೆ ಸಮಷ್ಠಿಯ ಜೀವನವನ್ನು ಕಾಣುವುದಿಲ್ಲ. ಎಲ್ಲಾ ಸಾಧ್ಯತೆಗಳಿಗೂ ಚುರುಕಾಗಿ ಸ್ಪಂದಿಸುತ್ತಾ ಬದುಕಬೇಕೆನ್ನುವ ಅವನ ಆದರ್ಶವನ್ನು ಅವರಾರೂ ಮುಟ್ಟುವುದಿಲ್ಲ. ಹೀಗಿದ್ದರೂ ಕೃಷ್ಣಪ್ಪನು ಆರಿಸಿಕೊಳ್ಳುವ ಉದ್ದೇಶ, ಜೀವನಕ್ರಮಗಳು ಅವನು ಜೀವಂತ ವ್ಯಕ್ತಿಗಳೊಡನೆ ಬೆಳೆಸಿಕೊಂಡು ಬರುವ ಸಂಬಂಧಗಳಿಂದ ಮತ್ತು ಸ್ವ ಉದ್ದೇಶಿತ ನಡೆಸುವ ಹುಡುಕುವಿಕೆಯಿಂದ ರೂಪುಗೊಳ್ಳುತ್ತವೆಯೆನ್ನುವುದು ಗಮನಿಸಬಹುದಾದ ಅಂಶವಾಗಿದೆ. ಇದು ಅವನಿಗೆ ಅನಂತಮೂರ್ತಿಯವರ ಉಳಿದ ನಾಯಕರಿಗಿಲ್ಲದ ಸಾಂಕೇತಿಕ ಮಹತ್ವವನ್ನು ಕೊಡುತ್ತದೆ. ಸಮಕಾಲೀನ ಬದುಕಿನ ಸಂದರ್ಭದಲ್ಲಿ ಕೃಷ್ಣಪ್ಪ ತನ್ನ ಆದರ್ಶವನ್ನು ಗಳಿಸಿಕೊಳ್ಳುವುದರಿಂದ ಅದು ವಾಸ್ತವದೊಡನೆ ನಿಜವಾದ ಸಂಬಂಧಗಳನ್ನು ಹೊಂದುವುದರಲ್ಲಿ ಅವನಿಗೆ ಸಹಾಯಕವಾಗುತ್ತದೆ. ಈ ದೃಷ್ಟಿಯಿಂದ ಅವಸ್ಥೆಯಲ್ಲಿ ಆದರ್ಶ ಮತ್ತು ವಾಸ್ತವಗಳು ಒಂದನ್ನೊಂದು ಪ್ರಭಾವಿಸಲು ಪ್ರಯತ್ನಿಸುತ್ತವೆ. ಇದು ಈ ಕಾದಂಬರಿಯ ವೈಶಿಷ್ಟ್ಯಗಳಲ್ಲೊಂದು.

ಸಮಕಾಲೀನ ಸಾಂಸ್ಕೃತಿಕ ಸಂದರ್ಭದ ಮಹತ್ವದ ಅಂಗವಾದ ಹಿಂಸೆಯನ್ನು ಚಿತ್ರಿಸುವಲ್ಲಿ ಕಾದಂಬರಿ ತನ್ನ ಇನ್ನೊಂದು ವೈಶಿಷ್ಟತೆಯನ್ನು ಪ್ರಕಟಗೊಳಿಸುತ್ತದೆ. ಕಾದಂಬರಿಯ ಎರಡನೆಯ ಭಾಗದಲ್ಲಿ ಇಂಥ ಚಿತ್ರಣಗಳನ್ನು ಕಾಣಬಹುದು. ಅಣ್ಣಾಜಿಯನ್ನು ಹುಡುಕಿಕೊಂಡು ಕೃಷ್ಣಪ್ಪ ವಾರಂಗಲ್‌ಗೆ ಹೋಗುವ ಕ್ರಿಯೆ ಅವನು ಹೊರ

[illegible]

[illegible]

[illegible]

[illegible]

ಜಗತ್ತಿನೊಡನೆ ಹೊಂದಿದ ನೈಜ ಸಂಬಂಧಗಳ ಸಂಕೇತವಾಗಿ ಅರ್ಥವನ್ನು ಪಡೆಯುತ್ತದೆ. ಹಿಂಸೆಯ ಅನುಭವ ಕೃಷ್ಣಪ್ಪನಿಗೆ ಅವನು ವಾರಂಗಲ್ ಗೆ ಹೋಗುವ ಮೊದಲೇ ಪರಿಚಿತವಾಗಿರುತ್ತದೆ. ಹಾಗೆ ನೋಡಿದರೆ ಅವನು ಬೆಳೆದಿರುವುದೇ ಹಿಂಸೆಯ ಪರಿಸರದಲ್ಲಿ. ವಾರಂಗಲ್ ನ ಪೋಲಿಸು ಠಾಣೆಯ ಹಿತ್ತಲ ಕೋಣೆಯಲ್ಲಿ ಅವನಿಗೆ ತನ್ನ ತಂದೆಯ ಕ್ರೂರ ಸಾವಿನ ವಿವರಗಳು ನೆನಪಾಗುತ್ತವೆ. ವಾರಂಗಲ್ ಪೋಲೀಸು ಠಾಣೆಯಲ್ಲಿ ಪಡೆಯುವ ನರಕದ ಅನುಭವ ಒಂದು ರೀತಿಯಿಂದ ಅವನ ಸತ್ವಪರೀಕ್ಷೆ ನಡೆಯುತ್ತದೆ. ಅಣ್ಣಾಜಿಯ ದಸ್ತಗಿರಿ ಮತ್ತು ಕೊಲೆ, ಅಸಹಾಯಕ ಹೆಣ್ಣಿನ ಮೇಲೆ ನಡೆಯುವ ಅತ್ಯಾಚಾರ ಹಾಗೂ ತನ್ನ ಮೇಲೆ ಪೋಲೀಸರು ನಡೆಸಿದ ಏರೋಪ್ಲೇನಿನ ಯಾತನೆ ಹೀಗೆ ಒಂದರ ಮೇಲೊಂದು ಆಘಾತ ಬಂದೊದಗಿದರೂ ಕೃಷ್ಣಪ್ಪ ವಿಚಲಿತನಾಗುವುದಿಲ್ಲ. ನಿರೀಕ್ಷೆಯಲ್ಲಿ ಅತ್ಯಂತ ಅಸಹನೀಯವಾದ ನೋವು ವರ್ತಮಾನದಲ್ಲಿ ಅನುಭವಿಸುವಾಗ ಅಷ್ಟು ಅಸಹನೀಯವಲ್ಲ ಎಂಬುದು ಕೃಷ್ಣಪ್ಪನಿಗೆ ಹೊಳೆಯುತ್ತದೆ. ಮನುಷ್ಯ ಸಹಜವಾದ ಭಯದಿಂದ ವಿಚಲಿತನಾದರೂ ಅವನನ್ನು ನಿಜವಾಗಿ ಕಾಡುವ ಪ್ರಶ್ನೆಯೆಂದರೆ ತಾನು ಕಂಡದ್ದೆಲ್ಲ ಈ ನೆಲದ ಧೂಳಿನಲ್ಲಿ, ಈ ಸೆಖೆಯಲ್ಲಿ, ಈ ತಿಗಣೆಗಳಲ್ಲಿ, ಈ ಗಾಳಿಯಿಲ್ಲದ ಕತ್ತಲಲ್ಲಿ ಕೇಂದ್ರೀಕರಿಸಿದಂತೆ ಅನ್ನಿಸುತ್ತದೆ. ಇದನ್ನು ನಾನು ಗೆಲ್ಲಬಲ್ಲೆನೋ ಎನ್ನುವ ಇಂಥ ಒಂದು ಸಾಂಕೇತಿಕತೆಯನ್ನು ಕೃಷ್ಣಪ್ಪನ ವಾರಂಗಲ್ ನ ಅನುಭವದಲ್ಲಿ ಕಾಣಬಹುದು. ಯಾಕೆಂದರೆ ವಾಸ್ತವದ ತಲಸ್ಪರ್ಶಿಯಾದ ಅನುಭವದಿಂದ ಅವನು ಮತ್ತಷ್ಟು ಗಟ್ಟಿಯಾಗುತ್ತಾನೆ. ಅವನ ಆದರ್ಶಕ್ಕೆ ಮೊನಚು ಬರುತ್ತದೆ. ಹಳ್ಳಿಗೆ ಹೋಗಿ ರೈತರ ಸಂಘಟನೆಯಲ್ಲಿ ತೊಡಗುತ್ತಾನೆ. ಇಲ್ಲಿಯೂ ವಾಸ್ತವ ಮತ್ತು ಆದರ್ಶಗಳು ಒಂದನ್ನೊಂದು ಪ್ರಭಾವಿಸುವ ಪರಸ್ಪರ ಪ್ರಭಾವಿಸುವ ಕ್ರಿಯೆ ನಡೆಯುತ್ತದೆ. ಕೃಷ್ಣಪ್ಪನ ಆದರ್ಶ ವಿಚಾರಗಳಿಗೆ ವಾಸ್ತವದಲ್ಲಿ ಹೊಂದಾಣಿಕೆಯಾಗದಿದ್ದಾಗ ಸಂಘರ್ಷವೇರ್ಪಡುತ್ತದೆ.

'ದಿವ್ಯ' ಕಾದಂಬರಿಯಲ್ಲಿ ಮೊದಲ ಭಾಗದಲ್ಲಿ ವನದೇವತೆಯಂತಿರುವ ಗೌರಿಗೆ ಕರಿಯನಂತಹ ಸಾಮಾನ್ಯನೂ ಕೃಷ್ಣ ಪರಮಾತ್ಮನ ಹಾಗೆ ಕಾಣಿಸುತ್ತಾನೆ. ಇಂತಹ ಪ್ರಪಂಚದಲ್ಲಿರುವ ನಾಯಿ, ಹಾವು, ನಿಗೂಢ ಪ್ರಾಣಿ, ಕಳ್ಳಿ ಹಾಲಿನ ಕನ್ನಡಿ ಹಾಗೂ ಹುಲಿ ಕವಡೆಯಾಟ,ಬಾಲ್ಯದ ಸ–ಭಾಷೆ, ಬೆರಳಿನ ಮಡಿಚು–ಬಿಚ್ಚುಗೆಗಳು ತೋರುವ ಅರ್ಥ ಸದಾ ಉರಿಯುವ ಬಚ್ಚಲಿನ ಒಲೆ ಇವೆಲ್ಲವೂ ಸಾಂಕೇತಿಕ ವಿವರಗಳಾಗಿವೆ. "ದಿವ್ಯದಲ್ಲಿ ನನ್ನ ಅಮೂರ್ತ ಚಿಂತನೆಗಳೆಲ್ಲ ರೂಪಕಗಳಾಗಿವೆ." [೧೩] ಸಾಕಿದ ಒಂದು ಪ್ರಾಣಿ ಜಿಂಕೆಯ ಅಗಲಿಕೆಯಿಂದ ಗಂಗೆಯು ಸಾಯುವುದು ಸಾಂಕೇತಿಕವೆನಿಸುತ್ತದೆ. ಜಿಂಕೆಯಂತಿರುವ ಮರಿಯ ಚಿತ್ರಣ ಅದರ ಕಣ್ಣೋಟ, ಅದಕ್ಕಿರುವ ಜನ್ಮಾಂತರಗಳ ನೆನಪು ಥಟ್ಟನೆ ಆ ಮರಿಗೆ ಆಗುವುದು ಇದ್ದಕ್ಕಿದ್ದಂತೆ ಕಣ್ಮರೆಯಾಗುವುದು ದೇವಲೋಕದ ಅತಿಥಿಯಂತೆ ಉಪಚರಿಸಿಕೊಳ್ಳುವುದು ಮನೆಯವರ ಅರ್ಥ ಪಾಲು ಹಾಲನ್ನು ಕುಡಿದು ದಿನೇದಿನೇ ಬೆಳೆದು ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಪುರಾಣವಾಗುವುದು.

ಒಂದು ಬೆಳದಿಂಗಳ ರಾತ್ರಿ ಗೌರಿ ಹಿತ್ತಲಿನ ಸಂಪಿಗೆ ಮರದ ಕೆಳಗೆ ಹಾಲನ್ನಿಟ್ಟು ಕಾಯುತ್ತಾಳೆ. ಒಂದು ಕಪ್ಪು ಬೆಕ್ಕು ಬರುತ್ತದೆ. ಗೌರಿ ಮತ್ತು ಬೆಕ್ಕು ಒಬ್ಬರಿಗೊಬ್ಬರು ಏನೋ ಗಹನವಾಗಿ ಹೇಳಿಕೊಳ್ಳುವಂತೆ ನಿಲ್ಲುವುದು ಪ್ರತಿ ಸಂಜೆ ಬೆಕ್ಕಿನ ಭೇಟಿಗಾಗಿ ಕಾಯುವ ಗೌರಿ ಅಕ್ಕು ಅದನ್ನು ದೆವ್ವ ಬ್ರಹ್ಮರಾಕ್ಷಸ ಎಂದು ತಿಳಿದುಕೊಳ್ಳುತ್ತಾಳೆ. ಹೆಸರಿಲ್ಲದ ಮೃಗವನ್ನು ದೇವಲೋಕದ ಅತಿಥಿಯೆಂದು ತಿಳಿಯುತ್ತಾರೆ.ಕರಿಯನನ್ನು ಕೃಷ್ಣ ಪರಮಾತ್ಮನಂತೆ ಗೌರಿ ಕಾಣುತ್ತಾಳೆ.ಕೃಷ್ಣಶಾಸ್ತ್ರಿ ಗೌರಿಯನ್ನು ಮಂಗಳಗೌರಿ ಎಂದು ತಿಳಿಯುತ್ತಾನೆ. ಆಕಸ್ಮಿಕವಾಗಿಮನೆಗೆ ಬರುವ ಮಗುವು ಚಂದ್ರವದನನಾಗಿ ತೋರುತ್ತದೆ. ಗಂಗೆಯು ಸತ್ತಾಗಿನಿಂದ ಗೌರಿ ಮೌನ

ವಹಿಸುವುದು ಕಾಡನ್ನು ಹೆಚ್ಚು ಹಚ್ಚಿಕೊಳ್ಳುವುದು ನಮ್ಮನೆ ವಸ್ತುವಲ್ಲ ದೇವರಕೂಸು ಎಂದು ಕೇಶವ ಅವಳನ್ನು ಕುರಿತು ಅಕ್ಕುಗೆ ತಿಳಿಸುತ್ತಾನೆ. ಅಕ್ಕು ವಾಸ್ತವದಲ್ಲಿ ತಾತ್ವಿಕ ನಿಲುವಿನ ಪ್ರತೀಕವಾಗಿದ್ದಾಳೆ.

ಅನಂತಮೂರ್ತಿಯವರು ಕೆಲವೊಂದುಸಲ ಸಾಂಕೇತಿಕ ನೆಲೆಗಳಲ್ಲಿ ವಾಸ್ತವಿಕತೆಯನ್ನು ಮೀರುತ್ತಾರೆ. ಭಾವವನ್ನು ಕಾವ್ಯದಂತೆ ಹೊಳೆಯಿಸುತ್ತಾರೆ. ಪುರಾಣ ಪ್ರತಿಮೆಗಳಿಗೆ ಗೌರಿ ಪುರಾಣ ಕನ್ಯೆಯಾಗಿ ಗೋಚರಿಸಿದರೆ, ಘನಶ್ಯಾಮ ಗಂಧರ್ವನಾಗಿದ್ದಾನೆ. ಗೌರಿಯ ನಡವಳಿಕೆ ಬದಲಾದುದನ್ನು ಕಂಡ ಅಕ್ಕು ಅವಳಿಗೆ ದೆವ್ವ ಹಿಡಿದಿದೆ ಎಂದು ತಿಳಿಯುವುದು, ಹಾಗೂ ದೃಷ್ಟಿಯಾಗಿದೆ ಎಂದು ಸುಳಿದು ಹಾಕುವುದು ಅವಳ ಸೀಮಿತ ಅನುಭವವನ್ನು ಸೂಚಿಸುತ್ತವೆ. ವೇದ–ಪುರಾಣ ಓದಿದ ದೈವತ್ವ, ದೇವ ಸಾಕ್ಷಾತ್ಕಾರವನ್ನು ವ್ಯಾಖ್ಯಾನಿಸುವ ಅರ್ಚಕ ಕೇಶವನಿಗೆ ಬದಲಾದ ಗೌರಿ ವನದೇವಿಯಂತೆ ಕಾಣುತ್ತಾಳೆ. ಕೃಷ್ಣಶಾಸ್ತ್ರಿಗೆ ಗೌರಿಯಲ್ಲಿ ಮಂಗಳಗೌರಿಯು ನೆಲೆಸಿದ್ದಾಳೆ. ಮೂರುಲೋಕದ ವಿದ್ಯಮಾನಗಳನ್ನು ಅರಿಯುವ ಶಕ್ತಿಯು ಅವಳಿಗಿದೆ. ಯೋಗಪ್ರಾಪ್ತಿಯಿಂದಾಗಿ ಗಂಗೆಯ ವಿದ್ಯಾರೂಪಿಣಿ ಶಕ್ತಿಯೂ ಸೇರಿಕೊಂಡಿದೆ. ಅಸಾಮಾನ್ಯಳಾದ ಇವಳಿಗೆ ಸಾಕ್ಷಾತ್ ಶಿವನೇ ಮನುಷ್ಯ ರೂಪಿಯಾಗಿ ಹುಟ್ಟಿಬಂದರೆ ಅನುಕೂಲವಾದ ಜಾತಕವಾಗುತ್ತದೆ. ನಿತ್ಯೆಯಾದ ಇವಳಿಗೆ ತಕ್ಕಂತೆ ಗ್ರಹಗತಿಗಳು ತಮ್ಮ ಸ್ಥಾನವನ್ನು ಬದಲಿಸುತ್ತವೆ. ಎಲ್ಲಾ ತಿಳಿದಿದ್ದರು ಲಜ್ಜಾರೂಪಿ ದೇವಿಯು ಇವಳಲ್ಲಿ ನೆಲೆಸಿರುವುದರಿಂದ ಮಾತನಾಡಿ ಏನನ್ನೂ ಬಹಿರಂಗ ಪಡಿಸುವುದಿಲ್ಲ.ಆದ್ದರಿಂದ ತನ್ನ ಶಕ್ತಿಯ ಅರಿವಿದ್ದರೂ ಅದು ತನಗೆ ತಿಳಿದಿಲ್ಲವೆಂಬಂತೆ ಇರುತ್ತಾಳೆ. ಅವಳಿಂದ ಲೋಕಕಲ್ಯಾಣವಾಗುತ್ತದೆ. ಶಾಪವಿಮುಕ್ತಿಗಾಗಿ ಬರುವ ಸೀತೆ, ಅಹಲ್ಯೆ ತಾರಾ ಎಂಬಂತೆ ಕೃಷ್ಣಶಾಸ್ತ್ರಿಗಳು ಗೌರಿಯ ಭವಿಷ್ಯವನ್ನು ಹೇಳುತ್ತಾರೆ.

ಸ್ವಾತಂತ್ರ್ಯೋತ್ತರ ಸಾಹಿತ್ಯದಲ್ಲಿ ಸಾಂಕೇತಿಕತೆಯನ್ನು ಮೇಲ್ಮಟ್ಟದಲ್ಲಿ ಗ್ರಹಿಸಿ ಬಳಸಲಾಗಿದೆ. ನಂತರದಲ್ಲಿ ಸಂಕೇತಗಳು ಅಭಿವ್ಯಕ್ತಿಯಲ್ಲಿ ಕಾವ್ಯಮಯತೆಯನ್ನು ಪಡೆಯುವ ಹಂತಕ್ಕೆ ತಲುಪಿದವು. ಕೃತಕವಾಗಿ ಕತೆಯ ನೈಜತೆಗೆ ಧಕ್ಕೆ ತರುವಂತೆ ಆರಂಭದಲ್ಲಿ ಬಳಕೆಯಾದಂತೆನಿಸಿದ ಸಂಕೇತಗಳು ನಂತರದಲ್ಲಿ ಸಮಾಜಮುಖಿಯಾಗಿ ಒಂದು ಸನ್ನಿವೇಶವನುನೋಡುವ ಹಿನ್ನೆಲೆಯಲ್ಲಿ ಬಳಕೆಯಾಗಿ ವಿಶಾಲವ್ಯಾಪ್ತಿಗೆ ಒಳಗಾದವು. ಹೀಗೆ ಅಭಿವ್ಯಕ್ತಿಯಲ್ಲಿ ಬಳಕೆಯಾದ ಸಾಂಕೇತಿಕತೆಯು ಪ್ರಪಂಚವನ್ನು ನೋಡುವಲ್ಲಿ ಒಂದು ಚೌಕಟ್ಟನ್ನು ನಿರ್ಮಿಸಿಕೊಂಡರೂ ಸಾಹಿತ್ಯ ಸೃಷ್ಟಿಯ ಮುಂದಿನ ಹಂತದಲ್ಲಿ ಇದರಿಂದ ಬಹಳಷ್ಟು ಪ್ರಯೋಜನವಾಯಿತು. ಬೌದ್ಧಿಕ ಕ್ರಿಯೆಯಾಗಿಸಿದ ಸಾಹಿತ್ಯವನ್ನು ತಮ್ಮ ಹಿಂದಿನ ಬರಹಗಾರರಿಗಿಂತ ಇನ್ನೂ ಹೆಚ್ಚು ಆಳಕ್ಕೆ ಇಳಿಯಲು ಆಸ್ಪದ ಮಾಡಿಕೊಟ್ಟು ಸಂವೇದನೆಯ ಸಾಮರ್ಥ್ಯವನ್ನು ಬೆಳೆಸಲು ನೆರವಾಯಿತು.

ಅನುಭವದ ಮೂಲಕ ಜಗತ್ತನ್ನು ಅರಿಯಲು ಹೊರಟ ನವ್ಯರಿಗೆ ಅನುಭವದಿಂದ ಪಡೆಯುತ್ತಿರುವ ಅರಿವನ್ನು ಗ್ರಹಿಸಿಕೊಳ್ಳುವ ವಿಧಾನವನ್ನು ಮತ್ತು ಅದರ ಎಲ್ಲಾ ಸೂಕ್ಷ್ಮಾತಿ ಸೂಕ್ಷ್ಮಗಳ ಸಂಕೀರ್ಣತೆಯೊಡನೆ ಹಿಡಿಯುವ ಅಭಿವ್ಯಕ್ತಿ ಕ್ರಮವನ್ನು ಹೊಸದಾಗಿ ಸಜ್ಜುಗೊಳಿಸಿಕೊಳ್ಳಬೇಕಾದ ಅನಿವಾರ್ಯತೆಯಿತ್ತು. ಅನಂತಮೂರ್ತಿಯವರು ಅನುಭವದ ಆಳಕ್ಕಿಳಿದು ಸೂಕ್ಷ್ಮ ವಿಚಾರಗಳನ್ನು ಅರ್ಥೈಸಿಕೊಳ್ಳಲು ಅಭಿವ್ಯಕ್ತಿಸಲು ಸಂಕೇತಗಳನ್ನು ಸಾಹಿತ್ಯದಲ್ಲಿ ಬಳಸಿಕೊಂಡರು. ಬಹಿರಂಗಕ್ಕೆ ಅಮೂರ್ತವಾದ ಅನುಭವ ಸಾಮಾಗ್ರಿಯನ್ನು ವೈಚಾರಿಕ ಆಕೃತಿಗಳನ್ನು ಅಭಿವ್ಯಕ್ತಿಸುವ ಹೊಣೆ ಬರಹಗಾರರಿಗಿತ್ತು. ನವ್ಯದ ಸಾಹಿತ್ಯದಲ್ಲಿ ಭಾಷೆಯ ಬಳಕೆ ಹೆಚ್ಚು ಮಹತ್ವದ್ದಾಗುತ್ತದೆ ಎಂಬುದನ್ನು ಈ ಹಿನ್ನೆಲೆಯಲ್ಲಿ ಮಾತ್ರ ಸ್ಪಷ್ಟಗೊಳ್ಳುತ್ತದೆ. ವಾಚ್ಯಾರ್ಥಕ್ಕಿಂತ ಮಿಗಿಲಾಗಿ ಮತ್ತೊಂದು ವಿಶಾಲವಾದ ಅರ್ಥದ ಸೂಚನೆಕೊಡುವುದಕ್ಕೆ ಸಂಕೇತಗಳು ಬಳಕೆಯಾದವು.

[illegible]

[illegible]

[illegible]

ಸಂಕೇತವೆಂಬುದು ಹೋಲಿಕೆಯ ತಂತ್ರವಲ್ಲ ಅರಿಯುವ ವಿಧಾನ. ಸಂಕೇತವು ತನ್ನಷ್ಟಕ್ಕೆ ಒಂದು ಅನುಭವದ ವಿನ್ಯಾಸವಾಗಿರುತ್ತದೆ.

ಸ್ವಾತಂತ್ರ್ಯೋತ್ತರ ಸಾಹಿತ್ಯಕ ಸಂದರ್ಭದಲ್ಲಿ ಮನುಷ್ಯನನ್ನು ಇಡೀ ಜಗತ್ತಿನಲ್ಲಿಯೇ ಒಂದು ತಾತ್ವಿಕತೆಯ ಅಂಶವಾಗಿ ನೋಡಲಾಗಿದೆ. ಪರಂಪರೆಯು ವ್ಯಕ್ತಿಯನ್ನು ಹೇಗೆ ಹಿಡಿದಿಟ್ಟಿದೆ ಎಂಬುದನ್ನು ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಕಾಣಬಹುದು. ಪರಂಪರೆಯಿಂದ ತಪ್ಪಿಸಿಕೊಳ್ಳಲು ಹವಣಿಸುವ, ತಪ್ಪಿಸಿಕೊಳ್ಳಲಾರದ, ಬಿಡುಗಡೆಯ ದಾರಿಯ ಹುಡುಕಾಟದಲ್ಲಿರುವ ವ್ಯಕ್ತಿಯ ಚಿತ್ರಣಗಳನ್ನು ಸ್ಥಿತಿ ಸಮೇತ ಹಿಡಿದಿಡಲು ಸಂಕೇತಗಳು ಬಳಕೆಯಾದವು. ಸಂಪೂರ್ಣವಾಗಿ ವ್ಯಕ್ತಿಯ ತಲ್ಲಣದ ಸಂದಿಗ್ಧತೆಯ ಒಂದು ಚಿತ್ರವಾಗಿ ಇಡೀ ಒಂದು ಸಂಕೇತವನ್ನು ರೂಪಾಂತರ ಮಾದರಿಯಲ್ಲಿ ಬಳಸದೆ ಸನ್ನಿವೇಶವೊಂದರ ಅಭಿವ್ಯಕ್ತಿಗೆ ಮಾತ್ರ ಸೀಮಿತಗೊಳಿಸಿ ಹೇಳಲಾಯಿತು. ಉದಾಹರಣೆಗೆ ಕಾಮದ ಚಿತ್ರಣವನ್ನು ಹೇಳುವ ಸಂದರ್ಭದಲ್ಲಿ ಹಾವಿನ ಸಂಗತಿಯನ್ನು ತರುವುದು, ಕಾಲವನ್ನು ಗಡಿಯಾರಕ್ಕೆ ಹೋಲಿಸುವುದು, ಒಳಗಿನ ತಲ್ಲಣಗಳನ್ನು ಹೊರಗಿನ ಭೌತಿಕ ಕ್ರಿಯೆಯಾದ ಓಟದ ಮೂಲಕ ಹೇಳುವುದು. ಹೀಗೆ ಇಂಥದ್ದೊಂದು ಚಲನೆಯನ್ನು, ಸಂಗತಿಯನ್ನು ಹೇಳಲು ಇಂಥದ್ದೊಂದು ಸಂಕೇತ ಎಂಬುದಾಗಿ ನಿಗದಿಪಡಿಸಿಕೊಳ್ಳಲಾಯಿತು.

ಅನಂತಮೂರ್ತಿಯವರು ತಮ್ಮ ಕಥಾಸಾಹಿತ್ಯದಲ್ಲಿ ಸಂಕೇತಕ್ಕೆ ಬಳಸಿಕೊಂಡ ವಸ್ತು, ಪರಂಪರಾಗತವಾಗಿ ಬಂದ ಪ್ರತೀಕಗಳಾದ ಪುರಾಣದ ಕಥೆಗಳು, ಜಾನಪದ ಕಲ್ಪನೆಗಳ ಜೊತೆಗೆ ಪ್ರಾಣಿಗಳನ್ನು ಬಳಸಿದ್ದಾರೆ. ಅಭಿವ್ಯಕ್ತಿಯ ಕ್ರಮ, ಪ್ರಜ್ಞೆಯ ಹೊಸತನವು ಹಳೆಯದ್ದನ್ನು ಆಧರಿಸಿರುತ್ತದೆ. ಹೀಗಾಗಿ ಈ ಭಾವನೆಗೆ ಇದು ಸಂಕೇತದ ಕಡೆಗೆ ಗಮನಹರಿಸಿದ ಲೇಖಕರು ಅಭಿವ್ಯಕ್ತಿಯ ಕ್ರಮದ ಮೇಲೆ ನಿಯಂತ್ರಣ ಸಾಧಿಸಿದರು. ಹೀಗೆ ಅನುಭವಕ್ಕಷ್ಟೆ ಪ್ರಾಮುಖ್ಯತೆ ಕೊಟ್ಟಿದ್ದರಿಂದ ಅಭಿವ್ಯಕ್ತಿಯ ಕ್ರಮವನ್ನು ಪ್ರಜ್ಞಾಪೂರ್ವಕವಾಗಿ ನಿರ್ಣಯಿಸಲು ಅವರಿಗೆ ಸಾಧ್ಯವಾಯಿತು. ಭಾಷೆಯನ್ನು ಸಂಕೇತಗಳ ಬಳಕೆಯ ಮೂಲಕ ಬದುಕಿನ ಕೆಲವೊಂದು ಸೂಕ್ಷ್ಮಗಳಿಗೆ ತೆರೆಸಬಹುದಾದ ಸಾಧ್ಯತೆಯನ್ನು ಕಂಡುಕೊಂಡರು. ಲೇಖಕರು ಸಣ್ಣ ವಿವರಗಳಿಗೂ ಮಹತ್ವ ನೀಡಿದ್ದರಿಂದ, ಗ್ರಹಿಕೆಯ ಕಣ್ಣನ್ನು ಸೂಕ್ಷ್ಮವಾಯಿತು. ಗ್ರಹಿಕೆಯು ಆಳಕ್ಕಿಳಿದಿದ್ದರಿಂದ ಅಭಿವ್ಯಕ್ತಿಯಲ್ಲಿ ಸಂಕೇತಗಳು ಬಳಕೆಗೊಂಡಿದ್ದರಿಂದ ಸನ್ನಿವೇಶದ ಸಂಕೀರ್ಣತೆಯನ್ನು ಹಿಡಿಯುವಲ್ಲಿ ಪ್ರತಿಮೆಯಾಗಬಹುದಾದ ಸಾಧ್ಯತೆಗಳನ್ನು ಕಂಡುಕೊಳ್ಳಲು ಸಹಾಯಕವಾದವು.

೩.೩ ಅಂತರಂಗ ಮತ್ತು ಬಹಿರಂಗ

ವ್ಯಕ್ತಿಯನ್ನು ಪೂರ್ಣ ಅರಿಯಲು ಅವನ ಬಾಹ್ಯ ರೂಪಕ್ಕೆ ಸಂಬಂಧಿಸಿದ ವಾಸ್ತವತೆ ಮುಖ್ಯವಾಗುವಂತೆ ಅವನ ಅಂತರಂಗಕ್ಕೆ ಸಂಬಂಧಿಸಿದ ವಾಸ್ತವತೆಯೂ ಅಷ್ಟೇ ಮುಖ್ಯವಾಗಿದೆ. ವ್ಯಕ್ತಿಯ ನಿಜವಾದ ಸ್ವರೂಪವನ್ನು ತಿಳಿಯಲು ಅವನ ಮನಸ್ಸನ್ನು ಬಗೆದು ಅಂತರಂಗದ ಪ್ರಜ್ಞೆಯ ವಿವಿಧ ಸ್ತರಗಳನ್ನು ಶೋಧಿಸಬೇಕಾಗುತ್ತದೆ. ಯಾವುದೇ ಹೋರಾಟ ಕೇವಲ ಆಂತರಂಗಿಕವಾಗಲೀ ಕೇವಲ ಬಹಿರಂಗದ್ದಾಗಲೀ ಆಗಿರುವುದಿಲ್ಲ. ಅಷ್ಟೇ ಅಲ್ಲ ಅಂತರಂಗ ಬಹಿರಂಗ ಎಂಬ ಮಾತುಗಳು ಸಂಪೂರ್ಣ ಪ್ರತ್ಯೇಕ ಕ್ಷೇತ್ರಗಳಲ್ಲ. ಅಂತರಂಗದ ರೂಪಧಾರಣೆಯ ಮೂಲಧಾತು ಬಹಿರಂಗದಲ್ಲೇ ಇರುತ್ತದೆ. ಬಹಿರಂಗದ ಬದುಕಿನಲ್ಲಿ ಕಂಡುಂಡುದರ ಪರಿಣಾಮದಲ್ಲೇ

ಅಂತರಂಗದ ನೆಲೆಗಳು ರೂಪುಗೊಳ್ಳುತ್ತವೆ. ಹೀಗೆ ರೂಪುಗೊಂಡ ಅಂತರಂಗದ ಅನುಭವ ಅಭಿವ್ಯಕ್ತವಾಗುವ ಕ್ರಿಯಾ ವಿಧಾನವು ಬಹಿರಂಗದಲ್ಲಿ ಸಂಘರ್ಷವನ್ನು ಹುಟ್ಟುಹಾಕುತ್ತದೆ.

ಮನಃಶಾಸ್ತ್ರದ ಪ್ರಭಾವವು ನವ್ಯ ಸಾಹಿತ್ಯದ ಮೇಲಾದ್ದರಿಂದ ನವ್ಯರು ತಮ್ಮ ಸಾಹಿತ್ಯದಲ್ಲಿ ವ್ಯಕ್ತಿಯ ಅಂತರಂಗದ ವಿಚಾರಗಳಿಗೆ ಮಹತ್ವ ನೀಡಿದರು. ಆಧುನಿಕ ಜಗತ್ತಿನ ಸಮಸ್ಯೆಗಳಿಂದ ಬೇಸತ್ತ ವ್ಯಕ್ತಿಯ ಆಂತರಿಕ ವಿಶ್ಲೇಷಣೆಯು ನವ್ಯರ ವಸ್ತುವಾಯಿತು. ವ್ಯಕ್ತಿಯ ಮಾನಸಿಕ ತುಮುಲಗಳಿಗೆ ವಸ್ತು ಪ್ರತಿರೂಪವೊಡ್ಡಿ ಅದನ್ನು ಮೂರ್ತೀಭವಿಸುವಂತೆ ಮಾಡುವುದು ನವ್ಯರ ಮುಖ್ಯ ತಂತ್ರಗಳಲ್ಲೊಂದಾಗಿದೆ. ಮಾನವ ವಿಜ್ಞಾನಿಗಳ ಪ್ರಕಾರ ವ್ಯಕ್ತಿಯ ಆಂತರಿಕ ಮತ್ತು ಬಾಹ್ಯಾಕರ್ಷಣೆಗಳ ನಡುವೆ ಘಟಿಸುವ ತಾಕಲಾಟವೇ ಸಂಘರ್ಷವಾಗಿದೆ.

"ನವ್ಯ ಲೇಖಕರು ಪರಂಪರಾಗತ ಮೌಲ್ಯಗಳನ್ನು ಸಂದೇಹದ ದೃಷ್ಟಿಯಿಂದ ನೋಡುತ್ತಾರೆ. ಅವರು ಬಾಳು ಬದುಕಲು ಯೋಗ್ಯವಾದ, ಅರ್ಥಪೂರ್ಣ ಎಂಬುದನ್ನು ಒಪ್ಪಿಕೊಂಡು ಹೊರಡುವುದಿಲ್ಲ. ಯಾವುದು ಸರಿ ಯಾವುದು ತಪ್ಪು ಎಂದು ಸುಲಭವಾಗಿ ನಿರ್ಧರಿಸಲಿಕ್ಕಾಗದ ಗಹನಗಳಲ್ಲಿ, ಸಂದಿಗ್ಧಗಳಲ್ಲಿ ಅವರು ತೊಳಲಾಡುತ್ತಾರೆ. ಎಷ್ಟೋ ಜನ ನವ್ಯ ನಾಯಕರ ದುರಂತವಿರುವುದು ಈ ತೊಳಲಾಟದಲ್ಲಿ, ಅನಿಶ್ಚಿತತೆಯಲ್ಲಿ, ಬದುಕಿನ ಜಟಿಲ ಸಮಸ್ಯೆಗಳಿಗೆ ಗಣಿತದ ಲೆಕ್ಕಗಳಿಗಿರುವಂತೆ ಖಚಿತವಾದ ಉತ್ತರಗಳಿಲ್ಲ ಎಂದು ಅವರ ನಂಬಿಕೆ."[೧೪] ಅನಂತಮೂರ್ತಿಯವರು ವ್ಯಕ್ತಿಯ ಅಂತರಂಗದಲ್ಲಿನ ಭಾವನೆಗಳು ಹಾಗೂ ಬಾಹ್ಯ ವಿಚಾರಗಳ ನಡುವಿನ ಸಂಘರ್ಷವನ್ನು ತಮ್ಮ ಕಥಾ ಸಾಹಿತ್ಯದಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ವ್ಯಕ್ತಿಯ ಮನೋವ್ಯಾಪಾರದಲ್ಲಿನ ವಿಕ್ಷಿಪ್ತತೆ, ತಾಕಲಾಟ ಹಾಗೂ ಪರಕೀಯ ಪ್ರಜ್ಞೆ ಇಂಥ ವಿಚಾರಗಳನ್ನು ಕಥಾ ಸಾಹಿತ್ಯದಲ್ಲಿ ನೈಜವಾಗಿ ಹಿಡಿದಿಟ್ಟಿದ್ದಾರೆ. ಜೀವನದಲ್ಲಿ ವ್ಯಕ್ತಿಯ ಭಾವನೆಗಳು ಪಡೆಯುವ ವಿಚಾರ ಪ್ರಚೋದನೆಯನ್ನು ಇಲ್ಲಿನ ಕಥಾ ಸಾಹಿತ್ಯದಲ್ಲಿ ಕಾಣಬಹುದು.

'ಖೋಜರಾಜ' ಕತೆಯಲ್ಲಿ ರಾಜಣ್ಣನ ಅಂತರಂಗದ ಭಾವನೆಗಳಿಗೆ ಬಹಿರಂಗದ ವಿಚಾರಗಳಿಗೆ ವ್ಯತ್ಯಾಸವಿರುವುದರಿಂದ ದ್ವಂದ್ವಕ್ಕೊಳಗಾಗುತ್ತಾನೆ. ಚಿಕ್ಕಂದಿನಲ್ಲಿ ಶಾಲೆಗೆ ಚಕ್ಕರ್ ಹಾಕಿ ಸೈಕಲ್ ರಿಪೇರಿ ಮಾಡುತ್ತಿದ್ದ ರಾಜಣ್ಣನನ್ನು ಅವನ ತಂದೆ ದಂಡಿಸುತ್ತಾನೆ. ಮುಂದೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನ ನೀಡಿದ ರಾಜಣ್ಣ ಮುಖ್ಯ ಗುರುಗಳಿಂದ ಆದರ್ಶವಾದಿ ತರುಣ ಎನ್ನಿಸಿಕೊಳ್ಳುತ್ತಾನೆ. ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಕವನ ವಾಚನ ಹಾಗೂ ಚರ್ಚಾ ಗೋಷ್ಠಿಗಳಲ್ಲಿ ಭಾಗವಹಿಸಿ ರಾಜಣ್ಣ ಚಪ್ಪಾಳೆ ಗಿಟ್ಟಿಸುತ್ತಾನೆ. ಪ್ರತಿಭಾವಂತನಾದ ಅವನ ಲೇಖನವು ಪತ್ರಿಕೆಯಲ್ಲಿ ಪ್ರಕಟವಾಗುತ್ತದೆ. ಸ್ನೇಹಶೀಲ ಸಜ್ಜನನಾದ ರಾಜಣ್ಣನಿಗೆ ಉಜ್ವಲ ಭವಿಷ್ಯವಿದೆ. ಇಂಗ್ಲಿಷ್, ಸಂಸ್ಕೃತ ಹಾಗೂ ಕನ್ನಡ ಭಾಷೆಯಲ್ಲಿ ಆಳವಾದ ಜ್ಞಾನವಿದೆ ಎಂದು ಸಂಪಾದಕರು ಪ್ರಶಂಸಿಸಿ ಬರೆದಿರುತ್ತಾರೆ.

ರಾಜಣ್ಣನಿಗೆ ಸಮಾಜದಲ್ಲಿ ಗೌರವದಿಂದ ಬದುಕಬೇಕೆಂಬ ಇಚ್ಛೆಯಿದೆ. ದ್ವಾರಕನಾಥನಂತೆ ಹೆಸರು ಮಾಡಿ ಪ್ರತಿಷ್ಠಿತ ವ್ಯಕ್ತಿಯಾಗಬೇಕೆಂಬ ಹಂಬಲವಿದೆ. ಬೇರೆ ಬೇರೆ ಲೇಖನಗಳನ್ನು ಕೂಡಿಸಿ ಅವುಗಳನ್ನು ತನ್ನ ಹೆಸರಿನಲ್ಲಿ ಪ್ರಕಟ ಮಾಡಿಕೊಳ್ಳುತ್ತಾನೆ. ಕಾಲೇಜಿನಲ್ಲಿ ವಿದ್ಯಾರ್ಥಿನಿಯರ ಕಣ್ಮಣಿಯಾಗಿದ್ದ ರಾಜಣ್ಣ ಅರುಂಧತಿಯ ಸ್ನೇಹವನ್ನು ಸಂಪಾದಿಸುತ್ತಾನೆ. ಗುರುಗಳನ್ನು ಮಾತನಾಡಿಸುವ ನೆಪದಲ್ಲಿ ಅವರ ಮಗಳು ಅರುಂಧತಿಯನ್ನು ಸಂಧಿಸುತ್ತಾನೆ. ಬಹಿರಂಗದಲ್ಲಿ ಗುರುಗಳ ಮಗಳು ಸಹೋದರಿ ಎಂದು ಹೇಳುವ ರಾಜಣ್ಣ ಅಂತರಂಗದಲ್ಲಿ

[illegible]

[illegible]

[illegible]

[illegible]

[illegible]

ಅವಳನ್ನು ಒಲಿಸಿಕೊಳ್ಳಲು ಹೊಂಚು ಹಾಕುತ್ತಾನೆ. ನಮ್ಮಿಬ್ಬರ ನಿಸ್ವಾರ್ಥ ಸ್ನೇಹವನ್ನು ಸಮಾಜ ಅರ್ಥ ಮಾಡಿಕೊಳ್ಳುವುದಿಲ್ಲ ಎನ್ನುವ ರಾಜಣ್ಣ ತನ್ನ ಭಾವನೆಗಳು ಶುದ್ಧ ಎಂದು ತೋರಿಸಲು ಪ್ರಯತ್ನಿಸುತ್ತಾನೆ. ಸಮಯ ಸಾಧಕನಾದ ರಾಜಣ್ಣ ಅರುಂಧತಿಯನ್ನು ಪ್ರೀತಿಸುತ್ತಾನೆ. ಅವಳೊಂದಿಗೆ ವಿವಾಹ ಸಂಬಂಧವನ್ನು ನಿರಾಕರಿಸುತ್ತಾನೆ. ಬದುಕಿನುದ್ದಕ್ಕೂ ಅರುಂಧತಿಯು ಬೇರೆಯವರನ್ನು ಮದುವೆಯಾಗಬಾರದೆಂದು ನಿರೀಕ್ಷಿಸುತ್ತಾನೆ. ನಮ್ಮ ಪ್ರೇಮ ಪವಿತ್ರವಾದುದು ಮದುವೆಯಾಗಿ ಅದನ್ನು ಸಾಂಸಾರಿಕ ಕೊಚ್ಚೆಗೆ ಎಳೆಯುವುದು ಬೇಡವೆನ್ನುತ್ತಾನೆ. ರಾಜಣ್ಣನ ಚಂಚಲ ಸ್ವಭಾವವು ಅರುಂಧತಿಗೆ ಬೇಸರ ತರಿಸುತ್ತದೆ. ಹದಿನೈದರ ತನಕ ರಾಜಣ್ಣ ಆ ಮೇಲೆ ಖೋಜಣ್ಣ ಎಂದು ಕಿಟ್ಟಿಯು ಗೆಳೆಯ ರಾಜಣ್ಣನ ವ್ಯಕ್ತಿತ್ವದ ಇಬ್ಬಂದಿತನವನ್ನು ಗೇಲಿ ಮಾಡುತ್ತಾನೆ.

ರಾಜಣ್ಣನ ಆದರ್ಶವನ್ನು ಜನರು ಮೆಚ್ಚುತ್ತಿದ್ದುದರಿಂದ ತಾನು ಹೆಸರನ್ನು ಗಳಿಸಿಕೊಳ್ಳಬೇಕೆಂಬ ಹುಂಬತನವನ್ನು ಬೆಳೆಸಿಕೊಳ್ಳುತ್ತಾನೆ. ಸ್ವಾರ್ಥದ ಕಡೆ ಅವನ ಮನಸ್ಸು ವಾಲಿದಂತೆ ಸಹಜ ಪ್ರವೃತ್ತಿಗಳು ದೂರಾಗುತ್ತವೆ. ಅರುಂಧತಿ ಮತ್ತು ತನ್ನ ಸಂಬಂಧವನ್ನು ಕೃತಕವೆಂದುಕೊಳ್ಳುತ್ತಾನೆ. ಅರುಂಧತಿಯನ್ನು ನಂಬಿಸಲು ಹೋದಾಗ ರಾಜಣ್ಣನ ಅಂತರಂಗದ ಭಾವನೆಗಳು ಬಹಿರಂಗಗೊಳ್ಳುತ್ತವೆ. ಅತಿರೇಕತನದಿಂದ ವ್ಯಕ್ತಿತ್ವವನ್ನು ಕಳೆದುಕೊಂಡು ಖೋಜರಾಜನಾಗುತ್ತಾನೆ. ದ್ವಂದ್ವಕ್ಕೆ ಸಿಲುಕಿದ ರಾಜಣ್ಣನಿಗೆ ತನ್ನ ಸೃಜನಶೀಲ ಬರವಣಿಗೆಯ ಬಗ್ಗೆ ಅನುಮಾನ ಬರುತ್ತದೆ.

ರಾಜಣ್ಣನಿಗೆ ತನ್ನ ಸಾಹಿತ್ಯ, ವಿಮರ್ಶೆ ಹಾಗೂ ಮುಖದ ಮೇಲಿನ ಮಂದಹಾಸವು ಜನರನ್ನು ದಿಕ್ಕು ತಪ್ಪಿಸಿದೆ ಎಂದು ಅವನ ಮನಸ್ಸು ಹೇಳಿದಂತೆ ಭ್ರಮಿಸುತ್ತಾನೆ. ಬೇರೆಯವರ ಕಣ್ಣಿನಲ್ಲಿ ಆಕರ್ಷಕವಾಗಿ ಕಾಣಲೆಂದು ರಾಜಣ್ಣ ತನ್ನ ವ್ಯಕ್ತಿತ್ವವನ್ನು ಬಲಿ ಕೊಡುತ್ತಾನೆ. ಹೆಂಗಸರ ಪವಿತ್ರಪ್ರೇಮ ಹಾಗೂ ದ್ವಾರಕನಾಥರಂಥ ಜ್ಞಾನಿಗಳ ಸಹವಾಸದಲ್ಲಿದ್ದರೂ ರಾಜಣ್ಣ ಮೂರ್ಖನಂತೆ ವರ್ತಿಸುತ್ತಾನೆ. ಹೆಂಗಸರು ಅವನನ್ನು ನಿರುಪದ್ರವಿಯೆಂದು ಭಾವಿಸಿದ್ದಾರೆ. ನೀನು ನಯವಂಚಕನೆಂದು ಗೊತ್ತಾದರೆ ಜಿಗುಪ್ಸೆಪಡುತ್ತಾರೆಂದು ರಾಜಣ್ಣನಿಗೆ ತನ್ನ ಅಂತರಾತ್ಮ ನುಡಿದಂತೆ ಭಾಸವಾಗುತ್ತದೆ. "ಖೋಜರಾಜ ದಲ್ಲಿ ನಮ್ಮ ಗಮನಕ್ಕೆ ಬರುವ ಅಂತರ್ಮುಖತೆ, ಅನುಭವಛಿದ್ರೀಕರಣ, ವ್ಯಕ್ತಿತ್ವದ ವಿಘಟನೆಯನ್ನು ಕಾಣಬಹುದಾಗಿದೆ."[೧೫] ಸ್ವಪ್ರತಿಷ್ಠೆ, ಉನ್ನತ ಜೀವನದ ಹಂಬಲ ಇವು ಅವನ ಬಹಿರಂಗದ ಆದರ್ಶಗಳಾದರೆ ಅವುಗಳನ್ನು ಪಡೆಯಲು ನಡೆಸುವ ಕುತಂತ್ರ ಅಂತರಂಗದ ದ್ವಂದ್ವವಾಗಿದೆ.

'ಕಾರ್ತೀಕ' ಕತೆಯಲ್ಲಿ ರಾಘವನು ತನ್ನ ಜೀವನದಲ್ಲಿ ನಡೆದಿದ್ದ ಘಟನೆಗಳನ್ನು ಸದ್ಯದ ಪರಿಸ್ಥಿತಿಗೆ ಹೋಲಿಸಿಕೊಂಡು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾನೆ. ರಾಘವ ತನ್ನ ಬಾಲ್ಯದ ನೆನಪುಗಳನ್ನು ಕುರಿತು ಯೋಚಿಸುವುದನ್ನು ಹೆಂಡತಿ ಛಾಯಾ ಸಹಿಸುವುದಿಲ್ಲ. ಅಂತರಂಗದ ಭಾವನೆಗಳನ್ನು ರಾಘವನು ಛಾಯಾಳೊಂದಿಗೆ ಚರ್ಚಿಸಲು ಇಷ್ಟಪಡುವುದಿಲ್ಲ. ಅನ್ಯ ಮನಸ್ಕನಾಗಿರುವ ರಾಘವನನ್ನು ಛಾಯಾ ದೂರುತ್ತಾಳೆ. ಪ್ರೀತಿ ಎಂದರೆ ಕರ್ಮಾಂತರಗಳಲ್ಲಿ ತೊಡಗಿದಂತೆ, ಸಂಸಾರವೆಂದರೆ, ದುಃಖ ಎಂದು ಆಲೋಚಿಸುವ ರಾಘವನು ಗೊಂದಲಕ್ಕೊಳಗಾಗುತ್ತಾನೆ.

[illegible]

ರಾಘವನ ತಾಯಿ ಮತ್ತು ರಾಗಜ್ಜನಿಗೂ ನಡೆಯುತ್ತಿದ್ದ ಜಗಳ ಹಾಗೂ ಮನಸ್ತಾಪದಿಂದ ರಾಘವ ಬೇಸತ್ತಿದ್ದನು. ಅವನಿಗೆ ಪ್ರೀತಿಯಿಂದ ತಿಂಡಿಯನ್ನು ಕೊಡುತ್ತಿದ್ದ ಅಮ್ಮನೂ ಬೇಕು, ಹೊರಗೆ ಸುತ್ತಾಡಿಸಿ ಅಕ್ಕರೆಯಿಂದ ಕತೆ ಹೇಳುವ ಅಜ್ಜನೂ ಬೇಕು. ನನ್ನ ಮೊಮ್ಮಗನನ್ನು ಕರೆದುಕೊಂಡು ಹೋಗಲು ಸೊಸೆಯ ಅಪ್ಪಣೆ ಕೇಳಬೇಕಾಯಿತಲ್ಲವೆಂದು ಅಜ್ಜ ಚಿಂತಿಸುತ್ತಾನೆ. ರಾಜನ ಹಾಗೆ ಬದುಕಿದ ನನಗೆ ಇಳಿವಯಸ್ಸಿನಲ್ಲಿ ಹೆಣ್ಣೊಂದರ ಅಂಕೆಯಲ್ಲಿ ಇರಬೇಕಾದ ಪರಿಸ್ಥಿತಿ ಬಂದಿತೆಂದು ರಾಗಜ್ಜ ಯೋಚಿಸುತ್ತಾನೆ. ಗ್ರಹ ಕೂಡಿಬರದ ಹೆಣ್ಣಿನ ಜೊತೆ ತಮ್ಮನ ಮದುವೆ ಮಾಡಿಸಿದ್ದರಿಂದ ಅವನ ಸಾವಿಗೆ ರಾಗಜ್ಜನೇ ಕಾರಣನಾದನೆಂದು ತಿಳಿದಿದ್ದ ತಾಯಿಯು ಮಾವನನ್ನು ದೂರುತ್ತಾಳೆ. ರಾಘವನ ತಾಯಿ ಬಾವಿಗೆ ಬೀಳುವ ತನಕ ರಾದ್ಧಾಂತವಾಗಿದ್ದ ಜಗಳವು ಕೊನೆಗೆ ತಣ್ಣಗಾಗುತ್ತದೆ.

ತಾಯಿ ಮತ್ತು ಅಜ್ಜನ ನಡುವೆ ಮನಸ್ತಾಪವಿದ್ದುದರಿಂದ ಮನೆ ಬಿಟ್ಟು ಹೋದ ರಾಗಜ್ಜ ಅನಾಥನಂತೆ ಸಾಯುತ್ತಾನೆ. ಮನೆಯವರೆಲ್ಲ ಪಾಪಭಾವದಿಂದ ಮಂಕಾಗುತ್ತಾರೆ. ಹಿರಿಯರ ನಡುವಿನ ಅಸಮಧಾನ, ದ್ವೇಷ, ಪ್ರೀತಿಗಳ ಎಳೆದಾಟದಲ್ಲಿ ರಾಘವನಿಗೆ ಬದುಕು ಬೇಸರವೆನಿಸುತ್ತದೆ. ತಂದೆ ತಾಯಿಗಳಿಗೆ ಭಿನ್ನವಾಗಿ ಬದುಕಬೇಕೆಂದು ರಾಘವನು ಛಾಯಾಳನ್ನು ಪ್ರೇಮವಿವಾಹವಾಗುತ್ತಾನೆ. ಕುಟುಂಬದ ವಿರೋಧವಾಗಿ ಬದುಕುತ್ತಿರುವ ರಾಘವನು ನೆಮ್ಮದಿಯಿಂದ ಜೀವನ ನಡೆಸುವುದಿಲ್ಲ.

ತಾಯಿ ತಂದೆಯನ್ನು ಧಿಕ್ಕರಿಸಿದ ಹಾಗೂ ಛಾಯಾಳ ಸಂಬಂಧ ಇನ್ನೂ ಸಂಪೂರ್ಣ ಸರಳವಾಗಿಲ್ಲ ಎಂದುಕೊಂಡ ರಾಘವನ ಅಂತರಂಗದಲ್ಲಿನ ಆಲೋಚನೆಗಳಿಗೆ ಬಹಿರಂಗದಲ್ಲಿ ಉತ್ತರ ಕಂಡುಕೊಳ್ಳಲಾಗುವುದಿಲ್ಲ. ತನ್ನ ಹೆಂಡತಿಯೊಂದಿಗೆ ಪ್ರೀತಿಯಿಂದ ಇದ್ದಾಗ, ಸಿಟ್ಟಿನಿಂದ ವರ್ತಿಸಿದಾಗ ದ್ವಂದ್ವವನ್ನು ಎದುರಿಸುತ್ತಾನೆ. ಅಮ್ಮ ದೂರು ಹೇಳಿದರೆ ಇದೇನು ನಿನ್ನ ರಗಳೆ ಎನ್ನುತ್ತಿದ್ದ ಹಾಗೂ ಮುದ್ದಿನಿಂದ ಮಾತನಾಡಿಸಿದರೆ ಇದೇನು ನಿನ್ನ ಹುಡುಗಾಟ ಎನ್ನುತ್ತಿದ್ದ ಅಪ್ಪನ ಸ್ವಭಾವವನ್ನು ರಾಘವ ನೆನೆಸಿಕೊಳ್ಳುತ್ತಾನೆ. "ರಾಘವ ಬಾಲ್ಯದಲ್ಲಿ ಕಂಡ, ಈಗ ಕಾಣುತ್ತಿರುವ ಸಮಸ್ಯೆಗಳೆರಡೂ ಒಂದೇ. ಆದರೆ ಆ ಸಮಸ್ಯೆಗಳನ್ನೆದುರಿಸುವ ಸಂದರ್ಭ, ವ್ಯಕ್ತಿಗಳು ಬೇರೆ ಬೇರೆ. ತನ್ನ ತಂದೆಗೂ ಅಜ್ಜ-ಅಜ್ಜಿಯರಿಗೂ ನಡುವೆ ತನ್ನ ತಾಯಿಯ ಸಲುವಾಗಿ ಆರಂಭವಾದ ವಿರಸದ ಘಟನೆಗಳು ನೆನಪಾದ ಹಾಗೆ ಅವುಗಳ ಒಡಲಿನಲ್ಲೇ ತನ್ನ ಹೆಂಡತಿಯ ಸಲುವಾಗಿ ತಾನು ತನ್ನ ತಂದೆ-ತಾಯಿಯರನ್ನು ಅಗಲಿ ಬರಬೇಕಾದ ಸಂಗತಿಗಳೂ ಹೆಣೆದುಕೊಂಡಿವೆಯೆಂಬುದರ ಅರಿವಾಗುತ್ತದೆ." [೧೬] ತನ್ನ ಹಿಂದಿನ ಜೀವನವನ್ನು ಇಂದಿನ ಜೀವನಕ್ಕೆ ಹೋಲಿಸಿದ ರಾಘವನಿಗೆ ಎರಡು ಬಗೆಯ ಜೀವನದಿಂದಲೂ ತೃಪ್ತಿಯಿಲ್ಲದೆ ಗೊಂದಲವನ್ನು ಎದುರಿಸುತ್ತಾನೆ.

'ಜರತ್ಕಾರು' ಕತೆಯಲ್ಲಿ ತಿಮ್ಮಪ್ಪನು ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡಿರುತ್ತಾನೆ. ಮಗನ ಬಗ್ಗೆ ಶ್ರದ್ಧೆ ವಹಿಸಿದ ತಾಯಿ ರುಕ್ಮಿಣಿಯಮ್ಮ ನಿಯಮ ನಿಷ್ಠೆಯಿಂದ ತಿಮ್ಮಪ್ಪನನ್ನು ಬೆಳೆಸಿರುತ್ತಾಳೆ. ರುಕ್ಮಿಣಿಯಮ್ಮನಿಗೆ ದೇವರಲ್ಲಿ ವಿಶೇಷವಾದ ನಂಬಿಕೆ ಇರುತ್ತದೆ. ಮಡಿವಂತಳಾದ ತಾಯಿ ತಾನೇ ಬೇಯಿಸಿಕೊಂಡ ಗಂಜಿಯನ್ನು ದಿನಕ್ಕೆ ಒಂದೇಸಲ ಊಟ ಮಾಡುತ್ತಾಳೆ. ಏಕಾದಶಿಯ ದಿನ ಉಪವಾಸವನ್ನು ಮಾಡುತ್ತಾಳೆ. ಉಪನಯನವಾದ ಮೇಲೆ ತಿಮ್ಮಪ್ಪನು ಮಡಿಯನ್ನು ಧರಿಸಿದರೆ ಮಾತ್ರ ಊಟಕ್ಕೆ ಬಡಿಸುತ್ತಿರುತ್ತಾಳೆ. ಹೀಗೆ ಸಂಪ್ರದಾಯದಲ್ಲಿ ಬೆಳೆದ ತಿಮ್ಮಪ್ಪನು ದೊಡ್ಡವನಾಗುತ್ತಾ ಹೋದಂತೆ ದುಶ್ಚಟಗಳಿಗೆ ಬಲಿಯಾಗುತ್ತಾನೆ.

[illegible]

[illegible]

[illegible]

[illegible]

ತಿಮ್ಮಪ್ಪ ಚಿಕ್ಕವನಿದ್ದಾಗ ತನ್ನ ಕಿವಿಗೆ ಬಿದ್ದ ಅಕ್ಕಪಕ್ಕದ ಮನೆಯ ಸಂಸಾರ ತಾಪತ್ರಯಗಳು ಹಾಗೂ ಸಣ್ಣತನಗಳನ್ನು ತನ್ನ ಬರವಣಿಗೆ ವಸ್ತುವನ್ನಾಗಿ ಮಾಡಿಕೊಂಡಿರುತ್ತಾನೆ. ಬದುಕಿಗೆ ಅರ್ಥವಿಲ್ಲ ಎನ್ನುವ ಧೋರಣೆಯನ್ನು ಅವನ ಸಾಹಿತ್ಯ ಕೃತಿಗಳು ಬಿಂಬಿಸುತ್ತವೆ. ಸಜ್ಜನ, ಪ್ರಗತಿಶೀಲರೆಂದು ಗುರುತಿಸಲ್ಪಟ್ಟವರನ್ನು ತಿಮ್ಮಪ್ಪ ತನ್ನ ಬರವಣಿಗೆಯಲ್ಲಿ ಅನಾವರಣಗೊಳಿಸುತ್ತಾನೆ. ದೇವರ ಮೇಲಿನ ನಂಬಿಕೆಯನ್ನು ಅವನ ರಚನೆಗಳು ಹುಸಿಗೊಳಿಸುತ್ತವೆ.

ತಾಯಿಯಿಂದ ಕಲಿತುಕೊಂಡ ಮಡಿ ಮೈಲಿಗೆಗಳನ್ನು ಕೈಬಿಟ್ಟ ತಿಮ್ಮಪ್ಪ ದುಶ್ಚಟಗಳಿಗೆ ದಾಸನಾಗುತ್ತಾನೆ. ಮದುವೆಯಾಗಲು ಒಪ್ಪದ ಮಗನ ಜಾತಕವನ್ನು ರುಕ್ಮಿಣಿಯಮ್ಮ ಜೋಯಿಸರಿಗೆ ತೋರಿಸುತ್ತಾಳೆ. ಮಗನಿಗೆ ಸನ್ಯಾಸ ಬಯಕೆಯ ಕಂಟಕವಿದೆಯೆಂದು ತಿಳಿದಾಗ ಅವಳಿಗೆ ಆತಂಕವಾಗುತ್ತದೆ. ತಿಮ್ಮಪ್ಪನ ಬರವಣಿಗೆಯನ್ನು ಮೆಚ್ಚುವ ಕೆಲವು ಅಭಿಮಾನಿಗಳಿದ್ದಾರೆ. ಅವನ ಬರವಣಿಗೆಯು ರೋಗಗ್ರಸ್ಥವಾದುದೆಂದು ಟೀಕಿಸುವವರು ಇದ್ದಾರೆ. ತಿಮ್ಮಪ್ಪನಿಗೆ ಅಡಿಗೆ ಮಾಡಿ ಬಡಿಸಲು ಎಸ್.ಎಸ್.ಎಲ್.ಸಿ. ಓದಿದ ಕಮಲ ಎಂಬ ಹುಡುಗಿಯನ್ನು ತಾಯಿಯು ನೇಮಿಸಿರುತ್ತಾಳೆ. ಮನೆಯ ಒಪ್ಪ ಓರಣದ ಜೊತೆಗೆ ತಿಮ್ಮಪ್ಪನು ಬರೆದದ್ದನ್ನೆಲ್ಲ ಕಮಲ ಟೈಪ್ ಮಾಡುತ್ತಾಳೆ. ತಿಮ್ಮಪ್ಪನನ್ನು ಆರಾಧಿಸುವ ಅವಳು ತಿಮ್ಮಪ್ಪನ ವಾಂತಿಯನ್ನು ಬೇಸರಪಡದೆ ಬಾಚುತ್ತಾಳೆ. ಭಕ್ತಿಯು ತೋರಿಕೆಯದು, ವಿವಾಹ ಬಂಧನ ಕಪಟವಾದುದ್ದು ಎಂದುಕೊಂಡಿರುವ ತಿಮ್ಮಪ್ಪ ಎಲ್ಲವನ್ನು ವ್ಯವಹಾರಿಕ ದೃಷ್ಟಿಕೋನದಿಂದ ನೋಡುತ್ತಾನೆ. ತಾಯಿ ಮನೆಯಲ್ಲಿಲ್ಲದ್ದನ್ನು ಗಮನಿಸಿ ಒಂಟಿಯಾದ ಕಮಲಳನ್ನು ಒಲಿಸಿಕೊಂಡು ದೇಹಸುಖ ಪಡೆಯುತ್ತಾನೆ. ದುಡ್ಡು ಕೊಡಲು ಹೋದಾಗ ನಿರಾಕರಿಸಿದ ಕಮಲ ದುಃಖಿಸುತ್ತಾಳೆ. ಅಂತರಂಗದಲ್ಲಿ ಅವಳನ್ನು ವೇಶ್ಯೆಯೆಂದು ಭಾವಿಸಿದ್ದ ತಿಮ್ಮಪ್ಪನಿಗೆ ಬಹಿರಂಗದಲ್ಲಿ ಅವಳು ತನ್ನನು ಆರಾಧಿಸುತ್ತಿದ್ದಾಳೆಂದು ತಿಳಿದಾಗ ದ್ವಂದ್ವಕ್ಕೊಳಗಾಗುತ್ತಾನೆ.

ತಿಮ್ಮಪ್ಪನಿಗೆ ಕಮಲ ವ್ರತಶೀಲ ರುಕ್ಮಿಣಿಯಮ್ಮನಂತೆ ದೇವರ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಕಾದಿರುವ ಜಾತಕ ಪಕ್ಷಿಯಂತೆ ಕಾಣುತ್ತಾಳೆ. ದುಶ್ಚಟಗಳಿಗೆ ಬಲಿಯಾಗಿದ್ದವನು ಸ್ವಪ್ರೇಮದ ಗಿಜಿಗುಟ್ಟುವ ಜಾಲದಲ್ಲಿ ಮೋಹಿತನಾದಾಗ ವಿಸ್ಮಯಗೊಳ್ಳುತ್ತಾನೆ. ಕಮಲಳ ಆಕರ್ಷಣೆಯಿಂದ ತಪ್ಪಿಸಿಕೊಳ್ಳಲು ತಿಮ್ಮಪ್ಪ ನಿತ್ಯ ಕುಡಿದು ವೇಶ್ಯೆಯ ಮನೆಗೆ ಹೋಗಲಾರಂಭಿಸುತ್ತಾನೆ. ಮನುಷ್ಯನ ಜರತ್ಕಾರು ಸ್ಥಿತಿಯ ದುಮ್ಮಾನಕ್ಕೆ ಪರ್ಯಾಯವಾದ ಸ್ಥಿತಿಯನ್ನು ತನ್ನ ಕೃತಿಯಲ್ಲಿ ಮೂಡಿಸಲು ಯತ್ನಿಸಿದ ತಿಮ್ಮಪ್ಪ ವಿಫಲನಾಗುತ್ತಾನೆ.

ಆತ್ಮ ವಿಮರ್ಶೆಯನ್ನು ಮಾಡಿಕೊಂಡ ತಿಮ್ಮಪ್ಪನು ತನ್ನ ಕೃತಿಗಳು ಪ್ರಭೆ ತೋರುವುದು ಆತ್ಮದ್ವೇಷಗಳಿಗೆ ಮಾತ್ರ, ಏಕೆಂದರೆ ಅವರೂ ಆತ್ಮರತರೇ ಎಂದುಕೊಳ್ಳುತ್ತಾನೆ. ವ್ಯಕ್ತಿತ್ವವನ್ನು ಛೇಡಿಸಿಕೊಂಡು ಬರೆದ ಬರವಣಿಗೆಯಿಂದ ಹೆಮ್ಮೆಪಡುತ್ತಿದ್ದ ತಿಮ್ಮಪ್ಪನಿಗೆ ಆ ಬರವಣಿಗೆ ನಿಸ್ತೇಜವೆನಿಸತೊಡಗಿದಾಗ ಕೃತಿಗಳನ್ನು ಕಸದ ತೊಟ್ಟಿಗೆ ಎಸೆಯುತ್ತಾನೆ. ಪ್ರೀತಿ ಮತ್ತು ಭಕ್ತಿಯಿಂದ ಜೀವನದ ಜಾಲದಲ್ಲಿ ಸಿಕ್ಕಿಕೊಳ್ಳುತ್ತೇನೆಂದು ಹೆದರಿದ್ದರಿಂದ ಒಡೆದು ನಿಂತು ಬರೆದೆನೆಂದುಕೊಳ್ಳುತ್ತಾನೆ.

ಸ್ವೇಚ್ಛೆಯಿಂದ ಬದುಕುತ್ತಿದ್ದ ತಿಮ್ಮಪ್ಪ ತಾಯಿಯು ಸಾಯುವ ಸಮಯದಲ್ಲಿ ಪರಿವರ್ತನೆಗೊಂಡು ಪುನಃ ಮಡಿಯನ್ನು ಆಚರಿಸುತ್ತಾನೆ. ಶುಭ್ರವಾಗಿ ಸ್ನಾನ ಮಾಡಿ ಮಡಿಯುಟ್ಟು ಕಾಶಿಯಿಂದ ತಂದ ಗಿಂಡಿಯ ನೀರನ್ನು ತಾಯಿಯ ಬಾಯಿಗೆ ಹಾಕುತ್ತಾನೆ. ಅವಳ ಇಚ್ಛೆಯಂತೆ ಕಮಲಳ ಕೈ ಹಿಡಿಯುತ್ತಾನೆ. ತಾಯಿ ತೀರಿದ ಮೇಲೆ ಶ್ರಾದ್ಧ ಕರ್ಮಗಳನ್ನು ನಿಯಮದಿಂದ ಪಾಲಿಸುವುದರ ಮುಖಾಂತರ ಹೊಸ ಜೀವನವನ್ನು ಆರಂಭಿಸುತ್ತಾನೆ.

[illegible]

[illegible]

[illegible]

[illegible]

[illegible]

"ದೇವರಿಂದ, ಮಕ್ಕಳಿಂದ, ಪುಳಕಿತರಿಂದ ಸಮೃದ್ಧವಾದ ಈ ಗಿಜಿ ಗಿಜಿ ಕೊಚ್ಚೆಯಲ್ಲಿ ಕಂತುತ್ತೇನೆಂದು ತಿಮ್ಮಪ್ಪ ಹೆದರಿದ. ತನ್ನ ಆಂತರ್ಯದ ಮಾತಿನ ಹೊಳಪನ್ನೂ ಶುಚಿಯನ್ನು ಕಳೆದುಕೊಂಡುಬಿಟ್ಟೆನೆಂದು ಆತಂಕಪಟ್ಟ."[೧೭] ತನ್ನ ತಾಯಿಯ ನಿಯಮ ಆಚರಣೆಯಿಂದ ಬೇಸತ್ತಿದ್ದ ತಿಮ್ಮಪ್ಪ ಅದರ ವಿರುದ್ಧ ಜೀವನ ರೂಪಿಸಿಕೊಂಡಿರುತ್ತಾನೆ. ನಂತರದ ಘಟನೆಗಳಿಂದ ಅಂತರಂಗದ ಆಲೋಚನೆಗಳು ಬಹಿರಂಗಕ್ಕೆ ಹೊಂದಾಣಿಕೆಯಾಗದೇ ಗೊಂದಲಗೊಳ್ಳುತ್ತಾನೆ.

'ನವಿಲುಗಳು' ಕತೆಯಲ್ಲಿ ಕಿಟ್ಟಣ್ಣನ ತಂದೆ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುತ್ತಾನೆ. ಅಪ್ಪನ ಸ್ವಾತಂತ್ರ್ಯಪ್ರಿಯತೆ, ಹಠಮಾರಿತನದಿಂದಾಗಿ ಕುಟುಂಬದವರು ಅರೆ ಹೊಟ್ಟೆಯಲ್ಲಿ ಬದುಕಬೇಕಾಗಿರುತ್ತದೆ. ಕಿಟ್ಟಣ್ಣ ಕೆಲಸಕ್ಕೆ ಸೇರುವ ತನಕ ತಾಯಿಯು ರೇಷ್ಮೆ ಸೀರೆಯನ್ನು ಕಂಡಿರಲಿಲ್ಲ. ತಂದೆಯು ಜಾನಕಮ್ಮನೊಡನೆ ಅನೈತಿಕ ಸಂಬಂಧವನ್ನು ಹೊಂದಿರುತ್ತಾನೆ. ಕಿಟ್ಟಣ್ಣ ತಂದೆಯ ಸ್ವಭಾವವನ್ನು ಇಷ್ಟಪಡುವುದಿಲ್ಲ. ಅವರ ಸ್ವಭಾವಕ್ಕೆ ವಿರುದ್ಧವಾಗಿ ಜೀವನವನ್ನು ರೂಪಿಸಿಕೊಳ್ಳುತ್ತಾನೆ. ಮನೆ ಕಟ್ಟಿಸಿ, ಫೋನ್ ಹಾಕಿಸಿ, ಮಕ್ಕಳಿಬ್ಬರನ್ನು ಒಳ್ಳೆಯ ಸ್ಕೂಲಿಗೆ ಸೇರಿಸಿದ ಕಿಟ್ಟಣ್ಣ ಕಾರನ್ನು ತೆಗೆದುಕೊಳ್ಳುತ್ತಾನೆ. ಹೆಂಡತಿ ಹಾಗೂ ಮಕ್ಕಳಿಗೆ ಎಲ್ಲ ಸೌಕರ್ಯಗಳನ್ನು ಒದಗಿಸಿರುತ್ತಾನೆ.

ತಂದೆಯ ಅವಗುಣಗಳನ್ನು ಅಂತರಂಗದಲ್ಲಿರಿಸಿಕೊಂಡ ಕಿಟ್ಟಣ್ಣನು ಹೆಂಡತಿಯ ಹತ್ತಿರ ಅವರದು ಸ್ವಾಭಿಮಾನದ ವ್ಯಕ್ತಿತ್ವ ಎಂದು ಹೊಗಳುತ್ತಾನೆ. ಸಮಾಜದಲ್ಲಿ ಪ್ರತಿಷ್ಠೆಯಿಂದ ಬದುಕಬೇಕೆಂಬ ಹೆಂಡತಿಯ ಬಯಕೆಯನ್ನು ಕಿಟ್ಟಣ್ಣನು ಮೆಚ್ಚುವುದಿಲ್ಲ. ಹೆಂಡತಿ ತನ್ನನ್ನು ಅಪ್ಪನಂತೆ ಆಗಲು ಬಿಡಲಿಲ್ಲವಲ್ಲ ಎಂದು ಅಂತರಂಗದಲ್ಲಿ ಸಂತೋಷಪಡುತ್ತಾನೆ. ಹೀಗೆ ತನ್ನ ವ್ಯಕ್ತಿತ್ವದಲ್ಲಿ ದ್ವಂದ್ವಗಳನ್ನು ಕಿಟ್ಟಣ್ಣನು ಎದುರಿಸುತ್ತಾನೆ.

ಮನುಷ್ಯನ ಮನಸ್ಸಿಗಿರುವ ವ್ಯಾಮೋಹವು ಅಗಾಧವಾದದ್ದು ಎಂಬುದು ಕಿಟ್ಟಣ್ಣನ ಕಲ್ಪನೆಯಾಗಿದೆ. ಬರಿಯ ತಿಳುವಳಿಕೆಯಿಂದ ಯಾರೂ ಬದಲಾಗುವುದಿಲ್ಲ ಎಂದುಕೊಳ್ಳುತ್ತಾನೆ. ಕಿಟ್ಟಣ್ಣ ಬಾಲ್ಯದ ವಿಷಯಗಳನ್ನು ಹೆಂಡತಿಯ ಜೊತೆ ಚರ್ಚಿಸಲು ಇಷ್ಟಪಡುವುದಿಲ್ಲ. ದುಂದುವೆಚ್ಚ ಮಾಡದಂತೆ, ಕುಡಿಯದಂತೆ ಆರೋಗ್ಯ ಕಾಪಾಡಿಕೊಳ್ಳುವಂತೆ ತನ್ನನ್ನು ಪ್ರೇರಿಸಿದ ಹೆಂಡತಿಯ ಬಗೆಗೆ ಕಿಟ್ಟಣ್ಣನಿಗೆ ಅಂತರಂಗದಲ್ಲಿ ಅಭಿಮಾನವಿದೆ. ಆದರೆ ಬಹಿರಂಗದಲ್ಲಿ ಅದನ್ನು ವ್ಯಕ್ತಪಡಿಸುವುದಿಲ್ಲ. ಬದಲಾಗಿ ನೀನಿಲ್ಲದಿದ್ದರೆ ಉದಾತ್ತನಾಗಿರುತ್ತಿದ್ದೆ, ಕವಿಯಾಗುತ್ತಿದ್ದೆ ಎಂದು ಕಿಟ್ಟಣ್ಣ ಹೆಂಡತಿಗೆ ಹೇಳುತ್ತಾನೆ. ಮನುಷ್ಯ ಇದ್ದಂತೆ ಇರುತ್ತಾನೆ ಹಾಗೂ ಮಾಡೋದನ್ನೆಲ್ಲ ಮಾಡುತ್ತಲೇ ಹೋಗುತ್ತಾನೆಂಬ ಭಾವನೆಯು ಕಿಟ್ಟಣ್ಣನದಾಗಿದೆ. ಮನೋಸೂಕ್ಷ್ಮದಿಂದ ಪ್ರಯೋಜನವಿಲ್ಲವೆಂದು ತಿಳಿಯುತ್ತಾನೆ.

ಆಫೀಸಿನಲ್ಲಿ ಕಿಟ್ಟಣ್ಣನನ್ನು ನೋಡಿದರೆ ಎಷ್ಟು ಸಭ್ಯ ಹಾಗೂ ಪ್ರಾಮಾಣಿಕನೆಂದು ತಿಳಿಯುತ್ತದೆ. ಜವಾನರ ಬಗೆಗೆ ಅವನಿಗಿರುವ ಕರುಣೆಯನ್ನು ಕಂಡು ತನ್ನಲ್ಲೆ ತಾನು ಇದೆಲ್ಲ ಮೇಲಕ್ಕೇರುವ ಉಪಾಯ ಎಂದುಕೊಳ್ಳುತ್ತಾನೆ. ನಂತರ ಯಾಕೆ ಮೇಲಕ್ಕೇರಬಾರದು ಎಂದುಕೊಳ್ಳುತ್ತಾನೆ. ಈ ಮನೋಸೂಕ್ಷ್ಮವು ಸಮಾಧಾನಿಯಾಗಿದ್ದಾಗ ಗಮನಕ್ಕೆ ಬರುವುದಿಲ್ಲವೆಂದು ಬೇಸರಪಡುತ್ತಾನೆ. ಹೀಗೆ ಎಡಬಿಡಂಗಿಯಾಗಿಬಿಟ್ಟ ನನಗೆ ಕೊನೆ ಪಕ್ಷ ಬಾಲಕನಾಗಿದ್ದಾಗ ತತ್ಪರತೆ ಸಾಧ್ಯವಿತ್ತೆ ಎಂದು ಯೋಚಿಸುತ್ತಾನೆ. ಅಪ್ಪ ಸತ್ತು ಆರು ವರ್ಷವಾಗಿದೆ. ನನ್ನ ಜೊತೆ ಬರಲು ಒಪ್ಪದ ಅಮ್ಮ ಹಳ್ಳಿಯಲ್ಲೇ ಇದ್ದಾಳೆ. ಅಮ್ಮ ಊರಿಗೆ ಬಂದರೆ ತಮ್ಮ ಜೀವನಕ್ಕೆ

ತೊಂದರೆಯಾಗಬಹುದೆಂಬ ಕಲ್ಪನೆ ಇಬ್ಬರಿಗೂ ಇದೆ. ನನಗೆ ಮುಜುಗರವಾಗದಂತೆ ಹಾಗೂ ಅತ್ತೆಗೆ ಬೇಸರವಾಗದಂತೆ ಅಮ್ಮನನ್ನು ಹೆಂಡತಿ ಊರಿಗೆ ಕರೆಯುತ್ತಾಳೆ. ಅಮ್ಮನೇ ಇಷ್ಟಪಟ್ಟು ಹಳ್ಳಿಯಲ್ಲಿ ಇರುವಂತೆ ಏರ್ಪಾಟು ಮಾಡಿದ ಹೆಂಡತಿಯ ಬಗೆಗೆ ಕಿಟ್ಟಣ್ಣನಿಗೆ ಹೆಮ್ಮೆಯೆನಿಸುತ್ತದೆ.

"ನವಿಲುಗಳು ಕತೆಯ ನಾಯಕ ಕಿಟ್ಟಣ್ಣ ಹಲವು ದ್ವಂದ್ವಗಳ ನಡುವೆ ತೊಳಲುತ್ತಿರುವವನು. ತಂದೆಯ ಸ್ವಭಾವಗಳಿಗೆ ತೀರ ವಿರುದ್ಧವಾಗಿ ನಡೆದರೂ ಜೀವನದ ಸಾಧ್ಯತೆಗಳಿಗೆ ಕಟ್ಟುಬಿದ್ದು ಬದುಕುತ್ತಾನೆ. ಅಷ್ಟಾದರೂ ಹೆಂಡತಿಯೊಡನೆ ತಂದೆಯ ಸ್ವಾಭಿಮಾನವನ್ನು ಹೊಗಳುತ್ತಾ ಖದೀಮತನದ ಸುಖಜೀವನ ನಡೆಸಿ ಆತ್ಮಕ್ಕಷ್ಟು ಬೆಚ್ಚಗೆ ಶಾಖ ಕೊಟ್ಟುಕೊಳ್ಳುತ್ತಾನೆ." [೧೮] ನಗರ ಸಂಸ್ಕೃತಿಗೆ ಹೊಂದಿಕೊಂಡಿದ್ದ ಕಿಟ್ಟಣ್ಣನಿಗೆ ತಾಯಿ ತನ್ನ ಜೊತೆ ಬಂದಿದ್ದರೆ ಅವನ ಸ್ವತಂತ್ರ ಜೀವನಕ್ಕೆ ಅಡ್ಡಿಯಾಗಬಹುದೆಂದು ಅಂತರಂಗದಲ್ಲಿ ಆಲೋಚಿಸುತ್ತಾನೆ. ಆದರೆ ಬಹಿರಂಗದಲ್ಲಿ ಅವಳನ್ನು ಊರಿಗೆ ಕರೆಯುವ ಉತ್ಸಾಹ ತೋರಿಸುತ್ತಾನೆ. ಕುಟುಂಬದ ಬಗ್ಗೆ ತನ್ನ ತಂದೆಗಿದ್ದ ಬೇಜವಾಬ್ದಾರಿತನದ ಬಗೆಗೆ ಕಿಟ್ಟಣ್ಣನಿಗೆ ಬೇಸರವಿದೆ. ಬಹಿರಂಗದಲ್ಲಿ ಹೆಂಡತಿಯ ಮುಂದೆ ಅದನ್ನು ಒಪ್ಪಿಕೊಳ್ಳದೇ ತನ್ನ ತಂದೆಯ ಬಗೆಗೆ ಗೌರವದ ಮಾತನಾಡುತ್ತಾನೆ.

'ಪಂಜರದ ಗಿಣಿ' ಕತೆಯಲ್ಲಿ ವ್ಯಕ್ತಿಯ ಅಂತರಂಗ ಹಾಗೂ ಬಹಿರಂಗದ ಅಮೂರ್ತ ಭಾವನೆಗಳ ನಡುವಿನ ಮಾನಸಿಕ ಸಂಘರ್ಷವನ್ನು ಕಾಣಬಹುದು. ರಾಮುವಿಗೆ ಕಾಮಾಕ್ಷಿಯ ಜೊತೆಗಿದ್ದಾಗ ಜೀವನವು ಸುಗಮವೆನಿಸಿರುತ್ತದೆ. ಕಾಮಾಕ್ಷಿ ಕರೆದಳೆಂದು ಪರ್ವತ ಹೇಳಿದರೆ, ಕಾಮಾಕ್ಷಿ ಎಲ್ಲಿ ಎಂದು ಬೆಳಂದಿಗಳು ನಗುತ್ತಿತ್ತು. ಕಾಮಾಕ್ಷಿಯ ಪುಟ್ಟ ಗುಡಿಸಲು ಕೂಗಿಕರೆದರೆ, ಅವಳನ್ನು ಏಕೆ ಬಿಟ್ಟಿರುವೆ ಎಂದು ಗಗನ ಗುಡುಗಿ ಹೇಳುತ್ತಿತ್ತು. ಕಾಮಾಕ್ಷಿ ತನಗಾಗಿ ಕಾಯುತ್ತಿದ್ದಳು. ಪ್ರಕೃತಿ ಸೌಂದರ್ಯ ನೋಡುತ್ತಾ ರಾಮು ಮೈಮರೆಯುತ್ತಿದ್ದ. ದಿನ ಕಳೆದಂತೆ ಕಾಮಾಕ್ಷಿಯಲ್ಲಿ ರಾಮು ಆಸಕ್ತಿಯನ್ನು ಕಳೆದುಕೊಳ್ಳುತ್ತಾನೆ. ಕಾಮಾಕ್ಷಿಯ ಗುಡಿಸಲು ಹತ್ತಿರವಿದ್ದರೂ ಹೋಗುವ ಅವಸರವಿಲ್ಲ. ಸವೆದ ಹಾದಿಯೆನಿಸತೊಡಗುತ್ತದೆ. ಪ್ರೇಮದೇವತೆ ನಿಷೇಧಿಸಿದ ಮರದ ಹಣ್ಣು ತಿಂದಿದ್ದರಿಂದ ನನ್ನಿಂದ ರಾಮು ದೂರವಾಗಿದ್ದಾನೆಂದು ಕಾಮಾಕ್ಷಿ ಬೇಸರ ಪಡುತ್ತಾಳೆ.

ರಾಮುವಿನ ಅಂತರಂಗದಲ್ಲಿ ಹಿಂದಿನ ನೆನಪುಗಳು ಸುಳಿಯುತ್ತವೆ. ಕಾಮಾಕ್ಷಿಯು ಜೊತೆಗಿದ್ದಾಗ ಅಂಗಳದಲ್ಲಿ ಕೋಟಿ ದೀಪ ಮಿನುಗುತ್ತಿರುವಂತೆ ಅನ್ನಿಸುತ್ತಿತ್ತು. ತನ್ನ ಪ್ರೇಮ ಸಮಾಗಮಕ್ಕೆ ತಾರೆಗಳು ಸಾಕ್ಷಿಯಾಗಿದ್ದರು. ಇಂದು ವಾಮನನಂತಿದ್ದ ಪ್ರಕೃತಿ ತ್ರಿವಿಕ್ರಮ ರೂಪತಾಳಿ ತನ್ನನ್ನು ತುಳಿದಂತೆ ರಾಮುವಿಗೆ ಭಾಸವಾಗುತ್ತದೆ. ರಾಮುವಿಗೆ ಒಂದು ಕಡೆ ಕಾಮಾಕ್ಷಿಯ ಮೇಲಿನ ಆಸಕ್ತಿಯು ಇಲ್ಲವಾಗಿದೆ. ಇನ್ನೊಂದು ಕಡೆ ಅವಳು ಅಬಲೆಯಾಗುತ್ತಾಳಲ್ಲ ಎಂಬ ಚಿಂತೆ ಇದೆ.

ವ್ಯಕ್ತಿಯ ಅಂತರಂಗದ ಭಾವನೆಗಳಿಗೂ ಬಹಿರಂಗದ ವಿಚಾರಗಳಿಗೂ ಹೊಂದಾಣಿಕೆ ಇಲ್ಲದಿದ್ದಾಗ ಏರ್ಪಡುವ ಸಂಘರ್ಷಗಳ ಸ್ವರೂಪ ವಿಭಿನ್ನವಾದುದು. ಮೇಲೆ ವಿಶ್ಲೇಷಿಸಿದ ಕತೆಗಳಲ್ಲಿ ಅವುಗಳ ವೈವಿಧ್ಯಗಳನ್ನು ಗಮನಿಸಬಹುದು. ವ್ಯಕ್ತಿಯು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಅಂತರಂಗದಲ್ಲಿ ಅನೇಕ ವಿಚಾರಗಳ ಮಹಡಿಯನ್ನು ಕಟ್ಟಿಕೊಂಡಿರುತ್ತಾನೆ. ಆದರೆ ಬಹಿರಂಗದಲ್ಲಿ ವಾಸ್ತವ ಬದುಕಿನ ನಡವಳಿಕೆಗಳು ಅವುಗಳಿಗೆ ಪೂರಕವಾಗಿ ಇರುವುದಿಲ್ಲ. ಅಂತರಂಗದಲ್ಲಿರುವುದು ಕೇವಲ ಆದರ್ಶದ ಕನಸು. ಬೌದ್ಧಿಕವಾದ ಎಚ್ಚರ. ಆದರೆ ಬಹಿರಂಗದಲ್ಲಿ ವಾಸ್ತವ ಬದುಕಿನ ಗೊಂದಲಗಳು ಆ ಮೂಲಕ ರೂಪು ಪಡೆದ ಸಾಮಾಜಿಕ

ಎಚ್ಚರದ ಸ್ಥಿತಿ. ಈ ರೀತಿಯ ದ್ವಂದ್ವ ನಿಲುವಿನ ವ್ಯಕ್ತಿತ್ವಗಳ ಮನಸ್ಸುಗಳು ಕ್ರಿಯಾಶೀಲವಾಗದೆ ಹೆಚ್ಚು ಗೊಂದಲಗಳಲ್ಲಿಯೇ ತೊಳಲಾಡುವುದನ್ನು ಕಾಣಬಹುದು. ಸಾಂಸ್ಕೃತಿಕವಾಗಿ ಅಗತ್ಯವಾದ ಸಚ್ಚರಿತೆಯ ನೆಲೆಯಿಂದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳದೇ ಹೋದಾಗ ಉಂಟಾಗಬಹುದಾದ ಗೊಂದಲಗಳ ಸ್ವರೂಪ ಇಲ್ಲಿನ ಕತೆಗಳಲ್ಲಿ ದಾಖಲಾಗಿದೆ.

'ಸಂಸ್ಕಾರ' ಕಾದಂಬರಿಯಲ್ಲಿ ಪ್ರಾಣೇಶಾಚಾರ್ಯನ ಅಂತರಂಗದ ತುಮುಲವನ್ನು ಕಾಣಬಹುದು. ನಾರಣಪ್ಪನನ್ನು ಪರಿವರ್ತನೆ ಮಾಡಬೇಕೆಂಬ ಹಂಬಲ ವಿರುವ ಅವನು ವಿಫಲನಾದಾಗ ಮೋಕ್ಷ ಸಾಧನೆಯ ಮಾರ್ಗದಲ್ಲಿ ನಾರಣಪ್ಪ ತನಗಿಂತ ಮುಂದಿರಬಹುದೆ ಎಂದು ಪ್ರಾಣೇಶಾಚಾರ್ಯ ಯೋಚಿಸುತ್ತಾನೆ. ಏಳುಜನ್ಮ ಭಕ್ತನಾಗಿರುವುದಕ್ಕಿಂತ ಮೂರು ಜನ್ಮ ವೈರಿಯಾಗಿ ಭಗವಂತನನ್ನು ಸೇರುವ ಮಾರ್ಗ ಸರಿಯಾದುದಿರಬಹುದೆ ಎಂಬ ಶಂಕೆ ಮೂಡುತ್ತದೆ. ಮಾರುತಿಯನ್ನು ಸ್ತುತಿಸಿ ಒಲಿಸಿಕೊಳ್ಳಲು ವಿಫಲದಾಗ ಪ್ರಾಣೇಶಾಚಾರ್ಯ ದೇವರ ತಪ್ಪನ್ನು ಖಂಡಿಸುವ ಮಂತ್ರವನ್ನು ಹೇಳುತ್ತಾನೆ.

ನಾರಣಪ್ಪನ ಜೀವನಕ್ರಮವನ್ನು ವಿರೋಧಿಸುತ್ತಿದ್ದ ಪ್ರಾಣೇಶಾಚಾರ್ಯನಿಗೆ ಆಕಸ್ಮಿಕವಾಗಿ ಲಭಿಸಿದ್ದ ಚಂದ್ರಿಯ ಸಂಬಂಧವು ದ್ವಂದ್ವವನ್ನು ಹುಟ್ಟುಹಾಕುತ್ತದೆ. ಅವನು ಅನುಭವಿಸುವ ಆಂತರಿಕ ಸಂಘರ್ಷದ ರೂಪ ಭಿನ್ನವಾಗಿದೆ. ಪ್ರಾಣೇಶಾಚಾರ್ಯನ ಅಂತರಂಗವು ಚಂದ್ರಿಯೊಡನೆ ಪಟ್ಟಣಕ್ಕೆ ಹೋಗಿ ನೆಲೆಸುವ ಸನ್ನಾಹದಲ್ಲಿದೆ. ಬಹಿರಂಗವು ಅಗ್ರಹಾರದ ಎಲ್ಲರ ಗೌರವಾದರಗಳಿಗೆ ಪಾತ್ರನಾದ ಪಂಡಿತ ತಾನಾಗಿ ಉಳಿಯಲಿಲ್ಲ ಎಂಬ ಕೊರಗನ್ನು ಎದುರಿಸುತ್ತದೆ. ಹಿಂದಿನ ಅಸ್ತಿತ್ವವನ್ನು ಬಿಟ್ಟು ಬದುಕುವುದು ಸುಲಭವಲ್ಲ ಎನಿಸಿದಾಗ ಪ್ರಾಣೇಶಾಚಾರ್ಯ ತನ್ನನ್ನು ಯಾರಾದರೂ ಗುರುತಿಸುತ್ತಾರೇನೊ ಎಂದು ಆತಂಕ ಪಡುತ್ತಾನೆ. ಚಂದ್ರಿಯನ್ನು ಸೇರಿದ ನಂತರ ಅಗ್ರಹಾರಕ್ಕೆ ಹೋಗಿ ಬ್ರಾಹ್ಮಣರಿಗೆ ನಡೆದ ವಿಷಯವನ್ನು ತಿಳಿಸಬೇಕೆಂಬ ಬಯಕೆ ಅಂತರಂಗದಲ್ಲಿದ್ದರೂ ಬಹಿರಂಗವು ತಡೆಯೊಡ್ಡುತ್ತದೆ.

ಹೊಸ ಲೋಕದಲ್ಲಿ ಪುಟ್ಟನ ಪರಿಚಯವಾಗುವುದಕ್ಕೆ ಮೊದಲು ತನ್ನ ಕಣ್ಣಿನ ಹಿಂದೆ ಎರಡು ಕಣ್ಣುಗಳು ನೋಡಿದಂತೆ ಪ್ರಾಣೇಶಾಚಾರ್ಯನಿಗೆ ಭಾಸವಾಗತ್ತದೆ. ತನ್ನನ್ನು ತಾನು ಬಚ್ಚಿಟ್ಟ ಪದಾರ್ಥ ಎಂದು ಭ್ರಮಿಸುತ್ತಾನೆ. ತಿರುಗಿ ನೋಡಲು ಒಂದೆಡೆ ಹೆದರಿಕೆಯಾದರೆ ಇನ್ನೊಂದೆಡೆ ಆ ಕಣ್ಣು ತನ್ನನ್ನು ಸಂಧಿಸಿ ಮುಂದೆ ಯಾವ ಅನಾಹುತ ಕಾದಿದೆಯೊ ಎಂದು ಪ್ರಾಣೇಶಾಚಾರ್ಯನಿಗೆ ದಿಗಿಲಾಗುತ್ತದೆ. ನಂತರ ಪುಟ್ಟನು ಪರಿಚಯ ಮಾಡಿಸಿದ ಜನರ ಪ್ರವೃತ್ತಿಗಳು ಬಾಳಿನ ಸಂಕೀರ್ಣತೆಯ ಅರಿವನ್ನು ಪ್ರಾಣೇಶಾಚಾರ್ಯನಿಗೆ ಮೂಡಿಸುತ್ತವೆ. ಬೇರೆ ಹೆಂಗಸರನ್ನು ಕಣ್ಣೆತ್ತಿ ನೋಡದಿದ್ದ ಪ್ರಾಣೇಶಾಚಾರ್ಯ ಹೊಸ ಅರಿವಿನಲ್ಲಿ ಪದ್ಮಾವತಿಯ ಇಂಗಿತವನ್ನು ಅರ್ಥಮಾಡಿಕೊಂಡರೂ ಒಪ್ಪಿಕೊಳ್ಳುವ ಧೈರ್ಯ ಮಾಡುವುದಿಲ್ಲ. ಆಕಸ್ಮಿಕವಾಗಿ ಒದಗಿ ಬಂದ ಬಾಳನ್ನು ಚೆನ್ನಾಗಿ ಬಾಳಬೇಕೆಂಬ ಇಚ್ಛೆ ಅಂತರಂಗದಲ್ಲಿದ್ದರೂ ಹಾಗೆ ಬಾಳಲು ತನ್ನಿಂದ ಸಾಧ್ಯವೆ ಎಂದು ಬಹಿರಂಗದಲ್ಲಿ ಪ್ರಾಣೇಶಾಚಾರ್ಯ ಯೋಚಿಸುತ್ತಾನೆ. ಈ ಭಯದಿಂದ ಪಾರಾಗಲು ತನ್ನ ನಿಜಸ್ಥಿತಿಯನ್ನು ಅಗ್ರಹಾರದ ಬ್ರಾಹ್ಮಣರ ಎದುರು ಒಪ್ಪಿಕೊಳ್ಳಬೇಕು, ಅವರನಡುವೆಯೇ ಹೊಸಬನಾಗಿ ಬಾಳಬೇಕು . ತನ್ನ ಒಳ ಬಾಳಿನ ಸತ್ಯ ಹೊರ ಬಾಳಿನ ಸತ್ಯವೂ ಆಗುವಂತೆ ಜೀವನ ರೂಪಿಸಿಕೊಳ್ಳಬೇಕೆಂದು ಪ್ರಾಣೇಶಾಚಾರ್ಯ ಆಲೋಚಿಸುತ್ತಾನೆ.

ಸಂಭಾವನೆಯ ಬ್ರಾಹ್ಮಣನೆಂದು ಪುಟ್ಟನು ಕರೆದಾಗ ತನ್ನ ಅಹಂಗೆ ಧಕ್ಕೆಯಾದಂತೆ ಪ್ರಾಣೇಶಾಚಾರ್ಯನು ಕಳವಳ ಪಡುತ್ತಾನೆ. ಹಿಂದಿನ ಉದಾತ್ತ ಜೀವನದಲ್ಲೇ ಖುಷಿಯಾಗಿದ್ದೆ ಎಂದುಕೊಂಡ ಪ್ರಾಣೇಶಾಚಾರ್ಯ ತನ್ನ ನಿರ್ಧಾರವನ್ನು ಬ್ರಾಹ್ಮಣರಿಗೆ ತಿಳಿಸಬೇಕೆಂದುಕೊಳ್ಳುತ್ತಾನೆ. ಆದರೆ ಬ್ರಾಹ್ಮಣ್ಯವನ್ನು ನಿರಾಕರಿಸಲು ಅವನು ಸಿದ್ಧನಾಗುವುದಿಲ್ಲ. ಹೀಗೆ ಪ್ರಾಣೇಶಾಚಾರ್ಯನ ಅಂತರಂಗ, ಬಹಿರಂಗದ ಭಾವನೆಗಳಿಗೆ ಹೊಂದಾಣಿಕೆ ಇರುವತನಕ ಯಾವುದೇ ಗೊಂದಲವಿಲ್ಲದೇ ಜೀವನ ನಡೆಸುತ್ತಿರುತ್ತಾನೆ. ಈ ಎರಡರ ನಡುವೆ ಹೊಂದಾಣಿಕೆ ಎಲ್ಲದಾದಾಗ ಪ್ರಾಣೇಶಾಚಾರ್ಯ ಸಂಘರ್ಷಕ್ಕೊಳಗಾಗುತ್ತಾನೆ.

ನಾರಣಪ್ಪ ಅಂತರಂಗದ ಭಾವನೆಗಳನ್ನು ಬಹಿರಂಗದಲ್ಲೂ ವ್ಯಕ್ತಪಡಿಸುತ್ತ ಜೀವನವನ್ನು ಇದ್ದಕ್ಕಿದ್ದಂತೆ ಸ್ವೀಕರಿಸಿದ್ದನೆಂಬುದು ಪ್ರಾಣೇಶಾಚಾರ್ಯನ ತಿಳುವಳಿಕೆಯಾಗಿದೆ. ಆದರೆ ನಾರಣಪ್ಪ ಬಹಿರಂಗದಲ್ಲಿ ಬದುಕಿದ್ದು ಅಂತರಂಗದ ಭಾವನೆಗಳ ಸ್ಫೂರ್ತಿಯಿಂದ ಎನಿಸಿದರೂ ಮೂಲತಃ ಬ್ರಾಹ್ಮಣನಾದ್ದರಿಂದ ಅವನಲ್ಲಿ ರಕ್ತಗತವಾಗಿ ಬಂದ ಸಂಸ್ಕಾರವು ನಾರಣಪ್ಪನನ್ನು ನಿಶ್ಚಿಂತನನ್ನಾಗಿರಲು ಬಿಡುವುದಿಲ್ಲ.ಇದು ಅವನಿಗೆ ಪ್ರಾಣೇಶಾಚಾರ್ಯನ ಬಗೆಗೆ ಇರುವ ಗೌರವ ಭಯಗಳಲ್ಲಿ ವ್ಯಕ್ತವಾಗುತ್ತದೆ. ಆಚಾರ್ಯನು ಹೇಳುವ ಬುದ್ಧಿಮಾತನ್ನು ನಾರಣಪ್ಪನು ಕೇಳದಿದ್ದರೂ ಎಂದೂ ಅವರನ್ನು ನಿಂದಿಸಿರುವುದಿಲ್ಲ. ದುಡುಕಿ ಏನಾದರೂ ಮಾತನಾಡಿದ ದಿನ ಒಳಗೊಳಗೇ ನಾರಣಪ್ಪ ಹೆದರುತ್ತಿದ್ದ. ಅಗ್ರಹಾರದಲ್ಲಿ ನಿಮ್ಮೊಬ್ಬರನ್ನು ಬಿಟ್ಟರೆ ಬ್ರಾಹ್ಮಣ್ಯಾನೇ ಉಳಿದಿಲ್ಲಎಂದು ಪ್ರಾಣೇಶಾಚಾರ್ಯನ ವ್ಯಕ್ತಿತ್ವವನ್ನು ಗುರುತಿಸಿರುತ್ತಾನೆ. ನಾರಣಪ್ಪ ಕುಡಿದಿದ್ದರೂ ಪ್ರಾಣೇಶಾಚಾರ್ಯನೊಡನೆ ಗೌರವದಿಂದ ನಡೆದುಕೊಳ್ಳುತ್ತಾನೆ. ಈ ಬ್ರಾಹ್ಮಣ್ಯ ಹುಟ್ಟಿನೊಡನೆ ಬಂದಿದ್ದರೂ ಅದನ್ನು ಉಳಿಸಿಕೊಳ್ಳಬೇಕಾದುದು ಅಷ್ಟೇ ಮುಖ್ಯವಾಗಿದೆ. ಒಳಗೊಂದು ಹೊರಗೊಂದು ಮಾತನಾಡುವ ಅಗ್ರಹಾರದ ಬ್ರಾಹ್ಮಣರಿಗೆ ಇದು ಸಾಧ್ಯವಾಗಿಲ್ಲ ಎಂಬ ಬಗ್ಗೆ ನಾರಣಪ್ಪನಿಗೆ ಬೇಸರವಿದೆ. ನಾರಣಪ್ಪನಿಗೆ ಬ್ರಾಹ್ಮಣ್ಯವನ್ನು ಆಚರಿಸುವಂತೆ ನಟಿಸುವವರ ಬಗೆಗೆ ಬೇಸರವಿದೆಯೇ ಹೊರತು ಸರಿಯಾಗಿ ಆಚರಿಸುವವರ ಬಗೆಗಲ್ಲ. ಇಲ್ಲದಿದ್ದರೆ ನಾರಣಪ್ಪ ಸಾಯುವಾಗ ಚಂದ್ರಿಯು ಗಮನಿಸಿದಂತೆ ಅವನ ಬಾಯಲ್ಲಿ ಅಮ್ಮ ರಾಮಚಂದ್ರ ಭಗವಂತ ನಾರಾಯಣ ರಾಮ ರಾಮ ಎಂದು ಕಿರುಚುವುದು ಸಾಧ್ಯವಾಗುತ್ತಿರಲಿಲ್ಲ. ಬದುಕಿದ್ದಾಗ ಒಂದು ದಿನವೂ ದೇವರಿಗೆ ಕೈ ಮುಗಿಯದಿದ್ದವನ ಅಂತರ್ಯದಲ್ಲಿ ಏನಿತ್ತೊ ಬಹಿರಂಗದಲ್ಲಿ ವ್ಯಕ್ತವಾಗಲಿಲ್ಲ ಎಂಬುದು ತಿಳಿಯುತ್ತದೆ.

ನಾರಣಪ್ಪ "ಸಂಪ್ರದಾಯವನ್ನು ವಿರೋಧಿಸಿ ಕೀಳುಜಾತಿಯ ವೇಶ್ಯೆಯ ಸಹವಾಸದಲ್ಲಿದ್ದು ಮದ್ಯಮಾಂಸ ಸೇವಿಸಿದ್ದರೂ ಆತ ದ್ವಂದ್ವಾತೀತನಾಗಿರಲಿಲ್ಲ. ಅವನೆಷ್ಟು ಉದ್ದೇಶಪೂರ್ವಕವಾಗಿ ಅಂತರಂಗದ ಅನುಮಾನವನ್ನು ಅದುಮಿಟ್ಟಿದ್ದರೂ ಅದು ತನ್ನೆಲ್ಲ ಅದಮ್ಯ ಶಕ್ತಿಯಿಂದ ಕಾಡಿ ಧಾಳಿ ಮಾಡಿ ಸಾವಿನ ಸಮಯದಲ್ಲಿ ಇನ್ನಿಲ್ಲದ ಒದ್ದಾಟಕ್ಕೆ ಒಳಗು ಮಾಡುತ್ತದೆ." [೧೯] ವ್ಯಕ್ತಿಗೆ ಸಂಸ್ಕೃತಿಯ ಮೂಲಬೇರುಗಳಿಂದ ತಪ್ಪಿಸಿಕೊಳ್ಳುವುದು ಸುಲಭವಲ್ಲ ಎನ್ನುವುದನ್ನು ನಾರಣಪ್ಪ ಬಿಂಬಿಸುತ್ತಾನೆ.

'ಭಾರತೀಪುರ' ಕಾದಂಬರಿಯಲ್ಲಿ ಜಗನ್ನಾಥ ಹುಟ್ಟಿರುವುದು ಶ್ರೀಮಂತ ಕುಟುಂಬವಾದ್ದರಿಂದ ಅವನಿಗೆ ತಿಳುವಳಿಕೆ ಬರುವ ಮೊದಲೇ ಅವನಿಗೆ ವ್ಯವಸ್ಥೆಯಲ್ಲಿ ತನ್ನದೇ ಆದ ಸ್ಥಾನವನ್ನು ಸಮಾಜವು ಅವನಿಗೆ ಕಲ್ಪಿಸಿರುತ್ತದೆ. ವ್ಯವಸ್ಥೆಯ ನಿರೀಕ್ಷೆಯಂತೆ ಅವನ ಬದುಕು ಸಾಗಬೇಕೇ ವಿನಹ ಅವನ ನಿರೀಕ್ಷಿಸಿದಂತೆ ಅವನು ಬದುಕುವಂತಿಲ್ಲ.ಇದರಿಂದಾಗಿ ಜಗನ್ನಾಥ ಮಾನಸಿಕ ಸಂಘರ್ಷವನ್ನು ಎದುರಿಸುತ್ತಾನೆ. ಇಂಗ್ಲೆಂಡಿನಲ್ಲೂ ಅವನಿಗೆ

[illegible]

[illegible]

[illegible]

[illegible]

ತನ್ನ ಆತ್ಮನಿರೀಕ್ಷೆಯಂತೆ ಬದುಕನ್ನು ಸಾಗಿಸಲಾಗುವುದಿಲ್ಲ. ವೇಷಧಾರಿಯ ಬದುಕು ತನ್ನದೆನ್ನುವ ಅನುಮಾನ ಅವನನ್ನು ಕಾಡತೊಡಗುತ್ತದೆ. ತಾನು ಪ್ರೀತಿಸುವ ಮಾರ್ಗರೆಟ್ ಇನ್ನೊಬ್ಬ ವ್ಯಕ್ತಿಯೊಂದಿಗೆ ಸ್ನೇಹದಿಂದಿದ್ದರೆ ಸಹಿಸದ ಅವನ ಭಾವನೆಯಿಂದ ಗೊಂದಲಗೊಳ್ಳುತ್ತಾನೆ. ಕ್ರಾಂತಿಕಾರಿ ವಿಚಾರಗಳಿಂದ ಪ್ರಭಾವಿತನಾದಾಗ ತನ್ನ ಭ್ರಮಾಧೀನ ವ್ಯಕ್ತಿತ್ವವನ್ನು ಕಳೆದುಕೊಂಡು ಹೊಸ ಮನುಷ್ಯನಾಗಬೇಕೆಂದು ಊರಿಗೆ ಮರಳುತ್ತಾನೆ. ಅವನು ತನ್ನ ವ್ಯಕ್ತಿತ್ವವನ್ನು ಕುರಿತು ಸ್ವಗತದಲ್ಲಿ ಮಾತನಾಡಿಕೊಳ್ಳುತ್ತಾನೆ.

ಜಗನ್ನಾಥನಿಗೆ ತಾನು ಹೀಗಿರಬೇಕೆಂಬ ಆಯ್ಕೆಯನ್ನು ಮಾಡುವಷ್ಟು ಸುಲಭವಾಗಿ ನಿರ್ಧರಿಸುವುದು ಸುಲಭ ಸಾಧ್ಯವಾಗುವುದಿಲ್ಲ. ತನ್ನ ಕ್ರಾಂತಿಯಿಂದ ಬದಲಾವಣೆಯನ್ನು ತರಲು ಪೂರಕವಾಗಿ ಹರಿಜನರನ್ನು ದೇವಾಲಯ ಪ್ರವೇಶಿಸುವಂತೆ ಅವನ ಮನಸು ನಿರ್ಧರಿಸುತ್ತದೆಯೇ ಹೊರತು ಅವರು ಬೇರೆರೀತಿಯಲ್ಲಿ ಬಂದಾಗ ಅವರೊಡನೆ ಸಾಮರಸ್ಯವನ್ನು ಸಾಧಿಸಲು ಅವನಿಗೆ ಸಾಧ್ಯವಾಗುವುದಿಲ್ಲ. ಶೂದ್ರನು ಬ್ರಾಹ್ಮಣ ಕನ್ಯೆಯನ್ನು ಮುಟ್ಟಿದರೆ ತಪ್ಪಿಲ್ಲ ಎಂದುಕೊಳ್ಳುವ ಜಗನ್ನಾಥನಿಗೆ ಮಾರ್ಗರೆಟ್ ಇನ್ನೊಬ್ಬನೊಂದಿಗೆ ಸಲುಗೆಯಿಂದಿರಬಾರದೆಂಬ ನಿರೀಕ್ಷೆಯಿದೆ. ಜಗನ್ನಾಥ ಕರುಣೆಯಿಂದ ಹರಿಜನರ ಪರವಾಗಿ ನಿಲ್ಲುತ್ತಾನೆಯೇ ಹೊರತು ನಿಷ್ಠುರವಾಗಿ ಅವರನ್ನು ಸ್ಪಂದಿಸುವುದಿಲ್ಲ. ಪಿಳ್ಳನನ್ನು ಪೋಲೀಸರು ಬಂಧಿಸಿದಾಗ ಬಿಡಿಸಿಕೊಂಡು ಬಂದ ಜಗನ್ನಾಥ ಅವನನ್ನು ಮುಟ್ಟಿ ಕಾರಿನಲ್ಲಿ ಕೂಡಿಸಿಕೊಂಡು ಕರೆತರುತ್ತಾನೆ. ಆದರೆ ಹರಿಜನರಿಗೆ ಅಕ್ಷರಾಭ್ಯಾಸ ಮಾಡಿಸುವಾಗ ಮತ್ತು ಪಂಚೆಯನ್ನು ಕೊಟ್ಟಾಗ ಅವರನ್ನು ಮುಟ್ಟಿಸಿಕೊಳ್ಳುವುದಿಲ್ಲ.ಆಗ ಅವರಿಬ್ಬರ ನಡುವಿನ ಸಂಬಂಧ ಕೃತಕವಾಗುತ್ತದೆ.

ವಿಚಾರವಂತನಾದ ಜಗನ್ನಾಥನು ಕ್ರಿಯೆಗೆ ತೊಡಗುವಾಗ ಎದುರಾಗುವ ವಾಸ್ತವಿಕತೆಯ ತುಮುಲಕ್ಕೆ ಸಿಲುಕುತ್ತಾನೆ. ಅವನು ವ್ಯವಸ್ಥೆಯ ಪ್ರತಿನಿಧಿಯಾದ್ದರಿಂದ ಸಂಪೂರ್ಣವಾಗಿ ತನ್ನ ಮೂಲಭೂತವಾದ ಗುಣಗಳನ್ನು ತೊರೆಯಲಾಗುವುದಿಲ್ಲ. ಅವನ ಅಂತರಂಗದಲ್ಲಿ ಕಲ್ಪಿಸಿಕೊಂಡ ಆದರ್ಶಕ್ಕೂ ವಾಸ್ತವದಲ್ಲಿ ನಡೆಯುವ ಕ್ರಿಯೆಗೂ ಇರುವ ಬಿರುಕು ಸಂಘರ್ಷವನ್ನು ಹುಟ್ಟುಹಾಕುತ್ತದೆ.

'ಅವಸ್ಥೆ' ಕಾದಂಬರಿಯಲ್ಲಿ ಬಾಲ್ಯದಿಂದಲೂ ಬಂದ ಗರ್ವ ಕೃಷ್ಣಪ್ಪನನ್ನು ಆತ್ಮವಿಮರ್ಶೆಗೆ ಹಚ್ಚುತ್ತದೆ. ಗೌರಿದೇಶಪಾಂಡೆಯನ್ನು ಅಂತರಂಗದಲ್ಲಿ ಪ್ರೀತಿಸುವ ಅವನಿಗೆ ಬಹಿರಂಗದಲ್ಲಿ ಅದನ್ನು ವ್ಯಕ್ತಪಡಿಸಲು ಗರ್ವ ಅಡ್ಡಬರುತ್ತದೆ. ನಾನು ನಿಮ್ಮನ್ನು ಇಷ್ಟಪಟ್ಟರೂ ನೀವು ಗರ್ವದಿಂದ ಸುಮ್ಮನಿದ್ದೀರಿ ಎಂದು ಗೌರಿಯು ಹೇಳಿದಾಗ ಕೃಷ್ಣಪ್ಪ ತಬ್ಬಿಬ್ಬಾಗುತ್ತಾನೆ. ಕೃಷ್ಣಪ್ಪನು ಯಾಕೆ ನಾವು ತೀವ್ರವಾಗಿ ಪ್ರೀತಿಸಿದ್ದನ್ನು ಪಡೆಯುವ ಧೈರ್ಯ ಮಾಡುವುದಿಲ್ಲ, ಪಡೆದಮೇಲೆ ಅದು ಅಷ್ಟೇ ಅಮೂಲ್ಯವಾಗಿ ಉಳಿಯುವುದಿಲ್ಲವೆಂಬ ಭಯದಿಂದ ಹೀಗೆ ಮಾಡುತ್ತೇವೆಯೇ ಎಂದು ಗೊಂದಲಕ್ಕೊಳಗಾಗುತ್ತಾನೆ. ಯಾವುದರಲ್ಲೂ ತನ್ನನ್ನು ಪೂರ್ತಿಯಾಗಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲವೆಂದುಕೊಳ್ಳುತ್ತಿರುವಾಗಲೇ ಕೃಷ್ಣಪ್ಪನಿಗೆ ಸೀತೆಯ ಜೊತೆ ಮದುವೆಯಾಗುತ್ತದೆ. ಆದರೆ ಅವಳ ಜೊತೆ ಸರಿಯಾದ ಸಂಬಂಧವನ್ನು ಉಳಿಸಿಕೊಳ್ಳಲಾಗುವುದಿಲ್ಲ.

ರಾಮು ಮತ್ತು ಸಂಗಡಿಗರನ್ನು ಶಿಕ್ಷಿಸುವುದನ್ನು ಕ್ಷುಲ್ಲಕ ಎನ್ನುವಂತೆ ಗಂಭೀರವಾಗಿ ಕೃಷ್ಣಪ್ಪ ವರ್ತಿಸಿದ್ದರೂ ಆ ಶಿಕ್ಷೆಯನ್ನು ತಾನು ಸೂಕ್ಷ್ಮವಾಗಿ ಬಯಸಿರಲೂಬಹುದು ಎಂದುಕೊಳ್ಳುತ್ತಾನೆ. ಮುಂದೆ ಅವನ ರಾಜಕೀಯ ಜೀವನದಲ್ಲಿ ಇಂಥ ಪ್ರಸಂಗಗಳು ಬಂದಾಗ ಸೇಡು ತೀರಿಸಿಕೊಳ್ಳುವುದರಲ್ಲಿ ತಾನು ತೋರಿಸುತ್ತಿದ್ದ

[illegible]

[illegible]

[illegible]

[illegible]

[illegible]

[illegible]

ನಿರಾಸಕ್ತಿಯೇ ತನ್ನ ಎದುರಾಳಿಗಳನ್ನು ನಿರ್ನಾಮ ಮಾಡಿಸಬಲ್ಲ ಅಸ್ತ್ರವಾಗಿತ್ತು ಎಂದುಕೊಳ್ಳುವ ತಾನು ಬಾಯಿಂದ ಹೇಳದಿದ್ದರೂ ಆಗಬೇಕಾದದ್ದು ಬೇರೆಯವರಿಂದ ಆಗಿದೆ. ತಾನು ಶುಚಿಯಾಗಿದ್ದು ಬೇರೆಯವರ ಕೈಯಲ್ಲಿ ಇಂಥ ಕೆಲಸ ಮಾಡಿಸಿಕೊಳ್ಳುವುದು ಸರಿಯೆ ಎಂದುಕೊಳ್ಳುತ್ತಾನೆ. ಆದರೆ ಇಂತಹ ಕೆಲಸಗಳು ಸಾಮಾಜಿಕ ನ್ಯಾಯಕ್ಕೆ ಸಂಬಂಧಪಟ್ಟಿರುವುದರಿಂದ ತಪ್ಪೇನಲ್ಲ ಎಂದು ಅಣ್ಣಾಜಿ ಹೇಳಿದ್ದು ನೆನಪಾಗುತ್ತದೆ.

ಹೀಗಾಗಿ ಹೆಂಡತಿ ಜಯಮಹಲ್ ಬಡಾವಣೆಯಲ್ಲಿ ಸೈಟು ತೆಗೆದುಕೊಳ್ಳುವುದು ತನಗೆ ಕಾರು ಬೇಕೆಂದು ವೀರಣ್ಣ ತಂದ ಫಾರ್ಮಗೆ ಸಹಿ ಹಾಕುವುದು ತಾನು ವೀರಣ್ಣನ ಗೆಸ್ಟ್ ಹೌಸಿನಲ್ಲಿ ವಾಸಿಸುವುದು ಮತ್ತು ಅವನ ಬಂಗಲೆಯನ್ನು ಕಡಿಮೆ ಬಾಡಿಗೆಗೆ ತೆಗೆದುಕೊಳ್ಳುವುದು ಸಮಾಜವಾದಿಯಾಗಿದ್ದೂ ಪರಮೇಶ್ವರಯ್ಯನವರಿಗೆ ಕುದುರೆ ಜೂಜಿಗೆ ಹಣ ಕೊಡದ ಹೆಂಡತಿಯನ್ನು ದೂಷಿಸುವುದು ಅದಕ್ಕಾಗಿಯೇ ವೀರಣ್ಣನಿಂದ ಹಣ ಪಡೆಯುವುದು ತನ್ನೂರಿನಲ್ಲಿ ಸನ್ಮಾನ ಸಮಾರಂಭಕ್ಕೆ ಒಪ್ಪಿಸಿಕೊಳ್ಳುವುದು ಕೃಷ್ಣಪ್ಪನಿಗೆ ಸಾಧ್ಯವಾಗುತ್ತದೆ. ಆದರೆ ಕೃಷ್ಣಪ್ಪನ ವಿಚಾರದಲ್ಲಿ ಉನ್ಮಾದದಲ್ಲಿ ಚರ್ಚೆಯಲ್ಲಿ ನಿಜವಾಗುವಷ್ಟು ಬದುಕಿನ ನೇರ ಸಂಬಂಧಗಳಲ್ಲಿ ನಿಜವಾಗಲಾರ. ಆದ್ದರಿಂದ ಆತ ಹೆಂಡತಿಯ ಸಂಗ ಮಾಡಬೇಕೆನಿಸಿದಾಗ, ಅದಕ್ಕೆ ಮುಂಚೆ ಚೆನ್ನಾಗಿ ಕುಡಿದುಬಿಡುತ್ತಿದ್ದ.

ಕೃಷ್ಣಪ್ಪನಲ್ಲಿ ರಹಸ್ಯ ವಿಸ್ಮಯದ ನೆಲೆಯನ್ನು ಸಹ ಜಾಗೃತಕ್ಕೆ ತರುವ ಮಹೇಶ್ವರಯ್ಯ ಬೈರಾಗಿಯೂ ನಿಗೂಢ ವ್ಯಕ್ತಿತ್ವದಲ್ಲೇ ಪ್ರಕಟಗೊಳ್ಳುವ ಹಿಂಸಕ ಮತ್ತು ಮಾನವೀಯತೆಗಳ ಮುಖಗಳ, ಗೌರಿದೇಶಪಾಂಡೆ, ಅಣ್ಣಾಜಿಯ ಸಾವಿನಿಂದ ತತ್ತರಿಸುವ ಉಮೆ, ಜೀವನ ಚರಿತೆಯನ್ನು ಬರೆದುಕೊಳ್ಳುವ ನಾಗೇಶ, ನಾಗರಾಜ ಕೃಷ್ಣಪ್ಪನ ಹೆಂಡತಿ ಸೀತ ಇವರೆಲ್ಲರೂ ಬಹಿರಂಗ ನೆಲೆಗಳನ್ನು ಪ್ರತಿನಿಧಿಸುತ್ತಾರೆ.

ಬಹಿರಂಗದ ಹೋರಾಟದ ಜೊತೆಗೆ ಆಂತರಿಕ ಶುದ್ಧಿಯನ್ನು ಸಮತೋಲನದಲ್ಲಿಟ್ಟುಕೊಂಡರೂ ಮಧ್ಯೆ ಮಧ್ಯೆ ಹೆಣ್ಣುಗಳ ಲಂಪಟನಾಗಿ ಕೀರ್ತಿಯ ಪರಾಕಾಷ್ಠ ಸ್ಥಿತಿಯಲ್ಲಿ ಪಾರ್ಶ್ವವಾಯು ಪೀಡಿತನಾಗಿ ಹಾಸಿಗೆ ಹಿಡಿಯುತ್ತಾನೆ. ನಿಧಾನಕ್ಕೆ ಚೇತರಿಸಿಕೊಳ್ಳುತ್ತಿದ್ದಂತೆ ರಾಜಕೀಯದಲ್ಲಿ ಕ್ಷಿಪ್ರ ಬೆಳವಣಿಗೆಗಳಾಗುತ್ತವೆ. ಒಂದು ಹಂತದಲ್ಲಿ ಮುಖ್ಯಮಂತ್ರಿಯಾಗಬೇಕೆಂದು ಪ್ರಸ್ತಾಪವು ಬರುತ್ತದೆ. ಅದನ್ನು ಒಪ್ಪಿಕೊಳ್ಳಬೇಕೆಂದು ಒತ್ತಾಯಿಸುತ್ತಿದ್ದ ಅನುಯಾಯಿಗಳೆಲ್ಲರೂ ಮುಂದಿನ ತಮ್ಮ ಸ್ಥಾನಗಳ ಮೇಲೆ ಕಣ್ಣಿಟ್ಟಿರುವ ಸ್ವಾರ್ಥಿಗಳು. ಕೃಷ್ಣಪ್ಪನು ರಾಜಕೀಯದ ಭ್ರಷ್ಟತೆಯೊಳಗೆ ತಾನು ಸಿಕ್ಕಿಕೊಳ್ಳುತ್ತಿದ್ದೇನಲ್ಲ ಎಂದು ಚಿಂತಿಸುತ್ತಾನೆ. ಆಂತರಿಕ ಹಾಗೂ ಬಹಿರಂಗದ ಆಗುಹೋಗುಗಳನ್ನು ಸಮದೂಗಿಸಿಕೊಂಡು ಸೃಷ್ಟಿಶೀಲವಾಗುವ ಪ್ರಕ್ರಿಯೆಯಲ್ಲಿ ಅಂತರ ಉಂಟಾದಾಗ ಸಂಘರ್ಷಕ್ಕೆ ದಾರಿಯಾಗುತ್ತದೆ.

ಪಾರ್ಶ್ವವಾಯುವಿನ ಆಘಾತದಿಂದ ಸಾವನ್ನೆದುರಿಸುತ್ತಿರುವ ಕೃಷ್ಣಪ್ಪ ತೀವ್ರತೆಯಲ್ಲಿ ಆತ್ಮವಿಮರ್ಶೆ ಮಾಡಿಕೊಳ್ಳುತ್ತಾನೆ. ಕಿಸಾನ್ ಚಳುವಳಿಯ ನಾಯಕನೆಂದು ಪಾರ್ಟಿಯಲ್ಲಿ ತನಗಿರುವ ಅನನ್ಯ ಗೌರವ, ಅಧಿಕಾರ, ಮಂತ್ರಿಯಾಗುವ ಸಂಧಿ ಇವೆಲ್ಲ ಕೃಷ್ಣಪ್ಪನಿಗೆ ಒಂದು ಸ್ತರದಲ್ಲಿ ಹೆಮ್ಮೆಯನ್ನು ತಂದುಕೊಟ್ಟಿವೆಯಾದರೂ ಒಳಗೆ ತಾನು ಇಡಿಯಾಗಿಲ್ಲ ಎಂದುಕೊಳ್ಳುತ್ತಾನೆ. ತನ್ನಲ್ಲಿ ಬಿರುಕು, ಎಲ್ಲಿ ಹೇಗೆ ಕಾಣಿಸಿಕೊಂಡಿತು? ಸಾಯುವ ಮುಂಚೆ ಇದನ್ನು ತಿಳಿಯಬೇಕು. ಎಂದು ಆತ್ಮಶೋಧಕ್ಕೆ ಹೊರಟ ಕೃಷ್ಣಪ್ಪನಿಗೆ ತಾನು ಮೆತ್ತಗಾಗ್ತ ಬಂದಿದೀನಿ, ಒಳಗಿಂದ ಕೊಳೀತ ಇದೀನಿ ಎಂಬ ಅರಿವು ಮೂಡುತ್ತದೆ. ವೀರಣ್ಣನೊಡನೆ ಪ್ರಜ್ಞಾಪೂರ್ವಕವಾಗಿ ಮಾಡಿಕೊಳ್ಳುವ ಒಪ್ಪಂದಗಳು, ನಾಗರಾಜನ ರಾಜಕೀಯ ವಿಚಾರಗಳನ್ನು ಎದುರಿಸಲು ಉಪಯೋಗಿಸುವ

[illegible]

[illegible]

[illegible]

[illegible]

[illegible]

ಯುಕ್ತವಾದ, ರಾಜಕೀಯ ಹೋರಾಟದ ಫಲಶೃತಿಯ ಬಗೆಗೆ ಅವನಲ್ಲಿ ಹುಟ್ಟಿಕೊಂಡ ಅನುಮಾನಗಳು, ಅವನ ದೇಹಕ್ಕೆ ಬಡಿದುಕೊಂಡ ಪಾರ್ಶ್ವವಾಯುವಿನಂತೆ ಅವನ ವ್ಯಕ್ತಿತ್ವದ ಒಂದು ಭಾಗವನ್ನು ನಿಷ್ಕ್ರಿಯೆಗೊಳಿಸುತ್ತವೆ. ಇದರಿಂದ ಉಂಟಾದ ಸಂದಿಗ್ಧದ ಪೂರ್ಣ ಕಲ್ಪನೆ ಅವನಿಗಿದೆ. ಈ ವ್ಯವಸ್ಥೆಯನ್ನು ಬಳಸಿಕೊಂಡ ತಾನು ಮುಖ್ಯಮಂತ್ರಿಯಾಗಬೇಕೆಂದು, ಆ ಬಯಕೆಯು ನಿಜವಾದದ್ದದ್ದೇ ಅಥವಾ ಇವನ್ನೆಲ್ಲ ತ್ಯಾಗ ಮಾಡಿ ಭ್ರಷ್ಟಾಚಾರದ ಬಲೆಯಿಂದ ದೂರವಿದ್ದು ಜನಹಿತವನ್ನು ತನ್ನ ಒಳಗಿನ ಹಿತವನ್ನೂ ಸಾವಿನ ಎದುರಿನಲ್ಲಿ ಮತ್ತೊಮ್ಮೆ ಸಾಧಿಸಬೇಕೆಂಬ ಸೆಳೆತ ನಿಜವಾದದ್ದೋ ಎನ್ನುವ ದ್ವಂದ್ವಕ್ಕೆ ಕೃಷ್ಣಪ್ಪ ಸಿಲುಕುತ್ತಾನೆ. ವ್ಯಕ್ತಿ ಬಹಿರಂಗದಲ್ಲಿ ಮಾಡುವ ರಾಜಕೀಯಕ್ಕೂ ಅವನು ಅನುಸರಿಸುತ್ತಿದ್ದ ಆದರ್ಶಕ್ಕೂ ಹಾಗೂ ಅವನ ಮೂಲ ಪ್ರಾಕೃತಿಕ ಸ್ಥಿತಿಯಲ್ಲಿ ಇರುವ ಪ್ರವೃತ್ತಿಗಳಿಗೂ ಇರುವ ಸಂಬಂಧಗಳ ವಿವಿಧ ನೆಲೆಗಳ ಶೋಧನೆಯನ್ನು ಇಲ್ಲಿ ಕಾಣಬಹುದಾಗಿದೆ. ಜೀವನಪರ್ಯಂತ ವ್ಯವಸ್ಥೆಯ ಹೋರಾಟವನ್ನು ತನ್ನ ರಾಜಕೀಯ ಚಟುವಟಿಕೆಯ ಮೂಲಬಿಂದುವಾಗಿಸಿಕೊಂಡ ಕೃಷ್ಣಪ್ಪ ತನ್ನಲ್ಲಿ ಅಂತರ್ಗತವಾಗಿರುವ ವ್ಯವಸ್ಥೆಯ ಗುಣವನ್ನು ಮೀರಲು ಸಾಧ್ಯವಾಗದಿರುವುದು ದ್ವಂದ್ವವನ್ನುಂಟುಮಾಡುತ್ತದೆ. ವಿಪರ್ಯಾಸದ ಸಂಗತಿಯೆಂದರೆ ಎಲ್ಲ ರೀತಿಯ ಶೋಷಣೆ, ದೌರ್ಜನ್ಯಗಳಿಂದ ಮುಕ್ತವಾದ ಸಮಾಜದ ನಿರ್ಮಾಣಕ್ಕೆ ಕನಸು ಕಾಣುವ ಕ್ರಾಂತಿಕಾರಿಗಳು ಹಿಂಸೆಯ ಮೊರೆ ಹೋಗುವುದು. ಕೌಟುಂಬಿಕ ನೆಲೆಯಲ್ಲಿ ಕೃಷ್ಣಪ್ಪ ತನ್ನ ಹೆಂಡತಿಯಿಂದ ಪಡೆಯುವ ಹಿಂಸೆ ಮತ್ತು ಸ್ವತಃ ತಾನು ಅವಳಿಗೆ ನೀಡಿದ ಹಿಂಸೆ ಹೀಗೆ ಕಾದಂಬರಿಯ ಮುಖ್ಯ ವಸ್ತುವಾದ ವ್ಯವಸ್ಥೆ ಮತ್ತು ಕ್ರಾಂತಿಯ ಶೋಧನೆ ಕಾಮ ಮತ್ತು ಹಿಂಸೆಗಳಂಥ ಮೂಲ ಪ್ರವೃತ್ತಿಗಳ ಮಟ್ಟದವರೆಗೆ ವಿಸ್ತರಿಸಿ ಕಾದಂಬರಿಗೆ ಅಸಾಧಾರಣ ಮಹತ್ವಾಕಾಂಕ್ಷೆಯನ್ನು ತಂದುಕೊಡುತ್ತವೆ. ಆಂತರಿಕ ಹಾಗೂ ಬಹಿರಂಗದ ಆಗುಹೋಗುಗಳನ್ನು ಸಮದೂಗಿಸಿಕೊಂಡು ಸೃಷ್ಟಿಶೀಲವಾಗುವ ಪ್ರಕ್ರಿಯೆಯಲ್ಲಿ ಅಂತರ ಉಂಟಾದಾಗ ಸಂಘರ್ಷಕ್ಕೆ ದಾರಿಯಾಗುತ್ತದೆ.

'ದಿವ್ಯ' ಕಾದಂಬರಿಯಲ್ಲಿ ಅಲೌಕಿಕ ವ್ಯಕ್ತಿತ್ವದ ಗೌರಿ ಮತ್ತು ಅತಿ ವಾಸ್ತವದ ನೆಲೆಯಲ್ಲಿ ಆದರ್ಶ ಸಮಾಜ ವ್ಯವಸ್ಥೆ ನಿರ್ಮಾಣಕ್ಕೆ ತವಕಿಸುವ ಘನಶ್ಯಾಮ ಇವರಿಬ್ಬರೂ ಒಬ್ಬರನ್ನೊಬ್ಬರು ಮೆಚ್ಚಿಕೊಳ್ಳುವುದು. ಅವರ ಅಂತರಂಗದ ಭಾವನೆಗಳಿಗೂ ಬಹಿರಂಗದ ವಿಚಾರಗಳಿಗೂ ಭಿನ್ನತೆಯಿರುವುದು ಇದರಿಂದ ವ್ಯಕ್ತವಾಗುತ್ತದೆ. ಅಂತರ್ಮುಖಿಯಾದ ಗೌರಿ ಪ್ರಚಾರಪ್ರಿಯನಾದ ಘನಶ್ಯಾಮ ವಿವಾಹ ಒಂದು ಬಗೆಯ ವೈರುಧ್ಯವನ್ನು ಸೃಷ್ಟಿ ಮಾಡುತ್ತದೆ. ಕೃಷ್ಣಶಾಸ್ತ್ರಿಗಳು ಹೇಳುವಂತೆ ತೀರಾ ಸಾಮನ್ಯ ಆದರೆ ಅತಿಯಾದ ಆದರ್ಶಗಳ ಕನಸು ಹೊತ್ತಿದ್ದ ಲೋಕ ಕಲ್ಯಾಣಕ್ಕೆಂದು ಹುಟ್ಟಿರುವ ಗೌರಿಯ ಕೈಹಿಡಿಯ ಬೇಕಾದಲ್ಲಿ ಇವನಲ್ಲಿ ಯಾವುದಾದರೂ ಅಪರೂಪದ ಗುಣವಿರಬೇಕಾದದ್ದು ತರ್ಕಬದ್ಧವೆನಿಸುತ್ತದೆ. ಲೋಕಹಿತಕ್ಕಾಗಿ ಕೆಲಸ ಮಾಡಬೇಕೆಂದು ಬಯಸುವ ಘನಶ್ಯಾಮ ತನ್ನ ನಂಬಿಕೆ ಆದರ್ಶ ಕನಸುಗಳೆಲ್ಲವನ್ನು ಸಾಕಾರಗೊಳಿಸುವ ಉತ್ಸಾಹದಲ್ಲಿ ಅನೇಕರ ಭಾವನಾತ್ಮಕ ನಂಬಿಕೆಗಳಿಗೆ ಆಘಾತವನ್ನುಂಟು ಮಾಡುತ್ತಾನೆ.

ಐನೂರು ವರ್ಷಗಳ ಹಿಂದಿನ ಭೂವರಾಹ ಸ್ವಾಮಿಯ ಪೂಜೆಯನ್ನು ನಿಲ್ಲಿಸಿ, ಆ ಮೂರ್ತಿಯನ್ನು ಕೀಳಿಸಿ ತನ್ನ ರೂಮಿನಲ್ಲಿ ಅಲಂಕಾರ ವಸ್ತುವನ್ನಾಗಿ ಇರಿಸಿಕೊಳ್ಳುತ್ತಾನೆ. ಪರಿಣಾಮವಾಗಿ ಗೌರಿಯಿಂದ ಬೈಸಿಕೊಳ್ಳುತ್ತಾನೆ. ಮೂಢನಂಬಿಕೆಗಳನ್ನು ಹೊಡೆದೋಡಿಸಬೇಕೆಂದುಕೊಂಡಿರುವ ಅವನು ಗೌರಿಯ ಮನಸ್ಸಿಗ ಬೇಸರವಾಗಬಾರದೆಂಬ ಕಾರಣದಿಂದ ಭೂವರಾಹ ಮೂರ್ತಿಯ ವಿಚಾರದಲ್ಲಿ ಅವಳ ನಿರ್ಧಾರಕ್ಕೆ ಬೆಲೆ ಕೊಡುತ್ತಾನೆ. ಜನಸಮುದಾಯದ ಬೆಂಬಲ ಪಡೆದು ಸಾಮಾಜಿಕ ಕ್ರಾಂತಿಯನ್ನು ಅಹಿಂಸಾತ್ಮಕವಾಗಿ ಮತ್ತು ಶಾಸನಬದ್ಧವಾಗಿ ಘನಶ್ಯಾಮ ಮಾಡಲು ಇಚ್ಛಿಸುತ್ತಾನೆ. ಉಳುವವನದೆ ಭೂಮಿಯ ಒಡೆತನವೆಂದು

ಘೋಷಿಸುತ್ತಾನೆ. ಟ್ರಸ್ಟೊಂದನ್ನು ಸ್ಥಾಪಿಸಿ ಸಮಾಜಹಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾನೆ. ಅರ್ಚಕ ವೃತ್ತಿಯಿಂದ ಕೇಶವನನ್ನು ತೆಗೆದು ಅವನಿಗೆ ತಾಳ ಮದ್ದಲೆ ಕಲೆಗಳ ಅಕಾಡೆಮಿ ಸ್ಥಾಪಿಸುವ ಸಂಸ್ಕೃತ ಕಲಿಸುವ ರಿಲೀಜನ್ನಿಗೆ ಸಂಬಂಧಿಸಿದ ರಿಸರ್ಚ್ ನಡೆಯುವ ಎಲ್ಲಾ ಜವಾಬ್ದಾರಿಗಳನ್ನು ವಹಿಸುತ್ತಾನೆ.

ಸಾಮಾಜಿಕ ಸಂದರ್ಭದಲ್ಲಿ ಪರಂಪರಾನುಗತವಾಗಿ ಬಂದಿರುವ ಆದರ್ಶವನ್ನು ಮುರಿಯುವುದು ಅಷ್ಟೊಂದು ಸುಲಭವೇನಲ್ಲ. ಹೀಗೆ ಇರುವಿಕೆಯಿಂದ ಆಗುವಿಕೆಯ ಕಡೆಗೆ ಸಾಗುವಲ್ಲಿ ತಪ್ತ ಸ್ಥಿತಿಯನ್ನು ವ್ಯಕ್ತಿ ಅನುಭವಿಸುತ್ತಾನೆ. ಪರಕೀಯತೆಯಿಂದಾಗಿ ಅನುಭವಿಸುವ ತಳಮಳ, ಅದರಿಂದ ಹೊರಬರಲು ಹವಣಿಸುವ ಹೋರಾಟದ ಸಂದರ್ಭದ ಮಾನಸಿಕ ಹಿಂಸೆ, ಗೊಂದಲ ಒಂದುಕಡೆಯಾದರೆ, ಅದಂರಿಂದ ಹೊರಬಂದು ಹೊಸಮಾದರಿಗಳನ್ನು ತಾನೇ ಆಯ್ಕೆ ಮಾಡಿಕೊಳ್ಳಬೇಕಾದ ತಪ್ತತೆ, ಆತಂಕ ಹಾಗೂ ಜವಾಬ್ದಾರಿ ಇನ್ನೊಂದುಕಡೆಯಿದೆ. ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ತನ್ನ ಮೌಲ್ಯಗಳನ್ನು ತಾನೇ ಸೃಷ್ಟಿಸಿಕೊಳ್ಳಬೇಕಾದ ಬಿಕ್ಕಟ್ಟಿಗೆ ಸಿಲುಕಿದ ವ್ಯಕ್ತಿ ಪರಂಪರೆಯಿಂದ ಹೊರಗೆ ನಿಂತು ಈ ಕಾರ್ಯ ಕೈಗೊಳ್ಳಬೇಕಾಗಿರುವುದರಿಂದ ಒಂಟಿಯಾಗುತ್ತಾನೆ. ಪರಂಪರೆಯ ತನ್ಮಯತೆಯಿಂದ ಹೊರಗೆ ನಿಂತವನು ಪರಕೀಯತೆಯಿಂದ ಬಳಲುತ್ತಾನೆ. ಪರಂಪರೆ ಯಾವ ಅಧಿಕೃತತೆಯನ್ನು ಬದುಕಿನ ಕ್ರಮದೊಳಗೆ ಇಲ್ಲವಾಗಿಸಿಕೊಂಡಿದೆಯೋ ಅದನ್ನು ತನ್ನ ಜೀವನ ಕ್ರಮದಲ್ಲಿ ಹುಡುಕುತ್ತಾನೆ. ಹೀಗೆ ಹುಡುಕುವ ವ್ಯಕ್ತಿ ತಾನೇ ಅವುಗಳಿಗೊಂದು ಮಾದರಿಯಾಗಲು ಪ್ರಯತ್ನಿಸುವುದನ್ನು ಇಲ್ಲಿನ ಕಥನಸಾಹಿತ್ಯ ಸೂಕ್ಷ್ಮವಾಗಿ ಹಿಡಿದಿಟ್ಟಿದೆ.

ಅನಂತಮೂರ್ತಿಯವರು ತಮ್ಮ ಕತೆಗಳಲ್ಲಿನ ಪಾತ್ರಗಳಿಗೆ ಒಂದು ಆದರ್ಶದ ಚೌಕಟ್ಟನ್ನು ನಿರ್ಮಿಸುವ ಮೂಲಕ ವಾಸ್ತವದ ಬದುಕನ್ನು ಯಥವತ್ತಾಗಿ ರೂಪಿಸಿಕೊಡುತ್ತಾರೆ. ಇಲ್ಲಿ ಸಾಮಾಜಿಕ ವ್ಯವಸ್ಥೆಯ ವಿವಿಧ ದೃಷ್ಟಿಕೋನಗಳನ್ನು ಸೈದ್ಧಾಂತಿಕ ಚೌಕಟ್ಟಿನಲ್ಲಿ ಕಟ್ಟುವ ಬಗೆಯನ್ನು ವ್ಯವಸ್ಥೆ ಹಾಗೂ ಸಮಕಾಲೀನತೆ, ಸಾಂಕೇತಿಕತೆ ಮತ್ತು ವಾಸ್ತವಿಕತೆ, ಅಂತರಂಗ ಮತ್ತು ಬಹಿರಂಗ ಎಂಬ ಉಪ ಶೀರ್ಷಿಕೆಗಳಲ್ಲಿ ಮೂಲಕ ಚರ್ಚಿಸಲಾಗಿದೆ. ಕತೆಯಲ್ಲಿ ಬರುವ ಪಾತ್ರಗಳು ಆತ್ಮವಿಮರ್ಶೆಯ ಮುಖೇನ ಬಹಿರಂಗಗೊಳ್ಳುವ ಬಗೆ ಇವರ ಕತೆಗಳ ಮುಖ್ಯ ತಂತ್ರವಾಗಿದೆ. ಲೇಖಕರ ಕಥಾತಂತ್ರವು ಪ್ರತಿಮೆಗಳ ಮೂಲಕ ಕತೆಗೆ ಒಂದು ವಾಸ್ತವ ಬದುಕಿನ ಅಗತ್ಯತೆವನ್ನು ತೋರಿಸಿಕೊಡುತ್ತದೆ. ಇಂಥ ಕೆಲವು ಚರ್ಚೆಗಳನ್ನು ಈ ಅಧ್ಯಾಯದಲ್ಲಿ ಕೈಗೊಳ್ಳಲಾಗಿದೆ.

[illegible]

[illegible]

[illegible]

ಅಡಿ ಟಿಪ್ಪಣಿಗಳು

೧. ಆಮೂರ ಜಿ.ಎಸ್;ಕನ್ನಡ ಪ್ರಭ ; ದೀಪಾವಳಿ ವಿಶೇಷಾಂಕ; ೨೦೦೨ ; ಪು; ೩೩.

೨. ಯಶವಂತಚಿತ್ತಾಲ;ಅವಸ್ಥೆಕಾದಂಬರಿ;ದಶವಾರ್ಷಿಕಸಾಹಿತಸಮೀಕ್ಷೆ;ಪ್ರಸಾರಾಂಗ;ಬೆಂಗಳೂರು;೧೯೮೨; ಪು೧೫.

೩. ಸುಬ್ಬಣ್ಣ.ಕೆ.ವಿ;ಡಾ.ಯುಆರ್.ಅನಂತಮೂರ್ತಿ;ಸಂ.ಮೋಹನಕುಂಟಾರ್;ಪ್ರಸಾರಾಂಗ;ಕನ್ನಡ ವಿಶ್ವವಿದಾಲಯ್;ಹಂಪಿ;೧೯೯೫;ಪು;೧೭.

೪. ಗಿರಡ್ಡಿ ಗೋವಿಂದರಾಜು;ಕನ್ನಡ ಸಣ್ಣ ಕಥೆಯಲ್ಲಿ ನವ್ಯತೆ; ೧೯೬೫ ; ಪು; ೩೨.

೫. ರಾಜೀವ ತಾರಾನಾಥ;ಯು.ಆರ್.ಅನಂತಮೂರ್ತಿ ಐದು ದಶಕದ ಕಥೆಗಳು ; ಅಕ್ಷರ ಪ್ರಕಾಶನ ಹೆಗ್ಗೋಡು;೨೦೦೧; ಪು: ೭೦.

೬. ಅಶೋಕ ಟಿ.ಪಿ;ಅನಂತಮೂರ್ತಿ ಸಾಹಿತ್ಯ ಒಂದು ಅಧ್ಯಯನ; ೨೦೦೧; ಪು: ೨೧, ೨೨.

೭. ಆಮೂರ ಜಿ.ಎಸ್;ಅನಂತಮೂರ್ತಿ ಕಥೆಗಳು;ಕನ್ನಡ ಪ್ರಭ;ದೀಪಾವಳಿ ವಿಶೇಷಾಂಕ; ೨೦೦೨;ಪು; ೨೪.

೮. ರಾಜೀವ ತಾರಾನಾಥ;ಅನಂತಮೂರ್ತಿ ಐದುದಶಕದಕಥೆಗಳು;ಅಕ್ಷರ ಪ್ರಕಾಶನ;ಹೆಗ್ಗೋಡು; ೨೦೦೧; ಪು: ೭೦

೯. ಅಡಿಗ ಗೋಪಾಲಕೃಷ್ಣ; ಯು.ಆರ್.ಅನಂತಮೂರ್ತಿ ಐದದಶಕದಕಥೆಗಳು;ಅಕ್ಷರ ಪ್ರಕಾಶನ;ಹೆಗ್ಗೋಡು;೨೦೦೧; ಪು.೧೬

೧೦. ಅಶೋಕ ಟಿ.ಪಿ. ಅನಂತಮೂರ್ತಿ ಒಂದು ಅಧ್ಯಯನ;ಅಕ್ಷರ ಪ್ರಕಾಶನ;ಹೆಗ್ಗೋಡು; ೨೦೦೧ ; ಪು:೧೫.

೧೧. ಕೃಷ್ಣಮೂರ್ತಿಎಂ.ಜಿ;ಸಂಸ್ಕಾರ;ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು;ಅಕ್ಷರ ಪ್ರಕಾಶನ;ಸಾಗರ;ಪು;೨೭೦.

೧೨. ಅಶೋಕಟಿ.ಪಿ;ನವ್ಯಕಾದಂಬರಿ ಪ್ರೇರಣೆಗಳು;ಬಾಪ್ಕೋ ಪಬ್ಲಿಕೇಷನ್ಸ್;ಬೆಂಗಳೂರು;೧೯೭೯;ಪು;೬೭.

೧೩. ಅನಂತಮೂರ್ತಿಯು.ಆರ್;ಧ್ಯಾನಸ್ಥಮನಸ್ಸಿನಮಾತು;ಸಾಪ್ತಾಹಿಕಪುರವಣಿ;ಪ್ರಜಾವಾಣಿ; ಸಂ.ಜೋಗಿ;೧೨.೮.೨೦೦೧;ಪು;೫

೧೪. ಗಿರಡ್ಡಿ ಗೋವಿಂದರಾಜು; ಕನ್ನಡ ಕಾದಂಬರಿಯಲ್ಲಿ ನವ್ಯತೆ;ಬಾಪ್ಕೋಪಬ್ಲಿಕೇಷನ್ಸ್;ಬೆಂಗಳೂರು; ೧೯೭೬; ಪು; ೨೭೭

೧೫. ಆಮೂರ ಜಿ.ಎಸ್; ಅನಂತಮೂರ್ತಿ ಕಥೆಗಳು;ಕನ್ನಡ ಪ್ರಭ; ದೀಪಾವಳಿ ವಿಶೇಷಾಂಕ; ೨೦೦೨ ; ಪು;೨೪.

೧೬. ಗಿರಡ್ಡಿ ಗೋವಿಂದರಾಜು;ಅನಂತಮೂರ್ತಿ ಕಥಾಸಾಹಿತ್ಯ;ಸಂ;ರಾಧಿಕಾ ಜಿ.ಎನ್;೧೯೮೬;ಪು;೨೯.

೧೭. ಜಿ.ಎಸ್.ಆಮೂರ;ಅನಂತಮೂರ್ತಿ ಕಥೆಗಳು;ಕನ್ನಡ ಪ್ರಭ;ದೀಪಾವಳಿ ವಿಶೇಷಾಂಕ;೨೦೦೨; ಪು;೫೩.

೧೮. ವಿಜಯಕುಮಾರ್.ಜಿ ; ಅನಂತಮೂರ್ತಿಯವರ ಕಥೆಗಳು; ಚಿನ್ಮಯ ; ಗ್ರಂಥ ಪ್ರಕಟಣ ಸಮಿತಿ;ಚಿತ್ರದುರ್ಗ;೧೯೭೯; ಪು:೧೦೮.

೧೯. ಭಗವಾನ್ ಕೆ.ಎಸ್;ಗೊಡ್ಡುಬ್ರಾಹ್ಮಣ್ಯ ಮತ್ತು ಧೂರ್ತಚಾರ್ವಾಕ ಮತ;ಸಂಕ್ರಮಣ;೧೯೭೭;ಪು;೯

ಅಧ್ಯಾಯ ನಾಲ್ಕು

ಪ್ರಜ್ಞೆ ಮತ್ತು ಪರಿಸರ

೪.೧ ಭೂತ ಮತ್ತು ವರ್ತಮಾನ

೪.೨ ವ್ಯಕ್ತಿತ್ವಗಳ ತಾಕಲಾಟ

೪.೩ ಕಾಲ ಮತ್ತು ಪರಿಸರ

ಅಧ್ಯಾಯ – ೪

ಪ್ರಜ್ಞೆ ಮತ್ತು ಪರಿಸರ

ಪರಿಸರದಲ್ಲಿನ ಬದಲಾವಣೆಯು ತಕ್ಷಣ ವ್ಯಕ್ತಿ ಪ್ರಜ್ಞೆಯಲ್ಲಿ ಸೇರಿಕೊಳ್ಳುವುದಿಲ್ಲ. ಹಳೆಯ ವಿಚಾರಗಳಿಂದ ಮುಕ್ತನಾಗಿರದ ವ್ಯಕ್ತಿ ಹೊಸ ವಿಚಾರಗಳನ್ನು ಇದ್ದಕ್ಕಿದ್ದಂತೆ ಒಪ್ಪಿಕೊಳ್ಳುವುದಿಲ್ಲ. ಈ ವಿಚಾರಗಳು ಸಂಘರ್ಷಕ್ಕೊಳಗಾಗಿ ನಿಧಾನಗತಿಯಲ್ಲಿ ಅವನ ಪ್ರಜ್ಞೆಯಲ್ಲಿ ಸೇರಿಕೊಳ್ಳುತ್ತವೆ.

ವ್ಯಕ್ತಿಯ ಬೌದ್ಧಿಕ ತಿಳುವಳಿಕೆಯ ವೇಗದ ಗತಿಗೆ ಅನುಗುಣವಾಗಿ ಅವನ ದೈನಂದಿನ ಪ್ರವೃತ್ತಿಗಳಲ್ಲಿ ಚಲನೆ ಇರುವುದಿಲ್ಲ.ಬದಲಾವಣೆಯನ್ನು ಬೌದ್ಧಿಕವಾಗಿ ಒಪ್ಪಿಕೊಂಡಂತೆ ವರ್ತನೆಯಲ್ಲಿ ಅಳವಡಿಸಿಕೊಳ್ಳುವುದಿಲ್ಲ. ಪ್ರಜ್ಞೆ ಮತ್ತು ಪರಿಸರದಲ್ಲಿನ ಅಂತರವು ಸಂಘರ್ಷವನ್ನು ಹುಟ್ಟುಹಾಕುತ್ತದೆ. “ಪರಿಸರದಲ್ಲಾಗುವ ಬದಲಾವಣೆಗಳೆಲ್ಲ ಮನುಷ್ಯ ಪ್ರಜ್ಞೆಯಲ್ಲಿ ಒಮ್ಮೆಗೆ ಪ್ರತಿಬಿಂಬಿತವಾಗುವುದಿಲ್ಲ. ಹೊಸ ಸಮಾಜ ವ್ಯವಸ್ಥೆಯಿಂದ ಮನುಷ್ಯನ ಅರಿವಿನಲ್ಲಿ ಸೂಕ್ಷ್ಮ ಮಾರ್ಪಾಡುಗಳಾದರೂ ಸಹ, ಅಳಿದು ಹೋದ ವ್ಯವಸ್ಥೆಯ ಕುರುಹುಗಳು ಇನ್ನೂ ಮನುಷ್ಯನ ಪ್ರಜ್ಞೆಯಲ್ಲಿ ತೂಕಡಿಸುತ್ತಿರುತ್ತವೆ. ಪರಿಸರದಲ್ಲಿ ಆಗುವಷ್ಟು ವೇಗವಾಗಿ ಬದಲಾವಣೆ ಪ್ರಜ್ಞೆಯಲ್ಲಿ ಆಗದಿದ್ದರೂ, ಕ್ರಮೇಣ, ಅದೆಷ್ಟು ನಿಧಾನವಾದ ಬದಲಾವಣೆಯಾಗಿದ್ದರೂ ಸಹ ಪ್ರಜ್ಞೆಯೂ ಒಂದಲ್ಲ ಒಂದು ಕಾಲದಲ್ಲಿ ಹಳೆಯದನ್ನು ಕಳೆದುಕೊಳ್ಳುತ್ತಾ, ಹೊಸದಾಗಬೇಕಾಗುತ್ತದೆ.”[೧] ಅನಂತಮೂರ್ತಿಯವರು ಮಾನಸಿಕ ಅಂದರೆ ಅಂತರಂಗದ ಪ್ರಜ್ಞೆಯೊಂದಿಗೆ ಹೊರ ಜಗತ್ತಿನ ವಾಸ್ತವಿಕ ಕ್ರಿಯೆಗಳಿಂದ ಹಿಂದೆ ಸರಿದು ತಮ್ಮ ಖಾಸಗೀ ಜಗತ್ತಿನಲ್ಲಿ ಅಂದರೆ ಪ್ರಜ್ಞಾಪ್ರವಾಹದಿಂದ ತುಂಬಿದ ಮನೋಪ್ರಪಂಚದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಾರೆ.

ಪ್ರಜ್ಞೆಯು ವ್ಯಕ್ತಿಯ ಅಂತರಂಗಕ್ಕೆ ಸಂಬಂಧಿಸಿದ್ದು, ವ್ಯಕ್ತಿಗೆ ಆಗುತ್ತಿರುವ ಮತ್ತು ಅಲ್ಲಿಯವರೆಗೆ ಆಗಿರುವ ಎಲ್ಲ ಅನುಭವಗಳ ಮಿಶ್ರಣವಾಗಿದೆ. ಪ್ರತಿಯೊಬ್ಬ ವ್ಯಕ್ತಿಯ ಪ್ರತಿಯೊಂದು ವಿಚಾರ ಹಾಗೂ ಭಾವನೆ ಆ ವ್ಯಕ್ತಿಯ ಪ್ರಜ್ಞೆಯ ಭಾಗವೇ ಆಗಿದೆ. ಪ್ರಜ್ಞೆಗೂ ವ್ಯಕ್ತಿಯ ವ್ಯಕ್ತಿತ್ವಕ್ಕೂ ನಿಕಟವಾದ ಸಂಬಂಧವಿದೆ. ಪ್ರಜ್ಞೆ, ವ್ಯಕ್ತಿತ್ವ ಮತ್ತು ಕಾಲಗಳು ಒಂದಕ್ಕೊಂದು ಪರಸ್ಪರ ಹೆಣೆದುಕೊಂಡಿವೆ. ಪ್ರಜ್ಞೆ, ವ್ಯಕ್ತಿತ್ವ ಮತ್ತು ಕಾಲಗಳು ಈ ಮೂರು ಸ್ಥಿತಿಗಳಾಗಿರದೇ ಅವು ಪ್ರಕ್ರಿಯೆಗಳಾಗಿವೆ. ಚಲನಶೀಲ ವಸ್ತುಗಳಾದ ಇವು ಸದಾ ಬದಲಾಗುತ್ತಿರುತ್ತವೆ. ಇವು ಸದಾ ಪ್ರವಹಿಸುತಿರುತ್ತವಾದ್ದರಿಂದ ಇವನ್ನು ವರ್ಣಿಸಲು ನದಿ ಅಥವಾ ಪ್ರವಾಹ ರೂಪಕವನ್ನು ಬಳಸಲಾಗುತ್ತದೆ. ಹೀಗೆ ಲೇಖಕರು ಕಥಾಸಾಹಿತ್ಯದಲ್ಲಿ ಪ್ರಜ್ಞಾಪ್ರವಾಹ ತಂತ್ರವನ್ನು ಬಳಸಿ ಪಾತ್ರಗಳ ಅಂತರಂಗವನ್ನು ಚಿತ್ರಿಸಿ ಆ ಪಾತ್ರವನ್ನು ಪೂರ್ಣ ಅರಿಯಲು ಮತ್ತು ಒಳಮನಸ್ಸನ್ನು ಬಗೆದು ಅದರ ಪ್ರಜ್ಞೆಯ ವಿವಿಧ ಸ್ತರಗಳನ್ನು ಶೋಧಿಸಿ ಆ ಪಾತ್ರದ ನಿಜಸ್ವರೂಪವನ್ನು ತಿಳಿಸುತ್ತಾರೆ. ಪ್ರಜ್ಞಾಪ್ರವಾಹತಂತ್ರವು ಸಾಹಿತ್ಯದ ಅಭಿವ್ಯಕ್ತಿಯಲ್ಲಿ ಒಂದು ವಿಶಿಷ್ಟ ತಂತ್ರವೂ ಆಗಿದೆ.

ಬದುಕು ವಿಚಿತ್ರವಾಗಿದ್ದು ಈ ವೈಚಿತ್ರ್ಯ ನಿಗೂಢತೆಯ ರೂಪದಲ್ಲಿ ನಮ್ಮನ್ನು ಕಾಡಿಸುತ್ತ ಕೆರಳಿಸುತ್ತಾ ಕೊಂಡೊಯ್ಯುತ್ತದೆ. ನಮ್ಮ ಆಸೆ ಆಕಾಂಕ್ಷೆ ಆದರ್ಶ ಅರಿವುಗಳಿಂದಾದಿಯಾಗಿ ಅನೇಕಾನೇಕ ಅಂಶಗಳನ್ನು ಬದುಕಿನಲ್ಲಿ ಪಡೆಯುವ ನಿರಂತರ ಪ್ರಯತ್ನದಲ್ಲಿ ಈ ನಿಗೂಢತೆಯನ್ನು ಬಯಲುಮಾಡುವ ವಿಸ್ಮಯಗೊಳ್ಳುವ ಒಂದಾಗುವ ಅಥವಾ ವೇದನೆಯ ಸ್ಥಿತಿಯನ್ನು ಅನುಭವಿಸುತ್ತೇವೆ. ಒಟ್ಟು ಪರಿಸರದ ನಡುವೆ ತನ್ನನ್ನು ತಾನು ತೊಡಗಿಸಿಕೊಳ್ಳುವ ವಿಧಾನದಲ್ಲಿ ಮನುಷ್ಯನೊಬ್ಬ ತನ್ನ ಸುಲಭ ರಾಜೀ ಮನೋಭಾವ ಅಥವಾ ಅಸಾಧಾರಣ ತಳಮಳಗಳನ್ನು ಹುಟ್ಟುಹಾಕಬಹುದು. ಸುಲಭ ಹೊಂದಾಣಿಕೆ ನಮ್ಮ ಒಳಗನ್ನೆಲ್ಲ ಸಾಯಿಸಿ ಹೊರಗಿನ ವ್ಯಾವಹಾರಿಕ ಒಪ್ಪಂದದ ನಿಷ್ಕ್ರಿಯತೆಯ ನಿದ್ದೆಯಿಂದ ಮೇಲೇಳಿಸಿ ಮೈಮುಟ್ಟಿ ನೋಡಿಕೊಳ್ಳುವಂತೆ ಮಾಡುತ್ತದೆ. ಈ ಮೂಲಕ ತಾನು ತನ್ನ ಪರಿಸರ, ಮೌಲ್ಯವ್ಯವಸ್ಥೆ ಎಲ್ಲವನ್ನು ಅರಿಯುವ ಅರಗಿಸಿಕೊಳ್ಳುವ ತೀವ್ರ ನೋವು ಮತ್ತು ವಿಚಿತ್ರ ಖುಷಿಗಳನ್ನು ಕೊಡುತ್ತದೆ. ಇದು ವ್ಯಕ್ತಿಯೊಬ್ಬ ಅಂತರಂಗದಲ್ಲಿ ಹೇಗೋ ಹಾಗೆಯೇ ಬಹಿರಂಗದಲ್ಲೂ ನಿಂತು ನಡೆಸುವ ನಿರಂತರ ಸಂಘರ್ಷ. ನಾವು ಪೂರ್ಣ ಒಪ್ಪದ ಆದರೆ ಪೂರ್ಣ ನಿರಾಕರಿಸಿ ನಕಾರಾತ್ಮಕ ನಿಷ್ಕ್ರಿಯೆ ನೆಲೆ ತಲುಪಲೂ ಆಗದ ಸ್ಥಿತಿಯಲ್ಲಿ ಸಾಂಪ್ರದಾಯಿಕತೆ, ಸಿನಿಕತನ, ಸಣ್ಣತನ ಮುಂತಾದವುಗಳನ್ನು ಮೀರಬೇಕಾದ ಕ್ರಿಯೆಗೆ ತೊಡಗುವುದರಿಂದ ಒಂದು ರೀತಿಯಲ್ಲಿ ಹೋರಾಟ ಮತ್ತು ಹೊಂದಾಣಿಕೆಯ ವೈರುಧ್ಯ ಉಂಟಾಗುತ್ತದೆ. ನಮಗೆ ಇಷ್ಟವಾಗಲಿ ಆಗದಿರಲಿ ಈ ಪರಿಸರದಿಂದ ಪಲಾಯನ ಮಾಡಲಿಚ್ಛಿಸದ ವ್ಯಕ್ತಿಗಳು ಹೋರಾಟವನ್ನು ಬಿಟ್ಟುಕೊಡದೇ ಮೌಲ್ಯಗಳಿಗೆ ಹೊರತಾದ ಸಣ್ಣಪುಟ್ಟ ಹೊಂದಾಣಿಕೆಯಲ್ಲಿ ಬದುಕುವುದು ಅನಿವಾರ್ಯವೆನ್ನಿಸುತ್ತದೆ.

ಅಗ್ರಹಾರದ ಪರಿಸರದಿಂದ ರೂಪುಗೊಂಡ ಅನಂತಮೂರ್ತಿಯವರ ಅಸ್ತಿತ್ವವು ಸಾಮಾಜಿಕ ಹಾಗೂ ನಂಬಿಕೆಗಳನ್ನು ಪ್ರಶ್ನಿಸುವಂತೆ ಮಾಡಿದೆ. ಗಾಂಧೀಜಿಯವರಿಂದ ಪ್ರಭಾವಿತರಾದ ಅನಂತಮೂರ್ತಿಯವರಿಗೆ ಕನ್ನಡ ಲೇಖಕರಾದ ಕುವೆಂಪು ಮತ್ತು ಕಾರಂತರ ಕಾದಂಬರಿಗಳ ಪ್ರೇರಣೆಯೂ ಇದೆ. ಪೌರಾಣಿಕ ಪ್ರಪಂಚ ಮತ್ತು ವಾಸ್ತವಿಕ ಪ್ರಪಂಚದ ನಡುವಿನ ಅನ್ಯೋನ್ಯವನ್ನು ಗುರುತಿಸಿದ ಲೇಖಕರು ಸುತ್ತಲಿನ ಪ್ರಪಂಚದಲ್ಲಿ ಸಂಭವಿಸಿದ ಘಟನೆಗಳನ್ನು ಕುತೂಹಲದಿಂದ ನೋಡಿದರು. ಪರಿಸರದಿಂದ ಒಡೆದುಕೊಂಡು ಲೇಖಕನಾಗಲು ಈ ಪ್ರಜ್ಞೆಯು ಸಹಾಯಕವಾಯಿತು. ಪರಂಪರೆಯಿಂದ ದೊರೆತ ಆಧ್ಯಾತ್ಮ ಹಾಗೂ ಯುಗಧರ್ಮವಾದ-ಮಾನವತಾವಾದ ಇವುಗಳು ಅನಂತಮೂರ್ತಿಯವರ ಆದರ್ಶ ಸೂತ್ರಗಳಾಗಿವೆ. ಆಯ್ಕೆ ಮತ್ತು ಸಮನ್ವಯಗಳ ಮೂಲಕ ದ್ವಂದ್ವಗಳನ್ನು ಅವರು ಕಥಾ ಸಾಹಿತ್ಯದಲ್ಲಿ ಪ್ರತಿಪಾದಿಸಿದ್ದಾರೆ. ಪರಿಸರದಿಂದ ದತ್ತವಾಗಿರುವ ವ್ಯಕ್ತಿಯ

[illegible]

[illegible]

[illegible]

ಸ್ವಭಾವಕ್ಕೆ ಕೆಲವು ವೈಶಿಷ್ಟ್ಯಗಳಿರುತ್ತವೆ. ಈ ವೈಶಿಷ್ಟದಿಂದಾಗುವ ಸಂಕೀರ್ಣತೆಯನ್ನು ಲೇಖಕರು ಸಮಗ್ರವಾಗಿ ಕಥಿಸುತ್ತಾರೆ.

ವಸಾಹತುಶಾಹಿಯ ಆಕ್ರಮಣದಿಂದ ರೂಪುಗೊಂಡಿರುವ ಬದುಕಿನ ದೃಷ್ಟಿಕೋನದಲ್ಲಿನ ಆಧುನಿಕತೆಯ ಸ್ವರೂಪ ಮತ್ತು ಯೂರೋಪಿನ ಮಾದರಿಯ ಬೇರೆ ಬೇರೆ ನೆಲೆಗಳನ್ನು ಅನಂತಮೂರ್ತಿಯವರಲ್ಲಿ ಗುರುತಿಸಬಹುದು. ಈ ನಿಟ್ಟಿನಲ್ಲಿ ಗೋಚರಿಸಿದ ಹೊಸ ಆಲೋಚನೆಗಳಿಂದಾಗಿ ಅನುಭವಿಸಿದ ತಲ್ಲಣಗಳು, ಆತಂಕಗಳು ಏನೆಂಬುದನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಸೃಜನಾತ್ಮಕ ನೆಲೆಯಲ್ಲಿ ಕಂಡುಕೊಳ್ಳುತ್ತಿರುವ ಹೊಸ ದಾರಿಗಳು ಸಂಸ್ಕೃತಿಯನ್ನು ಕಟ್ಟುವ ಇಲ್ಲವೆ ಕೆಡಹುವ ಲಕ್ಷಣವನ್ನು ಹೊಂದಿರಬಹುದೇ ಎಂಬುದನ್ನು ಗುರುತಿಸಲಾಗಿದೆ. ಸ್ವಾತಂತ್ರ್ಯೋತ್ತರದಲ್ಲಿ ಮುಖ್ಯವಾಗಿ ಕಂಡುಬಂದ ವ್ಯಕ್ತಿನಿಷ್ಠ ನೆಲೆಗಳನ್ನು ಹುಡುಕುವ ಪ್ರಯತ್ನವನ್ನು ಮಾಡಲಾಗಿದೆ. ಹೊರಗಿನ ಪ್ರಭಾವಗಳಿಂದ ಬದುಕಿನಲ್ಲಾದ ಬದಲಾವಣೆಯಿಂದ ಉಂಟಾದ ಸಾಂಸ್ಕೃತಿಕ ಸಂಘರ್ಷವನ್ನು ಕೇಂದ್ರವಾಗಿರಿಸಿಕೊಂಡು ಅಧ್ಯಯನಿಸಲಾಗಿದೆ. ನವ್ಯರ ಮಿತಿಯನ್ನು ತೋರಿಸಿಕೊಟ್ಟ ಅನಂತಮೂರ್ತಿಯವರು ಆದರ ನಿಶ್ಚಲಸ್ಥಿತಿಯನ್ನು ಗುರುತಿಸಿದರು. ಆನಂತರ ಸ್ವಂತಿಕೆಯ ನೆಲೆಗಳನ್ನು ಕಂಡುಕೊಳ್ಳಲು ನಿರಂತರವಾಗಿ ಅನ್ವೇಷಣೆಯಲ್ಲಿ ತೊಡಗಿದರು. ಸಂಸ್ಕೃತಿಯ ಚಲನೆಯನ್ನೇ ಉದ್ದೇಶವಾಗಿಟ್ಟುಕೊಂಡ ಅನಂತಮೂರ್ತಿಯವರ ಕಥಾಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೪.೧ ಭೂತ ಮತ್ತು ವರ್ತಮಾನ

ಒಂದನ್ನು ಕಳೆದುಕೊಂಡು ಇನ್ನೊಂದನ್ನು ಪಡೆದುಕೊಳ್ಳುವ ಬದುಕು ದ್ವಂದ್ವದಿಂದ ಕೂಡಿದೆ. ಇದು ಮನುಷ್ಯನಿಗೆ ಅವಶ್ಯಕವಾಗಿರುವಂತೆ ಅನಿವಾರ್ಯವಾಗಿದೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಜೀವನ ಮೌಲ್ಯಗಳು ಬದಲಾದವು. ಜಗತ್ತು ಪರಿವರ್ತನಾ ನಿಯಮವನ್ನು ಪಾಲಿಸಿರುವುದು ಇದಕ್ಕೆ ಕಾರಣವಾಗಿದೆ. ವಿಶ್ವದ ಯಾವುದೇ ಭಾಗದಲ್ಲಿ ಮೌಲಿಕ ಪರಿವರ್ತನೆಯು ನವನವೀನವಾಗಿ ತಕ್ಷಣ ಕಾಣಿಸಿಕೊಳ್ಳುವುದಿಲ್ಲ. ಹಲವಾರು ದಿನಗಳ ಭೂತವು ಅದಕ್ಕೆ ಪ್ರೇರಣೆಯನ್ನು ನೀಡಿರುತ್ತದೆ. ಈ ನಿರಂತರತೆಯು ಭೂತ ಮತ್ತು ವರ್ತಮಾನದ ಜೀವನ ದೃಷ್ಟಿಯ ಮೇಲೆ ಪರಿಣಾಮವನ್ನು ಬೀರುತ್ತದೆ. ಭೂತ ಮತ್ತು ವರ್ತಮಾನದ ವಿಚಾರಗಳು ಪರಸ್ಪರ ಮುಖಾಮುಖಿಯಾದಾಗ ಡೋಲಾಯಮಾನ ಪರಿಸ್ಥಿತಿಯು ನಿರ್ಮಾಣವಾಗುತ್ತದೆ.

"ನವ್ಯ ಕಥೆ ಸಾಮಾನ್ಯವಾಗಿ ತನ್ನ ಶಿಖರದ ಹತ್ತಿರವೇ ಆರಂಭವಾಗಿ ಭೂತ ಕಾಲದ ಘಟನೆಗಳು ಬಿಟ್ಟುಹೋದ ಹೆಜ್ಜೆಯ ಗುರುತುಗಳನ್ನು ಆ ಕೊನೆಯ ಘಟನೆಯಲ್ಲೇ ಬಿಡಿಸಿ ತೋರಿಸುತ್ತದೆ. ಭೂತ ಹಾಗೂ ವರ್ತಮಾನಗಳೆರಡು ಒಂದೇ ಕ್ಷಣದಲ್ಲಿ ಹೇಗೆ ಒಂದರೊಳಗೊಂದು ತೊಡಕು, ತೊಡಕಾಗಿ ಹೆಣೆದುಕೊಂಡಿವೆಯೆಂದು ತೋರಿಸುವುದು ಇದರ ಉದ್ದೇಶ".[೨] ಭೂತಕಾಲ ಹಾಗೂ ವರ್ತಮಾನಕ್ಕೆ ಸಂಬಂಧಿಸಿದ ವಿಚಾರಗಳ ಸಂಘರ್ಷವನ್ನು ಅನಂತಮೂರ್ತಿಯವರು ತಮ್ಮ ಕಥಾ ಸಾಹಿತ್ಯದಲ್ಲಿ ಚಿತ್ರಿಸಿದ್ದಾರೆ. "ಭೂತಕಾಲಕ್ಕೆ ನಾವು ಕೃತಜ್ಞರಾಗಿರುವಂತೆಯೇ ನಮ್ಮ ಸಾಹಿತ್ಯಕ ಪರಂಪರೆಯಲ್ಲಿ ಉತ್ಕೃಷ್ಟವಾದುದನ್ನು ಅನುಕರಣೆ ಮಾಡದೆ, ಅದರೊಂದಿಗೆ ಸೃಜನಾತ್ಮಕವಾಗಿ ಒಡನಾಡುತ್ತಾ ಮುಂದುವರಿಸಿಕೊಂಡು ಬಂದಿರುವ ವರ್ತಮಾನಕ್ಕೂ ಋಣಿಗಳಾಗಿರಬೇಕು.ಈ ಉಭಯಗಳ ನಡುವೆ ನಾವು ಪರಂಪರೆಯೊಂದಿಗೆ

ಬದುಕುತ್ತಿದ್ದೇವೆ." [೩] ಆಧುನಿಕತೆ, ಸನಾತನತೆ ಇವು ಕೇವಲ ಬುದ್ಧಿಗೆ ಮಾತ್ರ ಸಂಬಂಧಿಸಿದ ವಿಚಾರಗಳಲ್ಲ. ಬದುಕಿನ ನಿಜಸ್ಥಿತಿಗೆ ನಮ್ಮ ಸ್ಪಂದನೆ ಸಾಧ್ಯವಾಗಬೇಕಾದರೆ ಇವೆರಡನ್ನೂ ಒಳಗೊಂಡ ಒಂದು ಸ್ಥಿತಿಯ ಅಗತ್ಯವಿದೆ. ಆಧುನಿಕತೆಯ ಎದುರಿನಲ್ಲಿ ತರುವ ಭಾರತೀಯವಾದ ಪ್ರತೀಕಗಳನ್ನು ಹುಡುಕುವ ಅನಂತಮೂರ್ತಿಯವರು ಈ ಪ್ರಕ್ರಿಯೆಯಲ್ಲಿ ಪರಿಪೂರ್ಣ ಎಂದುಕೊಂಡಿರುವ ಗತವನ್ನು ಬಿರುಕು ಬಿಟ್ಟಿರುವ ವರ್ತಮಾನದ ಜೊತೆಯಲ್ಲಿಟ್ಟು ನೋಡುತ್ತಾರೆ. ಆ ಮೂಲಕ ಗತವನ್ನೂ ಒಳಗೊಂಡ ಒಂದು ಹೊಸ ವರ್ತಮಾನವನ್ನು ನಿರ್ಮಾಣ ಮಾಡುತ್ತಾರೆ. ಅನಂತಮೂರ್ತಿಯವರ ಕಥನಸಾಹಿತ್ಯದಲ್ಲಿ ಭೂತ ವರ್ತಮಾನಕ್ಕೆ ಸಂಬಂಧಿಸಿದ ವಿಚಾರಗಳಿವೆ.

'ಖೋಜರಾಜ' ಕತೆಯಲ್ಲಿ ಭವಿಷ್ಯದ ಬಗೆಗೆ ವಿಶೇಷ ಆಸಕ್ತಿ ವಹಿಸುವ ರಾಜಣ್ಣನು ವರ್ತಮಾನದಲ್ಲಿ ದ್ವಂದ್ವಕ್ಕೊಳಗಾಗುತ್ತಾನೆ. ಅವನಲ್ಲಿರುವ್ ಆತ್ಮವಿಮರ್ಶಾ ಪ್ರವೃತ್ತಿಯು ಈ ದ್ವಂದ್ವಕ್ಕೆ ಕಾರಣವಾಗಿದೆ. ಅವನಿಗೆ ಇತರರಿಗಿಂತ ಉನ್ನತ ಸ್ಥಿತಿಯಲ್ಲಿರಬೇಕು ಹಾಗೂ ಹೆಸರುಮಾಡಬೇಕೆಂಬ ಹಂಬಲವಿದೆ. ಅದನ್ನು ಸಾಧಿಸಲು ಪ್ರಯತ್ನಿಸುವ ಅವನು ಬೇರೆಯ ಕೆಲವೊಂದು ಲೇಖನಗಳನ್ನು ತನ್ನ ಹೆಸರಿನಲ್ಲಿ ಪ್ರಕಟಮಾಡಿಕೊಳ್ಳುವ ಮಟ್ಟಕ್ಕೆ ಇಳಿಯುತ್ತಾನೆ. ಪ್ರೀತಿಯನ್ನು ಅಪೇಕ್ಷಿಸುವ ರಾಜಣ್ಣನಿಗೆ ಅದರ ಪಾವಿತ್ರ್ಯತೆಯಲ್ಲಿ ನಂಬಿಕೆಯಿಲ್ಲ. ತನ್ನ–ಅರುಂಧತಿ, ತನ್ನ–ದ್ವಾರಕಾನಾಥ್‌ರ ನಡುವಿನ ಸಂಬಂಧಗಳನ್ನು ಪತ್ತೆ ಹಚ್ಚುವ ಗೋಜಿಗೆ ಹೋಗದೇ ಭೂತವನ್ನು ಕೆದಕುತ್ತಾ ಭವಿಷ್ಯದತ್ತ ಕಣ್ಣುತೇಲಿಸಿ ವರ್ತಮಾನದಲ್ಲಿ ರಾಜಣ್ಣ ಇಲ್ಲವಾಗುತ್ತಾನೆ. ಹುಡುಕಾಟಗಳಿಗೆ ಒಂದು ಉತ್ತರ ಕಂಡುಕೊಳ್ಳಲು ನಿರ್ಧರಿಸಿ ನಡುರಾತ್ರಿಯಲ್ಲಿ ಬುದ್ಧನಂತೆ ಹೊರಡುತ್ತಾನೆ. ಹೀಗೆ ಭೂತದ ವಿಚಾರಗಳನ್ನು ನೆನೆಸಿಕೊಂಡು ವರ್ತಮಾನದಲ್ಲಿ ರಾಜಣ್ಣ ಗೊಂದಲಗೊಳ್ಳುತ್ತಾನೆ.

'ಪ್ರಶ್ನೆ' ಕತೆಯಲ್ಲಿ ಶಂಕರಯ್ಯನು ಭೂತಕಾಲದ ಮೌಲ್ಯಗಳಿಗೆ ಸ್ಪಂದಿಸಿದರೆ, ರಂಗನಾಥನು ವರ್ತಮಾನದ ವಿಚಾರಗಳ ಪ್ರತಿಪಾದಕನಾಗಿದ್ದಾನೆ. ಶಾರದೆಗೆ ಶಂಕರಯ್ಯನನ್ನು ನೋಡಿಕೊಳ್ಳುವ ಜವಾಬ್ದಾರಿಯ ಜೊತೆಗೆ ರಂಗನೊಂದಿಗೆ ವಿವಾಹವಾಗಬೇಕಾದ ಒತ್ತಡವಿದೆ. ಶಂಕರಯ್ಯನ ಋಣವನ್ನು ಮರೆಯದೆ, ರಂಗನ ಪ್ರೀತಿಯನ್ನು ನಿರಾಕರಿಸದ ಶಾರದೆಯು ಭವಿಷ್ಯದ ಜೀವನವನ್ನು ರೂಪಿಸಿಕೊಳ್ಳುವಲ್ಲಿ ದ್ವಂದ್ವಕ್ಕೊಳಗಾಗುತ್ತಾಳೆ. ಅಕ್ಕನ ಸಾವಿಗೆ ಕಾರಣವಾದ ಪ್ರೇಮ ವಿವಾಹದ ಬಗೆಗೆ ಶಾರದೆಗೆ ಭಯವಿದೆ. ರಂಗನ ಪ್ರೀತಿಗಾಗಿ ಅವಳು ಕುರುಡು ಮಾವಯ್ಯನನ್ನು ಬಿಟ್ಟು ಬರಲು ಒಪ್ಪುವುದಿಲ್ಲ. ರಂಗನಾಥ ಹಾಗೂ ಶಂಕರಯ್ಯನಿಗೆ ಶಾರದೆಯು ಅಚ್ಚುಮೆಚ್ಚಿನವಳಾಗಿದ್ದಾಳೆ. ಹುಟ್ಟಿ ಬೆಳೆದ ಹಳ್ಳಿಯಲ್ಲಿಯೇ ನೆಲೆಸಬೇಕೆಂಬ ತೀರ್ಮಾನ ಶಂಕರಯ್ಯನದು. ಹಳ್ಳಿಯನ್ನು ಬಿಟ್ಟು ಪೇಟೆಯಲ್ಲಿ ನೆಲೆಸಬೇಕೆಂಬ ಆಲೋಚನೆ ರಂಗನದು. ಕುರುಡು ಮಾವಯ್ಯನ ಬಗೆಗೆ ಶಾರದೆಗೆ ಅಕ್ಕರೆಯಿದ್ದರೆ, ರಂಗನಿಗೆ ಅಸಮಾಧಾನವಿದೆ. ಈ ಮೂವರ ಭವಿಷ್ಯದ ಬದುಕು ಭೂತ ಕಾಲದ ನೆನಪಿನೊಂದಿಗೆ ವರ್ತಮಾನದಲ್ಲಿ ಸಂಘರ್ಷವನ್ನುಂಟು ಮಾಡಿದೆ.

ಪೂರ್ವಿಕರು ಬಾಳಿ, ಬದುಕಿದ ಹಳ್ಳಿಯ ಮನೆಯನ್ನು ಶಂಕರಯ್ಯನು ಪುಣ್ಯ ಭೂಮಿಯೆಂದು ಭಾವಿಸಿರುತ್ತಾನೆ. ತಾನು ಬೆಳೆದ ಹಾಗೂ ನೆಲೆಸಿದ ಮನೆಯ ಬಗೆಗೆ ಅಭಿಮಾನವನ್ನು ಹೊಂದಿರುತ್ತಾನೆ. ಹಿರಿಯರು ಹಿಂದೆ ಮಾಡಿದ ಆಣೆಯನ್ನು ಮುರಿಯಲು ಒಪ್ಪದ ಶಂಕರಯ್ಯನು ಶಾರದೆಯನ್ನು ರಂಗನಿಗೆ ಧಾರೆಯೆರೆದು ಕೊಡಲು ನಿರಾಕರಿಸುತ್ತಾನೆ. ಆಣೆಯ ಬಗೆಗೆ ನಂಬಿಕೆಯಿಲ್ಲದ ರಂಗನಾಥನಿಗೆ ಗತಿಸಿ ಹೋದವರ ಮಾತಿಗಿಂತ ಮನದ ಇಚ್ಛೆಯಂತೆ ಬದುಕುವುದು ಮುಖ್ಯವೆನಿಸುತ್ತದೆ. ಮದುವೆ ಗಂಡು ಹೆಣ್ಣಿನ ಸುಖಕ್ಕೆ

ಮಾತ್ರವಲ್ಲ, ಪಿತೃಋಣಕ್ಕೂ ಸಂಬಂಧಿಸಿದೆ ಎಂಬ ಆಲೋಚನೆ ಶಂಕರಯ್ಯನದು. ಆಧುನಿಕ ಕಾಲದ ರಂಗನು ತನ್ನ ಮಾತನ್ನು ಕೇಳುವುದಿಲ್ಲವೆಂಬ ಅಸಮಾಧಾನವು ಶಂಕರಯ್ಯನಿಗಿದೆ. ವಂಶಪಾರಂಪರ್ಯವಾಗಿ ಮನೆತನಕ್ಕೆ ಅನ್ನನೀಡಿದ ತೋಟ ಹಾಗೂ ಮನೆ ಇರುವ ಶಂಕರಯ್ಯನಿಗೆ ಈ ಪಿತ್ರಾರ್ಜಿತ ಸ್ವತ್ತನ್ನು ಬಿಟ್ಟು ಬರುವ ಮನಸ್ಸಿಲ್ಲ.

ಗಂಟೆ ತೋರಿಸುತ್ತಾ ಗೋಡೆಯಲ್ಲಿರುವ ಹಳೆಯ ಗಡಿಯಾರ, ಮೂಲೆಯಲ್ಲಿ ಕುಂಕುಮ ಹಚ್ಚಿದ ತಿಜೋರಿ ಹಾಗೂ ಗೋಡೆ ಕೊರೆದ ಗೂಡಿನಲ್ಲಿ ಗೂಡುಗಟ್ಟಿದ ಮುರಿದ ಸೊಂಡಲಿನ ಗಣಪತಿ ಇರುವ ಶಂಕರಯ್ಯನ ಪುರಾತನ ಮನೆಗೆ ಸಾವಿನ ಮಂಕು ಆವರಿಸಿದೆ ಎಂಬ ಕಲ್ಪನೆಯು ರಂಗನದಾಗಿದೆ. ತೊಟ್ಟಿಲು ತೂಗಲಿಲ್ಲ, ಮಕ್ಕಳು ಅಳಲಿಲ್ಲ, ಹಾಡಿಲ್ಲ, ಹಸೆ ಇಲ್ಲದ ಮನೆಯಲ್ಲಿ ಶಾರದೆಗೆ ಭವಿಷ್ಯವಿಲ್ಲವೆಂಬುದು ರಂಗನ ಲೆಕ್ಕಾಚಾರವಾಗಿದೆ. ಮಾವನ ಶುಶ್ರೂಷೆಗೆಂದು ನಿನ್ನ ಜೀವನ ಮುಡುಪಾಗಿಡಬೇಡ ನಿನ್ನ ಭವಿಷ್ಯದ ಬಗ್ಗೆ ಯೋಚಿಸು ಎನ್ನುತ್ತಾನೆ. ನಿನ್ನ ಅಕ್ಕನ ಸಾವಿಗೆ ಜಿಡ್ಡುಗಟ್ಟಿದ ಸಂಪ್ರದಾಯದ ನಿಯಮಗಳೇ ಕಾರಣವೆನ್ನುತ್ತಾನೆ. ರಂಗನ ಈ ಮಾತುಗಳು ಶಾರದೆಗೆ ವಿಚಿತ್ರವೆನಿಸುತ್ತವೆ.

ರಂಗನ ಪ್ರೀತಿ ಪೇಟೆಯ ಹುಚ್ಚಿನದೆಂದು ಶಂಕರಯ್ಯ ಭಾವಿಸುತ್ತಾನೆ. ಸಂಪ್ರದಾಯಕ್ಕೆ ಅಂಟಿಕೊಂಡ ಶಂಕರಯ್ಯ ರಂಗನಿಗೆ ಬೇಸರವನ್ನುಂಟು ಮಾಡುತ್ತಾನೆ. ಶಾರದೆಯು ಶಂಕರಯ್ಯನ ಋಣದ ಪ್ರಜ್ಞೆಯನ್ನು ಮರೆಯದೆ, ರಂಗನ ಪ್ರೀತಿಯನ್ನು ತಿರಸ್ಕರಿಸದೆ ಸಂಘರ್ಷಕ್ಕೊಳಗಾಗುತ್ತಾಳೆ. ವೃದ್ಧಾಪ್ಯ ಹಾಗೂ ಯೌವನದ ನಡುವಿನ ಸಂಬಂಧದ ಕುರಿತ ವಿಚಾರಗಳ ಮೂಲಕ ಭೂತ ಹಾಗೂ ವರ್ತಮಾನದ ವಿಚಾರವು ವ್ಯಕ್ತಗೊಂಡಿದೆ. ಅಕ್ಕನ ಆತ್ಮಹತ್ಯೆಯ ನಂತರ ಸಂಪ್ರದಾಯವನ್ನು ಮೀರಬಾರದೆಂಬ ಪ್ರಜ್ಞೆಯು ಶಾರದೆಯಲ್ಲಿ ಕಂಡುಬರುತ್ತದೆ. ಶಂಕರಯ್ಯನು ತಾನು ಹುಟ್ಟಿ ಬೆಳೆದ ಪರಿಸರವನ್ನು ಬಿಟ್ಟುಬರಲು ಒಪ್ಪುವುದಿಲ್ಲ. ಶಾರದೆ ಹಾಗೂ ಶಂಕರಯ್ಯನಿಂದ ಋಣಾತ್ಮಕ ಫಲಿತಾಂಶ ಬಂದಾಗ ರಂಗನು ಸಂಘರ್ಷಕ್ಕೊಳಗಾಗುತ್ತಾನೆ.

'ನವಿಲುಗಳು' ಕಥೆಯಲ್ಲಿ ಕಿಟ್ಟಣ್ಣ ವರ್ತಮಾನದ ತನ್ನ ಸ್ಥಿತಿಯನ್ನು ಭೂತಕಾಲದ ನೆರಳಿನಲ್ಲಿ ಹುಡುಕುತ್ತಾನೆ. ಕೆಲಸಕ್ಕೆ ರಾಜೀನಾಮೆ ಕೊಟ್ಟು ಬಂದ ಅಪ್ಪನಿಂದ ಕಿಟ್ಟಣ್ಣನ ಕುಟುಂಬದವರು ಅರ್ಧ ಹೊಟ್ಟೆ ಊಟ ಮಾಡಿ ಬದುಕುತ್ತಾರೆ. ಅಪ್ಪನ ಸ್ವಾತಂತ್ರ್ಯಪ್ರಿಯತೆ ಹಾಗೂ ಹಠಮಾರಿತನದಿಂದ ಸಂಸಾರದ ನಿರ್ವಹಣೆಯು ದುಸ್ತರವಾಗಿರುತ್ತದೆ. ಬದುಕಿನಿಂದ ಬೇಸತ್ತ ಕಿಟ್ಟಣ್ಣ ಮುಂದಿನ ದಿನಗಳಲ್ಲಿ ತಂದೆಯ ಸ್ವಭಾವಕ್ಕೆ ಭಿನ್ನವಾಗಿ ತನ್ನ ಜೀವನವನ್ನು ರೂಪಿಸಿಕೊಳ್ಳುತ್ತಾನೆ. ನಗರದಲ್ಲಿ ಮನೆ ಕಟ್ಟಿಸಿ, ಮಕ್ಕಳನ್ನು ಉತ್ತಮ ಶಾಲೆಗೆ ಸೇರಿಸುತ್ತಾನೆ. ಹೆಂಡತಿಯೊಂದಿಗೆ ಸುಖದ ಜೀವನ ನಡೆಸುತ್ತಿದ್ದ ಕಿಟ್ಟಣ್ಣನಿಗೆ ಬಾಲ್ಯದ ನೆನಪುಗಳು ಕಹಿಯೆನಿಸುತ್ತವೆ. ಕಿಟ್ಟಣ್ಣನು ತಾನು ಬೆಳೆದ ಪರಿಸರದಲ್ಲಿ ಪಡೆದ ಅನುಭವಗಳನ್ನು ಹುಡುಕಲು ಪ್ರಯತ್ನಿಸಿದಾಗ ದ್ವಂದ್ವಂಕ್ಕೊಳಗಾಗುತ್ತಾನೆ.

ಜೀವನದಲ್ಲಿ ಹಣ ಸಂಪಾದನೆಯಿಂದ ಸೌಲಭ್ಯಗಳನ್ನು ಪಡೆದುಕೊಂಡ ಕಿಟ್ಟಣ್ಣನು ವ್ಯವಸ್ಥಿತ ಬದುಕನ್ನು ನಡೆಸುತ್ತಾನೆ. ಗಂಡನ ಸೇವೆ ಮಾಡುತ್ತಾ ಕಾಲ ಕಳೆಯುವ ತನ್ನ ಹೆಂಡತಿಯು ಹುಡುಗಿಯಾಗಿದ್ದಾಗಿನ ಲವಲವಿಕೆಯನ್ನು ಕಳೆದುಕೊಂಡಿದ್ದಾಳೆಂದು ತಿಳಿಯುತ್ತಾನೆ. ಕಷ್ಟವಿದ್ದಾಗಲೂ ಬಾಲ್ಯದಲ್ಲಿ ಉತ್ಸಾಹ ಬೆರಗನ್ನು ಮೈಗೂಡಿಸಿಕೊಂಡಿರುತ್ತಾನೆ. ವರ್ತಮಾನದಲ್ಲಿ ಸಕಲ ಸೌಕರ್ಯಗಳಿದ್ದರೂ ನಿರಾಸಕ್ತನಾಗಿರುತ್ತಾನೆ.

ಊಟವಾದ ಮೇಲೆ ಹಲಸೂರಿನ ಜಾನಕಮ್ಮನ ಮನೆಯ ಬಚ್ಚಲಲ್ಲಿ ಅಪ್ಪ ಸ್ನಾನ ಮಾಡುತ್ತಿದ್ದ ಹಿನ್ನೆಲೆಯು ಬಾಲ್ಯದಲ್ಲಿ ಕಿಟ್ಟಣ್ಣನಿಗೆ ತಿಳಿಯುತ್ತಿರಲಿಲ್ಲ. ಅಪ್ಪಯ್ಯನ ಅಂದಿನ ಜೀವನಕ್ರಮ ಸರಿಯಾದುದಲ್ಲವೆಂದು ತಿಳಿಯುತ್ತಾನೆ. ಕಿಟ್ಟಣ್ಣ ಹೆಂಡತಿ ಎದುರು ತನ್ನ ಮನೆತನದ ದುರ್ಬಲ ವಿಚಾರಗಳನ್ನು ಗುಟ್ಟಾಗಿಡಲು ಪ್ರಯತ್ನಿಸುತ್ತಾನೆ. ತಂದೆಯ ಸ್ವಭಾವಕ್ಕೆ ಭಿನ್ನವಾಗಿ ಜೀವನ ನಡೆಸುವ ಕಿಟ್ಟಣ್ಣ ಹೆಂಡತಿಯ ಮುಂದೆ ತಂದೆಯನ್ನು ಸ್ವಾಭಿಮಾನಿ ಎಂದು ಹೊಗಳುತ್ತಾನೆ. "ಬಾಲ್ಯದ ತನ್ನ ಅನುಭವಗಳಿಗೂ ಈಗಿನ ಪ್ರೌಢ ಅನುಭವಗಳಿಗೂ ಇರುವ ವ್ಯತ್ಯಾಸವನ್ನು ಕಾಣುತ್ತಾನೆ. ಜೊತೆಗೆ ಪರಿಸರದ ಬೆಳವಣಿಗೆಯಲ್ಲಿನ ನಿಷ್ಠುರ ಸತ್ಯಗಳ ಹಿಂದೆಯೇ ನವಿಲು ಕಲ್ಲಿನ ಗುಡ್ಡದಲ್ಲಿ ಜಾಗರವಾಡುವ ನವಿಲುಗಳು ಮಾತ್ರ ಎಂದೆಂದಿಗೂ ಹಿಂದಿನ ವೈವಿಧ್ಯತೆಯನ್ನು ಉಳಿಸಿಕೊಂಡು ಬಂದಿರುವುದು ಕಿಟ್ಟಣ್ಣನ ಮಾನಸಿಕ ಬೆಳವಣಿಗೆಯ ಮೇಲೆ ಬೆಳಕು ಚೆಲ್ಲುತ್ತದೆ." [೪] ಬಾಲ್ಯದ ಅನುಭವಗಳನ್ನು ವರ್ತಮಾನದಲ್ಲಿ ಹುಡುಕಲು ಕಿಟ್ಟಣ್ಣ ತನ್ನ ಹಳ್ಳಿಗೆ ಬರುತ್ತಾನೆ. ನವಿಲುಗಳು ಮೊದಲಿನಂತೆಯೇ ಕುಣಿದಾಡುತ್ತವೆ. ಆದರೆ ವೀಕ್ಷಿಸುವ ತನ್ಮಯತೆ ಮಾತ್ರ ಅವನಿಗೆ ಸಾಧ್ಯವಾಗುವುದಿಲ್ಲ.

ಬಾಲ್ಯದಲ್ಲಿ ತದೇಕ ಚಿತ್ತನಾಗಿ ನವಿಲುಗಳನ್ನು ನೋಡುತ್ತಿದ್ದುದು ನಿಜವೇ ಎಂದು ರಾಜಣ್ಣ ಸಂದೇಹಕ್ಕೊಳಗಾಗುತ್ತಾನೆ. ಸಂದಿಗ್ಧ ಕಾಲದಲ್ಲೂ ತಂದೆ ಹಾಗೂ ಜಾನಕಮ್ಮ ಸಮಾಧಾನದಿಂದಿರುತ್ತಾರೆ. ಈ ಸಾಧ್ಯತೆಯು ಕಿಟ್ಟಣ್ಣನಿಗೆ ಅಸಾಧ್ಯವೆನಿಸಿರುವುದು ಭೂತ ಹಾಗೂ ವರ್ತಮಾನದ ನಡುವಿನ ಭಿನ್ನತೆಯನ್ನು ತಿಳಿಸುತ್ತದೆ. ಕಿಟ್ಟಣ್ಣನ ಪ್ರಜ್ಞೆಯಲ್ಲಿನ ವಿಚಾರಗಳಿಗೆ ಪರಿಸರದಲ್ಲಿ ಹೊಂದಾಣಿಕೆಯಾಗದಿದ್ದಾಗ ಸಂದಿಗ್ಧಕ್ಕೊಳಗಾಗುತ್ತಾನೆ.

ಭೂತಕಾಲ ಹಾಗೂ ಭವಿಷ್ಯದ ಆಗು ಹೋಗುಗಳನ್ನು ವರ್ತಮಾನದಲ್ಲಿ ಹೇಳುವ ಕಥೆ ಕಾರ್ತೀಕ . ಇದರಲ್ಲಿ ಹಳೆಯ ಘಟನೆಗಳ ನೆನಪು ಮತ್ತು ಇಂದಿನ ಜೀವನದ ನಡುವೆ ತಾಕಲಾಟವೇರ್ಪಡುತ್ತದೆ. ರಾಘವನಿಗೆ ತಾನು ಹಿಂದೆ ಜೀವಿಸಿದ್ದ ರೀತಿಗೂ ಬದುಕು ನಡೆಸುತ್ತಿರುವ ರೀತಿಗೂ ತಾಳೆ ನೋಡುವ ಅಭ್ಯಾಸವಿರುತ್ತದೆ. ಈ ಎರಡರ ಅನುಭವದಿಂದ ರಾಘವನು ಮಾನಸಿಕ ನೆಮ್ಮದಿಯನ್ನು ಕಳೆದುಕೊಳ್ಳುತ್ತಾನೆ.

ಒಬ್ಬನೇ ಅಣ್ಣನನ್ನು ಸುಳಿಗೆಟ್ಟ ಹೆಣ್ಣಿನ ಜೊತೆ ಮದುವೆ ಮಾಡಿಸಿದನೆಂದು ರಾಗಜ್ಜನ ಮೇಲೆ ರಾಘವನ ತಾಯಿಗೆ ಕೋಪವಿದೆ. ತನ್ನಂತೆ ರಾಘವ ಕೂಡ ತಾತ – ಅಜ್ಜಿಯ ಜೊತೆ ಸಲಿಗೆಯಿಂದ ಇರಬಾರದೆಂಬುದು ಅವಳ ನಿರೀಕ್ಷೆಯಾಗಿದೆ. ರಾಘವನಿಗೆ ಪ್ರೀತಿಯಿಂದ ನೋಡಿಕೊಳ್ಳುವ ಅಜ್ಜ–ಅಜ್ಜಿಯೂ ಬೇಕು, ತಾಯಿಯ ಅಕ್ಕರೆಯೂ ಬೇಕು. ತನ್ನ ಬಗೆಗೆ ತಾತ–ಅಜ್ಜಿ ಮಾತನಾಡುವುದನ್ನು ತಿಳಿಸಬೇಕೆಂದು ರಾಘವನನ್ನು ಅವನ ತಾಯಿ ಕೇಳುತ್ತಾಳೆ. ಕಛೇರಿ ವಸೂಲಿ ಎಂದು ತಿರುಗಾಡುವ ರಾಘವನ ತಂದೆ ಸಂಸಾರದ ರಗಳೆಯನ್ನು ತಲೆಗೆ ಹಾಕಿಕೊಳ್ಳುವುದಿಲ್ಲ. ಸೊಸೆ ತಮಗೆ ಗೌರವ ಕೊಡಬೇಕೆಂದು ತಾತ–ಅಜ್ಜಿ ಬಯಸುತ್ತಾರೆ. ತನ್ನ ಅಣ್ಣನ ಸಾವಿಗೆ ಕಾರಣರಾದ ಅತ್ತೆ–ಮಾವನನ್ನು ಮುನಿಸಿನಿಂದ ಕಾಣುವುದು ಸಹಜವೆಂದು ತಾಯಿ ತಿಳಿದಿದ್ದಾಳೆ. ದಿನವೂ ರಾಘವನ ಮನೆಯಲ್ಲಿ ತಾಯಿ ಮತ್ತು ಅಜ್ಜ–ಅಜ್ಜಿಯ ನಡುವೆ ಜಗಳವಿರುತ್ತದೆ. ಕುಟುಂಬದ ವಿಭಿನ್ನ ಆಲೋಚನೆಗಳು ರಾಘವನ ಮಾನಸಿಕ ನೆಮ್ಮದಿಯನ್ನು ಹಾಳು ಮಾಡುತ್ತವೆ.

[illegible]

[illegible]

[illegible]

[illegible]

[illegible]

ದೀಪಾವಳಿಯ ಹಿಂದಿನ ರಾತ್ರಿಯ ಘಟನೆ ರಾಘವನಿಗೆ ಇನ್ನಷ್ಟು ಆತಂಕವನ್ನು ತಂದಿರುತ್ತದೆ. ಬಣ್ಣದ ಸೌತೆಕಾಯಿಯನ್ನು ಇಷ್ಟಪಡುವ ರಾಘವನು ಅಜ್ಜನ ಊಟದ ಎಲೆಯಿಂದ ಸೌತೆಕಾಯಿ ಹೋಳನ್ನು ಹಾಕಿಸಿಕೊಳ್ಳುತ್ತಾನೆ. ಯಾರ್ಯಾರದೋ ಎಂಜಲನ್ನು ತಿನ್ನಬೇಡವೆಂದು ತಾಯಿ ರಾಘವನಿಗೆ ಹೇಳಿದಾಗ ಅಜ್ಜ-ಅಜ್ಜಿ ಬೇಸರಪಡುತ್ತಾರೆ. ಜಗಳವು ವಿಕೋಪಕ್ಕೆ ಹೋದಾಗ ರಾಘವನ ತಾಯಿ ಬಾವಿಗೆ ಬೀಳಲು ಹೋಗಿ ವಾಪಸಾಗಿರುತ್ತಾಳೆ. ಮರುದಿನ ಎಲ್ಲವೂ ಸಾಮಾನ್ಯವೆಂಬಂತೆ ನಡೆದುಕೊಳ್ಳುವ ಮೂವರ ವರ್ತನೆಯನ್ನು ಕಂಡ ರಾಘವ ದ್ವಂದ್ವಕ್ಕೊಳಗಾಗುತ್ತಾನೆ.

ನೆಮ್ಮದಿ ಸಿಗದ ರಾಗಜ್ಜ ಮನೆ ಬಿಟ್ಟು ಹೋಗಿ ಅನಾಥನಾಗಿ ಸಾಯುತ್ತಾನೆ. ಹಿರಿಯರ ನಡುವಿನ ಮನಸ್ತಾಪದಿಂದ ಬೇಸತ್ತಿದ್ದ ರಾಘವನು ತಂದೆ-ತಾಯಿಯ ಒಪ್ಪಿಗೆಯನ್ನು ಪರಿಗಣಿಸದೆ ಛಾಯಳನ್ನು ಮದುವೆಯಾಗುತ್ತಾನೆ. ಮಗನ ಚಿಂತೆಯಲ್ಲಿ ಅವನ ತಾಯಿ ಸಾಯುತ್ತಾಳೆ. ಹೆಂಡತಿಯನ್ನು ಕಳೆದುಕೊಂಡ ರಾಘವನ ತಂದೆ ಒಬ್ಬೊಂಟಿಯಾಗಿ ಜೀವಿಸುತ್ತಿದ್ದನು. ರಾಘವ ಛಾಯಾಳೊಂದಿಗೆ ಸುಖವಾದ ಜೀವನ ನಡೆಸುತ್ತಿದ್ದರೂ ಹಳೆಯ ನೆನಪುಗಳಿಂದ ಮುಕ್ತನಾಗುವುದಿಲ್ಲ.

ತಾತ-ಅಜ್ಜಿಯನ್ನು ಪ್ರೀತಿಯಿಂದ ಕಾಣದ ತಾಯಿಯ ಮನೋಭಾವವನ್ನು ಇಷ್ಟಪಡದ ರಾಘವನಿಗೆ ತಾನು ಹೆತ್ತವರನ್ನು ಹೇಳದೇ ಕೇಳದೆ ಮದುವೆಯಾದೆನಲ್ಲಾ ಎಂದು ಬೇಸರ ಪಡುತ್ತಾನೆ. "ರಾಗಜ್ಜನೂ ರಾಘವನ ತಾಯಿಯೂ ಪ್ರೀತಿಯ ಹೆಸರಿನಲ್ಲಿ ರಾಘವನ ಮೇಲೆ ಭೂತ ಕಾಲದ ಯಾತನೆಯ ಭಾರವನ್ನು ಸ್ಪರ್ಧೆಯೆಂಬಂತೆ ಹೇರಿಹೋಗುತ್ತಾರೆ." ಭೂತದಿಂದ ಬಿಡಿಸಿಕೊಳ್ಳದೆ ವರ್ತಮಾನಕ್ಕೂ ಹೊಂದಿಕೊಳ್ಳದೆ ರಾಘವನು ತೊಳಲಾಡುತ್ತಾನೆ.[೫]

"ಪಿತೃ ಜಿಗಣೆಗಳು ಭೂತಗಳು
ಅಂದು ತೊಳೆಸಿ ಬೆಳೆಸಿದ ಅಪ್ಪ ಅಮ್ಮನ ಪ್ರೀತಿ
ಒಳಗಿನಿಂದ ಛಾಯಾಳ ಒತ್ತಾಯದ ಕರೆ-
ಹೊತ್ತಾಗುತ್ತದೆ ಮಲಗಿಕೊಳ್ಳಿ ಬನ್ನಿ" ಎಂಬ ಪದ್ಯವು ಔಚಿತ್ಯಪೂರ್ಣವಾಗಿದೆ.

ಭೂತಕಾಲದ ವಿಚಾರಗಳಿಂದ ತಪ್ಪಿಸಿಕೊಂಡು ವರ್ತಮಾನದಲ್ಲಿ ನೆಲೆ ಕಾಣುವ ಹಂಬಲವಿರುವ ರಾಘವನಿಗೆ ಅದು ಸಾಧ್ಯವಾಗುವುದಿಲ್ಲ. ಹಳೆಯ ನೆನಪುಗಳ ಭಾರದಿಂದ ಅವನ ಆಲೋಚನೆಗಳು ಸೋಲುತ್ತವೆ. ತಂದೆ-ತಾಯಿ ಮತ್ತು ಅಜ್ಜ-ಅಜ್ಜಿ ಇವರ ನಡುವೆ ಮನಸ್ತಾಪ ಉಂಟಾದರೂ ವಿಚಲಿತರಾಗುವುದಿಲ್ಲ. ರಾಘವನ ಹೆಂಡತಿಗೂ ವರ್ತಮಾನದ ಬದುಕು ನೈಜವೆಂದು ತೋರುತ್ತದೆ. ರಾಘವನ ವಿಚಾರಧಾರೆಗಳು ಇವರೆಲ್ಲರಿಗಿಂತ ಭಿನ್ನವಾಗಿದೆ. ರಾಘವನ ಆಲೋಚನೆಗಳಲ್ಲಿನ ಭಿನ್ನತೆಯು ಸಂಘರ್ಷವನ್ನು ಸೃಷ್ಟಿ ಮಾಡುತ್ತದೆ.

ಸ್ವಾತಂತ್ರ್ಯ ಮೀರುವಿಕೆ ಇದರ ಅಪೂರ್ವ ಆತ್ಮಪ್ರಜ್ಞೆ, ಕಾಲ ಕುರಿತ ಸಮಕಾಲೀನ ಕಲ್ಪನೆ ಭೂತ ವರ್ತಮಾನಗಳನ್ನು ಒಂದೇ ಕ್ಷಣದಲ್ಲಿ ಒಳಗೊಳ್ಳಬಲ್ಲ ಹಾಗೂ ಒಮ್ಮೆಲೇ ಹಲವಾರು ಸ್ತರಗಳಲ್ಲಿ ಕ್ರಿಯಾಶೀಲವಾಗಬಲ್ಲ ಹೊಸರಚನೆಯ ಶೋಧ ಅನಿವಾರ್ಯವಾಗಿದೆ.

[illegible]

[illegible]

[illegible]

[illegible]

[illegible]

[illegible]

[illegible]

'ಸಂಯೋಗ' ಕತೆಯಲ್ಲಿ ವೆಂಕಟಕೃಷ್ಣರಾವ್‌ನನ್ನು ಕಥೆಗಾರ ಸಂಧಿಸುತ್ತಾನೆ. ಕೆಲವು ದಿನಗಳ ಹಿಂದೆ ಪರಿಚಿತನಾದ ಅವನನ್ನು ವೆಂಕಟಕೃಷ್ಣರಾವ್ ಮನೆಗೆ ಕರೆಯುತ್ತಾನೆ. ಪ್ರಮೋಷನ್‌ಗಾಗಿ ಪರದಾಡಿದ ಸ್ಥಿತಿಯನ್ನು ಹಾಗೂ ಮಗನ ಸಾವಿನಿಂದಾದ ದುಃಖವನ್ನು ವೆಂಕಟಕೃಷ್ಣರಾವ್ ತೋಡಿಕೊಳ್ಳುತ್ತಾನೆ. ಬದುಕಿನಲ್ಲಿ ಸಂಭವಿಸಿದ್ದ ವಿಚಾರಗಳನ್ನು ಕಥೆಗಾರನಿಗೆ ಹೇಳುತ್ತಾನೆ.

ಮಧ್ಯಮ ವರ್ಗದ ಪ್ರತಿನಿಧಿಯಾದ ವೆಂಕಟಕೃಷ್ಣರಾವ್ ಜೀವನದಿಂದ ಬೇಸತ್ತಿದ್ದನು. ಪ್ರೊಮೋಷನ್ ಪರದಾಟ ಮತ್ತು ಮಗನ ಸಾವು ಅವನನ್ನು ಧೃತಿಗೆಡಿಸಿದ್ದವು. ಜೀವನೋಪಾಯಕ್ಕೆ ಪ್ರೊಮೋಷನ್ ಮುಖ್ಯವಾಗಿರುವಂತೆ ಮುಂದಿನ ಸಮರ್ಥ ಜೀವನ ಸಾಗಿಸಲು ಮಗ ಮುಖ್ಯನಾಗಿದ್ದನೆಂದು ಚಿಂತಿಸುತ್ತಾನೆ. ಆತ್ಮಸ್ಥೈರ್ಯ ಕುಗ್ಗುತ್ತದೆಂದು ಸುತ್ತಲಿನ ಯಾರಿಗೂ ತನ್ನ ಅಂತರಾಳದ ನೋವನ್ನು ಹೇಳಿಕೊಂಡಿರುವುದಿಲ್ಲ.

ಮುಂದೊಂದು ದಿನ ತಾನು ಕಥೆಯೊಂದರ ಪಾತ್ರವಾಗಬಹುದೆಂಬ ಉದ್ದೇಶದಿಂದ ತನ್ನೆಲ್ಲಾ ಅನಿಸಿಕೆಗಳನ್ನು ಸೃಜನಶೀಲ ಕಥೆಗಾರನ ಮುಂದೆ ವೆಂಕಟಕೃಷ್ಣರಾವ್ ಹೇಳಿಕೊಳ್ಳುತ್ತಾನೆ. ಹೀಗೆ ವೆಂಕಟಕೃಷ್ಣರಾವನು ಭವಿಷ್ಯದ ಬದುಕಿನ ಹಂಬಲದೊಂದಿಗೆ ಭೂತಕಾಲದ ಘಟನೆಗಳನ್ನು ವರ್ತಮಾನದಲ್ಲಿ ಹೇಳಿಕೊಳ್ಳುವುದರೊಂದಿಗೆ ಕಥೆ ಕೊನೆಗೊಳ್ಳುತ್ತದೆ. ಈ ಕತೆಯು ಮಧ್ಯಮ ವರ್ಗದ ಜನರ ಬದುಕು ಹಾಗೂ ಅದನ್ನು ಎದುರಿಸುವಾಗಿನ ಗೊಂದಲವನ್ನು ಧ್ವನಿಸುತ್ತದೆ. ಜೀವನದಲ್ಲಿ ಸಮಸ್ಯೆಗಳ ಸುಳಿಗೆ ಸಿಲುಕಿದ ವೆಂಕಟಕೃಷ್ಣರಾವ್ ಸುತ್ತಲಿನ ಪರಿಸರದ ಜನತೆಯಿಂದ ದೂರವಿರುವ ಕಾರಣ ಮಾನಸಿಕವಾಗಿ ಸಂಘರ್ಷಕ್ಕೊಳಗಾಗುತ್ತಾನೆ.

'ಅಪೂರ್ವ' ಕತೆಯಲ್ಲಿ ಮಧ್ಯಮವರ್ಗದ ವಿದ್ಯಾವಂತ ಜನರು ಎದುರಿಸುವ ಸಮಸ್ಯೆಗಳ ನಡುವಿನ ತಾಕಲಾಟವನ್ನು ಕಾಣಬಹುದು. ಹೆಂಡತಿಯು ಗಂಡನ ಮಾತಿನಿಂದ ಬೇಸರವಾಗಿ ಸಾಯಲು ನಿರ್ಧರಿಸುತ್ತಾಳೆ. ಹೆಂಡತಿಯನ್ನು ಬೈದ ಮೇಲೆ ಅವಳು ಸಾಯಬಹುದೆಂದು ಹೆದರಿದ ಗಂಡನು ಮನೆಯನ್ನು ಬಿಟ್ಟು ಬರುತ್ತಾನೆ. ಈ ಇಬ್ಬರು ಅಪರಿಚಿತರು ಸಾವನ್ನು ಸಮೀಪದಿಂದ ಎದುರಿಸುವಾಗ ಬಾಳಿನ ನೆನಪುಗಳು ಮರುಕಳಿಸುತ್ತವೆ. ಪರಸ್ಪರರು ಬದುಕಲು ಆಗದೆ ಸಾಯಲು ಆಗದೆ ದ್ವಂದ್ವಕ್ಕೊಳಗಾದರೂ ವರ್ತಮಾನವೇ ಪ್ರಸ್ತುತವೆಂದೆನಿಸಿ ವಾಪಸ್ಸಾಗುತ್ತಾರೆ.

ಸಾಯಲೇಬೇಕೆಂದು ನಿರ್ಧರಿಸಿ ಬಂದ ಹೆಣ್ಣು ಕೊನೆಯ ಕ್ಷಣದ ಆತಂಕದಲ್ಲಿಯೂ ಬದುಕಿನ ಬಗ್ಗೆ ಭರವಸೆ ಹೊಂದುತ್ತಾಳೆ. ಮನೆ ತೊರೆದುಬಂದ ಗಂಡು ಮತ್ತೆ ಜೀವನ ನಡೆಸಲು ಸಿದ್ಧನಾಗುತ್ತಾನೆ. ಬದುಕಿನಿಂದ ಬೇಸತ್ತು ಬಂದ ಇವರಿಬ್ಬರೂ ಭವಿಷ್ಯ ಜೀವನದ ಬಗ್ಗೆ ಆತ್ಮ ವಿಶ್ವಾಸವನ್ನು ಹೊಂದುತ್ತಾರೆ. ಸಂಸಾರದಲ್ಲಿ ಸ್ವಾತಂತ್ರ್ಯ ಬೇಕೆಂದು ಬಯಸುವ ಹೆಣ್ಣು ಮತ್ತು ಹೆಂಡತಿಯ ಸ್ವಾಂತತ್ರ್ಯವನ್ನು ಸಹಿಸದ ಗಂಡು ಹೀಗೆ ಪರಸ್ಪರರಲ್ಲಿನ ಹೊಂದಾಣಿಕೆಯ ಕೊರತೆಯು ಸಂಘರ್ಷವನ್ನುಂಟು ಮಾಡಿರುತ್ತದೆ.

ಲೇಖಕರು ಭೂತ, ಭವಿಷ್ಯಗಳ ನಡುವಿನ ಸ್ಥಿತಿಯನ್ನು ಹಾಗೂ ಅದರಿಂದ ಉಂಟಾಗುವ ತಾಕಲಾಟವನ್ನು ಚಿತ್ರಿಸಿದ್ದಾರೆ. ಭೂತ ಭವಿಷ್ಯದ ನಡುವೆ ವರ್ತಮಾನವು ಕೊಂಡಿಯಾಗಿದೆ. ಭವಿಷ್ಯದ ಭರವಸೆಯೊಂದಿಗೆ ಕತೆ ಕೊನೆಗೊಂಡಿದೆ. ಹೀಗೆ ವರ್ತಮಾನದ ಅನೇಕ ಸಂಗತಿಗಳು ನಡೆಯುವುದು ಭೂತದ ನೆಲೆಗಟ್ಟಿನ ಮೇಲೆ.

ಭೂತದ ಎಲ್ಲಾ ವ್ಯವಹಾರಗಳು ಹಾಗೂ ಸಾಂಸ್ಕೃತಿಕ ವಿಚಾರಗಳು ವರ್ತಮಾನದಲ್ಲಿ ಪ್ರತಿಫಲಗೊಳ್ಳುತ್ತಿರುತ್ತವೆ. ಈ ಕಾರಣಕ್ಕಾಗಿ ಏರ್ಪಡುವ ಸಂಘರ್ಷಗಳು ವರ್ತಮಾನದ ಪರಿಸರದಲ್ಲಿ ನಿರ್ದಿಷ್ಟವಾದ ಬದುಕಿನ ಆವಿಷ್ಕಾರದಲ್ಲಿ ಅಥವಾ ವಿಚಾರದಲ್ಲಿ ಕೊನೆಗೊಳ್ಳುತ್ತದೆ. ಕೆಲವೊಮ್ಮೆ ಸಮನ್ವಯ ಸಾಧಿಸದೆ ಗೊಂದಲದಲ್ಲಿಯೇ ಕೊನೆಯಾಗುವುದು ಇದೆ. ಇದನ್ನು ಕತೆಗಾರರು ಅರ್ಥಪೂರ್ಣವಾಗಿ ಶೋಧಿಸಿದ್ದಾರೆ.

'ಸಂಸ್ಕಾರ'ಕಾದಂಬರಿಯಲ್ಲಿ ನಾರಣಪ್ಪ ಅಗ್ರಹಾರದ ಬ್ರಾಹ್ಮಣರಿಗೆ ಹಾಗೂ ಪ್ರಾಣೇಶಾಚಾರ್ಯನಿಗೆ ಸವಾಲಾಗಿರುತ್ತಾನೆ. ಆಕಸ್ಮಿಕವಾಗಿ ಸಂಭವಿಸುವ ಅವನ ಸಾವು ಸಂದಿಗ್ಧ ಪರಿಸ್ಥಿತಿಯನ್ನುನಿರ್ಮಾಣ ಮಾಡಿದೆ. ನಾರಣಪ್ಪನ ಸಂಸ್ಕಾರವನ್ನು ಮಾಡುವ ಬಗೆಗೆ ಧರ್ಮಗ್ರಂಥಗಳನ್ನು ಹುಡುಕಿ ಕೊನೆಗೆ ಪರಿಹಾರಕ್ಕಾಗಿ ಮಾರುತಿಯನ್ನು ಆಶ್ರಯಿಸುತ್ತಾನೆ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ನಾರಣಪ್ಪನು ಬದುಕಿದ್ದಾಗ ಅವನು ಅನುಸರಿಸಿದ ಜೀವನಕ್ರಮವನ್ನು ಅಗ್ರಹಾರದವರು ನೆನೆಸಿಕೊಂಡು ವರ್ತಮಾನದಲ್ಲಿ ಹಳಿಯುತ್ತಾರೆ.

ನಾರಣಪ್ಪನು ಬದುಕಿದ್ದಾಗ ಅವನಿಗೆ ಹೆದರಿ ಹಿಂದೆ ಮುಂದೆ ಆಡಿಕೊಳ್ಳುತ್ತಿದ್ದ ಜನರಿಗೆ ಅವನ ಸಾವು ಸಮಾಧಾನ ತಂದಿತ್ತು. ಬ್ರಾಹ್ಮಣ್ಯವನ್ನು ಮೀರಿದ್ದ ಅವನ ಸಂಸ್ಕಾರ ಮಾಡುವುದು ಸಮಸ್ಯೆಯಾಗಿ ಕಾಡುತ್ತದೆ. ಮಾಡಿಕೊಂಡ ಹೆಂಡತಿಯನ್ನು ಬಿಟ್ಟು ಕೀಳು ಜಾತಿಯವಳೊಡನಿದ್ದ ನಾರಣಪ್ಪ ಮದ್ಯ-ಮಾಂಸವನ್ನು ಸೇವಿಸುತ್ತಿದ್ದ. ದೇವಸ್ಥಾನದ ಮೀನುಗಳನ್ನು ತುರುಕರಿಂದ ಹಿಡಿಸಿ ತಂದಿದ್ದ. ಸಂಬಂಧಿಕರ ಅಂಗಳಕ್ಕೆ ತುರುಕರನ್ನು ಕರೆತಂದು ಮಾಂಸವನ್ನು ಅಲ್ಲೇ ಅವರೊಡನೆ ತಿನ್ನುತ್ತಿದ್ದ. ಮನೆಯಲ್ಲಿನ ಸಾಲಿಗ್ರಾಮವನ್ನು ತೆಗೆದುಕೊಂಡು ಹೋಗಿ ನೀರಿಗೆ ಹಾಕಿ ಅದರ ಪವಿತ್ರತೆಯನ್ನು ಕಳೆದಿದ್ದ. ಅವನ ನಡವಳಿಕೆಯನ್ನು ಪ್ರಶ್ನಿಸಿದವರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದ. ಅವನು ಜೀವಿಸಿದಷ್ಟು ಕಾಲ ಅವನಿಗೆ ಹೆದರಿಕೊಂಡು ಅಗ್ರಹಾರದ ಜನ ಬದುಕಬೇಕಾಗಿತ್ತು. ಅವನಿಂದಾಗಿ ಕೆಲವು ಬ್ರಾಹ್ಮಣರ ಬ್ರಾಹ್ಮಣ್ಯಾರ್ಥದ ಕರೆ ನಿಂತಿತ್ತು. ನಾರಣಪ್ಪನ ಕಾರಣದಿಂದ ಕೋರ್ಟು ಕಛೇರಿ ಹತ್ತಿದ್ದ ಗರುಡಾಚಾರ್ಯನಿಗೆ ಮಗ ಶ್ಯಾಮನ ತಲೆಕೆಡಿಸಿ ಅವನು ಮಿಲ್ಟ್ರಿ ಸೇರುವಂತೆ ಮಾಡಿದ್ದನೆಂದು ಅವನ ಮೇಲೆ ಕೋಪವಿದೆ. ಶ್ರೀಪತಿಯ ಗಮನವನ್ನು ಯಕ್ಷಗಾನದೆಡೆಗೆ ಸೆಳೆದು ಅವನು ಹೆಂಡತಿಯನ್ನು ಸೇರದಿರಲು ನಾರಣಪ್ಪನೇ ಕಾರಣನಾದನೆಂದು ಅವನನ್ನು ಲಕ್ಷ್ಮಣಾಚಾರ್ಯನು ದೂರುತ್ತಾನೆ.

ಬ್ರಾಹ್ಮಣ ಧರ್ಮವನ್ನು ಜರಿದ ನಾರಣಪ್ಪ ಬ್ರಾಹ್ಮಣ್ಯವನ್ನು ತಾನು ಮೀರಿದ್ದಲ್ಲದೇ ಯಾರ ಮಾತನ್ನು ಲೆಕ್ಕಿಸದೆ ಇತರರನ್ನು ಪ್ರೇರೇಪಿಸುತ್ತಿದ್ದ. ಅಗ್ರಹಾರದ ಬ್ರಾಹ್ಮಣರು ನೀಡುವ ದೂರನ್ನು ಪ್ರಾಣೇಶಾಚಾರ್ಯನು ಸ್ವೀಕರಿಸಿ ನಾರಣಪ್ಪನನ್ನು ಪ್ರಶ್ನಿಸಿದರೆ , ಆಚಾರ್ಯನು ಹೇಳಿದ್ದ ಪುರಾಣದ ಉದಾಹರಣೆಗಳನ್ನು ನೀಡಿ ಅವನನ್ನೇ ಸಂದಿಗ್ಧಕ್ಕೆ ಸಿಲುಕಿಸಿತ್ತಿದ್ದ. ಅವನನ್ನು ಬದಲಾಯಿಸಲು ಹೋದ ಪ್ರಾಣೇಶಾಚಾರ್ಯ ಕೊನೆಗೆ ತಾನೇ ಬದಲಾಗುವ ಸ್ಥಿತಿಗೆ ಬಂದಾಗ ಅವನದು ಸರಿಯೊ ಅಥವ ತನ್ನದು ಸರಿಯೊ ಎಂದು ಪ್ರಾಣೇಶಾಚಾರ್ಯ ಗೊಂದಲಕ್ಕೊಳಗಾಗುತ್ತಾನೆ. ಸಂಸ್ಕಾರದ ವಿಚಾರದಲ್ಲಿ ಉತ್ತರ ಹುಡುಕಲು ಹೋಗಿ ಆಕಸ್ಮಿಕವಾಗಿ ಚಂದ್ರಿಯ ಸಹವಾಸ ಮಾಡುವ ಪ್ರಾಣೇಶಾಚಾರ್ಯ ದ್ವಂದ್ವವನ್ನೆದುರಿಸುತ್ತಾನೆ. ಹೊಸ ಅನುಭವಗಳಿಂದ ಪ್ರಾಣೇಶಾಚಾರ್ಯನಿಗೆ ಭೂತದಲ್ಲಿ ಯಾವುದೇ ಸಾಧ್ಯತೆಗಳಿಲ್ಲ ಎನಿಸುತ್ತದೆ. ಭವಿಷ್ಯ ಅಸ್ಪಷ್ಟವೆನಿಸುತ್ತದೆ. ಸದ್ಯದ ಸ್ಥಿತಿಯಿಂದ ತಪ್ಪಿಸಿಕೊಳ್ಳುವುದರಿಂದ ಭೂತದಿಂದ ಪಾರಾಗಬಹುದೆಂದುಕೊಳ್ಳುತ್ತಾನೆ.

[illegible]

[illegible]

[illegible]

[illegible]

‘ಭಾರತೀಪುರ’ ಕಾದಂಬರಿಯಲ್ಲಿ ಜಗನ್ನಾಥನು ತನ್ನ ಊರಿನಲ್ಲಿ ಬದಲಾವಣೆಯನ್ನು ತರಲು ಬಯಸುತ್ತಾನೆ. ಅಲ್ಲಿನ ವ್ಯವಸ್ಥೆಗೆ ಭೂತದ ಕಾವಲಿದ್ದುದರಿಂದ ವರ್ತಮಾನದಲ್ಲಿ ಅವನು ಮಾಡುವ ಪ್ರಯತ್ನವೆಲ್ಲ ಕನಸಿನಲ್ಲಿ ಕಂಡ ಮರೀಚಿಕೆಯಾಗುತ್ತದೆ. ಜಗನ್ನಾಥನೆಂದುಕೊಂಡಂತೆ ಭಾರತೀಪುರದಲ್ಲಿ ವರ್ಗದ ಅಸಮಾನತೆಯನ್ನು ಅಳಿಸಲಾಗುವುದಿಲ್ಲ. ವರ್ತಮಾನದಲ್ಲಿ ಆಚಾರವಂತ ಬ್ರಾಹ್ಮಣ ಜಮೀನ್ದಾರನ ಮಗನಾದ ಜಗನ್ನಾಥ ಹಾಗೂ ಹರಿಜನರ ದಿನಗೂಲಿ ನೌಕರನ ಮಗನಾದ ಸತ್ಯಪ್ರಕಾಶನು ಡಿ.ಸಿ. ಆಗಿರುವುದರಿಂದ ಒಂದೆಡೆ ಕುಳಿತು ಮಾತನಾಡಬಹುದು. ಭೂತಕಾಲದಲ್ಲಿ ಜಗನ್ನಾಥನ ತಂದೆಯೊಂದಿಗೆ ಸತ್ಯಪ್ರಕಾಶನ ತಂದೆಯ ಸಂಬಂಧವನ್ನು ಹೀಗೆ ಊಹಿಸಿಕೊಳ್ಳುವುದು ಅಸಾಧ್ಯದ ಮಾತಾಗಿತ್ತು. ಭಾರತೀಪುರದ ಜಿಡ್ಡುಗಟ್ಟಿದ ಪರಿಸರದಲ್ಲಿ ಜೀವಿಸುವ ಜನರನ್ನು ತನ್ನ ಆಧುನಿಕ ಪ್ರಜ್ಞೆಯ ವಿಚಾರಗಳಿಂದ ಪರಿವರ್ತಿಸಲು ಪ್ರಯತ್ನಿಸಿದ ಜಗನ್ನಾಥನು ಸಂಘರ್ಷವನ್ನೆದುರಿಸುತ್ತಾನೆ.

‘ಅವಸ್ಥೆ’ ಕಾದಂಬರಿಯಲ್ಲಿ ಕೆಳವರ್ಗದ ಕುಟುಂಬದಲ್ಲಿ ಜನಿಸಿದ ಕೃಷ್ಣಪ್ಪನು ಚಿಕ್ಕ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡಿದ್ದನು. ತಾಯಿಯ ಜೊತೆ ಚಿಕ್ಕಪ್ಪನ ಮನೆಯಲ್ಲಿ ಕೃಷ್ಣಪ್ಪನ ಬಾಲ್ಯ ಕಳೆಯುತ್ತದೆ. ಅಲ್ಲಿ ಅವನನ್ನು ದನಕಾಯುವ ಕೆಲಸಕ್ಕೆ ಹಚ್ಚಿರುತ್ತಾರೆ. ಕಾಡು,ಹೊಳೆ ಹಾಗೂ ಹಕ್ಕಿಗಳು ಅವನ ಒಡನಾಡಿಗಳು ಜಾತಿ ಮತ್ತು ಬಡತನಗಳಿಂದಾಗಿ ಅವಮಾನಕ್ಕೊಳಗಾದಾಗ ಕೃಷ್ಣಪ್ಪನ ರೋಷ ಉಕ್ಕುತ್ತಿತ್ತು. ಊರಿನ ಶಿಕ್ಷಕರೊಬ್ಬರು ಪ್ರೀತಿಯಿಂದ ವಿದ್ಯೆ ಕಲಿಸಿರುತ್ತಾರೆ. ಮಹೇಶ್ವರಯ್ಯನವರ ಸಹಾಯದಿಂದ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಕೃಷ್ಣಪ್ಪನಿಗೆ ಅನುಕೂಲವಾಗುತ್ತದೆ. ವರ್ತಮಾನದಲ್ಲಿ ಅವನು ರಾಜಕೀಯ ವ್ಯಕ್ತಿಯಾಗಿ ಜನಪ್ರಿಯತೆ ಗಳಿಸುತ್ತಾನೆ. ಪ್ರಜ್ಞಾವಂತನಾದ ಕೃಷ್ಣಪ್ಪನು ತನ್ನ ಸಮಕಾಲೀನ ಪರಿಸರದಲ್ಲಿ ಜೀವಿಸುವ ಜನರನ್ನು ಜಾಗೃತರನ್ನಾಗಿ ಮಾಡಲು ಪ್ರಯತ್ನಿಸಿದಾಗ ಗೊಂದಲಕ್ಕೊಳಗಾಗುತ್ತಾನೆ. ಪ್ರತಿಯೊಬ್ಬ ಮನುಷ್ಯನು ಹುಟ್ಟಿನ ಹಿನ್ನೆಲೆಗೂ ಅವನು ಬದುಕಿ ಬಾಳುವ ಜಗತ್ತಿಗೂ ಒಂದು ರೀತಿಯಲ್ಲಿ ತಾಕಲಾಟ ನಡದಿರುತ್ತದೆ.

ಇಲ್ಲಿ ಪ್ರಜ್ಞಾ ಪ್ರವಾಹ ತಂತ್ರದ ನೆನಪು ವಿಧಾನದ ಬಳಕೆಯಾಗಿದೆ. ಕೃಷ್ಣಪ್ಪ ತನಗೆ ಐವತ್ತು ವರ್ಷ ತುಂಬುವ ಮುಂಚೆಯೇ ಸಾಯುವ ಸ್ಥಿತಿಯನ್ನು ತಲುಪಿದ್ದಾನೆ. ಅವನಿಗೆ ಪಾರ್ಶ್ವವಾಯು ತಗುಲಿದ ಅವನು ತನ್ನ ಗತ ಜೀವನದ ಬಾಲ್ಯದ ದಿನಗಳನ್ನು, ಚಳುವಳಿಯನ್ನು ತನ್ನ ರಾಜಕೀಯ ಜೀವನದ ಮುಖ್ಯ ಘಟನೆಗಳನ್ನು ನೆನಪಿಸಿಕೊಳ್ಳುತ್ತಾನೆ. ಇಲ್ಲಿ ವರ್ತಮಾನ, ಭೂತ ಎರಡು ಕಾಲಘಟ್ಟಗಳೂ ಒಂದರೊಳಗೊಂದು ಕೂಡಿಕೊಂಡು ಸಾಗುತ್ತವೆ. ಕೃಷ್ಣಪ್ಪ ತನ್ನ ಗತಜೀವನದ ವೃತ್ತಾಂತವನ್ನು ಯುವಜನ ಸಭೆಯ ಕಾರ್ಯದರ್ಶಿ ನಾಗೇಶನ ಮುಂದೆ ಹೇಳುತ್ತಿದ್ದು ಅದನ್ನು ಪುಸ್ತಕರೂಪದಲ್ಲಿ ಹೊರತರುವ ಉದ್ದೇಶದಿಂದ ಅವನು ಬರೆದುಕೊಳ್ಳುವುದನ್ನು ಕಾಣಬಹುದು. ನಾಗೇಶನೊಂದಿಗೆ ನಡೆಸಿದ ಸಂಭಾಷಣೆ, ಕೃಷ್ಣಪ್ಪನ ತಾಯಿಯ ಆಗಮನ, ದಿಲ್ಲಿಯಿಂದ ತನ್ನ ಗೆಳತಿ ಗೌರಿದೇಶಪಾಂಡೆಯ ಆಗಮನ, ಫಾರ್ಮಹೌಸಿಗೆ ಕೃಷ್ಣಪ್ಪನ ಸ್ಥಳಾಂತರ, ಗೌರಿದೇಶಪಾಂಡೆ ಮಾಡುವ ಶುಶ್ರೂಷೆಯಿಂದ ಅವನ ಆರೋಗ್ಯದಲ್ಲಿ ಆದ ಅಲ್ಪ ಸುಧಾರಣೆ, ಮುಖ್ಯಮಂತ್ರಿ ಪದವಿಯ ನಿರಾಕರಣೆ ಮುಂತಾದ ವಿಷಯಗಳು ವರ್ತಮಾನ ಕಾಲವಾದರೆ, ಉಳಿದದ್ದೆಲ್ಲ ಭೂತ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಕೃಷ್ಣಪ್ಪನ ಗತಕಾಲದ ಮುಖ್ಯ ಘಟನೆಗಳು ಹುಡುಗಾಟಿಕೆಯಲ್ಲಿ ನದಿಯನ್ನು ಈಜಿದ್ದು, ಒಂದು ಸಣ್ಣ ಹಳ್ಳಿಯಲ್ಲಿ ಹುಟ್ಟಿ ರೈತರ ನಾಯಕನಾಗಿ ದೇಶದ ಮಟ್ಟದಲ್ಲಿ ಕ್ರಾಂತಿಕಾರಿಯಾಗಿ ಗುರುತಿಸಿಕೊಂಡಿದ್ದು, ತನ್ನ ವೈವಾಹಿಕ ಜೀವನದ ಅತೃಪ್ತಿ, ಹೆಂಡತಿಯನ್ನು ಪ್ರೀತಿಸದಿರುವುದು ಮುಂತಾದವು ಅವನ ನೆನಪಿನಲ್ಲಿ ಚೆನ್ನಾಗಿ ತೇಲಿ ಬರುತ್ತವೆ. ಕಾದಂಬರಿಯ ಪ್ರಾರಂಭದಲ್ಲಿ ಕೃಷ್ಣಪ್ಪನ ಮನಸ್ಥಿತಿಯನ್ನು ಸೂಕ್ಷ್ಮವಾಗಿ ಚಿತ್ರಿಸಲಾಗಿದೆ.

[illegible]

[illegible]

[illegible]

ಇನ್ನೂ ಐವತ್ತು ತುಂಬುವುದಕ್ಕೆ ಮುಂಚೆಯೇ ಅವನು ಸಾಯುತ್ತಾ ಮಲಗಿದ್ದಾನೆ. ಸಾವಿನ ಜೊತೆ ಹೋರಾಡುತ್ತಾ ಅವನು ನೆನಪುಮಾಡಿಕೊಂಡು ಹೇಳುವ ಕೆಲವು ಘಟನೆಗಳಿಂದ ಅವನ ಮನಸ್ಥಿತಿಯನ್ನು ಊಹಿಸಬಹುದು. ಚಿಕ್ಕಂದಿನಲ್ಲಿ ಕೃಷ್ಣಪ್ಪನು ಈಜಿನಲ್ಲಿ ನಿಪುಣನಾಗಿದ್ದಾನೆ. ನದಿ ತುಂಬಿ ಹರಿಯುತ್ತಿದ್ದಾಗ ಒಂದು ದಂಡೆಯಿಂದ ಧುಮುಕಿ ಇನ್ನೊಂದು ದಂಡೆ ಸೇರುತ್ತಿರುತ್ತಾನೆ. ಕೃಷ್ಣಪ್ಪನು ಒಮ್ಮೆ ಈಜುತ್ತಿದ್ದಾಗ ಅರ್ಧ ಹೊಳೆ ದಾಟಿದ ಮೇಲೆ ಕೈ ಸೋತು ಮುಳುಗುತ್ತಾನೆ. ಅವನ ಗೆಳೆಯ ಹನುಮನಾಯಕ ಸಾಹಸ ಮಾಡಿ ಕೃಷ್ಣಪ್ಪನನ್ನು ಉಳಿಸಿರುತ್ತಾನೆ. ಆ ಕ್ಷಣ ಸಾಯುತ್ತೇನೆ ಎಂದೆನಿಸಿದಾಗ ಮನಸ್ಸಿನಲ್ಲಾದ ನಿರ್ವಿಕಾರವವನ್ನು ಪಾರ್ಶ್ವವಾಯು ಬಡಿದು ಮಲಗಿರುವ ಕೃಷ್ಣಪ್ಪನು ಹಿಂದಿನದನ್ನು ನೆನಪಿಸಿಕೊಳ್ಳುವಾಗ ಭಾವಪರವಶನಾಗುತ್ತಾನೆ. ಹೀಗೆ ಕೃಷ್ಣಪ್ಪ ಹಿಂದಿನದನ್ನು ನೆನೆಸಿಕೊಂಡು ತನ್ನ ಇಂದಿನ ಸ್ಥಿತಿಯಲ್ಲಿರುವುದಕ್ಕೆ ಹೋಲಿಸುತ್ತ ನಿರಾಶೆಯ ನಿಟ್ಟುಸಿರು ಬಿಡುತ್ತಾನೆ. ಆ ಕ್ಷಣ ವಿಷಣ್ಣತೆ ಅವನ ಮನಸ್ಸನ್ನು ಆವರಿಸುತ್ತದೆ. ವ್ಯಕ್ತಿ ಲೋಕವನ್ನು ಕಂಡ ಪರಿಸರಕ್ಕೂ ಬದುಕನ್ನು ಸ್ವೀಕರಿಸುವ ಸನ್ನಿವೇಶಕ್ಕೂ ವಿರೋಧಾಭಾಸವಿದೆ. ಈ ರೀತಿಯ ದ್ವಂದ್ವದ ನಿಲುವು ಮತ್ತು ಇಬ್ಬಂದಿತನ ಇವುಗಳ ಮೂಲಕವೇ ಬದುಕನ್ನು ಎದುರಿಸುವ ಸನ್ನಿವೇಶವನ್ನು ಇಲ್ಲಿ ಕಾಣಬಹುದಾಗಿದೆ.

ಕಾದಂಬರಿಯ ಕೊನೆಯ ಭಾಗದಲ್ಲಿ ನಡೆಯುವ ಕ್ರಿಯೆ ಹೆಚ್ಚಾಗಿ ಕೃಷ್ಣಪ್ಪನ ವರ್ತಮಾನಕ್ಕೆ ಸಂಬಂಧಿಸಿದೆ. ಆದರೂ ಒಂದೆರಡು ಮಹತವದ ಹಿನ್ನೋಟಗಳು ಇಲ್ಲಿವೆ. ಮೊದಲನೆಯದೆಂದರೆ ಕೃಷ್ಣಪ್ಪ ವಾರಂಗಲ್ಲಿನಿಂದ ವಾಪಸ್ಸಾದ ನಂತರ ಹುಲಿಯೂರಿನಲ್ಲಿ ರೈತರರನ್ನು ಶೋಷಣೆಯ ವಿರುದ್ಧ ಸಂಘಟಿಸಿದ್ದು. ಇದು ಅವನನ್ನು ಸಕ್ರಿಯ ರಾಜಕಾರಣಕ್ಕೆ ಕರೆದೊಯ್ಯುತ್ತದೆ. ಇಲ್ಲಿನ ವಿವರಗಳು ನೈಜವಾಗಿದ್ದು ಸಂಯಮದಿಂದ ಸಂಯೋಜಿತವಾಗಿವೆ. ಇನ್ನೊಂದು ಅವನು ಲುಸಿನಾಳೊಡನೆ ಪಡೆದ ಅನುಭವ ಅವನ ವೈಯಕ್ತಿಕ ಜೀವನಕ್ಕೆ ಸಂಬಧಿಸಿದ್ದಾಗಿದೆ. ಇಂಥ ಹಿನ್ನೋಟಗಳನ್ನು ಬಿಟ್ಟರೆ ಇಲ್ಲಿ ಕೃಷ್ಣಪ್ಪನ ಸದ್ಯದ ಅವಸ್ಥೆಯ ಮೇಲೆ ಕಾದಂಬರಿಯ ಗಮನ ಕೇಂದ್ರೀಕೃತವಾಗಿದೆ.

'ಭವ'ಕಾದಂಬರಿಯಲ್ಲಿ ವಿಶ್ವನಾಥ ಶಾಸ್ತ್ರಿಗೆ ಮದ್ರಾಸಿನಿಂದ ಬೆಂಗಳೂರಿಗೆ ಹೊರಟ ರೈಲಿನಲ್ಲಿ ಅಕಸ್ಮಾತ್ತಾಗಿ ಅಯ್ಯಪ್ಪ ಸ್ವಾಮಿಯ ವ್ರತಧಾರಿಯಾದ ದಿನಕರನ ಭೇಟಿಯಾಗುತ್ತದೆ. ತನಗೊಬ್ಬ ಮಗನಿದ್ದಾನೆ ಎಂದು ತಿಳಿದಿರದ ಶಾಸ್ತ್ರಿಗೆ ದಿನಕರನ ಪರಿಚಯವಾದಾಗ ಅವನತ್ತ ಆಕರ್ಷಿತನಾಗುತ್ತಾನೆ. ದಿನಕರನಿಗೆ ಅನೇಕ ವರ್ಷಗಳ ಹಿಂದೆ ಪರಿಚಿತಳಾಗಿದ್ದ ಸೀತಮ್ಮ ಮತ್ತು ನಾರಾಯಣ ತಂತ್ರಿಯನ್ನು ಕಾಣಬೇಕಾಗಿರುವುದರಿಂದ ಶಾಸ್ತ್ರಿ ಅವನನ್ನು ಮಂಗಳೂರಿನ ಅವರ ಮನೆಗೆ ಕರೆದೊಯ್ಯುತ್ತಾನೆ. ಅಲ್ಲಿ ಸೀತಮ್ಮನ ಮಾತಿನಿಂದ ತಾನು ಕೊಂದಿದ್ದೇನೆಂದು ಭಾವಿಸಿದ್ದ ಮೊದಲ ಹೆಂಡತಿ ಸರೋಜ ಬದುಕಿದ್ದು, ಹರಿದ್ವಾರದಲ್ಲಿ ತ್ರಿಪಾಠಿಯವರ ಆಶ್ರಯ ಪಡೆದು ಬಳಿಕ ಗಂಗಾನದಿಯಲ್ಲಿ ಜಲಸಮಾಧಿಯಾದುದು, ತ್ರಿಪಾಠಿಯವರು ದಿನಕರನನ್ನು ಸಾಕಿದ್ದು ಈ ಎಲ್ಲ ವಿವರಗಳನ್ನು ತಿಳಿದಾಗ ದಿನಕರ ಸರೋಜಳ ಮಗನೆಂಬುದು ಖಚಿತವಾಗುತ್ತದೆ. ಆಗ ಶಾಸ್ತ್ರಿಯು ಭೂತಕಾಲದ ತನ್ನ ಜೀವನವನ್ನು ನೆನಪಿಸಿಕೊಳ್ಳುತ್ತಾನೆ. ಶಾಸ್ತ್ರಿಯು ಸರೋಜಳಿಗೆ ಮಕ್ಕಳಾಗುವಂತೆ ಮಾಡಲು ಕೇರಳದ ಕರುಣಾಕರ ಪಂಡಿತನಿಂದ ಪೂಜೆ ಮಾಡಿಸಿರುತ್ತಾನೆ. ಪೂಜೆಯ ಕೊನೆಯ ದಿನ ನಗ್ನವಾಗಿ ಪೂಜೆಮಾಡುವ ನಿಯಮವಿರುತ್ತದೆ. ಪಂಡಿತನೊಡನೆ ಸಲುಗೆಯಿಂದಿದ್ದ ಸರೋಜಳನ್ನು ಶಾಸ್ತ್ರಿ ಗಮನಿಸಿರುತ್ತಾನೆ. ಪೂಜೆಯ ನಂತರ ಪಂಡಿತನನ್ನು ಅವಳು ಕೂಡಿರಬಹುದೆಂಬ ಅನುಮಾನದಿಂದ ಹೆಂಡತಿಯನ್ನು ಕೊಲ್ಲಲೆತ್ನಿಸಿ ಶಾಸ್ತ್ರಿಯು ಓಡಿಹೋಗಿರುತ್ತಾನೆ. ಇದರಿಂದ ಶಾಸ್ತ್ರಿಯು ಹಿಂಸೆ, ದ್ವೇಷಗಳನ್ನು ಬಿಟ್ಟು ಮಹಾದೇವಿ ಎನ್ನುವ ಇನ್ನೊಬ್ಬಳನ್ನು ಮದುವೆಯಾಗಿರುತ್ತಾನೆ. ಮಹಾದೇವಿ ತನ್ನನ್ನು ದ್ವೇಷಿಸುತ್ತಿದ್ದರೂ

[illegible]

[illegible]

[illegible]

ಮಗಳು ಓಡಿಹೋದಾಗ ಕಂಗಾಲಾದ ಹೆಂಡತಿಯನ್ನು ಶಾಸ್ತ್ರಿಯು ಸಂತೈಸುತ್ತಾನೆ. ಶಾಸ್ತ್ರಿಯು ಇಟ್ಟುಕೊಂಡಿದ್ದ ವೇಶ್ಯೆ ರಾಧಾಳು ಮಗಳನ್ನು ಮನೆಗೆ ಮರಳಿ ಕರೆತರುವ ವ್ಯವಸ್ಥೆ ಮಾಡಿದಾಗ ಮಗಳನ್ನು ಕ್ಷಮಿಸಿರುತ್ತಾನೆ. ದಿನಕರನನ್ನು ಕಂಡಾಗ ಶಾಸ್ತ್ರಿಗೆ ಅವನು ತನ್ನ ಮಗನೋ ಅಥವ ಪಂಡಿತನ ಮಗನೋ ಎಂಬ ಸಂದೇಹ ಮೂಡುತ್ತದೆ.

ದಿನಕರನು ವಿದೇಶದಲ್ಲಿ ಬುದ್ಧಿವಂತನೆನಿಸಿ ದೇಶದಲ್ಲಿ ಪ್ರಸಿದ್ಧ ವ್ಯಕ್ತಿಯಾಗಿದ್ದಾನೆ. ಆದರೆ ಅವನಿಗೆ ತಂದೆ ಯಾರೆಂಬುದು ತಿಳಿಯದು. ಊರು ಯಾವುದೆಂದು ತಿಳಿಯದು. ಹಣವಿದೆ, ಪ್ರಸಿದ್ಧಿಯಿದೆ ಹಾಗೂ ಪ್ರೇಯಸಿಯರಿದ್ದಾರೆ. ತನ್ನ ಮೂಲವು ತಿಳಿಯದ ಕಾರಣ ಗೊಂದಲಗೊಂಡ ಅವನು ಅಯ್ಯಪ್ಪನ ವ್ರತಧಾರಿಯಾಗಿ ಧಾರ್ಮಿಕ ಪ್ರಪಂಚದಲ್ಲಿ ಅಲೆಯುತ್ತಾನೆ. ಇದರಿಂದ ಅವನಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಸಂಸಾರೊಂದಿಗನಾದ ನಾರಾಯಣ ತಂತ್ರಿಯ ಬದುಕಿನ ಜೊತೆಗೆ ತನ್ನ ಬದುಕನ್ನು ದಿನಕರ ಹೋಲಿಸಿಕೊಳ್ಳುತ್ತಾನೆ. ನಾರಾಯಣ ತಂತ್ರಿಗೆ ಸಂಸಾರದ ಚೌಕಟ್ಟಿದ್ದು ಸಾಮಾಜಿಕ ಭಯ, ಜವಾಬ್ದಾರಿಯಿರುವ ಅವನ ಬದುಕಿಗೊಂದು ಅರ್ಥವಿದೆ. ತನ್ನ ಬದುಕಿನ ಅತಂತ್ರತೆಯನ್ನು ನೆನೆದು ದಿನಕರನು ಗೊಂದಲಗೊಳ್ಳುತ್ತಾನೆ.

ಹೀಗೆ ಜೀವನಕ್ರಮದ ತನ್ಮಯತೆಯಿಂದ ಹೊರಗೆ ನಿಂತವರು ಪರಕೀಯತೆಯನ್ನು ಭೂತದಿಂದಲೂ, ವರ್ತಮಾನದಿಂದಲೂ ಅನುಭವಿಸುತ್ತಾರೆ. ಪರಕೀಯತೆಯು ಮಾನಸಿಕವಾಗಿ ವ್ಯಕ್ತಿಯನ್ನು ಹಿಂಸಿಸಿದರು, ಮುಂದೆ ರಚನಾತ್ಮಕತೆಯನ್ನು ಸಾಧಿಸಲು ಇದರಿಂದ ಇತ್ಯಾತ್ಮಕ ಪರಿಣಾಮವೇ ಉಂಟಾಯಿತು. ಪರಂಪರೆಯನ್ನು ದೂರದಿಂದ ನಿಂತು ವಿಶ್ಲೇಷಿಸಲು ಅನುವು ಮಾಡಿಕೊಟ್ಟಿತು. ಇರುವಿಕೆಯಿಂದ ಹೊರಗೆ ಬಂದು ನಿಂತ ಸ್ಥಿತಿಯ ಪರಕೀಯ ಆಗುವಿಕೆ ಆಗುವಲ್ಲಿ ಪರಂಪರೆಯನ್ನು ಶೋಧಿಸಿತು. ಜೊತೆಗೆ ಕೆಲವೊಮ್ಮೆ ವ್ಯಕ್ತಿಯನ್ನು ಶೋಧಿಸಿತು. ಈ ರೀತಿ ದ್ವಿಮುಖ ಶೋಧನೆ ಹೊಸಜಗತ್ತುಗಳನ್ನು, ಮೌಲ್ಯಗಳನ್ನು ನಿರ್ಮಿಸಲು ಮತ್ತು ಸಂಸ್ಕೃತಿಯನ್ನು ಹೊಸ ದಿಕ್ಕುಗಳಿಂದ ಅನ್ವೇಷಿಸಲು ಸಾಧ್ಯವಾಯಿತು.

ನವ್ಯ ಸಾಹಿತ್ಯದಲ್ಲಿ ಬದಲಾದ ಕಾಲದ ಪರಿಕಲ್ಪನೆಗೆ ವಿಜ್ಞಾನದ ಪ್ರಭಾವವೂ ಒಂದು ಕಾರಣವಾಗಿದೆ. ಮನೋವಿಶ್ಲೇಷಣೆಯಲ್ಲಿ ತೊಡಗಿರುವ ನವ್ಯ ಸಾಹಿತಿ ಪ್ರಜ್ಞಾಪ್ರವಾಹವನ್ನು ಕಾಲಪ್ರವಾಹಕ್ಕೆ ಹೋಲಿಸುತ್ತಾನೆ. ಪ್ರಜ್ಞಾಪ್ರವಾಹ ತಂತ್ರ ಪಾತ್ರಗಳ ಭಿನ್ನ ಮನಸ್ಥಿತಿಗಳ ದಾಖಲೆಯೊಂದೇ ಅಲ್ಲದೇ ಅದು ಇಡೀ ಪಾತ್ರಚಿತ್ರಣ ಹಾಗೂ ವಸ್ತು ನಿರೂಪಣೆಯ ವಿಧಾನವೇ ಆಗಿದೆ. ಬದಲಾದ ಕಲ್ಪನೆಯ ಹಿನ್ನೆಲೆಯಲ್ಲಿ ಭೂತ, ವರ್ತಮಾನ ಮತ್ತು ಭವಿಷ್ಯತ್ತುಗಳು ಒಂದರ ಹಿಂದೊಂದು ಬರುವ ಕಾಲಘಟ್ಟಗಳಾಗಿರದೇ ಅವು ಒಂದೇ ಕ್ಷಣದಲ್ಲಿ ಒಟ್ಟಿಗೆ ಸಾಧಿಸುವ ಕಾಲಾವಧಿಯಾಗಿದೆ. ಒಂದು ವ್ಯಕ್ತಿಯ ಇಡಿಯ ವ್ಯಕ್ತಿತ್ವವನ್ನು ಅವನ ಇಡೀ ಜೀವಮಾನದ ಇತಿಹಾಸವನ್ನು ಆ ಒಂದು ಕ್ಷಣ ತುಂಬಿಕೊಂಡಿರುತ್ತದೆ. ಅದು ಭೂತ, ವರ್ತಮಾನ, ಭವಿಷ್ಯತ್ತಿನ ಸಂಗತಿಗಳನ್ನು ಸಾಕ್ಷಾತ್ಕರಿಸಿಕೊಳ್ಳಬಹುದಾದ ಅರ್ಥಪೂರ್ಣವಾದ ಕ್ಷಣವಾಗಿದೆ. ಸಂವೇದನಾಶೀಲ ವ್ಯಕ್ತಿಯ ಪ್ರಜ್ಞೆಯು ಇಂಥ ಕ್ಷಣಗಳಿಂದ ತುಂಬಿರುತ್ತದೆ. ವ್ಯಕ್ತಿಯ ಒಂದು ಜೀವಮಾನದ ಘಟನೆಗಳು ಕಾಲಾನುಕ್ರಮವನ್ನು ಧಿಕ್ಕರಿಸಿ ಒಟ್ಟಿಗೆ ಸಂಭವಿಸುತ್ತವೆ. ಪ್ರಜ್ಞಾಪ್ರವಾಹ ತಂತ್ರವನ್ನು ಮನೋವಿಶ್ಲೇಷಣೆಯ ಮುಖಾಂತರ ವ್ಯಕ್ತಿಯನ್ನು ಇಡಿಯಾಗಿ ಚಿತ್ರಿಸುವುದಕ್ಕಾಗಿ ಬಳಸಲಾಗಿರುತ್ತದೆ. ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಈ ಬಗೆಯ ಚಿತ್ರಣವಿದೆ.

[illegible]

[illegible]

[illegible]

[illegible]

ಭೂತಕ್ಕೆ ಕೃತಜ್ಞರಾಗಿ ಪರಂಪರೆಯೊಂದಿಗೆ ಸೃಜನಾತ್ಮಕವಾಗಿ ಒಡನಾಡುತ್ತ ಮುಂದುವರಿದು ವರ್ತಮಾನಕ್ಕೆ ಋಣಿಯಾಗುವ ನಡುವಿನ ಸಂದರ್ಭವೇ ಸಂಘರ್ಷ ಇದು ಜಗಳವಲ್ಲ, ತಿಕ್ಕಾಟವಲ್ಲ ಅನುಸಂಧಾನವಾಗಿದೆ. ಅನಂತಮೂರ್ತಿಯವರ ಅಭಿಪ್ರಾಯದಂತೆ ಇಂದಿನ ಅಸ್ಥಿರತೆ ಮತ್ತು ಬದಲಾವಣೆಗಳ ಕಾಲದಲ್ಲಿ ಪರಂಪರೆಯೊಂದಿಗೆ ಜಗಳ ಅನುಸಂಧಾನ ಇದ್ದದ್ದೇ ಇದು ಸುರಕ್ಷಿತ ರೀತಿಯಲ್ಲಿ. ನಮ್ಮ ಪ್ರಾಚೀನ ಪರಂಪರೆ ಮತ್ತು ಪರಂಪರೆಯ ಶ್ರೇಷ್ಠ ಅಂಶಗಳನ್ನು ಕಾಪಾಡಿಕೊಂಡೇ ಆಧುನಿಕರಾಗಬೇಕಾದ ನಮ್ಮ ಅವಶ್ಯಕತೆ, ಅನಿವಾರ್ಯತೆ ಮತ್ತು ಅದರಿಂದ ಉಂಟಾಗುವ ಉದ್ವಿಗ್ನತೆ ಇವೆಲ್ಲ ಅನುಸಂಧಾನದ ಮೂಲ ಅಂಶಗಳು. ಅನಂತಮೂರ್ತಿಯವರು ವಿಮರ್ಶಾತ್ಮಕವಾಗಿ ನಮ್ಮ ಪರಂಪರೆಗೆ ಒಳಗಿನವರಾಗಿ ಪರಂಪರೆಯನ್ನು ಕುರುಡಾಗಿ ಟೀಕಿಸದೇ ಆದರೆ ಅವಶ್ಯಕವಾಗಿ ಪ್ರಶ್ನಿಸದಿರದೇ ವಿಮರ್ಶಾತ್ಮಕವಾಗಿ ಎಚ್ಚರವಾಗದು. ಬುದ್ಧ, ಬಸವ, ಗಾಂಧಿ ಈ ಪ್ರಜ್ಞೆಯುಳ್ಳವರು ಪರಂಪರೆಯಲ್ಲಿ ಇಂಥ ಅನೇಕ ಉದಾಹರಣೆಗಳನ್ನು ಕೊಡಬಹುದು. ಭೂತದೊಂದಿಗೆ ಹರಿದುಕೊಳ್ಳಲಾಗದ ಭವಿಷ್ಯದೊಂದಿಗೆ ಜೋಡಿಸುವಾಗಿನ ವರ್ತಮಾನದ ಕೊಂಡಿ ದ್ವಂದ್ವವಾಗಿದೆ. ಈ ದ್ವಂದ್ವವನ್ನು ಮೀರುವ, ಕಳೆದುಕೊಂಡೂ ಬಳಿಯೇ ಇಟ್ಟುಕೊಂಡಿರುವ, ಕರಗಿಹೋಗಿಯೂ ಇಡಿಯಾಗಿ ಉಳಿಯುವುದು ಹೇಗೆಂಬುದು ಅನಂತಮೂರ್ತಿಯವರಿಗೆ ಅದು ವ್ಯಕ್ತಿತ್ವದ ಪ್ರಶ್ನೆಯಾಗಿ ಕಾಡಿದೆ. ಗಾಂಧಿ ದೇಶಪ್ರೇಮದಲ್ಲಿ ಕಳೆದು ಹೋದರೂ ಇಡಿಯಾಗಿ ಉಳಿದುಬಿಡುತ್ತಾರೆ. ಸ್ವಾತಂತ್ರ್ಯ ಸಿಕ್ಕು ಹಲವಾರು ವರ್ಷ ಅದನ್ನು ಮರೆತರೂ ಕಳೆಯದೇ ಬೆಳೆದಿರುತ್ತಾರೆ. ಏನನ್ನೂ ನಾವು ಬದಲಾಯಿಸಿಕೊಳ್ಳಬಾರದು. ತೃಪ್ತಿಯೇ ಜೀವನದ ಗುಟ್ಟು ಎಂದು ತಿಳಿಯುವುದು ಬೇರೆ. ಇಷ್ಟು ದಿನ ಮಾಡಿಕೊಂಡು ಬಂದಿದ್ದೇವೆ. ಆದರೆ ಈಗ ಮತ್ತೆ ಹೊಸದಾಗಿ ತಿಳಿಯೋಣ ಲೈಫ್ ಇಸ್ ಎಲ್ಸ್ ವ್ಹೇರ್ ನಾವು ಬದುಕುವುದೇ ನಿಜವಾದ ಬದುಕಲ್ಲ. ಅದು ಇನ್ನೆಲ್ಲೋ ಇದೆ. ಆದರೆ ನಾನು ಇಲ್ಲಿದೀನಿ ಇರಬೇಕಾದದ್ದು ಸಧ್ಯಕ್ಕೆ ಅನಿವಾರ್ಯ. ಯಾವತ್ತು ಬೇಕಾದರೂ ಎದ್ದು ಅಲ್ಲಿಗೆ ಹೋಗಬಹುದು. ಬದುಕಿನ ಗಡಿಯಾರದ ಉತ್ಕರ್ಷತೆಗಳು ಪೆಂಡುಲಮ್ ಇದ್ದಂತೆ. ನೆಮ್ಮದಿ ಎಂದರೆ ಮಧ್ಯದಲ್ಲಿರುವುದೇ ಆಗಿದೆ. ನಡುವಿನಲ್ಲಿ ನಿಲ್ಲುವುದೇ ಸಂಘರ್ಷದ ಸ್ಥಿತಿಯಾಗಿದೆ. ಸಮಕಾಲೀನ ಭಾರತವನ್ನು ಅರ್ಥಮಾಡಿಕೊಳ್ಳುವುದಕ್ಕೆ ಮಾರ್ಕ್ಸ್‌ವಾದ, ಸಮಾಜಶಾಸ್ತ್ರ, ಮನಃಶಾಸ್ತ್ರ ಹಾಗೂ ಸಂಶೋಧನೆಗಳು ಕಟ್ಟಿಕೊಡುವ ಮಾದರಿಗಳಾಚೆ ಬೇರೊಂದು ಮನಸ್ಥಿತಿಯ ಅಗತ್ಯವಿದೆ. ಅದು ನಮ್ಮ ಸುತ್ತಲಿನ ಬದುಕನ್ನು ಬಹಳ ಸೂಕ್ಷ್ಮವಾಗಿ ಅವಲೋಕಿಸುವ ಆತ್ಮೀಯವಾಗಿ ಅನುಸಂಧಾನಿಸುವ ಮಾರ್ಗವಾಗಿದೆ.

ಸ್ವಪ್ರಜ್ಞೆ ಬಳಕೆಗೊಳ್ಳುವ ಸಂದರ್ಭದಲ್ಲಿ ವ್ಯಕ್ತಿ ಕಾಲವನ್ನು ಒಂದು ಬಿಂದುವಿನಲ್ಲಿ ಕೇಂದ್ರೀಕರಿಸಿ ಅನುಭವವನ್ನು ಪಡೆಯುತ್ತಾನೆ. ಏಕೆಂದರೆ ತನ್ನ ಒಳಗಿನ ಮತ್ತು ಹೊರಗಿನ ಅಸ್ತಿತ್ವದ ಶೋಧನೆಯನ್ನು ನಡೆಸುವ ಸಂದರ್ಭದಲ್ಲಿ ಕಂಡುಬರುವ ಅರಿವು ಕಾಲಾತೀತವಾದುದು. ಭೂತ,ವರ್ತಮಾನವೆಂಬ ಭೇದವಿಲ್ಲದೆಯೇ ಪ್ರಜ್ಞೆಗೆ ಒಮ್ಮೆಲೆ ಗೋಚರಿಸುವಂತಹುದು. ಅನಂತಮೂರ್ತಿಯವರ ಕಾರ್ತೀಕದ ರಾಘವನು ಕಾಲವು ತಂದೊಡ್ಡಿರುವ ಅನುಭವವನ್ನು ಅರ್ಥೈಸಿಕೊಳ್ಳುವಾಗ ಪ್ರಜ್ಞೆಯ ಮೇಲೆ ಒಂದೇ ಸಲ ದಾಳಿ ಮಾಡುತ್ತಾನೆ. ವರ್ತಮಾನದ ಗುಂಗಿನಿಂದ ಬಿಡಿಸಿಕೊಂಡು ಭವಿಷ್ಯತ್ತನ್ನು ನಿರ್ಣಯಿಸಿಕೊಳ್ಳಬೇಕಾದ ಸವಾಲನ್ನೆದುರಿಸಬೇಕಾಗುತ್ತದೆ. ಹೀಗಾಗಿ ಭೂತ ಮತ್ತು ವರ್ತಮಾನಗಳು ಒಂದರ ಮೇಲೊಂದು ಬೆಳಕು ಚೆಲ್ಲುತ್ತಾ, ಭರಿಷ್ಯತ್ತನ್ನು ರೂಪಿಸಲು ಸಜ್ಜಾಗುತ್ತವೆ.

ನಿರ್ದಿಷ್ಟ ವ್ಯವಸ್ಥೆಯೊಂದು ಮೂಲಭೂತವಾದ ಸಂರಚನಾ ಬದಲಾವಣೆಗೊಳಪಡುವ ಕ್ರಿಯೆಯನ್ನು ಸಾಂಸ್ಕೃತಿಕ ಸಂಘರ್ಷವೆನ್ನಬಹುದು. ಸಮಾಜವೊಂದರ ವ್ಯವಸ್ಥಿತ ಪರಿವರ್ತನೆಗಾಗಿ ಅದರ ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಅಂಥ ಬದಲಾವಣೆ ಆಗುವುದು ಅತ್ಯಂತ ಅವಶ್ಯಕವಾಗಿದೆ.

[illegible]

[illegible]

[illegible]

೪.೨ ವ್ಯಕ್ತಿತ್ವಗಳ ತಾಕಲಾಟ

ನವ್ಯ ಲೇಖಕರು ಸಾಮಾಜಿಕ ಸಮಸ್ಯೆಯನ್ನು ವ್ಯಕ್ತಿನಿಷ್ಠತೆಯ ನೆಲೆಯಲ್ಲಿ ಶೋಧಿಸಿದರು. ಸಾಮಾಜಿಕ ವಾಸ್ತವಿಕತೆಗಳಿಗಿಂತ ವೈಯಕ್ತಿಕತೆಗೆ ಹೆಚ್ಚು ಮಹತ್ವ ನೀಡಿದರು. ವ್ಯಕ್ತಿಯ ಸಮಸ್ಯೆಯನ್ನು ಅವನ ಅನುಭವದ ಮಿತಿಯಲ್ಲಿ ಪರಿಗಣಿಸಿದರು. "ನವ್ಯ ಲೇಖಕರ ನಾಯಕ ದುರ್ಬಲನಾಗಿರುವುದರಿಂದ ಅನುಕೂಲವನ್ನು ಉಪಯೋಗಿಸಿಕೊಂಡು ಅವನ ಅನಿಶ್ಚಯ ಹೊಯ್ದಾಟಗಳ ಮೂಲಕ ಸಮಸ್ಯೆಯ ಪರ-ವಿರೋಧಗಳನ್ನು ಕೆದಕುತ್ತ ಬಿಕ್ಕಟ್ಟಿನತ್ತ ನಡೆಸಿಕೊಂಡು ಹೋಗುತ್ತಾರೆ. ಹೀಗಾಗಿ ಯಾವುದು ಸರಿಯಲ್ಲ ಎನ್ನುವುದರ ಬಗ್ಗೆ ಅವರಿಗಿರುವಷ್ಟು ಸ್ಪಷ್ಟತೆ ಯಾವುದು ಸರಿ ಎನ್ನುವುದರಲ್ಲಿ ಕಾಣುವುದಿಲ್ಲ."[೬] ಅವರು ಬದುಕಿನ ಮೌಲ್ಯಗಳನ್ನು ಶೋಧಿಸುವಾಗ, ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತದೆ.

ವ್ಯಕ್ತಿ ಮತ್ತು ಕುಟುಂಬ, ವ್ಯವಸ್ಥೆ ಮತ್ತು ಸಮಕಾಲೀನ ಸಾಮಾಜಿಕ ಸಂದರ್ಭಗಳ ನಡುವೆ ಹಾಗೂ ಪರಂಪರಾಗತ ಜೀವ ವಿರೋಧಿ ಮೌಲ್ಯಗಳು ಮತ್ತು ವಾಸ್ತವದ ನಡುವೆ ಸಂಘರ್ಷವಿದೆ. ವ್ಯಕ್ತಿ ತನ್ನ ಮೂಲಕ ಲೋಕವನ್ನು ನೋಡಲು ಬಯಸುತ್ತಾನೆ. ವ್ಯಕ್ತಿಗತ ನಿಲುವು ಅವನ ಅನುಭವವನ್ನು ಅವಲಂಬಿಸಿರುವುದರಿಂದ ಅದು ಸಾಮಾಜಿಕ ಆವರಣವನ್ನು ಪಡೆಯಬೇಕಾದಾಗ ಸಂಘರ್ಷವೇರ್ಪಡುತ್ತದೆ. ವ್ಯಕ್ತಿ ವ್ಯಕ್ತಿಗಳ ನಡುವಿನ ಭಿನ್ನತೆಯಿಂದಾಗಿ ಅವನ ಚಿಂತನೆ, ಆಲೋಚನಾ ಕ್ರಮಗಳಲ್ಲಿ ವ್ಯತ್ಯಾಸವಿದೆ. ವ್ಯಕ್ತಿಯ ಅವಶ್ಯಕತೆ ಮತ್ತು ನಿರ್ಬಂಧಗಳ ಭಿನ್ನತೆಯು ವ್ಯಕ್ತಿತ್ವಗಳ ತಾಕಲಾಟಕ್ಕೆ ಕಾರಣವಾಗಿದೆ. ಅನಂತಮೂರ್ತಿಯವರ ಕಥಾ ಸಾಹಿತ್ಯದಲ್ಲಿ ವಿಭಿನ್ನ ವ್ಯಕ್ತಿತ್ವಗಳ ತಾಕಲಾಟವನ್ನು ಕಾಣಬಹುದು. ತಾವು ಬೆಳೆದ ಸಾಂಸ್ಕೃತಿಕ ಪರಿಸರವೇ ಕಾರಣವಾಗಿ ಏರ್ಪಡುವ ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಘರ್ಷಗಳಿಗೆ ವಿಭಿನ್ನ ಸ್ತರಗಳಿವೆ. ಅನಂತಮೂರ್ತಿಯವರು ಪಾತ್ರಗಳ ಮಾನಸಿಕ ತುಮುಲಗಳಿಗೆ ವಸ್ತುಪ್ರತಿರೂಪವೊಡ್ಡಿ ಅದನ್ನು ಮೂರ್ತೀಭವಿಸುವಂತೆ ಮಾಡುವ ನವ್ಯ ತಂತ್ರವನ್ನು ಇಲ್ಲಿ ಉಳಿಸಿಕೊಂಡಿದ್ದಾರೆ. ಪಾತ್ರದ ಮನೋವ್ಯಾಪಾರದಲ್ಲಿನ ಸಂಘರ್ಷ, ವಿಕ್ಷಿಪ್ತತೆ, ಪರಕೀಯ ಪ್ರಜ್ಞೆ ಮುಂತಾದವುಗಳನ್ನು ಇಲ್ಲಿ ಕಾಣಬಹುದು.

'ಪ್ರಶ್ನೆ' ಕತೆಯಲ್ಲಿ ರಂಗ-ಗೋಪಾಲ, ಶಾರದೆ-ಲಚ್ಚಿ ಇವರೆಲ್ಲರೂ ಕಾಲದ ಒಂದೇ ಪಾತಳಿಯಲ್ಲಿದ್ದರೂ ವಿಭಿನ್ನ ವ್ಯಕ್ತಿತ್ವವನ್ನು ಹೊಂದಿದವರಾಗಿದ್ದಾರೆ. ಕತೆಯ ಉದ್ದಕ್ಕೂ ರಂಗನಾಥನ ವ್ಯಕ್ತಿತ್ವಕ್ಕೆ ಎದುರಾಗಿ ಗೋಪಾಲ ಬರುತ್ತಾನೆ. ರಂಗನಾಥನ ವಾದಗಳನ್ನು ಅವನು ಖಂಡಿಸುತ್ತಾನೆ. ಎಲ್ಲರೂ ವಿಧಿಯಿಲ್ಲದೇ ಅನಿವಾರ್ಯವಾಗಿ ಮಾಡುವ ಪ್ರೀತಿಯನ್ನು ನೀನೊಂದು ಹೊಸ ಆದರ್ಶ ಎಂದುಕೊಂಡಿರುವೆ, ಲಾರೆನ್ಸ್ ಫ್ರಾಯ್ಡ್ ಓದುವ ಬದಲು ಒಮ್ಮೆ ಹೆರಿಗೆ ಆಸ್ಪತ್ರೆಗೆ ಹೋದರೆ, ಭಾರತೀಯರೆಲ್ಲರೂ ನಿನ್ನ ಆದರ್ಶವನ್ನು ಹೇಗೆ ಆಚರಿಸುತ್ತಾರೆಂದು ತಿಳಿಯುತ್ತದೆ. ಔಷಧಿ ಶೀಶೆಗಳನ್ನು ಹಿಡಿದು ಕ್ಯೂನಿಂತ ಬಸುರಿ ಹೆಂಗಸರನ್ನು ನೋಡಿದರೆ ನಿನ್ನ ಪ್ರೀತಿಯ ಪಿತ್ತ ಇಳಿಯುತ್ತದೆಂದು ಗೋಪಾಲ ರಂಗನಿಗೆ ಹೇಳುತ್ತಾನೆ.

ಶಂಕರಯ್ಯನ ನೆರಳಿನಲ್ಲಿ ಬೆಳೆದ ಶಾರದೆಯ ಮೇಲೆ ಅವಳಕ್ಕನ ಸಾವು ಗಂಭೀರ ಪರಿಣಾಮವನ್ನು ಬೀರಿದೆ. ರಂಗನ ಅತಿಯಾದ ಪ್ರೀತಿ ದ್ವಂದ್ವವನ್ನುಂಟುಮಾಡಿದೆ. ರಂಗನ ಮೇಲೆ ಪ್ರೀತಿಯಿದ್ದರೂ ಶಂಕರಯ್ಯನನ್ನು ತೊರೆಯಲು ಅವಳು ಸಿದ್ಧಳಾಗುವುದಿಲ್ಲ. ರಂಗನ ಮಾತಿನಿಂದಾಗಿ ಮೊದಲು ಗೊಂದಲಕ್ಕೊಳಗಾದರೂ ಕೊನೆಗೆ ಶಂಕರಯ್ಯನ ಜೊತೆಗಿರಲು ನಿರ್ಧರಿಸುತ್ತಾಳೆ.

[illegible]

[illegible]

[illegible]

[illegible]

ಶಂಕರಯ್ಯ ಹಾಗೂ ಶಾರದೆಯ ನಿರ್ಧಾರಗಳು ರಂಗನಿಗೆ ಬೇಸರ ತಂದಿವೆ. ಗೋಪಾಲನ ಮಾತುಗಳನ್ನು ಕೇಳಿದ ರಂಗನಿಗೆ ತನ್ನಲ್ಲೇ ಅನುಮಾನವುಂಟಾಗುತ್ತದೆ. ಆದರ್ಶವನ್ನು ಮೂಲೆಗೆಸೆದು ಆಧುನಿಕ ಯುವಕರಂತೆ ಬೀರ್ ಕುಡಿದ ರಂಗನು ವೇಶ್ಯೆ ಸಹವಾಸವನ್ನು ಮಾಡಿ ಭ್ರಮನಿರಸನಾಗುತ್ತಾನೆ. ಬಸಿರಿ ಹೆಂಗಸರನ್ನು ಹಿಂಬಾಲಿಸುವ ಜೋಲು ಮುಖದ ಗಂಡಂದಿರನ್ನು ಕಂಡ ರಂಗನಿಗೆ ಗೋಪಾಲನ ಮಾತುಗಳು ನೆನಪಾಗುತ್ತವೆ. ಎಲ್ಲವೂ ಕ್ಷಣಿಕ ಎಂದು ರಂಗನು ಮನಗಂಡು ಅಲ್ಪ ಸುಖಕ್ಕಾಗಿ ಶಾರದೆಯನ್ನು ಶಂಕರಯ್ಯನಿಂದ ಕಸಿದುಕೊಳ್ಳಬಾರದು ಎಂದುಕೊಳ್ಳುತ್ತಾನೆ. ಗೋಪಾಲನು ಸಹಜತೆಯನ್ನು ಒಪ್ಪಿಕೊಳ್ಳುವ ಸ್ವಭಾವದವನಾಗಿದ್ದಾನೆ. ಶಂಕರಯ್ಯನು ಹಳೆಯ ಮೌಲ್ಯಗಳನ್ನು ಪ್ರತಿಪಾದಿಸುತ್ತಾನೆ. ಲಚ್ಚಿ ಜೀವನವನ್ನು ಇದ್ದಂತೆ ಸ್ವೀಕರಿಸುತ್ತಾಳೆ. ಲಚ್ಚಿ ಸ್ವತಂತ್ರ ಪರಿಸರದಲ್ಲಿ ಬೆಳೆದವಳು. ಶಾರದೆಯು ಕಟ್ಟುಪಾಡುಗಳ ಮಿತಿಯಲ್ಲಿ ಬದುಕುವವಳು. ಶಾರದೆ ಹಾಗೂ ಲಚ್ಚಿಯ ಭಿನ್ನ ಮನೋಭಾವವನ್ನು ಕಂಡ ರಂಗನು ದ್ವಂದ್ವವನ್ನೆದುರಿಸುತ್ತಾನೆ.

'ಸೂರ್ಯನ ಕುದುರೆ' ಕತೆಯಲ್ಲಿ ಜೀವನದ ಸಹಜಗತಿಗೆ ಚಲಿಸುವ ಸ್ವಭಾವ ಅನಂತುವಿನದು. ಯಾವುದಕ್ಕೂ ಚಕಿತನಾಗದ ತಾನಿರುವುದೇ ಪರೋಪಕಾರಕ್ಕಾಗಿ ಜೀವಿಸುವ ರೀತಿ ವೆಂಕಟನದು. ವೆಂಕಟ ಇಡೀ ಊರಿನ ಬಾಯಿಗೆ ಬಿದ್ದವನು ಹಾಗೂ ನಾಚಿಕೆಯಿಲ್ಲದವನು. ಪ್ರಿನ್ಸಿಪಾಲರಿಗೆ ಹೊಡೆದ ಮಗನಿಗೆ ಜೈಲಾಗುತ್ತದೆ ಎಂದು ತಿಳಿದ ವೆಂಕಟ ವಿಚಲಿತನಾಗುವುದಿಲ್ಲ. ಹಣೆಯಲ್ಲಿ ಬರೆದದ್ದು ಆಗಬೇಕಲ್ಲ ಎಂದು ಸುಮ್ಮನಾಗುತ್ತಾನೆ. ವೆಂಕಟನ ಜೀವನದ ರೀತಿಯನ್ನು ಗಮನಿಸಿದ ಅನಂತು ಅವನೊಬ್ಬ ಪಲಾಯನವಾದಿ ಎಂದುಕೊಳ್ಳುತ್ತಾನೆ. ಕುಟುಂಬದ ಜವಾಬ್ದಾರಿಯನ್ನು ವಹಿಸಬೇಕೆಂದು ಅನಂತು ವೆಂಕಟಿಗನಿಗೆ ಹೇಳುತ್ತಾನೆ. ಹಠದಿಂದ ಏನನ್ನು ಸಾಧಿಸಲಾಗುವುದಿಲ್ಲ ಬಾ, ಅಭ್ಯಂಜನ ಮಾಡಿಸಿ ನಿನ್ನ ಸೊಕ್ಕನ್ನೆಲ್ಲಾ ಇಳಿಸುತ್ತೀನಿ ಎಂದು ವೆಂಕಟನೆನ್ನುತ್ತಾನೆ.

ಅನಂತು ವೆಂಕಟಿಗನ ಬೇಜವಾಬ್ದಾರಿತನದ ಬಗೆಗೆ ಕೋಪ ವ್ಯಕ್ತಪಡಿಸಿದರೆ, ವೆಂಕಟಿಗ ಶಾಂತಚಿತ್ತದಿಂದ ಅಭ್ಯಂಜನ ಮಾಡಿಸುತ್ತಾನೆ. ಬಿಸಿಯಾಗಿರುವ ತಲೆಗಳನ್ನು ತಂಪುಮಾಡಬೇಕೆನ್ನುವ ಉದ್ದೇಶ ವೆಂಕಟಿಗನದ್ದಾಗಿದೆ. ನಾನೊಬ್ಬ ಪುಸಕಾನುಪುಕ್ಕ ಕಣೋ ಪಂಜುರ್ಲಿ ಮೈಮೇಲೆ ಬಂದಂಗೆ ನೀನು ಮಾತನಾಡಿದಾಗ ನನಗೇನು ಹೇಳಬೇಕೋ ಗೊತ್ತಾಗಲ್ಲ ಎಂದು ಅನಂತುವಿಗೆ ಹೇಳುತ್ತಾನೆ. ವೆಂಕಟಿಗನು ಯಾವುದನ್ನು ಹಠ, ಸೊಕ್ಕು ಎನ್ನುತ್ತಾನೋ ಅದರ ಹಿಂದಿನ ಜೀವಶಕ್ತಿಯನ್ನು ಅವನು ಗಮನಿಸಿರುವುದಿಲ್ಲ ಎನ್ನುವುದು ಅನಂತುವಿನ ಅಭಿಪ್ರಾಯವಾಗಿದೆ. ವೆಂಕಟಿಗನ ಹಡೆತನವನ್ನು ಟೀಕಿಸಿದ ಅನಂತು ಅವನಲ್ಲಿ ನಿಷ್ಕಪಟ ಗುಣವನ್ನು ಗುರುತಿಸುತ್ತಾನೆ.

ಪ್ರಕೃತಿಯ ಬಗ್ಗೆ ಆಸಕ್ತಿಯನ್ನು ಇಟ್ಟುಕೊಂಡಿರುವ ವೆಂಕಟಿಗನಿಗೆ ಮನೆಯ ಬಗ್ಗೆ ಉದಾಸೀನತೆಯಿದೆ. ನವಿಲುಗುಡ್ಡದ ಗುಹೆಯಲ್ಲಿ ಒಬ್ಬನೇ ಇರಬೇಕೆಂಬುದು ವೆಂಕಟಿಗನ ಕನಸಾಗಿದೆ. ಮನೆಯ ಯಾವ ಜವಾಬ್ದಾರಿಯ ಬಗ್ಗೆಯೂ ತಲೆಕೆಡಿಸಿಕೊಳ್ಳದ ಇವನು ನೆರೆಹೊರೆಯವರ ಕೆಲಸವನ್ನು ಮುತುವರ್ಜಿವಹಿಸಿ ಮಾಡುತ್ತಾನೆ. "ಮುಖಾಮುಖಿಯಾಗುವ ಎರಡು ವ್ಯಕ್ತಿಗಳು, ಕಾಲಗಳು, ಮೌಲ್ಯಗಳು ಸರಿಸಮಾನ ನೆಲೆಗಟ್ಟುಗಳಲ್ಲಿವೆ. ಅನಂತವಿನ ಉರಿಯುವ, ಸಿಡಿಯುವ, ಸ್ಫೋಟಿಸುವ ತತ್ವ ವೆಂಕಟಿಗನ ತಂಪಾಗಿಸುವ, ಶಾಂತವಾಗಿಸುವ ತತ್ವಕ್ಕೆ ಎದುರಾಗುತ್ತವೆ. ಅನಂತು ಕ್ರಾಂತಿ ಎಂದರೆ ವೆಂಕಟ ಅಭ್ಯಂಜನ ಎನ್ನುತ್ತಾನೆ."[೭] ಹೀಗೆ ಇವರಿಬ್ಬರ ವ್ಯಕ್ತಿತ್ವಗಳಲ್ಲಿ ಭಿನ್ನತೆಯಿದೆ.

'ಮೌನಿ' ಕತೆಯಲ್ಲಿ ಕುಪ್ಪಣ್ಣಭಟ್ಟ ಹಾಗೂ ಅಪ್ಪಣ್ಣಭಟ್ಟನ ವ್ಯಕ್ತಿತ್ವಗಳ ನಡುವೆ ವ್ಯತ್ಯಾಸವಿದೆ. ಜೀವನೋಪಾಯಕ್ಕೆಂದು ಘಟ್ಟದ ಮೇಲಕ್ಕೆ ಬಂದ ಸ್ನೇಹಿತರಿಬ್ಬರೂ ಶ್ರೀಮಠದ ನರಸಿಂಹದೇವರ ಒಕ್ಕಲಿನವರಾಗಿದ್ದಾರೆ. ದುಗ್ಗಾಣಿಯಿಲ್ಲದೆ ಅಡಿಕೆ ತೋಟ ಮಾಡಲು ಬಂದ ಇಬ್ಬರದು ಗೋಪಾಲ ಕಮ್ತಿಯ ಅಂಗಡಿಯಲ್ಲಿ ಲೆಕ್ಕವಿದೆ.

ಕುಪ್ಪಣ್ಣಭಟ್ಟ ಅಪ್ಪಣ್ಣಭಟ್ಟನಿಗಿಂತ ಹಿರಿಯನಾಗಿದ್ದಾನೆ. ಸಿಡುಕು ಸ್ವಭಾವದ ಕುಪ್ಪಣ್ಣಭಟ್ಟ ಕಡ್ಡಿ ತುಂಡಾದಂತೆ ಮಾತನಾಡುವವನು. ಮನೆಯ ಮುಂದಿನ ಅಂಗಳವು ಸಗಣಿ, ಕೆಸರು ಹಾಗೂ ಹೊಲಸಿನಿಂದ ತುಂಬಿದೆ. ಗೋಪಾಲ ಕಮ್ತಿಯ ಅಂಗಡಿಯಲ್ಲಿ ಮಾಡಿದ ಸಾಲ ಬಡ್ಡಿಯಿಂದ ಚಕ್ರಬಡ್ಡಿಯಾಗಿ ಬೆಳೆದಿರುತ್ತದೆ. ಮನೆಯ ಜವಾಬ್ದಾರಿ ಒಂದುಕಡೆಯಾದರೆ, ಸಾಲಗಾರರ ಕಾಟ ಇನ್ನೊಂದುಕಡೆ. ಇಷ್ಟಾದರೂ ಕುಪ್ಪಣ್ಣಭಟ್ಟನದು ಹಠದ ಸ್ವಭಾವ. ಹೆಂಡತಿಯ ತಮ್ಮನಾದ ಸುಬ್ರಹ್ಮಣ್ಯನು ಭಾವನ ಕಷ್ಟದ ಪರಿಸ್ಥಿತಿಯನ್ನು ಕಂಡು ಸಹಾಯಮಾಡಲು ಬರುತ್ತಾನೆ. ಮಠದವರು ತೋಟ ಬಿಟ್ಟುಕೊಡಲು ಗಂಟು ಬಿದ್ದಿದ್ದಾರೆ. ಜೊತೆಗೆ ಕಮ್ತಿಯ ಸಾಲವೂ ಮಿತಿ ಮೀರಿದೆ. ಭಾಗೀರಥಿಗೆ ವಯಸ್ಸಾಗುತ್ತಿದೆ ಗಂಡು ನೋಡಬೇಕು. ನಿಮ್ಮ ಪರಿಸ್ಥಿತಿ ಸುಧಾರಿಸುವ ತನಕ ತನ್ನ ಊರಿಗೆ ಬರುವಂತೆ ಕುಪ್ಪಣ್ಣಭಟ್ಟನನ್ನು ಸುಬ್ರಹ್ಮಣ್ಯನು ಕರೆಯುತ್ತಾನೆ.

ನಾನು ಸತ್ತಮೇಲೆ ನನ್ನ ಹೆಂಡತಿ ಮಕ್ಕಳನ್ನು ನೋಡಿಕೋ ಈಗ ನಿನ್ನ ಕೆಲಸ ನೀನು ನೋಡಿಕೋ ಎಂದು ಕುಪ್ಪಣ್ಣ ಭಟ್ಟ ಸುಬ್ರಹ್ಮಣ್ಯನಿಗೆ ಹೇಳುತ್ತಾನೆ. ಹೆಂಡತಿಗೆ ಉಬ್ಬಸರೋಗ, ಮಗಳು ವಯಸ್ಸಿಗೆ ಬಂದಿದ್ದಾಳೆ. ಜ್ವರದ ಗಡ್ಡೆಯಿಂದ ಮಗನ ಹೊಟ್ಟೆ ಡೊಳ್ಳಾಗಿದೆ. ಆರ್ಥಿಕ ಪರಿಸ್ಥಿತಿ ತುಂಬಾ ಹದಗೆಟ್ಟಿದ್ದು, ಸಾಲಗಾರರ ಕಾಟ ಹೆಚ್ಚಾಗಿದ್ದು, ಅಡಿಕೆಗೂ ಸರಿಯಾದ ಬೆಲೆ ಸಿಗುವುದಿಲ್ಲ. ಹೆಂಡತಿಯ ನಗವನ್ನು ಒತ್ತೆಯಿಟ್ಟ ಕುಪ್ಪಣ್ಣಭಟ್ಟ ಬಂದ ಹಣದಲ್ಲಿ ಕೆಲವರಿಗೆ ಮುಂಗಡಕೊಟ್ಟಿದ್ದಾನೆ. ಸಿಡುಕು ಸ್ವಭಾವದಿಂದ ಎಲ್ಲರಲ್ಲೂ ನಿಷ್ಠುರ ಕಟ್ಟಿಕೊಂಡಿದ್ದಾನೆ. ಕುಪ್ಪಣ್ಣಭಟ್ಟನ ಈ ಸ್ವಭಾವದ ಬಗ್ಗೆ ಹೆಂಡತಿಗೆ ಬೇಸರವಿದೆ.

ನಯವಾಗಿ ಮಾತನಾಡುವ ಅಪ್ಪಣ್ಣಭಟ್ಟ ಅಗ್ರಹಾರದ ಬ್ರಾಹ್ಮಣರಿಗೆಲ್ಲ ಬೇಕಾದವನಾಗಿದ್ದಾನೆ. ತೋಟ, ಗದ್ದೆ ಹಾಗೂ ಮನೆಯನ್ನು ಮಾಡಿಕೊಂಡು ಸ್ಥಿತಿವಂತನಾಗಿದ್ದಾನೆ. ಸೂರಿನ ಕೆಳಗೆ ಸೇವಂತಿಗೆಯಿದ್ದು ಅಂಗಳದಲ್ಲಿ ಚಪ್ಪರವಿದೆ. ಮನೆಗೆ ಬಂದವರನ್ನೆಲ್ಲಾ ಉಪಚರಿಸುತ್ತಾನೆ. ಗೋಪಾಲ ಕಮ್ತಿಯ ಅಂಗಡಿಯಲ್ಲಿನ ಬಾಕಿಯನ್ನು ಸಮಯಕ್ಕೆ ಸರಿಯಾಗಿ ಕಟ್ಟುತ್ತಾನೆ. ಗೇಣಿ ವಸೂಲಿಗೆ ಬಂದವರಿಗೆ ಅಡಿಕೆ ಕೊಟ್ಟು, ಊಟ ಹಾಕಿ ಉಪಚರಿಸುತ್ತಾನೆ. ಮಠದ ಶ್ರೀಗುರುಗಳನ್ನು ಮನೆಗೆ ಕರೆಸಿ ಭಿಕ್ಷೆ ಮಾಡಿಸಿ ಬೆಳ್ಳಿ ತಟ್ಟೆಯಲ್ಲಿ ಐವತ್ತು ರೂಪಾಯಿ ಇಟ್ಟು ನಮಸ್ಕರಿಸುತ್ತಾನೆ. ಹೀಗೆ ಸಿಡುಕು ಸ್ವಭಾವದ ಕುಪ್ಪಣ್ಣಭಟ್ಟ ಜನರಿಂದ ದೂರವಾದರೆ, ನಯವಾಗಿ ಮಾತನಾಡುವ ಅಪ್ಪಣ್ಣಭಟ್ಟ ಜನರಿಗೆ ಹತ್ತಿರವಾಗುತ್ತಾನೆ.

ಜೀವನೋಪಾಯಕ್ಕೆಂದು ಬಂದ ಸ್ನೇಹಿತರಿಬ್ಬರು ಪೈಪೋಟಿಗಿಳಿದು ಪ್ರತಿಸ್ಪರ್ಧಿಗಳಾಗುತ್ತಾರೆ. ಕುಪ್ಪಣ್ಣಭಟ್ಟನ ವ್ಯಕ್ತಿತ್ವದಲ್ಲಿನ ದೋಷವನ್ನು ಅರಿತ ಅಪ್ಪಣ್ಣಭಟ್ಟನು ಮಠದ ಗುರುಗಳನ್ನು ಬುಟ್ಟಿಗೆಹಾಕಿಕೊಳ್ಳುತ್ತಾನೆ. ಕುಪ್ಪಣ್ಣಭಟ್ಟನನ್ನು ದೀವಾಳಿಯಾಗಿಸಲು ಪ್ರಯತ್ನಿಸುತ್ತಾನೆ. ಕುಪ್ಪಣ್ಣಭಟ್ಟನು ತಲೆಯೆತ್ತಿ ನಿಲ್ಲಲು ಮಾಡುವ ಪ್ರಯತ್ನವೆಲ್ಲಾ ಅಪ್ಪಣ್ಣಭಟ್ಟನ ವಿರೋಧದಿಂದ ವಿಫಲವಾಗುತ್ತದೆ. ಇಬ್ಬರೂ ತಮ್ಮ ವ್ಯಕ್ತಿತ್ವಗಳಲ್ಲಿನ ಭಿನ್ನತೆಯಿಂದಾಗಿ ಮುಖಾಮುಖಿಯಾಗುತ್ತಾರೆ.

[illegible]

[illegible]

[illegible]

[illegible]

[illegible]

ಕುಪ್ಪಣ್ಣಭಟ್ಟನ ಮನೆಗೆ ಸಾಲ ವಸೂಲಿಗೆ ಬಂದವರನ್ನು ಅಪ್ಪಣ್ಣಭಟ್ಟ ಉಪಚರಿಸಿ ವಿಷಯವನ್ನು ಸಂಗ್ರಹಿಸುತ್ತಾನೆ. ಇವನ ಕುತಂತ್ರದಿಂದ ಕುಪ್ಪಣ್ಣಭಟ್ಟ ದೀವಾಳಿಯಾಗುತ್ತಾನೆ. ಸ್ವಾಭಿಮಾನಿಯಾದ ಕುಪ್ಪಣ್ಣಭಟ್ಟ ಪರಿಸ್ಥಿತಿ ಕೈಮೀರಿದಾಗಲೂ ಹೆದರುವುದಿಲ್ಲ. ಅಪ್ಪಣ್ಣಭಟ್ಟನಿಂದ ಪ್ರೇರೇಪಿತರಾಗಿ ಬಂದ ಸಾಲಗಾರರನ್ನು ಕುಪ್ಪಣ್ಣಭಟ್ಟ ವಿಧ ವಿಧವಾಗಿ ಕೇಳಿಕೊಂಡರೂ ಅವರು ಸುಮ್ಮನಾಗುವುದಿಲ್ಲ. ಕುಪ್ಪಣ್ಣಭಟ್ಟನನ್ನು ಮನೆಯಿಂದ ಹೊರಗೆ ಕೂಡಿಸುತ್ತಾರೆ. ಮನೆಯಲ್ಲಿನ ಸಾಮಾನುಗಳನ್ನು ಹೊರಗೆ ಹಾಕುತ್ತಾರೆ. ಇದರಿಂದ ಕುಪ್ಪಣ್ಣಭಟ್ಟ ಮೌನವಹಿಸುತ್ತಾನೆ. ಇವನ ಮೌನವು ಅಪ್ಪಣ್ಣಭಟ್ಟನನ್ನು ಕರಗಿಸುತ್ತದೆ. "ಒಂದೇ ಸಂಸ್ಕೃತಿಯಲ್ಲಿ ಬೆಳೆದು ಬಂದ ಇಬ್ಬರು, ತಮ್ಮ ವೃತ್ತಿ ವೈಶಿಷ್ಟ್ಯದಿಂದ, ಸ್ವಭಾವದಿಂದ ಬದುಕಿನಲ್ಲಿ ಬೇರೆ ಬೇರೆ ದಾರಿ ಹಿಡಿಯುತ್ತಾರೆ." ೮ ಹೀಗೆ ಸ್ನೇಹಿತರಲ್ಲಿನ ಭಿನ್ನತೆಯನ್ನು ಗಮನಿಸಬಹುದಾಗಿದೆ.

'ಕ್ಲಿಪ್‌ಜಾಯಿಂಟ್' ಕತೆಯಲ್ಲಿ ಕೇಶವ ಹಾಗೂ ಸ್ಟೂಅರ್ಟ್ ವಿರುದ್ಧ ಸ್ವಭಾವದ ವ್ಯಕ್ತಿಗಳಾಗಿದ್ದಾರೆ. ಕೇಶವನು ಜೀವನದ ಜಂಜಾಟದಿಂದ ಬೇಸತ್ತವನಾಗಿದ್ದರೆ, ಸ್ಟೂಅರ್ಟ್ ಜೀವನಕ್ಕೊಂದು ಉದ್ದೇಶವನ್ನು ಸುಖ ದುಃಖವನ್ನು ಬಯಸುವವನು. ಕೇಶವ ಬಯಸುವ ಸುಖೀ ಜೀವನವು ಸ್ಟೂಅರ್ಟ್‌ನಿಗೆ ವಿಶೇಷವಾಗಿ ಕಾಣಿಸುವುದಿಲ್ಲ. ವಿಲಾಸಿ ಜೀವನ ನಡೆಸುವ ಸ್ಟೂಅರ್ಟ್ ಭಾರತದ ಸಾಧು ಸಂತರಿಂದ ಆಕರ್ಷಿತನಾಗಿದ್ದಾನೆ. ಕೇಶವ ಹಾಗೂ ಸ್ಟೂಅರ್ಟ್ ಒಬ್ಬರಲ್ಲಿನ ಕೊರತೆಯನ್ನು ಇನ್ನೊಬ್ಬರಲ್ಲಿ ತುಂಬಿಕೊಳ್ಳಲು ಪ್ರಯತ್ನಿಸುತ್ತಾನೆ.

ಸ್ವದೇಶದಲ್ಲಿ ತಾನು ಮೇಲೇರಲು ಪಟ್ಟಪ್ರಯತ್ನ ವಿಫಲವಾದಾಗ ಕೇಶವನಿಗೆ ಅಸಮಧಾನವಾಗುತ್ತದೆ. ಇಂಗ್ಲೆಂಡಿಗೆ ಬಂದು ವಿಲಾಸಿ ಜೀವನವನ್ನು ಪ್ರಾರಂಭಿಸುತ್ತಾನೆ. ಇಂಗ್ಲೆಂಡಿನ ಜನರ ಸೌಜನ್ಯತೆಯ ಸೋಗು ಕೇಶವನಿಗೆ ವಿಶೇಷವೆನಿಸುತ್ತದೆ. ಭಾರತದ ಸಮಷ್ಟಿ ಜೀವನದ ಬಗ್ಗೆ ಸ್ಟೂಅರ್ಟನಿಗೆ ಗೌರವವಿದೆ. ವಾಸ್ತವ ಬದುಕಿನ ನಿಷ್ಠುರ ಅನುಭವಗಳು ಕೇಶವನ ವಿಚಾರಗಳಿಗೆ ಪ್ರೌಢತೆಯನ್ನು ತಂದಿವೆ. ತನ್ನ ತಮ್ಮ-ತಂಗಿಯರ ಬಗ್ಗೆ ತೀರ್ಮಾನವನ್ನು ಕೈಗೊಳ್ಳುವಾಗ ಅನುಮಾನಕ್ಕೊಳಗಾಗುತ್ತಾನೆ. ಕಷ್ಟಪಡದೆ ಕಾದಂಬರಿಕಾರನಾಗಿ ಹೆಸರು ಮಾಡಬೇಕೆಂಬ ತಮ್ಮನಿಗೆ ಒಲಿಯುವ ಹೆಣ್ಣುಗಳನ್ನು ಕಂಡ ಕೇಶವನಿಗೆ ಸಂಕಟವಾಗುತ್ತದೆ. ತಂಗಿಯರು ಇಂಗ್ಲೆಂಡಿನ ಹುಡುಗಿಯರಂತೆ ಸ್ವಚ್ಛಂದವಾಗಿರಬೇಕೆಂದು ಬಯಸುತ್ತಾನೆ. ಮರುಕ್ಷಣ ತಂಗಿಯರು ಭಾರತೀಯ ಸಂಪ್ರದಾಯಕ್ಕೆ ತಕ್ಕಂತೆ ಬದುಕುವುದೇ ಲೇಸೆಂದುಕೊಳ್ಳುತ್ತಾನೆ.

ಭಾರತದ ಸಮಷ್ಟಿ ಕುಟುಂಬದ ತೊಂದರೆಗಳ ಅರಿವು ಸ್ಟೂಅರ್ಟ್‌ನಿಗಿಲ್ಲ. ಇಂಗ್ಲೆಂಡಿನ ಸಮಾಜದ ಸುಖೀ ಜೀವನದ ಕಲ್ಪನೆಯಲ್ಲಿ ಕೇಶವ ತನ್ನ ದೇಶವನ್ನು ಬಿಟ್ಟು ಬಂದಿದ್ದಾನೆ. ಭಾರತದ ಧೂಳು ತುಂಬಿದ ಬಿಸಿಲನ್ನು ಸ್ಟೂಅರ್ಟ್ ಇಷ್ಟಪಟ್ಟರೆ, ಇಂಗ್ಲೆಂಡಿನ ತಂಪು ಹವೆ ಕೇಶವನಿಗೆ ಹಿಡಿಸುತ್ತದೆ. ಸೀರೆಯುಟ್ಟ ತಾಮ್ರ ವರ್ಣದ ಭಾರತದ ಹುಡುಗಿಯರನ್ನು ಸ್ಟೂಅರ್ಟ್ ಮೆಚ್ಚಿದರೆ, ತುಂಡು ಬಟ್ಟೆ ತೊಡುವ ಬಿಳಿಯ ಹುಡುಗಿಯರನ್ನು ಕೇಶವ ಮೆಚ್ಚುತ್ತಾನೆ. ಕತೆಯ ಉದ್ದಕ್ಕೂ ಕೇಶವ ಹಾಗೂ ಸ್ಟೂಅರ್ಟ್ ಒಬ್ಬರ ಮೇಲೆ ಇನ್ನೊಬ್ಬರು ಪ್ರಭಾವ ಬೀರಲು ಪ್ರಯತ್ನಿಸುತ್ತಾರೆ.

ಬೇರೆ ಬೇರೆ ಪರಿಸರದಿಂದ ಬಂದ ಕೇಶವ ಹಾಗೂ ಸ್ಟೂಅರ್ಟ್ ತಮ್ಮಲ್ಲಿನ ಕೊರತೆಗಳನ್ನು ಗುರುತಿಸಿಕೊಳ್ಳುತ್ತಾರೆ. ಪರಸ್ಪರರು ಬೇರೆಯವರ ಜೀವನದಿಂದ ಆಕರ್ಷಿತರಾಗುತ್ತಾರೆ. ಭಾರತಕ್ಕೆ ಬಂದು ನೆಲೆಸುವ ಸಾಧ್ಯತೆಯಿಲ್ಲದ ಸ್ಟೂಅರ್ಟ್ ಇಂಗ್ಲೆಂಡಿನಲ್ಲಿದ್ದು ಭಾರತದ ಜೀವನವನ್ನು ಇಷ್ಟಪಡುತ್ತಾನೆ.

[illegible]

[illegible]

[illegible]

[illegible]

[illegible]

[illegible]

[illegible]

ಭಾರತವನ್ನು ಬಿಟ್ಟು ಇಂಗ್ಲೆಂಡಿಗೆ ಬಂದರೂ ಕೇಶವಗೆ ಅಲ್ಲೂ ನೆಮ್ಮದಿ ಸಿಗುವುದಿಲ್ಲ. ಹೀಗಾಗಿ ಈ ಇಬ್ಬರೂ ವ್ಯಕ್ತಿಗಳ ಪ್ರಜ್ಞೆಗೂ ಪರಿಸರದ ಸಾಂಸ್ಕೃತಿಕ ಸಂಗತಿಗಳು ಹೊಂದಿಕೊಳ್ಳುವುದಿಲ್ಲ ಈ ಕಾರಣಕ್ಕಾಗಿ ಸಂಘರ್ಷವೇರ್ಪಡುವುದನ್ನು ಕಾಣಬಹುದು.

'ಪ್ರಸ್ತ' ಕತೆಯಲ್ಲಿ ವೆಂಕಮ್ಮನ ವ್ಯಕ್ತಿತ್ವಕ್ಕೆ ಶಾಮಭಟ್ಟನ ವ್ಯಕ್ತಿತ್ವಕ್ಕೂ ಅಂತರವಿದೆ. ಶಾಮಭಟ್ಟನಿಗೆ ಸೀತಕ್ಕನ ಒಡೆದ ಸಂಸಾರವನ್ನು ಒಂದು ಮಾಡುವ ಹಂಬಲವಿದೆ. ಪುಂಡರೀಕ ನೇತ್ರಾವತಿಯ ಬಗ್ಗೆಯೂ ಕಾಳಜಿ ಇದೆ. ವೆಂಕಮ್ಮ ಹಾಗೂ ಶಾಮಭಟ್ಟ ಒಂದೇ ಕಾಲ ಘಟ್ಟದಲ್ಲಿ ಬೆಳೆದು ಬಂದವರಾಗಿದ್ದರೂ ಇಬ್ಬರ ದೃಷ್ಟಿಕೋನದಲ್ಲಿ ವ್ಯತ್ಯಾಸವಿದೆ. ಮಗಳ ವಿಷಯದಲ್ಲಿ ಧನಾತ್ಮಕವಾಗಿ ಆಲೋಚಿಸುವ ವೆಂಕಮ್ಮ ಸೊಸೆಯ ವಿಷಯದಲ್ಲಿ ಋಣಾತ್ಮಕವಾಗಿ ಪ್ರತಿಕ್ರಿಯಿಸುತ್ತಾಳೆ.

ಗಂಡನಿಂದ ದೂರಾಗಿ ಕೊಟ್ಟಿಗೆಯಲ್ಲಿ ಕಾಲಕಳೆಯುವ ಸೀತಕ್ಕನಿಗೆ ಧನಗಳ ಜೊತೆಗೆ ತನ್ನಷ್ಟಕ್ಕೆ ತಾನೇ ಮಾತನಾಡುವ ರೂಢಿ ಇದೆ. ಹಿರಿಯರ ಒಪ್ಪಿಗೆಯಂತೆ ಮುಪ್ಪಿನಲ್ಲಿ ಪ್ರಸ್ತದ ಶಾಸ್ತ್ರಕ್ಕೆ ಸೀತಕ್ಕೆ ಒಪ್ಪಿಕೊಳ್ಳುತ್ತಾಳೆ. ಪ್ರಸ್ತದ ದಿನ ತಾನು ಇಟ್ಟುಕೊಂಡ ಸೂಳೆಗಿಂತ ತುಂಬಾ ಚಿಕ್ಕವಳೆಂದುಕೊಂಡು ಸೀತಕ್ಕನ ಕೈಯನ್ನು ಸೀನಪ್ಪಯ್ಯ ಎಳೆಯುತ್ತಾನೆ. ಆಗ ಒದ್ದುಕೊಳ್ಳುತ್ತಾ ಅಲ್ಲಿಂದ ಓಡಿ ಸೀತಕ್ಕ ನಡುಮನೆಗೆ ಬರುತ್ತಾಳೆ. ಜೀವನದ ಸಂಧ್ಯಾಕಾಲದಲ್ಲಿ ಸೀನಪ್ಪಯ್ಯ ರಾಜಿಯಾಗ ಬಯಸಿದಾಗ ಸೀತಕ್ಕ ರಾಜಿಯಾಗುವುದಿಲ್ಲ. "ರೂಢಿ ಜಾಡ್ಯವಾಗಿ ಬಿಟ್ಟಿರುವ ಪತಿ ವಂಚಿತ ಪತ್ನಿಯ ಭಾವಾತಿರೇಕವನ್ನಿಲ್ಲಿ ಲೇಖಕರು ತೊಡೆದು ಹಾಕಿದ್ದಾರೆ."[೯] ಶಾಮಭಟ್ಟನಿಗೆ ಸೀತಕ್ಕನ ದೈನ್ಯತೆಯ ಬಗೆಗೆ ಅನುಕಂಪವಿರುವಂತೆ ನೇತ್ರಾವತಿಯ ಅಸಹಾಯಕತೆಯ ಬಗೆಗೆಗೂ ಮರುಕವಿದೆ. ಮಗಳ ಸಮಸ್ಯೆಗೆ ಮಾತ್ರ ಸ್ಪಂದಿಸುವ ವೆಂಕಮ್ಮ ಸೊಸೆಯ ಗುಣವನ್ನು ದೂರುತ್ತಾಳೆ. ಹೀಗೆ ವೆಂಕಮ್ಮ–ಶ್ಯಾಮಭಟ್ಟ, ಸೀತಕ್ಕ– ಸೀನಪ್ಪಯ್ಯ ಹಾಗೂ ಪುಂಡರೀಕ – ನೇತ್ರಾವತಿ ಇವರೆಲ್ಲರ ವ್ಯಕ್ತಿತ್ವಗಳಲ್ಲಿ ಭಿನ್ನತೆ ಇದೆ. ಹೀಗೆ ವ್ಯಕ್ತಿಗಳ ಪ್ರಜ್ಞಾವಲಯದಲ್ಲಿ ನಡೆಯುವ ತಳಮಳಗಳಿಗೂ ಸಾಂಸ್ಕೃತಿಕ ಪರಿಸರದ ತಳಮಳಗಳಿಗೂ ಒಂದು ತೆರನಾದ ಸಂಘರ್ಷ ನಡೆದೇ ನಡೆಯುತ್ತದೆ. ಬಹುಶಃ ಸೃಜನಶೀಲ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲೆಳಸುವ ಎಲ್ಲಾ ಮಾನವ ಜೀವಿಗಳಿಗೂ ಇದು ಅನಿವಾರ್ಯವಾಗಬಹುದೆಂದೆನಿಸುತ್ತದೆ.

'ಸಂಸ್ಕಾರ'ಕಾದಂಬರಿಯಲ್ಲಿ ಪ್ರಾಣೇಶಾಚಾರ್ಯ ಮತ್ತು ನಾರಣಪ್ಪ ಎರಡು ಪ್ರವೃತ್ತಿಗಳನ್ನು ಪ್ರತಿನಿಧಿಸುತ್ತಾರೆ. ಈ ಪ್ರವೃತ್ತಿಗಳ ನಡುವಿನ ತಾಕಲಾಟವೇ ಕಾದಂಬರಿಯ ವಸ್ತುವಾಗಿದೆ. ಪ್ರಾಣೇಶಾಚಾರ್ಯನು ದೇವರ ದಯವನ್ನು ಸಂಪಾದಿಸಲು ರೋಗಿಯಾದ ಹೆಂಡತಿಯ ಸೇವೆಯನ್ನು ಮಾಡುತ್ತಾ ಗೃಹಸ್ಥ ಧರ್ಮವನ್ನು ಪಾಲಿಸುತ್ತಾನೆ. ಬ್ರಾಹ್ಮಣ್ಯದ ರಕ್ಷಣೆಯನ್ನು ಮಾಡುವುದರ ಜೊತೆಗೆ ಅಗ್ರಹಾರದ ಎಲ್ಲ ಬ್ರಾಹ್ಮಣರ ಸಮಸ್ಯೆಗಳನ್ನು ಪರಿಹರಿಸುವತ್ತ ಗಮನಹರಿಸುತ್ತಾನೆ. ಉದಾತ್ತ ಗುಣಗಳ ಅವನು ತ್ಯಾಗವನ್ನು ಪ್ರತಿನಿಧಿಸಿದರೆ, ದುಶ್ಚಟಗಳನ್ನು ರೂಢಿಸಿಕೊಂಡ ನಾರಣಪ್ಪ ಭೋಗ ಲಾಲಸೆಯನ್ನು ಪ್ರತಿನಿಧಿಸುತ್ತಾನೆ.

ನಾರಣಪ್ಪ ಸುತ್ತಲಿನವರನ್ನು ತನ್ನಂತೆ ಮಾಡುವ ಪ್ರಯತ್ನ ಮಾಡಿದಂತೆ ಪ್ರಾಣೇಶಾಚಾರ್ಯನು ನಾರಣಪ್ಪನನ್ನು ಬದಲಿಸಲು ಪ್ರಯತ್ನಿಸುತ್ತಾನೆ. ನಾರಣಪ್ಪನ ದುರ್ನಡತೆಯನ್ನು ಸಹಿಸುತ್ತಾ ಬಂದ ಪ್ರಾಣೇಶಾಚಾರ್ಯನಿಗೆ ಅವನ ಬಗೆಗೆ ಅನುಕಂಪವಿದೆ. ಪ್ರಾಣೇಶಾಚಾರ್ಯನು ಅಗ್ರಹಾರದ ಉಳಿದೆಲ್ಲ ಬ್ರಾಹ್ಮಣರಿಗಿಂತ ಉತ್ತಮಚರಿತನೆಂದು ನಾರಣಪ್ಪನಿಗೆ ಗೌರವವಿದೆ. ಪ್ರಾಣೇಶಾಚಾರ್ಯನನ್ನು ತನ್ನ ಮಾತಿನಿಂದ

ಸೋಲಿಸಲೆತ್ನಿಸಿದರೂ ಒಳಗೊಳಗೆ ನಾರಣಪ್ಪ ಭಯ ಪಡುತ್ತಿರುತ್ತಾನೆ. ಇವರಿಬ್ಬರ ಸ್ವಭಾವದಲ್ಲಿ ವಿರೋಧಾಭಾಸವಿದ್ದಂತೆ ಪರಸ್ಪರ ವ್ಯಕ್ತಿತ್ವದಲ್ಲೂ ದ್ವಂದ್ವವಿದೆ.

ಪ್ರಾಣೇಶಾಚಾರ್ಯನ ಹೆಂಡತಿ ಸದಾ ರೋಗಿಯಾಗಿದ್ದರಿಂದ ಸ್ತ್ರೀಸುಖವೇನೆಂದು ಅವನಿಗೆ ತಿಳಿದಿರುವುದಿಲ್ಲ. ಅಗ್ರಹಾರದ ಉಳಿದ ಬ್ರಾಹ್ಮಣರು ಅನ್ನಮೂಲ ಕಾಂಚನ ಮೂಲವಾದ ಸರ್ವ ಪಾಪಗಳನ್ನು ಮಾಡುವ ಪರಮ ಪಾಪಿಗಳಾಗಿದ್ದಾರೆ. ತಾವು ಮಾಡುವ ಪಾಪವನ್ನು ಪ್ರಾಣೇಶಾಚಾರ್ಯನ ಪುಣ್ಯ ಮುಚ್ಚುತ್ತದೆಂದು ಮತ್ತಷ್ಟು ಪಾಪಗಳನ್ನು ಮಾಡಲು ಹಿಂಜರಿಯುವವರಲ್ಲ ಹೀಗೆ ಆಚಾರ್ಯನ ಪುಣ್ಯ ಏರಿದಷ್ಟು ಅಗ್ರಹಾರದ ಬ್ರಾಹ್ಮಣರ ಪಾಪವೂ ಹೆಚ್ಚುತ್ತಾ ಹೋಗುತ್ತದೆ. ತನ್ನ ಉತ್ತಮತೆಯ ಬಗೆಗೆ ಗಮನಹರಿಸದ ಪ್ರಾಣೇಶಾಚಾರ್ಯ ನನ್ನನ್ನು ಬದಲಿಸುವ ಹಠ ತೊಟ್ಟಿದ್ದಾನೆ. ಸುತ್ತಲಿನ ಜನರಿಗೂ ಒಳ್ಳೆಯದಾಗಲೆಂಬ ಬಯಕೆ ಪ್ರಾಣೇಶಾಚಾರ್ಯನದು. ಇದು ಕೇವಲ ತಾವು ನಂಬಿದ್ದ ಮೌಲ್ಯಗಳನ್ನಾಧರಿಸಿದೆಯೇ ಹೊರತು ಅವನ ಅನುಭವದಿಂದಲ್ಲ ಎಂದುಕೊಂಡ ನಾರಣಪ್ಪ ತನ್ನ ಜೀವನವನ್ನು ಸಮರ್ಥಿಸಿಕೊಂಡಿರುತ್ತಾನೆ. ಆದರೆ ಸಾಯುವ ಸಂದರ್ಭದಲ್ಲಿ ತನ್ನ ವ್ಯಕ್ತಿತ್ವದಲ್ಲಿ ದ್ವಂದ್ವವನ್ನು ನಾರಣಪ್ಪ ಎದುರಿಸುತ್ತಾನೆ. ದೇವರನ್ನು ನಂಬದ ಅವನು ಸಾಯುವಾಗ ದೇವರ ನಾಮಸ್ಮರಣೆ ಮಾಡುತ್ತಾನೆ.

ನಾರಣಪ್ಪನನ್ನು ಬದಲಿಸುತ್ತೇನೆಂದುಕೊಂಡಿದ್ದ ಪ್ರಾಣೇಶಾಚಾರ್ಯನು ಅನಿವಾರ್ಯವಾಗಿ ತಾನೇ ಬದಲಾಗುತ್ತಾನೆ. ನಾರಣಪ್ಪನನ್ನು ಪ್ರತಿಸಾರಿ ಎದುರಿಸುವಾಗಲೂ ಗೊಂದಲಗೊಳ್ಳುತ್ತಿದ್ದ ಪ್ರಾಣೇಶಾಚಾರ್ಯನು ಚಂದ್ರಿಯ ಸಂಗದಿಂದಾಗಿ ಮತ್ತಷ್ಟು ಸಂದಿಗ್ಧವನ್ನು ಎದುರಿಸಬೇಕಾಗುತ್ತದೆ. ತನ್ನ ವ್ಯಕ್ತಿತ್ವದಲ್ಲೇ ಸಂದೇಹ ಪಡುತ್ತಾನೆ. ಮನುಷ್ಯ ಸ್ವಾದೀನ ತಪ್ಪುವುದು ಸಾಧ್ಯವಿರುವುದರಿಂದಲೇ ಅವನ ನಿಶ್ಚಯಕ್ಕೆ ಬೆಲೆಯಿದೆ. ನಮ್ಮ ನಿಶ್ಚಯದ ಮೂಲಕ ನಮ್ಮನ್ನು ನಾವು ರೂಪಿಸಿಕೊಳ್ಳುತ್ತೇವೆ ಈ ಘಟ್ಟಕ್ಕೊಂದು ರೂಪುರೇಷೆ ತರುತ್ತೇವೆ. ನಾರಣಪ್ಪ ಹೇಗೆ ಬದುಕಬೇಕೆಂದುಕೊಂಡಿದ್ದನೋ ಹಾಗೇ ಬದುಕನ್ನು ನಡೆಸಿದ. ಇನ್ನೊಂದಾಗಬೇಕೆಂದು ಬಯಸಿದ ನಾನು ತಿರುವಿನಲ್ಲಿ ತಕ್ಷಣ ತಿರುಗಿಬಿಟ್ಟೆ, ತಿರುಗಿಬಿಟ್ಟಿದ್ದರ ಜವಾಬ್ದಾರಿಯು ನನ್ನದು ಎಂಬುದು ಸ್ಪಷ್ಟವಾಗುವ ತನಕ ನನಗೆ ಸ್ವಾತಂತ್ರ್ಯವಿಲ್ಲ. ಇದರಿಂದಾಗಿ ಜೀವನಕ್ಕೆ ದ್ವಂದ್ವ ನುಗ್ಗಿಬಂದಿದೆ. ಎರಡು ಸತ್ಯಗಳ ನಡುವೆ ತ್ರಿಶಂಕುವಾದೆ. ಋಷಿಗಳಿಗೆ ಇಂತಹ ಜೀವನದ ಇಂತಹ ಅನುಭವಗಳನ್ನು ದ್ವಂದ್ವವಿಲ್ಲದೆ ಎದುರಿಸಲು ಸಾಧ್ಯವಾಗಿತ್ತೆ ಇಲ್ಲವೇ ಇನ್ನುವ ಅನುಮಾನವಾಗುತ್ತದೆಂದು ಪ್ರಾಣೇಶಾಚಾರ್ಯ ತನ್ನಲ್ಲೇ ತಾನು ಯೋಚಿಸುತ್ತಾನೆ.

ಬಾಲ್ಯ ಸ್ನೇಹಿತ ಮಹಾಬಲನ ಜೀವನಕ್ರಮವನ್ನು ಜರಿದು ಅವನಿಗೆ ವಿರುದ್ಧವಾದ ಜೀವನಕ್ರಮವನ್ನು ರೂಪಿಸಿಕೊಂಡ ಪ್ರಾಣೇಶಾಚಾರ್ಯನಿಗೆ ನಾರಣಪ್ಪ ಸವಾಲಾಗಿರುವುದನ್ನು ಚಿಂತಿಸಿದಾಗ ಮಹಾಬಲನಿಂದ ನನಗೆ ಆದ ನಿರಾಶೆ ನನ್ನಲ್ಲೇ ಉಳಿದುಬಿಟ್ಟಿದೆ ಅಪ್ರತ್ಯಕ್ಷವಾಗಿ ನಾರಣಪ್ಪನಲ್ಲಿ ಮಹಾಬಲನನ್ನು ನಾನು ಕಂಡಿರಬೇಕು ಹಾಗಾಗಿ ನಾರಣಪ್ಪನನ್ನು ಗೆಲ್ಲಲು ಪ್ರಯತ್ನಿಸಿ ಸೋತೆ. ಯಾವುದರ ವಿರುದ್ಧ ಹೋರಾಡುತ್ತ ಬಂದೆನೋ ಅದೇ ನಾನಾಗಿಬಿಟ್ಟೆ. ಯಾಕೆಂದು ಹುಡುಕಲು ಹೋದರೆ ಮತ್ತೆಲ್ಲ ಗಂಟು ಕಟ್ಟಿಕೊಂಡು ಬಿಡುತ್ತದೆಂದು ಪರಿತಪಿಸುತ್ತಾನೆ. ಶೂದ್ರಳಾದ ಚಂದ್ರಿಯು ನಾರಣಪ್ಪನ ಶವಸಂಸ್ಕಾರವನ್ನು ನೆರವೇರಿಸುವುದರ ಮುಖಾಂತರ ಅಗ್ರಹಾರದ ಪ್ರಜ್ಞಾವಂತ ಬ್ರಾಹ್ಮಣರು ನಿಟ್ಟುಸಿರು ಬಿಡುವಂತೆ ಮಾಡುತ್ತಾಳೆ.

'ಭಾರತೀಪುರ'ಕಾದಂಬರಿಯಲ್ಲಿ ತನ್ನ ವ್ಯಕ್ತಿತ್ವ ಗಟ್ಟಿಯಾಗಬೇಕೆಂದು ಜಗನ್ನಾಥ ಬೌದ್ಧಿಕ ಮಟ್ಟದಲ್ಲಿ ಹಂಬಲಿಸುತ್ತಾನೆ. ಕ್ರಿಯೆಯಲ್ಲಿ ತೊಡಗುವಾಗ ದ್ವಂದ್ವವನ್ನೆದುರಿಸುತ್ತಾನೆ. ಅಹಂಕಾರದಿಂದ ಮುಕ್ತನಾಗದೆ ಈ ಕ್ರಿಯೆಯಲ್ಲಿ ಸಫಲತೆಯನ್ನು ಸಾಧಿಸಲು ಸಾಧ್ಯವಿಲ್ಲ ಎಂಬುದು ಜಗನ್ನಾಥನ ಗಮನಕ್ಕೆ ಬರುತ್ತದೆ.

ಜಗನ್ನಾಥನಿಗೆ ಭಾರತೀಪುರದ ಜನರ ಮನಸ್ಸಿನಲ್ಲಿ ಉಳಿಯಬೇಕೆಂಬ ಆಸೆಯಿದೆ. ಯಾವುದೇ ಯೋಚನೆಯಿಲ್ಲದೇ ಬದುಕುವ ಹರಿಜನರಲ್ಲಿ ಸ್ವತಂತ್ರವಾಗಿ ವಿಚಾರ ಮಾಡುವ ಆಲೋಚನಾಶಕ್ತಿಯನ್ನು ಅವರಲ್ಲಿ ತುಂಬಬೇಕು. ಇದರಿಂದ ವ್ಯವಸ್ಥೆಯಲ್ಲಿ ಬದಲಾವಣೆಯಾಗಿ ತನ್ನ ವ್ಯಕ್ತಿತ್ವಕ್ಕೊಂದು ಘನತೆ ಬರುತ್ತದೆ ಎಂದು ಜಗನ್ನಾಥ ಯೋಚಿಸುತ್ತಾನೆ. ಜಗನ್ನಾಥನಿಗೆ ಭಾರತೀಪುರದ ಜನರ ಜೊತೆಗೆ ಸಹಜವಾದ ಸಂಬಂಧವನ್ನು ಸ್ಥಾಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ತನ್ನ ಕ್ರಿಯೆಗೆ ಇನ್ನಷ್ಟು ತೀವ್ರತೆಯನ್ನು ತರುವ ಪ್ರಯತ್ನದಲ್ಲಿ ಸಾಲಿಗ್ರಾಮವನ್ನು ಹರಿಜನರ ಕೈಯಲ್ಲಿ ಮುಟ್ಟಿಸುವ ಯೋಜನೆಯನ್ನು ಹಾಕಿಕೊಳ್ಳುತ್ತಾನೆ. ಆಗ ಜಗನ್ನಾಥನಿಗೆ ತಾನಿದನ್ನು ಮಾಡುತ್ತಿರುವುದು ನನಗಾಗಿ, ಬ್ರಾಹ್ಮಣತ್ವದ ವಿಸರ್ಜನೆಗಾಗಿಯೊ ಅಥವಾ ಹರಿಜನರಿಗಾಗಿಯೋ ಎಂದು ಗೊಂದಲಕ್ಕೊಳಗಾಗುತ್ತಾನೆ.

"ತನ್ನ ಜಮೀನ್ದಾರಿಕೆಯನ್ನು, ಗತ್ತು, ಠೀವಿಯನ್ನು ಬಿಟ್ಟುಕೊಡದ ಪರೋಕ್ಷವಾಗಿ ಮೇಲುವರ್ಗಕ್ಕೆ ಗಟ್ಟಿಯಾಗಿ ಅಂಟಿಕೊಳ್ಳುವ ತನ್ನ ಪರಿಸರ ಯಾರನ್ನೂ ಹೃದಯ ಮುಟ್ಟಿ ಪ್ರೀತಿಸದ , ಅರ್ಥರಹಿತ ವೈಯಕ್ತಿಕ ತೊಳಲಾಟದಿಂದ, ಕನಸುಗಾರಿಕೆಯಿಂದ ಸರಿದು ಹೊರಬರಲಾರದ ಸಾಕಷ್ಟು ದುರ್ಬಲ ಮನಸ್ಸಿನ ಯುವಕ." [೧೦] ಕ್ರಿಯೆಯ ಬಗೆಗೆ ತನ್ನದೇ ಆದ ಕಲ್ಪನೆಯನ್ನು ಮಾಡಿಕೊಂಡಿರುವ ಜಗನ್ನಾಥ ಯಾವುದರ ಅನುಭವವೂ ಇರದ ಅವನು ಕೊನೆಗೆ ಅನಿರೀಕ್ಷಿತ ಘಟನೆಯಿಂದ ಸೋಲುತ್ತಾನೆ. ಪ್ರಾಮಿಸರಿ ನೋಟುಗಳನ್ನು ಹರಿದು ಹಾಕುವ ಜಗನ್ನಾಥನಿಗೆ ಸಂಪೂರ್ಣ ಆಸ್ಥಿಯನ್ನು ತೊರೆಯಲಾಗುವುದಿಲ್ಲ. ವರ್ಗ ಅಸಮಾನತೆಯಿಂದಾಗಿ ಹರಿಜನರಿಗೆ ಹತ್ತಿರವಾಗುವುದಿಲ್ಲ. ಒಂದುವೇಳೆ ತನ್ನ ಲೆಖ್ಖಾಚಾರದಂತೆ ಹರಿಜನರು ಉಳಿದವರೊಡನೆ ಬಂಡಾಯ ಮಾಡಿ ಮಂಜುನಾಥನ ದೇವಸ್ಥಾನದ ಪ್ರವೇಶ ಮಾಡಿಬಿಟ್ಟರೆ, ಒಂದು ವರ್ಗ ಇನ್ನೊಂದು ವರ್ಗದ ಜೊತೆ ಸಂಘರ್ಷಕ್ಕೆ ತೊಡಗುತ್ತದೆ. ಈ ಸಂಘರ್ಷದಿಂದ ಮಂಜುನಾಥನ ಪ್ರಾಬಲ್ಯಕ್ಕೆ ಧಕ್ಕೆಯಾಗಿ ಅವರ ನಂಬಿಕೆಯು ಹುಸಿಯಾದಾಗ ಇಬ್ಬರಲ್ಲಿನ ಅಸಮಾನತೆ ಇರಲಾರದೆಂದು ಜಗನ್ನಾಥ ಯೋಚಿಸಿ ಹರಿಜನರನ್ನು ದೇವಸ್ಥಾನದೊಳಕ್ಕೆ ಕಾಲಿರುಸುವ ಯೋಜನೆಯೊಂದನ್ನು ರೂಪಿಸಿಕೊಳ್ಳುತ್ತಾನೆ. ಇದರ ಪೂರ್ವ ತಯಾರಿಗಾಗಿ ಹರಿಜನರಿಗೆ ಅಕ್ಷರಾಭ್ಯಾಸದ ಬಗೆಗೆ, ಅರಿವೆಯನ್ನು ತಂದುಕೊಡುವ ಬಗೆಗೆ ಹಾಗೂ ಅವರ ಅನೇಕ ಅವಶ್ಯಕತೆಗಳ ಬಗೆಗೆ ಗಮನಹರಿಸುತ್ತಾನೆ. ಇದರಿಂದಲೂ ಜಗನ್ನಾಥನಿಗೆ ಹರಿಜನರಿಗೆ ಹತ್ತಿರವಾಗುವ ಅನುಭವವಾಗುವುದಿಲ್ಲ.

ಜಗನ್ನಾಥ ದುರ್ಬಲ ಮನಸ್ಸಿನ ಸೂಕ್ಷ್ಮ ಪ್ರಜ್ಞೆಯ ವ್ಯಕ್ತಿಯಾಗಿದ್ದು ತನ್ನ ವ್ಯಕ್ತಿತ್ವದಲ್ಲಿ ದ್ವಂದ್ವವನ್ನು ಎದುರಿಸುತ್ತಾನೆ. ಅವನು ಸಾಮಾಜಿಕನಾಗ ಬಯಸಿ ಮಾನಸಿಕ ನೆಮ್ಮದಿಯನ್ನು ಕಳೆದುಕೊಳ್ಳುತ್ತಾನೆ. ಬ್ರಾಹ್ಮಣ ಪ್ರಜ್ಞಾವಂತ ಯುವಕ ಜಗನ್ನಾಥ ತನ್ನ ಪ್ರಜ್ಞಾವಲಯದಲ್ಲೇ ಯೋಚಿಸುವವನು ಆಮೂಲಕ ಹರಿಜನರ ಬದುಕನ್ನು ನೋಡುವಂಥವನಾಗಿದ್ದಾನೆ. ಅವರು ಬದಲಾಗಬೇಕೆಂಬ ಅಪೇಕ್ಷೆಯುಳ್ಳವನು. ಆದರೆ ಇಲ್ಲಿ ಹರಿಜನರ ನಿಲುವೇ ಬೇರೆಯಾಗಿದ್ದು ಅವರು ಬಾಳಿ ಬದುಕುವ ಪರಿಸರದಲ್ಲಿ ಈಗಾಗಲೇ ಒಂದು ನೆಮ್ಮದಿಯನ್ನು ಕಂಡುಕೊಂಡಿದ್ದಾರೆ. ಅಲ್ಲದೇ ತಾವಿರುವ ಪರಿಸರಕ್ಕೆ ತಮ್ಮನ್ನು ಒಪ್ಪಿಸಿಕೊಂಡಿದ್ದಾರೆ. ಇವರು ಸಾಲಿಗ್ರಾಮವನ್ನು

[illegible]

[illegible]

[illegible]

[illegible]

ಮುಟ್ಟುವುದು, ದೇವಸ್ಥಾನಕ್ಕೆ ಹೋಗಲು ಮುಂದಾಗುವುದು ಜಗನ್ನಾಥನ ಮೇಲಿನ ಭಯದಿಂದ ಮತ್ತು ಅವನು ಕೊಡುವ ಹಣದ ಆಸೆಯಿಂದ ಎಂಬುದು ಸ್ಪಷ್ಟವಾಗಿದೆ. ಹೀಗೆ ಜಗನ್ನಾಥನ ಪ್ರಜ್ಞೆಯಲ್ಲಿನ ವಿಚಾಗಳಿಗೂ ಹರಿಜನರ ಪರಿಸರದ ಆಲೋಚನೆಗಳ ನಡುವೆ ಅಂತರವಿರುವುದರಿಂದ ಸಂಘರ್ಷವೇರ್ಪಟ್ಟಿದೆ.

'ಅವಸ್ಥೆ'ಕಾದಂಬರಿಯಲ್ಲಿ ಕೃಷ್ಣಪ್ಪ ಬದುಕಿನ ಕ್ಷುದ್ರತೆಗಳನ್ನು ಮೀರಿ ನಿಲ್ಲಲು ಹೊರಟವನು. ಅದನ್ನು ಆತ್ಮವಿಮರ್ಶೆಯಲ್ಲಿ ಸಾಧಿಸಲು ಹೊರಡುತ್ತಾನೆ. ತನ್ನ ವ್ಯಕ್ತಿತ್ವದ ಸಮಗ್ರ ಬೆಳವಣಿಗೆಗಾಗಿ ಪ್ರಜ್ಞಾಪೂರ್ವಕವಾಗಿ ಸಮಸ್ಯೆಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಸುತ್ತಲಿನ ಕ್ಷುದ್ರತೆ ತನ್ನನ್ನು ನಾಶ ಮಾಡುತ್ತದೆಂದುಕೊಂಡಾಗ ಗೊಂದಲಕ್ಕೊಳಗಾಗುತ್ತಾನೆ. ಕೃಷ್ಣಪ್ಪನ ಆತ್ಮವಿಮರ್ಶೆಯು ಹಲವು ಸಲ ಅತಿರೇಕಕ್ಕೆ ತಿರುಗಿ ತನ್ನನ್ನು ತಾನು ಸೂಕ್ಷ್ಮವಾಗಿ ಸಮರ್ಥಿಸಿಕೊಳ್ಳುವ ಉಪಾಯವಾಗುತ್ತದೆ. ಅವನು ತನ್ನ ದೌರ್ಬಲ್ಯವನ್ನು ಗುರುತಿಸಿಕೊಳ್ಳುತ್ತಿರುವುದಕ್ಕೆ ಖುಷಿಪಟ್ಟು ಆ ದೌರ್ಬಲ್ಯವನ್ನು ಮೀರದ ಅಸಾಮರ್ಥ್ಯವನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತಾನೆ. ತನ್ನ ಕೋಪದಿಂದ ಸುತ್ತಲಿನ ವಾತಾವರಣದಲ್ಲಿ ಬದಲಾವಣೆಯಾಗದಿದ್ದಾಗ ಬೇರೆ ಮಾರ್ಗವಿರಬಹುದೆಂದುಕೊಳ್ಳುತ್ತಾನೆ.

ತಾನು ಕ್ರೂರವಾಗಿ ನಡೆದುಕೊಂಡಾಗ ಹೆಂಡತಿ ಶಾಂತವಾಗಿ ಸಹಿಸಿಕೊಂಡಿರುವುದನ್ನು ಕಂಡ ಕೃಷ್ಣಪ್ಪನಿಗೆ ತನ್ನ ವ್ಯಕ್ತಿತ್ವವೇ ಪೊಳ್ಳಾಗಿಬಿಡುತ್ತದೆಂಬ ಭಯದಿಂದ ಹಲುಬುತ್ತಾನೆ. ಕ್ರಾಂತಿಕಾರಿ ಕೃಷ್ಣಪ್ಪ ಹಠವಾದಿಯಾಗಿದ್ದಾನೆ. ಬದುಕಿನ ಕ್ಷುದ್ರತೆಯನ್ನು ಗೆಲ್ಲಬೇಕೆಂಬ ಬಯಕೆಯಿದೆ. ಊನಗೊಂಡ ದೇಹದ ಮಧ್ಯೆಯೂ ಅವನು ಈ ಹಠದಲ್ಲಿ ಮೆರೆಯುತ್ತಾನೆ. ಹಠಮಾರಿತನದ ಜೊತೆಗೆ ಬೆಳೆದುಬಂದ ಕೋಪದ ಮೂಲಕ ಸುತ್ತಲಿನ ಜನರ ಮೇಲೆ ತನ್ನ ಅಧಿಪತ್ಯ ಸ್ಥಾಪಿಸಲು ಯತ್ನಿಸುತ್ತಾನೆ. ಇದು ಅವನ ಬಾಲ್ಯದಿಂದಲೂ ನಡೆದುಬಂದಿದೆ. ತನ್ನ ದೇಹ ಊನವಾದಾಗ ಸೀತೆಯು ನಡೆಸುವ ಶುಶ್ರೂಷೆಯು ಕೃಷ್ಣಪ್ಪನಿಗೆ ಸಹಿಸಲಸಾಧ್ಯವೆನಿಸುತ್ತದೆ. ತನ್ನ ಅಸಹಾಯಕತೆಯನ್ನು ಒಪ್ಪಿಕೊಳ್ಳಲು ಅವನ ಗರ್ವ ಅಡ್ಡಬರುತ್ತದೆ. ಈ ಹೆಂಗಸು ಸೇವೆಯಲ್ಲಿ ತನ್ನನ್ನು ಗೆಲ್ಲುತ್ತಾಳೆ ಎಂದು ಉರಿಯುತ್ತಾನೆ. ತನ್ನನ್ನು ತಾನು ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿರುವ ಕೃಷ್ಣಪ್ಪನ ಅಸಹಾಯಕತೆಯನ್ನು ವೀರಣ್ಣ ಮೊದಲಾದವರು ತಮ್ಮ ಉಪಯೋಗಕ್ಕೆ ಬಳಸುತ್ತಾರೆ.

ಕೊನೆಗೆ ಕೃಷ್ಣಪ್ಪ ತನ್ನ ಗರ್ವವನ್ನು ಗೆಲ್ಲುವುದಿಲ್ಲ. ತನ್ನ ಎಲ್ಲಾ ಕೆಲಸಗಳನ್ನು ತಾನೇ ಸಮರ್ಥಿಸಿಕೊಳ್ಳುತ್ತಾ ಹೋಗುತ್ತಾನೆ. ತನ್ನ ಎಲ್ಲಾ ಕ್ರಿಯೆಗಳಿಗೆ, ಯೋಜನೆಗಳಿಗೆ ತಾನೇ ನೇರ ಜವಾಬ್ದಾರನಾಗಬೇಕಾಗಿ ಬಂದಾಗ ಅವನು ತನ್ನ ಅಸೆಂಬ್ಲಿ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಾನೆ. ಹೀಗಾಗಿ ಕೃಷ್ಣಪ್ಪ ರಾಜಕೀಯ ಸಂದರ್ಭದಲ್ಲಿ ಸೋಲದ ಅವನು ವ್ಯಕ್ತಿತ್ವದಲ್ಲಿ ತಾಕಲಾಟವನ್ನು ಎದುರಿಸುತ್ತಾನೆ.

'ಭವ'ಕಾದಂಬರಿಯಲ್ಲಿ ಶಾಸ್ತ್ರಿ ಹಾಗೂ ದಿನಕರ ತಮ್ಮ ವ್ಯಕ್ತಿತ್ವದಲ್ಲಿ ದ್ವಂದ್ವವನ್ನು ಎದುರಿಸುತ್ತಾರೆ. ಶಾಸ್ತ್ರಿಯು ದಿನಕರನನ್ನು ಕಂಡಾಗ ಅವನು ತನ್ನ ಮಗನೋ ಅಥವಾ ಕರುಣಾಕರ ಪಂಡಿತನ ಮಗನೋ ಎಂದುಕೊಳ್ಳುತ್ತಾನೆ. ದಿನಕರನು ಪ್ರಸಾದನನ್ನು ತನ್ನ ಮಗನೋ ಅಥವಾ ನಾರಾಯಣ ತಂತ್ರಿಯ ಮಗನೋ ಎಂದು ಅನುಮಾನ ಪಡುತ್ತಾನೆ. ನಾರಾಯಣ ತಂತ್ರಿಗೂ ಪ್ರಸಾದ ದಿನಕರನ ಮಗನೋ ತನ್ನ ಮಗನೋ ಎಂಬ ಅನುಮಾನ ಬಂದಿದ್ದರೂ ನಂತರದಲ್ಲಿ ಅವನು ತನ್ನ ದ್ವಂದ್ವವನ್ನು ಕಳೆದುಕೊಂಡು ಸಹಜವಾಗಿರುತ್ತಾನೆ.

[illegible]

[illegible]

[illegible]

[illegible]

[illegible]

ದಿನಕರನು ತನ್ನ ಮೊದಲ ಹೆಂಡತಿ ಸರೋಜಳ ಮಗನೆಂಬ ವಿಚಾರವು ಶಾಸ್ತ್ರಿಗೆ ತಿಳಿದಾಗ ತನ್ನ ಹಿಂದಿನ ಜೀವನವನ್ನು ನೆನೆಸಿಕೊಳ್ಳುತ್ತಾನೆ. ಸರೋಜಳಿಗೆ ಮಕ್ಕಳಾಗಬೇಕೆಂದು ಪಂಡಿತನೊಬ್ಬನ ಸಲಹೆಯ ಮೇರೆಗೆ ಪೂಜೆಯೊಂದಕ್ಕೆ ಶಾಸ್ತ್ರಿಯು ಒಪ್ಪಿಗೆ ನೀಡಿರುತ್ತಾನೆ. ಪೂಜೆಯಿಂದ ಪರಿಚಿತನಾದ ಪಂಡಿತನಿಗೆ ಸಂಗೀತದಲ್ಲಿ ಆಸಕ್ತಿಯಿದ್ದುದರಿಂದ ಸರೋಜಳ ಸಂಗೀತವನ್ನು ಕೇಳಲು ದಿನವೂ ಅವಳ ಮನೆಗೆ ಬರುತ್ತಾನೆ. ಇದನ್ನು ಶಾಸ್ತ್ರಿಗೆ ಸಹಿಸಲಾಗುವುದಿಲ್ಲ. ಪಂಡಿತನನ್ನು ಮನೆಗೆ ಬರಬೇಡವೆಂದು ಹೇಳಬೇಕೆಂದುಕೊಂಡಿದ್ದ ಶಾಸ್ತ್ರಿಗೆ ಅದು ಸಾಧ್ಯವಾಗುವುದಿಲ್ಲ. ಹೆಂಡತಿಯು ಬಸಿರಿಯೆಂಬ ಸುದ್ದಿ ತಿಳಿದ ಶಾಸ್ತ್ರಿಯು ಅವಳನ್ನು ಮಣೆಯೊಂದರಿಂದ ಹೊಡೆದು ಪ್ರಜ್ಞೆ ತಪ್ಪಿದ್ದ ಅವಳನ್ನು ಹಿತ್ತಲಿನ ಗುಂಡಿಯಲ್ಲಿ ಮುಚ್ಚಿ ಪರಾರಿಯಾಗಿರುತ್ತಾನೆ. ಒಂದೆರಡು ದಿನ ಬಿಟ್ಟು ಬಂದಾಗ ಮನೆಯಲ್ಲಿನ ಬಂಗಾರವೂ ಕಾಣೆಯಾಗಿರುತ್ತದೆ. ಪಂಡಿತನೂ ಊರುಬಿಟ್ಟು ಹೋಗಿರುತ್ತಾನೆ. ನಂತರ ಸರೋಜಳ ಕುರಿತು ಯಾವುದೇ ವಿಚಾರವು ಬೆಳಕಿಗೆ ಬಂದಿರುವುದಿಲ್ಲ. ಹರಿದ್ವಾರದಲ್ಲಿ ತ್ರಿಪಾಠಿಯೊಬ್ಬರ ತಂಗಿಯಂತೆ ಜೀವಿಸಿದ್ದ ಸರೋಜಳ ವಿಚಾವು ಸೀತಮ್ಮನಿಂದ ಶಾಸ್ತ್ರಿಗೆ ತಿಳಿಯುತ್ತದೆ. ದಿನಕರನು ಸರೋಜಳ ಮಗನೆಂದು ತಿಳಿದಾಗ ಅವನು ತನ್ನ ಮಗನೋ ಅಥವಾ ಪಂಡಿತನ ಮಗನೋ ಎಂಬ ಸಂದಿಗ್ಧಕ್ಕೆ ಸಿಲುಕಿದ ಶಾಸ್ತ್ರಿಯು ದೇವಿಗೆ ಮೊರೆಹೋಗುತ್ತಾನೆ. ಅಲ್ಲೂ ಉತ್ತರ ದೊರೆಯದಿದ್ದಾಗ ಗೊಂದಲಗೊಳ್ಳುತ್ತಾನೆ.

ದಿನಕರನಿಗೆ ತಾನು ಸಂಬಂಧ ಬೆಳೆಸಿದ್ದ ಗಂಗೂಬಾಯಿಗೆ ನಾರಾಯಣ ತಂತ್ರಿಯೊಡನೆಯೂ ಸಂಬಂಧವಿರುವ ವಿಚಾರ ತಿಳಿದಾಗ ಗೊಂದಲವನ್ನೆದುರಿಸುತ್ತಾನೆ. ಗಂಗೂಬಾಯಿಯ ಮಗ ಪ್ರಸಾದನು ತನ್ನ ಮಗನೋ ಅಥವಾ ನಾರಾಯಣ ತಂತ್ರಿಯ ಮಗನೋ ಎಂದು ದಿನಕರನಿಗೆ ಅನುಮಾನ ಶುರುವಾಗುತ್ತದೆ. ಇದಲ್ಲದೇ ಹತ್ತಾರು ಹೆಣ್ಣುಗಳೊಂದಿಗೆ ಸಂಬಂಧ ಬೆಳೆಸಿದ್ದ ದಿನಕರನಿಗೆ ತನ್ನ ಹೆಂಡತಿಯು ಬೇರೊಬ್ಬ ಗಂಡಸಿನೊಡನೆ ಸಲಿಗೆಯಿಂದಿರುವುದನ್ನು ಸಹಿಸಲಾಗುವುದಿಲ್ಲ. ಕೊನೆಗೆ ಅವಳ ಪಾಡಿಗೆ ಅವಳನ್ನು ಬಿಟ್ಟು ಇನ್ನಿತರ ಹೆಣ್ಣುಗಳಿಗೂ ಪತ್ರ ಬರೆದು ಅದರಲ್ಲಿ ತನ್ನ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿರುತ್ತಾನೆ.

ಸ್ವಾತಂತ್ರ್ಯೋತ್ತರ ಸಾಹಿತ್ಯವು ತನ್ನ ಬರವಣಿಗೆಯಲ್ಲಿ ಒಂದು ರೀತಿಯ ಉಸಿರುಗಟ್ಟಿಸುವ ಸ್ಥಿತಿಯನ್ನು, ಆವೇಶ, ಉದ್ವೇಗವನ್ನು ಅಂತೆಯೇ ಬರವಣಿಗೆಯಲ್ಲಿ ತೀವ್ರತೆಯನ್ನು ಒಳಗೊಂಡಿದ್ದಾಗಿದೆ. ದಿಕ್ಕುಗಾಣದ ಸಂದಿಗ್ಧ ಸ್ಥಿತಿ, ತೊಳಲಾಟ ಹೀಗೆ ವ್ಯಕ್ತಿಯ ಅಂತರಾಳಕ್ಕೆ ಕೈಚಾಚುವುದನ್ನು ಕಾಣಬಹುದಾಗಿದೆ. ಸ್ವಾಂತತ್ರ್ಯ ಪೂರ್ವದ ಬರವಣಿಗೆಗೂ ನಂತರದ ಬರವಣಿಗೆಗೂ ಭ್ರಮನಿರಸನಗೊಂಡ ಸ್ಥಿತಿ ಇದೆ. ಮಹಾಯುದ್ಧಗಳು ಪಾಶ್ಚಿಮಾತ್ಯ ಜಗತ್ತಿನ ಇದುವರೆಗಿನ ತಿಳುವಳಿಕೆಯನ್ನೆಲ್ಲಾ ಬುಡಮೇಲು ಮಾಡಿದ ತಲ್ಲಣಗಳಾಗಿವೆ. ಆಗ ಅಲ್ಲಿನ ಮನುಷ್ಯ ತನ್ನ ಜೀವನ ಮೌಲ್ಯಗಳನ್ನು ಪುನರ್‌ವಿಮರ್ಶೆಗೆ ಒಳಪಡಿಸಬೇಕಾದ ಅಗತ್ಯ ಮೂಡಿಬಂದಿತು. ಮಹಾಯುದ್ಧಗಳಲ್ಲಿ ಇದುವರೆಗಿನ ಮನುಷ್ಯತ್ವದ ಪರಿಕಲ್ಪನೆಯನ್ನು ಪುನರ್ ರೂಪಿಸಬೇಕಾದ ವಾತಾವರಣವನ್ನು ಕಲ್ಪಿಸಿತು. ಹಾಗಾಗಿ ಮನುಷ್ಯ ತಾನಿರುವ ನೆಲಕ್ಕೂ ಹೊರಗಿನ ಪ್ರಪಂಚಕ್ಕೂ ಇರುವ ಸಂಬಂಧದ ಹುಡುಕಾಟದಲ್ಲಿ ತೊಡಗಿದನು.

ಅನಂತಮೂರ್ತಿಯವರ ಕಥನಸಾಹಿತ್ಯದಲ್ಲಿ ಇಂತಹ ಅನೇಕ ವಿಚಾರಗಳು ವ್ಯಕ್ತಗೊಂಡಿವೆ. ಮನುಷ್ಯ ತನ್ನ ಭದ್ರತೆಗೆ ಅಪಾಯವನ್ನು ಕಂಡಾಗ ಬದುಕಿನಲ್ಲಿ ಇಬ್ಬಂದಿತನವನ್ನು ಅನುಭವಿಸಿದಾಗ ಅಸ್ತಿತ್ವ ಬೆಳೆಯುತ್ತದೆ. ಯೂರೋಪಿನಲ್ಲಿ ಆರಂಭವಾದ ಕೈಗಾರಿಕಾ ಕ್ರಾಂತಿ ಮನುಷ್ಯನಿಗೆ ಹೆಚ್ಚು ಅನುಕೂಲತೆ ಮತ್ತು ಬಿಡುವುಗಳನ್ನು ತಂದುಕೊಟ್ಟಿದ್ದರಿಂದ ತನ್ನ ಸುತ್ತಲ ನಿಸರ್ಗದಿಂದ ಅವನನ್ನು ಪ್ರತ್ಯೇಕಗೊಳಿಸಿತು. ಇದು ಕ್ರಮೇಣ ನಿಸರ್ಗಕ್ಕೆ

ಮಾತ್ರವೇ ಅಲ್ಲದೆ ಮನುಷ್ಯ ಸಂಬಂಧಗಳಿಗೆ ವ್ಯಕ್ತಿಯನ್ನು ಪರಕೀಯನನ್ನಾಗಿಸಿತು. ಈ ಪರಕೀಯತೆಯ ಸ್ಥಿತಿಯಲ್ಲಿ ಮನುಷ್ಯ ಎಲ್ಲವುಗಳಿಂದಲೂ ಕಳಚಿಕೊಂಡು ತನ್ನ ಕ್ರಿಯೆಗೆ ತಾನೇ ತೊಡಗುತ್ತಾನೆ. ತಮ್ಮ ಮಾನಸಿಕ ತಳಮಳವನ್ನು, ತಾಕಲಾಟವನ್ನು ಅನುಭವಿಸುತ್ತಿರುವ ಸಮಯದಲ್ಲಿ ನೆರಳಿನಂತಹ ಕೈಗೆ ಸಿಗದ ಅನುಭವ ಲೋಕವನ್ನು ತಾತ್ವಿಕತೆಯ ಹುಡುಕಾಡುತ್ತಾನೆ. ಪರಂಪರೆ, ಸಂಪ್ರದಾಯ , ವ್ಯವಸ್ಥೆ, ಮನೆತನ , ಪ್ರೀತಿ–ವಿಶ್ವಾಸಗಳ ಬಂಧನ ಹೀಗೆ ಹತ್ತು ಹಲವು ಬಗೆಗಳಲ್ಲಿ ಸಿಕ್ಕಿ ಹೊರಬರಲಾರದೆ ಬಳಲುತ್ತಾನೆ.

ವ್ಯಕ್ತಿ ತನ್ನ ವಿಶಿಷ್ಟತೆಯನ್ನು ಗುರುತಿಸಿಕೊಳ್ಳಲು ಹವಣಿಸುತ್ತಾನೆ. ಹೀಗಾಗಿ ವ್ಯಕ್ತಿಗೆ ತನ್ನಿಚ್ಛೆಗೆ ತಕ್ಕಂತೆ ಬದುಕು ರೂಪಿಸಿಕೊಳ್ಳಲು ಅಡ್ಡಿಯಾಗಿರುವ ಅನೇಕ ಅಡೆ ತಡೆಗಳು ಸಮಾಜದಲ್ಲಿ ಅವನಿಗೆ ಎದುರಾಗುತ್ತವೆ. ಇಂತಹ ಸ್ಥಿತಿಗಳು ಮೊದಲು ಇರಲಿಲ್ಲವೆಂದಲ್ಲ. ಆದರೆ ಒಂದು ಕಾಲವೇ ತನ್ನ ಆಲೋಚನೆಯ ಕ್ರಮದಿಂದಾಗಿ ಈ ಅಡ್ಡಿಯನ್ನು ಅತ್ಯಂತ ತೀವ್ರವಾಗಿ ಅನುಭವಿಸಿದ ಸಂದರ್ಭವಿದು. ಮುಖ್ಯವಾಗಿ ಹೊರಜಗತ್ತಿನ ಸಂಘರ್ಷಕ್ಕಿಂತ ಮಾನಸಿಕವಾಗಿ ವ್ಯಕ್ತಿ ತನ್ನತನ ಮತ್ತು ಸಾಮಾಜಿಕತೆಯ ನಡುವೆ ಅನುಭವಿಸಿದ ಸಂಘರ್ಷವಿದು. ಆದರೆ ಮಾನಸಿಕ ಕ್ಷೋಭೆಯ ಪಾಶ್ಚಿಮಾತ್ಯ ನಾಯಕರದಂತೆಯೇ ಸಂಸ್ಕಾರದ ಪ್ರಾಣೇಶಾಚಾರ್ಯನು ಇದ್ದರೂ ಅದೇ ಕ್ಷೋಬೆಯ ಸ್ಥಿತಿಯಲ್ಲಿಯೇ ಉಳಿಯದೆಮುಕ್ತಿಯ ದಾರಿಯನ್ನು ಹುಡುಕುತ್ತಾನೆ. ಆಯ್ಕೆಯ ಜವಾಬ್ದಾರಿಯು ಕ್ರಿಯೆಯಲ್ಲಿ ತೊಡಗಲೇ ಬೇಕಾದ ಅನಿವಾರ್ಯತೆಯ, ಅನಿಶ್ಚಿತತೆಯ, ತೋಳಲಾಟದಲ್ಲಿ ಕಂಡುಕೊಳ್ಳಬೇಕಾದ ದಾರಿಗಳು ಹುಡುಕಾಟದ ಸವಾಲನ್ನು ಎದುರಿಸುವಾಗ ಮಾನಸಿಕವಾಗಿ ಗೊಂದಲಕ್ಕೆ, ಸಂದಿಗ್ಧತೆಗೆ ಸಿಲುಕುತ್ತಾನೆ. ಅನಂತಮೂರ್ತಿಯವರು ಇಂತಹ ಚಿತ್ರಣವನ್ನು ಕಾದಂಬರಿಗಳು ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಪಾತ್ರಗಳು ಆತಂಕಗಳ ನಿವಾರಣೆಗೆ ತೊಡಗುತ್ತಲೇ ಇರುತ್ತವೆ. ಪ್ರಶ್ನೆ ಕತೆಯಲ್ಲಿನ ರಂಗ ಹಾಗೂ ಖೋಜರಾಜದ ರಾಜಣ್ಣ ಇವರಿಬ್ಬರೂ ತಮ್ಮ ಪ್ರಯತ್ನಗಳಿಂದಾಚೆಯ ಪರಿಸರದ ಬಂಧಿಗಳಾಗಿದ್ದಾರೆ. ಸಫಲತೆ ಮತ್ತು ವಿಫಲತೆಯ ಪ್ರಶ್ನೆಗಿಂತ ಆಯ್ಕೆಯ ಜವಾಬ್ದಾರಿಯನ್ನು ಹೊತ್ತುಕೊಳ್ಳುವ ಎದೆಗಾರಿಕೆಯನ್ನು ಕಥಾಸಾಹಿತ್ಯದಲ್ಲಿನ ನಾಯಕರು ತೋರಿಸುತ್ತಾರೆ. ಬದುಕಿನ ಮಾದರಿಗಳನ್ನು ರೂಪಿಸಿಕೊಳ್ಳುವ ಸಂದರ್ಭದಲ್ಲಿ ಹಾಗೂ ಸ್ವಂತ ಅಸ್ತಿತ್ವದ ಹುಡುಕಾಟದ ಸಂದರ್ಭದಲ್ಲಿ ವ್ಯಕ್ತಿಯು ಗೊಂದಲಕ್ಕೆ ಸಿಲುಕುತ್ತಾನೆ. ಸಂಸ್ಕಾರದ ಪ್ರಾಣೇಶಾಚಾರ್ಯನ ತೀರ್ಮಾನದಲ್ಲಿ ಇವುಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಅಸ್ತಿತ್ವವಾದಿ ಧೋರಣೆಗಳು ಪಾಶ್ಚಿಮಾತ್ಯರ ಪ್ರಭಾವಕ್ಕೆ ಒಳಗಾಗಿ ಪ್ರೇರಣೆ ಪಡೆದರೂ ಅವು ಯಥಾವತ್ತಾಗಿ ಕಥಾಸಾಹಿತ್ಯದಲ್ಲಿ ಅನುಕರಣೆಯಾಗಿಲ್ಲ. ಪರಂಪರೆ, ಸಂಪ್ರದಾಯ ಹಾಗೂ ವ್ಯಕ್ತಿಯ ನಡುವೆ ಕಂದರ ಏರ್ಪಟ್ಟಿತು. ಅನುಭವದ ಮೂಲಕ ಪರಂಪರೆಯ ಮಿತಿಯನ್ನು ವ್ಯಕ್ತಿಯ ಮೂಲಭೂತ ನೆಲೆಯಲ್ಲಿ ಶೋಧಿಸಲಾಯಿತು. ಭಾವನೆಗಳನ್ನು ಹುಟ್ಟುಹಾಕುವ ಅಥವಾ ವ್ಯಕ್ತಿಯಿಂದ ವ್ಯಕ್ತಿಗೆ ಸಾಗಿಸುವ ಮನೆತನದ ಹಣೆಪಟ್ಟಿಯನ್ನು ಹೊರಗೆಳೆಯಲಾಯಿತು. ಇಂತಹ ಸಂದರ್ಭದಲ್ಲಿ ಪರಂಪರೆಯ ಹಿಡಿತದಿಂದ ಕಳಚಿಕೊಂಡ ವ್ಯಕ್ತಿಯು ಹಳೆಯ ಮೌಲ್ಯಗಳನ್ನು ಒಪ್ಪಿಕೊಳ್ಳದೆ ಹೊಸ ಮೌಲ್ಯಗಳನ್ನು ಸ್ವೀಕರಿಸಿದನು.

ಲೇಖಕರ ಸಾಹಿತ್ಯದಲ್ಲಿ ವ್ಯಕ್ತಿ ಪ್ರಜ್ಞೆಯ ನೆಲೆಯು ಪ್ರಧಾನವಾಗಿದೆ. ಪರಂಪರೆಯ ಶೋಧನೆಯ ಕಾರ್ಯವು ವ್ಯಕ್ತಿನಿಷ್ಠ ನೆಲೆಯಲ್ಲಿ ನಡೆದಾಗ, ಶೋಧನೆಗೆ ತಕ್ಕ ತಂತ್ರವನ್ನು ಅಳವಡಿಸಿಕೊಂಡಿತು. ಸಮಾಜದ ಎದುರಿನಲ್ಲಿ ಪರಂಪರೆಯ ಎದುರಿನಲ್ಲಿ ವ್ಯಕ್ತಿಯ ಆಯ್ಕೆಯ ಪ್ರಶ್ನೆಗಳನ್ನು ಕುರಿತಾದ ಸಮಸ್ಯೆಯನ್ನು ಕಟ್ಟಿಕೊಡುವ ಅನುಭವವು ತನ್ನ ಅಭಿವ್ಯಕ್ತಿಯ ರೀತಿಯನ್ನು ಅರಿವಿನ ಗ್ರಹಿಕೆಯ ನೆಲೆಯಲ್ಲಿಯೇ ಪರಿಹರಿಸಿಕೊಂಡಿತು. ಹಾಗಾಗಿ ೧೯೫೦ ರ ಕಾಲ ಘಟ್ಟದಲ್ಲಿ ಬಂದ ಸಾಹಿತ್ಯದಲ್ಲಿ ಕೆಲವೊಮ್ಮೆ ತಂತ್ರವೆಂದರೆ ವಸ್ತುವೆ ಆಗಿದೆ.

ಈ ರೀತಿ ತನ್ಮಯತೆ ಸಾಧ್ಯವಾಗಲಾರದಂತೆ ಮತ್ತು ತನ್ನನ್ನು ಕಟ್ಟಿ ಹಾಕಿರುವ ಸಾಧನವಾಗಿ ಪರಂಪರೆಯನ್ನು ಗ್ರಹಿಸಲು ಆಧುನಿಕ ವಿದ್ಯಾಭ್ಯಾಸ ಅವನಿಗೆ ಒದಗಿಸಿದ ದೃಷ್ಟಿಕೋನವೇ ಕಾರಣ. ಸ್ವಾತಂತ್ರ್ಯ ಪೂರ್ವದಲ್ಲಿಯೂ ಇಂಗ್ಲಿಷ್ ವಿದ್ಯಾಭ್ಯಾಸ ಪಡೆದ ತರುಣರಿದ್ದರೂ, ಅವರಿಗೆ ಪರಂಪರೆಯಲ್ಲಿ ಲೋಪ-ದೋಷಗಳು ಕಂಡುಬಂದರೂ, ಅವನ್ನು ಸುಧಾರಣಾವಾದಿ ನೆಲೆಯಿಂದ ನೋಡಲಾಯಿತು. ಅಜ್ಞಾನ, ಮೂಢನಂಬಿಕೆ, ಅಂಧಶ್ರದ್ಧೆ ಇವುಗಳನ್ನು ವೈಚಾರಿಕ ನೆಲೆಯಿಂದ ನೋಡಿ, ಅವುಗಳಿಗೆ ವೈಚಾರಿಕತೆಯ ಹಿನ್ನೆಲೆಯಲ್ಲಿ ಪರಿಹಾರ ಹುಡುಕುವ ಪ್ರಯತ್ನ ನಡೆಯಿತು. ಪರಂಪರೆಯಲ್ಲಿನ ಮಿತಿಯು ವ್ಯಕ್ತಿ ಪ್ರಜ್ಞೆಯನ್ನು ಹೇಗೆ ಒಂದು ಆವರಣಕ್ಕೆ ಬಂಧಿಸಿದೆ ಎಂಬ ನೆಲೆಯು ಮುಖ್ಯವಾಯಿತು. ಪರಂಪರೆಯ ಬಗೆಗಿನ ವಿಶ್ಲೇಷಣಾತ್ಮಕ ದೃಷ್ಟಿ ಮತ್ತು ವಿಶ್ಲೇಷಣಾತ್ಮಕತೆಯಿಂದ ಪಡೆದ ಬಿಡುಗಡೆಯ ಹಾದಿಗಳು ತನ್ನೊಳಗೆ ಒಂದು ಮೌಲ್ಯ ಪ್ರಜ್ಞೆಯನ್ನು ಹೊಂದಿತ್ತು. ಹೀಗಾಗಿ ಪರಂಪರೆ ಮತ್ತು ವ್ಯಕ್ತಿಯ ನಡುವಿನ ಸಂಘರ್ಷಾತ್ಮಕ ನೆಲೆಯಲ್ಲಿ ಸ್ವಪ್ರಜ್ಞೆಯ ತಂತ್ರವಿರುತ್ತದೆ. ಸಂಘರ್ಷವನ್ನು ಗುರುತಿಸಿಕೊಳ್ಳುವ ಹಂತದಲ್ಲಿ, ಪ್ರಜ್ಞಾಪೂರ್ವಕ ನೆಲೆಗಿಂತಲೂ ಮೊದಲೇ ಪರಂಪರೆಯಿಂದ ಹೊರಗೆ ಬರುವ ಮೌಲ್ಯಗಳ ಹುಡುಕಾಟದಲ್ಲಿ ತನ್ನದೇ ಆದ ಬದುಕಿನ ಧೋರಣೆಗಳನ್ನು ವ್ಯಕ್ತಿ ಪ್ರಜ್ಞೆ ಗುರುತಿಸಿಕೊಂಡು ಬಿಟ್ಟಿತು.

ಇಲ್ಲಿನ ಕಥನಸಾಹಿತ್ಯದ ನಾಯಕರ ಎದುರು ಆಯ್ಕೆಗಳ, ಅಸ್ತಿತ್ವದ ಸವಾಲಿನ ಸಮಸ್ಯೆಗಳಿದ್ದಾಗ ಇವುಗಳ ವಿರುದ್ಧ ಹೋರಾಡುವ ಪಾತ್ರಗಳು ಸ್ವಪ್ರಜ್ಞೆ , ಪ್ರಜ್ಞಾ ಪ್ರವಾಹ ಎರಡೂ ತಂತ್ರಗಳು ಬಳಸಿಕೆಯಾಗಿವೆ. ಪ್ರಜ್ಞಾ ಪ್ರವಾಹದ ಒಂದು ಭಾಗವಾಗಿಯೆ ಕಾಣಿಸಿಕೊಳ್ಳುತ್ತಿದ್ದ ಸ್ವಪ್ರಜ್ಞೆ, ಪ್ರಜ್ಞಾಪ್ರವಾಹಕ್ಕಿಂತ ಸ್ವರೂಪದಲ್ಲಿ ಸ್ವಲ್ಪ ಮಟ್ಟಿಗೆ ಭಿನ್ನವಾದದ್ದು. ಸ್ವಪ್ರಜ್ಞೆ ಎಚ್ಚರದ ಸ್ಥಿತಿಯಲ್ಲಿ ಸುಪ್ತ ಮನಸ್ಸಿನ ಆಲೋಚನೆಗಳನ್ನು ಗ್ರಹಿಕೆಗಳನ್ನಾಗಿಸಿ ಹೊರದಬ್ಬುವ ಸ್ಥಿತಿಯಲ್ಲಿ ಕಾಣಿಸುವಂಥಾದ್ದು. ಪ್ರಜ್ಞಾಪ್ರವಾಹ ಇನ್ನು ಸ್ಪಷ್ಟರೂಪ ಪಡೆದಿರುವ ಆಲೋಚನೆಗಳನ್ನು ಅಸ್ಪಷ್ಟ ಮನಸ್ಸಿನ ಸ್ಥಿತಿಯನ್ನು ಸಂಕೇತದ ಮೂಲಕ ಹೊರಹಾಕುವಂಥಾದ್ದು, ಒಳ ಮನಸ್ಸಿನ ಭಾವನೆಗಳನ್ನೇ ವಸ್ತುವಾಗಿಸಿಕೊಂಡು ಇಲ್ಲಿ ಎರಡರ ಬಳಕೆಯಾಗಿದೆ.

೪.೩ ಕಾಲ ಮತ್ತು ಪರಿಸರ

ಕಾಲ ಮತ್ತು ಪರಿಸರ ಸಂಸ್ಕೃತಿಯ ಮೇಲೆ ಪ್ರಭಾವ ಬೀರುತ್ತದೆ. ಕಾಲಮಾನಕ್ಕೆ ತಕ್ಕಂತೆ ಮಾನವ ಜನಾಂಗದ ಪರಿಸ್ಥಿತಿಯ ಮರುಹೊಂದಾಣಿಕೆಯಾಗುತ್ತದೆ. ಪರಿಸರವು ವ್ಯಕ್ತಿಯ ಅಸ್ತಿತ್ವವನ್ನು ರೂಪಿಸುತ್ತದೆ. ಒಂದು ಕಾಲದಲ್ಲಿ ಪರಿಣಾಮಕಾರಿಯೆನಿಸಿದ್ದ ಮೌಲ್ಯಗಳು, ಆದರ್ಶಗಳು ಇನ್ನೊಂದು ಕಾಲಘಟ್ಟದಲ್ಲಿ ಸಾಮಾನ್ಯವೆನಿಸಬಹುದು. ಒಂದು ಪರಿಸರದಲ್ಲಿ ತಿರಸ್ಕರಿಸಲ್ಪಟ್ಟ ಸಂಗತಿಗಳು ಇನ್ನೊಂದು ಪರಿಸರದಲ್ಲಿ ಪೂಜ್ಯತೆಯನ್ನು ಪಡೆದುಕೊಳ್ಳಬಹುದು. ಪರಿವರ್ತನೆಯು ಯಾವಾಗಲೂ ಕಾಲ ಮತ್ತು ಪರಿಸರವನ್ನವಲಂಬಿಸಿದೆ. ಪರಿವರ್ತನೆಯು ಉತ್ತಮದ ಕಡೆಗೆ ಸಾಗಬೇಕೆಂಬುದು ಮನುಕುಲದ ಹಂಬಲವಾಗಿದೆ.

ಕ್ರಿಯಾಮುಖಿಯಾದ ಕಾಲವು ಎಲ್ಲಾ ಕ್ರಿಯೆಗಳನ್ನು ಪರಿವರ್ತನೆಗೆ ಒಡ್ಡಿಕೊಳ್ಳುತ್ತದೆ. ಪ್ರತಿ ಬದಲಾವಣೆಯನ್ನು ತನ್ನಲ್ಲಿ ಸೇರಿಸಿಕೊಂಡು ಮುನ್ನುಗ್ಗುತ್ತದೆ. ಬದುಕಿನ ಹಳೆಯದರ ಜೊತೆ ಸೇರಿಕೊಳ್ಳುವ ಹೊಸ ಸೇರ್ಪಡೆಗಳಿಗೆ ಸದಾ ಅನುವಾಗಿರುತ್ತದೆ. ಮಾನವನ ಕ್ರಿಯೆಗಳನ್ನು ನಿರ್ದಿಷ್ಟಗೊಳಿಸಿ ಅವುಗಳಿಗೆ ದಿಕ್ಸೂಚಿಯಾಗಿ ಕಾರ್ಯನಿರ್ವಹಿಸುತ್ತದೆ. ಕಾಲ ಮತ್ತು ಪರಿಸರದ ಪ್ರಭಾವದಿಂದ ಮನುಷ್ಯನ ನಡವಳಿಕೆಗಳು

ಬದಲಾಗುತ್ತವೆ. "ಕಾಲದ ಬಗೆಗೆ ವಿಶೇಷ ಪ್ರಜ್ಞೆಯೊಂದು ಬೆಳೆದದ್ದು ನಮ್ಮರ ಕಾಲದಲ್ಲಿಯೇ. ಭೂತ ಹಾಗೂ ವರ್ತಮಾನಗಳು ಕೇವಲ ಒಂದರ ನಂತರ ಇನ್ನೊಂದು ಬರುವ ಅವಧಿಗಳಲ್ಲ. ಇಂದಿನ ಈ ಕ್ಷಣವು ಭೂತ, ವರ್ತಮಾನ ಹಾಗೂ ಭವಿಷ್ಯದ ಸಂಭಾವ್ಯತೆಗಳ ಲೋಲಕವಾಗಿದೆ. ಈ ಕ್ಷಣ ಎಂಬುದು ಕಾಲ ಪ್ರಭಾವದಿಂದ ಬೇರ್ಪಡಿಸಿದ ಒಂದು ತುಂಡಾಗಿರದೆ, ವ್ಯಕ್ತಿಯ ಜೀವಮಾನದ ಸಮಗ್ರ ಇತಿಹಾಸವೇ ಆಗಿದೆ. ಆದ್ದರಿಂದ ಇಂದಿನ ಬರವಣಿಗೆಯಲ್ಲಿ ಇಂಥ ಅರ್ಥಪೂರ್ಣವಾದ ಕ್ಷಣಗಳನ್ನು ಹಿಡಿಯುವ ಪ್ರಯತ್ನ ವಿಶೇಷವಾಗಿದೆ."[೧೧]

ಸ್ವಾತಂತ್ರ್ಯೋತ್ತರ ಕಾಲದ ವೈಚಾರಿಕ ದ್ವಂದ್ವಗಳನ್ನು ಹಾಗೂ ಸಾಮಾಜಿಕ ಸಂಧಿಗ್ಧತೆಗಳನ್ನು ಅನಂತಮೂರ್ತಿಯವರ ಕಥಾ ಸಾಹಿತ್ಯದಲ್ಲಿ ಕಾಣಬಹುದು. ತಮ್ಮ ತಲೆಮಾರಿನವರು ಎದುರಿಸಬೇಕಾಗಿ ಬಂದ ಸಾಂಸ್ಕೃತಿಕ ವಿಚಾರಗಳಲ್ಲಿನ ದ್ವಂದ್ವಗಳನ್ನು ಲೇಖಕರು ತಮ್ಮ ಕಥಾ ಸಾಹಿತ್ಯದಲ್ಲಿ ಸ್ಪಷ್ಟವಾಗಿ ಹಿಡಿದಿಟ್ಟಿದ್ದಾರೆ. "ಅನುಭವಗಳು ಕಾಲದಿಂದ ಕಾಲಕ್ಕೆ ನೀಡುತ್ತಾ ಹೋಗುವ ಹೊಸ ಅರ್ಥಗಳನ್ನೇ ಕುರಿತು ಇವರ ಕಥೆಗಳು ಭಾಷ್ಯವನ್ನು ಬರೆಯುತ್ತವೆಯೇನೋ ಎಂಬ ಕುತೂಹಲವುಂಟಾಗುತ್ತದೆ."[೧೨] ಹೀಗೆ ಕಾಲ ಹಾಗೂ ಪರಿಸರದಿಂದ ಬದಲಾಗುವ ವ್ಯಕ್ತಿಯ ಅನುಭವಗಳು ಸಂಘರ್ಷವನ್ನು ಹುಟ್ಟುಹಾಕುತ್ತವೆ.

'ತಾಯಿ' ಕತೆಯಲ್ಲಿ ಗಂಡ ಸತ್ತಮೇಲೆ ಅಬ್ಬಕ್ಕ ಮಾಡಿಕೊಂಡ ಕೂಡಿಕೆಯು ಮಗನ ಅಸಮಾಧಾನಕ್ಕೆ ಕಾರಣವಾಗುತ್ತದೆ. ಇದರಿಂದ ಬೇಸತ್ತ ಮಗನು ಮನೆಬಿಟ್ಟು ಹೋಗುತ್ತಾನೆ. ಅಬ್ಬಕ್ಕ ಮಗ ಚೆಲುವನನ್ನು ಹದಿಮೂರು ವರ್ಷಗಳವರೆಗೆ ಅಕ್ಕರೆಯಿಂದ ಸಾಕಿರುತ್ತಾಳೆ. ಬೇರೆಯವರ ಮಾತನ್ನು ಕೇಳಿ ಮಗ ತಿರುಗಿ ಬಿದ್ದನಲ್ಲ ಎಂದು ಅಬ್ಬಕ್ಕ ಬೇಸರ ಪಡುತ್ತಾಳೆ. ತನ್ನ ಜಾತಿಯ ಇತರರು ಮಾಡಿಕೊಂಡ ಕೂಡಿಕೆಯನ್ನು ನೆನೆದು ತನ್ನದು ಸರಿಯೆಂದು ಸಮರ್ಥಿಸಿಕೊಳ್ಳುತ್ತಾಳೆ. ಕೂಡಿಕೆ ಮಾಡಿಕೊಂಡವನು ದೇವರಂಥ ಮನುಷ್ಯನಾದ್ದರಿಂದ ಅವನನ್ನು ತಾನು ಒಲಿದದ್ದು ಎಂದು ಸಮಾಧಾನದಿಂದ ಅವನೊಂದಿಗೆ ಸಂಸಾರ ನಡೆಸುತ್ತಾಳೆ.

ಕಾಲ ಸರಿದಂತೆ ಮಗನ ನೆನಪು ಅಬ್ಬಕ್ಕನಿಗೆ ಕಾಡುತ್ತದೆ. ದುಡುಕಿ ಪ್ರೀತಿಯ ಮಗನನ್ನು ಜರಿದು ದೂರ ಮಾಡಿಕೊಂಡೆನೆಂದು ಕೊರಗುತ್ತಾಳೆ. ತನ್ನ ಸುಖಕ್ಕೆ ಅಡ್ಡಿಯಾದನೆಂದು ಮಗನ ಮಾತನ್ನು ಧಿಕ್ಕರಿಸಿ ನಡೆದೆ ಎಂದು ದುಃಖಿಸುತ್ತಾಳೆ. ಮೋಹಕ್ಕೆ ಸಿಲುಕಿ ಯಾವ ತಾಯಿಯೂ ಮಾಡದ ಪಾಪವನ್ನು ಮಾಡಿದೆ ಎಂದುಕೊಳ್ಳುತ್ತಾಳೆ. ಎಲ್ಲರು ಆಡಿಕೊಳ್ಳುವಂತೆ ಪಾತಿವ್ರತ್ಯವನ್ನು ಮೀರಿದೆನಲ್ಲ ಎಂದು ಮರುಗುತ್ತಾಳೆ. ತನ್ನನ್ನೊಲಿದವನು ಸಭ್ಯಸ್ಥ ಆದರೆ ಅವನ ದೆಸೆಯಿಂದಲೇ ಮಗ ಕೈ ತಪ್ಪಿ ಹೋದನಲ್ಲ ಎಂದು ಕೊರಗುತ್ತಾಳೆ. ಯಾವ ಹುಲಿಯ ಬಾಯಿಗೆ ಸಿಕ್ಕನೋ, ಕಳ್ಳರ ಕೈಗೆ ಸಿಕ್ಕನೋ ಇಲ್ಲವೆ ಯಾವ ನದಿಗೆ ಹಾರಿದನೋ, ಹಸಿವೆಯಿಂದ ಒದ್ದಾಡಿದನೋ, ತಾಯಿಯಿದ್ದೂ ಮಗ ಪರದೇಶಿಯಾದನೆಂದು ಪರಿತಪಿಸುತ್ತಾಳೆ. ಅರ್ಧರೊಟ್ಟಿ ಸಾಕು ಬಾಗಿಲು ತೆಗೆಯವ್ವ ಎಂದಾಗ ಕೇಡುಗಾಲದ ದೆಸೆಯಿಂದ ನಾನು ತೆಗೆಯಲಿಲ್ಲ ಎಂದು ಚಡಪಡಿಸುತ್ತಾಳೆ. ಈ ದಿನ ಮಗನಿಗೆ ಇಪ್ಪತ್ತೆರಡು ವರ್ಷಗಳು ತುಂಬಿವೆ. ಮಗ ನಮ್ಮೊಂದಿಗಿದ್ದಿದ್ದರೆ ಸೊಸೆಯನ್ನು ಮನೆಗೆ ತಂದು ಮೊಮ್ಮಗನನ್ನು ಆಡಿಸುತ್ತಿದ್ದೆ. ರಾಕ್ಷಸಿಯಾದ ನನಗೆ ಆ ಪುಣ್ಯವಿಲ್ಲವೆಂದು ತನ್ನನ್ನು ದೂರಿಕೊಳ್ಳುತ್ತಾಳೆ.

ಚೆಲುವ ಮನೆಗೆ ಬಂದರೆ ಹಲಸಿನ ಚಟ್ಟನ್ನು ತಿನ್ನಲು ಕೊಡುತ್ತೇನೆ. ಕೂಡಿಟ್ಟ ಬೆಳ್ಳಿರೂಪಾಯಿಗಳನ್ನು ಖರ್ಚುಮಾಡಿ ಒಳ್ಳೆಯ ವಸ್ತ್ರವನ್ನು ತಂದು ಮದುವೆ ಮಾಡಿಸುತ್ತೇನೆಂದು ಭ್ರಮಿಸುತ್ತಾಳೆ. ಮಗ ಮನೆಯಲ್ಲಿ ಕೂತು ತಿನ್ನಲಿ, ಗಂಡನಿಂದ ಒಂದೂ ಬಿರುನುಡಿ ಬರದಂತೆ ನೋಡಿಕೊಳ್ಳುತ್ತೇನೆಂದು ಕೊಳ್ಳುತ್ತಾಳೆ. ನಿನ್ನ

ತೊರೆದು ನಾನು ಜೀವತೇಯಲಾರೆ, ನಿನಗಾಗಿ ಪ್ರಾಣವಾದ ಗಂಡನನ್ನು ತೊರೆಯುವೆ ಎನ್ನುತ್ತಾಳೆ. ನನ್ನ ಹೊಟ್ಟೆಯಲ್ಲಿ ಹುಟ್ಟಿದ ಈ ಹಸುಳೆಗಳು ನಿನ್ನನ್ನು ಅಣ್ಣನೆಂದು ಪ್ರೀತಿಸುತ್ತಾರೆ ಬೇಗ ಬಾ ಎಂದು ಮಗನಿಗಾಗಿ ಹಂಬಲಿಸುತ್ತಾಳೆ.

ದೈಹಿಕ ಅವಶ್ಯಕತೆಯಿಂದ ಅಬ್ಬಕ್ಕ ಮಗನನ್ನು ತಿರಸ್ಕರಿಸಿದಳು. ಕಾಲ ಸರಿದಂತೆ ಮಗನೂ ತನ್ನೊಂದಿಗೆ ಬಂದು ನೆಲೆಸಬೇಕೆಂದು ನಿರೀಕ್ಷಿಸುತ್ತಾಳೆ. ವಯೋಮಾನಕ್ಕನುಗುಣವಾಗಿ ವ್ಯಕ್ತಿಯ ಅನುಭವಗಳು ಅಭಿಪ್ರಾಯಗಳನ್ನು ಬದಲಿಸುತ್ತವೆ ಎನ್ನುವುದಕ್ಕೆ ಅಬ್ಬಕ್ಕ ನಿದರ್ಶನವಾಗಿದ್ದಾಳೆ.

'ಸೂರ್ಯನ ಕುದುರೆ' ಕತೆಯಲ್ಲಿ ಅನಂತು ಗೆಳೆಯನಾದ ಹಡೆವೆಂಕಟನ ವರ್ತನೆಯನ್ನು ಕಂಡು ಗೊಂದಲಕ್ಕೊಳಗಾಗುತ್ತಾನೆ. ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಮೈಸೂರಿನಲ್ಲಿ ಪ್ರೊಫೆಸರ್‌ನಾಗಿರುವ ಅನಂತು ಹಳ್ಳಿಗೆ ಬಂದಾಗ ಬಾಲ್ಯ ಸ್ನೇಹಿತ ಹಡೆವೆಂಕಟಿಗನನ್ನು ಭೇಟಿಯಾಗುತ್ತಾನೆ. ಸಂಸಾರದ ಜವಾಬ್ದಾರಿ ಇಲ್ಲದ ವೆಂಕಟನು ಪರಿಸರದ ಒಂದು ಭಾಗವಾಗಿ ಬದುಕಬೇಕೆನ್ನುತ್ತಾನೆ. ಮನೆ ಹಾಗೂ ಮಕ್ಕಳ ಜವಾಬ್ದಾರಿಯನ್ನು ನೋಡಿಕೊಳ್ಳುವ ಹೆಂಡತಿಯು ವೆಂಕಟನನ್ನು ದೂರುತ್ತಾಳೆ. ಹಾಜರಿ ಸಾಲದೆಂದು ಹೇಳಿದ ಪ್ರಿನ್ಸಿಪಾಲರನ್ನು ಹೊಡೆದು ಅಡ್ಡದಾರಿಯನ್ನು ಹಿಡಿದ ಮಗನು ಜೈಲು ಸೇರುತ್ತಾನೆ. ಮದುವೆ ವಯಸ್ಸಿಗೆ ಬಂದ ಹೆಣ್ಣು ಮಕ್ಕಳಿದ್ದಾರೆ. ವೆಂಕಟಿಗನು ಹೆಂಡತಿ ಬೈಗುಳಗಳಿಂದ ತಪ್ಪಿಸಿಕೊಳ್ಳಲು ಉಪಾಯ ಹುಡುಕುತ್ತಿರುತ್ತಾನೆ. ಜೈಲು ಸೇರಿದ ಮಗನ ಹಾಗೂ ಹೆಣ್ಣು ಮಕ್ಕಳ ಮದುವೆಯ ಚಿಂತೆಯು ತಂದೆಗಿಲ್ಲ.

ಊರಿನ ಜನರಿಗೆ ಜೊಯಿಸ ಹೇಳುವ ಹಾಗೂ ಸ್ವಾರ್ಥಿಯಾದ ಶೇಷಣ್ಣನಿಗೆ ನಿಸ್ವಾರ್ಥ ಸೇವೆಯನ್ನು ಮಾಡುವ ವೆಂಕಟಿಗನ ಸ್ವಭಾವವು ಎಲ್ಲರಿಗೂ ಹಡೆಯಾಗಿ ಕಾಣುತ್ತದೆ. ವ್ಯವಹಾರಿಕ ದೃಷ್ಟಿಕೋನವಿಲ್ಲದೆ ಪ್ರಕೃತಿಯಲ್ಲಿ ತಲ್ಲೀನನಾಗುವ ವೆಂಕಟಿಗನನ್ನು ಅನಂತು ಪಲಾಯನವಾದಿ ಎನ್ನುತ್ತಾನೆ. ಕಾಲ ಕಳೆದಂತೆ ಅನಂತುಗೆ ಸ್ನೇಹಿತನ ನಡವಳಿಕೆಯ ಬಗೆಗೆ ಕುತೂಹಲ ಮೂಡುತ್ತದೆ. ಪ್ರಕೃತಿಯಲ್ಲಿ ಲೀನವಾಗಬಯಸುವ ವೆಂಕಟನಲ್ಲಿ ವಿಶೇಷವಾದ ಗುಣವಿದೆಯೆಂಬ ಅಭಿಪ್ರಾಯಕ್ಕೆ ಬರುತ್ತಾನೆ. ಜೀವನದಲ್ಲಿ ವ್ಯವಹಾರಿಕತೆಯೊಂದೆ ಮುಖ್ಯವಲ್ಲ ಅದನ್ನು ಮೀರಿದ ಸ್ಥಿತಿಯೊಂದಿದೆ ಎಂದು ಅರಿಯುತ್ತಾನೆ.

ವ್ಯಕ್ತಿ "ವಿಚಾರಶೀಲನಾಗಿ ಜೀವನಕ್ಕೆ ಸ್ಪಂದಿಸುವ ಪರಿಗೂ, ವಿಚಾರಗಳೆಂಬುವುಗಳೇ ಇಲ್ಲದೆ ತತ್‌ಕ್ಷಣದ ಜೀವನಕ್ಕೆ ಸ್ಪಂದಿಸುತ್ತಾ ಹೋಗುವ ಕ್ರಮಕ್ಕೂ ವ್ಯತ್ಯಾಸವಿದೆ ಎಂಬುದನ್ನು ಈ ಪಾತ್ರಗಳು ನಿಖರವೆನ್ನುವಂತೆ ಮೂಡಿಸುತ್ತಾ ಹೋಗುತ್ತವೆ. ಇದರಲ್ಲಿ ಮಾಗಿದ್ದಾವುದು, ಮಾಗದೆ ಇದ್ದುದಾವುದು? ಎಂಬ ಪ್ರಶ್ನೆಯೇ ಬರುವುದಿಲ್ಲ. ಎರಡುಬೇಕು, ಎರಡು ಅಷ್ಟೇ ಮುಖ್ಯ. ಮೊದಲಿನದು ಇನ್ನೊಂದನ್ನು ಗುರುತಿಸುತ್ತದೆ. ಇನ್ನೊಂದು ಮೊದಲಿನದನ್ನು ಗುರುತಿಸುವುದಿಲ್ಲ."[೧೩] ಅನಂತು ಮತ್ತು ವೆಂಕಟಿಗನ ಸ್ವಭಾವಗಳಲ್ಲಿನ ಭಿನ್ನತೆಯನ್ನು ಹೀಗೆ ಗುರುತಿಸಬಹುದಾಗಿದೆ.

ವೆಂಕಟನ ಸ್ಥಿತಪ್ರಜ್ಞತೆಯು ಜೀವನದಲ್ಲಿ ಬೆರೆತೂ ಬೆರೆತಿರದಂತಹ ರೀತಿಯದೆಂದು ಅನಂತು ಗುರುತಿಸುತ್ತಾನೆ. ನೆಲಕ್ಕಂಟಿಕೊಂಡ ಸೂರ್ಯನ ಕುದುರೆಯು ಹೆಚ್ಚು ಹಾರದೆ, ಹಾರುವುದನ್ನೂ ಬಿಡದೆ ಬಿಸಿಲನ್ನು ಹುಡುಕಿಕೊಂಡು ಹೋಗುತ್ತದೆ. ವೆಂಕಟಿಗನದೂ ಇಂಥದ್ದೆ ಅವಸ್ಥೆಯಾಗಿದೆ. ಯಾವ ಬಗೆಗೂ

ತಲೆಕೆಸಿಡಿಕೊಳ್ಳದ ವೆಂಕಟ ಖುಷಿಯಾಗಿದ್ದಾನೆ. ವ್ಯವಹಾರಿಕ ದೃಷ್ಟಿಕೋನವಿರುವ ಅನಂತು ದ್ವಂದ್ವಕ್ಕೊಳಗಾಗುತ್ತಾನೆ.

'ಪ್ರಶ್ನೆ' ಕತೆಯಲ್ಲಿ ರಂಗನಾಥನು ಕಾಲಕ್ಕೆ ತಕ್ಕಂತೆ ಬದಲಾಗುತ್ತಾನೆ. ಪಟ್ಟಣಕ್ಕೆ ಹೋಗಿದ್ದ ರಂಗ ಪುನಃ ಹಳ್ಳಿಗೆ ಬಂದು ಶಾರದೆಯನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಶಂಕರಯ್ಯನ ವಿಚಾರಗಳಿಂದ ಪ್ರಭಾವಿತಳಾಗಿದ್ದ ಶಾರದೆಯು ರಂಗನಿಗೆ ಒಲಿಯುವುದಿಲ್ಲ. ರಂಗನಾಥ ಹಳ್ಳಿಯಲ್ಲೇ ನೆಲೆಸಿದರೆ ಮಾತ್ರ ಮದುವೆಯಾಗುವುದಾಗಿ ಹೇಳುತ್ತಾಳೆ. ಶಂಕರಯ್ಯನ ಗೊಡ್ಡು ಸಂಪ್ರದಾಯವನ್ನು ಅಲ್ಲಗಳೆಯುವ ರಂಗನಿಗೆ ಶಾರದೆಯನ್ನು ಮದುವೆಗೆ ಒಪ್ಪಿಸಲಾಗುವುದಿಲ್ಲ. ಶಾರದೆ ಹಾಗೂ ಶಂಕರಯ್ಯನನ್ನು ಪಟ್ಟಣಕ್ಕೆ ಕರೆದುಕೊಂಡು ಹೋಗಬೇಕೆಂಬ ರಂಗನ ಇಚ್ಛೆ ಫಲಿಸುವುದಿಲ್ಲ.

ಶಾರದೆಯು ತಿರಸ್ಕರಿಸಿದಾಗ ರಂಗನು ದೊಡ್ಡದೊಂದು ಆದರ್ಶ ಸಾಧಿಸಬೇಕೆಂದುಕೊಳ್ಳುತ್ತಾನೆ. ವೀಣೆ ಕಲಿತು, ಚಿತ್ರ ಬಿಡಿಸುವುದರ ಜೊತೆಗೆ ಕವಿತೆ ಬರೆಯುವ ಹವ್ಯಾಸವನ್ನು ಬೆಳೆಸಿಕೊಳ್ಳುತ್ತಾನೆ. ರಂಗನಿಗೆ ಯಾವುದರಲ್ಲೂ ಹೆಚ್ಚು ಸಾಧಿಸಲಾಗುವುದಿಲ್ಲ. ಪ್ರಾಮಾಣಿಕತೆ, ಸತ್ಯಸಂಧತೆಯಲ್ಲಿ ಸ್ವಲ್ಪದಿನ ಕಾಲವನ್ನು ಕಳೆಯುತ್ತಾನೆ. ಆದರ್ಶದಿಂದ ಶ್ರೇಷ್ಠತೆಯನ್ನು ಸಾಧಿಸಲು ಸಾಧ್ಯವೆ ಎಂಬ ಅನುಮಾನವು ರಂಗನನ್ನು ಕಾಡುತ್ತದೆ. ಆದರ್ಶಗಳನ್ನು ಮೂಲೆಗೆಸೆದ ರಂಗನು ರಾಗದ್ವೇಷಯುಕ್ತನಾಗಿ ಬದುಕುವುದೇ ಲೇಸೆಂದುಕೊಳ್ಳುತ್ತಾನೆ. ಆಧುನಿಕ ನಿರನುಭವಿ ಯುವಕನಂತೆ ರಂಗ ಮದ್ಯ ಸೇವಿಸುತ್ತಾನೆ, ವೇಶ್ಯೆಯ ಮನೆಗೆ ಹೋಗುತ್ತಾನೆ. ಎಲ್ಲೂ ನೆಮ್ಮದಿ ಕಾಣದೆ ಪುನಃ ಶಾರದೆಯನ್ನು ಮದುವೆಗೆ ಒತ್ತಾಯಿಸುತ್ತಾನೆ. ಶಂಕರಯ್ಯನ ಇಚ್ಛೆಯೇ ನನ್ನ ನಿರ್ಧಾರವೆಂಬ ಶಾರದೆಯ ಮಾತಿನಿಂದ ರಂಗನಿಗೆ ಜಿಗುಪ್ಸೆಯುಂಟಾಗುತ್ತದೆ.

ತಂದೆ-ತಾಯಿ, ಶಾರದೆ ಹಾಗೂ ಶಂಕರಯ್ಯ ಇವರ್‍ಯಾರು ತನ್ನ ಭಾವನೆಗಳಿಗೆ ಸ್ಪಂದಿಸಲಿಲ್ಲವೆಂದು ರಂಗನಿಗೆ ಅಸಮಾಧಾನವಾಗುತ್ತದೆ. ಈ ಲೋಕದ ಜೊತೆಗೂ, ನಮಗೂ ಪರಸ್ಪರ ಅರ್ಥಮಾಡಿಕೊಳ್ಳುವ ಸಾಧನವಿದ್ದಿದ್ದರೆ ಚೆನ್ನಾಗಿತ್ತೆಂದು ಭಾವಿಸುತ್ತಾನೆ. ಶಾರದೆಯನ್ನು ಅಂಗಲಾಚಿದರೆ ಮದುವೆಯ ವಿಚಾರವು ಬಗೆಹರಿಯುವುದೆಂದು ರಂಗ ತಿಳಿದಿರುತ್ತಾನೆ. ಅದು ಸಾಧ್ಯವಾಗದೇ ಹೋದಾಗ ಬಾಳಿನಲ್ಲಿ ಎಲ್ಲ ಕ್ಷಣಿಕ ಲಚ್ಚೆಯಿಂದ ದೇಹ ಸುಖವನ್ನು ಪಡೆದೆ, ಆದರೆ ಶಾರದೆಯಿಂದ ಸಿಗುವುದೂ ಕೊನೆಗೆ ಅಷ್ಟೆ ಎಂದು ಭ್ರಮನಿರಸನಾಗುತ್ತಾನೆ. ಅಮ್ಮನಿಗೊಂದು ಮೊಮ್ಮಗನನ್ನು ತರುವ ಸಾಧನ ತಾನಾಗಲಾರೆನೆಂದು ರಂಗನು ಜೀವನದ ಬಗೆಗೆ ಆಸಕ್ತಿ ಕಳೆದುಕೊಳ್ಳುತ್ತಾನೆ. ಕಾಲ ಕಳೆದಂತೆ ಶಾರದೆ ಹೇಳುವುದು ರಂಗನಿಗೆ ಸರಿಯೆನಿಸತೊಡಗುತ್ತದೆ.

ಕ್ಷಣಿಕ ಸುಖಕ್ಕಾಗಿ ಶಂಕರಯ್ಯನಿಂದ ಶಾರದೆಯನ್ನು ಕಸಿದುಕೊಳ್ಳಬಾರದೆಂದು ರಂಗನು ನಿರ್ಧರಿಸುತ್ತಾನೆ. ಒತ್ತಾಯಕ್ಕೆ ಮಣಿದು ಶಾರದೆ ನನ್ನೊಡನೆ ಬಂದರೆ ಅದು ಕೃತಕ ಪ್ರೀತಿಯಾಗುತ್ತದೆ. ಆಗ ಬದುಕು ಯಾಂತ್ರಿಕವಾಗಬಹುದೆಂದು ಆಲೋಚಿಸುತ್ತಾನೆ. ಹೀಗೆ ಶಾರದೆಯನ್ನು ಒಲಿಸಿಕೊಂಡೆ ತೀರುತ್ತೇನೆಂಬ ರಂಗನು ಕಾಲ ಕಳೆದಂತೆ ಬದಲಾಗುತ್ತಾನೆ. ಹೀಗೆ ಪರಿಸರವು ರಂಗನ ಮನಸ್ಸನ್ನು ಬದಲಿಸುತ್ತದೆ.

'ಜರತ್ಕಾರು' ಕತೆಯಲ್ಲಿ ಚಿಕ್ಕಂದಿನಲ್ಲಿ ತಿಮ್ಮಪ್ಪ ತಂದೆಯನ್ನು ಕಳೆದುಕೊಂಡಿರುತ್ತಾನೆ. ತಾಯಿಯ ನೆರಳಿನಲ್ಲಿ ಮಡಿವಂತ ಪರಿಸರದಲ್ಲಿ ಬೆಳೆಯುತ್ತಾನೆ. ದೊಡ್ಡವನಾದ ಮೇಲೆ ಸಂಪ್ರದಾಯಕ್ಕೆ ವಿರುದ್ಧವಾಗಿ

[illegible]

[illegible]

[illegible]

[illegible]

[illegible]

[illegible]

[illegible]

ಬದುಕನ್ನು ನಡೆಸುತ್ತಾನೆ. ದಿನಕಳೆದಂತೆ ದೇವರನ್ನು ನಂಬದ ಹಾಗೂ ತಾಯಿಯ ಮಾತನ್ನು ಲೆಕ್ಕಿಸದ ತಿಮ್ಮಪ್ಪನು ಮದ್ಯ ಸೇವಿಸುತ್ತಾನೆ. ಜೊತೆಗೆ ವೇಶ್ಯೆಯರ ಸಹವಾಸ ಮಾಡುತ್ತಾನೆ. ತನ್ನ ಬರವಣಿಗೆಯಲ್ಲಿ ಜೀವನಕ್ಕೆ ಅರ್ಥವಿಲ್ಲವೆಂದು ಹೇಳುತ್ತಾನೆ. ಸಜ್ಜನರನ್ನು, ಸದ್ಗೃಹಸ್ಥರನ್ನು ಹಾಗೂ ಪ್ರಗತಿಶೀಲರನ್ನು ತನ್ನ ಬರವಣಿಗೆಯಲ್ಲಿ ತಿಮ್ಮಪ್ಪನು ನಿರ್ದಯವಾಗಿ ಅನಾವರಣಗೊಳಿಸುತ್ತಾನೆ. ಮನೆಯ ಕೆಲಸವನ್ನು ನಿರ್ವಹಿಸುವ ಕಮಲಾಳ ಜೊತೆ ಸಂಬಂಧ ಬೆಳೆಸಿದ ತಿಮ್ಮಪ್ಪನು ಅವಳು ಗರ್ಭಧರಿಸಿದಾಗ ಗೊಂದಲಕ್ಕೊಳಗಾಗುತ್ತಾನೆ.

ಕತ್ತಲಾಗುತ್ತಿದ್ದಂತೆ ರಾತ್ರಿಯ ಮೌನವನ್ನು ಸೀಳಿ ಬರುವ ಅಯ್ಯಪ್ಪಸ್ವಾಮಿಯ ಭಕ್ತರ ಆಕ್ರಂದನವು ಬೆಳಗಿನ ಜಾವದತನಕ ಮುಂದುವರಿಯುತ್ತದೆಂದು ಅಸಮಾಧಾನಗೊಳ್ಳುತ್ತಾನೆ. ಬೆಳಿಗ್ಗೆ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸುವಾಗಿನ ಶಬ್ದವನ್ನು ಕೇಳಿದ ತಿಮ್ಮಪ್ಪನು ಕಿವಿ ಕುಕ್ಕಿಸಿಕೊಂಡು ಕಾಂಪೌಂಡಿನಿಂದ ಹೊರಗೆ ಬರುತ್ತಾನೆ. ಬೀದಿಯಲ್ಲಿ ಚಳಿಗೆ ಹೆದರದೆ ಬದುಕುವ ಚಿಂದಿ ಬಟ್ಟೆ ಮಕ್ಕಳನ್ನು ಕಂಡ ತಿಮ್ಮಪ್ಪ ತನ್ನ ಅಂತರ್ಯದ ಮಾತಿನ ಹೊಳಪನ್ನು, ಶುಚಿಯನ್ನು ಕಳೆದುಕೊಂಡುಬಿಟ್ಟೆನೆಂದು ಆತಂಕಪಡುತ್ತಾನೆ. ಈ ಕೊಳಕು ಬೀದಿಗಳ ಮೇಲೆ ರಾಯರ ಮಠಕ್ಕೆ ಬರಿಗಾಲಿನಲ್ಲಿ ಮಡಿಕಳೆಯದಂತೆ ನಡೆದಾಡುತ್ತಿದ್ದ ತಾಯಿಯ ಬಗೆಗೆ ಆಶ್ಚರ್ಯಪಡುತ್ತಾನೆ. ಹೀಗೆ ಸೃಷ್ಟಿಯ ಅರ್ಥಹೀನ ವಿಲಾಸದಿಂದ ಓಕರಿಕೆ ಪಡುತ್ತಾ ಎರಡು ತಿಂಗಳ ಕಾಲ ಊರೂರು ಸುತ್ತಿ ನೆಮ್ಮದಿ ಕಾಣದೆ ಮನೆಗೆ ಮರಳುತ್ತಾನೆ.

ತಿಮ್ಮಪ್ಪನು ಚಿಕ್ಕಂದಿನಲ್ಲಿ ಮಡಿವಂತನಾಗಿದ್ದವನು ಪ್ರೌಢಾವಸ್ಥೆಗೆ ಬಂದಾಗ ಅದನ್ನು ತಿರಸ್ಕರಿಸಿ ಬದುಕುತ್ತಾನೆ. ತಾಯಿ ಸತ್ತಾಗ ಶಾಸ್ತ್ರದ ಪ್ರಕಾರ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತಾನೆ. ತಾಯಿಯ ಪತ್ರ ಹಾಗೂ ಕಮಲಳ ಸ್ನೇಹದ ಪ್ರಭಾವದಿಂದಾಗಿ ಕಾಲ ಕಳೆದಂತೆ ತಿಮ್ಮಪ್ಪನು ಪರಿವರ್ತನೆಯನ್ನು ಹೊಂದುತ್ತಾನೆ. ಬದುಕಿಗೆ ಅರ್ಥವಿಲ್ಲವೆಂದು ಬರವಣಿಗೆಯಲ್ಲಿ ಬಿಂಬಿಸುತ್ತಾ ಬಂದ ತಿಮ್ಮಪ್ಪನು ಕೊನೆಗೆ ಬರವಣಿಗೆಗೆ ಅರ್ಥವಿಲ್ಲವೆಂಬ ನಿರ್ಧಾರಕ್ಕೆ ಬರುತ್ತಾನೆ. ಅನಂತರ ಬರೆದುದನ್ನು ಕಸದ ತೊಟ್ಟಿಗೆ ಎಸೆಯುತ್ತಾನೆ. ಈ ಬದಲಾವಣೆಯ ಫಲವಾಗಿ ತಿಮ್ಮಪ್ಪನು ತಾನು ವಾಸಿಸುವ ಪರಿಸರಕ್ಕೆ ಹೊಂದಿಕೊಂಡು ಬದುಕುತ್ತಾನೆ.

'ಮೌನಿ' ಕತೆಯಲ್ಲಿ ಸ್ನೇಹಿತರಿಬ್ಬರು ಜೀವನೋಪಾಯಕ್ಕೆಂದು ಅಡಿಕೆ ತೋಟ ಮಾಡುತ್ತಾರೆ. ಅಪ್ಪಣ್ಣನು ತೋಟದಲ್ಲಿ ಸಮೃದ್ಧವಾಗಿ ಅಡಿಕೆ ಬೆಳೆಯನ್ನು ಬೆಳೆಯುತ್ತಾನೆ. ಬಂದ ಹಣದಿಂದ ಗದ್ದೆ ಹಾಗೂ ಮನೆಯನ್ನು ಪಡೆದು ಶ್ರೀಮಂತನಾಗುತ್ತಾನೆ. ಅಡಿಕೆ ತೋಟದಲ್ಲಿ ಕುಂಠಿತವಾದ ಬೆಳೆಯಿಂದ ಕುಪ್ಪಣ್ಣಭಟ್ಟನ ಸಾಲವು ಹೆಚ್ಚಾಗುತ್ತದೆ. ಅಪ್ಪಣ್ಣಭಟ್ಟನು ತನ್ನ ಪರಿಸರಕ್ಕೆ ತಕ್ಕಂತೆ ಮನೆಯನ್ನು ಶುಚಿಯಾಗಿಟ್ಟುಕೊಂಡಿರುತ್ತಾನೆ. ಜನರನ್ನು ನಯ ನಾಜೂಕಿನಿಂದ ಮಾತನಾಡಿಸಿ ಉಪಚರಿಸುತ್ತಾನೆ. ಕುಪ್ಪಣ್ಣಭಟ್ಟನ ಮನೆಯು ಶುಚಿಯಾಗಿರುವುದಿಲ್ಲ. ನಿಷ್ಠುರವಾದ ಮಾತುಗಳಿಂದ ಹಾಗೂ ಹಠಮಾರಿತನದಿಂದ ಜನರ ಉಪೇಕ್ಷೆಗೆ ಗುರಿಯಾಗುತ್ತಾನೆ. ಹೀಗೆ ಒಂದೇ ಪರಿಸರದಿಂದ ಬಂದ ಸ್ನೇಹಿತರು ಭಿನ್ನ ರೀತಿಯಲ್ಲಿ ಬದುಕುತ್ತಾರೆ.

ಬದ್ಧ ವೈರಿಯಂತಿದ್ದ ಕುಪ್ಪಣ್ಣಭಟ್ಟನನ್ನು ಅಪ್ಪಣ್ಣಭಟ್ಟನು ಸಂಚು ಹೂಡಿ ದಿವಾಳಿಯಾಗಿಸುತ್ತಾನೆ. ಕುಪ್ಪಣ್ಣಭಟ್ಟ ಹಣಸಂಪಾದಿಸಲು ಮಾಡಿದ ಪ್ರಯತ್ನವೆಲ್ಲಾ ಅಪ್ಪಣ್ಣಭಟ್ಟನ ಕುತಂತ್ರದಿಂದಾಗಿ ವ್ಯರ್ಥವಾಗುತ್ತದೆ. ಹೆಂಡತಿಯ ಒಡವೆಯನ್ನು ಅಡವಿಟ್ಟು ತಂದ ಹಣವನ್ನು ಕೆಲಸಗಾರರಿಗೆ ಹಂಚುತ್ತಾನೆ. ಕುಪ್ಪಣ್ಣಭಟ್ಟನ ಹತ್ತಿರ ಹಣ ವಸೂಲಿ ಮಾಡಲು ಸಾಲವಸೂಲಿ ಮಾಡುವವರನ್ನು ಹಾಗೂ ಕೆಲಸಗಾರರನ್ನು ಅಪ್ಪಣ್ಣಭಟ್ಟನು

ಪ್ರೇರಿಸುತ್ತಾನೆ. ದೀವಾಳಿಯಾದ ಕುಪ್ಪಣ್ಣಭಟ್ಟನನ್ನು ಜನರು ಸುಮ್ಮನೆ ಬಿಡುವುದಿಲ್ಲ. ಮನೆ ಹಾಗೂ ಸಾಮಾನುಗಳನ್ನು ಹರಾಜು ಹಾಕುತ್ತಾರೆ. ಪರಿಸ್ಥಿತಿ ಕೈ ಮೀರಿದಾಗ ಕುಪ್ಪಣ್ಣಭಟ್ಟನು ನಿಸ್ಸಾಹಾಯಕನಾಗಿ ಮೌನಿಯಾಗುತ್ತಾನೆ.

"ಕುಪ್ಪಣ್ಣಭಟ್ಟನ ಮೌನವು ಅಪ್ಪಣ್ಣಭಟ್ಟನ ಪರಿವರ್ತನೆಗೆ ಕಾರಣವಾಗುತ್ತದೆ. ಕುಪ್ಪಣ್ಣಭಟ್ಟರೊಂದಿಗೆ ಸಮಸ್ತ ಮಾನವೀಯ ಸಂಬಂಧಗಳನ್ನು ನಿರಾಕರಿಸಿದ ಅಪ್ಪಣ್ಣಭಟ್ಟನಿಗೆ ಮೌನಿಯಾಗಿ ಕೂತ ಕುಪ್ಪಣ್ಣಭಟ್ಟನ ಏಕಾಂಗಿತನವು ಅವನ ಬದುಕಿನ ಬೇರನ್ನು ಅಲುಗಾಡಿಸಿಬಿಡುತ್ತದೆ."[೧೪] ಕಾಲಬದಲಾದಂತೆ ಅಪ್ಪಣ್ಣಭಟ್ಟನ ಮನಸ್ಥಿತಿಯು ಬದಲಾಗುತ್ತದೆ. ಕುಪ್ಪಣ್ಣಭಟ್ಟನೊಂದಿಗೆ ದ್ವೇಷವನ್ನು ಸಾಧಿಸುತ್ತಾ ಬಂದ ಅಪ್ಪಣ್ಣಭಟ್ಟನು ಪುನಃ ಸ್ನೇಹಿತನೊಂದಿಗೆ ಮಾನವೀಯ ಸಂಬಂಧವನ್ನು ಬೆಳೆಸಲು ಮುಂದಾಗುತ್ತಾನೆ.

ಹೀಗೆ ವ್ಯಕ್ತಿಗಳ ಪ್ರಜ್ಞೆಗೂ ಬದುಕುವ ಪರಿಸರಕ್ಕೂ ತಾಳಮೇಳಗಳಿಲ್ಲದೆ ವ್ಯಕ್ತಿತ್ವ ರೂಪಿಸಿಕೊಳ್ಳಲು ಹೆಣಗಾಡುವುದನ್ನು ಅನಂತಮೂರ್ತಿಯವರ ಕತೆಗಳಲ್ಲಿ ಕಾಣಬಹುದು. ಈ ವ್ಯಕ್ತಿತ್ವ ರೂಪಣೆಯು ಯಾವತ್ತೂ ತಾವು ನಂಬಿದ ಆದರ್ಶಗಳಿಗೆ, ವಿಚಾರಗಳಿಗೆ ಬದ್ಧವಾದುದು ಎಂಬುದು ಇಲ್ಲಿ ಬಹಳ ಮುಖ್ಯ ಸಂಗತಿ. ಅಂದರೆ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಬದುಕುವ ವ್ಯಕ್ತಿಗಳು ಆ ಉದ್ದೇಶದ ಸಾಧನೆಗಾಗಿ ಹಾದಿಯನ್ನು ಕ್ರಮಿಸಬೇಕಾದಾಗ ಸಾಂಸ್ಕೃತಿಕ ವಿಚಾರಗಳ ಜೊತೆ ಸಂಘರ್ಷ ಸಹಜ. ಒಂದು ರೀತಿಯಲ್ಲಿ ವ್ಯಕ್ತಿತ್ವವನ್ನು ಪ್ರಜ್ಞಾಪೂರ್ವಕವಾಗಿ ಪರಿಸರದ ಓರೆಗೆ ಹಚ್ಚುವ ಕ್ರಿಯೆಯು ನಡೆದಿರುತ್ತದೆ. ಇಂತಹ ಘರ್ಷಣೆಯ ಪರಿಣಾಮವಾಗಿ ವ್ಯಕ್ತಿಗಳಿಗೆ ನಿರ್ದಿಷ್ಟವಾದ ವ್ಯಕ್ತಿತ್ವದ ಛಾಪು ದೊರೆಯುತ್ತದೆ. ಸಮಾಜದಲ್ಲಿ ಪ್ರತಿಷ್ಠೆಯನ್ನುಳಿಸಿ ಬೆಳೆಯಬೇಕಾದರೆ ಈ ತೆರನಾದ ಸಂಘರ್ಷ ಸಹಜ ಹಾಗೂ ಅನಿವಾರ್ಯವೇ ಹೌದು.

'ಸಂಸ್ಕಾರ' ಕಾದಂಬರಿಯಲ್ಲಿ ಅಗ್ರಹಾರದ ಬ್ರಾಹ್ಮಣ ಸಮುದಾಯದ ಪರವಾದ ಕೆಲಸಗಳಲ್ಲಿ ಪ್ರಾಣೇಶಾಚಾರ್ಯ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದನು. ಪಂಡಿತನಾದ ಇವನಿಗೆ ಬ್ರಾಹ್ಮಣರ ಮುಖಂಡನ ಸ್ಥಾನ ಲಭಿಸಿದ್ದು ಅವರ ಜೀವನಪಥಕ್ಕೆ ದಾರಿದೀಪವಾಗಿದ್ದಾನೆ. ಶಾಸ್ತ್ರ ಸಮ್ಮತವಾಗಿ ಬದುಕು ನಡೆಸುತ್ತಿರುವ ಪ್ರಾಣೇಶಾಚಾರ್ಯನು ತನಗೆ ವಿರುದ್ಧವಾದ ಜೀವನ ನಡೆಸುವ ನಾರಣಪ್ಪನ ನಡವಳಿಕೆಯನ್ನು ತಿದ್ದಲು ಪ್ರಯತ್ನಿಸಿ ವಿಫಲನಾಗುತ್ತಾನೆ. ನಾರಣಪ್ಪನ ಅನಿರೀಕ್ಷಿತ ಸಾವು ಅಗ್ರಹಾರಕ್ಕೆ ಸಮಸ್ಯೆಯಾಗಿ ಪರಿಣಮಿಸುತ್ತದೆ. ಬ್ರಾಹ್ಮಣನಾಗಿ ಉಳಿಯದ ಅವನನ್ನು ಸಂಸ್ಕಾರ ಮಾಡುವ ವಿಚಾರದಲ್ಲಿ ಅಗ್ರಹಾರವು ಪ್ರಾಣೇಶಾಚಾರ್ಯನನ್ನು ಆಶ್ರಯಿಸುತ್ತದೆ. ಧರ್ಮಶಾಸ್ತ್ರ ಗ್ರಂಥಗಳಿಂದ ಉತ್ತರ ಸಿಗದಿದ್ದಾಗ ಕೊನೆಗೆ ಪ್ರಾಣೇಶಾಚಾರ್ಯನು ಮಾರುತಿ ದೇವರ ಮೊರೆ ಹೋಗುತ್ತಾನೆ. ಅಲ್ಲೂ ಅವನ ನಿರೀಕ್ಷೆ ಸುಳ್ಳಾಗುತ್ತದೆ. ನಿರಾಶೆಯಲ್ಲಿದ್ದಾಗ ಆಕಸ್ಮಿಕವಾಗಿ ಚಂದ್ರಿಯೊಂದಿಗೆ ಸಂಬಂಧ ಬೆಳೆಯುತ್ತದೆ.

ಕಾಲಕ್ಕೆ ತಕ್ಕಂತೆ ಪ್ರಾಣೇಶಾಚಾರ್ಯನು ಬದಲಾಗುತ್ತಾನೆ. ಯಾವುದನ್ನು ನಿಗ್ರಹಿಸಬೇಕೆಂದುಕೊಂಡಿದ್ದನೋ ಅದಕ್ಕೆ ಜೋತು ಬೀಳುತ್ತಾನೆ. ಪ್ರಾಣೇಶಾಚಾರ್ಯನಿಗೆ ಇಲ್ಲಿಯತನಕ ತಾನು ನಡೆಸಿದ್ದು ಕಂದಾಚಾರದ ಬದುಕೆನಿಸುತ್ತದೆ. ಚಂದ್ರಿಯು ಸಮಾಗಮದ ಪರಿಣಾಮವಾಗಿ ಹೊಸ ಮನುಷ್ಯನಾಗಿ ಅವನು ಬದಲಾಗುತ್ತಾನೆ. ಬದಲಾದ ಪರಿಸ್ಥಿತಿಯಲ್ಲಿ ತನ್ನ ಜೀವನವನ್ನು ತಾನೇ ರೂಪಿಸಿಕೊಳ್ಳಬೇಕಾದ ಹೊಸ ಹೊಣೆಗಾರಿಕೆ ಎದುರಾಗುತ್ತದೆ. ಒಂದು ಆಯ್ಕೆಯ ನಿರ್ಣಾಯಕ ಗಳಿಗೆಯಲ್ಲಿ ಅವನು ಆತಂಕವನ್ನು ಅನುಭವಿಸಬೇಕಾಗುತ್ತದೆ.

ಹೊಸ ಜೀವನಕ್ಕೆ ಹೊಂದಿಕೊಳ್ಳುವಾಗಿನ ಸಂಕೀರ್ಣ ಸಂದರ್ಭವನ್ನು ಅವನು ಎದುರಿಸಬೇಕಾಗುತ್ತದೆ. ಚಂದ್ರಿಯೊಂದಿಗೆ ಸಂಬಂಧ ಬೆಳೆಸಿದ ನಂತರ ಅಗ್ರಹಾರಕ್ಕೆ ಹೋಗಲು ಹಿಂಜರಿಯುವ ಪ್ರಾಣೇಶಾಚಾರ್ಯ ಬ್ರಾಹ್ಮಣರಿಗೆ ತನ್ನ ನಿರ್ಧಾರವನ್ನು ತಿಳಿಸಲು ಹೆದರುತ್ತಾನೆ.

ಬದಲಾದ ಮನೋಭಾವವು ಹೆಂಡತಿಯನ್ನು ನೋಡಿ ಅಸಹ್ಯಪಟ್ಟುಕೊಳ್ಳುತ್ತಾನೆ. ಹೆಂಡತಿಯ ರೋಗದ ಸ್ಥಿತಿಯಿಂದ ಹದವಾದೆನೆಂದು ಇಲ್ಲಿಯತನಕ ಹಿಗ್ಗಿದ್ದ ಅವನು ಈಗ ಅದನ್ನು ನಿರಾಕರಿಸುವ ಸ್ಥಿತಿಗೆ ತಲುಪಿದ್ದಾನೆ. ಧರ್ಮದ ಪ್ರಭಾವದಿಂದ ನಿಸರ್ಗ ವಿಮುಖನಾಗಿದ್ದ ಪ್ರಾಣೇಶಾಚಾರ್ಯನಿಗೆ ನಾರಣಪ್ಪನ ಸಾವು ಒಡ್ಡಿದ ಸಮಸ್ಯೆ ಅವನ ಎರಡು ಹಸಿವುಗಳನ್ನು ತೀರಿಸುವ ನೈಸರ್ಗಿಕ ಉತ್ತರವಾಗಿ ಚಂದ್ರಿಯನ್ನು ಎದುರು ನಿಲ್ಲಿಸುತ್ತದೆ. ಹಸಿವಿನ ಗಳಿಗೆಯಲ್ಲಿ ತನ್ನ ಮಡಿಲಲ್ಲಿ ತುಂಬಿದ ಬಾಳೇಹಣ್ಣುಗಳನ್ನು ತಿನ್ನಿಸಿ ದೇಹಸುಖದ ಹಸಿವನ್ನು ಪೂರೈಸಿ ಚಂದ್ರಿ ಪ್ರಾಣೇಶಾಚಾರ್ಯನನ್ನು ಅನುಭವದ ಹೊಸ ಲೋಕದತ್ತ ತಿರುಗಿಸಿ ಬಿಡುತ್ತಾಳೆ. ಸಮಾಗಮದ ನಂತರ ಎಚ್ಚರಗೊಂಡ ಆಚಾರ್ಯ ಮೊದಲಿನ ವ್ಯಕ್ತಿಯಾಗಿರುವುದಿಲ್ಲ. ಅವನಲ್ಲಾದ ಪರಿವರ್ತನೆಯ ಸುಳಿವಿನ ಹಂತವನ್ನು ಇಲ್ಲಿ ಕಾಣಬಹುದು. ಪ್ರಾಣೇಶಾಚಾರ್ಯನಿಗೆ ಹೊಸ ಅನುಭವದಲ್ಲಿ ಸುಂದರ, ಅಸಹ್ಯದ ವ್ಯತ್ಯಾಸ ಗಮನಕ್ಕೆ ಬರುತ್ತದೆ. ಹೆಂಡತಿ ಸತ್ತ ನಂತರ ಹೊಸ ಬದುಕನ್ನು ಅವನು ಅರಸುತ್ತಾ ಹೊರಡುತ್ತಾನೆ. ಪರಿವರ್ತನೆಯಾದ ಅವನು ಭಾವ ತುಮುಲವನ್ನು ಎದುರಿಸುತ್ತಾನೆ. ಪ್ರಾಣೇಶಾಚಾರ್ಯನು ಸಾಮಾಜಿಕ ಒಳಿತಿಗಾಗಿ ಮತ್ತು ಆಧ್ಯಾತ್ಮಿಕ ಉನ್ನತಿಗೆಂದು ಮಾಡಿದ ಮೌಲ್ಯಗಳನ್ನು ಅನುಸರಿಸಿ ನೆಮ್ಮದಿಯಿಂದಿರಬಹುದೆಂದು ನಂಬಿದ್ದ. ಅನಿರೀಕ್ಷಿತ ಘಟನೆ ಬದಲಾವಣೆಯನ್ನು ತಂದರೂ ಅವನ ಪ್ರಜ್ಞೆ ಬ್ರಾಹ್ಮಣ್ಯವನ್ನು ನಿರಾಕರಿಸುವುದಿಲ್ಲ.

"ಕಾದಂಬರಿಯಲ್ಲಿ ಚಿತ್ರಿತವಾದ ಕಾಲವು ಮಧ್ಯ ಯುಗದಿಂದ ಹಿಡಿದು ಈಚಿನ ಹಲವು ದಶಕಗಳ ನಡುವಣ ವ್ಯಾಪ್ತಿಯನ್ನು ಹೊಂದಿರುವ ಭಾರತದ ಹಳ್ಳಿಗಳ ಅನಿರ್ದಿಷ್ಟವೂ ನಿರಂತರವೂ ಆದ ವೇಳೆಯ ಕಲ್ಪನೆಯ ಪಡಿಯಚ್ಚಿನಂತಿದೆ. ವ್ಯಕ್ತಿ ಜೀವನದಲ್ಲಿಯ ಧರ್ಮಾಚರಣೆಗಳು ಹಾಗೂ ಋತುಮಾನಗಳು ಹಳ್ಳಿಯ ಕಾಲಮಾನದೊಂದಿಗೆ ಬೆಸೆದುಕೊಂಡಿವೆ. ಆದರೆ ಆಸೆಬುರುಕ ಕರ್ಮದ ಬ್ರಾಹ್ಮಣರು ಈ ಅನಂತಕಾಲದ ಪರಿವೆ ಇಲ್ಲದೆ ಬದುಕುತ್ತಾರೆ."[೧೫] ಪ್ರಾಣೇಶಾಚಾರ್ಯನು ಚಂದ್ರಿಯ ಸಮಾಗಮದಿಂದ ಪರಿವರ್ತನೆಯಾಗುತ್ತಾನೆ. ಸೌಂದರ್ಯದ ಕಲ್ಪನೆಯು ಮೂಡಿ ಅಹಂಕಾರಭಂಗವಾದಂತೆನಿಸಿ ದ್ವಂದ್ವಗಳ ಅನುಭವವಾಗುತ್ತದೆ.ತನ್ನಲ್ಲಿ ಅನುಭವದ ಅರ್ಥ ಮತ್ತು ಮಣ್ಣಿನ ಹಂಬಲ ಮೂಡಿದೆಯೆನಿಸುತ್ತದೆ. ತನ್ನಬಾಳು ಸಾರ್ಥಕತೆಯತ್ತ ಸಾಗಿದೆ ಎನ್ನುವುದರ ಸೂಚನೆಯನ್ನು ಅವನು ಕಾಣತೊಡಗುತ್ತಾನೆ. ಅಲ್ಲಿಯವರೆಗೂ ಅಗ್ರಹಾರ, ಕರ್ತವ್ಯ ಇಂತಹ ಜವಾಬ್ದಾರಿಗಳಲ್ಲೇ ಮಗ್ನನಾಗಿದ್ದ ಅವನು ತನ್ನ ಹೊರಪ್ರಪಂಚಕ್ಕೂ ಸ್ಪಂದಿಸತೊಡಗುತ್ತಾನೆ. ಚಂದ್ರಿಯನ್ನು ಕೂಡಿದ ನಂತರ ತಾನಾಗಿ ಆರಿಸಿಕೊಂಡಿದ್ದ ಉದಾತ್ತ ಜೀವನದ ಬಗೆಗೆ ಇದ್ದ ನಂಬಿಕೆಯನ್ನು ಹೊಸ ಭಾವನೆಗಳು ಕಳೆದು ಹಾಕುತ್ತವೆ. ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಅವನು ಜೀವಿಸುವ ಪರಿಸರವು ಪ್ರಭಾವವನ್ನು ಬೀರುತ್ತದೆ. ನಿತ್ಯ ಪೂಜೆ ಪುನಸ್ಕಾರಗಳಲ್ಲಿ ತಲ್ಲೀನನಾಗಿರುತ್ತಿದ್ದ ಪ್ರಾಣೇಶಾಚಾರ್ಯನು ಚಂದ್ರಿಯ ಸಂಗದಿಂದ ಪರೋಕ್ಷವಾಗಿ ಸಂಪ್ರದಾಯವನ್ನು ಮೀರುತ್ತಾನೆ. ಕಾಲ ಮತ್ತು ಪರಿಸರವೇ ವ್ಯಕ್ತಿಯ ಸಂಘರ್ಷಗಳ ಪರಿಣಾಮವಾಗಿ ವ್ಯಕ್ತಿಯ ನಿಯಂತ್ರಿಸುತ್ತದೆ ಎನ್ನುವುದಕ್ಕೆ ಪ್ರಾಣೇಶಾಚಾರ್ಯ ಒಂದು ನಿದರ್ಶನ.

'ಭಾರತೀಪುರ'ಕಾದಂಬರಿಯಲ್ಲಿ ಜಗನ್ನಾಥನು ತಾನು ಹುಟ್ಟಿದ ಪರಿಸರದಿಂದ ಭಿನ್ನವಾಗಿ ನಿಲ್ಲಲು ಆಲೋಚಿಸುತ್ತಾನೆ. ತನ್ನ ಸುತ್ತಲಿನ ಎಲ್ಲರ ಬದುಕನ್ನು ಮೊದಲೇ ನಿರ್ಧರಿಸಿರುವ ವ್ಯವಸ್ಥೆಯನ್ನು ಮತ್ತು

ಅದನ್ನು ಕಾಯುವ ಮಂಜುನಾಥಸ್ವಾಮಿಯನ್ನು ಎದುರು ಹಾಕಿಕೊಳ್ಳುತ್ತಾನೆ. ಈ ಕೆಲಸವನ್ನು ಕೈಗೊಳ್ಳುವಾಗ ಹೊಸದಾದ ಯೋಜನೆಯನ್ನು ರೂಪಿಸಿಕೊಳ್ಳಬೇಕೆಂದು ಜಗನ್ನಾಥ ಯೋಚಿಸುತ್ತಾನೆ. ಇಲ್ಲದಿದ್ದರೆ ವ್ಯವಸ್ಥೆಯ ಜೊತೆಗೆ ತಾನೂ ಸೇರಿಕೊಳ್ಳಬಹುದೆಂಬ ಭಯದಿಂದ ಅವನ ಆಸ್ತಿಯೊಂದನ್ನು ಬಿಟ್ಟು ಉಳಿದೆಲ್ಲಾ ಸಂಬಂಧಗಳನ್ನು ಕಳೆದುಕೊಳ್ಳಲು ನಿರ್ಧರಿಸುತ್ತಾನೆ. ಧರ್ಮದರ್ಶಿತ್ವಕ್ಕೆ ರಾಜೀನಾಮೆ ನೀಡಿದ ಅವನು ಪ್ರಾಮಿಸರಿ ನೋಟುಗಳನ್ನು ಸುಟ್ಟು ಹಾಕುತ್ತಾನೆ. ಇವನ ತೊಡಗುವುಕೆಯಿಂದಾಗುವ ಮಹತ್ವದ ಅಂಶವೆಂದರೆ ಅವನಲ್ಲಾಗುವ ಪರಿವರ್ತನೆಯಾಗಿದೆ. ಇಲ್ಲಿ ಸ್ವಾತಂತ್ರ್ಯೋತ್ತರ ಭಾರತದ ಜೀವನ ಬದಲಾವಣೆಯ ಚಿತ್ರಣವಿದೆ.

ಒಂದು ಚಿಕ್ಕ ಊರಿನ ಬೇರೆ ಬೇರೆ ಜನ ವರ್ಗಗಳನ್ನೊಳಗೊಂಡಿರುವ ಇಲ್ಲಿನ ಸಂದರ್ಭ ಕಾಲ ದೇಶದ ಚಿತ್ರಣವನ್ನು ಕಾಣಬಹುದು. ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸಿದ್ದ ಶ್ರೀಪತಿರಾಯ ಭಾರತೀಪುರದ ವ್ಯವಸ್ಥೆಗೆ ಹೊಂದಿಕೊಂಡಂತೆ ಗುರಪ್ಪಗೌಡನ ರಾಜಕಾರಣ ಹಾಗೂ ಪ್ರಭುವಿನ ವ್ಯಾಪಾರ ಕಾಲಕ್ಕೆ ತಕ್ಕಂತೆ ಸಾಗಿದೆ. ಶ್ರಮಜೀವಿಗಳಾದ ಹರಿಜನರು ದಿನನಿತ್ಯದ ತಮ್ಮ ಕೆಲಸ ಕಾರ್ಯಗಳಲ್ಲಿ ಸಂಪೂರ್ಣ ಮಗ್ನರಾಗಿದ್ದಾರೆ. ಜಗನ್ನಾಥ ಯೋಚಿಸುವಂತೆ ವ್ಯವಸ್ಥೆಯಲ್ಲಿರುವ ಯಾರೂ ಯೋಚಿಸುವುದಿಲ್ಲ. ಅವರೆಲ್ಲಾ ಮಳೆ ಬಂದ, ಬರದ ವಿಷಯ, ಎಮ್ಮೆ ಕರು ಹಾಕಿದ ವಿಷಯ, ಗೇಣಿ ಬಾಕಿಯ ವಿಷಯ ಇಂತಹ ವಿಷಯಗಳನ್ನು ಮಾತನಾಡುವ, ಮರೆಯುವ, ಜಗಳವಾಡುವ ಹಾಗೂ ಹರಕೆ ಹೊರುವ ಜಾಯಮಾನ ಅವರದ್ದಾಗಿದೆ.

ಜಗನ್ನಾಥ ಭಾರತೀಪುರದ ಪರಿಸರಕ್ಕೆ ಸಂಪೂರ್ಣವಾಗಿ ಹೊಂದಿಕೊಳ್ಳಲಾರದೆ ಹೋಗುತ್ತಾನೆ. ತನ್ನ ಪರಿಸರವನ್ನು ಅವನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗಲೆಲ್ಲಾ ಅದು ಜಟಿಲವಾಗುತ್ತಾ ಹೋಗುತ್ತದೆ. ಸುತ್ತಮುತ್ತಲಿನ ಪರಿಸರದ ಅನುಭವಗಳ ಜೊತೆಗೆ ಜಗನ್ನಾಥನ ಸ್ವಂತ ಅನುಭವಗಳು ಅವನನ್ನು ಪ್ರಜ್ಞಾವಂತನನ್ನಾಗಿ ಮಾಡಿವೆ. ಇಂಗ್ಲೆಂಡಿನ ಬಾರ್‌ನಲ್ಲಿ ಬೀರ್ ಕುಡಿಯುತ್ತಾ ಮಾರ್ಕ್ಸಿಸಂ, ಲಿಬರಲಿಸಂ, ರ್‍ಯಾಡಿಕಲಿಸಂ, ನೆಹ್ರೂಯಿಸಂ ಬಗೆಗೆ ಚರ್ಚಿಸುತ್ತಾ, ಕ್ರಾಂತಿಕಾರಿಯಾಗಿದ್ದ ಅವನು ಭಾರತೀಪುರದ ಪರಿಸರದಲ್ಲಿ ಗೊಂದಲಕ್ಕೊಳಗಾಗಿರುವುದನ್ನು ತನ್ನಲ್ಲೇ ಗುರುತಿಸಿಕೊಳ್ಳುತ್ತಾನೆ. ಪರಿಸರ ಸುಧಾರಣೆ ಮಾಡಲು ಜಗನ್ನಾಥನು ಸಾಮಾಜಿಕ ನೆಲೆಯಲ್ಲಿ ಯೋಜನೆಯೊಂದನ್ನು ಹಾಕಿಕೊಳ್ಳುತ್ತಾನೆ. ಆದರೆ ಅವನ ಉನ್ನತ ಪ್ರಜ್ಞೆಯಿಂದಾಗಿ ಪರಿಸರವನ್ನು ಸರಿಯಾಗಿ ನೋಡಲು ಸಾಧ್ಯವಾಗದೆ ಅವನ ಪ್ರಜ್ಞೆ ಪರಿಸರವನ್ನು ಗೌಣವಾಗಿಸಿ ತಾನೇ ಮುಖ್ಯಪಾತ್ರವಹಿಸುತ್ತದೆ.

ಹೊಸ ಅರಿವಿನಲ್ಲಿ ಮಾರ್ಗರೇಟ್‌ಳನ್ನು ಬಯಸುವ ಹಾಗೂ ದೇವರನ್ನು ಅರ್ಥಮಾಡಿಕೊಳ್ಳಬೇಕೆಂದಿರುವ ಜಗನ್ನಾಥನಿಗೆ ತನ್ನ ತಾಯಿಯ ಅನೈತಿಕ ಸಂಬಂಧವನ್ನು ಎದುರಿಸುವಾಗ ಗೊಂದಲಗೊಳ್ಳುತ್ತಾನೆ. ಜಗನ್ನಾಥನ ಮನಸ್ಸಿನ ವಿಚಾರಗಳಿಗೂ ಮತ್ತು ಭಾವನೆಗಳಿಗೂ ನಡುವೆ ಕಂದಕವಿದೆ. ಅವನ ವಿಚಾರವನ್ನು ಮೆಟ್ಟಿ ಭಾವನೆ ನಿಂತಾಗ ಇಬ್ಬಂದಿತನವನ್ನು ಎದುರಿಸುತ್ತಾನೆ. ಜಗನ್ನಾಥನ ಅರಿವು ಹರಿಜನರನ್ನು ಪ್ರೀತಿಸು ಎಂದರೆ ಅವನ ಇರುವು ಅವರನ್ನು ಕಂಡರೆ ಅಸಹ್ಯಪಡುತ್ತದೆ. ಹೀಗೆ ಅವನ Awareness (ಎಚ್ಚರ) ಮತ್ತು Being (ಇರುವಿಕೆ) ಗಳ ನಡುವೆ ದ್ವಂದ್ವವಿದೆ.

'ಅವಸ್ಥೆ' ಕಾದಂಬರಿಯಲ್ಲಿ ಕೃಷ್ಣಪ್ಪನ ಜೀವನದ ಪರಿವರ್ತನೆಗೆ ಅಣ್ಣಾಜಿಯು ಪ್ರಮುಖ ಕಾರಣನಾಗುತ್ತಾನೆ. ಅವನ ಕ್ರಾಂತಿಕಾರಿ ಮನೋಭಾವವನ್ನು ಕಂಡು ಅಣ್ಣಾಜಿಯು ಕ್ರಾಂತಿಗೆ ಪ್ರಚೋದಿಸುತ್ತಾನೆ.

ರಾಜಕೀಯದಲ್ಲಿ ತನ್ನನ್ನು ಹೆಚ್ಚು ತೊಡಗಿಸಿಕೊಂಡಂತೆ ಕೃಷ್ಣಪ್ಪ ಮೊದಲಿನ ಸಿಟ್ಟು, ಆವೇಶಗಳನ್ನು ಕಳೆದುಕೊಳ್ಳುತ್ತಾನೆ. ರಾಜಕೀಯದ ವಿಷವರ್ತುಲಕ್ಕೆ ಸಿಲುಕಿ ರಾಜಕಾರಣಿಗಳ ಕೈಗೊಂಬೆಯಾಗುತ್ತಾ ಬರುತ್ತಾನೆ. ದುಡ್ಡುಮಾಡುವವರಿಗೆ, ಜನಪ್ರಿಯತೆ ಬಯಸುವವರಿಗೆ ಸೌಜನ್ಯದ ಅಗತ್ಯವಿದೆ ಎನ್ನುತ್ತಿದ್ದ ಸೌಜನ್ಯದ ವಿರೋಧಿಯಾದ ಕೃಷ್ಣಪ್ಪ ಶ್ರೀಮಂತ ಸ್ನೇಹಿತ ಗೋಪಾಲರೆಡ್ಡಿಯ ಸಹವಾಸ ಮಾಡಿದ ನಂತರ ತನ್ನ ಮೊದಲನೆ ವಿಚಾರಗಳ ಬಗೆಗೆ ಬದಲಾಗುತ್ತಾ ಹೋಗುತ್ತಾನೆ. ಅವನ ವ್ಯವಸ್ಥೆ ವಿರುದ್ಧದ ಕೋಪ, ಅದರ ಮೊದಲಿನ ತೀವ್ರತೆ ಮಿತಿಗಳನ್ನು ಕಳೆದುಕೊಂಡು ಇಡಿಯಾಗಿ ಕಾಣಬಲ್ಲ ವಿಚಾರಗಳಾಗುತ್ತವೆ. ಪ್ರಾರಂಭದಲ್ಲಿ ಕೋಪಿಷ್ಟನಾಗಿದ್ದ ಕೃಷ್ಣಪ್ಪನು ಮಹೇಶ್ವರಯ್ಯನ ಸಹಾಯದಿಂದ ಅಣ್ಣಾಜಿಯ ಪ್ರಭಾವದಿಂದ ರಾಜಕೀಯವನ್ನು ಪ್ರವೇಶಿಸುತ್ತಾನೆ. ತನ್ನ ಪಕ್ಷದಲ್ಲಿ ಅನ್ಯಾಯ ನಡೆವುದನ್ನು ಕಂಡು ರಾಜಿನಾಮೆಯನ್ನು ನೀಡುತ್ತಾನೆ. ಪ್ರಜ್ಞಾವಂತನಾದ ಕೃಷ್ಣಪ್ಪನು ಪರಿಸರಕ್ಕೆ ತಕ್ಕಂತೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾನೆ.

'ಭವ' ಕಾದಂಬರಿಯಲ್ಲಿ ಶಾಸ್ತ್ರಿಯು ಮೊದಲ ಹೆಂಡತಿ ಓಡಿಹೋದಳೆಂದು ಕುಪಿತನಾಗಿದ್ದವನು ತನ್ನ ಮಗಳು ಓಡಿಹೋದಾಗಲು ಕೋಪಿಸಿಕೊಳ್ಳುತ್ತಾನೆ. ನಂತರ ಮಗಳನ್ನು ಹುಡುಕಿತರುವ ಭರವಸೆಯನ್ನು ಹೆಂಡತಿಗೆ ನೀಡುತ್ತಾನೆ. ಕೊನೆಗೆ ಮಗಳನ್ನು ಕ್ಷಮಿಸಿ ಮನೆಗೆ ಬರಲು ಅವಕಾಶ ಮಾಡಿಕೊಡುತ್ತಾನೆ. ದಿನಕರನನ್ನು ತನ್ನ ಮಗನೇ ಅಥವಾ ಪಂಡಿತನ ಮಗನೇ ಎಂದು ಗೊಂದಲಗೊಳ್ಳುತ್ತಿದ್ದ ಅವನು ಕೊನೆಗೆ ಮಗನನ್ನು ಒಪ್ಪಿಕೊಳ್ಳುವ ಮನಸ್ಸು ಮಾಡುತ್ತಾನೆ.

ನಾರಾಯಣ ತಂತ್ರಿಗೆ ತಾನು ಸಂಬಂಧ ಇರಿಸಿಕೊಂಡಿದ್ದ ಗಂಗೂಬಾಯಿಯು ದಿನಕರನೊಂದಿಗೆ ಸಂಬಂಧವನ್ನು ಹೊಂದಿದ್ದಾಳೆ ಎಂದು ತಿಳಿದಾಗ ಅವಳನ್ನು ನೋಡುವ, ಮಾತನಾಡಿಸುವುದನ್ನು ಬಿಡುತ್ತಾನೆ. ಅವಳ ಬಸಿರನ್ನು ತೆಗೆಸಬೇಕೆಂದು ಯೋಚಿಸಿ ಕೊನೆಗೆ ತನ್ನ ನಿರ್ಧಾರವನ್ನು ಬದಲಿಸಿಕೊಳ್ಳುತ್ತಾನೆ. ಪ್ರಸಾದನ ತಾಯಿಯ ಅನೈತಿಕ ಸಂಬಂಧವನ್ನು ದ್ವೇಷಿಸುತ್ತಿದ್ದವನು ಕೊನೆಗೆ ಸಾಮಾನ್ಯವೆಂಬಂತೆ ತನ್ನ ಆಲೋಚನೆಗಳನ್ನು ಬದಲಿಸಿಕೊಳ್ಳುತ್ತಾನೆ. ಕ್ರಾಂತಿ ವಿಚಾರಗಳಿಗೆ ಮನಸೋತು ಪ್ರೇಮ ವಿವಾಹವನ್ನು ಮಾಡಿಕೊಂಡ ಮಂಗಳೆಯು ಜೀವನದ ನಿಷ್ಠುರ ಅನುಭವಗಳನ್ನು ಎದುರಿಸಿದಾಗ ಬದಲಾಗುತ್ತಾಳೆ.

'ದಿವ್ಯ' ಕಾದಂಬರಿಯಲ್ಲಿ ಪೂಜಾರಿಯೊಬ್ಬನು ಪರಿಸರದ ಹೋರಾಟಗಾರನಾಗಿ ಪೃಥ್ವಿಯ ರಕ್ಷನಾಗುತ್ತಾನೆ. ಘನಶ್ಯಾಮ ಅನೇಕ ಕ್ರಾಂತಿಕಾರಿ ಬದಲಾವಣೆಗಳನ್ನು ತರುತ್ತಾನೆ. ವಿಮಲಾ ಮೈಕಲ್‌ನಿಗೆ ತಮ್ಮದೇ ಸಂಸಾರ ಹೂಡಲು ಅವಕಾಶ ಮಾಡಿಕೊಡುತ್ತಾನೆ. ಘನಶ್ಯಾಮನು ಪಾಶ್ಚಾತ್ಯ ಜ್ಞಾನದ ಪರಮಾಸಕ್ತನಾದ ವಿಚಾರಗಳಿಂದಲೇ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದ. ಮಾರ್ಕ್ಸ್ ರಸೆಲ್ಲರನ್ನು ಓದಿ ಕ್ರಾಂತಿಕಾರಕ ನಿಲುವನ್ನು ತಳೆದಿದ್ದ ಘನಶ್ಯಾಮ ಯಾವ ಬಗೆಯ ಸೊಕ್ಕು ಇಲ್ಲದ ಲಜ್ಜಾರೂಪಿ ದೇವಿಯಂತಿರುವ ಗೌರಿಯನ್ನು ಮದುವೆಯಾಗುತ್ತಾನೆ. ಹೊಸ ಸಮಾಜದ ಆದರ್ಶ ಮತ್ತು ದೈವಪ್ರೇರಣೆ ಪ್ರಚೋದನೆಯ ಅಗತ್ಯವು ಅನಿವಾರ್ಯವೆಂಬಂತೆ ಗೌರಿ, ಘನಶ್ಯಾಮ ಒಂದಾಗುತ್ತಾರೆ. ಕೇಶವನ ಅಂತಸ್ತು ಬೆಳೆದಾಗ ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಾನೆ. ಜೀವನ ಶೈಲಿ, ವಿಚಾರಗಳಲ್ಲೂ ಬದಲಾವಣೆಯಾಗುತ್ತದೆ. ಕನ್ನಡಿಯನ್ನೇ ಕಾಣದಿದ್ದ ಕೇಶವನಲ್ಲಿ ಕನ್ನಡಿ ರಹಸ್ಯ ಪ್ರವೇಶ ಪಡೆಯುತ್ತದೆ. ಘನಶ್ಯಾಮನ ಮಲಸೋದರಿ ವಿನೋದಿನಿಯೊಂದಿಗೆ ಅವನ ವಿವಾಹವಾಗುತ್ತದೆ.

[illegible]

[illegible]

[illegible]

[illegible]

ದೇಹ ಮತ್ತು ಪ್ರಜ್ಞೆಯ ದ್ವಂದ್ವವು ಮುಖ್ಯವಾಗಿ ದೇಹವನ್ನು ಮೀರಲಾರದ ಪ್ರಜ್ಞೆಯ ಸಂಕಷ್ಟ. ಹಾಗೆಯೇ ಪರಂಪರೆಯ ಮಿತಿಯನ್ನು ಗುರುತಿಸಿಕೊಂಡು ಅದನ್ನು ಮೀರಲಾಗದ ಪ್ರಜ್ಞೆಯ ತೊಳಲಾಟವು ವ್ಯಕ್ತಿ ತಾನು ಬದುಕಿತ್ತಿರುವ ಪರಿಸರಕ್ಕೆ ಸೂಕ್ಷ್ಮನಾಗುತ್ತಾ ಸಾಗುತ್ತಿರುವುದನ್ನು ಎತ್ತಿ ಹಿಡಿಯುತ್ತದೆ. ಅನಂತಮೂರ್ತಿಯವರು ಎಲ್ಲವನ್ನು ವಿಶ್ಲೇಷಿಸಿಕೊಳ್ಳುವುದರ ಜೊತೆಗೆ ಕಾಮದಂತಹ ವಿಚಾರದಲ್ಲಿ ವಿಶ್ಲೇಷಣೆಯ ಎಚ್ಚರವನ್ನುಳಿಸಿಕೊಳ್ಳುವ ಸ್ಥಿತಿಯನ್ನು ನಿರ್ಮಾಣ ಮಾಡುತ್ತಾರೆ. ಈ ಸ್ಥಿತಿ ವ್ಯಕ್ತಿಯ ಮೇಲಿನ ಪ್ರಜ್ಞೆಯ ಹಿಡಿತವನ್ನು ನಿರೂಪಿಸುತ್ತದೆ. ಪ್ರಜ್ಞೆಯ ಎಚ್ಚರದ ಸ್ಥಿತಿಯು ಹೊಸ ನೈತಿಕ ನೆಲೆಗಳನ್ನು ಅನುಭವವಾಗಿಸುವುದರ ಮೂಲಕ ನಿರ್ಮಿಸಲು ಕಾರಣವಾದರೆ ಆಳಕ್ಕಿಳಿಯುವ ಪ್ರಜ್ಞೆ ಮನುಷ್ಯನು ಮೂಲಭೂತ ಪ್ರವೃತ್ತಿಗಳಿಂದ ಮುಕ್ತನಾಗಿಲ್ಲ ಎನ್ನುವ ಮಿತಿಯನ್ನು ಎತ್ತಿ ತೋರಿಸುತ್ತದೆ. ಸಮಕಾಲೀನ ಕನ್ನಡ ಸಾಹಿತ್ಯ ಅನೇಕ ದೃಷ್ಟಿಗಳಿಂದ ಹಳಗನ್ನಡ ಸಾಹಿತ್ಯದಿಂದ ಭಿನ್ನವಾಗಿದೆ. ಎಲ್ಲಾ ಸಾಹಿತ್ಯ ಸೃಷ್ಟಿಗೂ ಒಂದು ವಿಶಿಷ್ಟ ಚಾರಿತ್ರಿಕ ಸನ್ನಿವೇಶ ಇರುವಂತೆಯೇ ಈ ಸಮಕಾಲೀನ ಸಾಹಿತ್ಯ ಸೃಷ್ಟಿಗೂ ಒಂದು ವಿಶಿಷ್ಟವಾದ ಸಂದರ್ಭವಿದೆ. ವಸಾಹತುಶಾಹಿ ಶಿಕ್ಷಣದ ಪರಿಣಾಮವಾಗಿ ಒಂದು ವರ್ಗದ ಜನರಿಗೆ ಹೊಸ ಜ್ಞಾನ ಉಂಟಾಯಿತು ಎಂಬುದಂತೂ ಒಂದು ಚಾರಿತ್ರಿಕ ನಿಜವಾಗಿದೆ. ಇನ್ನೊಂದು ವಿದ್ಯಾಭ್ಯಾಸದ ಫಲವಾಗಿ ಕೆಲವರಲ್ಲಿ ಸೂಕ್ಷ್ಮ ಪ್ರಜ್ಞೆ ಬೆಳೆಯಿತು. ನವ್ಯ ಬರಹಗಾರರ ಮೂಲ ಧೋರಣೆ ವ್ಯಕ್ತಿ ಮೂಲವಾದ ಹುಡುಕಾಟವಾಗಿದೆ.

ಸಂಪ್ರದಾಯಕ್ಕೆ ಬದ್ಧನಾದ ವ್ಯಕ್ತಿಯು ಹೊಸ ವಿಚಾರಗಳನ್ನು ಯಥಾವತ್ತಾಗಿ ಸ್ವೀಕರಿಸುವುದಿಲ್ಲ. ಪರಿಸರಕ್ಕೆ ತಕ್ಕಂತೆ ನಿಧಾನವಾಗಿ ತನಗೆ ಅವಶ್ಯಕವಾದುದನ್ನು ಪಡೆದುಕೊಳ್ಳುತ್ತಾನೆ. ತಾನು ಜೀವಿಸುವ ಪರಿಸರದಲ್ಲಾಗುವ ಬದಲಾವಣೆಗಳೆಲ್ಲ ಮನುಷ್ಯ ಪ್ರಜ್ಞೆಯಲ್ಲಿ ತಕ್ಷಣ ಪ್ರತಿಬಿಂಬಿತವಾಗುವುದಿಲ್ಲ. ಮನುಷ್ಯನಲ್ಲಿ ಸೂಕ್ಷ್ಮ ಮಾರ್ಪಾಡುಗಳಾದರೂ ಆ ಬಗ್ಗೆ ಯೋಚಿಸುತ್ತಾನೆ. ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಪ್ರಜ್ಞೆ ಮತ್ತು ಪರಿಸರದೊಂದಿಗೆ ಭೂತ–ವರ್ತಮಾನ, ವ್ಯಕ್ತಿತ್ವಗಳ ತಾಕಲಾಟ ಹಾಗೂ ಕಾಲ–ಪರಿಸರಕ್ಕೆ ಸಂಬಂಧಿಸಿದ ಸನ್ನಿವೇಶಗಳು ನೈಜವಾಗಿ ಮೂಡಿಬಂದಿವೆ.

ಪ್ರಜ್ಞೆ ಎಂಬ ಪದ ಭೂತ–ವರ್ತಮಾನ–ಭವಿಷತ್ಕಾಲಗಳನ್ನು ಒಳಗೊಂಡು, ಅವುಗಳನ್ನು ಒಂದು ಸರಣಿಯಲ್ಲಿರಿಸಿ ಪರಿಸರದ ಸ್ಥಿತಿಯನ್ನು ಗ್ರಹಿಸಿ, ಆ ಸ್ಥಿತಿಗೆ ಚಾಲನೆ ನೀಡುವ ಒಂದು ಶಕ್ತಿಯಾಗಿದೆ. ಪರಿಸರವೆಂದರೆ ಸಾಮಾಜಿಕ ವಾಸ್ತವ ಮಾತ್ರವಲ್ಲದೇ ಮೇಲ್ ಸ್ಥರದ ನಡವಳಿಕೆ ರೀತಿ ಕಟ್ಟಳೆ ಅಥವಾ ಇತರ ಸಾಮಾಜಿಕತೆಯ ಹಣೆಚೀಟಿ ಪಡೆದ ಅಂಶಗಳಲ್ಲ. ಅದು ಬರಹಗಾರ ತನಗೆ ದಕ್ಕುವ ಸಾಮಾಜಿಕ–ಸಾಂಸ್ಕೃತಿಕ ಬದುಕನ್ನು ತನ್ನ ಸೃಜನಶೀಲ ಒಳನೋಟಗಳಿಂದ ಪುನಃ ಸೃಷ್ಟಿಸಿಕೊಂಡ ಚಲನಶೀಲವಾದ ಪರಿಸರ. ಈ ಪುನಃ ಸೃಷ್ಟಿಯ ಕೆಲಸ ಎಷ್ಟೇ ಸೀಮಿತ ಆಯ್ಕೆಯದಾದರೂ ಬರಹಗಾರನ ಸಂಸ್ಕೃತಿಯ ಬದುಕಿನ ಜೊತೆಗೆ ಜೀವಂತ ಸಂಬಂಧವನ್ನಿಟ್ಟುಕೊಂಡಿರುತ್ತದೆ. ಅಮೂರ್ತತೆಯ, ಸಾಮಾನ್ಯೀಕರಣದ ಅಪಾಯಕಾರಿ ಸೆಳೆತಗಳು ನಮ್ಮ ಸಂದರ್ಭದಲ್ಲಿ ಹೆಚ್ಚಾದ್ದರಿಂದ ಇಂಥ ಮೂರ್ತ ಪರಿಸರದ ಸೃಷ್ಟಿ ನಮ್ಮ ಬರಹಗಾರರ ಒಟ್ಟು ಸಾಹಿತ್ಯಕ ಸೃಷ್ಟಿಯ ಒಂದು ಗುಣಾತ್ಮಕ ಅಂಶವಾಗಿ ಬಿಡುತ್ತದೆ. ಅನುಭವ ಶೋಧನೆ ತೀವ್ರವಾದಂತೆ ಗಾಢವಾದಂತೆ ಈ ಪರಿಸರ ಸೃಷ್ಟಿ ಹೆಚ್ಚು ಸೂಕ್ಷ್ಮವಾಗುವುದನ್ನು ನಾವು ಕಾಣಬಹುದು.

ನಮ್ಮ ಅನೇಕ ಮುಖ್ಯ ಬರಹಗಾರರಿಗೆ ತಮ್ಮ ಅನುಭವದ ಎಲ್ಲ ಸಾಧ್ಯತೆಗಳನ್ನು ಶೋಧಿಸುವುದು ಮತ್ತು ಇಂಥ ಪರಿಸರವನ್ನು ನಿರ್ಮಿಸಿಕೊಳ್ಳುವುದೂ ಎರಡೂ ಒಂದೇ ಆಗಿವೆ. ಅನಂತಮೂರ್ತಿಯವರಲ್ಲಿನವ್ಯ ಸಂವೇದನೆಯ ಸಮರ್ಥ ಅಭಿವ್ಯಕ್ತಿಯನ್ನು ಅದರ ಕೊರತೆಯ ಜೊತೆ ಕಾಣಬಹುದು. ನವ್ಯ ಸಂವೇದನೆ ಬೆಳೆಸಿದ

ತೀವ್ರ ವ್ಯಕ್ತಿನಿಷ್ಠತೆಯಿಂದಾಗಿ ಪರಿಸರವೂ ಕೂಡ ವ್ಯಕ್ತಿಯ ಪ್ರಜ್ಞೆಯ ಅಂಶವಾಗಿ ಅಭಿವ್ಯಕ್ತಿಯಾಗುವ ನಿಷ್ಠೆಯ ಬದಲಾವಣೆ ಆ ಹೊತ್ತಿಗೆ ಆಗಿಬಿಟ್ಟಿತ್ತು. ಆದರೆ ಅವರು ಕೂಡ ಬ್ರಾಹ್ಮಣ ಸನ್ನಿವೇಶವನ್ನೇ ತಮ್ಮ ಸೃಷ್ಟಿಯ ಪರಿಸರವಾಗಿ ಬಳಸಿಕೊಳ್ಳುವುದು ಸ್ಪಷ್ಟವಾಗಿದೆ. ಬ್ರಾಹ್ಮಣ ಸನ್ನಿವೇಶದ ವಿಶ್ಲೇಷಣೆಯನ್ನೇ ಅವರು ಭಾರತೀಯ ಸಂಸ್ಕೃತಿಯ ಒಟ್ಟು ಸನ್ನಿವೇಶದ ವಿಶ್ಲೇಷಣೆಯೆನ್ನುವಂತೆ ಬಳಸುವುದನ್ನು ಜಿ.ಹೆಚ್. ನಾಯಕರು ಗುರುತಿಸಿದ್ದಾರೆ. ಆದರೆ ಮುಖ್ಯವಾಗಿ ಅನಂತಮೂರ್ತಿಯವರು ವೈಚಾರಿಕ ಪರಿಕಲ್ಪನೆಗಳಿಗೆ ಅನುಭವವನ್ನು ಒಗ್ಗಿಸಿ ಬರೆಯುತ್ತಾರೆ. ತಾವು ಸೃಷ್ಟಿಸುವ ಪರಿಸರದ ಸಾಂಕೇತಿಕ ಅರ್ಥವನ್ನೇ ಮುಖ್ಯವೆಂದು ಪರಿಗಣಿಸುತ್ತಾರೆ. ಆದರೆ ಅವರು ವಾಸ್ತವಿಕ ಶೈಲಿಯನ್ನು ತೊರೆದು ಪೂರ್ತಿ ತೊರೆದು ಓದುಗನ ಗಮನ ಕೇವಲ ಸಾಂಕೇತಿಕ ಅರ್ಥ ವಿನ್ಯಾಸದ ಮೇಲೆ ಕುದುರುವಂತೆ ಬರೆಯುವುದಿಲ್ಲ.

ಹೀಗಾಗಿ ಸಂಸ್ಕಾರ ದಂತಹ ಕಾದಂಬರಿಯನ್ನಾಗಲೀ,ಭಾರತೀಪುರ ವನ್ನಾಗಲೀ ಓದುವಾಗ ಆ ಕೃತಿಯಲ್ಲಿ ಬರುವ ವಾಸ್ತವದ ಅಂಶ ನಮಗೆ ವಾಸ್ತವವಾಗಿಯೆ, ಮೂರ್ತ ಪರಿಸರದ ಅಭಿವ್ಯಕ್ತಿಯಾಗಿಯೇ ಕಾಣುತ್ತದೆ. ಮತ್ತು ಈ ಮೂರ್ತ ಪರಿಸರದ ಪ್ರಸ್ತುತತೆಯ ಪ್ರಶ್ನೆಯೂ ನಮ್ಮನ್ನು ಕಾಡತೊಡಗುತ್ತದೆ. ಸಂಸ್ಕಾರದ ಅಗ್ರಹಾರದ ಪರಿಸರ ಎಷ್ಟು ದಟ್ಟವಾಗಿ ಮೂಡಿದೆಯೆಂದರೆ ಆ ಪರಿಸರಕ್ಕೂ ಕಾದಂಬರಿಯ ಕೊನೆಯ ಭಾಗದಲ್ಲಿ ಬರುವ ಪ್ರಾಣೇಶಾಚಾರ್ಯನ ಅಸ್ತಿತ್ವವಾದೀ ಚಿಂತನೆಗೆ ಇರುವ ಸಂಬಂಧವೇನು ಎನ್ನುವ ಪ್ರಶ್ನೆಯು ಹುಟ್ಟಿಕೊಳ್ಳುತ್ತದೆ. ಪ್ರಾಣೇಶಾಚಾರ್ಯನ ಚಿಂತನೆಯ ಹಿಂದೆ ಇರುವುದು ಅಸ್ತಿತ್ವವಾದೀ ತಾತ್ವಿಕತೆ, ಲೇಖಕರು ಕೃತಿಯಲ್ಲಿ ಸೃಷ್ಟಿಸಿದ ಪರಿಸರದಲ್ಲಿ ಸಹಜವಾಗಿ ಹುಟ್ಟಿದುದಲ್ಲ ಎನ್ನುವುದಕ್ಕಿಂತ ಆ ಚಿಂತನೆಗೂ ಅಗ್ರಹಾರದ ಪರಿಸರದ ಮತ್ತು ಅದು ಸಂಕೇತಿಸುವ ಸಂಪ್ರದಾಯದ ಮೌಲ್ಯಗಳ ವಿಶ್ಲೇಷಣೆಗೂ ಸಂಬಂಧವೇನು ಎನ್ನುವುದು ಮುಖ್ಯವಾಗುತ್ತದೆ. ಆದರೆ ಅವರು ಸೃಷ್ಟಿಸಿದ ಪರಿಸರಕ್ಕೆ ಇಂಥ ಚಿಂತನೆಯನ್ನು ದಕ್ಕಿಸಿಕೊಳ್ಳುವ ಸಾಧ್ಯತೆಯಿಲ್ಲವೆನಿಸುತ್ತದೆ. ಅವೆರಡಕ್ಕೂ ಬೆಸುಗೆಯಿಲ್ಲದಾಗುತ್ತದೆ. ಭಾರತೀಪುರದಲ್ಲಿ ಕೂಡ ಮುಖ್ಯ ಕೊರತೆ ಈ ಪರಿಸರದ್ದೇ. ಕಾದಂಬರಿಯ ಮುಖ್ಯ ಪಾತ್ರಗಳೆಲ್ಲವೂ–ಜಗನ್ನಾಥ, ಪುರಾಣಿಕರು, ಅಡಿಗರು–ಎಲ್ಲರೂ ಇಂಡಿಯಾದ ಸನ್ನಿವೇಶಕ್ಕೆ ಸ್ಪಂದಿಸುವ ವಿವಿಧ ಮನೋಭಾವಗಳ ಪ್ರತಿನಿಧಿಗಳು ಮಾತ್ರವಾಗಿ ಬಿಡುತ್ತಾರೆ.

ಅಡಿ ಟಿಪ್ಪಣಿಗಳು

೧. ಅನಂತಮೂರ್ತಿ ಯು.ಆರ್ ; ಪ್ರಜ್ಞೆ ಮತ್ತು ಪರಿಸರ ;ಅಕ್ಷರ ಪ್ರಕಾಶನ ಹೆಗ್ಗೋಡು;೧೯; ಪು: ೭, ೮, ೯.

೨. ಗಿರಡ್ಡಿ ಗೋವಿಂದರಾಜು ; ಸಣ್ಣಕಥೆಗಳ ಹೊಸ ಒಲವುಗಳು ; ಸಾಹಿತ್ಯ ಭಂಡಾರ ;ಹುಬ್ಬಳ್ಳಿ;೧೯೭೮; ಪು: ೨೨.

೩. ಅನಂತಮೂರ್ತಿ ಯು.ಆರ್ ; ವಿಜಯ ಕರ್ನಾಟಕ ;ಸಾಪ್ತಾಹಿಕ ವಿಜಯ;೧೭.೧೧.೨೦೦೨ ; ಪು:೧.ಸಂ.ವೆಂಕಟಲಕ್ಷ್ಮಿ ವಿಎನ್.

೪. ವಿಜಯಕುಮಾರ್.ಜಿ ; ಅನಂತಮೂರ್ತಿಯವರ ಕಥೆಗಳು ; ಚಿನ್ಮಯ ;ಗ್ರಂಥ ಪ್ರಕಟಣ ಸಮಿತಿ;ಚಿತ್ರದುರ್ಗ; ೧೯೭೯ ; ಪು:೧೧೯.

೫. ಗಿರಡ್ಡಿ ಗೋವಿಂದರಾಜು ;ಸಣ್ಣಕತೆಯಲ್ಲಿ ನವ್ಯತೆ; ಸಾಹಿತ್ಯ ಭಂಡಾರ ;ಹುಬ್ಬಳ್ಳಿ; ೧೯೬೫ ; ಪು: ೪೩.

೬. ಗಿರಡ್ಡಿ ಗೋವಿಂದರಾಜು ; ಕನ್ನಡ ಕಾದಂಬರಿಯಲ್ಲಿ ನವ್ಯತೆ ; ಕಾದಂಬರಿ ವಸ್ತು ಮತ್ತು ತಂತ್ರ; ಬಾಪ್ಕೋ ಪಬ್ಲಿಕೇಷನ್ಸ್;ಬೆಂಗಳೂರು;೧೯೭೬ ; ಪು:೧೭೭

೭. ಅಶೋಕ .ಟಿ.ಪಿ ; ಅನಂತಮೂರ್ತಿ ಒಂದು ಅಧ್ಯಯನ;ಅಕ್ಷರ ಪ್ರಕಾಶನ ;ಹೆಗ್ಗೋಡು; ೨೦೦೧;ಪು;೩೪.

೮. ಸತ್ಯನಾರಾಯಣ ಕೆ;ಅನಂತಮೂರ್ತಿಯವರ ಕಥಾಸಾಹಿತ್ಯ;ಸಂ.ರಾಧಿಕ ಜಿ.ಎನ್;೧೯೮೬;ಪು;೮೨

೯. ರಾಜೀವ ತಾರಾನಾಥ;ಪ್ರಶ್ನೆ ಕಥಾಸಂಕಲನ ಮುನ್ನುಡಿ; ಎರಡು ದಶಕದ ಕಥೆಗಳು;ಅಕ್ಷರ ಪ್ರಕಾಶನ;ಸಾಗರ;೧೯೮೧;ಪು;೮೪.

೧೦. ಸಿದ್ದಾಶ್ರಮ ಸಿ.ಪಿ;ಭಾರತೀಪುರ್ಹದ ಒಳನೋಟ ಹೊಸ ಅಲೆ;ಆನಂದ ಪ್ರಕಾಶನ;ಮೈಸೂರು;೧೯೭೮;ಪು;೬೬

೧೧. ಗಿರಡ್ಡಿ ಗೋವಿಂದರಾಜು;ಕನ್ನಡ ಕಾದಂಬರಿಯಲ್ಲಿ ನವ್ಯತೆ;ಕಾದಂಬರಿ ವಸ್ತು ಮತ್ತು ತಂತ್ರ;ಬಾಪ್ಕೋ ಪಬ್ಲಿಕೇಷನ್ಸ್;ಬೆಂಗಳೂರು;೧೯೭೬;ಪು;೧೮೪.

೧೨. ಸತ್ಯನಾರಾಯಣ .ಕೆ ; ಸಾಕ್ಷಿ ; ಎರಡು ದಶಕದ ಕಥೆಗಳು; ೧೯೮೧ ; ಪು: ೮೨.

೧೩. ಮಾಧವ ಕುಲಕರ್ಣಿ ; ಅನಂತಮೂರ್ತಿಯವರ ಸಾಹಿತ್ಯದ ಒಲವು ನಿಲುವುಗಳು; ತನುಮನ ಪ್ರಕಾಶನ;೨೦೦೨ ; ಪು; ೯೪.

೧೪. ಜಯದೇವ್ ಹು.ಕಾ; ಸಣ್ಣ ಕಥೆ ಮೌನಿ ; ಸಾಹಿತ್ಯ ವಾರ್ಷಿಕ ;ಪ್ರಸಾರಾಂಗ;ಬೆಂಗಳೂರು ವಿಶ್ವವಿದ್ಯಾಲಯ;ಬೆಂಗಳೂರು; ೧೯೭೩ ; ಪು; ೬೧.

೧೫. ರಾಮಾನುಜನ್ಎ.ಕೆ;ಯು.ಆರ್.ಅನಂತಮೂರ್ತಿ;ಸಂ.ಮುರಳೀಧರ ಉಪಾದ್ಯ ಹಿರಿಯಡಕ;ಕರ್ನಾಟಕ ಸಂಘ;ಪುತ್ತೂರು;೨೦೦೦;ಪು;೨೭೩.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಅಧ್ಯಾಯ ಐದು

ವೈಚಾರಿಕತೆ ಮತ್ತು ಸ್ವಾತಂತ್ರ್ಯ

೫.೧ ಜೀವನ ಮತ್ತು ಸಿದ್ಧಾಂತ

೫.೨ ಬದುಕು ಮತ್ತು ಸಾವಿನ ಪ್ರಶ್ನೆ

೫.೩ ಸಾಫಲ್ಯಸಾಧ್ಯತೆ ಮತ್ತು ನೈತಿಕತೆ

ಅಧ್ಯಾಯ – ೫

ವೈಚಾರಿಕತೆ ಮತ್ತು ಸ್ವಾತಂತ್ರ್ಯ

ವ್ಯಕ್ತಿಯು ನಿರ್ದಿಷ್ಟ ವಿಚಾರಗಳ ತಳಹದಿಯಲ್ಲಿ ಚಿಂತಿಸಿ ಕಾರ್ಯೋನ್ಮುಖನಾಗುವುದು ಒಂದು ಬಗೆಯಾದರೆ ಯಾವುದೇ ವಿಚಾರಗಳ ಹಂಗಿಲ್ಲದೆ ಸ್ವತಂತ್ರವಾಗಿ ಕಾರ್ಯಪ್ರವೃತ್ತನಾಗುವುದು ಇನ್ನೊಂದು ಬಗೆ. ಇಂತಹ ಸಂದರ್ಭಗಳಲ್ಲಿ ವ್ಯಕ್ತಿಯ ನಡವಳಿಕೆಗಳು ಗೊಂದಲಮಯವಾಗುವುದನ್ನು, ಸಂಘರ್ಷಪೂರಿತವಾಗುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿಯೂ ವೈಚಾರಿಕತೆ ಮತ್ತು ಸ್ವಾತಂತ್ರ್ಯಗಳ ಸಂಘರ್ಷವೇರ್ಪಡುವುದನ್ನು ಗಮನಿಸಬಹುದು. ಬದುಕಿನಲ್ಲಿ ಸಂಭವಿಸುವ ಅನಿರೀಕ್ಷಿತ ಘಟನೆಗಳು ಹಾಗೂ ಸಂದರ್ಭಗಳು ಸಂಕೀರ್ಣತೆಯನ್ನು ಹುಟ್ಟು ಹಾಕುತ್ತವೆ. ಪರಂಪರಾಗತ ಮೌಲ್ಯಗಳನ್ನು ಬೌದ್ಧಿಕ ಹಿನ್ನೆಲೆಯಲ್ಲಿ ಶೋಧಿಸುವ ಲೇಖಕರ ಕಥಾಸಾಹಿತ್ಯದಲ್ಲಿ ವೈಚಾರಿಕತೆಯು ಮಹತ್ವದ ಪಾತ್ರವನ್ನು ವಹಿಸುತ್ತದೆ. ಹಳೆಯ ಮೌಲ್ಯಗಳು ವೈಯಕ್ತಿಕ ಅನುಭವಗಳ ನೆಲೆಯಲ್ಲಿ ಚಿತ್ರಿತವಾಗಿವೆ. ವ್ಯಕ್ತಿ ಬಯಸುವ ಸ್ವಾತಂತ್ರ್ಯ ಹಾಗೂ ವಾಸ್ತವಿಕ ಜೀವನದ ಅನುಸಂಧಾನವನ್ನು ಇವರ ಕಥಾಸಾಹಿತ್ಯದಲ್ಲಿ ಕಾಣಬಹುದು.

ಪರಂಪರೆಯನ್ನು ತಮ್ಮ ಸ್ವಾತಂತ್ರಕ್ಕೆ, ಸೃಜನ ಶೀಲತೆಗೆ ಒಂದು ದೊಡ್ಡ ಬಂಧನವಾಗಿ ಪರಿಗಣಿಸುವವರಿಗೆ ಅನುಭವದ ಮೂಲಕವೇ ಜಗತ್ತನ್ನು ಅರಿಯಲು ಸಾಧ್ಯವಾಗುತ್ತದೆ. ಮನಸ್ಸು ಮತ್ತು ದೇಹದ ದ್ವಂದ್ವದಲಿರುವವರೆಗೆ ತಮ್ಮ ಬಯಕೆಯನ್ನು ಈಡೇರಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಸಹಜ ಅಭಿವ್ಯಕ್ತಿಯ ಮೇಲೂ ತನ್ನ ಹಿಡಿತವನ್ನು ಹೊಂದಿರುವ ಪರಂಪರೆ ವ್ಯಕ್ತಿಯ ದೇಹದ ಬಯಕೆಯ ಪ್ರಜ್ಞೆಯನ್ನು ಕಟ್ಟಿ ಹಾಕುವುದರ ಮೂಲಕ ಆಸೆಗಳನ್ನು ಈಡೇರಿಸಿಕೊಳ್ಳಲಾಗದಂತೆ ತಡೆಯೊಡ್ಡುತ್ತಿರುವುದನ್ನು ಅನುಭವಿಸುತ್ತಾರೆ.

[illegible]

[illegible]

[illegible]

[illegible]

ಹೀಗೆ ವಿಧಿ ನಿಷೇಧಗಳನ್ನು ದೇಹದ ಬಯಕೆಯ ಮುಂದೆ ಅದರ ಕಾವಿನ ಬಿಸಿಯಲ್ಲಿ ಕರಗಿಸಿ ಬಿಡಲು ಯತ್ನಿಸುವಲ್ಲಿ ಉಂಟಾಗುವ ಮಾನಸಿಕ ತೊಳಲಾಟ, ತಲ್ಲಣ ಎದುರಿಸುವ ಇವರು ತಮ್ಮನ್ನು ಪರಂಪರೆಗೆ ಕಟ್ಟಿ ಹಾಕಿಕೊಳ್ಳುವುದನ್ನು ಅನಂತಮೂರ್ತಿಯವರು ಕಥಾಸಾಹಿತ್ಯದಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

ಪರಂಪರಾಗತ ಮೌಲ್ಯಗಳನ್ನು ಅನುಸರಿಸುವವರ ಹಾಗೂ ಅವುಗಳನ್ನು ಪ್ರಶ್ನಿಸುವವರ ಮಧ್ಯೆ ಸಂಘರ್ಷವೇರ್ಪಡುತ್ತದೆ. ಸಮಾಜದಲ್ಲಿ ಸ್ವಾತಂತ್ರ್ಯ ಬಯಸುವವರಿಂದ ಹೊಸ ಚಿಂತನೆ ಮತ್ತು ನವೀನ ಮಾರ್ಗೋಪಾಯಗಳು ಹುಟ್ಟಿಕೊಳ್ಳುತ್ತವೆ. "ಮೊದಲನೆಯದಾಗಿ ಅನಂತಮೂರ್ತಿಯವರು ನವ್ಯದ ವೈಚಾರಿಕತೆಯನ್ನು ರೂಪಿಸಿಕೊಟ್ಟರು. ಎರಡನೆಯದಾಗಿ ಈ ವೈಚಾರಿಕತೆಯ ಅಭಿವ್ಯಕ್ತಿಗೆ ಬೇಕಾದ ತಾಂತ್ರಿಕ ಸಾಧ್ಯತೆಗಳನ್ನು ತೋರಿಸಿಕೊಟ್ಟರು. ಮೂರನೆಯದಾಗಿ ಈ ವೈಚಾರಿಕತೆಯನ್ನು ಸಮರ್ಥವಾಗಿ ಧ್ವನಿಸಬಲ್ಲ ವಸ್ತುಗಳನ್ನು ಹುಡುಕಿಕೊಟ್ಟರು." [೧] ಅನಂತಮೂರ್ತಿಯವರ ಕಥನ ಸಾಹಿತ್ಯದಲ್ಲಿ ವೈಚಾರಿಕತೆ ಮತ್ತು ಸ್ವಾತಂತ್ರ್ಯದ ಅನೇಕ ವಿಚಾರಗಳಿವೆ.

೫.೧ ಜೀವನ ಮತ್ತು ಸಿದ್ಧಾಂತ

ಸಮಾಜದಲ್ಲಿ ವ್ಯಕ್ತಿಯು ವ್ಯವಸ್ಥಿತವಾಗಿ ಬದುಕಬೇಕಾದ ರೀತಿಯನ್ನು ನಿರ್ದಿಷ್ಟ ಜೀವನ ಸಿದ್ಧಾಂತವು ತಿಳಿಸುತ್ತದೆ. ವ್ಯಕ್ತಿ ಹಾಗೂ ಸಮಾಜದ ಪರಿಕಲ್ಪನೆಗೆ ಸಂಬಂಧಿಸಿದ ವಿಚಾರಗಳು ಇಂತಹ ಜೀವನ ಸಿದ್ಧಾಂತದಲ್ಲಿ ಅಡಗಿರುತ್ತವೆ. ವ್ಯಕ್ತಿಯು ಜೀವನದಲ್ಲಿ ಸಿದ್ಧಾಂತವನ್ನು ಅನುಸರಿಸುವಾಗ ಮಾನವೀಕರಣವು ಮರೆಯಾಗುತ್ತದೆ. ಮನುಷ್ಯನು ಸ್ವಂತತ್ರನಾಗಬೇಕಾದರೆ ಪ್ರಪಂಚದ ವಿಧಿನಿಯಮಗಳಿಂದ ಮುಕ್ತಿಯನ್ನು ಪಡೆಯಬೇಕಾಗುತ್ತದೆ. ಒಳಿತು ಕೆಡುಕುಗಳ ಘರ್ಷಣೆಯಿಂದಾಗಿ ವಾಸ್ತವಿಕ ಸ್ವರೂಪವು ಹುಟ್ಟಿಕೊಳ್ಳುತ್ತದೆ. ಜೀವನ ಹಾಗೂ ಸಿದ್ಧಾಂತದಲ್ಲಿ ಮಾನವೀಯತೆಗೆ ಒತ್ತು ನೀಡಿದಾಗ ಮಾತ್ರ ಹೊಂದಾಣಿಕೆಯು ಸಾಧ್ಯವಾಗುತ್ತದೆ. ವ್ಯಕ್ತಿ ಹಾಗೂ ಸಿದ್ಧಾಂತದ ನಡುವೆ ಅವಿನಾಭಾವ ಸಂಬಂಧವಿದೆ. ಜೀವನದಲ್ಲಿ ಸಿದ್ಧಾಂತವನ್ನು ಅಳವಡಿಸಿಕೊಳ್ಳಬೇಕೆಂಬ ಮನಸ್ಸು ಹಾಗೂ ಸಿದ್ಧಾಂತವನ್ನು ಮೀರಿ ಬದುಕಬೇಕೆಂಬ ಮನಸ್ಸು, ಇವೆರಡೂ ಮುಖಾಮುಖಿಯಾದಾಗ ಸಂಘರ್ಷಕ್ಕೆ ದಾರಿಯಾಗುತ್ತದೆ.

'ಹುಲಿಯಹೆಂಗರುಳು' ಕತೆಯಲ್ಲಿ ಒಂದು ನಿರ್ದಿಷ್ಟ ಸಿದ್ಧಾಂತಕ್ಕೆ ಹೊಂದಿಕೊಂಡ ಬದುಕು ಸಿದ್ಧನದಾಗಿದೆ. ಹೆಂಡತಿಯು ಪರಪುರುಷನೊಂದಿಗೆ ಅನೈತಿಕ ಸಂಬಂಧವನ್ನು ಹೊಂದಿದ್ದರಿಂದ ಕುಟುಂಬದಲ್ಲಿ ಬಿರುಕುಬಿಡುತ್ತದೆ. ಯಾರಿಗೂ ನೋವನ್ನುಂಟು ಮಾಡದ ಸಿದ್ಧನು ಅಹಿಂಸಾವಾದಿಯಾಗಿದ್ದನು. ಸೀನಸೆಟ್ಟಿಯೊಂದಿಗೆ ಅನೈತಿಕ ಸಂಬಂಧ ಹೊಂದಿರುವುದು ತಪ್ಪೆಂದು ಸಿದ್ಧನು ಹೆಂಡತಿಗೆ ಹೇಳುತ್ತಾನೆ. ಆಗ ಹೆಂಡತಿಯು ಈ ವಿಚಾರದಲ್ಲಿ ನನಗೆ ಸ್ವಾತಂತ್ರ್ಯವಿದೆ, ನನ್ನಿಷ್ಟದಂತೆ ನಾನು ಬದುಕುತ್ತೇನೆ ಎನ್ನುತ್ತಾಳೆ. ಗಂಡನ ತಾಳ್ಮೆಯನ್ನು ಪರೀಕ್ಷಿಸಲು ಹೋದ ಹೆಂಡತಿಯು ಅವನ ಕೈಯಲ್ಲಿದ್ದ ಕತ್ತಿಗೆ ಬಲಿಯಾಗಿ ಸಾವನ್ನಪ್ಪುತ್ತಾಳೆ.

ಮಡದಿಯನ್ನು ಕೊಂದ ಸಿದ್ಧನಿಗೆ ಮತ್ತೊಂದು ಸತ್ವಪರೀಕ್ಷೆ ಎದುರಾಗುತ್ತದೆ. ಪ್ರವಾಹದಲ್ಲಿ ಸಿಕ್ಕಿಬಿದ್ದ ವ್ಯಕ್ತಿಯನ್ನು ಬದುಕಿಸಬೇಕಾದಾಗ ಅವನ ಮನಸ್ಸಿನಲ್ಲಿ ಕೋಲಾಹಲವೇರ್ಪಡುತ್ತದೆ. ತನ್ನ ಜೀವನದ ಬಗ್ಗೆ ಪರಿವಿಲ್ಲದಂತಾದ ಸಿದ್ಧನು ಕಷ್ಟದಲ್ಲಿರುವವನನ್ನು ಕಾಪಾಡಲು ಸಿದ್ಧನಾಗುತ್ತಾನೆ. ಪ್ರವಾಹದಲ್ಲಿ ಸಿಲುಕಿದ

ವ್ಯಕ್ತಿಯ ಹತ್ತಿರ ಹೋದಾಗ ಯಾರಿಗಾಗಿ ಹೆಂಡತಿಯನ್ನು ಕೊಂದು ಬಂದಿದ್ದನೋ ಅವನನ್ನೇ ತಾನು ರಕ್ಷಿಸಬೇಕಾದ ಪರಿಸ್ಥಿತಿ ಎದುರಾಗುತ್ತದೆ. ದೇವರೆ ಆ ಸೀನಸೆಟ್ಟಿಗೆ ಸರಿಯಾದ ಶಿಕ್ಷೆ ವಿಧಿಸಿದ್ದರೂ ತಾನು ರಕ್ಷಿಸಲು ಬಂದೆನೆಂದು ದ್ವಂದ್ವಕ್ಕೊಳಗಾಗುತ್ತಾನೆ. ದ್ವೇಷವನ್ನು ಬಿಟ್ಟ ಸಿದ್ಧನು ಮಾನವೀಯತೆಯಿಂದ ವಿಶ್ವಾಸಘಾತಕನನ್ನು ರಕ್ಷಿಸಲು ಮುಂದಾಗುತ್ತಾನೆ.

ಆವೇಶದಲ್ಲಿ ದುಡುಕಿ ತನ್ನ ಹೆಂಡತಿಯನ್ನು ಕೊಂದ ಸಿದ್ಧನು ಭೋರ್ಗರೆಯುವ ಪ್ರವಾಹದಲ್ಲಿ ಸಿಲುಕಿದ್ದ ಸೀನಸೆಟ್ಟಿಯನ್ನು ರಕ್ಷಿಸಲು ಸೆಣಸುವುದು ಆಶ್ಚರ್ಯವನ್ನುಂಟು ಮಾಡುತ್ತದೆ. "ತನ್ನ ಹೆಂಡತಿಯೊಂದಿಗೆ ಅನೈತಿಕ ಸಂಬಂಧ ಹೊಂದಿದ್ದ ಸೀನಸೆಟ್ಟಿಯನ್ನು ಅತ್ಯಂತ ಸಂಕಷ್ಟದ ಹುಚ್ಚು ಪ್ರವಾಹದೆದುರು ಸಾವು ಬದುಕಿನ ಸಂದರ್ಭದಿಂದ ಉಳಿಸಬೇಕಾಗಿ ಬಂದದ್ದರ ನಡುವೆ ಸಿದ್ಧನ ಮನೋವೇದನೆಯಲ್ಲಿ ನಡೆದ ಕೋಲಾಹಲವನ್ನು ಹುಲಿಯಹೆಂಗರುಳು ಕತೆ ಹೇಳುತ್ತದೆ." ೨

ವ್ಯಕ್ತಿಯ ಜೀವನವು ಒಂದು ನಿರ್ದಿಷ್ಟ ಸಿದ್ಧಾಂತಕ್ಕೆ ಬದ್ಧವಾಗಿರುತ್ತದೆ. ಆ ಸಿದ್ಧಾಂತದ ಚೌಕಟ್ಟಿನಲ್ಲಿ ನಡೆದಾಗ ಯಾವುದೇ ಗೊಂದಲವಿರುವುದಿಲ್ಲ. ಜೊತೆಗೆ ಆ ಸಿದ್ಧಾಂತಕ್ಕೆ ಸಾಮಾಜಿಕ ಬೆಂಬಲವಿರುತ್ತದೆ. ಸಿದ್ಧಾಂತದ ಚೌಕಟ್ಟನ್ನು ಮೀರುವ ವ್ಯಕ್ತಿಯು ಅನಿವಾರ್ಯವಾಗಿ ಸಂಘರ್ಷವನ್ನು ಎದುರಿಸುತ್ತಾನೆ. ಸಿದ್ಧಾಂತಕ್ಕಿರುವ ಮೌಲ್ಯವನ್ನು ಪರಿಗಣಿಸಿ ಜೀವನವು ರೂಪುಗೊಂಡುರುತ್ತದೆ. ಸಿದ್ಧಾಂತಕ್ಕೆ ಒಗ್ಗಿದ ಮನಸ್ಸು ಅದಕ್ಕೆ ಧಕ್ಕೆ ತರುವ ವ್ಯಕ್ತಿ ಯಾರಾದರೂ ಸರಿ ಅವರನ್ನು ಬಹಿಷ್ಕರಿಸುವ ಮತ್ತು ಕೊಲ್ಲುವ ಮಟ್ಟಕ್ಕೂ ಚಿಂತಿಸುತ್ತದೆ. ವೈಚಾರಿಕವಾಗಿ ಚಿಂತಿಸುವ ತಾಳ್ಮೆ ಆಗ ವ್ಯಕ್ತಿಯಲ್ಲಿ ಇರುವುದಿಲ್ಲ. ವ್ಯಕ್ತಿಯು ಸಮಾಜದ ಒಪ್ಪಿತ ಮೌಲ್ಯಗಳನ್ನು ಗೌರವಿಸುವಾಗ ವ್ಯಕ್ತಿಯ ಸ್ವಾತಂತ್ರ್ಯವೇ ಅಲ್ಲಿ ಪ್ರಾಧಾನ್ಯವನ್ನು ಪಡೆಯುತ್ತದೆ. ಅವನ ಸ್ವತಂತ್ರ ನಿರ್ಧಾರದ ಮುಂದೆ ವೈಚಾರಿಕತೆ ಗೌಣವಾಗುತ್ತದೆ.

'ಪ್ರಕೃತಿ' ಕತೆಯಲ್ಲಿ ಸಂಕಪ್ಪಯ್ಯನು ಜೀವನ ಸಿದ್ಧಾಂತಕ್ಕೆ ಬದ್ಧನಾಗಿ ಬದುಕುತ್ತಾನೆ. ಮಗನು ತನ್ನ ಜಾತಿಗೆ ಹಿಡಿಸದ ಅನ್ನವಿಕ್ರಯವನ್ನು ಮಾಡಲು ಹೊರಟಾಗ ನಿರಾಕರಿಸುತ್ತಾನೆ. ಮಗನ ಆಸೆಗೆ ಒತ್ತಾಸೆಯಾಗಿ ನಿಲ್ಲುವ ಹೆಂಡತಿಯ ಬಗ್ಗೆ ಸಂಕಪ್ಪಯ್ಯನಿಗೆ ಬೇಸರವಿದೆ. ಕೊನೆಪಕ್ಷ ಮಗಳು ತನಗೆ ಬೆಂಬಲವಾಗಿದ್ದಾಳೆಂಬ ಸಮಾಧಾನ ಸಂಕಪ್ಪಯ್ಯನದು. ವಿಧವೆಯಾದ ಮಗಳು ಲಕ್ಷ್ಮಿ ತಂದೆಯ ನಂಬಿಕೆಯನ್ನು ಹುಸಿಗೊಳಿಸಿ ಶಾನುಭೋಗನ ಮಗ ಕಿಟ್ಟಿಯೊಂದಿಗೆ ಅನೈತಿಕ ಸಂಬಂಧವನ್ನು ಬೆಳೆಸಿದಾಗ ಸಂಕಪ್ಪಯ್ಯನು ಗೊಂದಲಕ್ಕೊಳಗಾಗುತ್ತಾನೆ.

ಲಕ್ಷ್ಮಿಯು ಇಂದ್ರಿಯನಿಗ್ರಹ ಮಾಡಿಕೊಳ್ಳಬೇಕಾಗಿತ್ತು ಎಂಬುದು ಸಂಕಪ್ಪಯ್ಯನ ವಿಚಾರವಾಗಿತ್ತು. ಹೋಟೆಲಿಡುವ ಮಗನ ಆಸೆಯನ್ನು ಅದಕ್ಕೆ ಒತ್ತಾಸೆಯಾಗಿ ನಿಂತ ಹೆಂಡತಿಯ ಮಾತನ್ನು ತಿರಸ್ಕರಿಸಿದ ಸಂಕಪ್ಪಯ್ಯ ಮಗಳು ನಂಬಿಕೆಯನ್ನು ಕಳೆದುಕೊಂಡಾಗ ತನ್ನ ನಿರ್ಧಾರವನ್ನು ಬದಲಿಸುತ್ತಾನೆ. ತೋಟವನ್ನು ಮಾರಿ ಕುಟುಂಬದವರನ್ನು ಪೇಟೆಗೆ ಕಳಿಸಿದ ಸಂಕಪ್ಪಯ್ಯ ಒಂಟಿಯಾಗುತ್ತಾನೆ. ಕಿತ್ತಳೆಯನ್ನು ಬೆಳೆದೇತೀರುತ್ತೇನೆಂಬ ಅವನ ಹಠವು ಸೋಲುತ್ತದೆ. ಲಕ್ಷ್ಮಿಯ ವಿಷಯದಲ್ಲಿ ಸಿದ್ಧಾಂತವು ಅನುಮೋದಿಸಿದ ವಿಧಿಯನ್ನು ಒಪ್ಪುವ ಸಂಕಪ್ಪಯ್ಯನು ಪ್ರಕೃತಿಯನ್ನು ತನ್ನ ನೇರಕ್ಕೆ ಬಾಗಿಸಿಕೊಳ್ಳಲು ಪ್ರಯತ್ನಿಸುವಾಗ ಅದರ ಮಿತಿಯನ್ನು ಗಮನಿಸುವುದಿಲ್ಲ.

ಶಾನುಭೋಗ ತನ್ನ ಮಗನಿಗೆ ಹೋಟೆಲಿಡುವುದಕ್ಕೆ ಅನುಮತಿ ಕೊಟ್ಟಿದ್ದಾನೆ. ಮಗನಾದ ಕಿಟ್ಟಿಯು ಲಕ್ಷ್ಮಿಯೊಂದಿಗೆ ಹೊಂದಿದ್ದ ಅನೈತಿಕ ಸಂಬಂಧವನ್ನು ಸಹಜವೆಂದುಕೊಂಡಿದ್ದಾನೆ. ಲಕ್ಷ್ಮಿಯ ನೈಸರ್ಗಿಕ ಬಯಕೆಯನ್ನು ಸಹಜವಾಗಿಯೇ ಸ್ವೀಕರಿಸಿರುವ ಸಂಕಪ್ಪಯ್ಯನ ಹೆಂಡತಿಯು ಮಗನ ಹೋಟೆಲಿಡುವ ಆಸೆಯನ್ನು ಬೆಂಬಲಿಸುತ್ತಾಳೆ.

ಮಗಳು ವಿಧವೆಯಾಗಿ ಬಂದದ್ದು ತಮ್ಮ ತಪ್ಪಲ್ಲ ಎಂದುಕೊಂಡು ಸಂಕಪ್ಪಯ್ಯ ಹೇಗೆ ಮುಂದುವರೆಯುವುದುದೆಂದು ಯೋಚಿಸುತ್ತಾನೆ. ತಮ್ಮ ಯೋಚನೆಗಳನ್ನು ಅವಳೊಡನೆ ಹಂಚಿಕೊಳ್ಳಲು ಹೋದರೆ ಅನಿಸಿದ್ದೊಂದು, ಆಡಿದ್ದೊಂದಾಗುತ್ತದೆಂದು ಭಾವಿಸುತ್ತಾನೆ. ಹುಚ್ಚೆದ್ದು ಕುಣಿಯುವ ಇಂದ್ರಿಯಗಳನ್ನು ತೆಪ್ಪಗಿರೆಂದು ನನ್ನ ಕಂಕುಳಲ್ಲಿ ಅದುಮಿಟ್ಟುಕೊಂಡ ಹಾಗೆ ಇದೂ ಒಂದು ನಿಗ್ರಹ ಎಂದು ಕೊಳ್ಳುವಾಗ ಅದರ ಸೋಲಿನ ಬಗ್ಗೆ ಸಂಕಪ್ಪಯ್ಯ ಯೋಚಿಸುವುದಿಲ್ಲ.

ಭೂಮಿಯಲ್ಲಿ ತನ್ನ ಆಸೆ ಫಲಿಸಬೇಕೆಂಬ ಸಂಕಪ್ಪಯ್ಯನಿಗಿರುವ ಬಯಕೆಯು ಇಡೀ ರೈತ ಸಮುದಾಯವು ಬಯಸುವ ಕನಸಾಗಿದೆ. ಸ್ವಾಭಿಮಾನಿ, ಸಾಹಸಿ, ಛಲಗಾರ ಸಂಕಪ್ಪಯ್ಯ ಹೆಂಡತಿ ಮಗ ಮಾಡಿದ ಅಪಮಾನವನ್ನು ಸಹಿಸಿಯೂ, ವಾಸ್ತವದಲ್ಲಿ ಸಿಡಿಯದೇ ಭ್ರಮೆಯಲ್ಲಿ ದುರ್ಗಾಪೂಜೆ, ರಕ್ತ, ಕೊಲೆಯಲ್ಲಿ ವಿಕೃತವಾಗಿ ಸೇಡುತೀರಿಸಿ, ಸುಖಿಸುತ್ತ ತಾನೇ ಸ್ವತಃ ಹೇಡಿಯಾಗುತ್ತ ಹೋಗುತ್ತಾನೆ.

ವಿಧವೆಯಾದ ಲಕ್ಷ್ಮಿಯು ಇಂದ್ರಿಯ ನಿಗ್ರಹ ಮಾಡಿಕೊಳ್ಳಬೇಕಿತ್ತೆಂದು ಸಂಕಪ್ಪಯ್ಯನು ಆಲೋಚಿಸುತ್ತಾನೆ. ಈ ರೀತಿಯ ಆಲೋಚನೆಗೆ ಆತ ನಂಬಿದ ನಿರ್ದಿಷ್ಟ ಜೀವನ ಸಿದ್ಧಾಂತದ ಪ್ರಭಾವವಿದೆ. ಬಯಕೆ–ಸಿದ್ಧಾಂತದ ನಡುವೆ ಏರ್ಪಡುವ ಸಂಘರ್ಷದಿಂದಾಗಿ ಇಲ್ಲಿ ಮಾನವೀಯತೆ ಹೇಗೆ ನಶಿಸುತ್ತಿದೆ ಎಂಬ ಮಹತ್ವದ ಸಂಗತಿ ತಿಳಿಯುತ್ತದೆ. ಸಂಕಪ್ಪಯ್ಯ ಜೀವವಿರೋಧಿಯಾಗಿ ಒಂಟಿಯಾಗುವ ಅವನ ಸ್ಥಿತಿಗೆ ಅವನು ನಂಬಿಕೊಂಡು ಬಂದಿರುವ ಸಿದ್ಧಾಂತವೇ ಕಾರಣವಾಗಿದೆ. ಸಂಕಪ್ಪಯ್ಯನಿಗೆ ವೈಚಾರಿಕತೆಗಿಂತ ತನ್ನ ಸಿದ್ಧಾಂತದ ಜೀವನದ ಬಗ್ಗೆ ಗೌರವವಿದೆ. ತಾನು ಇಲ್ಲಿಯತನಕ ನಂಬಿಕೊಂಡು ಬಂದ ಚೌಕಟ್ಟಿನ ಜೀವನವೇ ಅವನಿಗೆ ಸುಗಮವೆನಿಸುತ್ತದೆ. ಸ್ವಾತಂತ್ರ್ಯವನ್ನು ಬಯಸುವ ಸಂಕಪ್ಪಯ್ಯನ ಕುಟುಂಬದವರಿಗೆ ಸಿದ್ಧಾಂತ ಬೇಕಿಲ್ಲ. ಇಲ್ಲಿ ಇವರಿಬ್ಬರೂ ವೈಚಾರಿಕವಾಗಿ ಚಿಂತಿಸುವುದಿಲ್ಲ. ಇಬ್ಬರಿಗೂ ತಮ್ಮ ಬಯಕೆಯೇ ಮುಖ್ಯವಾಗಿದೆ.

'ರೂತ್ ಮತ್ತು ರಸೂಲ್' ಕತೆಯಲ್ಲಿ ಭಾರತೀಯನಾದ ದಿನೇಶ ವಿದ್ಯಾಭ್ಯಾಸಕ್ಕೆಂದು ಇಂಗ್ಲೆಂಡಿಗೆ ಹೋದಾಗ ವಿದೇಶಿಯಳಾದ ರೂತ್‌ಳನ್ನು ಪ್ರೀತಿಸುತ್ತಾನೆ. ದಿನೇಶನ ಪ್ರೀತಿಯನ್ನು ರೂತ್‌ಳು ಸಮ್ಮತಿಸುತ್ತಾಳೆ. ಮದುವೆಯ ಕುರಿತು ರೂತ್ ಮತ್ತು ದಿನೇಶ್‌ರ ವಿಚಾರಗಳಲ್ಲಿ ಭಿನ್ನಾಭಿಪ್ರಾಯವಿದೆ. ಇಂಗ್ಲೆಂಡಿನಲ್ಲೇ ಮದುವೆ ನಡೆಯಬೇಕೆಂಬ ಇಚ್ಛೆಯು ದಿನೇಶನದಾದರೆ, ಭಾರತದಲ್ಲಿ ಬಾಳಲು ಸಾಧ್ಯವೆನಿಸಿದರೆ ಮಾತ್ರ ನಿನ್ನನ್ನು ಮದುವೆಯಾಗುವೆನೆಂದು ರೂತ್ ತಿಳಿಸುತ್ತಾಳೆ.

ಸಿದ್ಧಾಂತಕ್ಕೆ ಒಗ್ಗಿಹೋದ ಕುಟುಂಬದಲ್ಲಿ ಜನಿಸಿದ ದಿನೇಶನಿಗೆ ತಂದೆ ಎಂದರೆ ಭಯ ಭಕ್ತಿ ಇದೆ. ಅವನಿಗೆ ಮದುವೆಯ ವಯಸ್ಸಿಗೆ ಬಂದ ತಂಗಿ ಇದ್ದಾಳೆ. ಪ್ರೀತಿಸಿದವಳನ್ನು ಭಾರತದಲ್ಲಿ ಮದುವೆಯಾದರೆ ಭವಿಷ್ಯದಲ್ಲಿ ತಂಗಿಯ ಮದುವೆಗೆ ಅಡ್ಡಿ ಆತಂಕಗಳು ಬರುತ್ತವೆಂಬ ಭಯವು ದಿನೇಶನಿಗಿದೆ. ರೂತ್‌ಳೊಂದಿಗಿನ ಮದುವೆಯ ವಿಚಾರವನ್ನು ತಂದೆ ತಾಯಿಗಳಿಗೆ ಸಮಜಾಯಿಷಿ ಹೇಳಲು ಅವನಿಗೆ ಸಾಧ್ಯವಾಗುವುದಿಲ್ಲ. ನನ್ನ ತಂಗಿಯ

[illegible]

[illegible]

[illegible]

[illegible]

[illegible]

[illegible]

ಮದುವೆಯ ಅನಂತರ ನಿನ್ನನ್ನು ಮದುವೆಯಾಗುವೆನೆಂಬ ರಿಯಾಯಿತಿಯನ್ನು ರೂತ್‌ಳಿಗೆ ನೀಡುತ್ತಾನೆ. ರೂತ್‌ಳು ವಿದೇಶದವಳಾದ್ದರಿಂದ ಭಾರತದಲ್ಲಿ ನೆಲೆಸಲು ಇಚ್ಛಿಸುತ್ತಾಳೆ.

ರೂತ್‌ಳಿಗೆ ತನ್ನದೇ ಆದ ಜೀವನ ಸಿದ್ಧಾಂತವಿದೆ. ದಿನೇಶನ ಎಲ್ಲಾ ಷರತ್ತುಗಳನ್ನು ಅವಳು ಒಪ್ಪುವುದಿಲ್ಲ. ಇಂಗ್ಲೆಂಡಿನ ಸ್ವಚ್ಛಂದ ಬದುಕನ್ನು ವಿರೋಧಿಸುತ್ತಿದ್ದ ರೂತ್‌ಳು ದಿನೇಶನ ವಿಚಾರಗಳು ಬಹಿರಂಗಗೊಂಡಾಗ ದ್ವಂದ್ವಕ್ಕೊಳಗಾಗುತ್ತಾಳೆ. ರೂತ್‌ಳ ಸ್ನೇಹಿತ ರಸೂಲ್‌ನಿಗೆ ಗೆಳತಿಯು ಇಂಗ್ಲೆಂಡನ್ನು ಬಿಟ್ಟು ಭಾರತಕ್ಕೆ ಹೋಗುವುದು ಇಷ್ಟವಿಲ್ಲ. ಭಾರತೀಯ ಜೀವನಕ್ಕೆ ರೂತ್ ಹೊಂದಿಕೊಳ್ಳಲಾರಳೆಂಬ ನಿರೀಕ್ಷೆಯು ರಸೂಲ್‌ನದು. ದಿನೇಶ್‌ನೊಂದಿಗಿನ ರೂತ್‌ಳ ಸಂಬಂಧವನ್ನು ತಪ್ಪಿಸಲು ರಸೂಲ್‌ನು ಪ್ರಯತ್ನಿಸುತ್ತಾನೆ.

ಭಾರತಕ್ಕೆ ರೂತ್‌ಳು ಬರುತ್ತಾಳೆಂಬ ಸುದ್ದಿ ತಿಳಿದ ತಕ್ಷಣ ದಿನೇಶ್ ಅವಳು ಬರುವುದನ್ನು ತಪ್ಪಿಸಲು ಇಂಗ್ಲೆಂಡಿಗೆ ಬರುತ್ತಾನೆ. ದಿನೇಶನ ಇಚ್ಛೆಯಂತೆ ರೂತ್‌ಳಿಗೆ ನಿರೂಪಕನು ಭಾರತದಲ್ಲಿನ ಬಡತನ ಹಾಗೂ ಕ್ಷುಲ್ಲಕತೆಯ ಬಗೆಗೆ ತಿಳಿಸುತ್ತಾನೆ. ರೂತ್‌ಳು ಕೊನೆಗೂ ತನ್ನ ನಿರ್ಧಾರವನ್ನು ಬದಲಿಸದಿದ್ದಾಗ ದಿನೇಶ್, ರಸೂಲ್ ಹಾಗೂ ನಿರೂಪಕ ಈ ಮೂವರ ಪ್ರಯತ್ನವು ವ್ಯರ್ಥವಾಗುತ್ತದೆ. ರೂತ್ ಳಿಗೆ ತನ್ನದೇ ಆದ ಜೀವನ ಸಿದ್ಧಾಂತವಿದೆ. ಅವಳು ತನ್ನ ಸ್ವಾತಂತ್ರ್ಯವನ್ನು ವೈಚಾರಿಕವಾಗಿ ಚಿಂತಿಸಿ ಬಳಸಿಕೊಳ್ಳುತ್ತಾಳೆ. ದಿನೇಶ ಹಾಗೂ ಇತರರು ತಮ್ಮ ಇತಿಮಿತಿಯಲ್ಲೇ ಚಿಂತಿಸುವುದರಿಂದ ಅವರ ವಿಚಾರಗಳು ವೈಚಾರಿಕತೆಯಿಂದ ಮುಕ್ತವಾಗಿವೆ.

'ಕ್ಲಿಪ್‌ಜಾಯಿಂಟ್' ಕತೆಯಲ್ಲಿ ಕೇಶವನ ತಂದೆಯು ಮನೆಯ ಜವಾಬ್ದಾರಿಯಿಂದ ದೂರವಿರುತ್ತಾನೆ. ಕೇಶವನ ಒಬ್ಬ ಚಿಕ್ಕಪ್ಪ ಪೂರ್ವಾರ್ಜಿತ ಆಸ್ತಿಯನ್ನು ಮೋಸದಿಂದ ಕಬಳಿಸಿರುತ್ತಾನೆ. ಇನ್ನೊಬ್ಬ ಚಿಕ್ಕಪ್ಪ ಸನ್ಯಾಸಿಯಾಗಿರುತ್ತಾನೆ. ಇಂಥ ಪರಿಸ್ಥಿತಿಯಲ್ಲಿ ಚಿಕ್ಕಂದಿನಿಂದಲೂ ಕೇಶವ ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸುತ್ತಾನೆ. ದಿಕ್ಕುತಪ್ಪಿದ್ದ ಸಂಸಾರವನ್ನು ಸುಸ್ಥಿತಿಗೆ ತರಲು ಕೇಶವನು ಶ್ರಮಿಸುತ್ತಾನೆ. ಕುಟುಂಬದ ಹೊಣೆಯು ಹೆಚ್ಚಾದಾಗ ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತಾನೆ. ಕೇಶವ ಸಂಸಾರ ನಿರ್ವಹಣೆಗೆಂದು ಶ್ರಮಿಸಿದರೆ ಅವನ ತಮ್ಮಂದಿರು ಸರಿಯಾಗಿ ಓದದೆ ದುಂದುವೆಚ್ಚ ಮಾಡುತ್ತಾರೆ.

ಉಪನ್ಯಾಸಕನಾಗಿದ್ದ ಕೇಶವನಿಗೆ ತಂಗಿಯರ ಓದಿನ ಮತ್ತು ಅವರ ಮದುವೆಯ ಜವಾಬ್ದಾರಿ ಇದೆ. ತಾಯಿಯು ಕೇಶವನಿಗಿಂತ ಅವನ ತಮ್ಮಂದಿರನ್ನು ಪ್ರೀತಿಯಿಂದ ಕಾಣುತ್ತಾಳೆ. ಇಡೀ ಕುಟುಂಬದ ಅನುಕೂಲಕ್ಕಾಗಿ ಕೇಶವನು ರಕ್ತ ಸಂಬಂಧಿಯಾದ ಭಾಗೀರಥಿಯನ್ನು ಮದುವೆಯಾಗಬೇಕೆಂದು ಒತ್ತಾಯಿಸುತ್ತಾರೆ. ಇಷ್ಟವಿಲ್ಲದ ಹುಡುಗಿಯನ್ನು ಮದುವೆಯಾಗಲು ಒಪ್ಪದ ಕೇಶವನು ಸ್ವಚ್ಛಂದ ಬದುಕನ್ನು ಬಯಸಿ ಇಂಗ್ಲೆಂಡಿಗೆ ಬರುತ್ತಾನೆ.

ಇಂಗ್ಲೆಂಡಿನ ಜೀವನ ಕೇಶವನಿಗೆ ಆಕರ್ಷಕವೆನಿಸುತ್ತದೆ. ಸ್ಟೂಅರ್ಟ್‌ನ ಜೀವನಕ್ಕೂ ತನ್ನ ಜೀವನಕ್ಕೂ ಕೇಶವ ತಾಳೆ ಹಾಕುತ್ತಾನೆ. ಜವಾಬ್ದಾರಿಗಳಿಲ್ಲದ ಸ್ಟೂಅರ್ಟ್‌ನ ಜೀವನವನ್ನು ಕಂಡು ಅಸಮಾಧಾನಪಡುತ್ತಾನೆ. ಆಧುನಿಕ ಸಮಾಜದ ಸ್ವಾತಂತ್ರ್ಯವನ್ನು, ಭೌತಿಕ ಸಂತೋಷವನ್ನು ಹಾಗೂ ಪಂಚೇಂದ್ರಿಯಗಳಿಗೆ ಬೇಕಾದ ಆನಂದವನ್ನು ಸ್ಟೂಅರ್ಟ್ ಸುಲಭವಾಗಿ ಪಡೆದಿದ್ದಾನೆ. ಸಿದ್ಧಾಂತಕ್ಕೆ ಕಟ್ಟುಬಿದ್ದ ಕೇಶವನು ಕುಟುಂಬದ ಜವಾಬ್ದಾರಿ ನಿರ್ವಹಿಸಲಿಕ್ಕಾಗಿ ಜೀವಿತಾವಧಿಯ ಅರ್ಧ ಸಮಯವನ್ನು ವ್ಯಯಿಸಿದ್ದಾನೆ. ವೈಯಕ್ತಿಯ ಜೀವನವೆಂಬುದೇ

ತನಗಿಲ್ಲ, ಭಾವನಾತ್ಮಕ ತೃಪ್ತಿಯಿಲ್ಲದೆ ಹಾಗೂ ಪ್ರಯೋಗಶೀಲತೆಯಿಲ್ಲದೆ ಬದುಕಿದ್ದೇನೆಂದು ಕೇಶವ ಬೇಸರಪಡುತ್ತಾನೆ.

ಕೇಶವನು ಸ್ಟೂಆರ್ಟ್‌ನೊಂದಿಗೆ ಕ್ಲಬ್‌ಗೆ ಹೋಗುವುದರ ಜೊತೆಗೆ ವೇಶ್ಯೆ ಸಂಗವನ್ನು ಮಾಡುತ್ತಾನೆ. ಪಾಶ್ಚಾತ್ಯ ಆಧುನಿಕತೆಯನ್ನು ಪ್ರತಿನಿಧಿಸುವ ಸ್ಟ್ರಿಪ್ಪರ್ ಎನ್ನುವ ನೈಟ್ ಕ್ಲಬ್ ಹುಡುಗಿಯಿಂದ ಪ್ರೀತಿ ಹಾಗೂ ತೃಪ್ತಿಯನ್ನು ಪಡೆಯುತ್ತಾನೆ. ವ್ಯವಸ್ಥಿತ ಬದುಕಿಲ್ಲದೆ ಹಲವರಿಗೆ ದೇಹವನ್ನು ಮಾರಿಕೊಂಡು ಮೋಸಮಾಡುವ ಸ್ಟ್ರಿಪ್ಪರ್‌ಳ ನೈಜ ವಿಚಾರವನ್ನು ತಿಳಿದ ಮೇಲೆ ಕೇಶವನಿಗೆ ನಿರಾಶೆಯಾಗುತ್ತದೆ.

ಭಾರತೀಯರ ಜೀವನ ಸಿದ್ಧಾಂತವನ್ನು ಮೆಚ್ಚುವ ಸ್ಟೂಆರ್ಟ್‌ನಿಗೆ ಇಂಗ್ಲೆಂಡಿನ ಸ್ವಚ್ಛಂದ ಬದುಕು ಇಷ್ಟವಾಗುವುದಿಲ್ಲ. ಭಾರತದಲ್ಲಿರುವಾಗ ಬದುಕಿನಲ್ಲಿ ಭ್ರಮ ನಿರಸನವನ್ನು ಹೊಂದಿದ ಕೇಶವನು ಇಂಗ್ಲೆಂಡಿಗೆ ಹೋಗುತ್ತಾನೆ. ವಿದೇಶದಲ್ಲಿಯೂ ಅವನಿಗೆ ಮಾನಸಿಕ ನೆಮ್ಮದಿಯು ಸಿಗದಿದ್ದಾಗ ಅತಂತ್ರ ಸ್ಥಿತಿಯನ್ನು ಎದುರಿಸುತ್ತಾನೆ. ಇಲ್ಲಿ ವೈಚಾರಿಕವಾಗಿ ಚಿಂತಿಸದ ಕೇಶವನು ತನ್ನ ಸ್ವಾತಂತ್ರ್ಯವನ್ನು ದುರುಪಯೋಗ ಪಡಿಸಿಕೊಂಡು ದ್ವಂದ್ವಕ್ಕೊಳಗಾಗುತ್ತಾನೆ. ಆದರೆ ವೈಚಾರಿಕವಾಗಿ ಚಿಂತಿಸಿ ಸ್ವಾತಂತ್ರ್ಯವಾನು ಸದುಪಯೋಗ ಪಡಿಸಿಕೊಳ್ಳುವ ಸ್ಟೂ ಆರ್ಟ್‌ನಿಗೆ ಯಾವುದೇ ಗೊಂದಲವಿಲ್ಲ.

'ಮೌನಿ' ಕತೆಯಲ್ಲಿ ಕುಪ್ಪಣ್ಣಭಟ್ಟನು ತನ್ನದೇ ಆದ ಜೀವನ ಸಿದ್ಧಾಂತಕ್ಕೆ ಬದ್ಧನಾಗಿದ್ದಾನೆ. ಅಪ್ಪಣ್ಣಭಟ್ಟನ ಸವಾಲಿನಿಂದಾಗಿ ಕುಪ್ಪಣ್ಣಭಟ್ಟನು ಹೀನಾಯ ಪರಿಸ್ಥಿತಿಯನ್ನು ಎದುರಿಸುತ್ತಾನೆ. ಸಾಲದ ಹೊರೆ ಹೆಚ್ಚಾದಾಗ ಕುಪ್ಪಣ್ಣಭಟ್ಟನು ಹೆಂಡತಿಯ ಒಡವೆಗಳನ್ನು ಅಡವಿಡುತ್ತಾನೆ. ಕುಪ್ಪಣ್ಣಭಟ್ಟನು ಆರ್ಥಿಕವಾಗಿ ದುಸ್ಥಿತಿಯಲ್ಲಿರುವ ಸಂದರ್ಭದಲ್ಲಿ ಸಾಲಗಾರರು ಹಣದ ವಸೂಲಿಗೆ ಬರುತ್ತಾರೆ.

ಬಾವನ ದುಸ್ಥಿತಿಯನ್ನು ತಿಳಿದ ಸುಬ್ರಹ್ಮಣ್ಯನು ನೆರವನ್ನು ನೀಡಲು ಬಂದಾಗ ಕುಪ್ಪಣ್ಣಭಟ್ಟನು ಅದಕ್ಕೆ ಸಮ್ಮತಿಸುವುದಿಲ್ಲ. ಕಷ್ಟಗಳಿಗೆ ಹೆದರದ ಕುಪ್ಪಣ್ಣಭಟ್ಟನು ಏಕಾಂಗಿಯಾಗಿಯೇ ಸಮಸ್ಯೆಗಳನ್ನು ಎದುರಿಸಲು ಪ್ರಯತ್ನಿಸಿ ಸೋಲುತ್ತಾನೆ. ಗಂಡನ ಹಿಂದಿನ ಸಿಟ್ಟು, ಈಗಿನ ಮಂಕು ಬಡಿದ ಸ್ಥಿತಿಯನ್ನು ಕಂಡ ಗೌರಮ್ಮ ಚಿಂತೆಗೊಳಗಾಗುತ್ತಾಳೆ. ಹೆಂಡತಿ ಮಕ್ಕಳನ್ನು ತವರಿಗೆ ಕಳುಹಿಸಿದ ಕುಪ್ಪಣ್ಣಭಟ್ಟ ಒಂಟಿಯಾದಾಗಲೂ ತನ್ನ ಹಠಮಾರಿತನವನ್ನು ಬಿಡುವುದಿಲ್ಲ. ನಿಷ್ಠುರ ಸ್ವಭಾವದ ಅವನನ್ನು ಜನರು ಇಷ್ಟಪಡುವುದಿಲ್ಲ. ಕುಪ್ಪಣ್ಣಭಟ್ಟನನ್ನು ನಿರ್ಗತಿಕನನ್ನಾಗಿ ಮಾಡಲು ಅಪ್ಪಣ್ಣಭಟ್ಟ ಹೊಂಚುಹಾಕುತ್ತಾನೆ.

ಮದುವೆ ವಯಸ್ಸಿಗೆ ಬಂದ ಮಗಳು, ಜ್ವರದಗಡ್ಡೆಯಿಂದ ಹೊಟ್ಟೆ ಡೊಳ್ಳಾದ ಮಗ, ಉಬ್ಬಸ ರೋಗದ ಹೆಂಡತಿ, ಕೈಕೊಟ್ಟ ಅಡಿಕೆ ತೋಟ ಹಾಗೂ ಏರಿದ ಸಾಲ ಇದಾವುದರಿಂದಲೂ ಎದೆಗುಂದದ ಕುಪ್ಪಣ್ಣಭಟ್ಟನು ಆತ್ಮವಿಶ್ವಾಸದಿಂದಿರುತ್ತಾನೆ. ಕುಪ್ಪಣ್ಣಭಟ್ಟನ ಹತ್ತಿರ ಹಣವಿಲ್ಲದ ಸಂದರ್ಭದಲ್ಲಿ ಅಪ್ಪಣ್ಣಭಟ್ಟನ ಕುತಂತ್ರಕ್ಕೆ ಬೆಂಬಲಿಸಿದ ಸಾಲಗಾರರು ಹಣದ ವಸೂಲಿಗೆ ಬರುತ್ತಾರೆ. ಆಗ ಮನೆ ಹಾಗೂ ಸಾಮಾನುಗಳೆಲ್ಲಾ ಹರಾಜಾಗುತ್ತವೆ. ಬದುಕಿನಲ್ಲಿ ಹೋರಾಟದ ಮನೋಭಾವನೆಯನ್ನು ಹೊಂದಿದ್ದ ಕುಪ್ಪಣ್ಣಭಟ್ಟನು ಕೊನೆಗೆ ಮೌನ ತಾಳಿದಾಗ ಅಪ್ಪಣ್ಣಭಟ್ಟನ ಮನಸ್ಸು ಕರಗುತ್ತದೆ. ವೈರ ಸಾಧಿಸುತ್ತಿದ್ದ ಅವನು ಗೆಳೆಯನ ಪರಿಸ್ಥಿತಿಯನ್ನು ಕಂಡು ಪಶ್ಚಾತ್ತಾಪಪಡುವಂತಾಗುತ್ತಾನೆ. ಸ್ವಾತಂತ್ರ್ಯವನ್ನು ಕುತಂತ್ರಕ್ಕೆ ಬಳಸುವ ಅಪ್ಪಣ್ಣಭಟ್ಟ ವೈಚಾರಿಕ

ದೃಷ್ಟಿಕೋನದ ಕೊರತೆಯಿಂದ ಕುಪ್ಪಣ್ಣ ಭಟ್ಟನೊಂದಿಗೆ ವೈರ ಸಾಧಿಸುತ್ತಾನೆ. ಕೊನೆಗೆ ಕುಪ್ಪಣ್ಣ ಭಟ್ಟನ ಮೌನವು ಅವನನ್ನು ವೈಚಾರಿಕತೆಯೆಡೆಗೆ ಸೆಳೆಯುತ್ತದೆ.

'ಸಂಸ್ಕಾರ' ಕಾದಂಬರಿಯಲ್ಲಿ ಪ್ರಾಣೇಶಾಚಾರ್ಯನ ಪ್ರೌಢ ಜೀವನ ಅಗ್ರಹಾರದ ಸೈದ್ಧಾಂತಿಕ ಪರಿಮಿತಿಗೆ ಒಳಪಟ್ಟಿದೆ. ಫಲಾಪೇಕ್ಷೆಯಿಲ್ಲದ ಕರ್ಮದಲ್ಲಿ ಮುಕ್ತಿ ಪಡೆಯುವೆನೆಂಬ ಧನ್ಯತಾ ಭಾವವಿದೆ. ಒಂದು ನಿರ್ದಿಷ್ಟ ಸಿದ್ಧಾಂತಕ್ಕೆ ಒಗ್ಗಿ ಬದುಕನ್ನು ನಡೆಸುವ ಪ್ರಾಣೇಶಾಚಾರ್ಯನಿಗೆ ಜೀವನದಲ್ಲಿ ಅನಿರೀಕ್ಷಿತವಾಗಿ ಸಂಭವಿಸುವ ಕೆಲವು ಘಟನೆಗಳು ಸಂದಿಗ್ಧತೆಯನ್ನುಂಟು ಮಾಡುತ್ತವೆ. ಇಲ್ಲಿ ಜೀವನ ಮತ್ತು ಸಿದ್ಧಾಂತಕ್ಕಿರುವ ಸಂಬಂಧವನ್ನು ಕಾಣಬಹುದು.

ಗರುಡಾಚಾರ್ಯ ಹಾಗೂ ಲಕ್ಷ್ಮಣಾಚಾರ್ಯನದು ಸುಳ್ಳು ಮತ್ತು ಆಸೆಗಳಿಗೆ ಸಿದ್ಧಾಂತದ ಚೌಕಟ್ಟನ್ನು ಹಾಕಿಕೊಂಡಿದ್ದಾರೆ. ಸಮಾಜದ ಮೌಲ್ಯಗಳನ್ನು ನಂಬಿ ವೈಯಕ್ತಿಕ ಮೌಲ್ಯಗಳನ್ನು ಕಡೆಗಣಿಸಿದವನು ಪ್ರಾಣೇಶಾಚಾರ್ಯನಾಗಿದ್ದಾನೆ. ಅಗ್ರಹಾರದ ಬ್ರಾಹ್ಮಣರಿಗೆ ಸಿದ್ಧಾಂತಕ್ಕಿಂತ ಜೀವನ ಮುಖ್ಯವೆನಿಸಿದೆ. ಪ್ರಾಣೇಶಾಚಾರ್ಯನಿಗೆ ಸಿದ್ಧಾಂತವೇ ಬದುಕಾಗಿದೆ. ಹೀಗೆ ಸಾಮಾಜಿಕ – ವೈಯಕ್ತಿಕ ಒಳ್ಳೆಯ – ಕೆಟ್ಟ ಮೌಲ್ಯಗಳು ಇರುತ್ತವೆ.

ಸಿದ್ಧಾಂತ ವೈಯಕ್ತಿಕ ಇರಬಹುದು ಅಥವಾ ಸಾಮಾಜಿಕವಿರಬಹುದು ಎರಡಕ್ಕೂ ಅನೂಚಾನವಾದ ಕೆಲವು ತತ್ವಗಳ ಆಧಾರವಿದ್ದಾಗ ಆ ಸಿದ್ಧಾಂತ ಪೂರ್ಣ ಜೀವನಕ್ಕೆ ಅವಕಾಶ ಮಾಡಿಕೊಡಬಹುದು. ಆದರೆ ಜೀವನಾನುಭವಕ್ಕೂ ತತ್ವಗಳಿಗೂ ಸಂಬಂಧ ಕಡಿಮೆಯಾದಾಗ ಜೀವನದ ಪೂರ್ಣತೆ ಸಾಧ್ಯವಾಗುವುದಿಲ್ಲ. ಈ ಕಾದಂಬರಿಯಲ್ಲಿ ಚಿತ್ರಿತವಾದ ಸಮಾಜದ ತಾತ್ವಿಕ ತಳಹದಿ ಹೆಣ್ಣು, ಹೊನ್ನು ಮತ್ತು ಮಣ್ಣು. ಮನುಷ್ಯನ ಆಧ್ಯಾತ್ಮಿಕ ಪ್ರಗತಿಗೆ ಅಡ್ಡ ಬರಬಹುದೆಂಬ ನಂಬಿಕೆ ಮತ್ತು ಈ ತಾತ್ವಿಕ ತಳಹದಿಯ ಸೆಳೆತದಿಂದ ದೂರವಿರಬಲ್ಲೆ ಎಂಬ ಛಲದಿಂದ ಪ್ರಾಣೇಶಾಚಾರ್ಯನು ಜೀವನವನ್ನು ರೂಪಿಸಿಕೊಂಡಿದ್ದಾನೆ. ಇವನಿಗೆ ತದ್ವಿರುದ್ಧವಾದ ಜೀವನ ವಿಧಾನ ನಾರಣಪ್ಪನದು. ಬಣ್ಣದ ಬದುಕು ಒಂದಾದರೆ ಸಿದ್ಧಾಂತರಹಿತ ಬದುಕು ಇನ್ನೊಂದು. ಇವೆರಡೂ ಮುಖಾಮುಖಿಯಾದಾಗ ಸಂಘರ್ಷ ಹುಟ್ಟಿಕೊಳ್ಳುತ್ತದೆ.

ಪ್ರಾಣೇಶಾಚಾರ್ಯ ತಮ್ಮ ಪತ್ನಿ ಭಾಗೀರಥಿಯು ರೋಗಿಷ್ಟಳಾಗಿ ದೇಹವನ್ನು ತನ್ನ ಯಜ್ಞಭೂಮಿ ಎಂದುಕೊಳ್ಳುತ್ತಾನೆ. ಇವಳು ರೋಗಿಯಾದ್ದರಿಂದ ನಾನು ಇನ್ನಷ್ಟು ಹದವಾದೆ ಎಂದುಕೊಳ್ಳುತ್ತಾನೆ. ಸನ್ಯಾಸಿಯಾಗಬೇಕು ಇಲ್ಲವೆ ತ್ಯಾಗದ ಬಾಳುವೆ ನಡೆಸಬೇಕೆಂದು ಅವನೇ ಆರಿಸಿಕೊಂಡ ಜೀವನವಾಗಿದೆ. ಹುಟ್ಟಿನಿಂದ ರೋಗಿಯಾಗಿದ್ದ ಭಾಗೀರಥಿಯನ್ನು ಮದುವೆಯಾಗುತ್ತಾನೆ. ಇದರಿಂದ ಕೃತಜ್ಞನಾದ ಮಾವನ ಮನೆಯಲ್ಲಿ ಅವಳನ್ನು ಬಿಟ್ಟು ಪ್ರಾಣೇಶಾಚಾರ್ಯ ಕಾಶಿಗೆ ಹೋಗುತ್ತಾನೆ. ವೇದಾಂತ ಶಿರೋಮಣಿಯಾಗಿ ವಾಪಸ್ಸಾಗುತ್ತಾನೆ. ನಿಷ್ಕಾಮ ಕರ್ಮದ ಜೀವನ ನಡೆಸುವ ತಾಕತ್ತನ್ನು ಪರೀಕ್ಷಿಸಿಕೊಳ್ಳಲು ಭಗವಂತ ಭಾಗೀರಥಿಯನ್ನು ತನ್ನ ಕೈಗೆ ನೀಡಿದ್ದಾನೆಂದು ತಿಳಿದು ಹರ್ಷದಿಂದ ಹೆಂಡತಿಯ ಸೇವೆಯನ್ನು ಮಾಡುತ್ತಾನೆ. ಸಾಮಾಜಿಕ ಕಾರ್ಯಗಳಲ್ಲಿ ತೊಡಗಿ ಉತ್ತಮವಾದ ಸ್ಥಾನವನ್ನು ಪಡೆಯುತ್ತಾನೆ. ನಾರಣಪ್ಪನಿಂದಾಗಿ ಪ್ರಾಣೇಶಾಚಾರ್ಯನ ಗಮನವು ಜೀವನದ ಮೂಲಭೂತ ಅವಶ್ಯಕತೆಗಳ ಕಡೆಗೆ ಹರಿಯುತ್ತದೆ. ಸಂಜೆ ಹೊತ್ತು ರಸಭರಿತ ಕತೆಗಳನ್ನು ಓದುವುದನ್ನು ನಿಲ್ಲಿಸಿದ ಅವನು ನೀತಿಕತೆಗಳನ್ನು ಹೇಳಲು ಪ್ರಾರಂಭಿಸುತ್ತಾನೆ. ಇದರಿಂದ

[illegible]

[illegible]

[illegible]

[illegible]

[illegible]

[illegible]

ಪುರಾಣ ಹೇಳುವುದರಲ್ಲಿದ್ದ ಹುಮ್ಮಸ್ಸನ್ನು ಕಳೆದುಕೊಳ್ಳುತ್ತಾನೆ. ಹೀಗೆ ಅವನು ನಂಬಿದ್ದ ಮೌಲ್ಯಗಳು ಪ್ರಾಣೇಶಾಚಾರ್ಯನನ್ನು ಹೀಗಾದುದಕ್ಕೆ ಕಾರಣ ಹುಡುಕಲು ಬಿಡುವುದಿಲ್ಲ.

ಸಂಸ್ಕಾರದ ಪ್ರತೀಕವಾಗಿ ಪ್ರಾಣೇಶಾಚಾರ್ಯನಿದ್ದಂತೆ ಸ್ವಭಾವದ ಪ್ರತೀಕವಾಗಿ ನಾರಣಪ್ಪನಿದ್ದಾನೆ. ಕತೆ ಶುರುವಾಗುವ ಮೊದಲೇ ಸತ್ತುಹೋಗಿದ್ದರೂ ಅಗ್ರಹಾರದ ಬ್ರಾಹ್ಮಣರಿಗೆ ಪ್ರಾಣೇಶಾಚಾರ್ಯರಿಗೆ ಅವನೊಂದು ಸಜೀವ ಆಹ್ವಾನವಾಗಿಯೇ ಕತೆಯನ್ನು ತುಂಬಿಕೊಳ್ಳುತ್ತಾನೆ. ನಾರಣಪ್ಪನ ಬಗ್ಗೆ ಪ್ರಾಣೇಶಾಚಾರ್ಯ ತೋರುವ ಸಂದಿಗ್ಧ ಪ್ರತಿಕ್ರಿಯೆಯಲ್ಲಿ ಭೀತಿ, ಪಶ್ಚಾತ್ತಾಪ ಗೆಲ್ಲುವ ಹಠದೊಂದಿಗೆ ಬಾಲ್ಯ ಸ್ನೇಹಿತ ಮಹಾಬಲನ ನೆನಪು ಸೇರಿ ಅವನ ಸಂಸ್ಕಾರದ ಪ್ರಶ್ನೆ ಮತ್ತಷ್ಟು ಜಟಿಲವಾಗಿದೆ. ಇದರಿಂದಾಗಿಯೇ ಪ್ರಾಣೇಶಾಚಾರ್ಯನು ಧರ್ಮಗ್ರಂಥಗಳ, ಮಾರುತಿಯ ಆಶ್ರಯವನ್ನು ಹುಡುಕುತ್ತಾನೆ. ತಾನು ಹೊಂದಿಕೊಂಡ ಮೌಲ್ಯಗಳ ಬೆಳಕಿನಲ್ಲಿ ನಾರಣಪ್ಪನ ಈ ಆಹ್ವಾನವನ್ನು ಎದುರಿಸಲಾಗದೇ ಗೊಂದಲಗೊಳ್ಳುತ್ತಾನೆ. ಧರ್ಮಗ್ರಂಥಗಳಲ್ಲಿ ಉತ್ತರ ಸಿಗುವುದಿಲ್ಲ ಮಾರುತಿ ತಟಸ್ಥವಾಗಿ ನಿಂತಾಗ ನಾರಣಪ್ಪ ಗೆಲ್ಲುತ್ತಾನೆ. ಪ್ರಾಣೇಶಾಚಾರ್ಯ ತನಗಿರುವ ಸ್ವಾತಂತ್ರ್ಯವನ್ನು ಅತಿಯಾದ ಮಿತಿಯೊಳಗೆ ಬಳಸಿದರೆ, ನಾರಣಪ್ಪನ ಸ್ವಾತಂತ್ರ್ಯ ಸ್ವೇಚ್ಛಾಚಾರದ್ದಾಗಿದೆ. ಇಲ್ಲಿ ಇಬ್ಬರೂ ವೈಚಾರಿಕವಾಗಿ ಚಿಂತಿಸುವುದಿಲ್ಲ. ಇಬ್ಬರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಅತಿಯಾಗಿ ನಡೆದುಕೊಳ್ಳುತ್ತಾರೆ. ಹಾಗಾಗಿ ಇಬ್ಬರ ಜೀವನವೂ ಗೊಂದಲದಿಂದ ಮುಕ್ತವಾಗಿಲ್ಲ. ಪ್ರಾಣೇಶಾಚಾರ್ಯನ ಧಾರ್ಮಿಕತೆಯಿಂದ ತುಂಬಿದ ಜೀವನದಲ್ಲಿ ಸ್ವಾತಂತ್ರ್ಯಕ್ಕೆ ಸಾಕಷ್ಟು ಅವಕಾಶವಿಲ್ಲ. ನಾರಾಣಪ್ಪನ ಅತಿಯಾದ ಸ್ವಾತಂತ್ರ್ಯಕ್ಕೆ ಕಡಿವಾಣವಿಲ್ಲ.

ಸಿದ್ಧಾಂತವು ಸಮಾಜದ ಒಟ್ಟು ಹಿತವನ್ನು ಬೆಂಬಲಿಸುತ್ತದೆ. ಇದಕ್ಕೆ ಸಮಾನವಾಗಿಯೇ ವ್ಯಕ್ತಿಯ ಹಿತವನ್ನು ಬಯಸುವ ಇನ್ನೊಂದು ಸಿದ್ಧಾಂತವು ಇರುತ್ತದೆ. ಇದು ಆ ವ್ಯಕ್ತಿಯ ಪ್ರವೃತ್ತಿಯನ್ನು ಅವಲಂಬಿಸಿರುತ್ತದೆ. ಈ ಎರಡು ಗುಂಪಿನ ಸಿದ್ಧಾಂತದ ನಡುವೆ ಸಂಘರ್ಷ ಬರುವವರೆಗೂ ಎಲ್ಲಾ ಸುಗಮವಾಗಿರುತ್ತದೆ. ಸಿದ್ಧಾಂತವನ್ನು ಕೆಲವರು ಸಮಾಜದ ಭಯದಿಂದ ಆಚರಿಸಿದರೆ, ಇನ್ನು ಕೆಲವರು ಲಾಭಗಳಿಕೆಯ ಆಸೆಯಿಂದ ಅನುಸರಿಸುತ್ತಾರೆ. ಮತ್ತೆ ಕೆಲವರು ಆದರ್ಶದ ಭ್ರಮೆಯಿಂದ ಆಚರಿಸುತ್ತಾರೆ. ಆದ್ದರಿಂದಲೇ ಸಮಾಜದ ನಡವಳಿಕೆಗೂ ಸಮಾಜದ ಒಟ್ಟು ಮೌಲ್ಯಗಳಿಗೂ ಅಂತರವಿರುವುದು ಅನಿವಾರ್ಯವಾಗಿದೆ. ಅವುಗಳನ್ನು ನಂಬುವುದಕ್ಕಿಂತ ಆಚರಿಸಬೇಕಾದುದು ಅಗತ್ಯವಾದುದು.

'ಅವಸ್ಥೆ'ಕಾದಂಬರಿಯಲ್ಲಿ ಕೃಷ್ಣಪ್ಪನ ಸಿದ್ಧಾಂತಕ್ಕೂ ಹಾಗೂ ರಾಜಕೀಯ ಬದುಕಿಗೂ ವ್ಯತ್ಯಾಸವಾದಾಗ ಸಂಘರ್ಷವೇರ್ಪಡುತ್ತದೆ. ಅಣ್ಣಾಜಿ ಮತ್ತು ಕೃಷ್ಣಪ್ಪಗೌಡನ ಸಂಬಂಧ ಮುಕ್ತ ಮತ್ತು ಗುಪ್ತ ಬದುಕಿನ ನೆಲೆಗಳನ್ನು ಪ್ರತಿಬಿಂಬಿಸುವಂತಿದೆ. ಅನುಮಾನಗಳನ್ನು ಸರಳಗೊಳಿಸುವ ತಾತ್ವಿಕತೆಗೂ ಅವನ ದಿನನಿತ್ಯದ ನಡಾವಳಿಯ ನೆಲೆ ಕೃಷ್ಣಪ್ಪಗೌಡನಿಗೆ ಎಲ್ಲೂ ಹೊಂದಾಣಿಕೆಯಾಗುವುದಿಲ್ಲ. ಇಲ್ಲಿ ಕೃಷ್ಣಪ್ಪ ಅನ್ಯಾಯವನ್ನು ವಿರೋಧಿಸುತ್ತಾನೆ. ಈ ವ್ಯವಸ್ಥೆಯೊಳಗಿನ ಅನೇಕ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಕಾದಂಬರಿಯಲ್ಲಿ ಪರೀಕ್ಷಿಸಲಾಗಿದೆ. ವ್ಯವಸ್ಥೆಯನ್ನು ಒಪ್ಪಿಕೊಂಡ ಅದರಿಂದ ವೈಯಕ್ತಿಕ ಲಾಭ ಪಡೆಯಲು ಕೆಲವರು ಬಯಸುತ್ತಾರೆ. ಅಂಥವರಲ್ಲಿ ಮುಖ್ಯಮಂತ್ರಿ, ವೀರಪ್ಪ, ಚೆನ್ನವೀರಯ್ಯ ಮುಂತಾದವರನ್ನು ಹೆಸರಿಸಬಹುದು. ಇನ್ನೊಂದು ಗುಂಪಿಗೆ ಸೇರಿದ ಜನರೆಂದರೆ ವ್ಯವಸ್ಥೆಯನ್ನು ವಿರೋಧಿಸಿ ಅದನ್ನು ಬದಲಾಯಿಸಲು ಪ್ರಯತ್ನಿಸುವ ಮಾರ್ಕ್ಸ್‌ವಾದಿ ಅಣ್ಣಾಜಿ, ನಾಗರಾಜ ಮುಂತಾದವರು. ಸಾಂದರ್ಭಿಕ ಒಪ್ಪಂದ ಮಾಡಿಕೊಂಡು ಸರಿಪಡಿಸಲು ಯತ್ನಿಸುವ

[illegible]

[illegible]

[illegible]

[illegible]

[illegible]

ಕೃಷ್ಣಪ್ಪನ ಧೋರಣೆ ಒಂದೆಡೆಯಾದರೆ, ವ್ಯವಸ್ಥೆಯನ್ನು ಉದಾಸೀನವಾಗಿ ಕಾಣುವ ಬೈರಾಗಿ, ಮಹೇಶ್ವರಯ್ಯ, ಹನುಮನಾಯಕ ಇನ್ನೊಂದೆಡೆಯಿದ್ದಾರೆ. ಇಲ್ಲಿ ಯಾರಿಂದಲೂ ಬದಲಾವಣೆಯನ್ನು ಸಂಪೂರ್ಣವಾಗಿ ತರಲಾಗುವುದಿಲ್ಲ ಜೊತೆಗೆ ಇದ್ದ ಸ್ಥಿತಿಯೇ ಇರುವುದಿಲ್ಲ. ವಾರಂಗಲ್ ಜೈಲಿನಲ್ಲಿ ಕೃಷ್ಣಪ್ಪನಿಗೆ ವ್ಯವಸ್ಥೆಯ ಕ್ರೂರತನದ ನಿಜಸ್ವರೂಪದ ಅನುಭವವಾಗುತ್ತದೆ. ಕೃಷ್ಣಪ್ಪ ಮಾಡುವ ಪ್ರಯತ್ನ ಪರ್ಯಾಯವಾಗಿ ವ್ಯವಸ್ಥೆಯನ್ನು ಬಲಪಡಿಸಲು ನೆರವಾಗುವುದನ್ನು ಅವನ ಅವನ ವಿಫಲತೆಯಲ್ಲಿ ಗುರುತಿಸಬಹುದು.

ಮುಖ್ಯಮಂತ್ರಿಯಾಗಿ ಶೋಷಿತ ಜನರಿಗೆ ಸಹಾಯ ಮಾಡಬೇಕೆಂಬುದು ಕೃಷ್ಣಪ್ಪನ ಉದ್ದೇಶ. ಅದಕ್ಕಾಗಿ ಅನಿವಾರ್ಯವಾಗಿ ತನಗೆ ಹಿಡಿಸದ ಪಕ್ಷಾಂತರ, ವೀರಣ್ಣನ ಹಣವನ್ನು ಖರ್ಚಿಗೆ ಬಳಸುವ, ಹಾಗೂ ತನಗಲ್ಲವಾದರೂ ಹೆಂಡತಿಗೆಂದು ಅವನು ಸೈಟ್ ಕೊಡಿಸಿದರೆ ಒಪ್ಪಿಕೊಳ್ಳಬೇಕಾದ ಸ್ಥಿತಿ ಎದುರಾದಾಗ ಗೊಂದಲಗೊಳ್ಳುತ್ತಾನೆ. ವ್ಯವಸ್ಥೆಯನ್ನು ಸುಧಾರಿಸಲು ಸಾಧ್ಯವಿಲ್ಲ ಎಂದುಕೊಂಡ ಕೃಷ್ಣಪ್ಪ ರಾಜಕೀಯ ಜೀವನದಿಂದ ಮುಕ್ತಿಯನ್ನು ಬಯಸುತ್ತಾನೆ. ಅವನ ಪ್ರತಿಭಟನೆಗೆ ಒಂದು ಹಂತದವರೆಗೂ ಮನ್ನಣೆ ಸಿಗುತ್ತದೆ. ಅವನೆಂದುಕೊಂಡಂತೆ ಎಲ್ಲಾ ಕಡೆಯೂ ನಡೆಯುವುದಿಲ್ಲ. ಆಗ ಅನಿವಾರ್ಯವಾಗಿ ಸಂಘರ್ಷವನ್ನು ಎದುರಿಸುತ್ತಾನೆ. ಅವನಿಗಿರುವ ಸ್ವಾತಂತ್ರ್ಯಕ್ಕೂ ವೈಚಾರಿಕತೆಗೂ ನಡುವೆ ಕಂದರವೇರ್ಪಟ್ಟಾಗ ದ್ವಂದ್ವವನ್ನೆದುರಿಸುತ್ತಾನೆ. ಅಸ್ತಿತ್ವವಾದದಿಂದ ರೂಪುಗೊಂಡ ಅನಂತಮೂರ್ತಿಯವರ ಇಂಥ ವೈಚಾರಿಕತೆಯ ನೆಲೆಯು ವ್ಯಕ್ತಿಯನ್ನು ಕೇಂದ್ರದಲ್ಲಿರಿಸಿಕೊಂಡ ಲಿಬರಲ್ ಚಿಂತನೆಯಾಗಿದೆ.

೫.೨ ಬದುಕು ಮತ್ತು ಸಾವಿನ ಪ್ರಜ್ಞೆ

ಬದುಕು ಸಾವಿನಿಂದ ಮುಕ್ತವಾಗಿಲ್ಲ. ಮನುಷ್ಯ ಸಾವನ್ನು ಅನಿವಾರ್ಯವಾಗಿ ಎದುರಿಸಬೇಕಾಗುತ್ತದೆ. ಸಾವಿನ ಬಗ್ಗೆ ಕುತೂಹಲವಿರುವ ಮನುಷ್ಯನಿಗೆ ಬದುಕಬೇಕೆಂಬ ಹಂಬಲವಿದೆ. ಬದುಕಿನಲ್ಲಿ ಅನಿರೀಕ್ಷಿತವಾಗಿ ಸಂಭವಿಸುವ ಸಾವಿನ ಕುರಿತ ಜಿಜ್ಞಾಸೆಯನ್ನು ಕಥಾಸಾಹಿತ್ಯದಲ್ಲಿ ಅನಂತಮೂರ್ತಿಯವರು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಸಾವನ್ನು ಎದುರಿಸಬೇಕಾದ ಸಂದರ್ಭದಲ್ಲಿ ವ್ಯಕ್ತಿಯ ಮನಸ್ಸಿನ ಭಾವನೆಗಳಿಗೆ ಶಾಬ್ಧಿಕ ರೂಪವನ್ನು ನೀಡಿದ್ದಾರೆ. ವರ್ತಮಾನವನ್ನು ಅರಗಿಸಿಕೊಂಡು ಭವಿಷ್ಯದ ಕಲ್ಪನೆಯನ್ನು ಕಟ್ಟಿಕೊಡುವ ಅಂತರಾತ್ಮಕ ಹಾಗೂ ದಾರ್ಶನಿಕ ತುರ್ತಿನ ಸ್ಪಷ್ಟ ಕಲ್ಪನೆಯನ್ನು ಇವರ ಕಥಾಸಾಹಿತ್ಯದಲ್ಲಿ ಕಾಣಬಹುದು.

ನವ್ಯ ಕತೆಯನ್ನು ಬರೆಯುವ ಸಂದರ್ಭದಲ್ಲಿ ಬರಹಗಾರರಿಗೆ ವಸ್ತುವಿನ ಆಯ್ಕೆಯಲ್ಲಿ ಅತ್ಯಂತ ಸವಾಲಿನ ಮಾರ್ಗವಿತ್ತು. ಆದರೆ ಪ್ರಗತಿಶೀಲರಂತೆ ಸಾಮಾಜಿಕ ಸಂದರ್ಭವನ್ನು ಕಟ್ಟಿಕೊಡುವಲ್ಲಿ ಗೌಪ್ಯತೆ, ಕ್ಲಿಷ್ಟತೆಯನ್ನು ರೂಢಿಸಿಕೊಂಡದ್ದು, ನವ್ಯ ಕಥಾತಂತ್ರದ ರಹಸ್ಯವೆನ್ನಬಹುದು. ಜೊತೆಗೆ ಕತೆಯನ್ನು ಅಭಿವ್ಯಕ್ತಿಸುವಾಗ ನಿರೂಪಕ ಯಾವುದೋ ಒಂದು ಮಾಧ್ಯಮವನ್ನು ಕಂಡುಕೊಳ್ಳುತ್ತಾನೆ. ಒಂದು ಹಿನ್ನುಡಿ ಎಂಬ ಕತೆಯಲ್ಲಿ ಜೀವನ ಎಂಬುದೊಂದು ಪ್ರತಿಮಾತ್ಮಕವಾದ (Metaphor) ಸಂಕೇತ. ಆ ಮೂಲಕ ಕಥೆಯುದ್ದಕೂ ಜೀವನದ ಹಲವಾರು ಸಂಕೀರ್ಣತೆಗಳನ್ನು ಸೃಜಿಸುವ ತಂತ್ರಗಾರಿಕೆಯನ್ನು ಬಳಸುತ್ತಾರೆ. ಅಲ್ಲದೆ ನವ್ಯರ ಸಾಮಾನ್ಯ ಸಂಗತಿಯಾದ ಫ್ಲಾಷ್‌ಬ್ಯಾಕ್ ತಂತ್ರ ಕತೆಯುದ್ದಕ್ಕೂ ಕಂಡುಬರುತ್ತದೆ. ಇದೊಂದು ಕಥಾತಂತ್ರದ ಬಗೆಯಾಗಿದೆ. ಇಲ್ಲಿ ಜೀವನವೆಂಬ ಅಪ್ರತ್ಯಕ್ಷ ಮಾಧ್ಯಮವೊಂದು ಪರಕಾಯ ಪ್ರವೇಶ ಮಾಡಿ ತನ್ನ ಅಳಲನ್ನು ಹೇಳುವುದು ಪರಂಪರೆಯಲ್ಲ. ಅದು ವಾಸ್ತವವನ್ನು ಪರೋಕ್ಷ ನೆಲೆಯಲ್ಲಿ ಸಿದ್ಧಗೊಳಿಸುವ ಯಶಸ್ವಿ ತಂತ್ರ. ಈ ತಂತ್ರ

[illegible]

[illegible]

[illegible]

[illegible]

[illegible]

ನವ್ಯದ ಕಾವ್ಯ ಶೈಲಿಯಲ್ಲಿ ಯಶಸ್ವಿಯಾಯಿತು. ಅನಂತಮೂರ್ತಿವರು ಕಥಾಸಾಹಿತ್ಯದಲ್ಲಿ ಈ ತಂತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

'ಒಂದು ಹಿನ್ನುಡಿ' ಕತೆಯಲ್ಲಿ ಸಾವನ್ನು ಕುರಿತು ವ್ಯಕ್ತಿಯ ಮನಸ್ಸಿನ ಭಾವನೆಗಳು ಎದುರಿಸುವ ಸಂಘರ್ಷವನ್ನು ಕಾಣಬಹುದಾಗಿದೆ. ಸಾವು ನಿಶ್ಚಿತವಾಗಿದ್ದು, ಸಾವಿನ ಮುಂಚೆ ಹಾಗೂ ಸಾವಿನ ನಂತರ ಏನಿರಬಹುದೆಂಬ ಕುತೂಹಲ ಮನುಷ್ಯನಿಗಿದೆ. ಸತ್ತ ಗೆಳೆಯನ ತಾಯಿ ಅವನು ಬರೆದ ಪುಸ್ತಕಗಳನ್ನು ನಿವೇದಕನಿಗೆ ಕೊಡುತ್ತಾಳೆ. ಅಚ್ಚಾಗದೇ ಉಳಿದಿದ್ದ ಪುಸ್ತಕವನ್ನು ಅಚ್ಚಿನ ಮನೆಗೆ ಕೊಂಡೊಯ್ಯಲು ಮೊದಲು ನಿವೇದಕನಿಗೆ ಹಿಂದಿನ ರಾತ್ರಿ ಕನಸಿನಲ್ಲಿ ಕಾದಂಬರಿಯೊಳಗಿನ ಎಲ್ಲವು ಬಂದಿತ್ತು. ಕವಿಯ ಆತ್ಮವು ಕಾದಂಬರಿಯಲ್ಲಿನ ವಸ್ತುವನ್ನು ತಿಳಿಸುತ್ತದೆ. ನಾನು ಜೀವನ ಮಾನವರ ಹೃದಯದಲ್ಲಿ ಮಿಡಿದು ಸಂಚರಿಸುವ ಶಕ್ತಿ ಎಲ್ಲಿದೆ ಎಂದು ಕೇಳಿದ್ದಕ್ಕೆ ನೀನು ಓದಿ ಮುಗಿಸಿದ ಆ ಮಹಾ ಕಾದಂಬರಿಯಲ್ಲಿ ಮೂಕವಾಗಿದ್ದೆ ಎನ್ನುತ್ತದೆ. ಇಲ್ಲಿಗೆ ಹೇಗೆ ಬಂದೆ ಎಂದಾಗ ನಿನ್ನ ಹೃದಯದಲ್ಲಿ ನಡೆದ ಅಮೃತಮಂಥನದಲ್ಲಿ ಮತ್ತೆ ಹುಟ್ಟಿ ಧ್ವನಿಪಡೆದುಬಂದೆ ಎನ್ನುತ್ತದೆ. ಮುಂದೆ ನಿನ್ನಂತೆಯೇ ದೇಹದಲ್ಲಿ ವಾಸಿಸುತ್ತಿದ್ದಾಗ ಬಾಳಿನಲ್ಲಿ ದುಃಖಪಟ್ಟು, ಬೇರೆ ದೇಹ ಸೇರಿ ಪಡಬಾರದ ಕಷ್ಟಪಟ್ಟೆ ಎಂದು ತಿಳಿಸುತ್ತದೆ.

ಆಸ್ಪತ್ರೆಯ ವಾರ್ಡೊಂದರಲ್ಲಿ ದೇಹದಿಂದ ತುಂಬ ನೊಂದು ಸತ್ತನೆಂದು ಎಲ್ಲರೂ ತಿಳಿದರು. ಆದರೆ ನಾನು ಇನ್ನೆಷ್ಟೋ ಹೃದಯಗಳಲ್ಲಿ ಬದುಕಿ ಕೊನೆಗೆ ಈ ಅವಸ್ಥೆ ಪಡೆದಿದ್ದೇನೆ ಎನ್ನುತ್ತದೆ. ನಾನು ಸಾಯುವುದಕ್ಕೆ ಮುಂಚೆ ನನ್ನ ಹಾಸಿಗೆಯ ಬಳಿ ನಾಲ್ಕೈದು ಡಾಕ್ಟರ್‌ಗಳು ಇದ್ದರೂ ನನಗೇನಾಗಿರುತ್ತೆಂದು ಪತ್ತೆ ಹಚ್ಚಲು ಒದ್ದಾಡುತ್ತಿದ್ದರು. ರಾತ್ರಿ ೧೨ ಗಂಟೆಗೆ ಸಾವನ್ನಪ್ಪಿದಾಗ ನಾನು ಸ್ವತಂತ್ರನಾದೆನೆಂದು ಭಾವಿಸಿದೆ. ಆದರೆ ಡಾಕ್ಟರ್‌ಗಳ ಮೆದುಳನ್ನು ಹೊಕ್ಕಾಗ ಯಮಯಾತನೆಯಾಯಿತು. ರೋಗ ಪತ್ತೆ ಹಚ್ಚುವ ಅವರ ಕುತೂಹಲವು ನನಗೆ ನರಕಹಿಂಸೆಯಾಗಿತ್ತು. ಅವರಿಂದ ಬಿಡುಗಡೆ ಹೊಂದಿ ಬೇರೊಂದು ಜೀವಿಯನ್ನು ಸೇರಿಕೊಂಡೆನು. ನಾನಿದ್ದ ಆಸ್ಪತ್ರೆಯಲ್ಲಿ ಒಬ್ಬ ಮತಾಂಧ ಮಲಗಿದ್ದ, ನಾನು ಸಾಯುವಾಗಿನ ಗೋಳನ್ನು ಕಣ್ಣಾರೆ ಕಂಡಿದ್ದನು. ನಾನು ಯಾವ ಪೂರ್ವ ಜನ್ಮದ ಪಾಪದಿಂದ ನರಳಿ ಸತ್ತೆನೆಂಬುದು ಅವನ ತರ್ಕವಾಗಿತ್ತು. ಕೊನೆಗೆ ಅವನ ಮೆದುಳನ್ನು ಸೇರಿದ ನನಗೆ ನರಕದರ್ಶನವಾಯಿತು. ಅಲ್ಲಿ ಕಿಡಿಕಾರಿ ಉರಿಯುವ ಬೆಂಕಿಯ ಹೊಂಡವಿತ್ತು. ಕೆಂಪಾಗಿ ಕರಗುವ ಅಗ್ನಿ ಕಂಬಗಳಿದ್ದವು. ಕುಟುಕಿ ತಿನ್ನೋ ಚೇಳುಗಳು ಬಾಣಲೆಯಲ್ಲಿ ಎಣ್ಣೆ ಕುದಿಯುತ್ತಿತ್ತು. ಈ ಎಲ್ಲಾ ಶಿಕ್ಷೆಯನ್ನನುಭವಿಸಿದೆ. ಅಲ್ಲಿಂದ ಪಾರಾಗಿ ಬಡತನದಿಂದ ಬದುಕನ್ನು ಸಾಗಿಸಲಾರದೆ ಯಾವನೊಬ್ಬ ಹಣವಂತನಿಂದ ನಾನು ಸಾಲ ಪಡೆದಿದ್ದ ನನ್ನನ್ನೇ ಕುರಿತು ಯೋಚಿಸುತ್ತಿದ್ದ ಅವನ ಮೆದುಳು ಸೇರಿದೆ.

ಕಾನೂನಿನ ರೀತಿಯಿಂದ ನನ್ನ ಹಣವನ್ನು ಹೇಗೆ ವಸೂಲಿ ಮಾಡಬೇಕೆಂದು ಚಿಂತಿಸುತ್ತಿದ್ದ ಕಲ್ಪನೆಯಲ್ಲಿ ಕೋರ್ಟಿಗೆ ಅಲೆಯುವಂತೆ ಮಾಡಿದನು. ಆಸ್ತಿಯ ಬಗ್ಗೆ ನೆನೆಯುತ್ತಿದ್ದಾಗ ಅವನಿಂದ ತಪ್ಪಿಸಿಕೊಂಡು ನನ್ನ ಪ್ರೇಯಸಿಯ ಮನೆಗೆ ಬಂದೆನು. ನನ್ನ ನೆನಪಿನ ದುಃಖದಿಂದ ಬಳಲಿದ್ದಾಳೆಂದು ಭಾವಿಸಿ ಕಾತರದಿಂದ ಬಂದೆ. ಎಷ್ಟು ಬೇಗ ನನ್ನನ್ನು ಮರೆತು ಬೇರೊಬ್ಬನನ್ನು ಮದುವೆಯಾಗಿದ್ದಾಳೆಂದು ಬೇಸರವಾಯಿತು. ಮದುವೆಯಾದವನನ್ನು ಕಾಡಬೇಕೆನ್ನಿಸಿದ ನನಗೆ ಅವಳು ಎಲ್ಲಿಯಾದರೂ ಸ್ಥಾನ ಉಳಿಸಿದ್ದಾಳೋ ನೋಡುವ ಎಂದುಕೊಂಡು ಅವನ ಮಿದುಳನ್ನು ಹೊಕ್ಕು ಪ್ರಳಯ ತಾಂಡವವಾಡಿದೆ. ಭೂತಚೇಷ್ಟೆಯೆಂದು ಜೋಯಿಸನ

[illegible]

ಹತ್ತಿರ ಹೋಗಿ ಶಂಖ, ಜಾಗಟೆಗಳಿಂದ ನನಗೆ ಭಯವನ್ನುಂಟು ಮಾಡಲು ಯತ್ನಿಸಿದರು. ಅವಳ ವರ್ತನೆ ನನಗೆ ಅಸಹ್ಯವೆನಿಸಿತು.

ಒಂದು ಕಾಲದಲ್ಲಿ ನನ್ನನ್ನೇ ಸರ್ವಸ್ವವೆಂದು ಪೂಜಿಸುತ್ತಿದ್ದವಳು ಅಕಾಲ ಮರಣಕ್ಕೆ ತುತ್ತಾದ ನನ್ನನ್ನು ಈ ರೀತಿ ಹಿಂಸಿಸಲು ಅನುವಾದದ್ದು ಜಿಗುಪ್ಸೆಯೆನಿಸಿತು. ಬದುಕಿದ್ದಾಗ ಜಿಗುಪ್ಸೆಯಾದರೆ ಆತ್ಮಹತ್ಯೆಯ ಮಾರ್ಗವಾದರೂ ಇದೆ ಸತ್ತವನಿಗೆ ಜಿಗುಪ್ಸೆಯಾದರೆ ಯಾವ ಪರಿಹಾರವಿಲ್ಲವೆನ್ನುತ್ತಾನೆ. ಬೇಸರದಿಂದಿದ್ದ ನನಗೆ ಯಾರೋ ಪಿಸುಗುಟ್ಟಿದರು ಏಕೆ ಹೀಗೆ ಬಳಲುತ್ತಿರುವೆ ಜಗತ್ತಿನ ಸರ್ವ ದುಃಖಿಗಳಿಗೂ ಆಶ್ರಯವಾದ ಕವಿ ಹೃದಯವೊಂದಿದೆ. ಅಲ್ಲಿ ಹೋಗಿ ಜೀವಪಡೆ ಎಂದಾಗ ನಾನು ಆ ಹೃದಯವನ್ನು ಸೇರಿದೆನು. ನಾನು ಮಲಗಿದ್ದ ವಾರ್ಡಿನ ಮತ್ತೊಂದು ತುದಿಯಲ್ಲಿ ಅವನು ಕರುಣಾಪೂರ್ಣನಾಗಿ ಮಲಗಿದ್ದನು. ವ್ಯಕ್ತಿಯು ಸೋತು ಎಲುಬುಗೂಡಾಗಿದ್ದರೂ ಅವನ ಮೈಯಲ್ಲಿ ಅಮೃತದ ಹೊಳೆ ಹರಿಯುತ್ತಿತ್ತು. ನೀಳವಾದ ಅವನ ಕಣ್ಣಲ್ಲಿ ವಿಚಿತ್ರ ಶಾಂತಿ ಕುಣಿಯುತ್ತಿತ್ತು. ನಾನವನ ಹೃದಯವನ್ನು ಸೇರುವ ಮುಂಚೆಯೇ ಆತ ತನ್ನ ಜೀವನದ ಬಗ್ಗೆ ಅತಿ ಕಾಳಯಿಂದ ಅಲೆದು ಎಲ್ಲ ವಿಷಯವನ್ನು ಸಂಗ್ರಹಿಸಿದ್ದನು. ನನ್ನನ್ನು ಕುರಿತು ಅತ್ಯಂತ ಮರುಕದಿಂದ ಅವನ ಹೃದಯದಲ್ಲಿ ನನಗಾಗಿ ದೊಡ್ಡ ಗದ್ದುಗೆಯನ್ನೇ ನಿರ್ಮಿಸಿದ್ದನು. ನಾನು ಸತ್ತ ಮೇಲೆ ಇದೊಂದೇ ಹೃದಯ ನನಗಿಂತ ಹೆಚ್ಚಾಗಿ ನೋಯುತ್ತಿತ್ತೆಂಬ ಅಭಿಮಾನ ನನಗಿದೆ.

ಜಗತ್ತಿನ ಎಲ್ಲ ದುಃಖಿಗಳೂ ಅಲ್ಲಿದ್ದರು ಲಕ್ಷಾಂತರ ವರ್ಷಗಳಿಂದ ಮಾನವ ಕೋಟಿ ಕಟ್ಟಿ ಬೆಳೆಸಿದ ನಾಗರೀಕತೆಯ ಕುರುಹುಗಳಿದ್ದವು. ಹಾಳುಬಿದ್ದ ಭವ್ಯ ಮಂದಿರ, ಅದ್ಭುತಶಿಲೆ ಸೌಂದರ್ಯದ ಖಣಿಗಳಂತೆ ಪಟ್ಟಣಗಳಿದ್ದವು. ಆರ್ಯ ಮಹರ್ಷಿಗಳು, ತಪೋಧನರು, ಧ್ಯಾನಮಗ್ನರಾಗಿದ್ದರು. ಹಾಲಹಲ ಕುಡಿದ ನೀಲಕಂಠನೂ ವಿಷದ ಬಟ್ಟಲಿಡಿದು ಚರ್ಚಿಸುತ್ತಿದ್ದನು. ಸಾಕ್ರೆಟಿಸ್, ಕ್ರಿಸ್ತ, ಬುದ್ಧ, ಗಾಂಧಿ, ಪೈಗಂಬರ್‌ರು ಉಪಸ್ಥಿತರಿದ್ದರು.

ಸುಖಮಯವಾದ ಕತೆಯನ್ನು ಓದಿದ ನಿನಗೆ ಹೊಸ ಸೃಷ್ಟಿ ಪ್ರಾಪ್ತವಾದದ್ದು ಹೇಗೆ ಎಂದು ತಿಳಿದೆ, ಇನ್ನು ನನ್ನನ್ನು ಜೀವಂತವಾಗಿ ಪ್ರತಿ ದಿನವೂ ಮಾನವ ಕೋಟಿಯ ಮನಸ್ಸಿನಲ್ಲಿ ಬದುಕುವಂತೆ ಮಾಡುವುದು ನಿನ್ನ ಕರ್ತವ್ಯ ಎಂದೆನು. ನಾನು ಹೇಳಿದ ಕಥೆ ನನ್ನ ಬದುಕಿಗೊಂದು ಉತ್ತಮವಾದ ಹಿನ್ನುಡಿಯಾಗುವಂತೆ ಬರೆದಿಡು ಎಂದು ನಿವೇದಕನಿಗೆ ಹೇಳಿದಂತಾಯಿತು. ಕೊನೆಗೆ ಅವನ ತಾಯಿ ನಿಮ್ಮ ಕೈಯಲ್ಲಿರುವ ಪುಸ್ತಕವನ್ನೇ ಅವನು ಸಾಯುವುದಕ್ಕೆ ಮುಂಚೆ ಬರೆದು ಮುಗಿಸಿದ ಎನ್ನುತ್ತಾಳೆ. ಬರೆದ ಒಂದೂ ಪುಸ್ತಕವೂ ಅಚ್ಚಾಗಿಲ್ಲ. ಬದುಕಿದ್ದಾಗ ಎಲ್ಲಾ ಕೆಲಸಕ್ಕೂ ನಾಲಾಯಕ್ಕಾಗಿ ಕಾಯಿಲೆಯಿಂದ ನರಳಿದನು. ಬರೆದದ್ದಕ್ಕೆ ನಾಲ್ಕು ಕಾಸೂ ಬರ್‍ಲಿಲ್ಲ ಕಡೆವರೆಗು ಅರೆಹೊಟ್ಟೆ, ಅದ್ರಲ್ಲೇ ಅವನಿಗೆ ಸಾವು ಬಂತು. ಈ ಪುಸ್ತಕವನ್ನು ತುಂಬಾ ಪ್ರೀತಿಸುತ್ತಿದ್ದ ಎಂದಳು. ಇಲ್ಲಿ ಅತಿಯಾದ ವೈಯಕ್ತಿಕತೆಯಿಂದ ವ್ಯಕ್ತಿ ಬಳಲುವುದನ್ನು ಕಾಣಬಹುದು. ಅವನಲ್ಲಿರುವ ಸೀಮಿತ ವೈಚಾರಿಕತೆಯು ಅವನ ಸ್ವತಂತ್ರ ಆಲೋಚನೆಯನ್ನು ಕಟ್ಟಿಹಾಕಿದೆ ಎನಿಸುತ್ತದೆ. ಅವನಿಗಿರುವ ಆಸೆ ಆಕಾಂಕ್ಷೆಗಳ ನೆಲೆಯಿಂದಲೇ ಎಲ್ಲವನ್ನು ಚಿಂತಿಸುವುದರಿಂದ ಸಂದಿಗ್ಧವನ್ನು ಎದುರಿಸುತ್ತಾನೆ.

'ಪಂಜರದ ಗಿಣಿ' ಕತೆಯಲ್ಲಿ ರಾಮು ಕಾಮಾಕ್ಷಿಯನ್ನು ಪ್ರೀತಿಸುತ್ತಾನೆ. ಬದುಕು ಕ್ಷಣಿಕ ಸಾವು ನಿಶ್ಚಿತ ಎಂದು ತಿಳಿದ ಘಳಿಗೆಯಿಂದಲೇ ಗೊಂದಲಕ್ಕೊಳಗಾಗುತ್ತಾನೆ. ಪ್ರೀತಿಯನ್ನು ಮುಂದುವರಿಸಬೇಕೋ ಅಥವಾ

ತೊರೆಯಬೇಕೋ ಎಂದು ಚಿಂತಿಸುತ್ತಾನೆ. ಕಾಮಾಕ್ಷಿಯ ಜೊತೆಗಿದ್ದಾಗಿನ ಹಳೆಯ ದಿನಗಳನ್ನು ನೆನೆಸಿಕೊಳ್ಳುತ್ತಾನೆ. ಪರ್ವತವೇ ಕಾಮಾಕ್ಷಿ ಕರೆದಳು ಎನ್ನುತ್ತಿತ್ತು. ಬೆಳಂದಿಗಳು ಕಾಮಾಕ್ಷಿ ಎಲ್ಲಿ ಎಂದು ನಗುತ್ತಿತ್ತು. ಕಾಮಾಕ್ಷಿ ಮುಖ ಸಾಲದೆ ನಾನೇಕೆ ಎನ್ನುತ್ತಿದ್ದ. ಅರಳಿದ ಹೂ ಗೊಂಚಲು ಕಾಮಾಕ್ಷಿಯ ಮುಡಿ ಬರಿದಾಗಿದೆ ಎನ್ನುತ್ತಿತ್ತು. ಗಗನವೇ ಗುಡುಗಿ ಕಾಮಾಕ್ಷಿಯನ್ನೇಕೆ ಬಿಟ್ಟಿರುವೆ ಎನ್ನುತ್ತಿತ್ತು.

ಇಂದು ಚೆಲುವಿನ ಪುತ್ಥಳಿಯಾದ ಕಾಮಾಕ್ಷಿಯ ಮುದ್ದು ಕೆನ್ನೆಯನ್ನು, ಬೆಳಕು ತುಂಬಿದ ಕಣ್ಣನ್ನು ಅಮೃತಮಯ ತುಟಿಯನ್ನು ನಾಳೆ ಕ್ರಿಮಿಕೀಟಗಳು ಉಣ್ಣುತ್ತವೆ. ಸಾವಿನ ಕೋರೆದಾಡೆಯ ಮೇಲೆ ಕುಣಿದು ಮೆರೆಯುವ ಸೌಂದರ್ಯಕ್ಕೆ ವಯಸ್ಸಾಗುತ್ತಿದೆ. ಅಶಾಶ್ವತವಾದ ಬದುಕಿನ ನಾಟಕದಲ್ಲಿ ಈ ಆಸೆ, ಈ ಪ್ರೇಮ, ಈ ಹಂಬಲ ಕ್ಷಣಿಕವಾಗುತ್ತದೆ. ತರುಣರು ಕ್ಷಯ ಪೀಡಿತರಾಗಿ, ಮುದುಕರು ಜರಾಶೀರ್ಣರಾಗಿ, ದುಃಖಿಗಳು ತಾವೇ ಮೈಮೇಲೆ ಮಣ್ಣೆಳೆದು ಮರಣ ಮುಖವಾಗಿರುವ ಈ ಜಗತ್ತಿನಲ್ಲಿ ಶಾಂತಿ, ಸುಖ ಹಾಗೂ ತೃಪ್ತಿ ಇಲ್ಲದಂತಾಗುತ್ತದೆ.

ದೇವರ ನೀಲಿ ಅಂಗಳದಲ್ಲಿ ಕೋಟಿ ದೀಪ ಮಿನುಗುತಿತ್ತು. ತನ್ನ ಪ್ರೇಮದ ಸಮಾಗಮಕ್ಕೆ ತಾರೆಗಳು ಕಣ್ಣರಳಿಸಿ ಕಾದುನಿಂತಿದೆ ಎನಿಸುತಿತ್ತು. ಈಗ ವಾಮನಂತಿದ್ದ ಪ್ರಕೃತಿ ತ್ರಿವಿಕ್ರಮ ರೂಪ ತಾಳಿ ತುಳಿಯುತ್ತಿದೆ. ಎಂಥ ಕ್ರೂರ ಲೀಲೆ ಈ ಮಾಂಸದ ಪಂಜರವನ್ನಿತ್ತ ದೇವರೇ ಏಕೆ ತನ್ನ ರುದ್ರ ಸೌಂದರ್ಯದ ಈಟಿ ಎಸೆದು ತಾನಿತ್ತ ಪಂಜರವನ್ನೇ ತಿವಿಯುತ್ತಾನೆ. ಪಾಪ ನಂಬಿದ್ದ ಕಾಮಾಕ್ಷಿಗೆ ನೋವಾಗಿರಬಹುದೆಂದು ಅನುಕಂಪಪಡುತ್ತಾನೆ.

ಪ್ರೀತಿಗೆ ಓಗೊಟ್ಟು ಸೃಷ್ಟಿಯ ಮಾಯಾ ಲೀಲೆಗೆ ಬಲಿಯಾಗಿ ಕತ್ತಲಿನ ಮಡುವಿಗೆ ಧುಮುಕಬೇಕೆನ್ನಿಸಿತು. ಇಷ್ಟು ಸಂಕಟ, ದುಃಖ ತುಂಬಿದ ಈ ಪ್ರಪಂಚಕ್ಕೆ ಮತ್ತೊಂದು ಜೀವಿಯನ್ನು ಪಾಲುದಾರಿಕೆಗೆ ತರಲು ಸೃಷ್ಟಿಸಿ ಸಾವಿನ ದವಡೆಗೆ ಮತ್ತೊಂದು ತುತ್ತೀಯಲು ಆ ನಿಷ್ಕರುಣ ಶಕ್ತಿಯ ಲೀಲೆಗೆ ಸಾಧನವಾಗಬೇಕೆಂದು ಯೋಚಿಸುತ್ತಾನೆ. ಏನೂ ಅರಿಯದ ಮುಗ್ಧೆ ಕಾಮಾಕ್ಷಿಯ ದೇಹದಲ್ಲಿ ಕ್ಷಣಿಕ ಸೌಂದರ್ಯವಾಗಿ ನೆಲೆಸಿ ಕರೆಯುವ ಆ ಕ್ರೂರ ಶಕ್ತಿಯ ಕುರುಡು ಪಾಶಕ್ಕೆ ಅವನು ಇಡಿಯ ಬದುಕನ್ನೇ ಒಡ್ಡಬೇಕಾದಾಗ ಬಲಿಯಾಗಲು ಒಪ್ಪುವುದಿಲ್ಲ. ತನ್ನ ಮನಸ್ಸನ್ನು ಸ್ವತಂತ್ರವಾಗಿ ಹರಿಯಲು ಬಿಟ್ಟು ಪ್ರೀತಿ ಮಾಡುವ ವ್ಯಕ್ತಿಯು ಬದುಕಿನ ಕ್ಷಣಿಕತೆಯ ಬಗೆಗೆ ಚಿಂತಿಸಿದಾಗಿನಿಂದ ತನ್ನ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕುತ್ತಾನೆ. ಹೊಸ ಅರಿವಿನಲ್ಲಿ ಅವನ ಮನಸ್ಸು ತಾತ್ವಿಕತೆಯ ಕಡೆಗೆ ಹರಿಯುತ್ತದೆ. ಆಗ ಅವನು ವೈಚಾರಿಕವಾಗಿ ಚಿಂತಿಸದೇ ನಿರಾಶಾವಾದವನ್ನು ಪ್ರತಿಪಾದಿಸುತ್ತಾನೆ.

'ಕವಿಯ ಪೂರ್ಣಿಮೆ' ಕತೆಯಲ್ಲಿ ಬದುಕು ಹಾಗೂ ಸಾವಿನ ನಡುವೆ ಆನಂದನ ಮನಸ್ಸಿನಲ್ಲಿ ಉಂಟಾಗುವ ಸಂಘರ್ಷವನ್ನು ಕಾಣಬಹುದು. ಆರಾಧನೆಯಲ್ಲಿ ತೊಡಗಿದ್ದ ಆನಂದನ ಜೀವನದಲ್ಲಿ ಇದ್ದಕ್ಕಿದ್ದಂತೆ ಕ್ಷಯ ರೋಗ ಕಾಣಿಸಿಕೊಳ್ಳುತ್ತದೆ. ಅಂದಿನಿಂದ ಅವನ ಯೋಜನೆಗಳು, ಆಲೋಚನೆಗಳು ತಲೆಕೆಳಗಾಗುತ್ತವೆ. ಹೊಸ ಜೀವವನ್ನು ಗರ್ಭದಲ್ಲಿ ನೇಯುತ್ತಿದ್ದ ತುಂಬು ಗರ್ಭಿಣಿಯಾದ ಅತ್ತಿಗೆಗೆ ಮೈದುನನ ಸಾವು ಸನಿಹದಲ್ಲಿದೆ ಎಂದು ನೆನೆದು ದುಃಖವಾಗುತ್ತದೆ. ಈ ಇಪ್ಪತ್ತೈದು ವರ್ಷದ ತುಂಬು ಜೀವವೂ ಸಾವಿಗೆ ತುತ್ತಾಯಿತೆಂದು ಆತಂಕಪಡುತ್ತಾಳೆ.

[illegible]

[illegible]

[illegible]

[illegible]

[illegible]

ಆನಂದನ ಎದೆ ನೋವಿನಿಂದ ತಳಮಳಗೊಂಡಿತು. ವಿಶ್ವನಾಥ ಆನಂದನ ಮಗ್ಗುಲಲ್ಲಿ ಬಂದು ಕೂಡುತ್ತಾನೆ. ಗೆಳೆಯನ ಬೇಸರವನ್ನು ದೂರ ಮಾಡಲು ಏನಾದರೂ ಓದಿ ಹೇಳುವುದು ಅವನ ಪದ್ಧತಿ. ಸುಶೀಲಳು ನನ್ನ ಸಾವನ್ನು ಕೇಳಿ ದುಃಖಿಸುವುದು ಬೇಡ, ಎಲ್ಲವನ್ನೂ ಮರೆಯಲಿ ನಾನು ಬರೆದ ಕಾಗದಗಳನ್ನೆಲ್ಲ ಸುಟ್ಟು ಬೂದಿ ಮಾಡಿರಿ ಎನ್ನುತ್ತಾನೆ. ಅವಳಿಗೆ ತಕ್ಕನಾದವನನ್ನು ನೋಡಿ ಮದುವೆಯಾಗಲಿ. ಇದೇ ನನ್ನ ಕೊನೆಯ ಆಸೆ ನಂತರ ತಿಳಿಸು ಎಂದು ಗೆಳೆಯ ವಿಶ್ವನಿಗೆ ತಿಳಿಸುತ್ತಾನೆ. ಸುಶೀಲಳಿಗೆ ಏನೂ ಹೇಳದೆ ಅವಳಿಂದ ದೂರಾಗುತ್ತಾನೆ. ಗೆಳೆಯರ ನಡುವೆ ಕವನ ಓದಿದಾಗ ಮಹಾಕವಿ ಎಂದಿದ್ದನ್ನು ಆನಂದನು ನೆನೆಯುತ್ತಾನೆ. ಸುಶೀಲಳ ಜೊತೆಗಿದ್ದಾಗಿನ ಮಧುರ ಕ್ಷಣಗಳು, ಅವಳೊಂದಿಗೆ ಮದುವೆ ಗೊತ್ತಾದದ್ದು, ತಾನು ಜನವಾಣಿಯಾಗಬೇಕು ಎಂದುಕೊಂಡ ಹಂಬಲವು ಮಣ್ಣುಪಾಲಾಯಿತೆನ್ನುತ್ತಾನೆ. ಗಗನದ ನೀಲಿಯಲ್ಲಿ ಮುಗಿಲ ಸಂಕೇತಗಳಲ್ಲಿ ದೇವರು ಬರೆದ ಪ್ರಕೃತಿಯ ಅಮರ ಕಾವ್ಯವನ್ನು ಗುರುತಿಸುವ ತನಕವೂ ಬದುಕು ಉಳಿಯಲಿಲ್ಲವೆಂದು ಬೇಸರಪಡುತ್ತಾನೆ.

ಸಾವನ್ನು ಜೀವನದ ಒಂದು ಭಾಗವಾಗಿ ಸ್ವೀಕರಿಸಿ ಧೈರ್ಯವಾಗಿ ಅದನ್ನೆದುರಿಸುತ್ತಾನೆ. ದುಃಖಿಸುವ ಕಾರಣವಿಲ್ಲ ಈ ಮರಣದಿಂದ ಬಹುಶಃ ನನ್ನ ಕೊನೆಯಾಗಲಾರದು. ಹುಟ್ಟಿದವರಿಗೆಲ್ಲಾ ಸಾವು ಖಂಡಿತ ಆದರೆ ಆನಂದ ಬದುಕುತ್ತಾನೆ. ನಾಡಿನ ಕವಿಗಳ ನಡುವೆ ಬರುವ ಕಾಲಕ್ಕೆ ನನ್ನ ಹೆಸರೂ ಸೇರೀತು, ಆದರೆ ವಿಧಿ ಮಾತ್ರ ನನ್ನ ಹೆಸರನ್ನು ನೀರಿನ ಮೇಲೆ ಬರೆಯಿತೆನ್ನುತ್ತಾನೆ.

ಆನಂದನ ಕೊನೆಯ ದಿನ ಅತ್ತಿಗೆಗೆ ಹೆರಿಗೆಯ ಮಧುರ ಯಾತನೆಯ ದಿನ. ಕುಲವರ್ಧಕ ಈ ಮನೆಗೆ ಇಂದು ಬರುತ್ತಿದ್ದಾನೆ. ಅಣ್ಣ ಎಲ್ಲಿಲ್ಲದ ಗಡಿಬಿಡಿಯಿಂದ ತಿರುಗುತ್ತಿದ್ದಾನೆ. ಹೊಸ ಬದುಕಿನ ಸ್ವಗತಕ್ಕೆ ಏನೇನೋ ಸನ್ನಾಹಗಳು ನಡೆಯಬೇಕು. ಇದರ ಜೊತೆ ಆನಂದ ಬರಲಿರುವ ಸಾವಿಗೂ ಸನ್ನಾಹ ಮಾಡಿಕೊಳ್ಳಬೇಕು. ಹೀಗೆ ಘಳಿಗೆಗಳು ಸಾವು ಬದುಕಿನ ನಡುವೆ ಜೋಕಾಲಿಯಾಡುತ್ತಾ ಕಳೆಯುತ್ತಿದ್ದವು. ವಿಪರೀತ ನೋವು, ಸಾವು ಸಮೀಪಿಸಿ ಆನಂದ ನರಳುತಿದ್ದರೆ ಅತ್ತಿಗೆ ಹೊಸಹುಟ್ಟಿಗಾಗಿ ನೋವನ್ನು ಅನುಭವಿಸುತ್ತಿದ್ದಳು.

ಜನ್ಮವಿತ್ತ ತಾಯಿ–ತಂದೆ ಪ್ರೇಮದ ಅಮೃತವಿತ್ತ ಸುಶೀಲೆ, ಎಷ್ಟೋ ರಸ ನಿಮಿಷಗಳಿಗೆ ಕಾರಣವಾದ ಗೆಳೆಯರು, ಬಾಳಿಗೊಂದು ಹಿರಿಯ ಆದರ್ಶವಿತ್ತ ಕವಿಗಳು, ಅಣ್ಣ, ಅತ್ತಿಗೆ ಎಷ್ಟು ಜನ ತನ್ನ ಬಾಳಿಗಾದವರು, ಅವರೆಲ್ಲರ ಋಣ ಹೇಗೆ ತೀರಿಸುವುದೆನ್ನುತ್ತಾನೆ. ಪುನರ್ಜನ್ಮದ ಕಲ್ಪನೆ ದುಃಖಿಸಬೇಡಿ ಇದು ಕೊನೆಯಲ್ಲ ಇನ್ನು ಮೇಲೆ ನಿಜವಾದ ಆರಂಭ. ವಿಶ್ವದ ಚೆಲುವಿಗೆ ಪೌರೋಹಿತ್ಯ ನಡೆಸಿದ್ದ ಕವಿಯ ಪಂಚೇಂದ್ರಿಯಗಳೂ ಚೇತನವನ್ನು ಕಳೆದುಕೊಂಡು ದೀರ್ಘ ನಿಟ್ಟುಸಿರೊಂಡು ತಪ್ಪಿಸಿಕೊಂಡಿತು. ಇತ್ತ ಒಳಗಿನಿಂದ ಮಗು ಅಳುವ ಧ್ವನಿ ಕೇಳಿಸಿತು.

ಅತ್ತಿಗೆ ನಂಬಿದಂತೆ ಆನಂದ ಮತ್ತೆ ಹುಟ್ಟುತ್ತಾನೆ ಈ ಸಂಸಾರದಲ್ಲೇ ಬೆಳೆಯುತ್ತಾನೆ. ಎಲ್ಲ ನಾಟಕವೂ ಮೊದಲಿನಿಂದ ಪ್ರಾರಂಭವಾಗುತ್ತದೆ ತೊದಲ್ನುಡಿ ಅಂಬೆ ಗಾಲು ಪ್ರೇಮ, ಮಮತೆ ಸುಖಮಯವಾದ ಯೋಚನೆ ಸಾವಿನ ಸಾನಿಧ್ಯದಲ್ಲಿದೆ. ಪುನರ್ಜನ್ಮದ ಕಲ್ಪನೆಯನ್ನು ಇಲ್ಲಿ ಕಾಣಬಹುದು. ಸಾವನ್ನು ಕಂಡು ಹೆದರುವ ಮತ್ತು ಅದನ್ನು ಎದುರಿಸುವ ಸಂದರ್ಭವನ್ನು ನೆನೆದು ದುಃಖಿಸುತ್ತಿದ್ದ ಆನಂದನು ಕೊನೆಗೆ ಅದನ್ನು ಧೈರ್ಯವಾಗಿ

[illegible]

[illegible]

[illegible]

[illegible]

[illegible]

ಎದುರಿಸಲು ಸಿದ್ಧನಾಗುತ್ತಾನೆ. ಹುಟ್ಟಿದ ಮನುಷ್ಯ ಸಾಯಲೇಬೇಕಾದ ಅನಿವಾರ್ಯತೆಯನ್ನು ವೈಚಾರಿಕವಾಗಿ ಒಪ್ಪಿಕೊಳ್ಳುವುದರಿಂದ ಸಾವನ್ನು ನಿರಾತಂಕವಾಗಿ ಎದುರಿಸಲು ಸಿದ್ಧನಾಗುತ್ತಾನೆ.

'ಆಕಾಶ ಮತ್ತು ಬೆಕ್ಕು' ಕತೆಯಲ್ಲಿ ಜಯತೀರ್ಥ ಆಚಾರ್ಯನಿಗೆ ಸಾವು ಸಮೀಪಿಸಿತೆಂದು ಭಾವಿಸುತ್ತಾನೆ. ಕೊನೆಯ ಘಳಿಗೆಯಲ್ಲಿ ಬೇಕಾದವರನ್ನೆಲ್ಲಾ ಪತ್ರ ಹಾಕಿ ಕರೆಸಿಕೊಳ್ಳುತ್ತಾನೆ. ಗೆಳೆಯ ಗೋವಿಂದ ನಾಯರ್, ಮಗ ಕೃಷ್ಣಮೂರ್ತಿ ಹಾಗೂ ಹಿಂದೆ ಅನೈತಿಕ ಸಂಬಂಧವಿಟ್ಟುಕೊಂಡಿದ್ದ ಗಂಗೂಬಾಯಿಯನ್ನೂ ಕರೆಸುತ್ತಾನೆ.

ಶ್ರೀಮಂತರ ಒತ್ತಾಸೆಯಾಗಿ ನಿಂತ ಆಚಾರ್ಯನ ಜೀವನ ವಿಚಿತ್ರ ತಿರುವು ಪಡೆಯುತ್ತದೆ. ದೇವಸ್ಥಾನದ ಪೂಜೆ ಮಾಡುವ ಆಚಾರ್ಯನಿಗೆ ಮದುವೆಯಾದ ಶ್ರೀಮಂತ ಅಲಕಾವತಿಯೊಂದಿಗೆ ಸಂಬಂಧ ಬೆಳೆಯುತ್ತದೆ. ಅವಳಿಗಾಗಿ ಹೊಸ ಕೆಲಸವನ್ನು ಹುಡುಕಿಕೊಂಡು ಹೋಗುತ್ತಾನೆ. ಮರಳಿ ಬರುವಷ್ಟರಲ್ಲಿ ಅವಳು ಗಂಡನನ್ನು ಕರೆಸಿಕೊಂಡಿದ್ದು ತಿಳಿಯುತ್ತದೆ. ಊರು ಬಿಡಲು ನಿರ್ಧರಿಸಿದ ಆಚಾರ್ಯನಿಗೆ ತನ್ನ ಉಪಾಯವನ್ನು ತಿಳಿಸಿದ ಅಲಕಾವತಿ ಲೆಕ್ಕ ಪತ್ರ ನೋಡಿಕೊಳ್ಳಲು ಆಚಾರ್ಯನನ್ನು ನೇಮಿಸುತ್ತಾಳೆ. ಗರ್ಭವತಿಯಾದ ಅಲಕಾವತಿ ಹೆರಿಗೆಯಲ್ಲಿ ಸಾಯುತ್ತಾಳೆ.

ಕಾನೂನು ತಿಳಿದಿದ್ದ ಆಚಾರ್ಯ ಶಿವಮೊಗ್ಗಕ್ಕೆ ಬಂದು ಭೂಮಾಲಿಕ ಸಂಘಕ್ಕೆ ಕಾರ್ಯದರ್ಶಿಯಾಗುತ್ತಾನೆ. ಗಂಡನನ್ನು ಬಿಟ್ಟು ಬಂದ ಗಂಗೂಬಾಯಿಗೆ ವಿಚ್ಛೇದನ ಪಡೆಯುವ ಉಪಾಯವನ್ನು ಹೇಳಿಕೊಟ್ಟ ಆಚಾರ್ಯ ಅವಳೊಂದಿಗೆ ಸಂಬಂಧ ಬೆಳೆಸಿದ್ದನು. ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ನಾಯರ್ ಸಾಯುತ್ತಿರುವ ಅಪ್ಪನ ಮುಂದೆ ಕುಳಿತು ಇಡೀ ದೇಶದ ಬಗ್ಗೆ ಮಾತಾಡಿದ್ದನು. ೬೦ ವರ್ಷ ವಯಸ್ಸಿನ ನಾಯರ್ ೪೦ ವರ್ಷದ ರಾಜಕೀಯದ ದೊಡ್ಡ ಘಟಂಗ ಕೇರಳದ ವಾಲಿಯರ್‌ನನ್ನು ಕೊಲ್ಲುವ ಅವನ ಉದ್ದೇಶ ಗಂಭೀರವೆನಿಸಿತು. ಅದೊಂದು ನಾಟಕವೆನಿಸಿತು ಅಪ್ಪ ಸತ್ತ ದಿನವೇ ಹೊರಟು ನಿಂತ ನಾಯರ್ ಇನ್ನೇನು ಉಳಿದಿದೆ ಹೂತರೆ ಒಳ್ಳೆ ಗೊಬ್ಬರ ಆದರೆ ನೀವು ಬ್ರಾಹ್ಮಣರು ಸುಡುತ್ತೀರಿ. ಗೆಳೆಯ ಕರೆದನೆಂದು ನನ್ನ ಕೆಲಸವನ್ನೆಲ್ಲ ಬಿಟ್ಟುಬಂದೆ. ಆದರೆ ಇನ್ನು ಸಮಯ ಹಾಳು ಮಾಡಲಾರೆ. ನನ್ನ ದಾರಿ ಖರ್ಚನ್ನು ನೀನೇ ಕೊಡು ಎನ್ನುತ್ತಾನೆ. ನಿನ್ನ ಅಪ್ಪ ಮೂರ್ಖನಂತೆ ಬದುಕಿ ಸತ್ತ. ನೀನೂ ಅವನ ದಾರಿ ಹಿಡಿಯುವೆ ಎನ್ನುತ್ತಾನೆ. ನಿರ್ದಯವಾಗಿ ಮಾತನಾಡಿದ್ದು ಕೃಷ್ಣಮೂರ್ತಿಯನ್ನು ಅಲುಗಿಸಿತ್ತು. ಕೃಷ್ಣಮೂರ್ತಿಯ ಹೆಂಡತಿ ಮೀರಾ ನಾಯರನ ನಿಷ್ಠುರ ನಡವಳಿಕೆಯನ್ನು ಕಂಡು ಅಸಭ್ಯ, ಸಾಯುವ ಮನುಷ್ಯನ ಪಕ್ಕದಲ್ಲಿ ಬೀದಿ ಭಾಷಣ ಮಾಡಿದ ಎಂದು ಗೊಣಗಿದ್ದಳು.

ಅಪ್ಪ ಯಾಕೆ ಇಂಥ ನಾಯರ್‌ನನ್ನು ೪೦ ವರ್ಷಗಳ ನಂತರ ನೋಡಲು ಬಯಸಿದನೆಂದು ಕೃಷ್ಣಮೂರ್ತಿ ಯೋಚಿಸುತ್ತಾನೆ. ಗಂಗೂಬಾಯಿ ಬಂದಾಗ ಊರಲೆಲ್ಲಾ ಮಹಾಮರ್ಯಾದಸ್ಥನಂತೆ ಬದುಕಿದ ಅಪ್ಪ ಅನೈತಿಕ ಸಂಬಂಧವಿರಿಸಿಕೊಂಡ ವಿಷಯದ ಬಗ್ಗೆ ಕೃಷ್ಣಮೂರ್ತಿಗೆ ಆಶ್ಚರ್ಯವಾಗಿತ್ತು. ವಿಷ್ಣುಮೂರ್ತಿ ಬಂದಾಗ ಅಪ್ಪ ತೋರಿಸಿದ ತಿರಸ್ಕಾರವೂ ಅವನ ಕೊನೆ ಗಾಲದ ಮನಸ್ಥಿತಿಯನ್ನು ತಿಳಿಯಲು ಅಗತ್ಯವೆನಿಸಿತ್ತು. ವಿಷ್ಣುಮೂರ್ತಿಗೆ ಹೆಜ್ಜೆ ಹೆಜ್ಜೆಗೂ ದಾರಿ ತೋರಿಸಿದ ಆಚಾರ್ಯನಿಗೆ ವರ್ಷಕ್ಕೊಮ್ಮೆ ಅಕ್ಕಿ ಸರಬರಾಜು ಮಾಡುತ್ತಿದ್ದು, ಅವನನ್ನು ನಿರಪರಾಧಿಯೆಂದು ರಕ್ಷಿಸಿದ ಮೇಲೆ ನರಕಾಂತ ಇದೆ, ವಿಷ್ಣು ಸತ್ತಮೇಲೆ ಅದರಲ್ಲಿ ನರಳ್ತಾನೆ. ಮಹಾಕ್ರೂರ ಮನುಷ್ಯ ಎಂದಿದ್ದರು.

[illegible]

ಸಾವು ಧಿಗ್ಗೆಂದು ಎದುರಾದಾಗ ಇಂಥ ಸಮಾಧಾನಗಳನ್ನು ನಾವು ಕೈಬಿಡಬಹುದೆ ಎಂದು ಕೃಷ್ಣಮೂರ್ತಿ ಅನುಮಾನಿಸಿದನು. ಸಾಯುತ್ತಿದ್ದ ಅಪ್ಪ ವಿಷ್ಣುಮೂರ್ತಿಯ ಜೊತೆ ನಡೆದುಕೊಂಡದ್ದನ್ನು ನೆನಪಿಸಿಕೊಂಡನು. ಹಣವಂತರಿಗಾಗಿ ನಡೆಸಿದ ಚಾಕರಿ ಜೀವನ ನನಗೆ ಸಾಕಾಗಿದೆ ಎನ್ನುತ್ತಾನೆ. ಇಂಥವನ್ನೆಲ್ಲ ಮಾಡಿದ ನಿನ್ನಪ್ಪ ಮೂರ್ಖ ಎಂದು ನಾಯರ್ ಅಪ್ಪನನ್ನು ಬೈದಿದ್ದಕ್ಕೆ ಕೃಷ್ಣಮೂರ್ತಿಗೆ ಅಪ್ಪನನ್ನು ಈ ವಿಷಯಕ್ಕೆ ಮೂರ್ಖನೆನ್ನುವುದು ಸಾಧ್ಯವಿಲ್ಲ. ಧನವಂತರ ಸಂಪರ್ಕದಿಂದ ಅಪ್ಪನೂ ರೋಸಿದ್ದನು ಎನ್ನುತ್ತಾನೆ. ಆದರೂ ತುಂಬು ಜೀವನ ನಡೆಸಿ ಸತ್ತ ಅವರಿಗೆ ನಾಯರ್‌ನನ್ನು ಹೋಲಿಸಿದರೆ ಅವನೊಬ್ಬ ತೀರ ಸರಳ ಮನಸ್ಸಿನ ನಾಟಕೀಯ ವ್ಯಕ್ತಿಯೆನಿಸುತ್ತಾನೆ.

ಬಂಡವಾಳ ಶಾಹೀ ವ್ಯವಸ್ಥೆಯಲ್ಲಿ ಕೊಬ್ಬಿದ ಆನೆಗಳನ್ನು ಕೊಲ್ಲಬೇಕೆಂಬುದು ನನ್ನ ಆಸೆಯೇ ಹೊರತು ಖಂಡಿತ ನಾಟಕವಲ್ಲ. ನಿನ್ನ ತಂದೆಯ ಜೀವನದಂತೆ ನಿನ್ನದೂ ವ್ಯರ್ಥವಾಗಬಾರದು. ಸಾಯುವಾಗ ಬರುವ ಅರಿವಿಗೆ ನಾನು ಮಹತ್ವ ಕೊಡುವುದಿಲ್ಲ. ಬದುಕಿರುವಾಗಿನ ಪ್ರತಿಕ್ಷಣದ ಪರಿಣಾಮ ಸಮುದಾಯದ ಮೇಲೆ ಏನಾಗುತ್ತದೆಂಬುದು ನನಗೆ ಮುಖ್ಯ. ಕ್ರಾಂತಿಗೆ ಜಯವಾಗಲಿ ಎಂದು ಬರೆಯುತ್ತಾನೆ.

ಹಳ್ಳಿಯ ಸಾಹುಕಾರರ ದಯೆಯ ಮೇಲೆ ಬದುಕಿದ್ದ ಅಪ್ಪನಿಗೆ ಸ್ವತಃ ದುಡ್ಡಿನ ಮೇಲೆ ಆಸೆಯಿರಲಿಲ್ಲ. ಆದರೆ ಉಳಿದವರ ಆಸ್ತಿಯನ್ನು ಉಳಿಸುವುದೊಂದು ಜೀವನ ತನಗೊಡ್ಡಿದ ಸವಾಲೆಂಬಂತೆ ಅಪ್ಪ ತಿಳಿದದ್ದು ನಾಯರ್ ಹೇಳಿದಂತೆ ಅಪ್ಪ ಮೂರ್ಖನೇ ಇರಬೇಕೆಂದು ಕೃಷ್ಣಮೂರ್ತಿಗೆ ಅನಿಸುತ್ತದೆ. ನಾಯರ್ ಅಪ್ಪನ ಒಟ್ಟು ಜೀವನದ ಬಗ್ಗೆ ಹೇಳಿದ್ದು ಮತ್ತೆ ನೆನಪಾಗಿ ಕೃಷ್ಣಮೂರ್ತಿ ಅಪ್ಪ ಮೂರ್ಖನಂತೆ ಸಾಯಲಿಲ್ಲ. ಹಚ್ಚಿಕೊಂಡ ವ್ಯವಹಾರಗಳನ್ನೆಲ್ಲ ಕೈಬಿಟ್ಟು ದೆಹಲಿಗೆ ತನ್ನ ಜೊತೆ ಬರುವ ನಿರ್ಧಾರ ಮಾಡಿದ್ದರು ಎಂದುಕೊಳ್ಳುತ್ತಾನೆ. ಅಪ್ಪ ಸಾಯೋಕೆ ಮುಂಚೆ ಶ್ರೀಮಂತ ಜಮೀನ್ದಾರರ ಚಾಕರಿಗೆ ಬೇಸತ್ತಿದ್ದರಿಂದ ಶ್ರೀಮಂತರನ್ನೆಲ್ಲ ಕೊಲ್ಲಬೇಕೆಂದಿದ್ದ ನಾಯರ್‌ನನ್ನು ಕರೆಸಿಕೊಂಡರು. ಮಡಿವ್ಮೈಲಿಗೆ ಅಂದ್ರೆ ಅಪ್ಪನಿಗೆ ನಂಬಿಕೆ ಇರಲಿಲ್ಲ ಇಲ್ಲದಿದ್ರೆ ಗಂಗೂಬಾಯಿ ಜೊತೆ ಎಂದುಕೊಂಡ ಶ್ರೀಮಂತರ ಚಾಕರಿ ಮಾಡಿದರೂ ದುಡ್ಡು ತಗೊಳ್ತಿರ್ಲಿಲ್ಲ ತುಂಬ ಮಾನವಂತ ಆದ್ದರಿಂದಲೇ ಸಾಲವಾದದ್ದು ನನ್ನನ್ನು ಓದಿಸಲು ತ್ಯಾಗ ಮಾಡಿದರು. ಅವರೊಬ್ಬ ದೊಡ್ಡ ಅಸ್ಟ್ರಾನಮರ್ ಆಗಬಹುದಿತ್ತು ಸುಪ್ರೀಂಕೋರ್ಟ್‌ನ ವಕೀಲರಾಗಬಹುದಿತ್ತು.

"ಸಾವಿನಿಂದ ಪ್ರಾರಂಭವಾಗುವ ಈ ಕತೆ ಹುಟ್ಟುವ ಒಂದು ಘಟನೆಯಲ್ಲಿ ಮುಕ್ತಾಯಗೊಳ್ಳುತ್ತದೆ. ಮನುಷ್ಯನ ಬದುಕು ಸಾರ್ಥಕವಾಗುವುದು ಅವನ ಅರಿವಿನ ಕ್ಷಣಗಳಲ್ಲಿ ಎಂದು ಈ ಕತೆಯು ಸೂಚಿಸುತ್ತದೆ. ಅನಂತಮೂರ್ತಿಯವರು ಸಾರ್ಥಕ ಜೀವನವೆಂದರೆ ಯಾವುದು ? ಎನ್ನುವ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುತ್ತದೆ. ಈ ಕತೆಯಲ್ಲಿ ಹಲವಾರು ಪಾತ್ರಗಳಿದ್ದರೂ ಈ ಪ್ರಶ್ನೆಗೆ ಸಂಬಂಧಿಸಿದಂತೆ ಮುಖ್ಯರಾದವರು ಆಚಾರ್ಯರು ಹಾಗೂ ನಾಯರ್." [೩] ತಾರುಣ್ಯದಲ್ಲಿ ತನ್ನ ಸ್ವಾತಂತ್ರ್ಯವನ್ನು ದುರುಪಯೋಗ ಪಡಿಸಿಕೊಂಡ ಬಗೆಗೆ ಆಚಾರ್ಯನು ಸಾವಿನ ಘಳಿಗೆಯಲ್ಲಿ ಪಶ್ಚಾತ್ತಾಪ ಪಡುತ್ತಾನೆ. ಅವನ ತಪ್ಪಿನ ಅರಿವು ಅವನಿಗೆ ವೈಚಾರಿಕ ನೆಲೆಯಿಂದಲೇ ಮೂಡಿದ್ದೆನ್ನಬಹುದಾಗಿದೆ.

'ಅಪೂರ್ವ' ಕತೆಯಲ್ಲಿ ಬದುಕು ಹಾಗೂ ಸಾವಿನ ಕುರಿತಾದ ಸಂಘರ್ಷವನ್ನು ಕಾಣಬಹುದು. ತಮ್ಮ ವೈವಾಹಿಕ ಜೀವನದಲ್ಲಿನ ಕಹಿಯಿಂದ ಇಬ್ಬರು ಸಾವನ್ನೆದುರಿಸಲು ಸಿದ್ಧರಾಗುತ್ತಾರೆ. ಕೆರೆಗೆ ಹಾರಿ ಪ್ರಾಣ

ಕಳೆದುಕೊಳ್ಳಲೆಂದು ಬಂದ ಶೈಲಿಗೆ ದ್ವಂದ್ವವಿದೆ. ಸಾವನ್ನು ಕುರಿತು ಪೂರ್ವಾಗ್ರಹ ಪೀಡಿತಳಾಗುತ್ತಾಳೆ. ನೀರಲ್ಲಿ ಮುಳುಗಿ ಸತ್ತ ಹೆಣದ ಮುಖಬಾಡಿರುತ್ತೆ. ಚಿಕ್ಕವಳಿದ್ದಾಗ ಎಲ್ಲರಿಗೂ ಪ್ರಿಯವಾಗಿದ್ದ ಎಡಗೆನ್ನೆಯ ಮೇಲಿನ ಮಚ್ಚೆ ಬಾತ ಮುಖದಲ್ಲಿ ಕಾಣಿಸಲ್ಲ. ಕಪ್ಪು ಕೂದಲು ಹರಡಿ ಹೆಣ ತೇಲುತ್ತದೆಂದು ಭಾವಿಸುತ್ತಾಳೆ,

ಗಂಡ ಕೆನ್ನೆಯ ಮೇಲೆ ಹೊಡೆದದ್ದು ಅಷ್ಟು ದೊಡ್ಡ ವಿಷಯವಲ್ಲ ಆದರೆ ಸಾಯಿ ಎಂದು ವಿಚಿತ್ರವಾದ ಸ್ವರದಲ್ಲಿ ಕೂಗಿದ, ಕೊಲ್ಲುವ ಕ್ರೌರ್ಯದಲ್ಲಿ ನೋಡಿದ, ಒಂದು ಕಾಲದಲ್ಲಿ ಟೆನ್ನಿಸಿ ಚಾಂಪಿಯನ್ ಆಗಿ ತನಗೆ ಹಿಡಿಸಿದ್ದ ಅವನು ಹಾಸ್ಯಸ್ಪದವಾಗಿ ಕಾಣುತ್ತಾನೆ. ಊಟಿಯಲ್ಲಿ ಮಗ ಸ್ಕೂಲಲ್ಲಿ ಓದುತ್ತಿದ್ದಾನೆ ಹೇಗೋ ಬೆಳೆದು ದೊಡ್ಡವನಾಗ್ತಾನೆ. ನಾನು ಸತ್ತಮೇಲೆ ಎಲ್ಲವೂ ನಿಧಾನವಾಗಿ ಮರೆತು ಹೋಗುತ್ತದೆಂದುಕೊಳ್ಳುತ್ತಾಳೆ.

ಎಷ್ಟು ಕೂಡಿಸಿದರೂ ಇನ್ನೂ ಬೇಕಂತ ಹೆಂಡತಿ ಪರದಾಡ್ತಾಳೆ. ಅವಳಿಂದ ನಾನು ಆಸೆ ಬುರುಕನಾಗಿದ್ದೇನೆ. ನಾನೇ ನನ್ನ ಹೆಂಡ್ತಿನ ಕೊಂದು ಬಿಡಬಹುದಿತ್ತು. ಜಗಳ ಶುರುವಾಯ್ತು ಪ್ರಾಣ ಕಳ್ಕೊಳ್ತೀನಿ ಅಂದಳು. ಸಾಯಿ ಎಂದು ಕೂಗಿ ಒರಟಾಗಿ ನೂಕದೆ, ಒಳಗೆ ಹೋಗಿ ಬಾಗಿಲು ಹಾಕಿಕೊಂಡಳು. ನನಗೇನು ಅನ್ನಿಸ್ತಿಲ್ಲ ಎಂದು ವಿಸ್ಮಯವಾಯ್ತು. ಮಕ್ಕಳು ಬಂದರೆ ಸಂಕಟಪಡ್ತಾವೆ ಅಂತ ಬೇಸರವಾಯ್ತು. ಮಕ್ಕಳನ್ನು ಪ್ರೀತಿಸುವ ಅವಳಿಗೆ ಈ ಸಂಕಟ ಆಗ್ತಿಲ್ಲವಲ್ಲ ಎನಿಸಿತ್ತು. ಬಂದುಬಿಟ್ಟ ಇಂಥವನು ನಾನೇ ಎನಿಸಿತು ಈಗ ಅವಳು ಸತ್ತಿರಬಹುದು ಮಕ್ಕಳು ಅಳುತ್ತಿರಬಹುದು. ಪೋಲಿಸರು ವಿಚಾರಣೆಗೆ ಬಂದಿಸಬಹುದು ಇದೆಲ್ಲ ನಂನಗೆ ಅನಿಸ್ತಿದೆಯೇ ಎಂದುಕೊಳ್ಳುತ್ತಾನೆ.

ಮದುವೆಗೆ ಮುಂಚೆ ಅವಳು ನೆವ ಮಾಡಿಕೊಂಡ ನನ್ನ ಬೆನ್ನುಜ್ಜಿದ್ದು, ಪ್ರೀತಿ ಮಾಡ್ತಾ ಇದ್ದದ್ದು ಇವಳೇನ ಎಂದು ಅನುಮಾನಪಡುತ್ತಾನೆ. ನನ್ನಲ್ಲಿ ಎಷ್ಟೊಂದು ರೋಗ ಬೆಳೆದಿದೆ ನಿಮ್ಮನ್ನು ನೋಡೋವರೆಗೂ ಗೊತ್ತಿರಲಿಲ್ಲ. ನಿಮ್ಮ ಹೆಂಡ್ತಿ ಸತ್ತಿರಲಿಕ್ಕಿಲ್ಲ ಬರಲಾಗಿರಲ್ಲ ಹೌದು ವಾಪಸ್ಸು ಇಬ್ಬರಿಗೂ ಪರಿಚಯವಿದ್ದ ಹೆಂಗಸರು ತನ್ನನ್ನೇ ದೂರುತ್ತಾರೆ. ಅವಳಿಗೆ ಬೆರಗಾಯಿತು. ಪ್ರೀತಿಯಷ್ಟೇ ಈ ದ್ವೇಷವೂ ವಿಸ್ಮಯ ಹುಟ್ಟಿಸುವಷ್ಟು ಸ್ಫುಟವಾದ ಶುದ್ಧ ಭಾವನೆ ವಜ್ರದಂತೆ ಸುಮಾರು ಎರಡು ವರ್ಷಗಳಿಂದ ನನ್ನನ್ನು ದೂರವಿಟ್ಟಿದ್ದಾನೆ ಎನ್ನುತ್ತಾಳೆ. ಸಾಯುವುದು ಅಪ್ರಸ್ತುತ ಎನ್ನಿಸಿತು. ಈಗ ಅನ್ನಿಸಿದ್ದಲ್ಲ ನಿರಂತರ ಹಾಗೇ ಅನ್ನಿಸುತ್ತದೆ. ಬದುಕುವುದಾಗಲೀ ಸಾಯುವುದಾಗಲೀ ಎರಡೂ ಅಪ್ರಸ್ತುತವೆನಿಸುತ್ತದೆ. ತಾನಿರುವುದು ನಿಜವೇ ಇದು ತನ್ನ ಹೆಸರೇ, ಆಗುತ್ತಿರುವುದು ನಿಜವಾಗಿಯೂ ತನಗೋ ಇತ್ಯಾದಿ ಭ್ರಮೆಗಳು ಆಗಲೂ ಇದ್ದವು ಈಗಿನಂತೆ ಆಗಲೂ ಹಠಮಾರಿಯಾಗಿದ್ದೆ.

ದಂಪತಿಗಳಿಬ್ಬರೂ ತಮ್ಮ ವೈವಾಹಿಕ ಜೀವನದಲ್ಲಿ ಕಹಿ ಉಂಡವರು. ತನ್ನ ಗಂಡನ ಸಾಯಿ ಎಂಬ ನುಡಿ ಅವಳನ್ನು ಆತ್ಮಹತ್ಯೆಗೆ ಮನಸು ಮಾಡಲು ಕಾರಣವಾಗಿದೆ. ಅವನು ಹೆಂಡತಿಯನ್ನು ಸಾಯಿ ಎಂದು ಅವಳು ಸಾಯುವ ಪ್ರಯತ್ನ ಮಾಡುತ್ತಿರುವಾಗ ಓಡಿ ಬಂದಿರುತ್ತಾನೆ. "ತೀರ ಅಕಸ್ಮಾತಾಗಿ ನಡೆಯುವ ಇವರಿಬ್ಬರ ಮುಖಾಮುಖಿಯಿಂದಾಗಿ ಅವರಿಗೆ ಬದುಕನ್ನು ಎದುರಿಸುವ ಧೈರ್ಯವನ್ನು ತಂದುಕೊಡುತ್ತದೆ."[೪] ಇಬ್ಬರೂ ಹಳೆಯ ನೆನಪುಗಳನ್ನು ಹಂಚಿಕೊಂಡು ಪರಿಹಾರಸಿಕ್ಕವರಂತೆ ಸಾವನ್ನು ಧಿಕ್ಕರಿಸಿ ಮನೆಗೆ ಬರುತ್ತಾರೆ. ವ್ಯಕ್ತಿಗಳಲ್ಲಿನ ಭಿನ್ನಾಭಿಪ್ರಾಯವು ಇಲ್ಲಿ ಸಂಘರ್ಷವನ್ನು ಹುಟ್ಟುಹಾಕಿದೆ. ಕುಟುಂದಲ್ಲಿ ಸಂಭವಿಸುವ ಸಾಮಾನ್ಯ ಜಗಳವನ್ನು ವ್ಯಕ್ತಿ ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ಚಿಂತಿಸುವ ವ್ಯಕ್ತಿಗಳನ್ನು ಇಲ್ಲಿ ಕಾಣಬಹುದು. ತಮ್ಮ ಸ್ವಾತಂತ್ರ್ಯಕ್ಕೆ

ಧಕ್ಕೆಯಾದಾಗ ಸಾವೇ ಪರಿಹಾರವೆಂದು ಚಿಂತಿಸಿ ಆತ್ಮಹತ್ಯೆ ಮಾಡಿಕೊಳ್ಳಲು ಬಂದಿರುವ ಇಬ್ಬರು ಕತೆಯಲ್ಲಿದ್ದಾರೆ. ಇಬ್ಬರೂ ನಂತರದಲ್ಲಿ ವೈಚಾರಿಕತೆಯಿಂದ ಚಿಂತಿಸಿದಾಗ ಸಾವು ಸಮಸ್ಯೆಗಳಿಗೆ ಪರಿಹಾರವಲ್ಲ ಎಂಬ ನಿರ್ಧಾರಕ್ಕೆ ಬರುತ್ತಾರೆ.

'ಸಂಸ್ಕಾರ' ಕಾದಂಬರಿಯಲ್ಲಿ ದುರ್ವಾಸಪುರದ ಬ್ರಾಹ್ಮಣರಿಗೆ ನಾರಣಪ್ಪ ತಮ್ಮ ಧರ್ಮದವನೇ ಆದರೂ ಅದನ್ನು ಹೀಗಳೆದವನ ಸಂಸ್ಕಾರವನ್ನು ಮಾಡುವುದು ಸಮಸ್ಯೆಯಾಗಿ ಬಿಡುತ್ತದೆ. ಸನಾತನ ಧರ್ಮದ ಪ್ರಕಾರ ಶವವನ್ನು ತೆಗೆದುಕೊಂಡು ಹೋಗುವವರೆಗೂ ಅಗ್ರಹಾರದಲ್ಲಿ ದೇವರ ಪೂಜೆ, ಸ್ನಾನ, ಸಂಧ್ಯಾವಂದನೆ ಹಾಗೂ ಊಟೋಪಚಾರ ಏನು ನಡೆಯುವುದಿಲ್ಲ. ನಾರಣಪ್ಪ ಜಾತಿಭ್ರಷ್ಟನಾದರೂ ಅವನಿಗೆ ಜಾತಿ ಬಹಿಷ್ಕಾರ ಹಾಕಿರಲಿಲ್ಲವಾದ್ದರಿಂದ ಅವನ ಸಂಸ್ಕಾರವನ್ನು ಬ್ರಾಹ್ಮಣರನ್ನು ಬಿಟ್ಟು ಬೇರೆಯಾರೂ ಮಾಡುವಂತಿಲ್ಲ. ಬದುಕಿನಲ್ಲೂ, ಸಾವಿನಲ್ಲೂ ಕಾಡುವ ನಾರಣಪ್ಪನಿಂದ ಪ್ರಾಣೇಶಾಚಾರ್ಯ ದ್ವಂದ್ವಕ್ಕೊಳಗಾಗುತ್ತಾನೆ. "ಸಹಜವಾಗಿ ಸುಟ್ಟು ಬಿಸುಡಬಹುದಾಗಿದ್ದ ಶವದ ಸುತ್ತ ಶಾಸ್ತ್ರದ ಭೂತವನ್ನು ಸೃಷ್ಟಿಸಿ ಮೂರು ದಿನಗಳವರೆಗೆ ಊರಿನಲ್ಲಿ ಕೊಳೆಸಿ ಅದಕ್ಕೆ ಸಂಸ್ಕಾರ ಮಾಡಬೇಕೊ, ಬೇಡವೆಂಬ ಸಂದಿಗ್ಧದಲ್ಲಿ ತೊಡಗಿರುವ ದುರ್ವಾಸಪುರದ ಬ್ರಾಹ್ಮಣರ ಅವಿವೇಕದಿಂದಲೇ ಕಾದಂಬರಿ ಆರಂಭವಾಗುತ್ತದೆ."[೫] ಕಾದಂಬರಿಯಲ್ಲಿ ಎದುರಾಗುವ ಪ್ರಾರಂಭದ ಘಟನೆಯೆ ಸಾವಾಗಿದ್ದು ಅದು ಬ್ರಾಹ್ಮಣ್ಯವನ್ನು ಧಿಕ್ಕರಿಸಿದ್ದವನ ಸಾವು. ಪ್ಲೇಗಿನಿಂದಾಗಿ ಉರುಳುವ ಹೆಣಗಳು ಬಗೆಹರಿಯದ ಸಮಸ್ಯೆಯಿಂದಾಗಿ ಪ್ರಾಣೇಶಾಚಾರ್ಯನ ಹೊಸಹುಟ್ಟು ಇವೆಲ್ಲಾ ನಾರಣಪ್ಪನ ಸಾವಿನ ಹಿಂದೆಯೇ ನಡೆಯುತ್ತವೆ. ಜಾತಿ ಭ್ರಷ್ಟನೊಬ್ಬನ ಸಂಸ್ಕಾರವನ್ನು ಯಾರು ಮಾಡಿದರೆ ಸೂಕ್ತ ಎಂದು ಚಿಂತಿಸುತ್ತಿರುವಾಗಲೇ ಪ್ರಾಣೇಶಾಚಾರ್ಯ ಪರಿವರ್ತನೆ ಹೊಂದುತ್ತಾನೆ. ನಾರಣಪ್ಪನ ಸಾವು ಸಂದಿಗ್ಧವನ್ನು ಸೃಷ್ಟಿಸಿದೆ. ಅವನು ಬದುಕಿದ್ದಾಗ ಅಗ್ರಹಾರಕ್ಕೆ ಸವಾಲಾಗಿದ್ದಂತೆ ಸತ್ತಾಗಲೂ ಸವಾಲಾಗಿದ್ದಾನೆ.

ಅಗ್ರಹಾರದ ಇತರ ಬ್ರಾಹ್ಮಣರು ನೀತಿ ಬಾಹಿರ ಕೆಲಸಗಳಲ್ಲಿ ಪಾಲ್ಗೊಂಡರು ಅದನ್ನು ಬಹಿರಂಗಪಡಿಸುವುದಿಲ್ಲ. ನಾರಣಪ್ಪ ಎಲ್ಲವನ್ನು ಒಪ್ಪಿಕೊಂಡು ಬದುಕುತ್ತಾನೆ. ಅವನ ಶವ ಉರಿಬಿಸಿಲಿನಲ್ಲಿ ಕೊಳೆತಂತೆ ಬ್ರಾಹ್ಮಣ ಸಮಾಜದ ಅಡಿಗಟ್ಟೆ ಶಿಥಿಲಗೊಳ್ಳುತ್ತದೆ. ಸಂಸ್ಕಾರ ತಡವಾದುದರಿಂದ ನಾರಣಪ್ಪನು ಪ್ರೇತವಾಗಿ ಅನಂತರ ಬ್ರಹ್ಮ ರಾಕ್ಷಸನಾಗಿ ಮಾರ್ಪಟ್ಟಂತೆ ಅಗ್ರಹಾರದ ಬ್ರಾಹ್ಮಣರು ಭ್ರಮಿಸುತ್ತಾರೆ. ಅವನ ಸಂಸ್ಕಾರವಾಗುವ ತನಕ ಊಟ ಮಾಡುವಂತಿಲ್ಲವೆಂದು ಗರುಡಾಚಾರ್ಯನಿಗೆ ಬೇಸರವಾಗುತ್ತದೆ. ನಾರಣಪ್ಪನ ಸಾವನ್ನು ಕೇಳಿ ಮಕ್ಕಳು ಹೆಂಗಸರಾದಿಯಾಗಿ ಅಗ್ರಹಾರದ ಒಂದು ನರಪಿಳ್ಳೆಗೂ ವ್ಯಥೆಯಾಗಿಲ್ಲ. ಆದರೆ ಎಲ್ಲರ ಹೃದಯದಲ್ಲಿ ಅವನ ಸಾವು ಕಳವಳವನ್ನು ತಂದಿದೆ.

ಬದುಕಿದ್ದಾಗ ವೈರಿಯಾಗಿದ್ದವನು ಸತ್ತ ಮೇಲೆ ಅನ್ನ ಕಂಟಕವಾದ ಎಂದು ಲಕ್ಷ್ಮಣಾಚಾರ್ಯ ನಾರಣಪ್ಪನನ್ನು ಶಪಿಸುತ್ತಾನೆ. ಇನ್ನು ಕೆಲವರು ದಕ್ಷಿಣೆ ತಪ್ಪಿತೆಂದು ಶಪಿಸುತ್ತಾರೆ. ಅವನ ಸಂಸ್ಕಾರವನ್ನು ಮಾಡಲು ತಪ್ಪಿಸಿಕೊಳ್ಳಲು ಯತ್ನಿಸುವ ಅವರು ಬಂಗಾರದ ಆಸೆಗಾಗಿ ಮಾಡಲು ಮುಂದಾಗುತ್ತಾರೆ. ನಾರಣಪ್ಪ ಸತ್ತದ್ದರಿಂದ ಅಗ್ರಹಾರಕ್ಕೆ ಸ್ಮಶಾನ ಮೌನ ಆವರಿಸಿದೆ. ಮಕ್ಕಳನ್ನು ಹೊರಗೆ ಆಡಲು ಬಿಡುವಂತಿಲ್ಲ. ಪ್ರತೀ ಮನೆ ಕತ್ತಲೆ ಕೋಣೆಗಳು ಅವನ ಶವವಿದ್ದಂತೆ ಭಾಸವಾಗುತ್ತಿದೆ. ದಾಸಾಚಾರ್ಯನು ಹಸಿವನ್ನು ತಾಳಲಾಗದೆ ನಾರಣಪ್ಪನನ್ನು ದೂರುತ್ತಾನೆ. ಮಂಜಯ್ಯನಿಗೆ ಅಗ್ರಹಾರದ ಬ್ರಾಹ್ಮಣನೊಬ್ಬ ಗುಟ್ಟಾಗಿ ತನ್ನ ಮನೆಯಲ್ಲಿ ತಿನ್ನಲು ಬಂದನಲ್ಲ ಎಂದು ಖುಷಿಯಾಗುತ್ತದೆ. ನಾರಣಪ್ಪನ ಸಾವನ್ನು ಧರ್ಮದ ಹಿನ್ನೆಲೆಯಲ್ಲಿ ಪರಿಗಣಿಸುವ

[illegible]

[illegible]

[illegible]

[illegible]

ಪ್ರಾಣೇಶಚಾರ್ಯ ಒಂದೆಡೆಯಾದರೆ, ದುರಾಸೆಗಾಗಿ ಅದರ ಸಂದಿಗ್ಧಕ್ಕೆ ಸಿಲುಕುವ ಬ್ರಾಹ್ಮಣರು ಇನ್ನೊಂದೆಡೆಯಿದ್ದಾರೆ. ಅಗ್ರಹಾರದ ಬ್ರಾಹ್ಮಣರು ವೈಚಾರಿಕವಾಗಿ ಚಿಂತಿಸದೇ ಇರುವುದರಿಂದ ದುರ್ವಾಸಪುರಕ್ಕೆ ಬಂದಿರುವ ಪ್ಲೇಗನ್ನು ನಾರಣಪ್ಪನ ದೆವ್ವ, ಭೂತವೆಂದು ಭ್ರಮಿಸುತ್ತಾರೆ. ಪ್ರಾಣೇಶಾಚಾರ್ಯನೂ ತನ್ನ ಆಲೋಚನೆಯನ್ನು ಧಾರ್ಮಿಕತೆಯ ಮಿತಿಯಲ್ಲಿರಿಸಿಕೊಂಡಿದ್ದಾನೆ. ಇವರು ವೈಚಾರಿಕತೆಗೆ ಸ್ವಾತಂತ್ರ್ಯವನ್ನು ನೀಡುವುದಿಲ್ಲ.

'ಭಾರತೀಪುರ' ಕಾದಂಬರಿಯಲ್ಲಿ ನಾಗಮಣಿಯ ಸಾವಿನ ಸಂದರ್ಭದಲ್ಲಿ ಜಗನ್ನಾಥನ ಮನಸ್ಸಿನಲ್ಲಿ ಹುಟ್ಟುವ ಸಂದಿಗ್ಧಗಳು ತುಂಬಾ ಅರ್ಥಪೂರ್ಣವಾಗಿವೆ. ಯಾರಿಗೂ ತಿಳಿಯದಂತೆ ಉರಿಯುತ್ತಿದ್ದವಳು ಹಾಗೆಯೇ ನಂದುಬಿಟ್ಟಳು ಎಂದುಕೊಳ್ಳುತ್ತಾನೆ. ಅವಳ ನಿಶ್ಚಯವನ್ನು ಗಮನಿಸಿದ ಜಗನ್ನಾಥ ತನ್ನ ಯೋಜನೆಯ ಕ್ರಿಯೆ ಅಸಂಗತವಾದುದು ಎಂದು ಯೋಚಿಸುತ್ತಾನೆ. ಸಾಮಾಜಿಕ ವರ್ತನೆಗಳ ತಳದಲ್ಲಿ ಮನುಷ್ಯನ ಮೂಲಭೂತ ತಾತ್ವಿಕ ಸಮಸ್ಯೆಗಳ ಪರಿಣಾಮವಿರುತ್ತದೆ. ಹುಟ್ಟು–ಸಾವು ಬದುಕಿನ ನಿಸಾರ್ಥಕತೆಗಳ ಅಸಂಗತ ಅರಿವು ಇವು ಮಹಾಯುದ್ಧದ ಪರಿಣಾಮಗಳಿಂದಾಗಿ ಪಾಶ್ಚಾತ್ಯ ಲೇಖಕನಲ್ಲಿ ಅನುಭವದ ಮೂಲಕ ಅಭಿವ್ಯಕ್ತಗೊಂಡವು .

ನಾಗಮಣಿಗೆ ಯವ್ವನ ಸೌಂದರ್ಯ ಒಳ್ಳೆಯತನ ಇದೆ. ಆದರೆ ಅವಳ ಸಾಮಾಜಿಕ ಸ್ಥಿತಿ ಜೀವನ ಸಂತೋಷದ ಈ ಸ್ವಾಭಾವಿಕ ಅಂಶಗಳನ್ನು ದುರಂತದ ಅಲಂಕಾರವನ್ನಾಗಿಸಿದೆ. ಅವಳ ಪರಿಸರ ಕಲುಷಿತವಾಗಿದ್ದು, ತನ್ನ ಗಂಡನೊಡನೆ ಬಾಳ್ವೆ ಮಾಡಬೇಕಾದವಳು ಅವಿಭಕ್ತ ಕುಟುಂಬದ ಕಾರಣದಿಂದಾಗಿ ಮಾವನ, ಮನೆಯ ವಾರ್ತೆ ನೋಡಿಕೊಳ್ಳಬೇಕು. ಅವಳೊಡನೆ ಮಾವನು ಅನೈತಿಕ ಸಂಬಂಧಹೊಂದಿದ್ದಾನೆಂಬ ಕಳಂಕದ ಸುದ್ದಿಯು ಇದೆ. ಅವಳಿಗೆ ಆಸೆಗಳಿಲ್ಲ. ವಿಷಯುಕ್ತವಾದ ಅವಳ ಪರಿಸರ ಅವಳನ್ನು ಉಸಿರುಕಟ್ಟಿಸಿ ಎಂದೋ ಕೊಂದುಬಿಟ್ಟಿದೆ. ಅವಳ ವಿಚಾರದಲ್ಲಿ ಸಾವು ಬದುಕಿನ ನಡುವೆ ಅಂತರವೇ ಇಲ್ಲ. ಅಂತೆಯೇ ಅವಳು ಜಗನ್ನಾಥನ ಬಗ್ಗೆ ಉದಾಸೀನಳಾಗಿದ್ದಾಳೆ. ಅವಳು ಜಾತಿಯಲ್ಲಿ ಮೇಲ್‌ಸ್ತರದಲ್ಲಿದ್ದರೂ ವ್ಯವಸ್ಥೆಯಲ್ಲಿ ಹರಿಜನರಷ್ಟೇ ಶೋಷಿತಳಾಗಿದ್ದಾಳೆ. ಅವಳ ಜಾತಿಯ ಹಿರಿಮೆಯೇ ಅವಳನ್ನು ಸಾಹಿಸುತ್ತದೆ. ಭಾರತೀಪುರದ ಜನತೆಗೆ ವೈಚಾರಿಕವಾಗಿ ಸ್ವತಂತ್ರವಾಗಿ ಚಿಂತಿಸುವ ಧೈರ್ಯವನ್ನು ಅಲ್ಲಿನ ಧಾರ್ಮಿಕ ಪ್ರಪಂಚ ಕಸಿದುಕೊಂಡಿದೆ. ಹಾಗಾಗಿ ಜಗನ್ನಾಥನ ಸ್ವತಂತ್ರ ಆಲೋಚನೆಗಳಿಗೆ ಅವರು ಸ್ಪಂದಿಸುವುದಿಲ್ಲ.

'ಅವಸ್ಥೆ' ಕಾದಂಬರಿಯಲ್ಲಿ ಎಲ್ಲಾ ಕ್ಷುದ್ರತೆಗಳನ್ನು ಜಯಿಸಲು ಹೊರಟ ಕೃಷ್ಣಪ್ಪ ಸಾಯುವ ಅಂಚಿನಲ್ಲೂ ಹೆಂಡತಿಯನ್ನು ಕಂಡು ಬೇಸರಿಸುತ್ತಾನೆ. ಅವಳನ್ನು ಹೊಡೆಯುತ್ತಾನೆ. ತನ್ನ ಸೇವೆಯಲ್ಲಿ ಗೆಲ್ಲುತ್ತಿರುವ ಹೆಂಡತಿಯನ್ನು ಕಂಡು ಗೊಂದಲಗೊಳ್ಳುತ್ತಾನೆ. ತಾನು ಸ್ವತಂತ್ರವಾಗಿರಬೇಕೆಂದು ಬಯಸುವ ಕೃಷ್ಣಪ್ಪ ತನ್ನ ಹೆಂಡತಿಯ ಸ್ವತಂತ್ರ ಆಲೋಚನೆಗಳನ್ನು ಬೆಂಬಲಿಸುವ ವೈಚಾರಿಕತೆಯನ್ನು ರೂಢಿಸಿಕೊಂಡಿಲ್ಲ. ಅವಳ ಸ್ವಾತಂತ್ರ್ಯವು ಅವನಿಗೆ ಸಹಿಸಲಾಗುವುದಿಲ್ಲ.

'ದಿವ್ಯ' ಕಾದಂಬರಿಯಲ್ಲಿ ಸಂಭವಿಸುವ ಎರಡು ಕೊಲೆಗಳು ಹರಿಜನರದ್ದಾಗಿದೆ. ಒಬ್ಬನು ಹಟ್ಟಿ ಕೆಲಸ ಮಾಡುವ ನಿರಕ್ಷರಿಯಾದ ಕರಿಯನಾದರೆ, ಇನ್ನೊಬ್ಬನು ಸಾಮಾಜಿಕ ಪ್ರಜ್ಞೆಯ ಹಾಗೂ ರಾಜಕೀಯ ತಿಳುವಳಿಕೆ ಇರುವ ಶಾಲಾ ಶಿಕ್ಷಕನಾದ ದುರುಗ. ಇವೆರಡೂ ಇಂದಿನ ಅಸ್ಪೃಶ್ಯ ಜಾತಿಯ ಎರಡು ಸಾಧ್ಯತೆಗಳನ್ನು ಸಂಕೇತ ರೂಪದಲ್ಲಿ ಹೇಳುವ ಪಾತ್ರಗಳಾಗಿವೆ. ತಂಗಿಯ ಸಾವಿನಿಂದಾಗುವ ಆಘಾತದಿಂದ ಅವಳು ಮೌನ

[illegible]

[illegible]

[illegible]

[illegible]

[illegible]

ಗೌರಿಯಾಗುತ್ತಾಳೆ. ಏಕಾಂತದ ಬಯಕೆಯಿಂದ ಗುಡ್ಡದತ್ತ ನಡೆದು ಹೋಗುತ್ತಾಳೆ. ಬದುಕಿನಲ್ಲಿ ಸಾವು ಅನಿವಾರ್ಯ ಎನ್ನುವುದು ವೈಚಾರಿಕತೆಯ ಕೊರತೆಯಿಂದ ಗೌರಿಗೆ ತಿಳಿಯುವುದಿಲ್ಲ.

೫.೩ ಸಾಫಲ್ಯ ಸಾಧ್ಯತೆ ಮತ್ತು ನೈತಿಕತೆ

ಸಮಾಜದಲ್ಲಿ ವ್ಯಕ್ತಿಯ ವೈಯಕ್ತಿಕ ಮತ್ತು ಸಹಜ ಅಂಶವಾದ ಕಾಮ ತನ್ನ ಅಭಿವ್ಯಕ್ತಿಗಾಗಿ ಅನೇಕ ಅಡೆತಡೆಗಳನ್ನು ಎದುರಿಸುತ್ತದೆ. ಭದ್ರತೆಗಾಗಿ ಆರಂಭವಾದ ವಿಧಿ ನಿಷೇಧಗಳು ಮುಂದೆ ಕಟ್ಟುಪಾಡುಗಳಾಗಿ ವ್ಯಕ್ತಿಯ ಸಹಜತೆಗೆ ಧಕ್ಕೆಯನ್ನುಂಟುಮಾಡುತ್ತವೆ. ಇಕ್ಕಟ್ಟಿನ ಸ್ಥಿತಿಯಲ್ಲಿ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ಅತೃಪ್ತನಾಗುವ ಮನುಷ್ಯ ಕೊನೆಗೆ ವಿಕೃತನು ಅಥವಾ ತನ್ನ ಅನುಭವಕ್ಕೆ ಪರಕೀಯನಾಗಲು ಒತ್ತಡಗಳು ಕಾರಣವಾಗುತ್ತವೆ. ಇಂತಹ ಸಂದರ್ಭದಲ್ಲಿ ವ್ಯಕ್ತಿಯು ತನ್ನ ವೈಯಕ್ತಿಕತೆಗೆ ಬೆಲೆ ಕೊಡಬೇಕಾಗುತ್ತದೆ. ವಿದ್ಯಾವಂತ ತರುಣರು ಬದುಕನ್ನು ಎದುರಿಸುವಾಗ ದೇಹದ ಬಯಕೆ ಅವರನ್ನು ಸಹಜವಾಗಿ ಕಾಡುತ್ತದೆ. ಬಯಕೆಗಳ ಈಡೇರಿಕೆಗಾಗಿ ಇದ್ದ ಸಾಮಾಜಿಕ ಅಡೆತಡೆಗಳನ್ನು ಅವರು ಬದುಕಿನ ಅನ್ವೇಷಣೆಗಾಗಿ ಬಳಸಿಕೊಂಡರು.

ಅನಂತಮೂರ್ತಿಯವರು ಲೈಂಗಿಕತೆಯನ್ನು ಸಂಕುಚಿತತೆ ಬಿಟ್ಟು ಸಾಮಾನ್ಯ ಭಾವದಲ್ಲಿ ಗುರುತಿಸಿದರು. ವ್ಯಕ್ತಿ ತನ್ನ ಒಳಿತು ಕೆಡುಕು, ಸೋಲು ಗೆಲುವುಗಳನ್ನು ಒಪ್ಪಿಕೊಂಡು ಬದುಕುವಾಗ ಲೈಂಗಿಕ ಜೀವನವು ಇದಕ್ಕೆ ಹೊರತಾಗುವುದಿಲ್ಲ. ನೈತಿಕ ಪ್ರಜ್ಞೆಯು ನಿರ್ಮಿತವಾದ ಸಮಾಜದಲ್ಲಿ ತೋರಿಕೆ ಮತ್ತು ನೈಜತೆಗೆ ಮುಖಾಮುಖಿಯಾಗುವುದರ ಮೂಲಕ ಹೊಸ ಮೌಲ್ಯಗಳು ಹುಟ್ಟಿಕೊಳ್ಳುತ್ತವೆ. ಈ ಹೊಸವಿಚಾರಗಳು ಹೊಸ ನೈತಿಕ ಪ್ರಜ್ಞೆಗೆ ಚಾಲನೆಯನ್ನು ನೀಡುತ್ತವೆ. ಕಟ್ಟುಪಾಡುಗಳಲ್ಲಿನ ಬದಲಾವಣೆಯು ಅನಿವಾರ್ಯವಾಗಿ ಸಂಘರ್ಷವನ್ನು ಹುಟ್ಟು ಹಾಕುತ್ತದೆ.

ವ್ಯಕ್ತಿ ಸಾಮಾಜಿಕವಾಗಿ ಹಾಗೂ ವೈಯಕ್ತಿಕವಾಗಿ ಲೈಂಗಿಕತೆಯ ಸತ್ಯವನ್ನು ಎದುರಿಸಬೇಕಾದಾಗ ಸಂಘರ್ಷಕ್ಕೊಳಗಾಗುತ್ತಾನೆ. ವ್ಯಕ್ತಿಯು ಪರಂಪರಾಗತ ನಂಬಿಕೆಗಳನ್ನು ಬಿಟ್ಟು ವೈಯಕ್ತಿಕ ಸಾಫಲ್ಯ ಸಾಧ್ಯತೆಗಳನ್ನು ಕಂಡುಕೊಳ್ಳುವಾಗ ಸಂಕ್ರಮಣ ಸ್ಥಿತಿ ನಿರ್ಮಾಣವಾಗುತ್ತದೆ. ಪರಂಪರಾಗತವಾದ ನೈತಿಕ ಮೌಲ್ಯಗಳ ಅರ್ಥವನ್ನು ಪ್ರಶ್ನಿಸುವ ಹಾಗೂ ಆ ಮೂಲಕ ಅಂತರಂಗದ ಭಾವನೆಗಳನ್ನು ಶೋಧನೆ ಮಾಡಿಕೊಳ್ಳುವ ವ್ಯಕ್ತಿಗಳು ಅನಂತ ಮೂರ್ತಿಯವರ ಕಥಾ ಸಾಹಿತ್ಯದಲ್ಲಿ ಪಾತ್ರಗಳಾಗಿ ಬರುತ್ತಾರೆ.

'ಘಟಶ್ರಾದ್ಧ' ಕತೆಯಲ್ಲಿ ಸಾಫಲ್ಯ ಸಾಧ್ಯತೆಗಾಗಿ ನೈತಿಕತೆಯನ್ನು ಮೀರುವ ಯಮುನಕ್ಕ ಅನಂತರ ಅದನ್ನು ಸರಿಪಡಿಸಿಕೊಳ್ಳಲು ಹೋಗಿ ದ್ವಂದ್ವಕ್ಕೊಳಗಾಗುತ್ತಾಳೆ. ವಿಧವೆಯಾದ ಯಮುನಕ್ಕನು ಅನೈತಿಕ ಸಂಬಂಧಕ್ಕೆ ಸಮ್ಮತಿಸುವಾಗ ನೈತಿಕತೆಯ ಬಗ್ಗೆ ಯೋಚಿಸಿರುವುದಿಲ್ಲ. ಸಮಾಜದಿಂದ ಬಹಿಷ್ಕಾರಗೊಳ್ಳುವುದಕ್ಕೆ ಮೊದಲೆ ನೈತಿಕತೆಯ ಪ್ರಶ್ನೆ ಅವಳನ್ನು ಕಾಡುತ್ತದೆ. ಜೊತೆಗೆ ತನ್ನ ಸಾಮಾಜಿಕ ವ್ಯವಹಾರವೆಲ್ಲವೂ ನಿಂತು ಹೋದಾಗ ಹೆದರಿ ಘಟಶ್ರಾದ್ಧಕ್ಕೊಳಗಾಗುತ್ತಾಳೆ.

ಯಮುನಕ್ಕನು ನೈತಿಕತೆಯನ್ನು ಮೀರಿರುವುದು ಉಡುಪರಿಗೆ ಅಪರಾಧವಾಗಿ ತೋರುತ್ತದೆ. ಅವಳಿಗೆ ಜಾತಿಯಿಂದ ಬಹಿಷ್ಕಾರ ಹಾಕುತ್ತಾರೆ. ಶಾಸ್ತ್ರಿ, ಗಣೇಶ ಇವರೂ ಜಾತಿ ಬಾಹಿರವಾಗಿ ನೈತಿಕತೆಯನ್ನು ಮೀರಿರುತ್ತಾರೆ. ಆದರೆ ಸಮಾಜದ ಗಮನಕ್ಕೆ ಬಾರದಂತೆ ನೋಡಿಕೊಳ್ಳುತ್ತಾರೆ.

ಗೋದಾವರಮ್ಮ ಯಮುನಕ್ಕನ ಅನೈತಿಕ ಸಂಬಂಧವನ್ನು ತಿಳಿದುಕೊಳ್ಳಲು ಆಸಕ್ತಿ ತೋರಿಸುತ್ತಾಳೆ. ವ್ಯಂಗ್ಯವಾಗಿ ಯಮುನಕ್ಕನ ಬಗ್ಗೆ ಮಾತನಾಡಿಕೊಳ್ಳುತ್ತಾಳೆ. ಜೊತೆಗೆ ಬ್ರಾಹ್ಮಣ್ಯ ಮೀರಿದ ಬ್ರಾಹ್ಮಣ ಹುಡುಗರ ಬಗ್ಗೆಯೂ ಅಸಹನೆ ವ್ಯಕ್ತಪಡಿಸುತ್ತಾಳೆ. ಯಮುನಕ್ಕನಿಗೆ ನೈತಿಕತೆಯನ್ನು ಮೀರುವಾಗ ಇದ್ದ ಧೈರ್ಯ ಅದನ್ನು ಎದುರಿಸುವಾಗ ಇರುವುದಿಲ್ಲ. ಅದು ತರುವ ಸವಾಲನ್ನು ಒಂಟಿಯಾಗಿ ಎದುರಿಸುವಾಗ ಗೊಂದಲಗೊಳ್ಳುತ್ತಾಳೆ. ಶಾಸ್ತ್ರಿ, ಗಣೇಶ ಇವರ ತಮಾಷೆಗೆ ಗುರಿಯಾದಾಗ ಬೇಸರಪಡುತ್ತಾಳೆ. ಗೋದಾವರಮ್ಮನ ಕುತೂಹಲ ಕಂಡು ದುಃಖಪಡುತ್ತಾಳೆ.

ಯಮುನಕ್ಕನ ಜೊತೆ ಸಂಬಂಧವಿರಿಸಿಕೊಂಡ ಶಿಕ್ಷಕನೂ ಗರ್ಭಪಾತಕ್ಕೆ ಒತ್ತಾಯಿಸಿದಾಗ ತಾನು ನೈತಿಕತೆಯನ್ನು ಮೀರಿದ್ದು ತಪ್ಪೆಂದು ಭಾವಿಸುತ್ತಾಳೆ. ಗುಟ್ಟಾಗಿ ಗರ್ಭಪಾತವನ್ನು ಮಾಡಿಸಿಕೊಳ್ಳುತ್ತಾಳೆ. ಅವಳಿಗೆ ಅರಿವಿಲ್ಲದಂತೆಯೇ ವಿಷಯ ಬಹಿರಂಗವಾದಾಗ ಬಹಿಷ್ಕಾರಕ್ಕೊಳಗಾಗುತ್ತಾಳೆ. ಯಮುನಕ್ಕನ ಸಾಫಲ್ಯ ಸಾಧ್ಯತೆಯು ಅನೈತಿಕವಾಗಿದ್ದುದರಿಂದ ಅವಳಿಗೆ ಕ್ಷಮೆಸಿಗುವುದಿಲ್ಲ. ಯಮುನಕ್ಕನ ಸ್ವಾತಂತ್ರ್ಯವು ಉಡುಪರಿಗಿರುವ ವೈಚಾರಿಕತೆಯ ಕೊರತೆಯಿಂದ ಅವಳನ್ನು ಜಾತಿ ಬಹಿಷ್ಕಾರಕ್ಕೆ ಗುರಿಪಡಿಸುತ್ತದೆ.

'ಪ್ರಶ್ನೆ' ಕತೆಯಲ್ಲಿ ವಿಧವೆ ಪಾರ್ವತಿಯು ಸಾಫಲ್ಯ ಸಾಧ್ಯತೆಗಾಗಿ ನೈತಿಕತೆಯನ್ನು ಮೀರುತ್ತಾಳೆ. ನೈಜ ವಿಚಾರವನ್ನು ತಿಳಿಸಿದಾಗ ಶಾರದೆಯು ಸರಿಯಾಗಿ ಸ್ಪಂದಿಸದ ಕಾರಣ ಪಾರ್ವತಿಯು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ನೈತಿಕತೆಯನ್ನು ಮೀರಿದ್ದೆ ಅಕ್ಕನ ಸಾವಿಗೆ ಕಾರಣವೆಂದು ಶಾರದೆಗೆ ತಿಳಿಯುತ್ತಾಳೆ. ಕೊನೆಗೆ ಗಂಡಸರನ್ನು ಕೂಡುವ ಸುಖವೇ ಕೇಡೆಂದು ನಿರ್ಧಾರವನ್ನು ಕೈಗೊಳ್ಳುತ್ತಾಳೆ.

ವಿಧಿಬದ್ಧವಾಗಿ ಬದುಕಿದ ಶಂಕರಯ್ಯನಿಗೆ ಪಾರ್ವತಿಯ ಸಾವು ಉಚಿತವೆನಿಸುತ್ತದೆ. ಸಮಾಜವೂ ಅದನ್ನೇ ನಿರೀಕ್ಷಿಸುತ್ತದೆ. ಶಾರದೆಗೆ ಅಕ್ಕನ ಬಗ್ಗೆ ಪಾಪ ಎನಿಸಿದರೂ ಊರಿನ ಬಾಯಿಗೆ ತನ್ನ ಮನೆಯ ವಿಚಾರ ಬರಬಾರದೆಂಬ ಕಾಳಜಿಯಿದೆ. ಶಂಕರಯ್ಯ ಲಚ್ಚಿಯ ತಾಯಿಯೊಡನೆ ಇರಿಸಿಕೊಂಡಿದ್ದ ಸಂಬಂಧ ನೈತಿಕತೆಯನ್ನು ಮೀರಿದ್ದಾಗಿದೆ. ರಂಗನು ಲಚ್ಚಿಯೊಡನೆ ಇರಿಸಿಕೊಂಡ ಸಂಬಂಧವೂ ಯಾರ ಗಮನಕ್ಕೂ ಬರುವುದಿಲ್ಲ. ಲಚ್ಚಿ ಹಾಗೂ ಅವಳ ತಾಯಿಗೆ ನೈತಿಕತೆ ಹಾಗೂ ಅನೈತಿಕತೆಯೆನ್ನುವುದೇ ಇಲ್ಲ.

ನೈತಿಕತೆಯು ಎಲ್ಲರಿಗೂ ಅನ್ವಯಿಸಬೇಕೆಂದು ರಂಗನು ಬಯಸುತ್ತಾನೆ. ಅನೈತಿಕ ಸಂಬಂಧ ಬೆಳೆಸಿದ ಶಂಕರಯ್ಯ ಲಚ್ಚಿಯನ್ನು ಮಗಳೆಂದು ಒಪ್ಪದಿರುವುದನ್ನು ಜರಿಯುತ್ತಾನೆ. ಶಂಕರಯ್ಯನ ತಪ್ಪಿಗಾಗಿ ಪಾರ್ವತಿಯು ಪ್ರಾಣವನ್ನೇ ಬಲಿಕೊಟ್ಟದ್ದನ್ನು ಖಂಡಿಸುತ್ತಾನೆ. ಶಂಕರಯ್ಯ– ಶಾರದೆಯ ಬದಲಾಗದ ನಿರ್ಧಾರ ರಂಗನನ್ನು ಗೊಂದಲಕ್ಕೊಳಪಡಿಸುತ್ತದೆ. ವಿಧಿಬದ್ಧ ಸಮಾಜದಲ್ಲಿ ನೈತಿಕತೆಯನ್ನು ಮೀರುವ ಧೈರ್ಯ ತೋರಿಸಿದ ಪಾರ್ವತಿಗೆ ಬದುಕಲು ಸಾಧ್ಯವಾಗುವುದಿಲ್ಲ. ಶಾರದೆ ಅಕ್ಕನಿಗೆ ಒತ್ತಾಸೆಯಾಗಿ ನಿಲ್ಲುವ ಮನಸ್ಸು ಮಾಡುವುದಿಲ್ಲ. ಇಲ್ಲಿ ರಂಗನ ಸ್ವಾತಂತ್ರ್ಯ ಅತಿಯಾದದ್ದಾದರೆ, ಶಂಕರಯ್ಯನ ಸ್ವಾತಂತ್ರ್ಯ ಮಿತಿಯದ್ದಾಗಿದೆ. ಶಾರದೆಗೆ ಸ್ವತಂತ್ರ

ಆಲೋಚನೆಗಳಿಗಿಂತ ಮಿತಿಯಲ್ಲಿರುವ ಆಲೋಚನೆಗಳೇ ಹಿಡುಸುತ್ತವೆ. ಆದರೆ ಈ ಮೂವರೂ ವೈಚಾರಿಕವಾಗಿ ಚಿಂತಿಸುವುದಿಲ್ಲ. ಇವರಿಗೆ ಇನ್ನೊಬ್ಬರನ್ನು ಬದಲು ಮಾಡುವ ಆಲೋಚನೆಯಿದೆಯೇ ಹೊರತು ತಾವು ಬದಲಾಗಲು ಬಯಸುವುದಿಲ್ಲ. ಅವರ ಈ ಏಕಮುಖಿ ಆಲೋಚನೆಯು ಸಂಘರ್ಷಕ್ಕೆ ದಾರಿಯಾಗಿದೆ.

'ಬೇಟೆ ಬಳೆ ಮತ್ತು ಓತಿಕೇತ' ಕತೆಯಲ್ಲಿ ಕೃಷ್ಣಸ್ವಾಮಿ ಲೆಕ್ಚರರ್‌ನಾಗಿ ಕೆಲಸ ಮಾಡುವಾಗ ಆತನ ಜೀವನದ ಘಟನೆಯಲ್ಲಿ ಹಸೀನಾಳು ಪ್ರವೇಶಿಸುತ್ತಾಳೆ. ಹಸೀನಾ ಕೃಷ್ಣಸ್ವಾಮಿಯನ್ನು ಆಕರ್ಷಿಸಿರುತ್ತಾಳೆ. ಕೃಷ್ಣಸ್ವಾಮಿಯ ಮಾತುಗಳಿಂದ ಪ್ರಭಾವಿತರಾದ ಹಸೀನ ಮತ್ತು ಗೋವಿಂದರಾವ್ ಪ್ರೀತಿಸತೊಡಗುತ್ತಾರೆ. ತನ್ನ ಪ್ರೀತಿಯನ್ನು ಹೇಳಿಕೊಳ್ಳಲಾಗದೇ ಕೃಷ್ಣಸ್ವಾಮಿ ಸುಮ್ಮನಾಗುತ್ತಾನೆ. ಆದರೆ ಹಸೀನಾ ತನ್ನ ಸಹಪಾಠಿ ಗೋವಿಂದರಾವ್‌ನನ್ನೇ ಮದುವೆಯಾಗಲು ಆಯ್ಕೆ ಮಾಡಿಕೊಳ್ಳುತ್ತಾಳೆ. ಹಸೀನಾಳ ಸಂಸಾರವು ಆರ್ಥಿಕ ಭದ್ರತೆ ಇಲ್ಲದೇ ಸೊರಗಿದಾಗ ಕೃಷ್ಣಮೂರ್ತಿ ಸಹಾಯ ಹಸ್ತ ಚಾಚುತ್ತಾನೆ.

ಗೋವಿಂದರಾವ್ ಕುಡಿಯಲು ಪ್ರಾರಂಭಿಸಿ ದುಡಿಯುವುದನ್ನು ನಿಲ್ಲಿಸುತ್ತಾನೆ. ಸಂಸಾರ ನಿಭಾಯಿಸುವ ಹಸೀನಾಳನ್ನು ಹಿಂಸಿಸಲು ಪ್ರಾರಂಭಿಸುತ್ತಾನೆ. ಹಸೀನ ಬೆಂಗಳೂರಿನಲ್ಲಿ ಕಳ್ಳತನವನ್ನು ಮಾಡಲು ಪ್ರಾರಂಭಿಸುತ್ತಾಳೆ. ಒಂದೊಂದೇ ಹಂತವನ್ನು ತಲುಪುವ ಹಸೀನ ಫ್ರಾನ್ಸಿಗೆ ಹೋಗುತ್ತಾಳೆ. ಅಲ್ಲಿ ಶ್ರೀಮಂತ ಫ್ರೆಂಚ್ ವ್ಯಕ್ತಿಯನ್ನು ಮದುವೆಯಾಗುತ್ತಾಳೆ. ಗೋವಿಂದರಾವ್‌ನ ಕ್ಷೇಮವನ್ನು ಅವಳೇ ವಿಚಾರಿಸಿಕೊಳ್ಳುತ್ತಿದ್ದುದರಿಂದ ಹೆಂಡತಿಯ ವಿಷಯ ತಿಳಿದ ಅವನು ಚಕಾರ ಎತ್ತುವುದಿಲ್ಲ.

ಹಸೀನಾ ಮರು ಮದುವೆಯಾದ ಫ್ರೆಂಚ್ ವ್ಯಕ್ತಿಗೆ ಪುರಾತತ್ವದಲ್ಲಿ ಆಸಕ್ತಿಯಿರುತ್ತದೆ. ಅವನು ಗೌಪ್ಯ ಆದಿಮಾನವ ಸ್ಥಳಕ್ಕೆ ಹಸೀನಾಳ ಮಗಳು ಜ್ಯೋತಿಯೊಂದಿಗೆ ಬಂದಿರುತ್ತಾನೆ. ಕೃಷ್ಣಸ್ವಾಮಿಯ ಗೆಳೆಯ ಸೋಮನಾಥನಿಗೆ ಪುರಾತತ್ವದಲ್ಲಿ ಆಸಕ್ತಿಯಿರುವುದರಿಂದ ಈ ಇಬ್ಬರೂ ಅಲ್ಲಿಗೆ ಬಂದಿರುತ್ತಾರೆ. ಸೋಮನಾಥನಿಗೆ ಪರಿಚಯವಾದ ಜ್ಯೋತಿ ಕೃಷ್ಣಸ್ವಾಮಿಯನ್ನು ಪರಿಚಯ ಮಾಡಿಕೊಳ್ಳುತ್ತಾಳೆ. ಕೃಷ್ಣಸ್ವಾಮಿಯ ಪರಿಚಯವನ್ನು ಹಸೀನಾ ಜ್ಯೋತಿಗೆ ಮೊದಲೇ ತಿಳಿಸಿರುತ್ತಾಳೆ. ಜೊತೆಗೆ ಕೃಷ್ಣಮೂರ್ತಿಯನ್ನು ತಾನು ಇಷ್ಟಪಡುತ್ತಿದ್ದ ಬಗ್ಗೆ ಹಾಗೂ ಅವನ ಮನೆಯಿಂದ ಕದ್ದ ಟೇಪ್‌ರೆಕಾರ್ಡರನ್ನು ಪ್ರೀತಿಯಿಂದ ತನ್ನ ಬಳಿ ಇರಿಸಿಕೊಂಡ ಬಗ್ಗೆ ತಿಳಿಸಿದ್ದಾಳೆ. ಕೊನೆಗೆ ಪಶ್ಚಾತ್ತಾಪದ ಭಾವನೆಯನ್ನು ವ್ಯಕ್ತಪಡಿಸಿದ ಹಸೀನಾಳು ಅಪಘಾತದಲ್ಲಿ ತೀರಿಕೊಳ್ಳುತ್ತಾಳೆ. ತನ್ನ ಸಾಫಲ್ಯ ಸಾಧ್ಯತೆಗಾಗಿ ನೈತಿಕತೆಯನ್ನು ಮೀರಿ ವರ್ತಿಸಿದ ಬಗ್ಗೆ ಹಸೀನಾಳಿಗೆ ಕೊನೆಯಲ್ಲಿ ಪಶ್ಚಾತ್ತಾಪವಾಗುತ್ತದೆ. ವೈಯಕ್ತಿಕ ಸಫಲತೆಗಾಗಿ ಸ್ವಾತಂತ್ರ್ಯವನ್ನು ಬಳಸಿಕೊಳ್ಳುವ ಹಸೀನಾಳಿಗೆ ಕೊನೆಯ ಘಳಿಗೆಯಲ್ಲಿ ತಪ್ಪಿನ ಅರಿವಾಗುತ್ತದೆ. ತನ್ನ ಹಿಂದಿನ ಜೀವನವನ್ನು ವೈಚಾರಿಕವಾಗಿ ಅವಲೋಕಿಸಿದಾಗ ಗೊಂದಲಗೊಳ್ಳುತ್ತಾಳೆ.

'ಆಕಾಶ ಮತ್ತು ಬೆಕ್ಕು' ಕತೆಯಲ್ಲಿ ಆಚಾರ್ಯನದು ವಿಧಿಬದ್ಧವಾಗಿ ಜೀವನ ಸಾಗಿಸುವ ಕುಟುಂಬವಾಗಿದೆ. ಆಚಾರ್ಯನಿಗೆ ತಾನು ಪೂಜೆ ಮಾಡುತ್ತಿದ್ದ ದೇವಸ್ಥಾನದ ಯಜಮಾನರೆನಿಸಿದ್ದ ಶ್ರೀಮಂತ ಅಲಕಾವತಿಯ ಮನೆಯ ಪೂಜೆಗೆ ಹೋಗಬೇಕಾಗುತ್ತದೆ. ಪರಿಚಯವಾದ ಅಲಕಾವತಿಯ ಸ್ನೇಹ ಪ್ರೀತಿಗೆ ತಿರುಗಿಕೊಳ್ಳುತ್ತದೆ. ಸೋದರ ಮಾವನೊಂದಿಗೆ ಮದುವೆಯಾಗಿರುವ ಅಲಕಾವತಿ ಆಚಾರ್ಯನೊಂದಿಗೆ ಅನೈತಿಕ ಸಂಬಂಧ ಬೆಳೆಸುತ್ತಾಳೆ. ಈ ಸಂಬಂಧದಿಂದ ಬಸಿರಿಯಾದ ಅಲಕಾವತಿ ಹೆರಿಗೆ ನೋವಿನಿಂದ ಸಾಯುತ್ತಾಳೆ.

[illegible]

[illegible]

[illegible]

[illegible]

[illegible]

ಅಲಕಾವತಿಯನ್ನು ಮರೆಯಲು ಆಚಾರ್ಯ ಊರು ಬಿಟ್ಟು ಬರುತ್ತಾನೆ. ಶಿವಮೊಗ್ಗದಲ್ಲಿ ಭೂಮಾಲೀಕರ ಸಂಘದ ಕಾರ್ಯದರ್ಶಿಯಾಗಿರುತ್ತಾನೆ. ಅಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿದ್ದ ಗಂಗೂಬಾಯಿಯ ಪರಿಚಯವಾಗುತ್ತದೆ. ಗಂಡನ ಹಿಂಸೆಯಿಂದ ತವರಿಗೆ ಬಂದಿದ್ದ ಗಂಗೂಬಾಯಿಗೆ ವಿಚ್ಛೇದನ ಪಡೆಯುವ ಉಪಾಯಗಳನ್ನು ಹೇಳಿಕೊಟ್ಟ ಆಚಾರ್ಯ ಅವಳೊಂದಿಗೆ ಸಂಬಂಧವನ್ನು ಬೆಳೆಸುತ್ತಾನೆ. ವಿಷ್ಣುಮೂರ್ತಿ ಕೇಸೊಂದರಲ್ಲಿ ಸಿಕ್ಕಿಹಾಕಿಕೊಂಡಾಗ ನಿರಪರಾಧಿಯಾದ ಅವನನ್ನು ಆಚಾರ್ಯ ಕಾನೂನಿನ ರಕ್ಷಣೆ ಒದಗಿಸುತ್ತಾನೆ. ಹೆಂಡತಿಯಿದ್ದೂ ಶ್ರೀಮಂತ ಅಲಕಾವತಿ ಹಾಗೂ ಗಂಗೂಬಾಯಿಯೊಡನೆ ಅನೈತಿಕ ಸಂಬಂಧವನ್ನು ಬೆಳೆಸಿದ ಆಚಾರ್ಯನಿಗೆ ಇಲ್ಲಿಯತನಕ ತಾನು ಶ್ರೀಮಂತರ ಸೇವೆ ಮಾಡಿದ್ದು ಹುಚ್ಚು ಸಾಹಸವೆಂದೆನಿಸುತ್ತದೆ. ಸಾಯುವ ಸಮಯದಲ್ಲಿ ಆಚಾರ್ಯನು ತಾನು ಮಾಡಿದ ತಪ್ಪಿನ ಬಗ್ಗೆ ಪಶ್ಚಾತ್ತಾಪ ಪಡುತ್ತಾನೆ. ಆಚಾರ್ಯನು ಪ್ರಾಯದಲ್ಲಿ ಸ್ವಾತಂತ್ರ್ಯವನ್ನು ಸ್ವೇಚ್ಛಾಚಾರಕ್ಕಾಗಿ ಬಳಸಿಕೊಂಡಿರುತ್ತಾನೆ. ನಂತರದಲ್ಲಿ ವೈಚಾರಿಕ ಚಿಂತನೆಯಿಂದಾಗಿ ಅವನಲ್ಲಿ ಬದಲಾವಣೆಯಾಗುತ್ತದೆ.

'ಪ್ರಸ್ತ' ಕತೆಯಲ್ಲಿ ವೆಂಕಮ್ಮನಿಗೆ ಜೀವನದಲ್ಲಿ ಯಾವುದೇ ಸುಖ ಲಭಿಸಿರುವುದಿಲ್ಲ. ಗಂಡ ಹೆಂಡತಿ ಇದ್ದರೂ ವೇಶ್ಯೆಯ ಸಹವಾಸವನ್ನು ಮಾಡಿರುತ್ತಾನೆ. ಮನೆಯ ಜವಾಬ್ದಾರಿಯನ್ನು ನೋಡಿಕೊಳ್ಳುವ ಅವಳಿಗೆ ಸಹಾನುಭೂತಿ ತೋರಿಸುವವರೇ ಇಲ್ಲದಂತಾಗಿರುತ್ತದೆ. ಜೊತೆಗೆ ಮಗಳ ಜೀವನವೂ ಅದೇ ಹಾದಿಯನ್ನು ಹಿಡಿದಿರುತ್ತದೆ. ಇದರಿಂದ ವೆಂಕಮ್ಮನಿಗೆ ತುಂಬಾ ಬೇಸರವಿದೆ. ತನಗೆ ಹಾಗೂ ತನ್ನ ಮಗಳಿಗೆ ದೊರಕದ ಸುಖ ಸೊಸೆ ನೇತ್ರಾವತಿಗೆ ಲಭಿಸುವುದನ್ನು ವೆಂಕಮ್ಮ ಸಹಿಸುವುದಿಲ್ಲ.

ಸೊಸೆಯು ಮಗನೊಂದಿಗೆ ಅನ್ಯೋನ್ಯವಾಗಿರುವುದನ್ನು ಸಹಿಸದ ವೆಂಕಮ್ಮ ನೇತ್ರಾವತಿಯನ್ನು ದೂರುತ್ತಾಳೆ. ಅವಳು ಮಾಡುವ ಎಲ್ಲ ಕೆಲಸಗಳಿಗೂ ಹೆಸರಿಡುತ್ತಾಳೆ. ವೆಂಕಮ್ಮನ ಮನೆಯ ಆಗುಹೋಗುಗಳನ್ನು ತಿಳಿದ ಶಾಮಭಟ್ಟರೆದುರು ತನ್ನ ಸೊಸೆಯ ಬಗ್ಗೆ ಆಡಿಕೊಳ್ಳುತ್ತಾಳೆ. ಗಂಡನಿಂದ ದೂರಾದ ಮಗಳ ಭವಿಷ್ಯದ ಬಗ್ಗೆ ವೆಂಕಮ್ಮನಿಗೆ ಕಳಕಳಿಯಿದೆ. ಮಗ ಪುಂಡರೀಕ ಹಾಗೂ ಸೊಸೆ ನೇತ್ರಾವತಿಯ ಅನ್ಯೋನ್ಯ ದಾಂಪತ್ಯದ ಬಗ್ಗೆ ಅಸಹನೆಯಿಂದೆ. ತಾಯಿ ಹಾಗೂ ಮಗಳ ಜೀವನದಲ್ಲಿ ಸಿಗದ ಸುಖ ಸೊಸೆಗೆ ಸಿಗಬಾರದೆಂದು ಬಯಸುತ್ತಾಳೆ. ನೇತ್ರಾವತಿ ಮಗನನ್ನು ಹಾಳು ಮಾಡಿದಳೆಂದು ದೂರುತ್ತಾಳೆ. ವೆಂಕಮ್ಮ ಮಗ ಸೊಸೆಯರ ಸಂಭಾಷಣೆಯನ್ನು ಕದ್ದು ಕೇಳಲು ಹವಣಿಸುತ್ತಾರೆ.

"ಪ್ರಸ್ತ ಕತೆಯ ಘಟನೆಗಳು ಕಾಮದ ನಿಷ್ಠುರ ಆದರೆ ಅನಿವಾರ್ಯ ಬೇಡಿಕೆಗಳ ಮತ್ತು ಅದಕ್ಕೆ ಪಾತ್ರಗಳು ಪ್ರತಿಕ್ರಿಯಿಸುವ ಕ್ರಿಯೆಯ ನಡುವೆ ಮಾನವೀಯತೆಯ ಎಳೆಯನ್ನು ಗುರುತಿಸುವ ಪ್ರಯತ್ನ ಮಾಡುತ್ತದೆ . ಬದುಕಿನ ಮೌಲ್ಯಗಳ ಬಗ್ಗೆ ವಿಶೇಷವಾಗಿ ಕಾಳಜಿವಹಿಸದ, ಆದರೆ ಒಳಗೊಳಗೇ ಅಸೂಯೆಯಿಂದ ಚಡಪಡಿಸುವ ಈ ಹಸಿ ಜೀವಗಳ ಸಂಘರ್ಷವನ್ನು ಕಾಣಬಹುದು."[೬] ಕತೆಯಲ್ಲಿ ವೆಂಕಮ್ಮನಿಗೆ ಸೊಸೆಯ ಸ್ವತಂತ್ರ ಆಲೋಚನೆಗಳು ಹಿಡಿಸುವುದಿಲ್ಲ. ಇದು ಅವಳಿಗಿರುವ ವೈಚಾರಿಕ ಕೊರತೆಯನ್ನು ಬಿಂಬಿಸುತ್ತದೆ.

'ಸಂಸ್ಕಾರ' ಕಾದಂಬರಿಯಲ್ಲಿ ವ್ಯಕ್ತಿಗೆ ಕೆಲವೊಂದು ಸಂದರ್ಭಗಳಲ್ಲಿ ವೈಯಕ್ತಿಕ ಸಾಫಲ್ಯ ಸಾಧ್ಯತೆಗಾಗಿ ನೈತಿಕತೆಯನ್ನು ಮೀರಬೇಕಾಗುತ್ತದೆ. ಇದರಿಂದ ಗೊಂದಲವುಂಟಾಗುತ್ತದೆ. ಇಂತಹ ಸ್ಥಿತಿಯು ಪ್ರಾಣೇಶಾಚಾರ್ಯನಿಗೆ ಎದುರಾಗುತ್ತದೆ. ಚಂದ್ರಿಯೊಂದಿಗೆ ಅನೈತಿಕ ಸಂಬಂಧವನ್ನು ಬೆಳೆಸಿದ ನಂತರ

ನೈತಿಕತೆಯ ಪ್ರಶ್ನೆ ಪ್ರಾಣೇಶಾಚಾರ್ಯನನ್ನು ಕಾಡುತ್ತದೆ. ಅಗ್ರಹಾರದ ಬ್ರಾಹ್ಮಣರಿಗೆ ಬುದ್ಧಿ ಹೇಳುವ ಅಧಿಕಾರವು ಇನ್ನು ಮುಂದೆ ತನಗಿಲ್ಲ ಎಂದುಕೊಳ್ಳುತ್ತಾನೆ.

ನಾರಣಪ್ಪನ ದುರ್ನಡತೆಯನ್ನು ಖಂಡಿಸಿದ್ದ ಪ್ರಾಣೇಶಾಚಾರ್ಯ ತಾನು ಚಂದ್ರಿಯೊಂದಿಗೆ ಸಂಬಂಧ ಬೆಳೆಸಿದಾಗ ಸಂದಿಗ್ಧತೆಗೆ ಒಳಗಾಗುತ್ತಾನೆ. ರೋಗಗ್ರಸ್ಥ ಹೆಂಡತಿಯ ಸೇವೆ ಮಾಡುವುದು ಪುಣ್ಯದ ಕೆಲಸವೆನಿಸಿದ್ದು, ಈಗ ಅಸಹ್ಯವೆನಿಸ ತೊಡಗಿದೆ. ತಾನು ನೆಲೆಸಿದ ಅಗ್ರಹಾರವನ್ನು ಬಿಟ್ಟು ಕಾಡಿನಲ್ಲಿ ನಿರ್ಜನ ರಸ್ತೆಗಳಲ್ಲಿ ಗುಪ್ತವಾಗಿ ಓಡಾಡಲು ಬಯಸುತ್ತಾನೆ. ನಾರಣಪ್ಪನನ್ನು ವಿರೋಧಿಸಿದ ಅವನು ತನ್ನಲ್ಲೇ ಆ ಸ್ಥಿತಿಯನ್ನು ಹೊಂದುತ್ತಾನೆ.

ಚಂದ್ರಿಗೆ ಯಾವುದೇ ಬಗೆಯ ಗೊಂದಲವಿಲ್ಲ. ಬದಲಾಗಿ ಪ್ರಾಣೇಶಾಚಾರ್ಯನನ್ನು ಕೂಡಿದ್ದು ತನ್ನ ಪುಣ್ಯವೆಂದುಕೊಳ್ಳುತ್ತಾಳೆ. ಚಂದ್ರಿ ಹಾಗೂ ಬೆಳ್ಳಿಯಂತವರಿಗೆ ನೈತಿಕ ಅನೈತಿಕ ಎಂಬ ಯಾವ ಚೌಕಟ್ಟು ಇಲ್ಲ. ನಾರಣಪ್ಪನ ಶವಸಂಸ್ಕಾರಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿ ಚಂದ್ರಿ ಊರುಬಿಟ್ಟು ಹೊರಡುತ್ತಾಳೆ. ನಾರಣಪ್ಪ ಮತ್ತು ಶ್ರೀಪತಿಗೆ ನೀತಿ ಅನೀತಿಯ ಅರಿವಿದ್ದರು ವೈಯಕ್ತಿಕ ಸಫಲತೆಗೆ ಬೆಲೆ ಕೊಡುತ್ತಾರೆ. ಅವರ ವೈಯಕ್ತಿಕ ನೀತಿ ಅಗ್ರಹಾರಕ್ಕೆ ಅನೀತಿಯಾಗಿ ಕಾಣುತ್ತದೆ.

ಆಕಸ್ಮಿಕವಾಗಿ ಚಂದ್ರಿಯೊಡನೆ ಸಂಬಂಧ ಬೆಳೆಸಿದ ಪ್ರಾಣೇಶಾಚಾರ್ಯನು ಮನಸ್ಸು ಬಂದತ್ತ ನಡೆಯುವಾಗ ಮಾಲೇರ ಪುಟ್ಟನ ಪರಿಚಯವಾಗುತ್ತದೆ. ಎಲ್ಲರಿಂದ ತಪ್ಪಿಸಿಕೊಳ್ಳುವ ಪ್ರಾಣೇಶಾಚಾರ್ಯ ಅವನಿಂದಲೂ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ದೇವಸ್ಥಾನದಲ್ಲಿ ಊಟ ಮಾಡುವಾಗ ಊಟಕ್ಕೆ ಬಡಿಸುತ್ತಿದ್ದವನೊಬ್ಬ ಅವನನ್ನು ಗುರುತಿಸಲು ಯತ್ನಿಸಿದಾಗ ಪ್ರಾಣೇಶಾಚಾರ್ಯ ಪಂಕ್ತಿಯಿಂದೆದ್ದು ಓಡಿ ಬರುತ್ತಾನೆ. “ಕಾದಂಬರಿಯಲ್ಲಿನ ಬ್ರಾಹ್ಮಣ ಸಮಾಜದಲ್ಲಿ ಕಾಮಕ್ಕೆ ಸಾಕಷ್ಟು ಸ್ಥಾನವಿದೆ. ಆದರಿಂದಲೇ ನಾರಣಪ್ಪನಿಗೆ ಚಂದ್ರಿ, ಶ್ರೀಪತಿಗೆ ಬೆಳ್ಳಿ ಮತ್ತು ದುರ್ಗಾಭಟ್ಟನಿಗೆ ಪಾರಿಜಾತಪುರದ ಎಲೆ ಅಡಿಕೆ ಆಗೆಯುವ ಸಕೇಶಿ ವಿಧವೆಯರ ಮತ್ತು ಶೆಟ್ಟರ ಹೆಂಗಸರ ಅವಶ್ಯಕತೆ ಇದೆ. ಅತ್ಯಂತ ಪ್ರಬಲವಾದ ಪ್ರವೃತ್ತಿಗೆ ಜೀವನದಲ್ಲಿ ಸಾಕಷ್ಟು ಸ್ಥಾನ ಕೊಡದಿರುವುದರಿಂದಲೇ ಅಗ್ರಹಾರದ ಬ್ರಾಹ್ಮಣರಿಗೆ ನಾರಣಪ್ಪನನ್ನು ಕಂಡರೆ ಅಸೂಯೆ ಮತ್ತು ಹೆದರಿಕೆ.”[2] ನಾರಣಪ್ಪನು ತನಗಿರುವ ಸ್ವಾತಂತ್ರ್ಯವನ್ನು ಸ್ವೇಚ್ಛಾಚಾರಕ್ಕೆ ಬಳಸಿಕೊಳ್ಳುತ್ತಾನೆ. ಸಾಂಪ್ರದಾಯಿಕ ಬದುಕನ್ನು ನಡೆಸುತ್ತಿದ್ದ ಪ್ರಾಣೇಶಾಚಾರ್ಯನು ವೇದಾಧ್ಯಯನವನ್ನು ಮಾಡಿದ್ದರೂ ನಾರಣಪ್ಪನ ಸಾವಿನ ಸಂದರ್ಭದಲ್ಲಿ ವೈಚಾರಿಕವಾಗಿ ಚಿಂತಿಸುವುದಿಲ್ಲ.

‘ಭಾರತೀಪುರ’ ಕಾದಂಬರಿಯಲ್ಲಿ ಜಗನ್ನಾಥ ಕ್ರಿಯೆಗೆ ತೊಡಗಿದಾಗಿನಿಂದ ತನ್ನ ಸಾಧ್ಯತೆಗಾಗಿ ಅವನು ಸಾಲದ ಸಂಬಂಧ ಮತ್ತು ಬೇರೆಲ್ಲಾ ದಾಕ್ಷಿಣ್ಯಗಳ ಸಂಬಂಧಗಳನ್ನು ಕಳೆದುಕೊಳ್ಳುತ್ತಾನೆ. ನೂರಾರು ವರ್ಷಗಳಿಂದ ತನಗೂ ತನ್ನ ಮನೆಯ ಸಾಲಿಗ್ರಾಮಕ್ಕೂ ಇದ್ದ ಸಂಬಂಧ, ತನಗೂ ಹರಿಜನರಿಗೂ ಇದ್ದ ಸಂಬಂಧ ಕೊನೆಗೆ ಅವನ ಕೈ ಮೀರಿ ಕಳಚುವ ಸಂಬಂಧಗಳು ಮಾರ್ಗರೆಟ್ ಮತ್ತು ತಾಯಿಯ ಅನೈತಿಕ ಸಂಬಂಧದ ಆತಂಕವನ್ನು ಮುರಿದು ಗರ್ಭಗುಡಿಯು ಪ್ರವೇಶವನ್ನು ಸಮರ್ಥಿಸುತ್ತಾನೆ. ಜಗನ್ನಾಥನ ಸ್ವಪ್ರೇಮ ಪರಿಣಾಮಕಾರಿಯಾಗಿದ್ದು, ಬಂಡಾಯಗಾರನಾಗಲು ಅವನನ್ನು ಬಿಡುವುದಿಲ್ಲ. ಅದೇ ನೀಲಕಂಠಸ್ವಾಮಿಯಂತಹ ಇತರ ರಾಜಕೀಯ ಕಾರ್ಯಕರ್ತರಲ್ಲಿ ಪ್ರಾಮಾಣಿಕ ನೈತಿಕ ಪ್ರತಿಕ್ರಿಯೆಯೇ ಕಂಡುಬರುವುದಿಲ್ಲ. ತನ್ನ ತಾಯಿಯ ಪಾವಿತ್ರದ

ಬಗೆಗಿನ ಜಗನ್ನಾಥನ ಸಂಶಯ ಮತ್ತು ಜಾತಿ ವ್ಯವಸ್ಥೆಯ ವಿರುದ್ಧದ ಅವನ ಪ್ರತಿಭಟನೆ ಈ ಎರಡರ ನಡುವಿನ ಸಂಬಂಧ ವೈಯಕ್ತಿಕ ಒತ್ತದಿಂದ ಜಗನ್ನಾಥ ಒತ್ತಾಯಕ್ಕೊಳಗಾದಾಗ ಗೊಂದಲಗೊಳ್ಳುತ್ತಾನೆ. ಕ್ರಾಂತಿಕಾರಿಯಾದ ಹೊಸಜನಾಂಗದ ಪ್ರತಿನಿಧಿಯಾದ ಜಗನ್ನಾಥ ತನ್ನ ಕೆಲವು ನಡವಳಿಕೆಗಳಿಗೆ ತನ್ನ ತಾಯಿಯ ಬದುಕಿನಿಂದ ಸಮರ್ಥನೆ ಹುಡುಕಬೇಕಾದ ಅನಿವಾರ್ಯತೆಗೊಳಗಾಗುತ್ತಾನೆ. ಪಿಳ್ಳನು ಕಾವೇರಿಗೆ ಕೈಯೊಡ್ಡಿದಾಗ, ಸಾಲಿಗ್ರಾಮವನ್ನು ಹರಿಜನರಿಂದ ಮುಟ್ಟಿಸುವಾಗ ಯಾವುದೇ ಗೊಂದಲವಿಲ್ಲದ ಜಗನ್ನಾಥನು ತಾಯಿಯ ಅನೈತಿಕ ವಿಚಾರ ಬಂದಾಗ ದ್ವಂದ್ವವನ್ನೆದುರಿಸುತ್ತಾನೆ. ಮಾರ್ಗರೆಟಳ ವಿಚಾರದಲ್ಲೂ ಜಗನ್ನಾಥನಿಗೆ ಇದೇ ರೀತಿಯ ಗೊಂದಲವಿದೆ. ತಾಯಿ ಹಾಗೂ ಮಾರ್ಗರೆಟಳ ವಿಚಾರದಲ್ಲಿ ಬದ್ಧತೆಯನ್ನು ಬಯಸುವ ಜಗನ್ನಾಥ ಸಮಾಜದ ಜನ ಅಪ್ತವಾಗಿ ರಕ್ಷಿಸಿಕೊಂಡು ಬಂದ ಭಾವನೆಗಳನ್ನು ಗೊಂದಲಕ್ಕೊಳಪಡಿಸಲು ತನಗೆ ಅಧಿಕಾರವಿದೆಯೇ ಎಂದುಕೊಳ್ಳುತ್ತಾನೆ. ವೈಚಾರಿಕ ಮನೋಭಾವದ ಜಗನ್ನಾಥನು ಮಾರ್ಗರೆಟ್ ಹಾಗೂ ತಾಯಿಯ ಸ್ವತಂತ್ರ ವಿಚಾರಗಳ ಬಗೆಗೆ ನೊಂದುಕೊಂಡಿರುವುದು ವಿಪರ್ಯಾಸವಾಗಿದೆ.

'ಅವಸ್ಥೆ' ಕಾದಾಂಬರಿಯಲ್ಲಿ ಕೃಷ್ಣಪ್ಪನಿಗೆ ಅಣ್ಣಾಜಿಯು ಆದರ್ಶವಾದಿಯಾಗಿರುತ್ತಾನೆ. ಚನ್ನವೀರಯ್ಯನ ಹೆಂಡತಿ ಉಮೆಯೊಂದಿಗೆ ಅನೈತಿಕ ಸಂಬಂಧವನ್ನು ಹೊಂದಿರುವುದು ಸರಿಯೆಂದು ಅಣ್ಣಾಜಿ ಸಮರ್ಥಿಸಿಕೊಳ್ಳುತ್ತಾನೆ. ಚಳುವಳಿಯ ಸಂದರ್ಭದಲ್ಲಿ ಅಣ್ಣಾಜಿಯನ್ನು ಪೋಲಿಸರು ಬಂಧಿಸಿದಾಗ ಬಂಧಿಖಾನೆಯಲ್ಲಿಯೇ ಸಾವನ್ನಪ್ಪುತ್ತಾನೆ. ಅಣ್ಣಾಜಿಯ ದೌರ್ಬಲ್ಯ ವಿಚಾರಗಳನ್ನು ತಿಳಿದ ಕೃಷ್ಣಪ್ಪನಿಗೆ ಮನುಷ್ಯನ ಸ್ವಭಾವದ ಟೊಳ್ಳುತನದ ಅನುಭವವಾಗುತ್ತದೆ. ಪೋಲಿಸ್ ಠಾಣೆಯಲ್ಲಿ ಅಸಹಾಯಕ ಸ್ತ್ರೀ ಮೇಲೆ ಅತ್ಯಾಚಾರ ನಡೆದಿರುವುದನ್ನು ತಿಳಿದು ಬಂಧಿಖಾನೆಯೊಳಗಿನಿಂದಲೇ ಪ್ರತಿಭಟನೆಯನ್ನು ಮಾಡುತ್ತಾನೆ. ಮಹೇಶ್ವರಯ್ಯನ ಸಹಾಯದಿಂದ ರೈತರ ಹೋರಾಟದಲ್ಲಿ ಪಾಲ್ಗೊಂಡು ರಾಜಕೀಯ ಮುಖಂಡನಾಗುತ್ತಾನೆ. ವೈಚಾರಿಕ ಮನೋಭಾವನೆಯ ಕೃಷ್ಣಪ್ಪನು ಜನಪರ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾನೆ.

ತನಗೆ ಕಾಯಕಲ್ಪದ ಚಿಕಿತ್ಸೆಯನ್ನು ಮಾಡಿದ ಗೌರಿಯೊಡನೆ ಕೃಷ್ಣಪ್ಪನಿಗೆ ಇಡಿಯಾದ ಸಂಬಂಧವನ್ನು ಸಾಧಿಸಲು ಸಾಧ್ಯವೆನಿಸುತ್ತದೆ. ತನಗೆ ಪ್ರೇಮ ಮುಖ್ಯ. ಅದನ್ನು ಕಳೆದುಕೊಂಡರೆ ಕ್ರಾಂತಿ ಸಾಧ್ಯವಿಲ್ಲ ಎಂದುಕೊಳ್ಳುತ್ತಾನೆ. ಇದರಿಂದ ಕೃಷ್ಣಪ್ಪನ ನಿಲುವು ಅವನು ಹೊಸದಾಗಿ ಕಂಡುಕೊಂಡ ನೈತಿಕ ಮೌಲ್ಯಗಳ ಮೂಲಕ ಸಾಧ್ಯವಾಗುತ್ತದೆ. ಅಸೆಂಬ್ಲಿಗೆ ರಾಜೀನಾಮೆ ಕೊಡುವ ನೈತಿಕ ಕ್ರಿಯೆಯನ್ನು ಪೂರೈಸಿಯೂ ಕೂಡ ಕೃಷ್ಣಪ್ಪ ತನ್ನ ಸೋಲನ್ನು ಒಪ್ಪಿಕೊಳ್ಳುತ್ತಾನೆ.

'ಭವ' ಕಾದಂಬರಿಯಲ್ಲಿ ಶಾಸ್ತ್ರಿಯು ರಾಧ ಎಂಬುವಳೊಡನೆ ಅನೈತಿಕ ಸಂಬಂಧವನ್ನು ಹೊಂದಿರುತ್ತಾನೆ. ಅವಳ ಒಪ್ಪಿಗೆಯ ಮೇರೆಗೆ ಸರೋಜಳನ್ನು ಮದುವೆಯಾಗುತ್ತಾನೆ. ಸರೋಜ ಓಡಿ ಹೋದಳೆಂದು ತಿಳಿದಾಗ ಮಹದೇವಿಯನ್ನು ಮದುವೆಯಾಗುತ್ತಾನೆ. ದಿನಕರನು ಹಲವಾರು ಹೆಣ್ಣುಗಳ ಜೊತೆ ಸಂಬಂಧವನ್ನಿಟ್ಟುಕೊಂಡು ಹೆಂಡತಿಯು ಬೇರೆ ಗಂಡಸಿನೊಂದಿಗೆ ಸಲುಗೆಯಿಂದಿರಬಾರದೆಂದು ಬಯಸುತ್ತಾನೆ. ನಾರಾಯಣ ತಂತ್ರಿಯು ಹೆಂಡತಿ ಸತ್ತ ಮೇಲೆ ಗಂಗೂಬಾಯಿಯೊಡನೆ ಸಂಬಂಧ ಬೆಳೆಸುತ್ತಾನೆ. ಮದುವೆಯಾದ ಗಂಗೂಬಾಯಿ ಮೊದಲು ದಿನಕರನೊಡನೆ ಸಂಬಂಧ ಬೆಳೆಸಿದರೆ, ನಂತರದಲ್ಲಿ ನಾರಾಯಣತಂತ್ರಿಯೊಡನೆ ಸಂಬಂಧ ಬೆಳೆಸಿರುತ್ತಾಳೆ. ಕತೆಯಲ್ಲಿ ಬರುವ ಶಾಸ್ತ್ರಿ, ದಿನಕರ ಹಾಗೂ ನಾರಾಯಣ ತಂತ್ರಿ ಇವರೆಲ್ಲರೂ ವೈಯಕ್ತಿಕವಾಗಿ ವ್ಯಕ್ತಿ ಸ್ವಾತಂತ್ರ್ಯವನ್ನು ಬಯಸುತ್ತಾರೆ.

'ದಿವ್ಯ' ಕಾದಂಬರಿಯಲ್ಲಿ ಬಾಲ ವಿಧವೆಯಾದ ಸರಸ್ವತಿ ದುರುಗಪ್ಪ ಶಿಕ್ಷಕನೊಂದಿಗೆ ಸಂಬಂಧ ಬೆಳೆಸುತ್ತಾಳೆ. ಮಕ್ಕಳಿಲ್ಲದ ಜಲಜ ಕರಿಯನೊಂದಿಗೆ ಸಂಬಂಧ ಬೆಳೆಸಿದಾಗ ಅವಳ ಗಂಡ ಕರಿಯನನ್ನು ಕೊಂದು ಹಾಕುತ್ತಾನೆ. ಮಂಜಯ್ಯನ ಮಗಳು ವಿಮಲಾ ವಿಧವೆಯಾಗಿದ್ದು, ಮೈಕಲ್ ನೊಡನೆ ಸಂಬಂಧ ಬೆಳೆಸುತ್ತಾಳೆ. ಮಂಜಯ್ಯನು ಸ್ತ್ರೀ ಲೋಲುಪನಾಗಿದ್ದಾನೆ. ಮನುಷ್ಯ ಪ್ರಕೃತಿ ಹಾಗೂ ಕೌಟುಂಬಿಕ ನೆಲೆಗಳು ಚಿತ್ರಿತವಾಗಿವೆ. ಅನೇಕ ರೀತಿಯ ಗಂಡು ಹೆಣ್ಣಿನ ಸಂಬಂಧಗಳು ಶೋಧನೆಯಾಗಿವೆ. ಲೌಖಿಕ ಹಾಗೂ ದೈಹಿಕ ನೆಲೆಗಳನ್ನು ಮೀರಿ ದುರುಗ ಸರಸ್ವತಿಯರಲ್ಲಿ ಆಕೆ ವಿಧವೆಯೆಂಬುದಾಗಲೀ, ಅವನು ಹರಿಜನನೆಂಬುದಾಗಲಿ ಅವರ ಗಮನಕ್ಕೆ ಬರುವುದಿಲ್ಲ.

ಇಲ್ಲಿನ ಕೃತಿಗಳಲ್ಲಿ ಪ್ರಕಟಗೊಂಡ ನಾಯಕರು ಸಾಮಾಜಿಕವಾಗಿ ತಮ್ಮ ನೆಲೆಗಳ ಹುಡುಕಾಟದಲ್ಲಿ ತಮ್ಮ ಅಸ್ತಿತ್ವಕ್ಕೆ ಧಕ್ಕೆ ತರುತ್ತಿರುವ ಅಂಶಗಳನ್ನು ಅನುಭವಿಸಿ ಅದರಿಂದ ಪರಕೀಯರಾಗಿ ಪರಕೀಯತೆಯಿಂದ ಹೊರ ಬರಲು ಮತ್ತು ಅದರಲ್ಲೇ ಲೀನವಾಗಲು ಬಯಸಿದ ಕ್ಷೇತ್ರದಲ್ಲಿ ಕಾಮವು ಒಂದು. ಕಟ್ಟುಪಾಡುಗಳನ್ನೇ ಜೀವನದ ಅಳತೆಗೋಲಾಗಿರಿಸಿಕೊಂಡು ಅದರಲ್ಲಿಯೇ ಬದುಕಿನ ಎಲ್ಲ ಸಂವೇದನಗಳು ಅಭಿವ್ಯಕ್ತಿಗೊಳ್ಳಬೇಕೆಂಬ ನಿಟ್ಟಿನಲ್ಲಿ ಕಟ್ಟು ಪಾಡುಗಳೇ ಮುಖ್ಯವಾಗಿ ಸಂವೇದನೆಗೆ ಬೆಲೆಯಿಲ್ಲದಾಗುತ್ತದೆ. ಈ ಬಿರುಕು ಕೃತಕವಾದಂತೆಲ್ಲಾ ದ್ವಂದ್ವವನ್ನೆದುರಿಸುತ್ತಾರೆ.

ಮೂಲಭೂತ ಸಂವೇದನೆಯಾದ ಕಾಮವು ಜಾಗೃತವಾಗಿ ಆಧುನಿಕ ಪಾಶ್ಚಿಮಾತ್ಯ ವಿದ್ಯಾಭ್ಯಾಸದಿಂದಾಗಿ ಇದ್ದಂತಹ ಲೈಂಗಿಕ ಸ್ವಾತಂತ್ರವನ್ನು ನಮ್ಮ ನೆಲದಲ್ಲೂ ಪಡೆಯಲು ತವಕಿಸಿದರು. ಲೈಂಗಿಕ ಸ್ವಾತಂತ್ರ ತಪ್ಪಲ್ಲವೆನ್ನುವ ಮನೋಭಾವ ಬೆಳೆಯುತ್ತಿದ್ದಂತೆ ಮುನ್ನುಗ್ಗಿದ ಅವರ ಬಯಕೆಗಳು ಪರಂಪರೆಯ ಬಿಗಿ ಹಿಡಿತಕ್ಕೆ ಸಿಕ್ಕಿ ಗೊಂದಲಗೊಂಡಾಗ ಇದರಲ್ಲಿಯೇ ತಮ್ಮ ಬಿಡುಗಡೆಯ ಹಾದಿಯನ್ನು ಹುಡುಕತೊಡಗಿದರು. ತಮ್ಮ ಬಯಕೆಗಳ ಅಭಿವ್ಯಕ್ತಿಗೆ ಅಡ್ಡಿಯಾದ ಪರಂಪರೆಯ ಮಿತಿಯನ್ನು ಮೀರಿ ವೈಯಕ್ತಿಕ ಅನುಭವವಾದ ಕಾಮಕ್ಕೆ ಪ್ರಾಧಾನ್ಯತೆ ನೀಡಿದರು. ಹೀಗಾಗಿ ಅವರು ಪ್ರತಿಭಟನೆಗೆಂದು ಕಾಮವನ್ನು ಬಳಸಿಕೊಂಡರು. ಚೌಕಟನ್ನು ಮೀರಿದ್ದು ಸರಿಯೆನ್ನುವುದು ಅನ್ವೇಷಣೆಯ ನೆಲೆಯಾಯಿತು. ಚೌಕಟ್ಟನ್ನು ದಾಟುವುದಕ್ಕೆ ವಿವಾಹವನ್ನು ಸಾಧನವಾಗಿ ಬಳಸಿದ ಸಂದರ್ಭದಲ್ಲಿ ಹೆಣ್ಣನ್ನು ಬಯಕೆಯ ತೃಪ್ತಿಗೆ ಬಳಸಿಕೊಂಡರು ಅಲ್ಲದೆ ಪ್ರತಿಭಟನೆಗೆ ಅವಶ್ಯಕವಾದ ಮತ್ತು ವ್ಯಕ್ತಿಯ ಅಸ್ತಿತ್ವಕ್ಕೆ ಅವಳನ್ನು ಮೆಟ್ಟಿಲಂತೆ ಬಳಸಿಕೊಂಡರು.

ಹೀಗೆ ಪ್ರತಿಭಟನೆಯ ಸಾಧನವಾಗಿ ಆಯ್ಕೆ ಮಾಡಿಕೊಳ್ಳುವ ಕಾಮವು, ಬಯಕೇನ ಅನ್ವೇಷಣೆಯಲ್ಲಿ ತಾತ್ವಿಕವಾದ ಯಾವ ಅಂಶವನ್ನು ಪ್ರತಿಪಾದಿಸುತ್ತದೆಂಬ ಸಂಶಯ ಆರಂಭವಾಗುತ್ತದೆ. ಏಕೆಂದರೆ ಪರಂಪರೆಯ ವಿರುದ್ಧ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲ್ಲು ಹೊರಟವರಿಗೆ, ವ್ಯಕ್ತಿಯ ಸಹಜ ಅಭಿವ್ಯಕ್ತಿಯಾದ ಕಾಮವು, ಇಡೀ ಬದುಕಿನ ಎದುರಿಗೆ ಯಾವ ಮೌಲ್ಯವನ್ನು ಸ್ಥಾಪಿಸಲು ಹೊರಟಿದೆ ಎಂಬ ಪ್ರಶ್ನೆ ಕಾಡುತ್ತದೆ. ಪರಂಪರೆಯ ಹಿಡಿತಕ್ಕೆ ಸಿಕ್ಕದೆ ತಮ್ಮ ವಿಶಿಷ್ಟತೆಯನ್ನು ರೂಪಿಸಿಕೊಳ್ಳಲು ಹವಣಿಸುವವರು, ತಮ್ಮ ವಿಶಿಷ್ಟತೆಯನ್ನು ತಮ್ಮ ಅಪೇಕ್ಷೆಯ ಹೆಣ್ಣನ್ನು ಆಯ್ಕೆ ಮಾಡಿಕೊಳ್ಳುವುದರ ಮೂಲಕ ಪರಂಪರೆಗೆ ವಿರುದ್ಧವಾಗಿ ತಮ್ಮ ವ್ಯಕ್ತಿ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುತ್ತಾರೆ. ಹೀಗೆ ಪರಂಪರೆಯ ವಿರುದ್ಧ ತನ್ನ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವವರು ಅದರ ಜವಾಬ್ದಾರಿಯನ್ನು ಹೊರುವುದರ ಮೂಲಕ ಪರಂಪರೆಯು ಕೊಟ್ಟ ಮೌಲ್ಯಗಳನ್ನು ನಿರ್ಲಕ್ಷಿಸಿ ತಮ್ಮದೇ

ಆದ ಬದುಕಿನ ಹಾದಿಗಳನ್ನು ಹುಡುಕುತ್ತಾರೆ. ಹೀಗೆ ವ್ಯಕ್ತಿವಾದವನ್ನು ಎತ್ತಿ ಹಿಡಿದು, ಪರಂಪರೆಯ ಬಂಧನದಿಂದ ಸ್ವಾತಂತ್ರ ಮತ್ತು ಜವಾಬ್ದಾರಿಯ ಮೂಲಕ ವ್ಯಕ್ತಿತ್ವಕ್ಕೆ ಹೆಚ್ಚಿನ ಮಾನ್ಯತೆ ದೊರಕಿಸಿಕೊಡುತ್ತಾರೆ.

ಅಸ್ತಿತ್ವವಾದವನ್ನು ಪಾಶ್ಚಾತ್ಯ ನಾಯಕರು ಮನುಷ್ಯ ಪ್ರಯತ್ನದ ನಿರರ್ಥಕತೆಯನ್ನು ಒಪ್ಪಿಕೊಳ್ಳುವ ಮಿತಿಯಲ್ಲಿ ಗುರುತಿಸಿಕೊಳ್ಳುತ್ತಾರೆ. ಆದರೆ ಇಂತಹ ತಾತ್ವಿಕತೆಯನ್ನು ಸ್ವಾತಂತ್ರ್ಯೋತ್ತರ ಸಾಹಿತ್ಯ ಕೃತಿಗಳಲ್ಲಿನ ನಾಯಕರು ವೈಯಕ್ತಿಕತೆಗೆ ಒತ್ತು ನೀಡಿ ಅದಕ್ಕೆ ಅಡ್ಡಿಯಾದ ಪರಂಪರೆಯನ್ನು ಮತ್ತು ಆ ಸಂದರ್ಭದಲ್ಲಿ ಎದುರಾಗುವ ಪರಿಣಾಮವನ್ನು ಹುಡುಕುತ್ತಾರೆ. ಈ ರೀತಿ ಕಾಮವು ಬಂಧನ ಮತ್ತು ಬಿಡುಗಡೆಯನ್ನು ವ್ಯಕ್ತಿ ಅನುಭವಿಸಿದ ಕ್ಷೇತ್ರವಾಗಿದೆ. ಈ ನಿಟ್ಟಿನಲ್ಲಿ ಸ್ವಾತಂತ್ರ್ಯೋತ್ತರ ಬರಹಗಾರರು ಆರಿಸಿಕೊಂಡ ಮಾದರಿಗಳು ಭಿನ್ನವಾಗಿದ್ದರೂ ಮೂಲ ಒಂದೇ ಆಗಿದೆ. ಇಲ್ಲಿ ಕಾಮವನ್ನು ಅನ್ವೇಷಣೆಯ, ಪ್ರತಿಭಟನೆಯ ಸಾಧನವಾಗಿ ಬಳಸಲಾಗಿದೆ. ತಾರುಣ್ಯದಲ್ಲಿನ ದೈಹಿಕ ತಲ್ಲಣಗಳು ವೈಯಕ್ತಿಕ ಅನುಭವವಾದಾಗ ಅಲ್ಲಿನ ಸೂಕ್ಷ್ಮಾತೀ ಸೂಕ್ಷ್ಮಗಳನ್ನು ಸಂಕೀರ್ಣತೆಯಲ್ಲಿ ಹಿಡಿದಿಟ್ಟರು. ಇದು ವ್ಯಕ್ತಿಯ ಶೋಧನೆಗೆ ಬಳಕೆಯಾಗಿದ್ದು, ಕಾಮವು ವಾಚ್ಯ ನೆಲೆಯಲ್ಲಿ ರೂಪುಗೊಂಡಿದೆ. ಆದ್ದರಿಂದ ಇಲ್ಲಿನ ನಾಯಕರು ಸಾಮಾಜಿಕ ನೆಲೆಯಲ್ಲಿ ತನ್ಮಯತೆಯನ್ನು ಪಡೆಯುವುದಿಲ್ಲ. ಕಾಮವನ್ನು ವಸ್ತುವಾಗಿ ಬಳಸಿದ್ದು, ಅದು ಸಾಂಸ್ಕೃತಿಕವಾಗಿ ಒಂದು ಹಂತದ ಮನುಷ್ಯನ ಪ್ರಜ್ಞೆಯನ್ನು ಅನಾವರಣಗೊಳಿಸುತ್ತದೆ.

ಪ್ರತಿಭಟನೆಯ ನೆಲೆಯಿಂದ ಪರಂಪರೆಯ ಬಗೆಗೆ ತಮ್ಮ ವಿರೋಧ ವ್ಯಕ್ತಪಡಿಸುತ್ತಾ ಸಾಹಿತ್ಯ ರಚಿಸಲು ಪ್ರಾರಂಭಿಸಿದ ಅನಂತಮೂರ್ತಿಯವರ ಆರಂಭದ ದೃಷ್ಟಿಕೋನವು ಈ ನೆಲದ ಬಗೆಗೆ, ಇಲ್ಲಿನ ಜೀವನ ದೃಷ್ಟಿಕೋನದ ಬಗೆಗೆ ಋಣಾತ್ಮಕವಾಗಿತ್ತು. ಸ್ವಾತಂತ್ರ್ಯ ನಂತರದಲ್ಲಿ ಅವರ ಕೃತಿಗಳಲ್ಲಿ ಕಾಣಿಸಿಕೊಂಡ ನಾಯಕರು ಪರಂಪರೆಯ ಬಗೆಗೆ ಹೊಂದಿದ್ದ ಉಪೇಕ್ಷೆಯ, ಸಿಟ್ಟಿನ ಆಕ್ರೋಶದ ನೆಲೆಯವರಾಗಿದ್ದರು. ಇದು ಆ ಕಾಲಮಾನದ ವಿದ್ಯಾವಂತ ತರುಣರ ಉದ್ವೇಗ ಆಕ್ರೋಶವು ಅನಂತಮೂರ್ತಿಯವರ ಬರಹಗಳಲ್ಲಿ ರೂಪುಪಡೆದಿತ್ತು. ನಂತರ ಪರಂಪರೆಯನ್ನು ವಿಶ್ಲೇಷಿಸಿಕೊಳ್ಳುವ ನೆಲೆಯಿಂದ ಬದುಕನ್ನು ತಾತ್ವಿಕವಾಗಿ ನೋಡುವ ದೃಷ್ಟಿಕೋನದೆಡೆಗೆ ಅನಂತಮೂರ್ತಿಯವರು ಹೊರಳಿದರು. ಸ್ವಾತಂತ್ರ್ಯೋತ್ತರದಲ್ಲಿ ಪಾಶ್ಚಿಮಾತ್ಯರಿಂದ ಪ್ರಭಾವಿತರಾಗಿದ್ದ ಅವರು ಬದುಕನ್ನು ಗ್ರಹಿಸಿಕೊಳ್ಳಲು ಸಂಸ್ಕೃತಿಯಲ್ಲಿ ಇರುವ ತಾತ್ವಿಕ ನಿಲುವುಗಳನ್ನು ತಮ್ಮ ತಲ್ಲಣ, ಉದ್ವೇಗ, ಆಕ್ರೋಶದ ಸ್ಥಿತಿಗಳನ್ನು ಅಭಿವ್ಯಕ್ತಿಸಲು ಸಹಾಯಕವಾದ ತಾತ್ವಿಕತೆಯೊಡನಿಟ್ಟು ಪರೀಕ್ಷಿಸಿದರು. ಉದಾಹರಣೆಗೆ ಸೂರ್ಯನ ಕುದುರೆ , ಅಕ್ಕಯ್ಯ , ದಿವ್ಯ ಮುಂತಾದವನ್ನು ಗಮನಿಸಬಹುದು. ಈ ಕೃತಿಗಳಲ್ಲಿ ವ್ಯಕ್ತಿ ನಿಷ್ಟ ನೆಲೆಯಲ್ಲಿ ಇದುವರೆಗೂ ನೋಡುತ್ತಿದ್ದ ಮಾದರಿಯಲ್ಲಿಯೇ ಬದುಕನ್ನು ತಾತ್ವಿಕತೆಯಿಂದ ನೋಡುತ್ತಾ ಅವುಗಳ ಮಿತಿಯನ್ನು ಗುರುತಿಸಿದರು.

ಪರಂಪರೆಯ ಮಿತಿಯನ್ನು ತಾತ್ವಿಕತೆಯನ್ನು ಆಳವಾದ ವಿಶ್ಲೇಷಣೆ ತರ್ಕಕ್ಕೊಳಪಡಿಸಿ ನೋಡುತ್ತಿದ್ದ ಅನಂತಮೂರ್ತಿಯವರ ದೃಷ್ಟಿಕೋನ ಹೆಚ್ಚು ವೈಚಾರಿಕತೆಯಿಂದ ಕೂಡಿತ್ತು. ವ್ಯಕ್ತಿ ವಿಶಿಷ್ಟತೆಗೆ ಹೆಚ್ಚು ಒತ್ತು ನೀಡುತ್ತಾ ಅವನು ತನ್ನ ವ್ಯಕ್ತಿ ವಿಶಿಷ್ಟತೆಯನ್ನು ಈ ಬದುಕಿನಲ್ಲಿ ಗುರುತಿಸಿಕೊಂಡು ಬಾಳಬೇಕಾದ ನಿಟ್ಟಿನಲ್ಲಿ ಸ್ವಾತಂತ್ರ್ಯವನ್ನು ತನ್ನ ವಿಶಿಷ್ಟತೆಯ ಸಾಧನೆಗೆ ಬಳಸಿಕೊಳ್ಳಬೇಕೆಂಬ ಧೋರಣೆ ಹೊಂದಿದ್ದರು. ಅನಂತಮೂರ್ತಿಯವರ ದೃಷ್ಟಿಕೋನ ಪ್ರಜ್ಞೆಗೆ ಹೆಚ್ಚು ಒತ್ತುಕೊಟ್ಟು ಪ್ರತಿಯೊಂದನ್ನು ವಿಶ್ಲೇಷಣೆಗೊಳಪಡಿಸಿ ನೋಡುವ ಮಾದರಿಯಾಗಿದೆ. ಅಲ್ಲದೇ ಸಾಮಾಜಿಕ ಸಮಸ್ಯೆ ತಾತ್ವಿಕ ಸಮಸ್ಯೆಯ ಪರಿಹಾರವನ್ನು ವೈಚಾರಿಕತೆಯ ಒಿನ್ನೆಲೆಯಲ್ಲಿ ಗುರುತಿಸುತ್ತಾರೆ.

[illegible]

[illegible]

[illegible]

[illegible]

ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ವೈಚಾರಿಕತೆ ಮತ್ತು ಸ್ವಾತಂತ್ರ್ಯದ ನಡುವೆ ಸಂಘರ್ಷವಿದೆ. ಪರಂಪರಾಗತ ಮೌಲ್ಯಗಳನ್ನು ಬೌದ್ಧಿಕ ಹಿನ್ನೆಲೆಯಲ್ಲಿ ಶೋಧಿಸುವ ಇವರ ಸಾಹಿತ್ಯದಲ್ಲಿ ವೈಚಾರಿಕತೆಯು ನವ್ಯ ಚಳುವಳಿ ಮತ್ತು ಪಾಶ್ಚಾತ್ಯ ಸಿದ್ಧಾಂತಗಳ ಪರಿಪಾಕದಲ್ಲಿ ಹುರಿಗೊಂಡಂಥವು. ಸ್ವಾತಂತ್ರ್ಯ ಆಗತಾನೇ ಕನ್ನಡ ನೆಲದಲ್ಲಿ ಸಾಹಿತ್ಯದ ಮೂಲಕ ಜೀವನ ಕ್ರಮವನ್ನು ನಿರ್ಧರಿಸುತ್ತಿದ್ದ ಬಗೆಗೆ ಸಮಾಜ ಎದುರಿಸುತ್ತಿದ್ದ ಪರಂಪರೆಯ ಮುಸುಕನ್ನು ದಾಟಿ ವಾಸ್ತವ ಅಥವಾ ವೈಚಾರಿಕತೆಯ ನಿಕಷಕ್ಕೆ ಬರಹವನ್ನು ನವ್ಯರು ಅದರಲ್ಲಿಯೂ ಅನಂತಮೂರ್ತಿಯವರು ಅಭಿವ್ಯಕ್ತಿ ಪಡಿಸುವ ಕ್ರಮ ಕತೆಗಳಲ್ಲಿ ಅಡಗಿದೆ. ಲೇಖಕರು ಒಂದರ್ಥದಲ್ಲಿ ನವ್ಯದ ವೈಚಾರಿಕತೆಯನ್ನು ಪ್ರಖರವಾಗಿ ಮಂಡಿಸಿದವರು. ಅದರೊಂದಿಗೆ ವಸ್ತು, ಅದರ ಆಯ್ಕೆಯ ಕ್ರಮ, ಕಥಾಸಂವಿಧಾನ ಮತ್ತು ತಂತ್ರ, ಅಭಿವ್ಯಕ್ತಿಯ ಮಾದರಿ ಇವುಗಳಲ್ಲೆಲ್ಲಾ ಪರಂಪರೆಯೊಡನೆ ವೈಚಾರಿಕತೆ ಮಿಳಿತಗೊಳ್ಳುತ್ತಲೇ ವಾಸ್ತವ ಜಗತ್ತನ್ನು ಅನಾವರಣಗೊಳಿಸುತ್ತಾರೆ. ಎಂಬ ವಿಚಾರಗಳನ್ನು ಜೀವನ ಮತ್ತು ಸಿದ್ಧಾಂತ, ಬದುಕು ಮತ್ತು ಸಾವಿನ ಪ್ರಶ್ನೆ, ಸಾಫಲ್ಯ ಸಾಧ್ಯತೆ ಹಾಗೂ ನೈತಿಕತೆ ಎಂಬ ಉಪ ಶೀರ್ಷಿಕೆಗಳಡಿಯಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಅಡಿ ಟಿಪ್ಪಣಿಗಳು

೧. ಗಿರಡ್ಡಿ ಗೋವಿಂದರಾಜು;ಡಾ.ಯು.ಆರನಂತಮೂರ್ತಿ;ಸಂ.ಮೋಹನ್‌ಕುಂಟಾರ; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ;ಹಂಪಿ;೧೯೯೫ ; ಪು:೨೪.

೨. ರೇಣುಕಾರಾಧ್ಯಎಸ್.ಆರ್;ಅನಂತಮೂರ್ತಿಯವರಕಥಾಸಾಹಿತ್ಯ;ಸಂ.ರಾಧಿಕಜಿ.ಎನ್;೧೯೭೬;ಪು;೩೪

೩. ಆಮೂರ ಜಿ.ಎಸ್ ; ಅನಂತಮೂರ್ತಿ ಕಥೆಗಳು ; ಕನ್ನಡ ಪ್ರಭ; ದೀಪಾವಳಿ ವಿಶೇಷಾಂಕ ; ೨೦೦೨; ಪು:೩೩.

೪. ಆಮೂರ ಜಿ.ಎಸ್ ; ಅನಂತಮೂರ್ತಿ ಕಥೆಗಳು ; ಕನ್ನಡ ಪ್ರಭ; ದೀಪಾವಳಿ ವಿಶೇಷಾಂಕ ; ೨೦೦೨; ಪು:೩೨

೫. ಮಳಲಿವಸಂತಕುಮಾರ್;ಸಂಸ್ಕಾರ;ಸ್ವಸ್ತಿ;ತಳುಕಿನವೆನಕಣ್ಣಯ್ಯಸ್ಮಾರಕಗ್ರಂಥಮಾಲೆ;ಮೈಸೂರು; ೧೯೮೩;ಪು;೮೨.

೬. ವಿಜಯಕುಮಾರ್.ಜಿ ; ಅನಂತಮೂರ್ತಿ ಕಥೆಗಳು ; ಚಿನ್ಮಯ ; ಗ್ರಂಥ ಪ್ರಕಟಣ ಸಮಿತಿ;ಚಿತ್ರದುರ್ಗ;೧೯೭೯ ; ಪು: ೧೦೨.

೭. ಕೃಷ್ಣಮೂರ್ತಿ ಎಂ.ಜಿ;ಅನಂತಮೂರ್ತಿಯವರ ಸಂಸ್ಕಾರ;ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು;ಅಕ್ಷರ ಪ್ರಕಾಶನ;ಸಾಗರ;೧೯೭೦;ಪು;೨೦೬.

ಸಮಾರೋಪ

ಸಮಾರೋಪ

ಸಾಂಸ್ಕೃತಿಕ ಸಂಘರ್ಷದ ಅನನ್ಯ ಜಗತ್ತು

ಅನಂತಮೂರ್ತಿವರ ಕಥನಸಾಹಿತ್ಯದಲ್ಲಿ ವೈದಿಕ–ಅವೈದಿಕ, ವೈಚಾರಿಕತೆ–ಮೂಢನಂಬಿಕೆ, ಪರಂಪರೆ–ಆಧುನಿಕತೆ, ಗ್ರಾಮೀಣ–ನಗರ, ಸಿಟ್ಟು–ಪ್ರೀತಿ, ಸೋಲು–ಗೆಲುವು, ಒಳಿತು–ಕೆಡುಕು ಹಾಗೂ ಜ್ಞಾನ–ಅಜ್ಞಾನ ಹೀಗೆ ಅನೇಕ ನೆಲೆಗಳಲ್ಲಿ ದ್ವಂದ್ವದ ಚಿತ್ರಣವಿದೆ. ಇಂತಹ ದ್ವಂದ್ವದಿಂದ ಹುಟ್ಟಿದ ಸಂಘರ್ಷವು ರಾಜಕೀಯ, ಸಾಮಾಜಿಕ ಸಾಂಸ್ಕೃತಿಕ ಸ್ವರೂಪವನ್ನು ಪಡೆದು ವಿಸ್ತರಿಸಿದೆ. ಇದನ್ನು ಶೋಧಿಸುತ್ತಾ ಹೋದರೆ ಒಬ್ಬ ವ್ಯಕ್ತಿಗೂ ಹುಟ್ಟಿ ಬಾಳಿದ ಸಮಾಜಕ್ಕೂ ಇರಬಹುದಾದ ಅಂತರವನ್ನು ಮತ್ತು ಅಂತರಕ್ಕೆ ಕಾರಣವನ್ನು ಕಂಡುಕೊಳ್ಳಬಹುದು. ಕೆಲವೊಮ್ಮೆ ಇದು ವಿಭಿನ್ನ ಸ್ತರಗಳ ಜನಸಮುದಾಯದ ಒಲವು ನಿಲುವುಗಳ ಸಂಘರ್ಷವಾದರೆ, ಕೆಲವೊಮ್ಮೆ ವೈಚಾರಿಕ ಬುದ್ಧಿಯ ಸಂಘರ್ಷವಾಗಿ ಗೋಚರವಾಗುತ್ತದೆ. ಈ ಸಂಘರ್ಷವು ಸಮಾಜದಲ್ಲಿ ವಾಸ್ತವ ಸಂಗತಿಯಾಗಿದೆ. ಸಂಸ್ಕೃತಿಯ ಅನೇಕ ನಿಗೂಢಗಳು ವ್ಯಕ್ತಿಯ ಬದುಕಿನಲ್ಲಿ ಸಾಂಪ್ರದಾಯಿಕವಾಗಿ ನಂಬಿಕೆಯ ರೂಪದಲ್ಲಿ, ಆಚರಣೆಯ ರೂಪದಲ್ಲಿ ಬೆನ್ನು ಹತ್ತುತ್ತವೆ. ಇವುಗಳನ್ನು ಬಿಟ್ಟಿರಲಾರದೆ ಅವುಗಳ ಜೊತೆ ಸಂಘರ್ಷಪೂರ್ಣ ಬದುಕು ಸಾಗಿಸುವ ಜನ–ವರ್ಗ, ಅವುಗಳಿಂದ ಹೊರಬರಲು ಹೆಣಗಾಡುವ ಚಿತ್ರಣಗಳು ಇಲ್ಲಿವೆ. ಇಂತಹ ಸ್ಥಿತಿಯೊಂದರ ಅಧ್ಯಯನವು ಸಾಹಿತ್ಯಕವಾಗಿಯಷ್ಟೇ ಅಲ್ಲ ಸಾಂಸ್ಕೃತಿಕವಾಗಿಯೂ ಮುಖ್ಯವಾಗಿದೆ. ಅವುಗಳ ಸಂಘರ್ಷದ ಸ್ವರೂಪವನ್ನು ವಿಶ್ಲೇಷಿಸುತ್ತಾ ಹೋದಲ್ಲಿ ಅನಂತಮೂರ್ತಿಯವರು ಮೂಡಿಸಿದ ಸಾಂಸ್ಕೃತಿಕ ಎಚ್ಚರಿಕೆಯ ಸ್ವರೂಪವು ವ್ಯಕ್ತವಾಗುತ್ತದೆ.

ಸಂಸ್ಕೃತಿಯನ್ನು ಜೀವನ ವಿಧಾನವನ್ನು ನಿರ್ಮಾಣ ಮಾಡುವ ಪ್ರತ್ಯಕ್ಷ ಇಲ್ಲವೆ ಪರೋಕ್ಷ ಚಿಂತನೆ ಎಂಬ ಹಿನ್ನೆಲೆಯಲ್ಲಿ ಗ್ರಹಿಸಲಾಗಿದೆ. ವ್ಯಕ್ತಿಪ್ರಜ್ಞೆ ಅಭಿವ್ಯಕ್ತಿಸುವ ಸಮಷ್ಠಿಯ ಆಶಯವನ್ನು ನೋಡುವ ಸಂದರ್ಭದಲ್ಲಿ ಸಂಸ್ಕೃತಿಯನ್ನು ಗಮನಿಸಲಾಗಿದೆ. ಸಂಪ್ರದಾಯ, ಪರಂಪರೆ, ಜಾತೀಯತೆ, ಬದುಕು ಮತ್ತು ಸಾವಿನ ಪ್ರಜ್ಞೆ ಹೀಗೆ ಹಲವು ಬಗೆಯಲ್ಲಿ ಜೀವನ ವಿಧಾನ ವ್ಯಕ್ತವಾಗುತ್ತದೆ. ಸಂಪ್ರದಾಯಗಳು ರೂಢಿಗತವಾಗಿ ಅನುಸರಿಸಿಕೊಂಡು ಬಂದಿರುವ ಆಚರಣೆಯ ವಿಧಾನಗಳಾಗಿವೆ. ಸಾಂಪ್ರದಾಯಕ ಜೀವನ ವಿಧಾನವನ್ನು ಅಳವಡಿಸಿಕೊಳ್ಳಲು ಪರಂಪರೆಯು ಪ್ರೇರಣೆ ನೀಡುತ್ತದೆ. ಅನೇಕ ವರ್ಷಗಳಿಂದ ರೂಢಿಗತವಾಗಿರುವ ಬದುಕಿನ ಬಗೆಗಿನ ತಾತ್ವಿಕ ಚಿಂತನೆಗಳನ್ನು ಸಂಸ್ಕೃತಿಯಲ್ಲಿ ಗುರುತಿಸಬಹುದು. ಮನುಷ್ಯನ ಚಿಂತನೆಯ ಮೇಲಾಗುವ ಪ್ರಭಾವವು ನಿಶ್ಚಿತ ಭೌಗೋಳಿಕ ಪರಿಸರದಲ್ಲಿ ಸಾಮಾಜಿಕ ಬದುಕಿನ ಬಗೆಗಿನ ಗ್ರಹಿಕೆಗಳನ್ನು ಪ್ರಭಾವಿಸುತ್ತಾ ಆ ಮೂಲಕ ಹಿಂದಿನ ಆಲೋಚನೆಗಳ ಮಿತಿಯನ್ನು ತಿಳಿಸಿಕೊಡುತ್ತದೆ. ಅನಂತಮೂರ್ತಿಯವರ ಕಥಾಸಾಹಿತ್ಯದ ಮೂಲಕ ಬದುಕಿನ ಗ್ರಹಿಕೆಯಲ್ಲಾದ ಮುಖ್ಯ ಬದಲಾವಣೆಗಳನ್ನು ಗುರುತಿಸಲಾಗಿದೆ.

ಅನಂತಮೂರ್ತಿಯವರ ಸಣ್ಣಕತೆ ಮತ್ತು ಕಾದಂಬರಿಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಇಲ್ಲಿ ಅಧ್ಯಯನವನ್ನು ನಡೆಸಲಾಗಿದೆ. ಪರಂಪರೆ ಮತ್ತು ಆಧುನಿಕತೆಯನ್ನು ರೂಪಿಸಿಕೊಂಡ ಸಮಾಜದಲ್ಲಿ ಸಂಪ್ರದಾಯ–ಆಧುನಿಕತೆ, ಪಾಶ್ಚಾತ್ಯ–ಪೌರಾತ್ಯ ಹಾಗೂ ತಲೆಮಾರುಗಳ ಸಂಘರ್ಷದ ಸ್ವರೂಪವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಸಮಾಜದ ಚಲನೆಯು ಬದುಕಿನ ಗ್ರಹಿಕೆಯಲ್ಲಿ ಆಂತರಿಕವಾಗಿ ಉಂಟು ಮಾಡುವ ಜಾತಿಯ ಪ್ರಭಾವ ಮತ್ತು ಪರಿಣಾಮವನ್ನು ಬ್ರಾಹ್ಮಣ–ಶೂದ್ರ, ಹೆಣ್ಣು–ಗಂಡು ಹಾಗೂ ವ್ಯಕ್ತಿ–ಸಮಾಜದ

[illegible]

[illegible]

[illegible]

[illegible]

ದೃಷ್ಟಿಕೋನದಿಂದ ನೋಡಲಾಗಿದೆ. ಆದರ್ಶ ಮತ್ತು ವಾಸ್ತವ ಜೀವನದಲ್ಲಿ ವ್ಯವಸ್ಥೆ–ಸಮಕಾಲೀನತೆ, ಸಾಂಕೇತಿಕತೆ–ವಾಸ್ತವಿಕತೆ ಹಾಗೂ ಅಂತರಂಗ–ಬಹಿರಂಗಕ್ಕೆ ಸಂಬಂಧಿಸಿದ ವಿಚಾರಗಳನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ. ಪ್ರಜ್ಞೆ ಮತ್ತು ಪರಿಸರದ ವಿಚಾರಗಳನ್ನು ಭೂತ–ವರ್ತಮಾನ, ವ್ಯಕ್ತಿತ್ವಗಳ ತಾಕಲಾಟ ಹಾಗೂ ಕಾಲ–ಪರಿಸರದ ಹಿನ್ನೆಲೆಯೊಂದಿಗೆ ವಿವೇಚಿಸಲಾಗಿದೆ. ವೈಚಾರಿಕತೆ ಮತ್ತು ಸ್ವಾತಂತ್ರ್ಯದ ವಿಚಾರಗಳು ಜೀವನ–ಸಿದ್ಧಾಂತ, ಬದುಕು–ಸಾವಿನಪ್ರಜ್ಞೆ ಹಾಗೂ ಸಾಫಲ್ಯಸಾಧ್ಯತೆ–ನೈತಿಕತೆಗೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ.

ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ ಎಂಬ ಈ ಅಧ್ಯಯನದ ಆಯಾ ಅಧ್ಯಾಯಗಳಲ್ಲಿಕಂಡುಕೊಂಡ ಮುಖ್ಯ ಫಲಿತಗಳನ್ನು ಸಂಕ್ಷಿಪ್ತವಾಗಿ ಹೀಗೆ ಸಂಗ್ರಹಿಸಬಹುದು.

ಅಧ್ಯಾಯ ಒಂದು ಪರಂಪರೆ ಮತ್ತು ಆಧುನಿಕತೆಗಳ ನಡುವಣ ಸಂಘರ್ಷಕ್ಕೆ ಸಂಬಂಧಿಸಿದೆ. ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಅನಾವರಣಗೊಳ್ಳುವ ಪರಂಪರೆಯು ಒಂದು ಮೌಲ್ಯವಾಗಿ ಅಭಿವಕ್ತಗೊಂಡರೆ, ಆಧುನಿಕತೆಯು ಪರಂಪರೆಗೆ ಒಂದು ಸವಾಲಾಗಿ ನಿಲ್ಲುತ್ತದೆ. ಕತೆಗಳುದ್ದಕ್ಕೂ ಪರಂಪರೆಯೆಂಬುದು ನಿಂತ ನೆಲೆಯಲ್ಲಿಯೇ ಸೃಜನಶೀಲತೆಗೆ ಅಡ್ಡಿಯಾದರೆ ಆಧುನಿಕತೆಯು ಅದನ್ನು ಮೀರಿನಿಲ್ಲುವ ಉಪಕ್ರಮವಾಗಿ ಕಂಡುಬರುತ್ತದೆ. ಪರಂಪರೆ ಮತ್ತು ಆಧುನಿಕತೆ ಎಂಬ ಪರಿಭಾಷೆಗಳು ಗ್ರಾಮೀಣ ಮತ್ತು ನಗರ ಸಂಸ್ಕೃತಿಯ ಸಂಘರ್ಷಕ್ಕೆ ಒಂದು ತಾತ್ವಿಕ ಚೌಕಟ್ಟನ್ನು ನಿರ್ಮಿಸಿಕೊಡುತ್ತವೆ. ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಇಂತಹ ಎರಡು ಸಂಸ್ಕೃತಿಗಳು ಪರಸ್ಪರ ಸಂಸ್ಕೃತಿಯ ಜಾಡಿನಲ್ಲಿ ಮುಖಾಮುಖಿಯಾಗುವುದೊಂದು ವಿಶೇಷವಾಗಿದೆ. ಕಾರಣವಾಗಿ ಇಲ್ಲಿನ ಕಥಾತಂತ್ರ ಒಂದೇ ನೆಲೆಯಲ್ಲಿ ದ್ವಿಮುಖಚಲನೆಯನ್ನು ಪಡೆದುಕೊಳ್ಳುತ್ತದೆ. ಇಂಥಲ್ಲಿ ಲೇಖಕರು ಕಟ್ಟಿಕೊಡುವ ಕಥಾಜಗತ್ತು ಔಚಿತ್ಯಪೂರ್ಣವಾದುದು. ಈ ಅಧ್ಯಾಯದುದ್ದಕ್ಕೂ ಇಂತಹ ಕೆಲವು ಮಾದರಿಗಳನ್ನು ಅವರ ಕಥೆಗಳ ಮುಖೇನ ಕಂಡುಕೊಳ್ಳಲಾಗಿದೆ.

ಅಧ್ಯಾಯ ಎರಡರಲ್ಲಿ ಸಮಾಜ ಮತ್ತು ಜಾತಿವ್ಯವಸ್ಥೆಗಳ ಮಧ್ಯದ ಸಂಘರ್ಷಕ್ಕೆ ಸಂಬಂಧಿಸಿದ ವಿಚಾರಗಳಿವೆ. ಸಮಕಾಲೀನ ಸಂಸ್ಕೃತಿಗೆ ಅನುಗುಣವಾಗಿ ವರ್ಗ ಮತ್ತು ವರ್ಣವ್ಯವಸ್ಥೆಯ ಕೆಲವು ಆಯಾಮಗಳನ್ನು ಅನಂತಮೂರ್ತಿಯವರ ಕಥೆಗಳಲ್ಲಿ ಚಿತ್ರಿಸಿದ ಬಗೆಗಳನ್ನು ಗುರುತಿಸಲಾಗಿದೆ. ಪರಂಪರೆಯ ಜಾಡಿನಲ್ಲಿಯೇ ನಡೆಯುತ್ತಿದ್ದ ಸಾಮಾಜಿಕ ಜೀವನ ನವ್ಯಸಾಹಿತ್ಯದಂತಹ ಚಳುವಳಿಯ ಸಂದರ್ಭದಲ್ಲಿ ಬರೆಹಗಾರನಿಗೆ ಒಂದು ಸವಾಲಾಗಿ ಪರಿಣಮಿಸಿತ್ತು. ಆಮೂಲಕ ನವ್ಯ ಚಳುವಳಿಯ ಭಾಗವಾಗಿ ಕನ್ನಡ ಸಂಸ್ಕೃತಿ ಮತ್ತು ಅದರ ಭಾಗವಾದ ಜಡ್ಡುಗಟ್ಟಿದ ಜಾತಿವ್ಯವಸ್ಥೆಯ ಕೆಲವು ನೆಲೆಗಳನ್ನು ಅಕ್ಷರಗಳ ಮೂಲಕ ಬಿಂಬಿಸಿದ್ದು ಅನಂತಮೂರ್ತಿಯಂಥವರ ಬುದ್ಧಿಜೀವಿಗಳಿಗೆ ಒಂದು ಹೋರಾಟವೇ ಆಗಿತ್ತು. ಹೀಗಾಗಿ ವ್ಯಾಪಕವಾದ ಸಾಮಾಜಿಕ ಆವರಣ ಇವರ ಕತೆಯ ಮುಖ್ಯ ಕೇಂದ್ರವಾಯಿತು. ಮುಖ್ಯವಾಗಿ ಲೇಖಕರು ವ್ಯಕ್ತಿನೆಲೆಯಲ್ಲಿ ತಾವು ಬಂದ ಜಾತಿವ್ಯವಸ್ಥೆ ಮತ್ತು ಕಂಡ ವ್ಯವಸ್ಥೆಯ ಎರಡು ಸಾಧ್ಯತೆಗಳನ್ನು ಪರಿಪಾಕಗೊಳಿಸಿ ಚಿತ್ರಿಸಿರುವುದೊಂದು ವಿಶೇಷವಾಗಿದೆ.

ಅನಂತಮೂರ್ತಿಯವರು ಒಂದು ಸಮಾಜವನ್ನು ಅತ್ಯಂತ ಸೂಕ್ಷ್ಮವಾಗಿ ಕಾಣುವ ಮೂಲಕ 'ಬ್ರಾಹ್ಮಣ' 'ಶೂದ್ರ' ಎಂಬ ಎರಡು ವಿಶಾಲ ಜಗತ್ತುಗಳನ್ನು ಮುಖಾಮುಖಿಯಾಗಿಸುತ್ತಾರೆ. ಇಲ್ಲವೆ

[illegible]

[illegible]

[illegible]

[illegible]

[illegible]

ಸಂಘರ್ಷಕ್ಕೊಳಪಡಿಸುತ್ತಾರೆ. ಲೇಖಕರ ತಂತ್ರಗಾರಿಕೆ ನವ್ಯದ ಇತರ ಕತೆಗಾರರಿಗಿಂತ ವಿಶಿಷ್ಟತೆಯನ್ನು ಪಡೆದಿದೆ. ಇದಕ್ಕೆ ನಿರ್ದಿಷ್ಟ ಉದಾಹರಣೆಯಾಗಿ ಅವರು ಬಳಸಿದ ಫ್ಲಾಷ್‌ಬ್ಯಾಕ್ ತಂತ್ರವನ್ನು ಗಮನಿಸಬಹುದಾಗಿದೆ. ಇವರ ಕತೆಗಳಲ್ಲಿ 'ಬ್ರಾಹ್ಮಣ' ಮತ್ತು 'ಶೂದ್ರ' ಸಂಸ್ಕೃತಿಯು ಲಿಂಗಸಂಬಂಧಿ ನೆಲೆಯಲ್ಲಿ ಕೆಲವು ಅನೈತಿಕ ಸಂಬಂಧಗಳ ಮುಖೇನ ಸಂಕರಶೀಲ (ಸಮ್ಮಿಶ್ರ ಸಂಸ್ಕೃತಿ) ಸಂಸ್ಕೃತಿಯಾಗಿ ಅನಾವರಣಗೊಳ್ಳುತ್ತದೆ. ಹೀಗೆ ಇವರ ಕಥಾಸಾಹಿತ್ಯದಲ್ಲಿ ಕತೆಯ ಮುಖ್ಯಘಟ್ಟ ಬ್ರಾಹ್ಮಣರ ಒಳಜಗತ್ತಾದರೆ, ಅದಕ್ಕೆ ಮುಖಾಮುಖಿಯಾಗಿ ನಿಲ್ಲುವುದು ಶೂದ್ರ ಜಗತ್ತು. ಈ ಎರಡೂ ಸಂಸ್ಕೃತಿ ಚೌಕಟ್ಟಿನಲ್ಲಿ ಗ್ರಾಮೀಣ ಮತ್ತು ನಗರದ ಜಾತಿ ಸಂಬಂಧಿ ಆಯಾಮಗಳು ಸೂಕ್ಷ್ಮವಾಗಿ ಅಭಿವ್ಯಕ್ತಗೊಳ್ಳುತ್ತವೆ. ಇವರ ಕತೆಗಳಲ್ಲಿ ಗಮನಿಸಿದ ಮತ್ತೊಂದು ಅಂಶವೆಂದರೆ ಸಮಾಜದಲ್ಲಿ ಅವರು ಕಾಣುವ ಮೇಲ್ಜಾತಿ-ಕೆಳಜಾತಿಗಳ ಕೌಟುಂಬಿಕ ವಲಯಗಳಲ್ಲಿ ಬಳಸಲ್ಪಡುವ ಪರಿಭಾಷೆ ಒಟ್ಟು ಕಥಾಹಂದರದಲ್ಲಿ ಎರಡು ಸಂಸ್ಕೃತಿಗೆ ಸಂಬಂಧಿಸಿದ ಎರಡು ಭಾಷೆಗಳಂತೆ ಬಳಕೆಯಾಗಿವೆ. ಬ್ರಾಹ್ಮಣರಿಗೆ ಅವರದೇ ಆದ ಭಾಷೆ ಕಥಾನಿರೂಪಣೆಯಾಗಿ ಬಂದರೆ ಶೂದ್ರರಿಗೆ ಆ ಮಾದರಿ ಬದಲಾಗಿದೆ. ಇವರ ಕಥೆಯ ತಾತ್ವಿಕ ಚೌಕಟ್ಟು ಇಂಥ ಭಾಷಿಕ ಅಭಿವ್ಯಕ್ತಿಯ ಮೂಲಕ ಪ್ರಕಟಗೊಳ್ಳುವುದು ವಿಶಿಷ್ಟವಾಗಿದೆ. ಒಂದರ್ಥದಲ್ಲಿ ಇವರ ಒಟ್ಟು ಕತೆಗಳಲ್ಲಿ ಸಮಾಜ ಮತ್ತು ಜಾತಿವ್ಯವಸ್ಥೆಯು ಅನಾವರಣಗೊಳ್ಳುವುದು ಸಂಸ್ಕೃತಿಯ ಮುಖ್ಯ ಭಾಗವಾಗಿಯೇ ಆಗಿದೆ. ಆಮೂಲಕ ಬ್ರಾಹ್ಮಣ-ಶೂದ್ರ, ಗಂಡು-ಹೆಣ್ಣು ಹಾಗೂ ವ್ಯಕ್ತಿ-ಸಮಾಜ ಹೀಗೆ ಕೆಲವು ಆಯಾಮಗಳ ಮೂಲಕ ಸೂಕ್ಷ್ಮ ಒಳನೋಟಗಳನ್ನು ನೀಡುವಂಥವಾಗಿವೆಯೆಂಬುದನ್ನು ಇಲ್ಲಿ ಮುಖ್ಯವಾಗಿ ಕಂಡುಕೊಳ್ಳಲಾಗಿದೆ.

ಅಧ್ಯಾಯ ಮೂರು ಆದರ್ಶ ಮತ್ತು ವಾಸ್ತವ ವಿಚಾರಗಳ ಸಂಘರ್ಷಕ್ಕೆ ಸಂಬಂಧಿಸಿದೆ. ಇಲ್ಲಿನ ಕತೆಗಳಲ್ಲಿನ ಪಾತ್ರಗಳಿಗೆ ಒಂದು ಆದರ್ಶದ ಚೌಕಟ್ಟನ್ನು ನಿರ್ಮಿಸುವುದರ ಮೂಲಕ ಲೇಖಕರು ವಾಸ್ತವ ಬದುಕನ್ನು ಯಥಾವತ್ತಾಗಿ ರೂಪಿಸಿಕೊಡುತ್ತಾರೆ. ಮುಖ್ಯವಾಗಿ ಜಾತಿಯಾಧಾರಿತ ಕೌಟುಂಬಿಕ ವ್ಯವಸ್ಥೆಯಲ್ಲಿನ ಪಾತ್ರಗಳು ಸಮಕಾಲೀನ ಸಂದರ್ಭದ ಚಳುವಳಿ, ಪರಿಸರ, ಆಧುನಿಕತೆ ಇಂತಹ ಕೆಲವು ಸವಾಲುಗಳಿಗೆ ಥಟ್ಟನೆ ಮುಖಾಮುಖಿಯಾಗುತ್ತವೆ. ಅಂದರೆ ಬ್ರಾಹ್ಮಣ ಸಂಸ್ಕೃತಿಯ ಒಬ್ಬ ವ್ಯಕ್ತಿ ಪರಂಪರೆ ಆಚರಣೆಗಳನ್ನು ಮೀರಿ ಹೊಸ ಬದಲಾವಣೆಗಳಿಗೆ ಎದುರಾಗುವಾಗ ಸಂಘರ್ಷವನ್ನು ಎದುರಿಸುತ್ತಾನೆ. ಆದರ್ಶವು ಯಾವತ್ತೂ ವಾಸ್ತವ ಜಗತ್ತಿನ ಸತ್ಯಶೋಧನೆಯ ಪಾತಳಿಯ ಮೇಲೆ ಸದಾ ಅಭಿವ್ಯಕ್ತಗೊಳ್ಳುತ್ತಿರುತ್ತದೆ. ಅಂತೆಯೇ ಆ ಬ್ರಾಹ್ಮಣಜಗತ್ತಿನ ವ್ಯಕ್ತಿಯು ಶೂದ್ರಜಗತ್ತಿನ ವ್ಯಕ್ತಿಯೊಂದಿಗೆ ವೈಯಕ್ತಿಕ, ಸಾಮಾಜಿಕ ಸಂಬಂಧವನ್ನು ಹೊಂದುವ ಮೂಲಕ ಆದರ್ಶ ಜಗತ್ತಿಗೆ ಒಗ್ಗಿಕೊಳ್ಳುವುದೇ ಒಂದು ಹೋರಾಟವೆಂಬಂತೆ ಚಿತ್ರಿತವಾಗಿದೆ. ಅಲ್ಲದೇ ಸಾಮಾಜಿಕ ವ್ಯವಸ್ಥೆಯ ವಾಸ್ತವ ಸತ್ಯಗಳು ಸಂಕೇತಗಳ ಮುಖೇನ ಕಥಾಹಂದರದಲ್ಲಿ ಅನಾವರಣಗೊಂಡಿರುವುದು ಅನಂತಮೂರ್ತಿಯವರ ಕಥನಸಾಹಿತ್ಯದಲ್ಲಿ ಹೊಸ ಪ್ರತಿಮಾವಿಧಾನವಾಗಿ ಕಂಡುಬರುತ್ತದೆ. ಅಂತೆಯೇ ಪರಂಪರೆಯನ್ನು ಮೀರಿದ ಆದರ್ಶ ಪಾತ್ರಗಳು ತಮ್ಮ ಸ್ವಗತದ ಮೂಲಕ ಅಂತರಂಗ ಮತ್ತು ಬಹಿರಂಗದ ಭಾವನೆಗಳನ್ನು ಅನುರೂಪಿಸುವುದನ್ನು ಇಲ್ಲಿನ ಕತೆಗಳಲ್ಲಿ ಕಂಡುಕೊಳ್ಳಲಾಗಿದೆ.

ಅಧ್ಯಾಯ ನಾಲ್ಕು ಪ್ರಜ್ಞೆ ಮತ್ತು ಪರಿಸರದಲ್ಲಿ ಅನಂತಮೂರ್ತಿಯವರು ಕಥಾಸಾಹಿತ್ಯದ ಮೂಲಕ ಪರಿಸರ ಆಕೃತಿಗೊಳ್ಳುವಿಕೆ ಮತ್ತು ವ್ಯಕ್ತಿ ಹಾಗೂ ಸಮೂಹ ಇವೆರಡೂ ಸಾಮಾಜಿಕ ಜೀವನದಲ್ಲಿ ಸಂಘರ್ಷಗಳ ಮಧ್ಯೆ ನೆಲೆಗೊಳ್ಳುವ ತಂತ್ರ ಹೇಗೆಂಬುದನ್ನು ತೋರಿಸಿಕೊಡುತ್ತಾರೆ. ಹಾಗೆ ನೋಡಿದರೆ ಪ್ರಜ್ಞೆ ಮತ್ತು ಪರಿಸರಗಳು ಇವರ ಕತೆಗಳ ಮುಖ್ಯ ಭಾಗವಾಗಿ ಗೋಚರಿಸುತ್ತವೆ. ಇಲ್ಲಿನ ಪಾತ್ರಗಳು ತಮ್ಮೊಳಗೇ ಹಲವಾರು ತಾಕಲಾಟ, ತುಡಿತಗಳೊಂದಿಗೆ ಒಂದು ಪ್ರಜ್ಞೆಯ ಒಳಜಗತ್ತಿನಲ್ಲಿ ಸದಾ ಸಮಾಜದೊಂದಿಗೆ

[illegible]

[illegible]

ಪ್ರತಿಕ್ರಿಯಿಸುತ್ತಿರುತ್ತವೆ. ಈ ಕ್ರಿಯೆಯು ಪರಿಸರದ ಭಾಗವಾಗಿ ಅಷ್ಟು ಬೇಗ ಒಗ್ಗಿಕೊಳ್ಳುವುದಿಲ್ಲ. ಅದನ್ನೇ ಭೂತ ಹಾಗೂ ವರ್ತಮಾನದ ಸಂಗತಿಗಳನ್ನು ಮುಖಾಮುಖಿಗೊಳಿಸಿ, ಪಾತ್ರಚಿತ್ರಣಗಳನ್ನು ಅಭಿವ್ಯಕ್ತಿಗೊಳಿಸುವುದು ಅವುಗಳ ಒಳಮನಸ್ಸಿನ ಪ್ರಜ್ಞೆಯ ಭಾಗವಾಗಿ ಜೊತೆಗೆ ಒಟ್ಟು ಸಮಾಜದ ಬದುಕನ್ನು ಪರಿಸರದ ಭಾಗವಾಗಿ ಪ್ರಜ್ಞಾಪಾತಳಿಯಲ್ಲಿ ಕಲಾತ್ಮಕವಾಗಿ ಕಟ್ಟಿಕೊಡುವುದು ಇವರ ಕಥೆಯ ಮುಖ್ಯ ಸಂಗತಿ ಎಂಬುದನ್ನು ಕಂಡುಕೊಳ್ಳಲಾಗಿದೆ.

ಅಧ್ಯಾಯ ಐದರಲ್ಲಿ ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ವೈಚಾರಿಕತೆ ಮತ್ತು ಸ್ವಾತಂತ್ರ್ಯಗಳ ನಡುವಿನ ಸಂಘರ್ಷವನ್ನು ಗುರುತಿಸಲಾಗಿದೆ. ಪಾರಂಪರಿಕ ಮೌಲ್ಯಗಳನ್ನು ಬೌದ್ಧಿಕ ಹಿನ್ನೆಲೆಯಲ್ಲಿ ಶೋಧಿಸುವ ಇಲ್ಲಿನ ಕಥಾಜಗತ್ತು ವೈಚಾರಿಕತೆ ಮತ್ತು ನವ್ಯ ಚಳುವಳಿ ಅಲ್ಲದೇ ಪಾಶ್ಚಾತ್ಯ ಸೈದ್ಧಾಂತಿಕ ಚೌಕಟ್ಟಿನಲ್ಲಿ ಹುರಿಗೊಂಡಂಥವು. ಇಂಥ ತಾತ್ವಿಕ ತಳಹದಿಯಲ್ಲಿ ಕನ್ನಡ ಸಂಸ್ಕೃತಿಯ ಸಮಕಾಲೀನ ಸಾಮಾಜಿಕ ವ್ಯವಸ್ಥೆ ಹಾಗೂ ಚಳುವಳಿಗಳ ಭಾಗವಾಗಿ ವೈಚಾರಿಕತೆ ಮತ್ತು ಸ್ವಾತಂತ್ರ್ಯ ಎಂಬ ಎರಡು ಪರಿಭಾಷೆಗಳು ಇವರಲ್ಲಿ ಚರ್ಚೆಗೊಳಪಡುತ್ತವೆ. ಆ ಚರ್ಚೆಗಳು ನವ್ಯರ ವೈಚಾರಿಕತೆಯ ಪ್ರಮುಖ ಅಂಗವಾಗಿ ಮಂಡಿಸಲ್ಪಟ್ಟಿವೆ. ಅಲ್ಲದೆ ಅನಂತಮೂರ್ತಿಯವರ ಕತೆಗಳಲ್ಲಿ ಅದೇ ನೆಲೆಯ ಅಥವಾ ಆಶಯದ ವಸ್ತು, ಅದರ ಆಯ್ಕೆಯ ಕ್ರಮ, ನಿರೂಪಣಾ ಮಾದರಿ ಇವೆಲ್ಲವೂ ಜೀವನ ಮತ್ತು ಸಿದ್ಧಾಂತ, ಬದುಕು ಮತ್ತು ಸಾವಿನ ಪ್ರಜ್ಞೆ, ಸಾಫಲ್ಯಸಾಧ್ಯತೆ ಹಾಗೂ ನೈತಿಕತೆ ಎಂಬ ಕೆಲವು ಅಂಶಗಳೊಡನೆ ಮಿಳಿತಗೊಂಡು ಒಟ್ಟು ಸ್ವಾತಂತ್ರ್ಯ ಹಾಗೂ ವಿಚಾರ ಇವುಗಳ ಮೂಲ ಆಶಯಗಳು ಇವರ ಕತೆಗಳಲ್ಲಿ ಅನಾವರಣಗೊಂಡಿರುವುದನ್ನು ಕಂಡುಕೊಳ್ಳಲಾಗಿದೆ.

ಹೀಗೆ ಅನಂತಮೂರ್ತಿಯವರು ಸಂಸ್ಕೃತಿಯನ್ನು ಕಂಡ ಬಗೆ, ಅವರ ಕಥಾಸಾಹಿತ್ಯದಲ್ಲಿ ಸಂಘರ್ಷಕ್ಕೊಳಪಡುವ ಸಂಸ್ಕೃತಿಯ ಒಂದು ಮಾದರಿ ವೈಶಿಷ್ಟ್ಯಪೂರ್ಣವಾದುದು. ನವೋದಯ, ಪ್ರಗತಿಶೀಲ ತಳಹದಿಯ ಮೇಲೆ ಬೆಳೆದುನಿಂತ ನವ್ಯ ಚಳುವಳಿ ಸಾಹಿತ್ಯದ ಮೂಲಕ ಪ್ರತಿಕ್ರಿಯಿಸಿದ ಸಿದ್ಧಾಂತಗಳು ಲೇಖಕರಲ್ಲಿ ಗಾಢವಾದ ಒಳನೋಟಗಳನ್ನು ತೆರೆದುಕೊಟ್ಟವು. ಅದರಂತೆ ತಮ್ಮ ನಂತರದ ದಲಿತ ಬಂಡಾಯ ಅಥವಾ ನವ್ಯೋತ್ತರ ಸಾಹಿತ್ಯಕ ಚಳುವಳಿಯು ಇವರ ಕಣ್ಣೆದುರಿಗಿದೆ. ಅಲ್ಲದೇ ಇಂದಿನ ಅನೇಕ ಬರೆಹಗಾರರ ತಾತ್ವಿಕತೆಯು ಇವರ ಅನುಭವದಲ್ಲಿದೆ. ಈ ಕಾಲದ ಪರಿಸರ ಚಳುವಳಿ, ಗಣಿ ಚಳುವಳಿ, ಸಾಹಿತ್ಯಕ ಚರ್ಚೆಗಳು ಕೂಡ ಇವರ ಪ್ರಜ್ಞೆಯಲ್ಲಿ ಇದ್ದ ಕಾರಣವಾಗಿಯೇ ಅವರ ಇತ್ತೀಚಿನ ದಿವ್ಯ ಕಾದಂಬರಿಯ ಮೂಲಕ ಅಂತಹ ಸಾಧ್ಯತೆಗಳನ್ನು ತೋರಿಸಿಕೊಟ್ಟರು. ದಿವ್ಯ ಕಾದಂಬರಿಯಲ್ಲಿ ಸಾಮಾಜಿಕ ಆಯಾಮಗಳು ವಿಭಿನ್ನ ನೆಲೆಯಲ್ಲಿ ಕಂಡುಬರುವುದು ಈ ಕಾಲದ ಸಮಾಜದ ಅನುಭವದಿಂದಾಗಿಯೇ ಎಂದು ಹೇಳಬಹುದು. ಸಮಕಾಲೀನ ರಾಜಕೀಯ ಮತ್ತು ಆರ್ಥಿಕ ಚಟುವಟಿಕೆಗಳು ಅವರ ಗ್ರಹಿಕೆಯಲ್ಲಿ ಸೂಕ್ಷ್ಮವಾಗಿ ಹೊಕ್ಕಿವೆ. ಇಂತಹ ಸಾಧ್ಯತೆಗಳನ್ನು ಮುಂದಿನವರ ಬರೆಹದಲ್ಲಿ ನಿರೀಕ್ಷಿಸಬಹುದು. ಈ ಎಲ್ಲಾ ಕಾರಣಕ್ಕಾಗಿಯೇ ಅನಂತಮೂರ್ತಿಯವರ ಕತೆ, ಕಾದಂಬರಿ ಸಾಹಿತ್ಯ ಒಟ್ಟು ಕನ್ನಡ ಸಂಸ್ಕೃತಿಯ ಸಮುದಾಯದ ಭಾಗವಾಗಿ ಕಂಡುಬರುತ್ತದೆ. ಈ ಅಂಶವೇ ಇವರ ಕತೆಗಳ ಸಂಸ್ಕೃತಿ ಸಂಘರ್ಷದ ಅಧ್ಯಯನಕ್ಕೆ ಪ್ರೇರಕವಾಗಿದೆ.

ಅನುಬಂಧ–೧

ಅ. ಅನಂತಮೂರ್ತಿಯವರ ಬದುಕಿನ ಮುಖ್ಯ ಘಟ್ಟಗಳು

೧೯೩೨: ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ಮೇಳಿಗೆ ಗ್ರಾಮದಲ್ಲಿ ಜನನ. ತಂದೆ ಉಡುಪಿ ರಾಜಗೋಪಾಲಾಚಾರ್ಯ,ತಾಯಿ ಸತ್ಯಮ್ಮ, ಹೆಂಡತಿ ಎಸ್ತರ್, ಮಕ್ಕಳು ಶರತ್ ಮತ್ತು ಅನುರಾಧ ಪ್ರಾಥಮಿಕ ಮತ್ತು ಪ್ರೌಢಶಲೆ ಹಾಗೂ ಇಂಟರ್ ಮೀಡಿಯಟ್ ತೀರ್ಥಹಳ್ಳಿಯಲ್ಲಿ.

೧೯೫೬: ಎಂ.ಎ. ಇಂಗ್ಲಿಷ್ ಮೈಸೂರು ವಿಶ್ವವಿದ್ಯಾಲಯ (ಚಿನ್ನದ ಪದಕ)

೧೯೬೬: ಪಿಎಚ್.ಡಿ ಪದವಿ, ಯು.ಕೆ.ಯ ಬರ್ಮಿಂಗ್ ಹ್ಯಾಂ ವಿಶ್ವವಿದ್ಯಾಲಯ,
ವಿಷಯ : "politics and Fiction in the 1930 s"

೧೯೫೬: ಶಿವಮೊಗ್ಗ ಸಹ್ಯಾದ್ರಿ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕ.

೧೯೬೩: ಕಾಮನ್‌ವೆಲ್ತ್ ಫೆಲೋಶಿಪ್ ಪಡೆದು ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಪಯಣ.

೧೯೬೭: ಮೈಸೂರಿನ ರೀಜನಲ್ ಕಾಲೇಜಿನಲ್ಲಿ ರೀಡರ್.

೧೯೭೨: ಹೋಮಿ ಬಾಬಾ ಫೆಲೋಶಿಪ್.

೧೯೭೫: ಅಯೋವಾ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕ.

೧೯೭೮: ಅಯೋವಾ ವಿಶ್ವವಿದ್ಯಾಲಯದಲ್ಲಿ ಸೃಜನಶೀಲ ಬರವಣಿಗೆಗಾಗಿ ಫೆಲೋಶಿಪ್.

೧೯೭೮: ಟಫ್ಟ್ಸ್ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕ.

೧೯೮೦: ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕ.

೧೯೮೨: ಶಿವಾಜಿ ವಿಶ್ವವಿದ್ಯಾಲಯ, ಕೊಲ್ಹಾಪುರದಲ್ಲಿ ಸಂದರ್ಶಕ ಪ್ರಾದ್ಯಾಪಕ.

೧೯೮೫: ಅಯೋವಾ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕ.

೧೯೮೬: ಅಯೋವಾ ವಿಶ್ವವಿದ್ಯಾಲಯದಲ್ಲಿ ಫುಲ್ ಬ್ರೈಟ್ ಪ್ರೊಫೆಸರ್.

೧೯೮೭: ಕೇರಳದ ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ಕುಲಪತಿ.

೧೯೯೨: ನ್ಯಾಶನಲ್ ಬುಕ್ ಟ್ರಸ್ಟನ ಅಧ್ಯಕ್ಷ.

೧೯೯೩: ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ.

೧೯೯೫: ವಿಶ್ವಭಾರತಿ ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್.

೧೯೯೬: ಮಣಿಪಾಲದ ಅಕಾಡೆಮಿ ಆಫ್ ಹೈಯರ್ ಎಜುಕೇಶನ್‌ನಲ್ಲಿ ಡಿಪಾರ್ಟ್ ಮೆಂಟ್ ಆಫ್ ಹುಮ್ಯಾನಿಟೀಸ್‌ನ ನಿರ್ದೇಶಕ

೧೯೯೭: ಟೆಕ್ಸಾಸ್ ವಿಶ್ವವಿದ್ಯಾಲಯದಲ್ಲಿ ವಿಸಿಟಿಂಗ್ ಪ್ರೊಫೆಸರ್.

೧೯೯೯: ಕೊಟ್ಟಾಯಂ ನ ಮಹಾತ್ಮ ಗಾಂಧಿ ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್.

೨೦೦೦: ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಿಂದ ದಕ್ಷಿಣ ಏಷ್ಯಾ ವಿಭಾಗದಲ್ಲಿ ಜುಬಿಲಿ ಪ್ರೊಫೆಸರ್,
ಕಾರ್ನೆಲ್ ವಿಶ್ವವಿದ್ಯಾಲಯದಲ್ಲಿ ವಿಸಿಟಿಂಗ್ ಪ್ರೊಫೆಸರ್

ಆ. ಅನಂತಮೂರ್ತಿಯವರ ಕೃತಿಗಳು:

ಕಥಾಸಂಕಲನಗಳು

೧೯೫೫: ಎಂದೆಂದೂ ಮುಗಿಯದ ಕಥೆ
೧೯೬೩: ಪ್ರಶ್ನೆ
೧೯೭೨: ಮೌನಿ
೧೯೮೧: ಆಕಾಶ ಮತ್ತು ಬೆಕ್ಕು
೧೯೯೫: ಸೂರ್ಯನ ಕುದುರೆ
೨೦೦೧: ಬೇಟೆ,ಬಳೆ ಮತ್ತು ಓತಿಕೇತ (ಕತೆ)

ಕಾದಂಬರಿಗಳು

೧೯೬೫: ಸಂಸ್ಕಾರ
೧೯೭೩: ಭಾರತೀಪುರ
೧೯೭೮: ಅವಸ್ಥೆ
೧೯೯೪: ಭವ
೨೦೦೧: ದಿವ್ಯ

ಕವನ ಸಂಕಲನಗಳು

೧೯೭೦: ಹದಿನೈದು ಪದ್ಯಗಳು
೧೯೭೨: (ಸಂ) ಕನ್ನಡ ಕಾವ್ಯ
೧೯೮೯: ಅಜ್ಜನ ಹೆಗಲ ಸುಕ್ಕುಗಳು
೧೯೯೨: ಮಿಥುನ

ವಿಮರ್ಶೆ

೧೯೭೧: ಪ್ರಜ್ಞೆ ಮತ್ತು ಪರಿಸರ
೧೯೭೪: ಸನ್ನಿವೇಶ
೧೯೮೨: ಸಮಕ್ಷಮ
೧೯೯೦: ಪೂರ್ವಾಪರ
೧೯೯೬: ಬೆತ್ತಲೆಪೂಜೆ ಯಾಕೆ ಕೂಡದು, ಗಾಂಧಿ ಸಂಸ್ಕೃತಿ ಮತ್ತು ಅಡಿಗ
೧೯೯೭: ವಾಲ್ಯಲೋಕ
೨೦೦೨: ಯುಗಪಲ್ಲಟ

ನಾಟಕ

೧೯೬೮: ಆವಾಹನೆ

ಅನುವಾದ

೧೯೯೩: ದಾವ್ಪೂದ್‌ಜಿಂಗ್

ಪ್ರಶಸ್ತಿಗಳು

೧೯೮೩: ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ (ಆಕಾಶ ಮತ್ತು ಬೆಕ್ಕು)
೧೯೮೮: ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
೧೯೯೩: ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ (ಪೂರ್ವಾಪರ)
೧೯೯೪: ಭಾರತೀಯ ಜ್ಞಾನಪೀಠ ಪ್ರಶಸ್ತಿ
೧೯೯೪: ಮಾಸ್ತಿ ಪ್ರಶಸ್ತಿ
೧೯೯೮: ಭಾರತ ಸರ್ಕಾರದಿಂದ ಪದ್ಮಭೂಷಣ ಪ್ರಶಸ್ತಿ

ಅನುಬಂಧ–೨

ಅ. ಪರಾಮರ್ಶನ ಕೃತಿಗಳು

೧. ಅನಂತಮೂರ್ತಿ ಯು.ಆರ್, ಐದು ದಶಕದ ಕಥೆಗಳು, ಸಮಗ್ರ ಕಥಾಸಂಕಲನ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧.

೨. ಅನಂತಮೂರ್ತಿ ಯು.ಆರ್–ಸಂಸ್ಕಾರ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೬೫.

೩. ಅನಂತಮೂರ್ತಿ ಯು.ಆರ್–ಭಾರತೀಪುರ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೭೩.

೪. ಅನಂತಮೂರ್ತಿ ಯು.ಆರ್–ಅವಸ್ಥೆ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೭೮.

೫. ಅನಂತಮೂರ್ತಿ ಯು.ಆರ್–ಭವ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೪.

೬. ಅನಂತಮೂರ್ತಿ ಯು.ಆರ್–ದಿವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧.

೭. ಅನಂತಮೂರ್ತಿ ಯು.ಆರ್–ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೭೧.

೮. ಅನಂತಮೂರ್ತಿ ಯು.ಆರ್–ಪೂರ್ವಾಪರ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೦.

೯. ಅನಂತಮೂರ್ತಿ ಯು.ಆರ್–ಸನ್ನಿವೇಶ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೭೪, ೧೯೯೨.

೧೦. ಅನಂತಮೂರ್ತಿ ಯು.ಆರ್–ಸಮಕ್ಷಮ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೮೦, ೧೯೯೨.

೧೧. ಅನಂತಮೂರ್ತಿ ಯು.ಆರ್–ನವ್ಯಾಲೋಕ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೭.

೧೨. ಅಶೋಕ ಟಿ.ಪಿ–ಹೊಸ ಹೆಜ್ಜೆ ಹೊಸ ಹಾದಿ, ಅಕ್ಷರ ಪ್ರಕಾಶನ, ಸಾಗರ, ೧೯೮೧.

೧೩. ಅಶೋಕ ಟಿ.ಪಿ–ನವ್ಯ ಕಾದಂಬರಿಯ ಪ್ರೇರಣೆಗಳು, ವಿಮರ್ಶೆ, ಬಾಪ್ಕೋ ಪ್ರಕಾಶನ, ಬೆಂಗಳೂರು, ೧೯೭೯.

೧೪. ಅಶೋಕ ಟಿಪಿ–ಅನಂತಮೂರ್ತಿಯವರ ಆಕಾಶ ಮತ್ತು ಬೆಕ್ಕು, ಸಾಹಿತ್ಯ ಸಂಪರ್ಕ, ಅಕ್ಷರ ಪ್ರಕಾಶನ, ಸಾಗರ, ೧೯೮೬.

೧೫. ಅಶೋಕ ಟಿ.ಪಿ–ಸಾಹಿತ್ಯ ಸಂದರ್ಭ, ಅಕ್ಷರ ಪ್ರಕಾಶನ, ಸಾಗರ, ೧೯೯೧.

೧೬. ಅಶೋಕ ಟಿ.ಪಿ–ಜ್ಞಾನಪೀಠ ಪ್ರಶಸ್ತಿ ವಿಜೇತ–೬, ಸಾಹಿತ್ಯ ವಿಮರ್ಶೆ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ, ೧೯೯೫.

೧೭. ಅಶೋಕ ಟಿ.ಪಿ–ವಾಸ್ತವತಾವಾದ, ಕನ್ನಡಸಾಹಿತ್ಯದಲ್ಲಿ ಸಾಹಿತ್ಯ ಪಾರಿಭಾಷಿಕಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೯.

೧೮. ಅಶೋಕ.ಟಿ.ಪಿ–ಯು.ಆರ್.ಅನಂತಮೂರ್ತಿ ಒಂದು ಅಧ್ಯಯನ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೧.

೧೯. ಆಮೂರ.ಜಿಎಸ್–ಕನ್ನಡ ಕಥಾಸಾಹಿತ್ಯ, ಭಾಗ, ೨, ಕನ್ನಡ ಸಾಹಿತ್ಯವಾಹಿನಿ, ಸುವಿದ್ಯಾ ಪ್ರಕಾಶನ, ಬೆಂಗಳೂರು, ೧೯೯೩.

೨೦. ಆಮೂರ. ಜಿ.ಎಸ್–ಕಾದಂಬರಿ ಮತ್ತು ಸಣ್ಣಕತೆ, ಅ.ನ.ಕೃ, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೮೭.

೨೧. ಆಮೂರ. ಜಿ.ಎಸ್–ಯು.ಆರ್. ಅನಂತಮೂರ್ತಿಯವರ ಕಾದಂಬರಿಗಳಲ್ಲಿ ಆದರ್ಶ ವಾಸ್ತವಗಳ ಸಂಬಂಧ, ಕನ್ನಡ ಕಥನ ಸಾಹಿತ್ಯ ಕಾದಂಬರಿ, ಶ್ರೀಹರಿ ಪ್ರಕಾಶನ, ಧಾರವಾಡ, ೧೯೯೪.

೨೨. ಆಮೂರ. ಜಿ.ಎಸ್– ಯು.ಆರ್. ಅನಂತಮೂರ್ತಿಯವರ ಸಾಹಿತ್ಯ ನಾನು ಕಂಡಂತೆ, ಸಾತ್ವಿಕ ಪಥ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೪೦, ೧೯೯೫.

೨೩. ಆಮೂರ. ಜಿ.ಎಸ್–ಕನ್ನಡ ಕಥಾಸಾಹಿತ್ಯ, ಹೊಸ ಸಂವೇದನೆ, ವ್ಯವಸಾಯ , ಸ್ನೇಹ ಪ್ರಕಾಶನ,

ಬೆಂಗಳೂರು, ೧೯೯೨.
೨೪. ಆಮೂರ ಜಿ.ಎಸ್–ಸಂಸ್ಕಾರಕ್ಕೆ ಅಪ್ರಾತಿನಿಧಿಕ ಪ್ರತಿಕ್ರಿಯೆ, ಸಂ.ಹೆಚ್.ಬಿ. ಜ್ವಾಲನಯ್ಯ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೬.
೨೫. ಆರ್.ಕೆಈಚಿನ ಸಣ್ಣಕತೆಗಳು, ಸ್ಥೂಲನೋಟ, ಸಾಹಿತ್ಯ ಪ್ರಕ್ರಿಯೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೫.
೨೬. ಕರಿಗೌಡ ಬಿ.ಕೆ– ಕನ್ನಡದ ನವ್ಯ ಕಥೆಗಳು ಒಂದು ಅಧ್ಯಯನ, ಕನ್ನಡ ಅಧ್ಯಯನ ಕೇಂದ್ರ , ಬೆಂಗಳೂರು, ೧೯೮೫.
೨೭. ಕೀರ್ತಿನಾಥ ಕುರ್ತಕೋಟಿ–ಯು.ಆರ್. ಅನಂತಮೂರ್ತಿ–ನೂರುಸ್ವರ ನೂರುಮರ, ಸಂ.ಎ.ವಿ.ನಾವಡ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮
೨೮. ಕೆದಿಲಾಯ.ಬಿ.ವಿ–ನವ್ಯತೆಯ ಹಿನ್ನೆಲೆ, ಸಂ.ಗೋಪಾಲಕೃಷ್ಣ ಅಡಿಗ, ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರ, ಉಡುಪಿ, ೧೯೯೬.
೨೯. ಕೋದಂಡರಾಮಎನ್.ಕೆ–ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೬
೩೦. ಗಿರಡ್ಡಿ ಗೋವಿಂದರಾಜ–ಸಣ್ಣಕತೆಯ ಹೊಸ ಒಲವುಗಳು, ಸಾಹಿತ್ಯ ಭಂಡಾರ, ಹುಬ್ಬಳ್ಳಿ, ೧೯೬೫.
೩೧. ಗಿರಡ್ಡಿ ಗೋವಿಂದರಾಜ–ಕಾದಂಬರಿಯಲ್ಲಿ ವೈಚಾರಿಕತೆ, ನವ್ಯವಿಮರ್ಶೆ, ಅಕ್ಷರ ಪ್ರಕಾಶನ, ಸಾಗರ, ೧೯೭೫
೩೨. ಗುರುರಾಜ ಆಮೂರ–ಸಂಸ್ಕಾರ, ಕೃತಿ ಪರೀಕ್ಷೆ, ಸಮಾಜ ಪುಸ್ತಕಾಲಯ, ಧಾರವಾಡ, ೧, ೧೯೭೦.
೩೩. ಗೋಪಾಲ ಕೃಷ್ಣಯ್ಯಕೆ.ಎಲ್–ನವ್ಯ ವಿಮರ್ಶೆ, ವಿಶ್ರಾಂತ ಪ್ರಕಾಶನ, ಬೆಂಗಳೂರು, ೧೯೯೩.
೩೪. ಗೌರೀಶ ಕಾಯ್ಕಿಣಿ–ಸಮಗ್ರಸಾಹಿತ್ಯ, ರಾಘವೇಂದ್ರ ಪ್ರಕಾಶನ–ಅಂಕೋಲ–೧೯೯೩.
೩೫. ಚಂದ್ರಮತಿ ಸೋಂದಾ–ಅನಂತಮೂರ್ತಿಯವರ ಕಥಾಸಾಹಿತ್ಯ ಒಂದು ಸ್ತ್ರೀವಾದಿ ವಿಶ್ಲೇಷಣೆ, ಮಾನಸಿಮಾನಸ, ಚಿಂತನ ಪ್ರಕಾಶನ, ಹೆಬ್ಬಾಳು, ಮೈಸೂರು, ೧೯೯೭.
೩೬. ಚಂದ್ರಶೇಖರ ರಾವ್ಪ.ವಿ–ಶ್ರೀನಿವಾಸ: ಸಣ್ಣಕತೆಗಳು,೧, ಸಾರಸ್ವತ, ಸಾಹಿತ್ಯವಿಹಾರ, ಮೈಸೂರು, ೧೯೯೦.
೩೭. ಚನ್ನಯ್ಯ ಎಚ್.ಎಂ–ಭಾರತೀಪುರ ಜಿಜ್ಞಾಸೆ, ಸುರುಚಿ ಪ್ರಕಾಶನ, ಮೈಸೂರು, ೧೯೭೪.
೩೮. ಚಿದಾನಂದ ಮೂರ್ತಿಎಂ– ಕರ್ನಾಟಕ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೧.
೩೯. ಡಿ.ವಿ.ಜಿ–ಸಂಸ್ಕೃತಿ, ಕಾವ್ಯಾಲಯ ಪ್ರಕಾಶನ, ಮೈಸೂರು, ೧೯೫೩.
೪೦. ದೇವುಡು–ಕರ್ನಾಟಕ ಸಂಸ್ಕೃತಿ–ಶಾರದಾ ಪ್ರಕಾಶನ–ಬೆಂಗಳೂರು–೧೯೩೫.
೪೧. ದೇಶಪಾಂಡೆ ಭಾ.ವೆಂ–ಭಾರತೀಯ ಸಂಸ್ಕೃತಿಯ ಹಿರಿಮೆ, ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೬೦.
೪೨. ನಾಗರಾಜ ಡಿ.ಆರ್–ಸಂಸ್ಕೃತಿಗಳ ಮುಖಾಮುಖಿ, ಕನ್ನಡಸಾಹಿತ್ಯದಲ್ಲಿ ಪ್ರತಿಭೆಯಸ್ವರೂಪ, ಸಂ.ಎನ್.ಎಸ್.ಲಕ್ಷ್ಮಿನಾರಾಯಣ ಭಟ್, ಪ್ರಸಾರಾಂಗ, ಬೆಂಗಳೂರು.ವಿ.ವಿ, ಬೆಂಗಳೂರು, ೧೯೮೯.
೪೩. ನಾಗರಾಜಎಲ್–ಡಾ.ಯು.ಆರ್.ಅನಂತಮೂರ್ತಿ ಹಾಗೂ ಡಿ.ಎಚ್.ಲಾರೆನ್ಸ್ ರವರ ಬರಹಗಳು ಸ್ತ್ರೀಸ್ಥಾನ ಒಂದು ತೌಲನಿಕ ಅಧ್ಯಯನ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನ ಭಾರತಿ, ಬೆಂಗಳೂರು, ೨೦೦೨.
೪೪. ನಾಗಣ್ಣ.ಸಿ–ಡಾ.ಯು.ಆರ್.ಅನಂತಮೂರ್ತಿ, ಸಂಸ್ಕೃತಿದೀಪಮಾಲೆ,ಕನ್ನಡಸಾಹಿತ್ಯಕಲಾಕೂಟ

[illegible]

ಪ್ರಕಾಶನ, ಮೈಸೂರು, ೧೯೯೦.
೪೫. ನಾಗಭೂಷಣ ಎ.ಆರ್-ಕನ್ನಡಕಾದಂಬರಿ ಲೋಕಕ್ಕೊಂದು ಹೊಸನೋಟ, ಮುಕ್ತಚಂದ ಸಂ.ವಿ. ಪ್ರಹ್ಲಾದ್, ಸಂಚಯ ಪ್ರಕಾಶನ, ಬೆಂಗಳೂರು, ೨೦೦೧.
೪೬. ಬರಗೂರು ರಾಮಚಂದ್ರಪ್ಪ-ಸಂಸ್ಕೃತಿ ಮತ್ತು ಸೃಜನಶೀಲತೆ, ವಿಚಾರವಿಮರ್ಶೆ, ಸುನಾದಪ್ರಕಾಶನ, ಬೆಂಗಳೂರು, ೧೯೮೯.
೪೭. ಬಸವರಾಜ ಸಬರದ-ಯು.ಆರ್.ಅನಂತಮೂರ್ತಿ, ಜ್ಞಾನಪೀಠಪ್ರಶಸ್ತಿವಿಜೇತರು,ಮಾಲೆ, ೬, ಪ್ರಸಾರಾಂಗ, ಗುಲ್ಬರ್ಗಾ ವಿ.ವಿ, ಗುಲ್ಬರ್ಗ, ೧೯೯೬.
೪೮. ಬೆಳಗಲಿದು.ನಿಂ-ಕನ್ನಡಸಾಹಿತ್ಯದಲ್ಲಿ ಇತ್ತೀಚಿನ ಒಲವುಗಳು, ವಿಮರ್ಶೆ, ವಿಶ್ವಕರ್ನಾಟಕ ಸಾಹಿತ್ಯಮಂಟಪ, ಬನಹಟ್ಟಿ, ಬಿಜಾಪುರ, ೧೯೯೪.
೪೯. ಬೋರಲಿಂಗಯ್ಯ ಹಿ.ಚಿ-ವಿಸ್ಮೃತಿ ಮತ್ತು ಸಂಸ್ಕೃತಿ, ಸಿ.ವಿ.ಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧.
೫೦. ಭಗವಾನ್-ಗೊಡ್ಡುಬ್ರಾಹ್ಮಣ್ಯ ಮತ್ತು ಧೂರ್ತ ಚಾರ್ವಾಕಮತ, ಆಂತರ್ಯ, ಮಹಿಮ ಪ್ರಕಾಶನ, ಮೈಸೂರು, ೧೯೭೮.
೫೧. ಭದ್ರಾಪುರಎಸ್.ಎಸ್-ಸಂಸ್ಕಾರದ ಅನಂತಮೂರ್ತಿ, ಕನ್ನಡ ಆಧುನಿಕಸಾಹಿತಿಗಳು ಹಾಗೂ ಸಂಶೋಧಕರು, ಶಾಂತಾ ಪ್ರಕಾಶನ, ಧಾರವಾಡ, ೧೯೯೬.
೫೨. ಮಾಸ್ತಿವೆಂಕಟೇಶ ಅಯ್ಯಂಗಾರ್-ಕರ್ನಾಟಕದ ಜನತೆಯ ಸಂಸ್ಕೃತಿ, ಜೀವನಕಾರ್ಯಾಲಯ, ಬೆಂಗಳೂರು, ೧೯೩೧.
೫೩. ಮಾಧವ ಕುಲಕರ್ಣಿ-ಅನಂತಮೂರ್ತಿಯವರ ಸಾಹಿತ್ಯದ ಒಲವು-ನಿಲುವುಗಳು, ತನುಮನ ಪ್ರಕಾಶನ, ಮೈಸೂರು, ೫೭೦೦೨೩, ೨೦೦೨.
೫೪. ಮೀರಾ ಎಲ್.ಜಿ-ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಾಸ್ತವದ ಪ್ರತಿನಿಧೀಕರಣ ಒಂದು ಸ್ತ್ರೀವಾದಿ ಅಧ್ಯಯನ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು, ೨೦೦೦.
೫೫. ಮುಳಿಯ ತಿಮ್ಮಪ್ಪಯ್ಯ-ಸಂಸ್ಕೃತಿ, ಕರ್ನಾಟಕ ಸಂಘ, ದಕ್ಷಿಣಕನ್ನಡ, ಪುತ್ತೂರು, ೧೯೮೧.
೫೬. ಮುರಳೀಧರ ಉಪಾದ್ಯ ಹಿರಿಯಡಕ-ಯು.ಆರ್. ಅನಂತಮೂರ್ತಿ, ಕರ್ನಾಟಕ ಸಂಘ, ಪುತ್ತೂರು, ೫೭೪೨೦೨, ೨೦೦೦.
೫೭. ಮೋಹನ ಕುಂಟಾರ ಡಾ.ಯು.ಆರ್.ಅನಂತಮೂರ್ತಿ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ವಿದ್ಯಾರಣ್ಯ, ಕಮಲಾಪುರ-೫೮೩೨೧೧ (೧೯೯೫).
೫೮. ಯಶವಂತಚಿತ್ತಾಲ-ಆಧುನಿಕ ಕಥಾಸಾಹಿತ್ಯದಲ್ಲಿ ಸೃಜನಶೀಲತೆ ಮತ್ತು ನಾನು, ಗೀತಾ ಬುಕ್‌ಹೌಸ್, ಮೈಸೂರು, ೧೯೮೧.
೫೯. ರಮೇಶ್‌ಆರ್-ರಾಜಾರಾವ್ ಮತ್ತು ಯು.ಆರ್. ಅನಂತಮೂರ್ತಿ ಕಾದಂಬರಿಗಳ ಒಂದು ತೌಲನಿಕ ಅಧ್ಯಯನ, ಕನ್ನಡ ಅಧ್ಯಯನ ಕೇಂದ್ರ ಜ್ಞಾನ ಭಾರತಿ, ಬೆಂಗಳೂರು,೧೯೮೮.
೬೦. ರಾಜಗೋಪಾಲ ಕ.ವೆಂ-ಸಣ್ಣಕತೆ, ಕನ್ನಡಅಧ್ಯಯನಕೇಂದ್ರ, ಮಾಲೆ, ೫, ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೧.
೬೧. ರಾಧಿಕಜಿ.ಎನ್-ಯು.ಆರ್.ಅನಂತಮೂರ್ತಿಯವರಕಥಾಸಾಹಿತ್ಯ, ಕನ್ನಡ ಅಧ್ಯಯನ ಕೇಂದ್ರ , ಜ್ಞಾನ ಭಾರತಿ, ಬೆಂಗಳೂರು-೧೯೮೬.
೬೨. ರೇಖಾ ಜೋಗುಳ-ಅನಂತಮೂರ್ತಿಯವರ ಕಾದಂಬರಿಗಳು ಒಂದು ಅಧ್ಯಯನ, ಕರ್ನಾಟಕ

ವಿಶ್ವವಿದ್ಯಾಲಯ, ಧಾರವಾಡ, ೧೯೯೮.

೬೩. ಲಿಂಗಣ್ಣ ಸಿಂಪಿ–ಭಾರತ ಸಂಸ್ಕೃತಿಯ ಸಂಘಟನೆ, ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ, ೧೯೬೭.

೬೪. ಲಿಂಗರಾಜಯ್ಯ–ಕನ್ನಡ ಕಾದಂಬರಿಗಳಲ್ಲಿ ಅಸ್ಪೃಶ್ಯತೆಯ ಸಮಸ್ಯೆ, ಕನ್ನಡ ಅಧ್ಯಯನ ಕೇಂದ್ರ , ಜ್ಞಾನ ಭಾರತಿ, ಬೆಂಗಳೂರು,೧೯೯೦

೬೫. ವಿಜಯಶ್ರೀ ಕೆ–ಕನ್ನಡ ನವ್ಯ ಕಾದಂಬರಿಗಳು, ಕನ್ನಡ ಅಧ್ಯಯನಕೇಂದ್ರ , ಜ್ಞಾನ ಭಾರತಿ, ಬೆಂಗಳೂರು, ೧೯೮೮

೬೬. ಶಂಕರ ನಾರಾಯಣರಾವ್‌ಎನ್.ಪಿ–ಸಂಸ್ಕೃತಿಯ ರೂಪಿಕೆಗಳು, ಕನ್ನಡ ಅಧ್ಯಯನ ವಿಭಾಗ, ಬೆಂಗಳೂರುವಿಶ್ವವಿದ್ಯಾಲಯ, ಬೆಂಗಳೂರು, ೧೯೭೮.

೬೭. ಶಾಂತಿನಾಥ ದೇಸಾಯಿ–ಕನ್ನಡಕಾದಂಬರಿ ನಡೆದುಬಂದರೀತಿ, ಪುಸ್ತಕಪ್ರೀತಿ, ಸಂ.ಅಶೋಕ.ಟಿ.ಪಿ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೩.

೬೮. ಸಿದ್ಧರಾಮಯ್ಯ ಎಸ್.ಜಿ–ನವ್ಯಸಾಹಿತ್ಯದಲ್ಲಿ ಜಾತಿವ್ಯವಸ್ಥೆ ಮತ್ತು ಅಸ್ಪಶ್ಯತೆಯ ವಸ್ತುನಿರ್ವಹಣೆ, ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ೨, ಕರ್ನಾಟಕ ಸಾಹಿತ್ಯಅಕಾಡೆಮಿ, ಬೆಂಗಳೂರು, ೧೯೯೩.

೬೯. ಸುಬ್ಬಣ್ಣಕೆ.ವಿ–ಅನಂತಮೂರ್ತಿಯವರ ಕಾದಂಬರಿತ್ರಿವಳಿ, ಕೆ.ವಿ.ಸುಬ್ಬಣ್ಣಅವರ ಆಯ್ದ ಬರಹಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಸಂ.ಅಶೋಕ.ಟಿಪಿ, ೧೯೯೨.

೭೦. ಹೆಗಡೆ ಜಿ.ಎಂ–ಯು.ಆರ್.ಅನಂತಮೂರ್ತಿಯವರ ಸಾಹಿತ್ಯ, ಸಾಹಿತ್ಯ ಮತ್ತು ಸಹೃದಯತೆ, ರಂಜನಾ ಪ್ರಕಾಶನ–ಧಾರವಾಡ–೧೯೯೬.

[illegible]

ಆ. ಬಿಡಿಲೇಖನಗಳು:

೧. ಅಮರೇಶ್ ನುಗುಡೋಣಿ–ನವ್ಯಸಾಹಿತ್ಯದಲ್ಲಿ ಆಧುನಿಕ ಮನುಷ್ಯನ ಸ್ವರೂಪ, ಕನ್ನಡಸಾಹಿತ್ಯದಲ್ಲಿ ಮನುಷ್ಯನ ಪರಿಕಲ್ಪನೆ,೬, ಕರ್ನಾಟಕ ಸಾಹಿತ್ಯಅಕಾಡೆಮಿ, ಬೆಂಗಳೂರು, ೧೯೯೩.

೨. ಅರವಿಂದ ಮಾಲಗತ್ತಿ–ಸಾಂಸ್ಕೃತಿಕ ಚಳುವಳಿಗಳು ಮತ್ತು ದಲಿತರು, ತೇರು, ದಕ್ಷಿಣ ಕನ್ನಡ, ೬ನೇಕನ್ನಡ ಸಾಹಿತ್ಯಸಮ್ಮೇಳನ, ಸಂ. ಗಾಯತ್ರಿ ನಾವಡ, ೧೯೯೩.

೩. ಅವಧಾನಿ ಜಿ.ಎಸ್–ನವ್ಯಕತೆ, ಪ್ರಜ್ಞೆ ಮತ್ತು ತಂತ್ರ, ಪರಸ್ಪರ, ಶ್ರೀರಾಘವೇಂದ್ರ ಪ್ರಕಾಶನ ಅಂಕೋಲ, ನವೆಂಬರ್, ೧೯೯೦.

೪. ಆಮೂರ ಜಿ.ಎಸ್–ಹೊಸ ತಲೆಮಾರಿನ ಪ್ರತಿಭಾವಂತ, ಪ್ರಭಾವಶಾಲಿ ವಕ್ತಾರ, ಯು.ಆರ್. ಅನಂತಮೂರ್ತಿ, ಪ್ರಜಾವಾಣಿ, ಡಿಸೆಂಬರ್, ೧೮, ೧೯೯೪.

೫. ಆಮೂರ ಜಿ.ಎಸ್–ಭವ ವೈಚಾರಿಕತೆಯ ಶೋಧ, ಕನ್ನಡ ಪ್ರಭ, ದೈನಿಕ, ಬೆಂಗಳೂರು, ನವೆಂಬರ್, ೮, ೧೯೯೪.

೬. ಆಮೂರ ಜಿ.ಎಸ್–ಅನಂತಮೂರ್ತಿ ಕಥೆಗಳು, ಕನ್ನಡ ಪ್ರಭ, ದೀಪಾವಳಿ ವಿಶೇಷಾಂಕ,೨೦೦೨.

೭. ಆಮೂರ ಜಿ.ಎಸ್–ಸಂಸ್ಕಾರ, ಸಂಕ್ರಮಣ,೨೮, ಫೆಬ್ರುವರಿ,೧೫ ೧೯೬೯.

೮. ಆಮೂರ ಜಿ.ಎಸ್–ಅವಸ್ಥೆಯ ಅರ್ಥವ್ಯಾಪ್ತಿ, ಆದರ್ಶ ಮತ್ತು ವಾಸ್ತವಿಕತೆ, ಸಾಕ್ಷಿ, ಸಂಚಿಕೆ;೪೧;ಮಾರ್ಚ್;೧೯೮೧.

೯. ಆಮೂರ ಜಿ.ಎಸ್–ಸಂಸ್ಕಾರಕ್ಕೆ ಅಪ್ರಾತಿನಿಧಿಕ ಪ್ರತಿಕ್ರಿಯೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೬.

೧೦. ಆಮೂರ ಜಿ.ಎಸ್–ಅನಂತಮೂರ್ತಿಯವರ ಮೌನಿಯಲ್ಲಿ ಹೊಸ ಬಾಳಿನ ಹಂಬಲ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೬.

೧೧. ಆಮೂರ ಜಿ.ಎಸ್–ಅವಸ್ಥೆಯ ಅರ್ಥವ್ಯಾಪ್ತಿ, ಆದರ್ಶ ಮತ್ತು ವಾಸ್ತವಿಕತೆ, ಸ್ನೇಹಪ್ರಕಾಶನ, ಬೆಂಗಳೂರು, ೧೯೮೮.

೧೨. ಆಮೂರ ಜಿ.ಎಸ್–ಸಣ್ಣಕತೆ ಕೆಲ ಮಹತ್ವದ ಸಂಗ್ರಹಗಳು, ಸ್ನೇಹಪ್ರಕಾಶನ, ಬೆಂಗಳೂರು, ೧೯೮೮.

೧೩. ಉಮಾಪತಿಶಾಸ್ತ್ರಿ ಗೌ.ಮಾ–ದಿವ್ಯ ಪದ ನಿರ್ವಚನ, ಚಾರುಮುಡಿ ಸ್ಮರಣ ಸಂಚಿಕೆ, ಸಂ.ಪಟವರ್ಧನ, ಜಿ.ಎನ್. ಸ್ವಾಗತ ಸಮಿತಿ, ಬೆಳ್ತಂಗಡಿ, ಕ.ಸಾ.ಪ, ಉಜಿರೆ, ೧೯೯೫.

೧೪. ಉಷಾ.ಸ–ನವ್ಯಸಾಹಿತ್ಯದಲ್ಲಿ ನಿಸರ್ಗ ಮತ್ತು ಅಭಿವ್ಯಕ್ತಿ ವಿಧಾನ, ಸಂ.ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೧೫. ಕರೀಗೌಡ ಬೀಚನಹಳ್ಳಿ–ಆಧುನಿಕ ಕನ್ನಡ ಕಥನ ಕಲೆಯ ನೆಲೆಗಳು, ಸಂ.ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೨.

೧೬. ಕರೀಗೌಡ ಬೀಚನಹಳ್ಳಿ–ನವ್ಯ ಸಾಹಿತ್ಯ, ತಪ್ತನೆಲೆಯಲ್ಲಿ ಶಾಂತಿಯ ಹುಡುಕಾಟ, ಕನ್ನಡ ಸಾಹಿತ್ಯದಲ್ಲಿ ಯುದ್ಧ ಮತ್ತು ಶಾಂತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೧೭. ಕಾರಂತ ಕೋ.ಮ–ಭಾರತೀಪುರದ ಕುರಿತು, ಸಾಕ್ಷಿ, ೨೪, ಸಂ. ಗೋಪಾಲಕೃಷ್ಣ ಅಡಿಗ, ಜುಲೈ, ೧೯೭೪.

೧೮. ಕೀರ್ತಿನಾಥ ಕುರ್ತಕೋಟಿ–ಮಹತ್ವದ ಸಾಹಿತಿಯ ಮಾಧ್ಯಮವಾಗಿ ಸಣ್ಣಕತೆ, ಸಂ.ರಹಮತ್ ತರೀಕೆರೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೧೯. ಕೃಷ್ಣಮೂರ್ತಿ ಎಂ.ಜಿ–ಅನಂತಮೂರ್ತಿಯವರ ಸಂಸ್ಕಾರ, ಕೃತಿ ಸಂಸ್ಕೃತಿ, ಋಜುವಾತು ಪ್ರಕಾಶನ, ಮೈಸೂರು, ೧೯೯೪.

೨೦. ಕೇಶವಶರ್ಮಾ ಕೆ–ಆಧುನಿಕ ಸಣ್ಣಕತೆಗಳಲ್ಲಿ ಮಹಿಳಾ ಸಮಸ್ಯೆ, ಅನ್ವೇಷಣೆ ಪ್ರಕಾಶನ, ಬೆಂಗಳೂರು, ೧೯೯೨.

೨೧. ಗಂಗಾಧರ ಕುಷ್ಟಗಿ–ನಿಪುಣ ಮಾತುಗಳಲ್ಲಿ ಸತ್ಯಮರೆಸುವ ದಿವ್ಯ, ಲಂಕೇಶ್ ಪತ್ರಿಕೆ, ಅಕ್ಟೋಬರ್,೧೦,೨೦೦೧.

೨೨. ಗೋಪಾಲಕೃಷ್ಣ ಮಧ್ಯಸ್ಥ–ಪ್ರಾಣೇಶಾಚಾರ್ಯರು ಯು.ಆರ್. ಅನಂತಮೂರ್ತಿ ಅವರ ಸಂಸ್ಕಾರ, ಸಂ. ಶ್ರೀಧರ್‌ಕೆ.ಟಿ, ಎಂ.ಗಂಗಾಧರಭಟ್, ನವ್ಯಸಾಹಿತ್ಯ ಸಂಘ, ಕಾಸರಗೋಡು–೧೯೭೮

೨೩. ಚಂದ್ರಮತಿ ಸೋಂದ–ಅನಂತಮೂರ್ತಿಯವರ ಕಥಾಸಾಹಿತ್ಯ ಸ್ತ್ರೀವಾದಿ ನೆಲೆಯಿಂದ, ಸಂಕ್ರಮಣ,೭೧, ಮಾರ್ಚ,೧೯೯೫.

೨೪. ಚಂದ್ರಶೇಖರ ಕಂಬಾರ–ನವೋದಯ ವಾರಸುದಾರ, ಪುಸ್ತಕ ಮಾಹಿತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಸಂಚಿಕೆ, ೩, ಜೂನ್, ೧೯೯೪.

೨೫. ಚಿತ್ರಗುಪ್ತ–ಅನಂತಮೂರ್ತಿಯವರ ಅನಂತ ಹುಡುಕಾಟ, ಮೈಸೂರುಮಿತ್ರ, ಫೆಬ್ರುವರಿ, ೧೭,೨೦೦೨.

೨೬. ಚೈತ್ರ–ಕನ್ನಡಕ್ಕೆ ಮತ್ತೆ ಒಲಿದ ಜ್ಞಾನಪೀಠ, ಸಂಯುಕ್ತ ಕರ್ನಾಟಕ, ಡಿಸೆಂಬರ್, ೧೮, ೧೯೯೪.

೨೭. ಜವರಯ್ಯ.ಮನ–ಅನಂತಮೂರ್ತಿಯವರ ದಿವ್ಯ, ಪರೀಕ್ಷೆ, ಜನಪರ ಕರ್ನಾಟಕ, ಜನವರಿ,೧೦,೨೦೦೧.

೨೮. ಜಯದೇವ ಹು.ಕ–ಸಣ್ಣಕತೆ೧೯೯೩, ಸಾಹಿತ್ಯವಾರ್ಷಿಕ ಸಂ.ಶಿವರುದ್ರಪ್ಪ ಜಿ.ಎಸ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು,೧೯೮೭.

೨೯. ಜೋಗಿ–ಕನ್ನಡದ ಅನಂತ ಸಾಧ್ಯತೆ, ಕನ್ನಡ ಪ್ರಭ, ಫೆಬ್ರುವರಿ,೧೫, ೨೦೦೨.

೩೦. ಜೋಷಿ ಎನ್.ವಿ–ಅನಂತ ಅವಸ್ಥೆಗಳ ಮೂರ್ತಿ, ಕರ್ಮವೀರ, ಫೆಬ್ರುವರಿ,೨೪,೨೦೦೨.

೩೧. ತಿಪ್ಪೇಸ್ವಾಮಿ ಜಿ.ಆರ್–ನವ್ಯಸಾಹಿತ್ಯ, ಪರಕೀಯಪ್ರಜ್ಞೆ, ವ್ಯಕ್ತಿನೆಲೆ ಮತ್ತು ನೋವು, ಕನ್ನಡ ಸಾಹಿತ್ಯದಲ್ಲಿ ನೋವಿನನೆಲೆಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೩೨. ದ್ವಾರಕನಾಥ ಎಲ್–ಘತಶ್ರಾದ್ಧ ಪ್ರತಿಕ್ರಿಯೆ, ಸಂಕ್ರಮಣ, ೭೨, ನವೆಂಬರ್, ೧೯೭೭.

೩೩. ದೇಶ್ ಕುಲಕರ್ಣಿ–ಯಾವ ದಿವ್ಯದ ಯಾಚನೆ?, ಪ್ರಜಾವಾಣಿ, ಡಿಸೆಂಬರ್,೯,೨೦೦೧.

೩೪. ನಟರಾಜ ಹುಳಿಯಾರ್–ಸಣ್ಣಕತೆ, ಕನ್ನಡ ಸಾಹಿತ್ಯ ಸಮೀಕ್ಷೆ, ಸಂ.ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೨.

೩೫. ನಟರಾಜ ಹುಳಿಯಾರ್–ಗುರುವಾಗುವ ಭಯ, ಲಂಕೇಶ್ ಪತ್ರಿಕೆ, ಡಿಸೆಂಬರ್, ೨೧, ೧೯೯೪.

೩೬. ನರಹಳ್ಳಿ ಬಾಲಸುಬ್ರಹ್ಮಣ್ಯ–ಭವ ಹೊಸ ಪ್ರಯೋಗ, ಮಯೂರ, ಜನವರಿ, ೧೯೯೫.

೩೭. ನರಹಳ್ಳಿ ಬಾಲಸುಬ್ರಹ್ಮಣ್ಯ–ಸೃಜನಶೀಲತೆ ಮುಖಾಮುಖಿಯ ಅಗ್ನಿದಿವ್ಯ, ಮಯೂರ ಮಾಸಪತ್ರಿಕೆ, ಸಂಪುಟ;೩೪;ಸಂಚಿಕೆ;೧೧, ಬೆಂಗಳೂರು, ನವೆಂಬರ್, ೨೦೦೧.

೩೮. ನಾಗಭೂಷಣ ಹೆಚ್.ಸಿ–ಅನಂತಮೂರ್ತಿಯವರ ವಿಶೇಷ ಸಂದರ್ಶನ, ಮಲ್ಲಿಗೆ, ಮಾಸಪತ್ರಿಕೆ, ಫೆಬ್ರುವರಿ, ೨೦೦೨.

[illegible]

೩೯. ನಾಗರಾಜ ಕಿ.ರಂ–ಕನ್ನಡ ಸಾಂಸ್ಕೃತಿಕ ಚಿಂತನೆಯ ಅನ್ವೇಷಕ, ಅನಂತಮೂರ್ತಿ, ಸಂಯುಕ್ತ ಕರ್ನಾಟಕ, ಫೆಬ್ರುವರಿ, ೧೦, ೨೦೦೨.

೪೦. ನಾಗರಾಜ ಆರ್.ಜಿ ಹಳ್ಳಿ–ವಿವಾದ ಸೃಷ್ಟಿಯ ಅನಂತಮೂರ್ತಿ, ಈಗ ಉತ್ಸವಮೂರ್ತಿ, ಅನ್ವೇಷಣೆ, ಸಂಚಿಕೆ;೬೧;ಸಂಪುಟ;೧೮; ಜನವರಿ, ಫೆಬ್ರುವರಿ, ೨೦೦೨.

೪೧. ನಾಗರಾಜ ಎಸ್–ಸಂಸ್ಕಾರ ಮತ್ತೆ ಓದಿದಾಗ, ಸಾಕ್ಷಿ, ೧೧, ಸಂ.ಗೋಪಾಲಕೃಷ್ಣ ಅಡಿಗ, ವಸಂತ ಸಂಚಿಕೆ, ೧೯೭೧.

೪೨. ನಾಯಕ ಜಿ.ಎಚ್–ಅನಂತಮೂರ್ತಿಯವರ ಕಥಾಸಾಹಿತ್ಯ, ಸಾಕ್ಷಿ, ೧೧, ಸಂ.ಗೋಪಾಲಕೃಷ್ಣ ಅಡಿಗ, ವಸಂತ ಸಂಚಿಕೆ, ೧೯೭೧.

೪೩. ಪಂಕಜಾಕ್ಷಿ–ಒಳ್ಳೆಯ ಕೃತಿ ಪ್ರಶ್ನೆಗಳೇ ಹುಟ್ಟದ ಹಾಗೆ ಮಾಡಿಬಿಡುತ್ತದೆ, ಹಾಯ್ ಬೆಂಗಳೂರು, ವಾರಪತ್ರಿಕೆ, ಸೆಪ್ಟೆಂಬರ್, ೨, ೨೦೦೧.

೪೪. ಪ್ರಸಾದಸ್ವಾಮಿ ಎಸ್–ಅನಂತಮೂರ್ತಿಯವರ ಭವ, ಸಂಕ್ರಮಣ, ೨೮೨, ಫೆಬ್ರುವರಿ, ೧೯೯೬.

೪೫. ಪೋಲಂಕಿ ರಾಮಮೂರ್ತಿ–ಸಾಹಿತ್ಯ ಮತ್ತು ಧರ್ಮ, ಅಡಿಗ, ಅನಂತಮೂರ್ತಿ, ಸಂಕ್ರಮಣ, ೧೪೯, ೧೫೦, ಸಂ. ಚಂದ್ರಶೇಖರ ಪಾಟೀಲ, ಜೂನ್,ಜುಲೈ, ಧಾರವಾಡ, ೧೯೮೪.

೪೬. ಬಸವರಾಜ ಕಲ್ಗುಡಿ–ಸಣ್ಣಕತೆ, ಸಾಹಿತ್ಯವಾರ್ಷಿಕ, ಸಂ.ಶಿವರುದ್ರಪ್ಪ ಜಿ.ಎಸ್, ಪ್ರಸಾರಾಂಗ, ಬೆಂಗಳೂರು, ೧೯೮೦.

೪೭. ಬಾಲಸುಬ್ರಹ್ಮಣ್ಯ–ಭಾರತೀಪುರ ಒಂದು ಪ್ರತಿಕ್ರಿಯೆ, ಸಾಕ್ಷಿ, ೨೧, ಸಂ.ಗೋಪಾಲಕೃಷ್ಣ ಅಡಿಗ, ಅಕ್ಟೋಬರ್, ೧೯೭೪.

೪೮. ಬೆಳಗಲಿ ದು.ನಿಂ–ಬಹುಚರ್ಚಿತ ಕಾದಂಬರಿ ಸಂಸ್ಕಾರ, ಉಪನ್ಯಾಸ ಗ್ರಂಥಮಾಲೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫.

೪೯. ಭಗವಾನ್ ಕೆ.ಎಸ್–ಗೊಡ್ಡುಬ್ರಾಹ್ಮಣ್ಯ ಮತ್ತು ಚಾರ್ವಾಕಮತ, ಸಂಕ್ರಮಣ, ೭೩, ಅಕ್ಟೋಬರ್, ನವೆಂಬರ್, ೧೯೭೭.

೫೦. ಮಂಗಳಾ ಪ್ರಿಯದರ್ಶಿನಿ–ಕನ್ನಡ ಕಾದಂಬರಿಗಳಲ್ಲಿ ಹರಿಜನ ಸಮಸ್ಯೆ, ಸಾಧನೆ, ಏಪ್ರಿಲ್,ಜೂನ್, ೧೯೭೮.

೫೧. ಮ.ನ.ಜ.–ಕೆಲವು ಕನ್ನಡ ಕಾದಂಬರಿಕಾರರು ಕಂಡ ಹರಿಜನ ಸಮಾಜ, ಸಂಕ್ರಮಣ, ೭೫, ಫೆಬ್ರುವರಿ, ಮಾರ್ಚ, ೧೯೭೮.

೫೨. ಮರುಳಯ್ಯಸಾ.ಶಿ–ಕನ್ನಡದಲ್ಲಿ ಸಣ್ಣಕತೆ ಮತ್ತು ಅದರ ಭವಿಷ್ಯ–ಅವಸ್ಥಾ, ರಾಗಿಣಿ ಪ್ರತಿಷ್ಠಾನ, ಬೆಂಗಳೂರು, ೧೯೯೧.

೫೩. ಮಾರುತಿ ಶಾನುಭಾಗ–ಭಾರತೀಪುರ ಒಂದು ಸಮೀಕ್ಷೆ, ಸಾಕ್ಷಿ, ೨೧, ಸಂ.ಗೋಪಾಲಕೃಷ್ಣ ಅಡಿಗ, ಅಕ್ಟೋಬರ್, ೧೯೭೩.

೫೪. ಮುರಳೀಧರ ಉಪಾಧ್ಯ ಹಿರಿಯಡಕ–ಜಂಗಮಶೀಲ ಲೇಖಕ ಡಾ. ಯು.ಆರ್. ಅನಂತಮೂರ್ತಿ, ಪ್ರಜಾವಾಣಿ, ಫೆಬ್ರುವರಿ, ೧೫, ೨೦೦೨.

೫೫. ಮುರಾರಿ ಬಲ್ಲಾಳ–ಹೃದಯದ ಭಾಷೆಯಲ್ಲಿ ಮಾತನಾಡುವ ಚಿಂತಕ ಯು.ಆರ್. ಅನಂತಮೂರ್ತಿ, ಉದಯವಾಣಿ, ಡಿಸೆಂಬರ್, ೧೮, ೧೯೯೪.

೫೬. ರಂಜಾನ್ ದರ್ಗಾ–ಹೊನಲು ಬೆಳಕಿನಲ್ಲಿ ಸಾಹಿತ್ಯ ದಿಗ್ಗಜ, ಸುಧಾ, ೨೧ನೇ ಫೆಬ್ರುವರಿ, ೨೦೦೨.

[illegible]

೫೭. ರಾಜಪ್ಪ ದಳವಾಯಿ–ನವ್ಯಸಾಹಿತ್ಯ, ವ್ಯಕ್ತಿ ಸಮಾಜ ಮತ್ತು ಹಿಂಸೆಯ ಅನುಭವದ ನೆಲೆಗಳು, ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೫೮. ರಾಮಚಂದ್ರನ್ ಸಿ.ಎನ್–ಬರೆಯುವುದೆಂದರೆ ಹುಡುಕುವುದು, ಪ್ರಜಾವಾಣಿ, ನವೆಂಬರ್,೧೧, ೨೦೦೧.

೫೯. ರಾಮಚಂದ್ರ ದೇವ–ಅನಂತಮೂರ್ತಿಯವರ ಕಥಾಸಾಹಿತ್ಯ, ಸಾಕ್ಷಿ, ೧೨, ೧೯೭೧.

೬೦. ರಾಮದಾಸ್.ಕೆ–ಕನ್ನಡದ ಅಲೆಮಾರಿಗೆ ಜ್ಞಾನಪೀಠ ಪ್ರಶಸ್ತಿಯ ನೆಲೆ, ಲಂಕೇಶ್ ಪತ್ರಿಕೆ, ಡಿಸೆಂಬರ್, ೨೧, ೧೯೯೪.

೬೧. ರೇಣುಕಾರಾಧ್ಯ ಎಸ್.ಎಸ್–ಸಣ್ಣಕತೆ, ಸಾಹಿತ್ಯ ವಾರ್ಷಿಕ, ಸಂ.ಶಿವರುದ್ರಪ್ಪ ಜಿ.ಎಸ್, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೧. ಲಂಕೇಶ್ ಪಿ–ಸಣ್ಣಕತೆ ೧೯೬೭,೧೯೬೮,

೬೨. ಲಕ್ಷ್ಮಿನಾರಾಯಣ ಭಟ್ಟ ಎನ್.ಎಸ್–ಆಚಾರ್ಯಪೀಠದಲ್ಲಿ ಅನಂತಮೂರ್ತಿ, ಉದಯವಾಣಿ, ೮ನೇ ಫೆಬ್ರುವರಿ, ೨೦೦೨.

೬೩. ಲಂಕೇಶ್.ಪಿ–ಯು.ಆರ್.ಅನಂತಮೂರ್ತಿಯವರ ಭವ ಎಂಬುದರ ಜಡ ಜಗತ್ತು, ಲಂಕೇಶ್ ಪತ್ರಿಕೆ, ನವೆಂಬರ್,೯, ೧೯೯೪.

೬೪. ಲಂಕೇಶ್.ಪಿ–ಸಣ್ಣಕತೆ, ಸತ್ವಶಾಲೀ ಯುವಜನ, ಪ್ರಸ್ತುತ, ಅಕ್ಷರ ಪ್ರಕಾಶನ, ಸಾಗರ, ೧೦೭೦.

೬೫. ಲಂಕೇಶ್.ಪಿ– ಯು.ಆರ್.ಅನಂತಮೂರ್ತಿಯವರ ಪ್ರಶ್ನೆ, ಪ್ರಸ್ತುತ, ಅಕ್ಷರ ಪ್ರಕಾಶನ, ಸಾಗರ, ೧೯೭೦.

೬೬. ಲಂಕೇಶ್.ಪಿ–ಅನಂತಮೂರ್ತಿ ಜ್ಞಾನಪೀಠ ಏರಿದಾಗ, ಲಂಕೇಶ್ ಪತ್ರಿಕೆ, ಡಿಸೆಂಬರ್, ೨೧, ೧೯೯೪.

೬೭. ವನಜ–ಕೆಲವು ಕನ್ನಡ ಕಾದಂಬರಿಕಾರರು ಕಂಡ ಹರಿಜನ ಸಮಾಜ, ಸಂಕ್ರಮಣ, ೭೫, ಸಂ.ಚಂದ್ರಶೇಖರ ಪಾಟೀಲ, ಧಾರವಾಡ, ಫೆಬ್ರುವರಿ, ಮಾರ್ಚ, ೧೯೭೪.

೬೮. ವಿಜಯಶಂಕರ್ ಎಸ್.ಆರ್–ಅನಂತಮೂರ್ತಿಯವರ ಪೂರ್ವಾಪರ, ಗಾಂಧಿಬಜಾರ್ ಪತ್ರಿಕೆ, ಮಾರ್ಚ, ೨೦೦೨.

೬೯. ವಿಜಯಶಂಕರ್ ಎಸ್.ಆರ್. ಡಾ. ಯು.ಆರ್. ಅನಂತಮೂರ್ತಿಯವರ ದಿವ್ಯ, ಧ್ಯಾನಸ್ಥ ಲೇಖಕನ ಸೃಜನಶೀಲ ಪ್ರತಿಕ್ರಿಯೆ, ಸುಧಾ, ಅಕ್ಟೋಬರ್,೪, ೨೦೦೧.

೭೦. ವಿಜಯಾ ಸುಬ್ಬರಾಜ್–ದಿವ್ಯ ಅನುಭೂತಿ ಮೂಡಿಸದ ದಿವ್ಯ, ಸುಧಾ, ಫೆಬ್ರುವರಿ,೨೧, ೨೦೦೨.

೭೧. ವಿವೇಕ ರೈ ಬಿ.ಎ–ಅರಿವಿನೊಳಗಣ ಮರಹು ಮರಹಿನೊಳಗಣ ಅರಿವು, ಕನ್ನಡ ಕಥನಲೋಕದ ಅಲ್ಲಮ ಯು.ಆರ್.ಅನಂತಮೂರ್ತಿ, ಉದಯವಾಣಿ, ಫೆಬ್ರುವರಿ, ೧೦, ೨೦೦೨.

೭೨. ವಿಶ್ವೇಶ್ವರ ಸಿ–ಇಂದಿನ ಸಣ್ಣಕತೆಗಳು, ಕೆಲವು ವೈಶಿಷ್ಟ್ಯಗಳ ಪರಿಚಯ, ಸಂಕ್ರಮಣ, ೧೧, ಸಂ.ಚಂದ್ರಶೇಖರ ಪಾಟೀಲ, ಧಾರವಾಡ, ಏಪ್ರಿಲ್, ೧೫, ೧೯೬೬.

೭೩. ವೀಣಾ ಶಾಂತೇಶ್ವರ–ನವ್ಯ ಸಾಹಿತ್ಯ, ವ್ಯಕ್ತಿಯ ಅಸ್ತಿತ್ವ ಮತ್ತು ಬಿಡುಗಡೆಯ ಆಶಯ, ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೭೪. ವೆಂಕಟಲಕ್ಷ್ಮಿ ವಿ.ಎನ್–ಬರಹಗಾರನ ಜವಾಬ್ದಾರಿ, ವಿಜಯ ಕರ್ನಾಟಕ, ನವೆಂಬರ್,೧೭,

೨೦೦೨.
೭೫. ವೆಂಕಟಲಕ್ಷ್ಮಿ ವಿ.ಎನ್-ಸಮ್ಮೇಳನಾಧ್ಯಕ್ಷ ಅನಂತಮೂರ್ತಿಯವರ ದಿವ್ಯ ಸಮಕ್ಷಮ, ವಿಜಯ ಕರ್ನಾಟಕ, ಫೆಬ್ರುವರಿ, ೧೫, ೨೦೦೨.
೭೬. ಶಂಕರ್-ಯು.ಆರ್-ಅನಂತಮೂರ್ತಿ, ಜ್ಞಾನಪೀಠ ಪುರಸ್ಕಾರ, ದಿಕ್ಸೂಚಿ, ಜನವರಿ, ೧೯೯೫.
೭೭. ಶಿವಾನಂದ ಎಸ್-ನವ್ಯ ಸಾಹಿತ್ಯ ಒಂದು ಹಿನ್ನೋಟ, ಸಾಕ್ಷಿ, ಜುಲೈ,೧೯೭೫.
೭೮. ಶ್ರೀನಿವಾಸರಾವ್ ವಿ-ಅನಂತಮೂರ್ತಿಯವರ ದಿವ್ಯ, ಸೊಗಡು ದಿನಪತ್ರಿಕೆ, ಫೆಬ್ರುವರಿ,೧೬, ೨೦೦೨.
೭೯. ಸರಜೂಕಾಟ್ಕರ್-ಕನ್ನಡ ಸಾಹಿತ್ಯಕ್ಕೆ ಮತ್ತೊಂದು ಗರಿ, ಕನ್ನಡಮ್ಮ ದೈನಿಕ, ಡಿಸೆಂಬರ್, ೧೮, ೧೯೯೪.
೮೦. ಸತ್ಯನಾರಾಯಣ ಕೆ-ಕನ್ನಡ ಸಂಸ್ಕೃತಿಯ ವಕ್ತಾರರಿಗೆ ಪ್ರಶಸ್ತಿ, ಕನ್ನಡ ಪ್ರಭ, ಡಿಸೆಂಬರ್, ೧೮, ೧೯೯೪.
೮೧. ಸಿದ್ಧರಾಮಯ್ಯ ಎಸ್.ಜಿ-ನವ್ಯಸಾಹಿತ್ಯದಲ್ಲಿ ಜಾತಿವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ವಸ್ತು ನಿರ್ವಹಣೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.
೮೨. ಸೀತಾರಾಮ ಶೆಟ್ಟಿ-ಅನಂತಮೂರ್ತಿಯವರ ಭವ, ಸಂಕ್ರಮಣ, ೨೮೨, ಫೆಬ್ರುವರಿ, ೧೯೯೬.
೮೩. ಸುಬ್ರಹ್ಮಣ್ಯಪಾ.ಲ-ಅನಂತಮೂರ್ತಿಯವರ ಮೌನಿ, ಸಂಕ್ರಮಣ, ೩೯, ಡಿಸೆಂಬರ್,೧೫, ೧೯೭೦.
೮೪. ಸುಬ್ರಾಯ್‌ಚೊಕ್ಕಾಡಿ-ಅನಂತಮೂರ್ತಿಯವರ ಮೌನಿ, ಸಂಕ್ರಮಣ, ೧೯,ಸಂ.ಚಂದ್ರಶೇಖರ ಪಾಟೀಲ, ಧಾರವಾಡ, ಏಪ್ರಿಲ್, ೧೫, ೧೯೬೯.
೮೫. ಸುಮತೀಂದ್ರ ನಾಡಿಗ-ಕಾಮಪ್ರಚೋದಕ, ಅಸಂಭಾವ್ಯ ದಿವ್ಯ ಕಾದಂಬರಿ, ವಿಜಯ ಕರ್ನಾಟಕ, ಮಾರ್ಚ್,೨೪,೨೦೦೨.